UNIVERSAL
LIBRARY
OU_198080
UNIVERSAL
LIBRARY

ಸಂಸ್ಕೃತಕವಿಚರಿತೆ

ದ್ವಿತೀಯ ಸಂಪುಟ

ಕ್ರಿ. ಶ. ೮ ರಿಂದ ೧೮ ಶತಮಾನಗಳು

[illegible] UNIVERSITY
[illegible]

ಎಂ. ಎನ್. ಶ್ರೀನಿವಾಸ ಅಯ್ಯಂಗಾರ್

[illegible]
ಪ್ರಥಮ ಮುದ್ರಣ
[illegible]

(ಸರ್ವಸ್ವಾತಂತ್ರ್ಯವೂ ಗ್ರಂಥಕರ್ತರದು)

ಬೆಂಗಳೂರು ಸಿಟಿ
ರಾಧಾ ಪವರ್ ಮುದ್ರಣಾಲಯದಲ್ಲಿ
ಮುದ್ರಿಸಲ್ಪಟ್ಟಿತು.
1932

ಕಾಣಿಕೆ

ಆಚಾರ್ಯನಚರಣನಳಿನಗಳಲ್ಲಿ.

C. K. Venkata Ramaiya, Esqr, M.A , LL.B.,
Translator to Mysore Government.

Bangalore,
3-8 1929.

Writes: -

I went through the book with keen interest..... which was indeed a long felt want in Kannada ..... I feel proud of you when I think that you have placed all the Kannadiga's under a deep obligation by writing the book in Kannada .....It is very intersting throughout which is by no means an easy achievement while handling certain subjects like the one you have chosen .....the Sanskrit Kavicharite is on the whole a great book and as such the reader expects the publication of the next Volume or Volumes so that he may consider to be the proud possessor of the same

ಸರಳಕವಿಸೂರಿ, ವಿದ್ಯಾಭೂಷಣ, ವಿದ್ಯಾವಾಚಸ್ಪತಿ, ಕಾವ್ಯವಿಶಾರದ
ಜ್ಞಾನಗುಣಾಕರ ಮಹಾವಿದ್ವಾಂ
ಕೆ. ಆರ್. ಚಕ್ರವರ್ತಿಯವರು.

ಬೆಂಗಳೂರು. ೧೫-೪-೧೯೨೯.

.....ಪ್ರಾಚ್ಯಪ್ರತೀಚ್ಯ ಪಂಡಿತರ ವಾದ ವಿವಾದಗಳನ್ನು ವ್ಯಕ್ತಗೊಳಿಸಿ ಸ್ವಮತವನ್ನೂ ಸೂಚಿಸಿರುವರು. ಈ ದಿನದವರೆಗೆ ನಡೆದಿರುವ ಸಂಸ್ಕೃತ ಕವಿಗಳ ವಿಷಯದ ವಾದವಿವಾದಗಳೆಲ್ಲವನ್ನೂ ಈ ಗ್ರಂಥ ಒಂದರಲ್ಲಿಯೇ ಅನಾಯಾಸೇನ ನೋಡಬಹುದು.....

Rajakaryaprasakta Rao Bahadur
M. Shama Rao, M.A., Retired Inspector General of Education in Mysore.

Bangalore,
20th April 1929,

Writes:—

I have read in a general way Mr. M. N Srinivasa Iyengar's History of sanskrit literature This is the first work of its kind in the Kannada language and bears indications of considerable research and amazing industry on the part of the author. The work extends over a period of about ten centuries. The illustrative extracts given from the works of several authors throw some light on the prevailing ideas of the several periods. I hope the people of the Karnataka country will interest themselves in works of this kind and lend a helping hand to the lonely workers now in the field Mr. Keith has recently published an important and Scholarly History of Sanskrit Drama, under the auspices of the Oxford University. Similarly may we not hope that the universities in Southern India including Bombay which include Kannada among their languages will give encouragement to the author and enable him to continue his work. The Karnataka Sahitya Parishad will also, I hope will interest itself in the matter.

Arthashastra Visharada Vidyalankara,
Dr. R. Shama Sastry, B.A., Ph.D., M.R.A.S.,
Mysore.

Mysore,
7-3-1932

Writes: -

Dear Mr. Srinivasa Iyengar,

Pray accept my sincere thanks for the gift to me of a copy of your learned " Sanskrita Kavicharite " in Kanarese which I read with great profit and interest. I find that while in their respective histories of Sanskrit literature western scholars have confined their attention to the chronology of the poets coupled with a brief description of comparative merit of their literary works, you have taken great pains to collect in your work the traditional annecdotes about the lives of the poets, which, but for your timely attempt would have entirely disappeared. Your disagreement with western scholars in your account of the chronology of the poets necessitates a revision of Indian chronology as a whole. The sweet and elegant verses you have quoted from the poets in illustration of various points discussed afford a delightful and charming reading. Your treatment of the subject is admirably excellent. And I have no hesitation in saying that you have laid the Kannada reading public under a deep debt of gratitude to you. I wish you success in your laudable attempt at bringing the work to completion.

With renewed thanks

Prakatanavimarsha Vichakshana Rao Bahadur
R. Narasimhachar, M. A.,
Retired Director of Archaeology, in Mysore.

Malleswaram,
Bangalore,
12-4-1929.

Writes:—

I have glanced through the Samskrita Kavicharite or Lives of Sanskrit Poets, Volume 1, by Mr. M. N. Srinivasaiengar with much pleasure and interest The 1st volume which treats of the more prominent poets who flourished from the earliest times to the end of the 8th century, bears unmistakable testimony to the author's erudition and industry. The information is gathered from all the available sources and put together in a succinct and intelligable manner. The author deserves congratulations for the satisfactory performance of this self imposed task, involving much study and labour. Being the first work of its kind in Kannada it deserves every encouragement not only from the Mysore University and Education Department, but also from the general public of the Karnataka country.

ಮೈಸೂರು.
ತಾ|| ೧೩-೩-೨೯

ಶ್ರೀಮದಭಿನವರಙ್ಗನಾಥ ಬ್ರಹ್ಮತನ್ತ್ರ ಪರಕಾಲಸ್ವಾಮಿಭಿರನು ಗೃಹೀತಮ್:--
ಯಾವವಗಿರ್ಯಭಿಜನೇನ ಶ್ರೀನಿವಾಸಯ್ಯಂಗಾರ್ಯೇಣ ವಿರಚಿತಸ್ಯ ಸಂಸ್ಕೃತ ಕವಿ ಚರಿತಸ್ಯ ಪ್ರಥಮ ಸಂಪುಟೇ ಕಾಂಶ್ಚಿದ್ವಿಷಯಾ ನವಾಲೋಕಯಾಮಿ. ಅನೇನ ಚಿರಾದ್ಬಹೂ ಸಂಸ್ಕೃತ ಪ್ರಬನ್ಧಾ ಅನ್ಯಾಂಶ್ಚ ವಾರ್ತಾತ್ಯಾನಾಂ ಭಾರತೀ ಯಾನಾಂ ಚ ಗ್ರನ್ಥಾ ಸವಿಮರ್ಶಮವಲೋಕ್ಯತತ್ತ್ರಬನ್ಧ್ರಣಾಮಾಶಯಾ ನನೂದ್ಯ ನ್ವಾಭಿಸಾಯಃ ಪ್ರಕಾಶಿತಃ. ಸಂಸ್ಕೃತಗ್ರಂಥ ವಿಷಯೈರ್ಜಾಟಿಲೋಯಂ ಪ್ರಬಂಧ. ಅವಲೋಕಯಿತ್ರ್ ಆಂಗ್ಲಭಾಷಾನಭಿಜ್ಞಾನಪಿ ಸಂಸ್ಕೃತ ಕವಿ ಚರಿತ ಜಿಜ್ಞಾಸೂ ಉಪಕರೋತೀತಿ ನಾನನ್ಪಂವಯಂ ವಿಶ್ವಸಿಮಃ ||

ಶ್ರೀಮಸ್ಮಹಾರಾಜ ಸಂಸ್ಕೃತಪಾಠಶಾಲಾ ಪ್ರಧಾನೋಪಾಧ್ಯಾಯಃ ಮಹಾ ಮಹೋಪಾಧ್ಯಾಯಃ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯಃ —

ಮೈಸೂರು
ತಾ|| ೧೧-೩-೨೯

ಶ್ರೀಮತಾ ಎಂ. ಎನ್. ಶ್ರೀನಿವಾಸಯ್ಯಂಗಾರ್ಯವರ್ಯೇಣ ವಿರಚಿತಂ ಸಂಸ್ಕೃತಕವಿಚರಿತನಾಮಕಂ ಪ್ರಬನ್ಧಃ ಸಮ್ಯಗಾಮುಲಾಗ್ರಂಸಾದರಮವಲೋಕಿತಃ। ಅಸ್ಮಿಂಶ್ಚ ಪ್ರಬನ್ಧೆ ಬಹೋಃ ಕಾಲಾತ್ ಒಹುಭಿಶ್ಚರ್ಚಿತಾಃ ಬಹವೋವಿಷಯಾಃ ಸಂಗೃಹೀತಾಸ್ಸನ್ತಿ। ಪ್ರತಿವಿಷಯ ಮತ್ರ ನಿರೂಪಿತಾ ಅಂಶಾಃ ಸಿದ್ಧಾನ್ತಾ.....ವಿಮರ್ಶಕ ಪ್ರವರಾಣಾಂಬಹುನಾ ಪ್ರಕಾರೇಣ ಸಮುಪಕುರ್ಯು ರಿತ್ಯುಕ್ತೇಃ ನಖಲು ಭವತ್ಯತಿಶಯೋಕ್ತಿಃ ||

ಏತಾದೃಶಾ ಪ್ರಬನ್ಧಾ ಸಂಜಿಘೃಕ್ಷೂಣಾ ಮಾಸ್ಥಯಾ ಅವಸರೇಣಚ ಮಹತ್ಪೈವಭವಿತವ್ಯಂ। ಏತಾದೃಶ ಗುಣ ಸಂಪತ್ತಿ ಮತಃ ಏತಾದೃಶ ಪ್ರಬನ್ಧ ಕರ್ತು ರ್ವಿಷಯೇ ಪ್ರಬಂಧ ವಿಮಮುಪಯೂ ಜಾನಾನಾಂ ವಿದುಷಾಂ ವಿದ್ಯಾರ್ಥಿನಾಂ ಚೋಪಕಾರ ಸ್ಮೃತೇ ಮಹತೀವಿದ್ಯೇತ ಇತಿಭೃಶಂ ವಿಶ್ವಸಿಮಃ ||

ಅಸ್ಮಿಂಶ್ಚ ಪ್ರಬನ್ಧೇ ವಾಕ್ಯಶೈಲೀ ರಚನಾ ಶೈಲೀಂಚ ಸುಶೋಭನೇತಿನಬಹ ವಕ್ತವ್ಯಂ ಅತಿರೋಹಿತೈವ ಪಾಠಕಾನಾಮಿತಿ | ಏವಮೇವ ಪ್ರಯತ್ನೋಯಂ ಸಮು ಗ್ರಸಫಲಶ್ಚ ಭೂಯಾದಿತ್ಯಾಶಾಸ್ಮಹೆ ಸನ್ಮಂಗಳಾನಿಭೂಯಾಂಸೀತಿ ||

ಶ್ರೀಃ

ಸಂಸ್ಕೃತಕವಿಚರಿತೆ

(ಎರಡನೆಯ ಭಾಗ)

ಒಂಭತ್ತನೆಯ ಶತಮಾನ

ಮುಗ್ಧಸ್ಮೇರರುಚಿವಿಲಸತ
ಮುಖಜಲಜನ್ಯಸ್ತಮುರಲಿಕಾಸುಷಿರಂ।
ಏಷದಿರಂಚಿ ಕಮಪಿ ತೇಜೋ
ಮುನಿಜನಹೃದಯಂಗಮಂ ಮುಹುಃ ಸ್ತೌಮಿ॥

ಉದ್ಭಟ

ಇವನಿಗೆ "ಭಟ್ಟೋದ್ಭಟ, ಉದ್ಭಟಾಚಾರ್ಯ" ಎಂಬ ಹೆಸರುಗಳೂ ಇದ್ದುವಾಗಿ ಗ್ರಂಥಾಂತರಗಳಿಂದ ತಿಳಿಯಬರುತ್ತದೆ.* ಇವನು ಬ್ರಾಹ್ಮಣನು. ಕಾಶ್ಮೀರದವನು. ಕ್ರಿ. ಶ. ೭೭೯ - ೮೦೩ರ ವರೆಗೆ ಕಾಶ್ಮೀರದಲ್ಲಾಳಿದ ಜಯಾಪೀಡರಾಜನ ಆಸ್ಥಾನಪಂಡಿತನಾಗಿದ್ದನು.† ಆದುದರಿಂದ ಇವನು ಕ್ರಿ. ಶ. ೮ನೆಯ ಶತಮಾನದ ಉತ್ತರಾರ್ಧ ಅಥವಾ ಕ್ರಿ. ಶ. ೯ನೆಯ ಶತಮಾನದ ಪೂರ್ವಾರ್ಧದವನೆಂದು ಹೇಳಬೇಕಾಗುವುದು. ಇವನು "**ಕಾವ್ಯಾಲಂಕಾರಸಂಗ್ರಹ**" ಎಂಬ ಲಕ್ಷಣಗ್ರಂಥವನ್ನು ಬರೆದಿರುವನು. ಇದರಲ್ಲಿ ಆರು ಸರ್ಗಗಳಿರುವುವು. ಇದಕ್ಕೆ ಪ್ರತಿಹಾರೇಂದುರಾಜನು 'ಕಾವ್ಯಾಲಂಕಾರಸಾರಲಘುವೃತ್ತಿ' ಎಂಬ ಟೀಕೆಯನ್ನು ಬರೆದಿರುವನು. ಉದ್ಭಟನು ಕಾವ್ಯಾಲಂಕಾರಸಂಗ್ರಹವಲ್ಲದೆ 'ಕುಮಾರಸಂಭವ' ವೆಂಬ ಕಾವ್ಯವನ್ನೂ ಭಾಮಹನ ಅಲಂಕಾರಗ್ರಂಥಕ್ಕೆ ವಿವರಣೆಯನ್ನೂ ಬರೆದಿರುವುದಾಗಿ —

* ಉದ್ಭಟನ ಕಾವ್ಯಾಲಂಕಾರಸಂಗ್ರಹಪ್ರಸ್ತಾವನೆ.
† ರಾಜತರಂಗಿಣಿ IV 495.

"ಅನೇನ ಗ್ರಸ್ತಕೃತಾಸ್ಪೋಪರಚಿತಕುಮಾರಸಂಭವೈಕದೇಶೋSತ್ರ ಉದಾಹರಣತ್ವೇನೋಪನ್ಯಸ್ತಃ" ಎಂದೂ– "ವಿಶೇಷೋಕ್ತಿಲಕ್ಷಣೇ ಚ ಭಾಮಹವಿವರಣೇ ಭಟ್ಟೋದ್ಭಟೇನ ಏಕದೇಶಶಬ್ದ ಏವಂ ವ್ಯಾಖ್ಯಾತೋ ಯಥೇಹಾಸ್ಮಾಭಿರ್ನಿರೂಪಿತಃ" ಎಂದೂ ಲಘುವೃತ್ತಿಯಲ್ಲಿರುವುದರಿಂದ ವ್ಯಕ್ತವಾಗುವುದು.

ಉದ್ಭಟನು ಬರೆದುದಾದ 'ಕುಮಾರಸಂಭವ'ವೆಂಬ ಕಾವ್ಯದಿಂದ ಅನೇಕ ಲಾಕ್ಷಣಿಕರು ಶ್ಲೋಕಗಳನ್ನು ಪಾಠರಿಸಿಕೊಂಡಿರುವುದಾಗಿ ಪ್ರತಿಹಾರೇಂದುರಾಜನು ಹೇಳಿರುವನು. ಆದರೆ ಇವನು ಬರೆದಿರುವ ಕುಮಾರಸಂಭವ ಕಾವ್ಯವಾಗಲಿ, ಭಾಮಹವಿವರಣವೆಂಬ ಗ್ರಂಥವಾಗಲಿ ಉಪಲಬ್ಧವಿರುವುದಿಲ್ಲ.

ರುದ್ರಟ

ಇವನು ಕಾಶ್ಮೀರದವನು ; ಭಟ್ಟವಾಮುಕನ ಮಗನು. ಇವನಿಗೆ ಶತಾನಂದಾಪರ ನಾಮವಿತ್ತೆಂಬುದು—

ಶತಾನಂದಾಪರಾಖ್ಯೇನ ಭಟ್ಟವಾಮುಕಸೂನುನಾ ।
ಸಾಧಿತಂ ರುದ್ರಟೇನೇದಂ ಸಮಾಜಾಧೀಮತಾಂ ಹಿತಂ ॥

ಎಂಬ ಶ್ಲೋಕದಿಂದ ವ್ಯಕ್ತವಾಗುತ್ತದೆ. ಇವನು ಕ್ರಿ. ಶ. ಒಂಭತ್ತನೆಯ ಶತಮಾನದವನು. ಇವನು "ಕಾವ್ಯಾಲಂಕಾರ"ವೆಂಬ ಲಕ್ಷಣ ಗ್ರಂಥವನ್ನು ಬರೆದಿರುವನು. ಇದಕ್ಕೆ ನೇಮಿಸಾಧು ಎಂಬವನು "ಕಾವ್ಯಾಲಂಕಾರಟಿಪ್ಪಣಿ" ಎಂಬ ಟೀಕೆಯನ್ನು ಬರೆದಿರುವುದಾಗಿ—

ಪೂರ್ವಮಹಾಮತಿವಿರಚಿತವೃತ್ತ್ಯನುಸಾರೇಣ ಕಿಮಪಿ ರಚಯಾಮಿ ।
ಸಂಕ್ಷಿಪ್ತತರಂ ರುದ್ರಟಕಾವ್ಯಾಲಂಕಾರಟಿಪ್ಪಣಕಂ ॥

Macdonell's History of sanskrit Literature P. 434

[1] ಕೆಲವರು ಸಮಾಜಾ ಎಂಬುದನ್ನು ಸಾಮಾಜಿ ಎಂದು ಹೇಳಿ ಸಾಮಾಜಿಗವರ್ಧನೆಂದು ಹೇಳುವರು. ಹೀಗೆ ಹೇಳುವುದು ಅನಸ್ಪಯವೆನಿಸುವುದು. ಹಾಗೆ ಹೇಳುವುದಕ್ಕಿಂತಲೂ 'ಸಮಂ ಅನಕ್ತೀತಿ ಸಮಾಕ್' ತೇನ ಸಮಾಜಾ. ಅಜಗತಾವಿತ್ತಸ್ಮಾತ್ ಧಾತೋಃ ಕ್ವಿ ಪ್ರತ್ಯಯಃ ಎಂದು ಹೇಳುವುದಾದರೆ ಸಮಂಜಸವಾಗುವುದು. ಸಮಾಜಾ ಎಂದರೆ ಇಲ್ಲಿ ಋಜು ಮಾರ್ಗಗಾಮಿಗಳಾದ ಪ್ರಾಚೀನಪ್ರಸಿದ್ಧ ಆಲಂಕಾರಿಕರೆಂದರ್ಥ.

ಎಂಬುದರಿಂದ ಸ್ಪಷ್ಟಪಡುತ್ತದೆ.' ಈ ಟೀಕೆಯು ಕ್ರಿ. ಶ. ೧೦೬೯ರಲ್ಲಿ ಬರೆಯಲ್ಪಟ್ಟುದಾಗಿತಿಳಿಯಬರುತ್ತದೆ. ಕಾವ್ಯಾಲಂಕಾರಕ್ಕೆ ನೇಮಿಸಾಧುವಲ್ಲದೆ ವಲ್ಲಭದೇವನೆಂಬುವನೂ | ಆಶಾಧರನೆಂಬುವನೂ ¦ ವ್ಯಾಖ್ಯಾನವನ್ನು ಬರೆದಿರುವರು. ಮಹಾಕವಿಗಳಾದ ಭೋಜನೂ ಮತ್ತು ಕ್ರಿ. ಶ. ಹತ್ತನೆಯ ಶತಮಾನದ ಪೂರ್ವಾರ್ಧದವನಾದ ಪ್ರತಿಹಾರೇಂದು ರಾಜನೂ ರುದ್ರಟನನ್ನು ಉದಾಹರಿಸಿಕೊಂಡಿರುವರು. ಕಾವ್ಯಾಲಂಕಾರ ಸರಣಿಯು ಕಾವ್ಯಾದರ್ಶವನ್ನು ಹೋಲುವದಾಗಿ ಹದಿನಾರು ಅಧ್ಯಾಯಗಳಾಗಿ ವಿಭಾಗಿಸಲ್ಪಟ್ಟು, ಆರ್ಯಾವೃತ್ತದಲ್ಲಿ ಬರೆಯಲ್ಪಟ್ಟಿರುವುದು. ಶೈಲಿಯು ಸರಳವಾಗಿದ್ದು ಶ್ಲೋಕಗಳು ಮನೋರಂಜಕವಾಗಿರುವುವು. ¾ ಶೃಂಗಾರತಿಲಕಕಾರನಾದ ರುದ್ರಭಟ್ಟನನ್ನು ರುದ್ರಟನೆಂದು ಕೆಲವರು ತರ್ಕಿಸುವರು. ಈ ವಿಚಾರದಲ್ಲಿ "ಅನ್ಯೋ ಗ್ರಂಥಸ್ತು ರುದ್ರಟ ಕೃತೋ ನ ಪ್ರಾಪ್ಯತೆ. ಶೃಂಗಾರತಿಲಕ ಕರ್ತಾತು ರುದ್ರಭಟ್ಟಃ ನ ರುದ್ರಟಃ. ರುದ್ರಟಸ್ಯ ವಿಶೇಷ ವರ್ಣನಂತು ಡಾಕ್ಟರು ಪೀಟರ್ಸನಸ್ಯ ಪ್ರಥಮ ರಿಪೋರ್ಟಪುಸ್ತಕೆ ದ್ರಷ್ಟವ್ಯಂ"a ಎಂದು ಹೇಳಿರುವುದರಿಂದ ರುದ್ರಟನೂ ಶೃಂಗಾರತಿಲಕಕಾರನೂ ಪರಸ್ಪರ ಭಿನ್ನರೆಂಬುದು ಸ್ಪಷ್ಟಪಡುತ್ತದೆ. ಯಾವುದೋ ವಿಪತ್ತಿಗೊಳಪಟ್ಟ ತನ್ನನಾಮಾಕ್ಷರಗಳಲ್ಲಿನ ಭಕಾರ ಒಂದನ್ನು ನಾವಿರ ಹೊನ್ನಿಗೆ ಈಡುಮಾಡಿ ರುದ್ರಟನಾದ ಮತ್ತೊಬ್ಬ ರುದ್ರಭಟ್ಟನು ಅತ್ರಿಗೋತ್ರದ ಬ್ರಾಹ್ಮಣನು. ಕನ್ನಡಕವಿ.

ಎಡರೊಳ್ ನಿಜನಾಮಾಕ್ಷರ
ವಿಡೆಸಾಸಿರಪೊನ್ನಿ ಕೊಟ್ಟು ಬಿಡಿಪನಿಕುದಿನಂ
ಪಡೆದಂ ರುದ್ರಟನೆಂಬೀ
ಪಡೆಮಾತಂ ರುದ್ರಭಟ್ಟನುರ್ವೀಜನದಿಂ •

ಇವನಿಗೂ ಕಾವ್ಯಾಲಂಕಾರವನ್ನು ಬರೆದ ರುದ್ರಟನಿಗೂ ಯಾವ ಸಂಬಂಧವೂ ಇರದು. ಪ್ರಸಿದ್ಧರಾದ ಮಮ್ಮಟ, ಕಯ್ಯಟ, ಉವ್ವಟ, ಉದ್ಭಟ, ಭಲ್ಲಟರೇ ಮೊದಲಾದವರ ಹೆಸರಿನಂತೆ ರುದ್ರಟನ ಹೆಸರೆಂದು ಪುನಃ ಒತ್ತಿಹೇಳಬೇಕಾದುದಿಲ್ಲ.

Sanskrit Kavicharitre of T. G. Kale P. 56

| ಸುಭಾಷಿತಾವಳಿಯನ್ನು ಬರೆದ ವಲ್ಲಭದೇವನು ಇವನಲ್ಲ

¦ ಇವನು ಕ ವಲಯಾನಂದ ವಾ ಖ್ಯಾನಕಾರನಲ್ಲ.

¾ Classical history of Sanskrit Literature P. 162

a Journal B. B. R. A. S. Vol XVI. No. XLI P. 14-20.

• ಶಾಸನ ಶಕ ೧೦೫೧ Journal B. B. R. A S. Vol. X No. 29 Ins, VII P. 260

ಮುಕುಳ

ಇವನು ಕಾಶ್ಮೀರದವನು, ಭಟ್ಟಕಲ್ಲಟನ ಮಗನು. ಇವನು ಕ್ರಿ. ಶ. ೮೫೫—೮೮೪ರಲ್ಲಿ ಕಾಶ್ಮೀರದಲ್ಲಾಳಿದ ಅವಂತಿವರ್ಮನ ಕಾಲದಲ್ಲಿದ್ದುದಾಗಿ ಕಲ್ಹಣನ ರಾಜತರಂಗಿಣಿಯಲ್ಲಿ (V 66) ಹೇಳಲ್ಪಟ್ಟಿದೆ. ಇದರಿಂದ ಇವನು ಕ್ರಿ. ಶ. ೯ನೆಯ ಶತಮಾನದವನೆಂದು ಹೇಳಬೇಕಾಗುವುದು. ಇವನು "**ಅಭಿಧಾವೃತ್ತಿ ಮಾತೃಕಾ**" ಎಂಬ ಲಕ್ಷಣಗ್ರಂಥವನ್ನು ಬರೆದಿರುವನು.

ಭಲ್ಲಟ

ಇವನು ಕಾಶ್ಮೀರದವನು. ಕ್ರಿ. ಶ. ೯೦ನೆಯ ಶತಮಾನದವನಾದ ಅಭಿನವಗುಪ್ತನು ತನ್ನ 'ಲೋಚನ' ಗ್ರಂಥದಲ್ಲಿಯೂ 'ಧ್ವನ್ಯಾಲೋಕವ್ಯಾಖ್ಯಾನ'ದಲ್ಲಿಯೂ ಇವನ ಶತಕದ ಶ್ಲೋಕಗಳನ್ನು ಉದಾಹರಿಸಿಕೊಂಡಿರುವುದರಿಂದ ಈ ಕವಿಯು ಅಭಿನವಗುಪ್ತನಿಗಿಂತ ಪ್ರಾಚೀನನೆಂದೂ ಕ್ರಿ. ಶ. ೯ನೆಯ ಶತಮಾನದವನೆಂದೂ ಸ್ಪಷ್ಟವಾಗುವುದು. ಇವನದಾಗಿ "**ಭಲ್ಲಟಶತಕ**" ವೆಂಬ ಗ್ರಂಥವು ಪ್ರಕೃತ ದೊರೆತಿರುವುದು. ಆದರೆ ಭಲ್ಲಟಶತಕಾಂತ್ಯದಲ್ಲಿ "ಇತಿ ರತ್ನತ್ರಯೇ ಭಲ್ಲಟಶತಕಂ ಸಮಾಪ್ತಂ" ಎಂದಿರುವುದರಿಂದ ರತ್ನತ್ರಯಗಳಲ್ಲಿ ಭಲ್ಲಟಶತಕವೆಂಬುದು ಹೊರತು ಉಳಿದ ಎರಡು ಗ್ರಂಥಗಳಿರಬೇಕೆಂದು ನಮಗೆ ತೋರುವುದು. ಭಲ್ಲಟಶತಕದ ಶ್ಲೋಕಗಳು ಮಮ್ಮಟನ ಕಾವ್ಯಪ್ರಕಾಶದಲ್ಲಿಯೂ ವಲ್ಲಭದೇವನ ಸುಭಾಷಿತಾವಳಿಯಲ್ಲಿಯೂ ಕ್ಷೇಮೇಂದ್ರನ ಗ್ರಂಥಗಳಲ್ಲಿಯೂ ಹೇರಳವಾಗಿ ದೊರೆಯುವುವು. ಈ ಶತಕದ ಪ್ರಾರಂಭ ಶ್ಲೋಕವಾದ.—

ಯುಷ್ಮಾಕಮುಂಬರಮಣೇಃ ಸ್ಪಧಯೇವ ಮಯೂಖಾ
ಸ್ತೇ ಮಂಗಲಂ ವಿದಧ ಉದಯಾದ್ರಿಭಾಜಃ ।
ಕುರ್ವಂತಿ ಯೇ ದಿವಸಜನ್ಮಮಹೋತ್ಸವೇಷು
ಸಿಂದೂರಪಾಟಲಮುಖೀರಿವ ದಿಕ್ಪ್ರವಧ್ವಃ ॥

ಎಂಬುದು ಸುಭಾಷಿತಾವಳಿಯಲ್ಲಿ 'ಭಾಗವತಾಪ್ಮತದತ್ತ'ನ ಹೆಸರಿನಲ್ಲಿ ಬರೆಯಲ್ಪಟ್ಟಿರುವುದು. † ಇದಲ್ಲದೆ ಅಲ್ಲಲ್ಲಿ ಪಾಠಾಂತರಗಳೂ ಇರುವುವಾಗಿ ತೋರುತ್ತದೆ. ಭಲ್ಲಟಶತಕದ ೫೩ನೆಯ ಶ್ಲೋಕದಲ್ಲಿ 'ನಿಶಿದಿಂಪಿಕಾ' ಎಂದಿರುವುದು. ಸುಭಾಷಿತಾ

History of Sanskrit Poetics P. 76.

† ವಲ್ಲಭದೇವನ ಸುಭಾಷಿತಾವಳಿ ಪು ೧೨ ಶ್ಲೋ ೭೩

ವಳಯಲ್ಲಿ 'ನಿಶಿದೀಪಕಃ' ಎಂದಿದೆ. ಹೀಗೆ ಇನ್ನೂ ದೊರೆಯುವುವು. ಭಲ್ಲಟಶತಕದ ಕೊನೆಯ ಶ್ಲೋಕವಾದ.

ಅಯಂ ವಾರಾಮೇಕೋ ನಿಲಯ ಇತಿ ರತ್ನಾಕರ ಇತಿ
ಶ್ರಿತೋಽಮ್ಭಸ್ತೃಷ್ಣಾತರಲಿತ ಮನೋಭಿರ್ಜಲನಿಧಿಃ ।
ಕ ಏವಂ ಜಾನೀತೇ ನಿಜಕರಪುಟೇ ಕೋಟರಗತಂ
ಕ್ಷಣಾದೇವಂ ತಾಮ್ಯತ್ತಿಮಿಮಕರಮಾಪಾಸ್ಯತಿ ಮುನಿಂ ॥

ಎಂಬುದು ಶಾರ್ಙ್ಗಧರಪದ್ಧತಿಯಲ್ಲಿ 'ಮಾಲವರುದ್ರ'ನೆಂಬುವನ ಹೆಸರಿನಲ್ಲಿ ಹೇಳಲ್ಪಟ್ಟಿದೆ. § ಅನೇಕ ಲಾಕ್ಷಣಿಕರು ಇವನ ಶತಕದ ಶ್ಲೋಕಗಳನ್ನು ಉದಾಹರಿಸಿಕೊಂಡಿರುವುದು ಈ ಶತಕದ ಪ್ರಾಶಸ್ತ್ಯವನ್ನು ತೋರಿಸುತ್ತದೆ. ಈ ಶತಕವು ವಿವಿಧ ನೀತಿಗಳನ್ನು ತಿಳಿಸುವುದಾಗಿಯೂ ಪ್ರಾಪಂಚಿಕ ಜ್ಞಾನದಾಯಕವಾದುದಾಗಿಯೂ ಸುಲಭಶೈಲಿಯುಳ್ಳದ್ದಾಗಿಯೂ ಇರುವುದು. ಉದಾಹರಣೆಗಾಗಿ ಕೆಲವು ಶ್ಲೋಕಗಳು.—

(೧) ಅತುಳೈಶ್ವರ್ಯಭೋಗಸಂಪನ್ನನಾಗಿ ಬಾಹ್ಯಾಡಂಬರನಾಮಶೀಲನಾಗಿ ಯಾರಿಗೂ ಯಾವ ವಿಧದಲ್ಲಿಯೂ ಉಪಕಾರಿಯಾಗದೆ ಸ್ವಾರ್ಥಪರನಾಗಿರುವವನ ಬಳಿಗೆ ಬಂದ ಆಶ್ರಿತನೊಬ್ಬನು ನಿರಾಶನಾಗಿ ಅನ್ಯಾಪದೇಶದಿಂದ ಹೇಳುವಿಕೆ—

ಗ್ರಾವಾಣೋ ಮಣಯೋ ಹರಿರ್ಜಲಚರೋ ಲಕ್ಷ್ಮೀಃ ಪಯೋಮಾನುಷೀ
ಮುಕ್ತಾಫಲಃ ಸಿಕತಾಃ ಪ್ರವಾಳಲತಿಕಾ ಶೈವಾಲಮಂಭಃ ಸುಧಾ ।
ತೀರೇ ಕಲ್ಪಮಹೀರುಹಾಃ ಕಿಮುಪರಂ ನಾಮ್ನಾಪಿ ರತ್ನಾಕರೋ
ದೂರೇ ಕರ್ಣರಸಾಯನಂ ನಿಕಷತಸ್ತೃಷ್ಣಾಪಿ ಸೋ ಶಾಮ್ಯತಿ ॥ ೫೦ ॥

ಎಲೈ ಸಮುದ್ರನೇ! ನಿನ್ನಲ್ಲಿರುವ ಕಲ್ಲುಗಳೇ ಅಮೂಲ್ಯರತ್ನಗಳು, ಮಹಾವಿಷ್ಣುವೇ ಜಲಚರನು, ಸೌಭಾಗ್ಯದಾಯಿನಿಯಾದ ಲಕ್ಷ್ಮಿಯೇ ನಿನ್ನ ಮಗಳು, ಮರಳುರಾಶಿಗಳೇ ಮುತ್ತುಗಳು, ಪಾಚಿಯೇ ಹವಳದ ಬಳ್ಳಿಗಳು, ನೀರೇ ಅಮೃತವು, ದಡದಲ್ಲಿ ಎಲ್ಲೆಲ್ಲಿಯೂ ಕಲ್ಪವೃಕ್ಷಗಳೇ! ಹೆಚ್ಚೇಕೆ? ನಿನ್ನ ಹೆಸರು ಕೂಡಾ ರತ್ನಾಕರನೆಂದೇ ಹೇಳುವುದಾದರೂ ನಿನ್ನ ವಿಚಾರವು ಕೇವಲ ಕೇಳುವುದಕ್ಕೆ ಆನಂದವೇ ಹೊರತು ದಾಹಗೊಂಡು ನಿನ್ನ ಬಳಿಗೆ ಬಂದವನ ನೀರಡಿಕೆಯನ್ನು ಅಡಗಿಸುವ ಯೋಗ್ಯತೆಯೂ ನಿನ್ನಲ್ಲಿಲ್ಲ. (ಇಂತಹ ನಿನಗೆ ಇಷ್ಟು ಆಡಂಬರವೇಕೆ?)

§ ಶಾರ್ಙ್ಗಧರಪದ್ಧತಿ ಪು ೧೭೬ ಶ್ಲೋ. ೧೮೯೧.

(೨) ಹೊರಗಡೆ ಜನರಲ್ಲಿ ತಾನು ಅತ್ಯಂತ ಸಾಧುವೃತ್ತಿಯಲ್ಲಿರುವವನಂತೆ ನಟಿಸುತ್ತಾ ಒಳಗಡೆ ಮಹಾಕ್ರೂರನೂ ದುರ್ಮಾರ್ಗಗತನೂ ಆಗಿರುವವನನ್ನು ತಿಳಿದವನು ಅನ್ಯಾಪದೇಶದಿಂದ ಹೇಳುವಿಕೆ—

ಮೌಳೌ ಸನ್ನಹಿತೋ ಗೃಹಂ ಗಿರಿಗುಹಾಃ ತಾ ಗಾಃ ಕಿಲಾತ್ಮತ್ವಚೋ
ನಿರ್ಯತ್ನೋಪನತೈಃ ಸ್ವವೃತ್ತಿರಸಿಲೈರೇಕತ್ರ ಚರ್ಯೇದೃಶೀ।
ಅನ್ಯತ್ರಾನೃಜುವರ್ತ್ಮ ವಾಗ್ವಿಷರಸಾನ್ ದಂಷ್ಟ್ರಾವಿಷಂ ದೃಶ್ಯತೇ
ಯಾದೃಕ್ತಾಮನು ದೀಪಕೋ ಜ್ವಲತಿ ಸೋ ಭೋಗಿನ್! ಸಖೇ ಕಿನ್ವಿದಂ ॥೬೩॥

ಎಲೈ ಪನ್ನಗನೇ! ನಿನ್ನ ತಲೆಯಲ್ಲಿ ದಿವ್ಯವಾದ ಮಣಿಗಳಿರುವುವು. ಗಿರಿ ಕಂದರವೇ ನಿನ್ನ ವಾಸಸ್ಥಳವು. ನೀನಾದರೋ ಸ್ವದೇಹದ ಚರ್ಮವನ್ನೇ ತ್ಯಾಗ ಮಾಡುವ ಶೀಲವುಳ್ಳವನು, ಸ್ವಲ್ಪವೂ ಪ್ರಯಾಸವಿಲ್ಲದೆ ತಾನಾಗಿ ಬರುವ ಗಾಳಿಯೇ ಜೀವನಾಧಾರವಾಗಿ ಉಳ್ಳವನು. ಒಂದು ವಿಧದಲ್ಲಿ ನೋಡಿದರೆ ನಿನ್ನ ಚರ್ಯೆಯು ಈರೀತಿ ಪವಿತ್ರವೂ ಗಂಭೀರವೂ ಶಾಂತವೂ ಆಗಿರುವುದಾಗಿ ತೋರಿಬರುವುದಾದರೂ ಮತ್ತೊಂದು ವಿಧದಲ್ಲಿ ಕುಟಿಲಚರ್ಯೆಯುಳ್ಳವನೂ ದ್ವಿಜಿಹ್ವತೆಯಿಂದ ವಚನಭ್ರಷ್ಟನೂ ವಿಷಮಿಶ್ರಿತದಂಷ್ಟ್ರವುಳ್ಳವನೂ ಆಗಿ ಕಾಣುತ್ತಿರುವ ಬಗೆ ಹೇಗೆಂಬುದನ್ನು ತೀರ್ಮಾನವನಾಗು.

(೩) ಆಬದ್ಧಕೃತ್ರಿಮಸಟಾಜಟಲಾಂಸಭಿತ್ತಿ
ರಾರೋಪಿತೋ ಮೃಗಪತೇಃ ಪದವೀಂ ಯದಿ ಶ್ವಾ।
ಮತ್ತೇಭಕುಂಭಪಟಪಾಟನಲಂಪಟಸ್ಯ
ನಾದಂ ಕರಿಷ್ಯತಿ ಕಥಂ ಹರಿಣಾಧಿಪಸ್ಯ ॥ ೬೬ ॥

ನಾಯಿಯ ಕೊರಳಿಗೆ ಸಿಂಹಕೇಸರದಂತಹ ಕೇಸರಗಳನ್ನು ಕಟ್ಟಿ ಮೃಗಪತಿಯ ಪದವಿಗೆ ಏರಿಸಿದ ಮಾತ್ರಕ್ಕೆ ಅದು ಮದಿಸಿದ ಆನೆಯ ಕುಂಭಸ್ಥಳವನ್ನು ಸೀಳುವಂತಹ ಮೃಗರಾಜನ ಹಾಗೆ ಗರ್ಜಿಸಬಲ್ಲುದೇ?

ಪರಿಚಂದ್ರ

ಸಂಸ್ಕೃತ ಸಾಹಿತ್ಯದಲ್ಲಿ ಈ ಹೆಸರಿನವರು ನಾಲ್ವರು ದೊರೆಯುವರು.

(೧) ಕ್ರಿ. ಶ. ೭ನೆಯ ಶತಮಾನದಲ್ಲಿದ್ದ ಮಹಾಕವಿಬಾಣನು ತಾನು ಬರೆದಿರುವ ಹರ್ಷಚರಿತಾಂತ್ಯದಲ್ಲಿ—

ಪದಬಂಧೋಜ್ಜ್ವಲೋ ಹಾರೀ ಕೃತವರ್ಣಕ್ರಮಸ್ಥಿತಿಃ ।
ಭಟ್ಟಾರಹರಿಚಂದ್ರಸ್ಯ ಗದ್ಯಬಂಧೋ ನೃಪಾಯತೇ ॥

ಎಂದು ಹೇಳಿರುವ (ಭಟ್ಟಾರ) ಹರಿಚಂದ್ರನೊಬ್ಬ.

(೨) ಧರ್ಮಶರ್ಮಾಭ್ಯುದಯಕಾವ್ಯಕಾರನಾದ ಹರಿಚಂದ್ರನೊಬ್ಬ.

(೩) ಪರಮಾರರಾಜನಾದ ನವಸಾಹಸಾಂಕನ ಮಂತ್ರಿ ಮತ್ತು ವೈದ್ಯನಾಗಿದ್ದ ಹರಿಚಂದ್ರನೊಬ್ಬ. ಇವನು ಚರಕಸಂಹಿತೆಗೆ ಟೀಕೆಯನ್ನು ಬರೆದಿರುವುದಾಗಿ ವಿಶ್ವಕೋಶಕಾರನಾದ ಮಹೇಶ್ವರನು—

ಶ್ರೀಸಾಹಸಾಂಕನೃಪತೇರನವದ್ಯವಿದ್ಯ ।
ವೈದ್ಯಾಂತರಂಗಪದಪದ್ಧತಿಮೇವ ಬಿಭ್ರತ್ ॥
ಯಶ್ಚಂದ್ರಚಾರುಚರಿತೋ ಹರಿಚಂದ್ರನಾಮಾ ।
ಸ್ವವ್ಯಾಖ್ಯಯಾ ಚರಕತಂತ್ರಮಲಂಚಕಾರ ॥

ಎಂದು ಹೇಳಿರುವನು. ವಾಗ್ಭಟನ 'ಅಷ್ಟಾಂಗಹೃದಯ' ವೆಂಬ ವೈದ್ಯಗ್ರಂಥಕ್ಕೆ 'ಆಯುರ್ವೇದರಸಾಯನ' ವೆಂಬ ಟೀಕೆಯನ್ನು ಬರೆದಿರುವ ಹೇಮಾದ್ರಿಯು ತಾನು ಬರೆದಿರುವ ಟೀಕೆಯಲ್ಲಿ.—

ಚರಕೇ ಹರಿಚಂದ್ರಾದ್ಯೈಃ ಸುಶ್ರುತೇ ಜೇಜ್ಜಟಾದಿಭಿಃ ।
ಟೀಕಾಕಾರೈರ್ನ ನಿರ್ಣೀತಂ ಇಹ ಹೇಮಾದ್ರಿಣೋದಿತಂ ॥

ಎಂದು ಹೇಳಿರುವನು.

(೪) ಜೀವಂಧರಚಂಪೂಕಾರಹರಿಚಂದ್ರನೊಬ್ಬ.

ಬಾಣಭಟ್ಟನು ಹೇಳುವ ಭಟ್ಟಾರಹರಿಚಂದ್ರನ ವಿಚಾರವು ಹಿಂದೆಯೇ ಹೇಳಲ್ಪಟ್ಟಿರುವುದು. ಈಗ ಎರಡನೆಯ ಹರಿಚಂದ್ರನ ವಿಚಾರವು ಬರೆಯಬೇಕಾಗಿರುವುದು ಇವನ ತಂದೆಯ ಹೆಸರು ಆರ್ದ್ರದೇವ, ತಾಯಿಯ ಹೆಸರು ರಾಧೆ. ಇವನು ದಿಗಂಬರಜೈನನು. ಕಾಯಸ್ಥನು.‡ ಇದೇ ವಿಚಾರವಾಗಿ ಧರ್ಮಶರ್ಮಾಭ್ಯುದಯದಲ್ಲಿ ಹೇಳಿರುವ ಗ್ರಂಥಕರ್ತೃಃ ಪ್ರಶಸ್ತಿಯಲ್ಲಿ:—

ಶ್ರೀಮಾನಮೇಯಮಹಿಮಾಸ್ತ ಸ ಸೋಮಕಾನಾಂ
ವಂಶಃ ಸಮಸ್ತಜಗತೀವಲಯಾವತಂಸಃ ।
ಹಸ್ತಾವಲಂಬನಮವಾಪ್ಯ ಯಮುಲ್ಲಸಂತೀ
ವೈದ್ಯಾಪಿ ನ ಸ್ಖಲತಿ ದುರ್ಗಪಥೇಷು ಲಕ್ಷ್ಮೀಃ ॥ ೧ ॥
ಮುಕ್ತಾಫಲಸ್ಥಿತಿರಲಂಕೃತಿಷು ಪ್ರಸಿದ್ಧಾ

‡ Dictionary of Jaina Biography Addenda P. 15

ಸ್ತತ್ಪಾರ್ದ್ರದೇವ ಇತಿ ನಿರ್ಮಲಮೂರ್ತಿರಾಸೀತ್ ।
ಕಾಯಸ್ಥ ಏವ ನಿರವದ್ಯಗುಣಗ್ರಹಃ ಸ
ನ್ನೇಕೋಽಪಿ ಯಃ ಕುಲಮಶೇಷಮಲಂ ಚಕಾರ ॥ ೨ ॥
ಲಾವಣ್ಯಾಂಬುನಿಧಿಃ ಕಲಾಕುಲಗೃಹಂ ಸೌಭಾಗ್ಯಸದ್ಭಾಗ್ಯಯೋಃ
ಕ್ರೀಡಾವೇಶ್ಮ ವಿಲಾಸವಾಸವಲಭೇ ಭೂಷಾಸ್ಪದಂ ಸಂಪದಾಂ ।
ಶೌಚಾಚಾರವಿವೇಕ ವಿನ್ಮಯಮಹಃ ಪ್ರಾಣಪ್ರಿಯಾ ಕೂಲಿನ-
ಶರ್ವಾಣೀವ ಪತಿವ್ರತಾ ಪ್ರಣಯಿನೀ ರಥ್ಯೇತಿ ತಸ್ಯಾಭವತ್ ॥ ೩ ॥
ಅರ್ಹತ್ಪದಾಂಭೋರುಹಚಂಚರೀಕಸ್ತಯೋ ಸುತಃ ಶ್ರೀಹರಿಚಂದ್ರ ಆಸೀತ್ ।
ಗುರುಪ್ರಸಾದಾದಮಲಾ ಬಭೂವುಃ ಸಾರಸ್ವತೇ ಸ್ರೋತಸಿ ಯಸ್ಯ ವಾಚಃ ॥೪॥

ಎಂದಿದೆ. ಮೇಲೆ ಹೇಳಿರುವುದರಲ್ಲಿ ಆರ್ದ್ರದೇವನ ಹೆಂಡತಿಯು ಹೆಸರು ರಾಥೆ ಯೆಂದು ಹೇಳಿದೆ. ಗ್ರಂಥಕರ್ತೃಃ ಪ್ರಶಸ್ತಿಯಂತೆ " ರಥ್ಯಾ " ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇವೆರಡರಲ್ಲಾವುದು ಸರಿಯೆಂದು ಹೇಳಲಾಗದಾಗಿದೆ. ರಥ್ಯಾ ಎಂದರೆ ರಾಥೆಯೆಂದು ಅರ್ಥಮಾಡುವದು ಬಹು ಸಾಹಸದ ಕೆಲಸ.

ಕಾಲ:—ಕ್ರಿ. ಶ. ಹತ್ತನೆಯ ಶತಮಾನದ ಆದಿಭಾಗದಲ್ಲಿದ್ದ ಮಹಾಕವಿ ರಾಜಶೇಖರನು ' ಕರ್ಪೂರಮಂಜರಿ ' ಯ ಮೊದಲನೆಯ ಅಂಕದಲ್ಲಿ ಇವನನ್ನು ಹೇಳಿರುವುದರಿಂದ ರಾಜಶೇಖರನಿಗಿಂತ ಹರಿಚಂದ್ರನು ಪ್ರಾಚೀನನಾಗಿರಬೇಕೆಂದೂ ಕ್ರಿ. ಶ. ೯ನೆಯ ಶತಮಾನದಲ್ಲಿದ್ದಿರಬೇಕೆಂದೂ ವ್ಯಕ್ತವಾಗುವುದು.

ಗ್ರಂಥ:—ಇವನು **'ಧರ್ಮಶರ್ಮಾಭ್ಯುದಯ'** ವೆಂಬ ಚಂಪೂಮಹಾ ಕಾವ್ಯವನ್ನು ಬರೆದಿರುವನು. ಇದರಲ್ಲಿ ೨೧ ಸರ್ಗಗಳಿರುವುವು. ೨೪ ಮಂದಿ ತೀರ್ಥಂಕರರಲ್ಲಿ ೧೫ನೆಯವನಾದ ಧರ್ಮನಾಥನಜನ್ಮಾರಭ್ಯ ನಿರ್ವಾಣಪರ್ಯಂತದ ಚರಿತೆಯು ವರ್ಣಿಸಲ್ಪಟ್ಟಿರುವುದು. ಕಾವ್ಯಶೈಲಿಯು ಶಿಶುಪಾಲವಧಕಾವ್ಯವನ್ನು ಹೋಲುವುದಾಗಿದೆ. ಪ್ರತಿಸರ್ಗಾಂತ್ಯದಲ್ಲಿಯೂ " ಇತಿ ಮಹಾಕವಿಶ್ರೀ ಹರಿಚಂದ್ರ ವಿರಚಿತೇ ಧರ್ಮಶರ್ಮಾಭ್ಯುದಯೇ ಮಹಾಕಾವ್ಯೇ" ಎಂದಿರುವುದು.

ಕಥಾಸಾರಾಂಶ—ಸುಪ್ರಸಿದ್ಧವಾದ ಭರತಖಂಡದಲ್ಲಿ ಉತ್ತರಕೋಸಲ ವೆಂಬ ದೇಶಕ್ಕೆ "ರತ್ನಪುರ"ವೆಂಬ ರಾಜಧಾನಿಯು ಇದ್ದಿತು. ಇದನ್ನು ಮಹಾ ಸೇನನೆಂಬ ರಾಜಚೂಡಾಮಣಿಯು ಆಳುತ್ತಿದ್ದನು. ಇವನಿಗೆ ಸುವ್ರತೆ ಎಂಬ ಪಟ್ಟದ ರಾಣಿಯು ಇದ್ದಳು. ಬಹುಕಾಲದವರೆಗೂ ಇವರಿಗೆ ಸಂತಾನವಿಲ್ಲದೆ ಚಿಂತಿಸುತ್ತಿರಲು ಹಠಾತ್ತಾಗಿ ರಾಜೋದ್ಯಾನದಲ್ಲಿ ಪ್ರಾಚೇತಸನೆಂಬ ಋಷಿವುಂಗ

---

* ಧರ್ಮಶರ್ಮಾಭ್ಯುದಯ ಪುಟ ೧೬೩.

ವನು ಶಿಷ್ಯಸಮೂಹದೊಡನೆ ಬಂದಿರುವ ಸಮಾಚಾರವನ್ನು ಕೇಳಿ ಆತನ ಸಂದರ್ಶನಾರ್ಥಿಯಾಗಿ ಹೊರಟು ಆತನನ್ನು ಪೂಜಿಸಿದನಂತರ ಸತ್ಕೃತನಾಗಿ ಕುಳಿತುಕೊಂಡು ಮನದ ಬಯಕೆಯನ್ನು ತಿಳುಸಿಸಲು ಮುನಿವರನು ರಾಜಮಹಾಸ್ಯನ! ಚಿಂತೆಯನ್ನು ಬಿಡು. ಚತುರ್ವಿಂಶತಿತೀರ್ಥಂಕರರಲ್ಲಿ ೧೫ನೆಯ ತೀರ್ಥಂಕರನಾದ ಧರ್ಮನಾಥನು ನಿನ್ನ ಉದರದಲ್ಲಿ ಜನಿಸಿ ನಿಮ್ಮ ಕುಲವನ್ನುದ್ಧರಿಪನೆಂದು ಹೇಳಲು ರಾಜನು ಮುದಿತಹೃದಯನಾಗಿ ಆ ಋಷಿಪುಂಗವನನ್ನು ಕುರಿತು ಮಹಾತ್ಮ! ಪಂಚಮ ಪವಿತ್ರನಾದ ಧರ್ಮನಾಥನು ಗರ್ಭಕ್ಲೇಶವನ್ನು ಅನುಭವಿಸಬೇಕಾದ ಕಾರಣವೇನು? ನಮ್ಮ ಉದರದಲ್ಲಿ ಜನ್ಮಿಸುವ ಕಾರಣವು ಹೇಗೆ? ಆತನ ಪೂರ್ವಜನ್ಮ ವೃತ್ತಾಂತವೇನು? ಎಂದು ಬೆಸಗೊಳ್ಳಲು ಮುನಿವರನು ಇಂತೆಂದನು: —

ಕೇಳು ಭೂಪಾಲ! ಪಂಚಾಶತ್ಕೋಟಿಯೋಜನ ವಿಸ್ತೀರ್ಣವಾದ ಈ ಭೂಮಂಡಲದಲ್ಲಿ ಧಾತಕೀಖಂಡವೆಂಬ ದ್ವೀಪವು ಇರುವುದು. ಇದರ ಒಂದು ಭಾಗದಲ್ಲಿ ಮೇರುಪರ್ವತವಿರುವುದು. ಇದರ ದಕ್ಷಿಣಭಾಗದಲ್ಲಿ ವಿದೇಹವೆಂಬ ರಾಜ್ಯವೂ ಅದಕ್ಕೆ ಅಲಂಕಾರಭೂತವಾದ ವತ್ಸದೇಶವೂ ಇರುವುದು. ಇದನ್ನುಮಹಾಭುಜಬಲಪರಾಕ್ರಮಿಯಾದ ದಶರಥನೆಂಬುವನು ಧರ್ಮದಿಂದ ರಾಜ್ಯಪರಿವಾಲನವನ್ನು ಮಾಡುತ್ತ ಅನೇಕ ಅಂತಃಪುರಜನರಿಂದೊಡಗೂಡಿ ಲೈಲಾರಾಮವನನದೀತೀರಗಳಲ್ಲಿ ಮನಬಂದಂತೆ ವಿಹರಿಸುತ್ತ ಅವರಿಂದ ಸೇವಿತನಾಗಿರಲು ಒಂದಾನೊಂದು ಚಂದ್ರಗ್ರಹಣದ ದಿವಸ ರಾಹುಗ್ರಸ್ತನಾದ ಚಂದ್ರನನ್ನು ನೋಡಿ ಅಹಹ! ಇದೆಂತಹ ಅಚ್ಚರಿ! ಮಹಾಮುನಿವರಾದ ದೇವತೆಗಳಿಂದ ಮಾನ್ಯನಾಗಿ ಸುಖಶಾಂತಿದಾಯಕನಾದ ಲೋಕಪೂಜ್ಯನಾದ ಚಂದ್ರನಿಗೇ ಇಂತಹ ವಿಪತ್ತು ಸಂಭವಿಸುವುದಾದರೆ ನಮ್ಮಂತಹ ಹುಲುಮಾನವರ ಪಾಡೇನು? ಆಯುಷ್ಯವಾದರೋ ಛಿದ್ರಘಟದಲ್ಲಿನ ನೀರಿನಂತೆ ಕಳೆದು ಹೋಗುತ್ತಿರುವುದು. ಅಭಿಮಾನಪುರಸ್ಸರವಾದ ಯೌವನವು ಗಳಿತವಾಗಿ ಹೋಗಿ ಜರಾಂಗನೆಯ ಪ್ರಹರಗಳಿಗೆ ಸಿಲುಕಿ ದೇಹವು ಜರ್ಜರಿತವಾಗಿಯೇ ಹೋಗುವುದು. ಹುಟ್ಟಿದವನಿಗೆ ಸಾವು ತಪ್ಪದು. ಒಂದು ದಿವಸವಿಲ್ಲದಿದ್ದರೆ ಮತ್ತೊಂದು ದಿನಸ ಸಾಯಲೇಬೇಕಾಗುವುದು. ಆದುದರಿಂದ ಈ ನಶ್ವರವಾದ ಭೋಗಗಳನ್ನು ತೊರೆದು ವಿಷಯೋಪಲಾಲಸತೆಯನ್ನು ಮರೆತು ಇಂದ್ರಿಯಪಾಟವವು ಸುಷ್ಟುವಾಗಿರುವಾಗಲೇ ಪರಮಾರ್ಥಸಿದ್ಧಿಗಾಗಿ ಯತ್ನಿಸುವುದು ಪ್ರತಿಯೊಬ್ಬ ವಿವೇಕಿಯ ಕರ್ತವ್ಯವೆಂದು ಯೋಚಿಸಿ ದೃಢಮನಸ್ಕನಾಗಿ ತನ್ನ ಮಗನಾದ ಅತಿರಥನಿಗೆ ರಾಜ್ಯಾಭಿಷೇಕವನ್ನು ಮಾಡಿ ತಪೋವನಕ್ಕೆ ಹೋಗಿ ಅಲ್ಲಿ ಸಿದ್ಧಪುರುಷರನ್ನು ಸೇವಿಸಿ ಸರ್ವಸಂನ್ಯಾಸದಿಂದ ಈ ಕಳೇಬರವನ್ನು ಬಿಟ್ಟು ಸರ್ವಾರ್ಥಸಿದ್ಧಿಯನ್ನು ಹೊಂದಿದನು. ಇಂತಹ ಪೂತಚರಿತನು ಧರ್ಮರಕ್ಷಣಾ

ರ್ಥವಾಗಿ ನಿನ್ನುದರದಲ್ಲಿ ಜನಿಸುವನು ಎಂದನು. ಕಾಲಕ್ರಮದಲ್ಲಿ ಸಾಕ್ಷಾದ್ಭ ಗವಂತನಾದ ಪರಮ ಜಿನೇಶ್ವರನು ಸುವ್ರತ್ರೆಯ ಉದರದಲ್ಲಿ ಮಾನವಲೀಲೆಗೆ ತಕ್ಕಂತೆ ಜನಿಸಿದುದನ್ನು ನೋಡಿ ಇಂದ್ರನು ಭಗವಂತನಾದತೀರ್ಥಂಕರನಿಗೆ ಮೇರು ಶಿಖರದಲ್ಲಿ ಜನ್ಮಾಭಿಷೇಕಮಹೋತ್ಸವವನ್ನು ಮಾಡಬೇಕೆಂದೆಣಿಸಿ ಮಹಾಸಮಾರಾಧ ನೆಯನ್ನು ನಡೆಯಿಸಿ, **ಧರ್ಮನಾಥ**ನೆಂದುನಾಮಕರಣವನ್ನು ಮಾಡಿ ತಾಯಿಯಾದ ಸುವ್ರತೆಯ ಬಳಿಯಲ್ಲಿ ಮಲಗಿಸಿ ತನ್ನ ಲೋಕವನ್ನು ಕುರಿತು ತೆರಳಿದನು. ಧರ್ಮ ನಾಥನು ಬಾಲ್ಯವನ್ನು ಕಳೆದು ಚತುಃಷಷ್ಟಿಕಲಾಪ್ರವೀಣನಾಗಿ ಗುರುದಕ್ಷಿಣೆ ಯನ್ನು ಕೊಟ್ಟು ಯೋಗ್ಯಕಾಲದಲ್ಲಿ ವಿದರ್ಭರಾಜನ ಕುವರಿಯಾದ ಶೃಂಗಾರವತಿ ಯನ್ನು ವಿವಾಹಮಾಡಿಕೊಂಡು ಮಾತಾಪಿತೃಗಳ ಆಜ್ಞೆಯಂತೆ ನಡೆದುಕೊಳ್ಳು ತ್ತಿರಲು ಮಹಾಸೇನನು ಧರ್ಮನಾಥನಿಗೆ ರಾಜ್ಯಭಾರವನ್ನು ವಹಿಸಿ ರಾಜನೀತಿ ಗಳನ್ನು ಹೇಳಿ ತಪೋಯೋಗ್ಯವಾದ ದಿವ್ಯದೇಶವನ್ನು ಕುರಿತು ಹೊರಟುಹೋದನು. ಧರ್ಮನಾಥನು ಧರ್ಮದಿಂದ ಬಹುಕಾಲ ರಾಜ್ಯಪರಿಪಾಲನವನ್ನುಮಾಡಿ ಕೊನೆಗೆ ವಿರಕ್ತನಾಗಿ ಜಿನದೀಕ್ಷೆಯನ್ನು ವಹಿಸಿ ತೀರ್ಥಂಕರತ್ವವನ್ನು ಹೊಂದಿದನು. ಇದೇ ಇವನ ಕಥೆ. ಇದರಲ್ಲಿ ಮಹಾಸೇನನು ಧರ್ಮನಾಥನಿಗೆ ಮಾಡಿದ ರಾಜ ನೀತಿಯ ಸಾರಾಂಶವು ಹೀಗಿರುವುದು: –

ಧರ್ಮನಾಥ! ಸುಗುಣಗಳಿಗೆ ಆಕರನಾದ ನೀನು ನಿನ್ನ ಸದ್ಗುಣಪ್ರಕಟನ ದಿಂದ ಹೆದೆಯಿಂದ ಕೂಡಿರುವ ಕೋದಂಡದಂತೆ ಸಕಲಕಾರ್ಯಗಳಲ್ಲಿಯೂ ಕೀರ್ತಿ ಯನ್ನುಗಳಿಸಿ ಪ್ರಶಂಸಾರ್ಹನಾಗುವೆ. ನೀನು ಸರ್ವಸಮೃದ್ಧಿಯಿಂದಿರುವನಾದರೂ ಸನ್ಮಂತ್ರಿಗಳ ಸಾಮಿಪ್ಯವನ್ನೆಂದಿಗೂ ಬಿಡದಿರು. ಚಪಲಳಾದ ಲಕ್ಷ್ಮಿಯಿಂದ ಮತ್ತ ನಾಗಬೇಡ. ಯಾವಾಗಲೂ ಕೋಶವನ್ನು ವೃದ್ಧಿಹೊಂದಿಸುತ್ತಿರುವನಾಗು. ಏಕೆಂದರೆ ವಿಪುಲಧನಸಮೃದ್ಧನಾಗಿರುವ ರಾಜನನ್ನುಯಾರೂ ಜೈಸಲಾರರು. ಆಶ್ರಿ ತಸಂರಕ್ಷಣದಿಂದ ಅವರ ಪ್ರೀತಿಯನ್ನು ಸಂಪಾದಿಸುವನಾಗು. ಇಲ್ಲದಿದ್ದರೆ ಅವರು ನಿನ್ನನ್ನು ಪ್ರೀತಿಸುವ ಬದಲು ಪ್ರತಿಭಟಿಸುವರು. ಅನಂತರ ಅವರನ್ನು ಅಡಗಿಸುವುದು ಅತಿಕಷ್ಟವಾಗುವದು. ಆದುದರಿಂದ ನಿನ್ನ ಸಮೀಪವರ್ತಿಗ ಳಾದ ಜನರಿಗೆ ಜಿಹಾನಾಸ್ಪದನಾಗದಿರು. ಪಾತ್ರಾಪಾತ್ರವನ್ನರಿತು ಅವರನ್ನು ತಕ್ಕ ಕೆಲಸಗಳಲ್ಲಿ ನಿಯೋಗಿಸು. ಅಮೂಲ್ಯವಾದ ಮಣಿಯನ್ನು ಅತ್ಯಂತ ಹೇಯವಾದ ಸೀಸದಲ್ಲಿ ಮೆಟ್ಟದ ಹಾಗೆ ಯೋಗ್ಯರಾದವರನ್ನು ಅಯುಕ್ತಕಾರ್ಯಗಳಲ್ಲಿ ನಿಯಮಿ ಸದಿರು. ರಾಜನು ಯಾವಾಗಲೂ ಪ್ರಜಾಪಕ್ಷನಾಗಿದ್ದುಕೊಂಡು ಸರಿಯಾದ ಬೆಂಬಲದಿಂದ ಕೂಡಿ ಶತ್ರುನಿಗ್ರಹವನ್ನು ಮಾಡತಕ್ಕದ್ದು. ಆದುದರಿಂದ ಮೊದಲು ಅಂತಃಶತ್ರುಗಳನ್ನುಸರಿಪಡಿಸಿಕೊಂಡು ಅಥವಾ ನಿರ್ಮೂಲಮಾಡಿ ಅನಂತರ ಇತರ ಶತ್ರುಗಳನ್ನು ಜಯಿಸಲು ಹವಣಿಸಬೇಕು. ಲೋಕದಲ್ಲಿ ರಾಜ್ಯವನ್ನು ಗಳಿಸಿ

ದುದಕ್ಕೆ ಸುಖಪಡುವದೇ ಪ್ರಯೋಜನವಾಗಿರುವದು. ಇಂತಹ ಸುಖ ಫಲವು ಅರ್ಥಮೂಲವಾಗಿರುವದು. ಇವೆರಡನ್ನು ಬಿಟ್ಟು ಧರ್ಮಮಾತ್ರವನ್ನೇ ಕೋರುವ ನಿಗೆ ಈ ರಾಜ್ಯವು ನಿರರ್ಥಕವಾಗಿಹೋಗುವುದು. ಗುರುಹಿರಿಯರಲ್ಲಿ ವಿನೀತನಾಗಿರು. ಈ ಲೋಕದಲ್ಲಿ ರಾಜನಾದವನು ಪ್ರಜೆಗಳಿಗೆ ಬುದ್ಧಿಯನ್ನು ಕಲಿಸಿ ಅವರನ್ನು ವಿನಯಸಂಪನ್ನರನ್ನಾಗಿ ಮಾಡುವುದಕ್ಕಿಂತಲೂ ಬೇರೆ ಕಾರ್ಯವಾವುದೂ ಇಲ್ಲ. ಹಣವನ್ನು ಕೊಟ್ಟು ಎಲ್ಲರನ್ನೂ ತೃಪ್ತಿಗೊಳಿಸಲಾಗುವದಿಲ್ಲ. ಹಾಗೆ ಆಗುವದೆಂದು ತೋರುವುದಾದರೂ ಆ ತೃಪ್ತಿಯು ಕ್ಷಣಮಾತ್ರವಿರುವುದು. ಆದುದರಿಂದ ಪ್ರಜೆಗಳಿಗೆ ವಿದ್ಯಾವಿನಯಸಂಪತ್ತುಗಳನ್ನುಂಟುಮಾಡಬೇಕು. ನೀನು ಯಾವಾಗಲೂ ಸರ್ವರನ್ನೂ ತನ್ನವರು ಪರರೆನ್ನದೆ ಸಮದೃಷ್ಟಿಯಿಂದ ಕಾಪಾಡುವನಾಗು. ಧನಪಿಶಾಚಗ್ರಸ್ತನಾಗಿ ಪ್ರಜೆಗಳ ಆದಾಯವನ್ನರಿಯದೆ ತೆರಿಗೆಗಳನ್ನು ಹೆಚ್ಚಿಸಿ ತೆರಿಸಿ ಹಿಂಸಿಸುತ್ತ ರಾಜಭಕ್ತಿ ಪರಾಙ್ಮುಖರನ್ನಾಗಿ ಮಾಡಬೇಡ. ಯಾವಾಗಲೂ ತಾಳ್ಮೆಯಿಂದಿರು. ಅರಿಷಡ್ವರ್ಗಗಳಿಗೆಡೆಗೊಡದಿರು. ದುಷ್ಟನಿಗ್ರಹ ಶಿಷ್ಟ ಪರಿಪಾಲನೆಯು ರಾಜನಕರ್ತವ್ಯವೆಂಬುದನ್ನು ಮರೆಯದಿರು. ದುರೂಹ ವಿಷಯಗಳನ್ನು ಜ್ಞಾನವೃದ್ಧರಾದ ಮಂತ್ರಿಗಳೊಡನೆ ಆಲೋಚಿಸಿ ನಡೆಯಿಸು. ಒಂದುವೇಳೆ ಕೈಗೊಳ್ಳುವ ವಿಷಯವು ನಿನಗೆ ತಿಳಿದುದಾಗಿರುವುದಾದರೂ ರಾಜ್ಯಕ್ಕೆ ಹಿತಾಕಾಂಕ್ಷಿಗಳಾದ ಮಂತ್ರಿಗಳಿಗೆ ತಿಳಿಸದೆ ಸ್ವತಂತ್ರಿಸಿ ಮಾಡದಿರು. ನಿಜವಾದ ಹಿತೋಕ್ತಿಗಳನ್ನು ಹೇಳುವರನ್ನು ಧಿಕ್ಕರಿಸಬೇಡ. ನಟವಿಟಗಾಯಕರ ಮೋಹಕ್ಕೆ ಸಿಲುಕದಿರು. ಲಕ್ಷ್ಮೀಮದವು ಎಂತಹ ವಿವೇಕಿಯನ್ನೂ ಅವಿವೇಕಿಯನ್ನಾಗಿ ಮಾಡದಿರದು. ಮದಾಂಧನಿಗೆ ಪ್ರಪಂಚವು ಕಾಣಿಸದು. ಗುರುಹಿರಿಯರು ಕಿರಿಯರಾಗಿ ತೋರುವರು. ವಿವೇಕವು ಹೋಗಿ ಅವಿವೇಕಮಾರ್ಗವು ತಲೆದೋರಿ ಜನ್ಮವನ್ನು ಅಸಾರ್ಥಕಪಡಿಸುವದು. ಸನ್ಮಿತ್ರರನ್ನು ಯಾವಾಗಲೂ ಸಂತೋಷಗೊಳಿಸುತ್ತಿರು. ಪ್ರಜೆಗಳನ್ನುವೃಥಾ ಪಾತಕಕ್ಕೆ ಗುರಿಗೊಳಿಸದಿರು. ಭೃತ್ಯರನ್ನು ಅರ್ಥಸಂಪತ್ತಿಯಿಂದ ತುಷ್ಟಿಗೊಳಿಸು. ಪಂಡಿತರು ಯಾವಾಗಲೂ ತಮ್ಮ ಸೂಕ್ತಿಗಳಿಂದ ನಮ್ಮ ಕೀರ್ತಿಯನ್ನು ನೆಲೆಗೊಳಿಸುವರಾದುದರಿಂದ ಅವರನ್ನು ಎಲ್ಲರಿಗಿಂತಲೂ ಹೆಚ್ಚಾಗಿ ಗೌರವಿಸು. ಪ್ರಪಂಚವು ಸ್ಥಿರವೆಂದೂ ರಾಜಭೋಗವು ಸ್ಥಿರವೆಂದೂ ರಾಜಭೋಗಭಾಗ್ಯವು ಸ್ಥಿರವೆಂದೂನಂಬಿ ಧರ್ಮದಿಂದ ಪ್ರಮತ್ತನಾಗದಿರು. ಮುಖ್ಯವಾಗಿ ನೀನು ಸಕಲ ಕಲ್ಯಾಣಗುಣಾಶ್ರಯನಾಗಿದ್ದು ಪ್ರಜೆಗಳಿಗೂ ಇತರರಿಗೂ ಮಾರ್ಗದರ್ಶಕನಾಗಿ ಶಾಶ್ವತವಾದ ಕೀರ್ತಿಯನ್ನು ಪಡೆಯುವನಾಗು.

ಶೃಂಗಾರವತಿಯ ಚಿತ್ರಪಠದ ಕೆಳಗೆ ಬರೆದಿರುವುದೆಂದು ಹೇಳುವ ಶ್ಲೋಕವು ಹೀಗಿರುವುದು.--

ಧರ್ಮಶರ್ಮಾಭ್ಯುದಯ ಸರ್ಗ೧೪ ಶ್ಲೋಕ ೧೫-೧೩೦.

ಅಸ್ಯಾಃ ಸ್ವರೂಪಂ ಕಥಮೇಷಚಕ್ಷುಷೋ
ಯಥಾವದಸ್ಮೋ ಲಿಖಿತುಂ ಪ್ರಗಲ್ಭತಾಂ ॥
ಥಾಪಿ ಯಸ್ಯಾಃ ಪ್ರತಿರೂಪಸಿರ್ಮಿತಿ
ಘುಣಾಕ್ಷರನ್ಯಾಯ ಕೃತಾ ಕ್ರಿಯೇರ್ಜಡಃ ॥ ೯—೩೫

೯೦ ಇದನ್ನು ಓದುವವರಿಗೆ ಭವಭೂತಿಯ ಮಾಲತೀಮಾಧವದಲ್ಲಿ ಕಥಾನಾಯಕನಾದ ಮಾಧವನು ಸುಂದರಳಾದ ಮಾಲತಿಯನ್ನು ಚಿತ್ರಿಸಿ ಅದರ ಕೆಳಗಡೆ ಹೇಳಿರುವ—

ಜಗತಿ ಜಯಿನಸ್ತೇ ತೇ ಭಾವಾ ಸರ್ವೇಂದುಕಲಾದಯಃ
ಪ್ರಕೃತಿಮಧುರಾಃ ಸಂತೀನಾಸ್ತೇ ಮಸೋ ಮಧಯಂತಿ ಯೇ ॥
ಮಮ ತು ಯದಿಯಂ ಯಾತಾ ಲೋಕೇ ವಿಲೋಚನಚಂದ್ರಿಕಾ
ಸಯಸನವಿಷಯಂ ಜನ್ಮನ್ಯೇಕಃ ಸ ಏವ ಮಹೋತ್ಸವಃ ॥ ೧೦—೪೯

ಎಂಬ ಶ್ಲೋಕವು ಜ್ಞಾಪಕಕ್ಕೆ ಬಾರದಿರದು. ಶೃಂಗಾರವತಿಯು ಪ್ರತೀಹಾರಿ ಮುಖ್ಯರೊಡನೆ ಸ್ವಯಂವರ ಮಂಟಪವನ್ನು ಪ್ರವೇಶಿಸಿ ರಾಜಕುವರರ ಗುಣವರ್ಣನವನ್ನು ಕೇಳುತ್ತ ಧರ್ಮನಾಥನನ್ನು ನೋಡುವ ತವಕದಿಂದ ಮುಂದುವರಿಯುವ ವಿಚಾರವು ಕಾಳಿದಾಸನ ರಘುವಂಶದಲ್ಲಿ ಹೇಳಿರುವ ಇಂದುಮತಿಯ ಸ್ವಯಂವರ ವಿಚಾರವನ್ನು ಅಚ್ಚಳಿಯದೆ ಹೋಲುವುದಾಗಿದೆ.

ಈ ಕಾವ್ಯದ ಕೆಲವು ಶ್ಲೋಕಗಳನ್ನು ಮಾದರಿಗಾಗಿ ಬರೆಯುವೆವು.—

ವನೇಽಸ್ಮಿನ್ ಪಾಕೋಲ್ಬಣದಾಡಿಮಿ ಫಲಪ್ರಕಾಶಮಾಕಾಶಮಣಂ ನಪೋದಿತಂ
ಜಘೃಕ್ಷವೋಽಮಿ ಸಪತಂತಿ ಮಾನರಾ ಅನೂರುದಂಡಾಗ್ರನಿವಾರಿತು ಅಪಿ॥೧೦—೪೧

ಈ ವಿಂಧ್ಯಾಚಲದಲ್ಲಿರುವ ವಾನರಗಳು ಆಕಾಶದಲ್ಲಿ ಪ್ರಕಾಶಿಸುತ್ತಿರುವ ನೂತನೋದಯ ಸೂರ್ಯನನ್ನು ನೋಡಿ ದಾಡಿವಿಪಾಫಲಭ್ರಾಂತಿಯಿಂದ ಅದನ್ನು ಹೊಂದಲು ಅರುಣನ ದಂಡಾಘಾತವನ್ನೂ ಲೆಕ್ಕಿಸದೆ ಮೇಲಕ್ಕೆ ಎಗರಿ ಎಗರಿ ಕೆಳಕ್ಕೆ ಬೀಳುತ್ತಿವೆ. ಎಂದರೆ ವಿಂಧ್ಯಾಚಲದ ಶೃಂಗಗಳು ಗಗನತಲಚುಂಬಿತಗಳಾಗಿದ್ದವೆಂದು ಭಾವವು.

ದೂರೇಣ ದಾವಾನಲಶಂಕ ಯಾ ಮೃಗಾ ಸ್ತ್ಯಜಂತಿ ಶೋಣೋಪಲ ಸಂಚಯದ್ಯುತೀಃ
ಇಹೋಚ್ಛಲಚ್ಛೋಣಿತ ಸಿರ್ಜರಾಶಯಾ ಲಿಹಂತಿ ಚ ಪ್ರೀತಿಪುಷಃ ಕ್ಷಣಂ ಶಿವಾಃ ॥ ೧೦—೪೪

ಘುಣ ಎಂಬ ಹುಳು ಮರವನ್ನೋ ಅಥವಾ ಯಾವುದಾದರೊಂದು ಪುಸ್ತಕವನ್ನೋ ಕೊರೆದುವನ್ನು ಯಾವುದಾದರೊಂದು ಅಕ್ಷರದ ರೂಪವನ್ನಾಗಿ ಹೋಲಿಸುವುದಕ್ಕೆ ಘುಣಾಕ್ಷರನ್ಯಾಯವೆನ್ನುವರು

ಈ ವಿಂಧ್ಯಾಚಲದ ಗೈರಿಕಾದಿಧಾತು ಸಮಾಯುಕ್ತವಾದ ಕೆಂಗಲ್ಲುಗಳ ಮೇಲೆ ಸೂರ್ಯನ ಕಿರಣಗಳು ಬಿದ್ದು ಥಳಥಳಗುಟ್ಟುವುದನ್ನು ಮೃಗಗಳು ದೂರದಿಂದ ನೋಡಿ ಉರಿಯೆಂದುಭಾವಿಸಿ ದೂರ ದೂರಸಾಗುತ್ತವೆ. ಹೀಗೆ ಥಳಥಳಗುಟ್ಟುತ್ತಿರುವ ತೋಣೋವಲ (ಕೆಂಗಲ್ಲು) ಗಳನ್ನು ನೋಡಿ ಜಂಬುಕಗಳು ರಕ್ತಪ್ರವಾಹವೆಂಬ ಭ್ರಾಂತಿಯಿಂದ ಆ ಕಲ್ಲುಗಳನ್ನು ನೆಕ್ಕುತ್ತವೆ.

ಸತೀ ಚ ಸೌಂದರ್ಯವತೀ ಚ ಪುಂವರಪ್ರಸೂಶ್ಚ ಸಾಕ್ಷಾದಿಯಮೇವ ಭೂತ್ರಯೀ
ಇತೀವ ರೇಖಾತ್ರಯಮಕ್ಕತಸ್ಮೈ ವಿಧಿಶ್ಚಕಾರತ್ರಿವಲಿತ್ರಯಚ್ಛಲಾತ್ ॥೨-೪೫॥

ಲೋಕದಲ್ಲಿ ಯಾವುದಾದರೊಂದು ಮುಖ್ಯ ವಿಷಯವನ್ನು ಸಮರ್ಥಿಸಿ ಹೇಳಬೇಕಾದಾಗ ಅದನ್ನು ಒತ್ತಿಹೇಳುವುದೂ, ಬರೆಯಬೇಕಾದಾಗ ಆ ಮುಖ್ಯವಿಷಯದ ಕೆಳಗೆ ರೇಖೆಯನ್ನೆಳೆದು ಗುರ್ತಿಸುವ ವಾಡಿಕೆಯಂತೆ ಬ್ರಹ್ಮನು ಸುವ್ರತಾದೇವಿಯಲ್ಲಿ ಸತೀತ್ವವೂ ಸೌಂದರ್ಯವೂ ಪುಂವರಪ್ರಸೂತ್ವವೂ ಈ ಮೂರೂ ಏಕೀಭವಿಸಿರುವುದನ್ನು ಲೋಕಕ್ಕೆ ತಿಳಿಯಹೇಳುವ್ವದಕ್ಕಾಗಿ ರೇಖೆಯನ್ನೆಳೆದು ಗುರ್ತಿಸಿರುವನೋ ಎಂಬಂತೆ ತ್ರಿವಳಿಗಳೊಪ್ಪಿದ್ದವು.

ಯತ್ಸಂಸಕ್ತಂ ಪ್ರಾಗ್ಜನಾಂ ಕ್ಷೀರಸೀರನ್ಯಾಯೇನೋಚ್ಚೈ ರಂಗಮಪ್ಯಂತರಂಗಂ
ಆಯುಶ್ಶೇಷೇ ಯಾತಿ ಚೇತತ್ತದಾನೀಂ ಕಾ ಬಾಹ್ಯೇಷು ಸ್ತ್ರೀತನೂಜಾದಿಕೇಷು ॥೨೦ ೧೨॥

ಹಾಲಿಗೆ ನೀರನ್ನು ಬೆರಸಿದರೆ ಯಾವರೀತಿ ಭೇದವು ತೋರುವುದಿಲ್ಲವೋ ಹಾಗೆಯೇ ಮನುಷ್ಯನ ಅಂಗವೂ, ಅಂತರಂಗವೂ ಒಂದೇ ಆಗಿದ್ದು ಆಯುಷ್ಯವು ಮುಗಿದನಂತರ ಪರಸ್ಪರ ಬೇರೆ ಬೇರೆಯಾಗುವಂತೆ ಜೀವಿಸಿರುವವರೆಗೂ ಏಕಪ್ರಕಾರವಾಗಿ ಸಂಸಾರಸೌಖ್ಯವನ್ನು ಅನುಭವಿಸಿ ಆಯುಷ್ಯವು ಮುಗಿದಕೂಡಲೇ ಅಂಗ ಮತ್ತು ಅಂತರಂಗದಿಂದ ಬೇರೆಯಾಗುವರಾದ ಈ ಪತ್ನೀಪುತ್ರರಿಂದೇನು ತಾನೇ ಪ್ರಯೋಜನ? ಎಂದರೆ ಯಾವಪ್ರಯೋಜನವೂ ಇಲ್ಲವೆಂದು ಭಾವವ್ರ.

ಬಾಲಂ ವರ್ಷೀಯಾಂಸಮಧ್ಯಾಂ ದರಿದ್ರಂ ಧೀರಂ ಭೀರುಂ ಸಜ್ಜನಂ ದುರ್ಜನಂ ಚ
ಅಶ್ನಾತ್ಯೇಕಃ ಕೃಷ್ಣವರ್ತ್ಮೇವ ಕಲ್ಪಂ ಸರ್ವಗ್ರಾಸೀ ನಿರ್ವಿವೇಕಃ ಕೃತಾಂತಃ ॥೨೦-೨೦॥

ಯಾವುದಾದರೊಂದು ಒಣಗಿದ ಸ್ಥಳದಲ್ಲಿರುವ ಹುಲ್ಲಿನಮೇಲೆ ಬಿದ್ದ ಬೆಂಕಿಯು ಆ ಸ್ಥಳದಲ್ಲಿರುವ ಸರ್ವಸ್ವವನ್ನೂ ವಿವೇಚನೆ ಇಲ್ಲದೆ ನಿರ್ಮೂಲಮಾಡುವಂತೆ ವಿವೇಕಶೂನ್ಯನೂ ಸರ್ವಗ್ರಾಸಿಯೂ ಆದ ಕಾಲನು ಶಿಶುವಾಗಲಿ, ವೃದ್ಧನಾಗಲಿ, ಧನಿಕನಾಗಲಿ, ದರಿದ್ರನಾಗಲಿ, ಧೀರನಾಗಲಿ, ಭೀರುವಾಗಲಿ, ಸಜ್ಜನನಾಗಲಿ ಅಥವಾ ದುರ್ಜನನಾಗಲಿ ಯಾರೇ ಆಗಲಿ ಯಾವುದೇ ಆಗಲಿ ಲಕ್ಷ್ಯವಿಡದೆ

ಸರ್ವಸ್ವವನ್ನೂ ನಾಶಮಾಡಿಯೇ ಬಿಡುವನು. ಎಂದರೆ ಸರ್ವವೂ ಕಾಲಾಧೀನ ವೆಂದೂ ಯಾರೂ ಯಾವುದೂ ಸ್ಥಿರವಲ್ಲವೆಂದು ಭಾವವು.

ವಿತ್ತಂ ಗೇಹಾದಂಗಮುಚ್ಚೈಸ್ತ್ಯಜತಿ ಕೃಪಣೋ ಯತ್ನತೋರ್ಜಿತಂ ತೇ ಬಾಂಧವಾಶ್ಚ ಶ್ಮಶಾನಾತ್
ಏಕಂ ನಾನಾಜನ್ಮವಲ್ಲೀಸದಾನಂ ಕರ್ಮ ದ್ವೇಧಾ ಯಾತಿ ಜೀವೇನ ಸಾರ್ಧಂ ॥೨೦-೨೨॥

ಮನುಷ್ಯನು ಬದುಕಿರುವಾಗ ಸಂಪಾದಿಸಿದ್ದ ಧನಕನಕ ಧಾನ್ಯಾದಿಗಳೆಲ್ಲವೂ ಸತ್ತನಂತರ ಅವನನ್ನು ಹಿಂಬಾಲಿಸದೆ ಮನೆಯಲ್ಲಿ ಉಳಿದುಹೋಗುವುದು. ಇದು ವರೆಗೆ ಸುಂದರವೆನಿಸಿಕೊಂಡಿದ್ದ ಶರೀರವನ್ನು ಸತ್ತನಂತರ ಬೆಂಕಿಯಲ್ಲಿ ಸುಟ್ಟುಬಿಡುವರು. ಅನುವರ್ತಿಸಿಕೊಂಡಿದ್ದ ಮಿತ್ರಬಾಂಧವರೆಲ್ಲರೂ ಶ್ಮಶಾನದಿಂದ ಹಿಂತಿರುಗುವರು. ಜರಾಮರಣರೂಪವಾದ ಅನೇಕ ಜನ್ಮಗಳಿಗೆ ಕಾರಣಭೂತವಾಗಿರುವ ಪಾಪಪುಣ್ಯಗಳ ಹೊರತು ಮತ್ತಾವುದೂ ಇವನ ಜೊತೆಯಲ್ಲಿ ಹೋಗುವುದಿಲ್ಲ.

ರು ದ್ರ ಭ ಟ್ಟ

ಭಟ್ಟಶಬ್ದಪ್ರಯೋಗದಿಂದ ಇವನು ಬ್ರಾಹ್ಮಣನಾಗಿರಬೇಕೆಂದು ಬೋಧೆಯಾಗುತ್ತದೆ. ಇವನನ್ನು ರುದ್ರ ನೆಂದೂ ಕರೆಯುವ ವಾಡಿಕೆ. ಇವನು ಎಲ್ಲಯವನೆಂಬುದಾಗಲಿ ಜನನನೀಜನಕರಾರೆಂಬುದಾಗಲಿ ತಿಳಿಯದು.

ಕಾಲ :—ಪ್ರೊ. ಮ್ಯಾಕಡಾನಲ್ಲರವರು ಶೃಂಗಾರತಿಲಕವನ್ನು ಬರೆದ ರುದ್ರ ಭಟ್ಟನು ಕ್ರಿ. ಶ. ೯ನೆಯ ಶತಮಾನದವನೆಂದು ಹೇಳಿರುವುದರಿಂದಲೂ ದಾಮೋದರಗುಪ್ತನು ಬರೆದಿರುವ 'ಕುಟ್ಟನೀಮತ'ದ. - -

" ಪರ್ಣಕಸ್ಯ . ನುನೋಹರಂ ಸದನಂ "

ಎಂಬ ಶ್ಲೋಕವು ಶೃಂಗಾರತಿಲಕದಲ್ಲಿ ಕಂಡುಬರುವುದರಿಂದ ಇವನು ದಾಮೋದರಗುಪ್ತನಿಗಿಂತ ಈಚಿನವನು. ಕ್ರಿ. ಶ. ೯ನೆಯ ಶತಮಾನದವನು ಎಂದು ಹೇಳಬೇಕಾಗುವುದು.

ಗ್ರಂಥಗಳು : —ಇವನು '**ಶೃಂಗಾರತಿಲಕ**' ವೆಂಬ ಲಕ್ಷಣ ಗ್ರಂಥವನ್ನೂ '**ತ್ರಿಪುರವಧಾ**' ಎಂಬ ಮತ್ತೊಂದು ಗ್ರಂಥವನ್ನೂ ಬರೆದಿರುವುದಾಗಿ.—

* ಭಾವವಿಲಾಸವನ್ನು ಬರೆದಿರುವ ಕವಿಯು ಇವನಲ್ಲ.

§ History of Sanskrit Literature P. 143.

ತ್ರಿಪುರವಧಾದೇವ ಗತಾ
ಮುಲ್ಲಾಸಮುಮಾಂ ಸಮಸ್ತದೇವನತಾಂ।
ಶೃಂಗಾಂತಿಲಕವಿದಿನಾ
ಪುನರಪಿರುದ್ರಃ ಪ್ರಸಾದಯತಿ ॥

ಎಂಬ ಆರ್ಯಾಶ್ಲೋಕದಿಂದ ಸೂಚಿತವಾಗುತ್ತದೆ. "ತ್ರಿಪುರವಧಾ" ಎಂಬ ಹೆಸರಿನಿಂದ ಕಾವ್ಯವೆಂದೂಹಿಸಬಹುದಾಗಿದೆ. ಶೃಂಗಾರತಿಲಕಕಾರನು ರುದ್ರಟನೆಂದು ಬಹುಜನರು ಭ್ರಮಿಸುವರು. ಕೆಲವು ಪುಸ್ತಕಗಳಲ್ಲಿ ಹಾಗೂ ಬರೆಯಲ್ಪಟ್ಟಿರುವುದಾಗಿ ಕಂಡುಬರುತ್ತದೆ. ಆದರೆ ಮೇಲಣ ಶ್ಲೋಕದಿಂದ ರುದ್ರಟನಲ್ಲವೆಂಬುದು ಸ್ಪಷ್ಟವಾಗುವುದು. ಇದರ ಟೀಕಾಕಾರನಾದ ಗೋಪಾಲಭಟ್ಟನು ಟೀಕಾ ಪ್ರಾರಂಭದಲ್ಲಿ.—"ಆಶೀರೂಪಂ ಮಂಗಳಂ ನಿಬಧ್ನಾತಿ ರುದ್ರಕವಿಃ" ಎಂದು ಹೇಳಿರುವುದರಿಂದಲೂ ಶೃಂಗಾರತಿಲಕ ಗ್ರಂಥಾರಂಭದಲ್ಲಿ, "ಶ್ರೀ ರುದ್ರಭಟ್ಟ ಕೃತಂ ಶೃಂಗಾರತಿಲಕಂ" ಎಂದೂ, ಗ್ರಂಥಾಂತ್ಯದಲ್ಲಿ, "ಇತಿ ಶ್ರೀರುದ್ರಭಟ್ಟ ವಿರಚಿತೇ ಶೃಂಗಾರತಿಲಕಾಭಿಧಾನೇ ಕಾವ್ಯಲಸಾಲಂಕಾರೇ" ಎಂದೂ ಇರುವುದರಿಂದ ರುದ್ರ(ಭಟ್ಟ) ನೆಂಬವನೇ ಶೃಂಗಾರತಿಲಕಗ್ರಂಥಕಾರನೆಂದೂ ರುದ್ರಟನಲ್ಲವೆಂದೂ ಖಂಡಿತವಾಗುವುದು.

ಶೃಂಗಾರತಿಲಕದಲ್ಲಿ (೧) ಸಂಭೋಗಶೃಂಗಾರ, (೨) ವಿಪ್ರಲಂಭಶೃಂಗಾರ (೩) ಹಾಸ್ಯಾದಿರಸನಿರೂಪಣವೆಂದು ಮೂರು ಪರಿಚ್ಛೇದಗಳಿರುವುವು. ಇದರ ಶ್ಲೋಕಗಳು ಶಾರ್ಙ್ಗಧರಪದ್ಧತಿಯಲ್ಲಿಯೂ ಸೂಕ್ತಿಮುಕ್ತಾವಳಿಯಲ್ಲಿಯೂ ಸಾಹಿತ್ಯದರ್ಪಣದಲ್ಲಿಯೂ ಕಂಡುಬರುವುವು. ಇವನ ಕವಿತಾಧೋರಣೆಯು ಸುಲಭವಾದುದಾಗಿ ಹೃದಯಂಗಮವಾಗಿರುವುದು. ಇದರ ಪ್ರಾರಂಭ ಶ್ಲೋಕವು ಹೀಗಿರುವುದು.—

ಶೃಂಗಾರೀ ಗಿರಿಜಾನನೇ ಸಕರುಣೋ ರತ್ಯಾಂ ಪ್ರವೀರಃ ಸ್ಮರೇ
ಭೀಭತ್ಸೋಽಸ್ಥಿಭರುತ್ಪಣೇ ಚ ಭಯಕೃನ್ಮಾರ್ಯಾದ್ಭುತಸ್ತುಂಗಯಾ।
ರೌದ್ರೋ ದಕ್ಷವಿಮರ್ದನೇ ಚ ಇಸಕೃನ್ನಗ್ನಃ ಪ್ರಶಾಂತಸ್ಥಿರಾ
ದಿತ್ಥಂ ಸರ್ವರಸಾಶ್ರಯಃ ಪಶುಪತಿರ್ಭೂಯಾತ್ಸತಾಂ ಭೂತಯೇ ॥

ಗೋಪಾಲಭಟ್ಟನು ಬರೆದಿರುವ ಇದರ ಟೀಕೆಗೆ 'ರಸತರಂಗಿಣೀ' ಎಂದು ಹೆಸರು. ಕವಿಯು ತನ್ನ ಗ್ರಂಥವಿಚಾರದಲ್ಲಿ ಹೀಗೆ ಹೇಳಿರುವನು.—

ಶೃಂಗಾರತಿಲಕಾ ನಾಮ ಗ್ರಂಥೋಽಯಂ ಗ್ರಥಿತೋ ಮಯಾ
ವ್ಯುತ್ಪತ್ತಯೇ ನಿಷೇವಂತು ಕವಯಃ ಕಾಮಿನಶ್ಚ ಯೇ ॥

ಕಾನ್ಯಾ ಕಾವ್ಯಕಥಾ ಕೀದ್ಯಗ್ಗೈದಗ್ವೀ ಕೋ ರಸಾಗಮಃ |
ಕಿಂ ಗೋಷ್ಠೀಮಂಡನಂ ಹಂತ ಶೃಂಗಾರತಿಲಕಂ ವಿನಾ ||*

ಅಭಿನಂದ (೧)

ಇವನು ಬ್ರಾಹ್ಮಣನು ಕಾಶ್ಮೀರದವನು. ನ್ಯಾಯಮಂಜರೀಕಾರನಾದ ಜಯಂತಭಟ್ಟನ ಮಗನು. ಕಾಲಕ್ರಮದಲ್ಲಿ ಕಾಶ್ಮೀರವನ್ನು ಬಿಟ್ಟು ಗೌಡದೇಶಕ್ಕೆ ಬಂದು ನೆಲಸಿದುದಾಗಿ ತೋರುತ್ತದೆ.

ಕಾಲ;—ಅಭಿನವಗುಪ್ತನು ಇವನನ್ನು ಹೇಳಿಕೊಂಡಿರುವುದರಿಂದ ಇವನಿಗೆ ಪ್ರಾಚೀನನೂ ಕ್ರಿ. ಶ. ೯ನೆಯ ಶತಮಾನದವನೆಂದು ಹೇಳಬೇಕಾಗುವುದು. ಬಂಗಾಳದ ಪಾಲವಂಶೀಯನಾದ ಯುವರಾಜ ಹರವರ್ಷನ ಆಶ್ರಯದಲ್ಲಿದ್ದುದಾಗಿ ಯಂ. ಕೃಷ್ಣಮಾಚಾರ್ಯರವರು ಒಕ್ಕಣಿಸಿರುವರು.† ಹಾಗೆ ಒಂದುವೇಳೆ ಇದ್ದುದಾಗಿದ್ದರೆ ರಾಮಚರಿತೆಕಾರನಾದ ಅಭಿನಂದನು ಈ ಅಭಿನಂದನನ್ನು ತನ್ನ ಸಮ ಕಾಲೀನನೆಂದು ಎಲ್ಲಿಯಾದರೂ ಒಕ್ಕಣಿಸಬಹುದಾಗಿದ್ದಿತೆಂಬುದು ನಮ್ಮ ನಂಬುಗೆ. ಅಲ್ಲದೆ ಒಂದೇ ಹೆಸರಿನ ಇಬ್ಬರು ಕವಿಗಳು ಒಬ್ಬರಾಜನ ಆಶ್ರಯದಲ್ಲಿ ಏಕಿರಬಾರದೆಂಬ ವಿಚಾರವು ತೋರಿಬರುವುದು.

ಗ್ರಂಥಗಳು;—ಇವನು ಬಾಣನ ಕಾದಂಬರೀ ಕಥೆಯನ್ನು ತೆಗೆದುಕೊಂಡು ಶ್ಲೋಕರೂಪದಲ್ಲಿಬರೆದು ಅದನ್ನು "**ಕಾದಂಬರೀ ಕಥಾಸಾರ**" ವೆಂದು ಕರೆದಿರುವನು. ಧ್ವನ್ಯಾಲೋಕಲೋಚನದಲ್ಲಿ ಇವನ ಗ್ರಂಥದ ಶ್ಲೋಕಗಳು ದೊರೆಯುವುವು. ಇವನು ಬರೆದುದಾಗಿ ಹೇಳುವ "**ಯೋಗವಾಶಿಷ್ಠಸಾರ**" ಯಾವುದೆಂಬುದು ನಮಗೆ ತಿಳಿಯದು.§ ಕವೀಂದ್ರವಚನಸಮುಚ್ಚಯಕಾರನು ಈ ಇಬ್ಬರು ಅಭಿನಂದರ ವ್ಯತ್ಯಾಸ ತೋರಾಣಿಕೆಗೆ ರಾಮಚರಿತೆಕಾರನನ್ನು "ಅಭಿನಂದನ" ಎಂದೂ ಕಾದಂಬರೀಕಥಾಸಾರಕಾರನನ್ನು "ಅಭಿನಂದ" ಎಂದೂ ವ್ಯವಹರಿಸಿಕೊಂಡಿರುವನು.‖

---

* ಶೃಂಗಾರತಿಲಕ—ಕಾವ್ಯಮಾಲೆ ಪು. ೧೫೨.

† History of Classical Sanskrit Literature by M. Krishnamachariya P. 38 39.

§ Kavindravachana Samuchaya P. 20.

‖ Ibid . . . P. 20

ಭ ಟ್ಟ ಮು ರಾ ರಿ

ಇವನು ಬ್ರಾಹ್ಮಣನು. ತಂತುಮತೀ ಮತ್ತು ವರ್ಧಮಾನಭಟ್ಟನ ಪುತ್ರನು. ವಾ॥ದ್ಗಲ್ಯ ಗೋತ್ರದವನು ಎಂಬುದು "ಅಸ್ತಿವಾ॥ದ್ಗಲ್ಯ ಗೋತ್ರಸಂಭವಸ್ಯ ಮಹಾಕವೇರ್ಭಟ್ಟ ಶ್ರೀವರ್ಧಮಾನ ತನುಜನ್ಮನಃ ತಂತುಮತೀನಂದನಸ್ಯ ಮುರಾರೇಃ ...." ಎಂಬುದರಿಂದ ಗೊತ್ತಾಗುತ್ತದೆ.* ಇವನು ನರ್ಮದಾತೀರವಾಸಿಯಾಗಿರಬಹುದು. ನರ್ಮದಾ ನದಿಯ ತೀರದಲ್ಲಿ ಈಗಣ ಮಾಂಧಾತವೆಂದು ಪ್ರಸಿದ್ಧವಾಗಿರುವ ಮಾಹಿಷ್ಮತೀ ನಗರದ ಕಲಚೂರಿವಂಶದ ಅರಸರು ಈತನ ಆಶ್ರಯದಾತರೆಂದು ಹೇಳುತ್ತಾನೆ† ಇವನು ದೇಶಾಟನವನ್ನು ಮಾಡಿ ವಿಶೇಷ ಪಾಂಡಿತ್ಯವನ್ನೂ ವಿಪುಳಧನವನ್ನೂ ಸಂಪಾದಿಸಿರಬಹುದಾಗಿ ತೋರುತ್ತದೆ. ತಾನು ಸಂಚರಿಸಿದ ದೇಶಗಳನ್ನು ಬಹುಮಟ್ಟಿಗೆ ವರ್ಣಿಸಿರುವದು ಅಲ್ಲಲ್ಲಿ ಕಂಡುಬರುತ್ತದೆ. ಇವನಲ್ಲಿ ಸ್ವತಂತ್ರಕವಿತಾ ಸಾಮರ್ಥ್ಯವೂ ಉದ್ದಾಮ ಪಾಂಡಿತ್ಯವೂ ಇದ್ದುದಾದರೂ ಇವನ ಕವಿತೆಯು ಇತರರ ಕವಿತ್ವದಂತೆ ಇಲ್ಲದುದರಿಂದ "ಮುರಾರೇಸ್ತೃತೀಯಃ ಪಂಥಾಃ" ಎಂದು ಲೋಕವು ಕರೆದಿರಬೇಕಾಗಿ ತೋರುತ್ತದೆ. ಇವನು ತನ್ನ ಗ್ರಂಥದಲ್ಲಿ 'ಮಹಾಕವಿ'ಯೆಂದೂ "ಬಾಲವಾಲ್ಮೀಕಿ" ಎಂಬ ಹೆಸರನ್ನು ಆರೋಪಿಸಿಕೊಂಡಿರುವನಲ್ಲದೆ "ಆಪಾತಾಳನಿಮಗ್ನಪೀವರತನುಃ ಜಾನಾತಿಮಂಥಾಚಲಃ" ಎಂಬ ಉಪಮೇಯಪ್ರಯೋಗದಿಂದ ವಿದ್ಯಾವಂತರ ನಾರ ಕೌಶಲ ವಿಚಾರವು ತನಗೆಮಾತ್ರ ಗೊತ್ತಿರುವುದು ಹೊರ್ತು ಇತರರಿಗೆ ತಿಳಿಯದೆಂದು ಅಭಿಮಾನ ಪುರಸ್ಸರವಾಗಿ ಒಕ್ಕಣಿಸಿಕೊಂಡಿರುವನು. ಮುರಾರಿಯ ವಿಚಾರವಾಗಿ,

(೧) ದೇವೀಂ ವಾಚಮುಪಾಸತೇಽಹ ಬಹವಸ್ಸಾರಂತು ಸಾರಸ್ವತಂ
ಜಾನೀತೇ ನಿತರಾಮಸೌ ಗುರುಕುಲಕ್ಲಿಶ್ಯೋ **ಮುರಾರಿಃ** ಕವಿಃ
ಎಂದೂ

(೨) "**ಮುರಾರಿ**ಪದಚಿಂತಾಜೇತ್ರ ಥಾಮಾಘೇಮತಿಂಕುರು" ಎಂದೂ

(೩) **ಮುರಾರಿ**ಪದಚಿಂತಾಯಾಂ ಭವಭೂತೇಸ್ತುಕಾಕಥಾ
ಮುರಾರಿ ಮುರರೀಕೃತ್ಯ ಭವಭೂತಿಂಪರಿತ್ಯಜ ||

ಎಂಬ ಲೋಕ ಹೇಳಿಕೆಯು ಬಳಕೆಯಲ್ಲಿರುವುದು.

ಕಾಲ:—ಇವನ ಕಾಲವನ್ನು ನಿರ್ಣಯಿಸಿ ಹೇಳಲಾಗದಿದ್ದರೂ ಮುರಾರಿಯು ಮಹಾಕವಿಭವಭೂತಿಯ ಉತ್ತರ ರಾಮಚರಿತದ ಶ್ಲೋಕಗಳನ್ನು ಹೇಳಿಕೊಂಡಿರು

* ಅನರ್ಘರಾಘವ ಪ್ರಸ್ತಾವನೆ. ಪು. ೨.

† A. B. Keith's The Sanskrit Drama P. 226.

ವುದರಿಂದ ಭವಭೂತಿಗಿಂತ ಈಚಿನವನೂ ಕ್ರಿ. ಶ. ೯ನೆಯ ಶತಮಾನದ ಪೂರ್ವಾರ್ಧದವನಾದ ರತ್ನಾಕರನು ಮುರಾರಿಯನ್ನು ಅನುಸಂಧಿಸಿ ಹರವಿಜಯದಲ್ಲಿ ಹೇಳಿಕೊಂಡಿರುವುದರಿಂದ ರತ್ನಾಕರನಿಗೆ ಪ್ರಾಚೀನನೂ ಕ್ರಿ, ಶ. ೯ನೆಯ ಶತಮಾನದ ಆದಿಭಾಗದವನೆಂದೂ ಹೇಳುವುದಾದರೆ ನ್ಯೂನತೆಯಾಗದು.

ಗ್ರಂಥ:—ಇವನು ಬರೆದುದಾದ "ಅನರ್ಘರಾಘವ" ಎಂಬ ಏಳು ಅಂಕಗಳುಳ್ಳ ನಾಟಕವು ಮಾತ್ರ ಪ್ರಕೃತ ದೊರೆತಿರುವುದು. ಇದರಲ್ಲಿ ದಶರಥನು ವಿಶ್ವಾಮಿತ್ರನ ಯಜ್ಞರಕ್ಷಣಾರ್ಥವಾಗಿ ರಾಮಲಕ್ಷ್ಮಣರನ್ನು ಕಳುಹಿದುದನ್ನು ಮೊದಲುಮಾಡಿಕೊಂಡು ರಾವಣ ವಧೆಯನ್ನು ಮಾಡಿ ಅನಂತರ ಅಯೋಧ್ಯೆಗೆ ಹಿಂತಿರುಗಿ ಶ್ರೀರಾಮನು ಪಟ್ಟಾಭಿಷಿಕ್ತನಾದನೆಂಬವರೆಗಿನ ರಾಮಾಯಣ ಕಥೆಯನ್ನು ತೆಗೆದುಕೊಂಡು ವರ್ಣಿಸಿರುವನು. ನಾಟಕವು ಶೋಭಿಸಬೇಕಾದರೆ ಶೃಂಗಾರ ಮತ್ತು ವೀರರಸಗಳಿಂದ ಕೂಡಿರಬೇಕೆಂದೂ ಭೀಭತ್ಸ ರೌದ್ರ ಭಯಾನಕಾದಿ ಇತರ ರಸಗಳು ಕಳೆಕಟ್ಟಲರಿಯವೆಂದೂ ರುಚಿಸದೆಂದೂ ಹೇಳಿರುವುದು ಹೊರ್ತು ಇವನು ಅರಿಸಿಕೊಂಡು ಹೇಳಿರುವ ಈ ನಾಟಕವು ಮಹಾಕವಿ ಭವಭೂತಿಗಿಂತಲೂ ಮುರಾರಿಯು ಉತ್ತಮಕವಿಯಲ್ಲದುದರಿಂದ ಫಲಕಾರಿಯಾಗಲಿಲ್ಲವೆಂದು ನಮಗೆನಿಸುತ್ತದೆ. ಮಹಾ ವೀರಚರಿತೆಯಲ್ಲಿರುವಂತೆಯೇ ಇದರಲ್ಲಿಯೂ ಕಥಾವಸ್ತುಗಳು ಕಾಣಬರುತ್ತವೆಯಾದುದರಿಂದ ಅವು ಮುರಾರಿಯಿಂದ ಆದರಿಸಲ್ಪಟ್ಟವುಗಳೆಂದು ಹೇಳಬಹುದಾಗಿದೆ.

(೧) ಕಥೆಯನ್ನು ಬರೆದು ಹೇಳುವುದರಲ್ಲಿ ಕಾಲವ್ಯತ್ಯಾಸವನ್ನು ತೋರಿಸದೆ ಹೇಳಿರುವನು. (೨) ನಾಟಕಪ್ರಕ್ರಮದಲ್ಲಿ ಉದ್ದೇಶಭಂಗವು ತೋರುತ್ತದೆ. ಮಧ್ಯಾಹ್ನ ವರ್ಣನವನ್ನು ಮಾಡಿದಕೂಡಲೆ ರಾತ್ರಿಯವರ್ಣನೆ ಚಂದ್ರೋದಯ ವರ್ಣನೆಗಳು ಇರುತ್ತವೆ. (೩) ಶ್ರೀರಾಮ ಸಂಬಂಧದ ಕಥೆಯನ್ನು ಆರಿಸಿತೆಗೆದು ಬರೆದಿದ್ದರೂ ಇತರರಂತೆ ಉತ್ತಮವಾಗಿಲ್ಲ. (೪) ಇದರಲ್ಲಿನ ಪಾತ್ರಗಳು ಅಚ್ಚಿನ ಬೊಂಬೆಗಳಂತೆ ಕಾಣಬರುತ್ತವೆ. (೫) ಪಾತ್ರರಚನೆಯಲ್ಲಿ ವ್ಯಕ್ತಿತ್ವವು ಕಾಣಬರುವುದಿಲ್ಲ. ಇದರಲ್ಲಿ ಅತಿಶಯೋಕ್ತಿ ಉತ್ಪ್ರೇಕ್ಷೆ ಇವು ಹೇರಳವಾಗಿವೆ. ಹೀಗೆ ಇರುವುದಾದರೂ ಶೈಲಿ ಮತ್ತು ಶಬ್ದರಚನೆಯಲ್ಲಿ ಅತ್ಯಂತ ಕೌಶಲವು ತೋರ್ಪಡುವುದಾದರೂ ಸಂದರ್ಭಕ್ಕೆ ಮಿಗಿ ಅರ್ಥವನ್ನುಂಟುಮಾಡುವುದಲ್ಲದೆ ರಚನಾಕ್ರಮದಲ್ಲಿಯೂ ವ್ಯಾಕರಣ ವಿಷಯಗಳಲ್ಲಿ ತನ್ನ ಪ್ರೌಢಿಮೆಯನ್ನೆಲ್ಲಾ ವೆಚ್ಚಮಾಡಿರುವನು. ಇವನ ಗ್ರಂಥದ ವ್ಯಾಕರಣ ವಿಷಯಗಳನ್ನು ಅನೇಕ ವೈಯ್ಯಾಕರಣರು ಉದಾಹರಿಸಿಕೊಂಡಿರುವರು. ವೃತ್ತಗಳು ಬಹಳ ದೊಡ್ಡವು. ಕೆಲವು ವರ್ಣನೆಗಳು ಬಹು ಚೆಲುವಾಗಿವೆ.

ಯೇಶಬ್ದಶಾಸ್ತ್ರನಿಷ್ಣಾತಾ ಯೇ ಶೇಲಿತನಿಘಂಟುವಃ
ತೇಷಾಮೇವಾಧಿಕಾರೋಽಸ್ತಿ **ಮುರಾರಿ** ಕೃತನಾಟಕೆ ॥

ಎಂದು ಹೇಳುವ ಕೇವಲ ಶಬ್ದಶಾಸ್ತ್ರಾಧೀತಸಂಪನ್ನರಿಗೆ ನ್ಯಾಯವಾಗಿ ನಾಟಕಕ್ಕೆ ಇರಬೇಕಾದ ಶೈಲಿಯಮಾರ್ದವ, ರಚನಾಕೌಶಲ, ವಿಷಯಸಮರ್ಥನ, ಪಾತ್ರಗಳ ಗಂಭೀರತೆ ಇವೆಲ್ಲವೂ ಕ್ಲಿಷ್ಟಪದಜೋಡಣೆಯಾಗಿ ನಾಟಕ ಸೌಂದರ್ಯವು ಮಾಪಟ್ಟು ಹೋಗಿರುವುದು ಕಾಣಿಸದು. ಒಟ್ಟಿನಲ್ಲಿ ಈ ನಾಟಕವು ಪ್ರಥಮ ಶ್ರೇಣಿಯದೆಂದೆನಲಾಗುವುದಿಲ್ಲ. ಇದಕ್ಕೆ ಶ್ರೀರಾಮಾನಂದಾಶ್ರಮಮುನಿವಿರಚಿತ "ಇಷ್ಟಾರ್ಥಕಲ್ಪವಲ್ಲಿ" ಶ್ರೀವಿಷ್ಣುಭಟ್ಟವಿರಚಿತ 'ಪಂಚಿಕಾ' ಶ್ರೀಹರಿಹರದೀಕ್ಷಿತ ವಿರಚಿತ 'ಅನಾಮಿಕಾ' ಎಂಬ ಮೂರು ವ್ಯಾಖ್ಯಾನಗಳಿರುವುವು.

ಮಾದರಿಗಾಗಿ ಕೆಲವು ಶ್ಲೋಕಗಳು :--

ಯಾಂತಿನ್ಯಾಯ ಪ್ರವೃತ್ತಸ್ಯ
ತಿರ್ಯಂಚೋಽಪಿ ಸಹಾಯತಾಂ
ಅಪಂಥಾನಂತುಗಚ್ಛಂತಂ
ಸೋದರೋಽಪಿ ವಿಮುಂಚತಿ ॥

ನ್ಯಾಯಮಾರ್ಗಪ್ರವೃತ್ತಕನಿಗೆ ಕೇವಲ ತಿರ್ಯಕ್ಪ್ರಾಣಿಗಳೂ ಸಹಾಯವನ್ನು ಮಾಡುತ್ತವೆ. ದುರ್ಮಾರ್ಗಗಾಮಿಯನ್ನು ಸಹೋದರನಾದರೂ ತ್ಯಜಿಸಿಬಿಡುವನು (ಇಲ್ಲಿ ನ್ಯಾಯಪ್ರವೃತ್ತಕನಾದ ಶ್ರೀರಾಮನಿಗೆ ತಿರ್ಯಕ್ಪ್ರಾಣಿಗಳಾದ ಕಪಿಗಳೂ ಸಹಾಯವನ್ನು ಮಾಡಿದವೆಂತಲೂ ದುರ್ಮಾರ್ಗ ಗಾಮಿಯಾದ ರಾವಣನನ್ನು ವಿಭೀಷಣನು ಸಹೋದರನಾಗಿದ್ದರೂ ಲೆಕ್ಕಿಸದೆ ತ್ಯಜಿಸಿದನೆಂಬರ್ಥವನ್ನು ಹೇಳುವುದಾಗಿದೆ.)

ಧನುರ್ಭಂಗವನ್ನು ಮಾಡಿದ ಶ್ರೀರಾಮನನ್ನು ನೋಡಿ ಪರಶುರಾಮನ ಪರಿಹಾಸ.

ಅರೇ ! ಅನಾತ್ಮಜ್ಞ ! ಕ್ಷತ್ರಿಯವಟೋ !

ತಚ್ಛಾಪಮಾಶಕರಪೀಡನವೀತಸಾರಂ
ಸ್ವಾಗಸ್ಯಭಜ್ಯತಭವಾಂಸ್ತು ನಿಮಿತ್ತಮಾತ್ರಂ
ರಾಜನ್ಯಕಪ್ರಧನಸಾಧನ ಮಸ್ಮದೀಯ
ಮಾಕರ್ಷಕಾರ್ಮುಕವಿದಂಗರುಚಶ್ಚ ಜಸ್ಯ ॥ ೪—೫೫

ಸ್ವಸ್ವರೂಪವನ್ನರಿಯದ ಎಲೈ ! ಕ್ಷತ್ರಿಯ ವಟುವೆ (ನೀನೆನು ಮಹಾ ಧನುರ್ಭಂಗವನ್ನು ಮಾಡಿದುದು) ಈಶ್ವರನ ಮುಷ್ಟಿಘರ್ಷಣದಿಂದ ನಿಸ್ಸಾರವಾಗಿ ಹೋಗಿದ್ದ ಆ ಧನಸ್ಸು ನಿನ್ನ ಶಕ್ತಿಯನ್ನು ತೋರಿಸುವುದಕ್ಕೆ ಮುಂಚೆಯೇ ತಾನಾಗಿ ಮುರಿದುಹೋದುದು. ಆದರೆ ನೀನು ಕಾರಣಮಾತ್ರವಲ್ಲದೆ ಬೇರೆ

ಇಲ್ಲ. ಅನೇಕ ರಾಜರೊಡನೆ ಯುದ್ಧವನ್ನು ಮಾಡಿ ಅತ್ಯಂತ ಕಠಿಣವಾಗಿರುವ ಈ ವೈಷ್ಣವ ಧನುಸ್ಸನ್ನು ಎತ್ತಿ ಹೆದೆಯನ್ನು ಕಟ್ಟಿ ಎಳೆ ನೋಡೋಣ !

ಪ್ರಾಣಾಯಾಮೋಪದೇಷ್ಟಾ ಸರಸಿರುಹಮುನೇರ್ಯೌವನೋದ್ದಾಮಲೀಲಾ
· ಗೋಷ್ಠೀನಾಂ ಪೀಠಮರ್ದಸ್ತ್ರಿ ಭುವನವನಿತಾನೇತ್ರಯೋಃ ಪ್ರಾತರಾಶಃ
ಕಾಮಾಯುಷ್ಮೀಮಯಜ್ಞಾ ಪಮಿತಕುಮುದಿನೀ ಮೌನಮುದ್ರಾವತಾರಃ
ಶೃಂಗಾರಾದ್ವೈತವಾದೀ ಸಭವತಿಭಗವಾನೇಷಪೀಯೂಷ ಭಾನುಃ॥ ೭—೬೧

ಕಮಲವೆಂಬ ತಪೋಧನನಿಗೆ ಪ್ರಾಣಾಯಾಮವನ್ನು ಉಪದೇಶಿಸುವನಾಗಿಯೂ, ಯೌವನವೆಂಬ ಕಾಮವಿಲಾಸ ಪ್ರಸಂಗಗಳಿಗೆ ಸಹಾಯಕ (ಎಂದರೆ ನಾಯಕನಿಗೆ ನಾಯಿಕಾನುಸರಣದಲ್ಲಿ ಸಹಾಯಭೂತ) ನಾಗಿಯೂ, ತ್ರಿಭುವನದಲ್ಲಿರತಕ್ಕ ಸ್ತ್ರೀಯರಿಗೆ ಸಿದ್ಧಾನ್ನ ಪ್ರಾಯನಾಗಿಯೂ, ಮನ್ಮಥನ ಆಯುರ್ವೃದ್ಧಿಯಲ್ಲಿ ಬದ್ಧ ದೀಕ್ಷಿತನಾಗಿಯೂ ಕುಮುದಿನಿಯರ ಮಾನಮುದ್ರೆಯನ್ನು ಭಂಗಪಡಿಸುವುದರಲ್ಲಿ ಅನುರಾಗಯುಕ್ತನಾಗಿಯೂ ಶೃಂಗಾರರಸ ಪ್ರಾಮುಖ್ಯತೆಯನ್ನು ಸಾರುವನಾದ (ಎಂದರೆ ಶೃಂಗಾರರಸಹೊರ್ತು ಬೇರೆ ರಸವಿಲ್ಲವೆಂದು ಹೇಳುವನಾದ) ಚಂದ್ರನು ಪ್ರಕಾಶಿಸುತ್ತಿರುವನು.

ಶಂಕುಕ

ಇವನು ಕಾಶ್ಮೀರದವನು. ಇವನು ಕ್ರಿ. ಶ. ೮೧೩ರಲ್ಲಿ ಕಾಶ್ಮೀರದಲ್ಲಿ ಆಳಿದ ಅಜಿತಾಪೀಡನ ಕಾಲದಲ್ಲಿ ' **ಭುವನಾಭ್ಯುದಯ** ' ವೆಂಬ ಕಾವ್ಯವನ್ನು ಬರೆದುದಾಗಿ. —

ಕವಿರ್ಬುಧಮಕಃ ಸಿಂಧುಶರ್ಮಾಂಕಃ ಶಂಕುಕಾಭಿಧಃ।
ಯಮುದ್ದಿಶ್ಯ ಕರೋತ್ಯುವ್ಯಂ "ಭುವನಾಭ್ಯುದಯಾ"ಭಿದಂ॥

ಎಂಬ ರಾಜತರಂಗಿಣಿಯ ಶ್ಲೋಕದಿಂದ ತಿಳಿಯಬರುತ್ತದೆ.*

ಪಂಡಿತ ಜಿ. ಯೆ. ಜಾಕೋಬರವರು ಇವನ ಕಾಲವನ್ನು ಕ್ರಿ. ಶ, ೮೧೬ ಎಂದು ನಿರ್ಧರಿಸಿರುವರು.§ ಇದರಿಂದ ಇವನು ಕ್ರಿ. ಶ. ೯ನೆಯ ಶತಮಾನದವ

* ರಾಜತರಂಗಿಣೀ ೧. ೪—೭೦೫.

§ G. A. Jacob Notes on Alamkara Literature in J. R. A S. New Series Vol. 29 (1897) P. 287, or General Introduction to the Sanskrit Poems of Mayura by G. P. Quackenbos P. 51

ನೆನ್ನಬೇಕಾಗುವುದು. ಶಂಕುಕರೆಂಬುವರು ಸಂಸ್ಕೃತಸಾಹಿತ್ಯದಲ್ಲಿ ಮೂರು ಜನರು ದೊರೆಯುವರು.—

(೧) ಶಾರ್ಙ್ಗಧರಪದ್ಧತಿಯಲ್ಲಿ.—

ದುರ್ವಾರಾಃ ಸ್ಮರಮಾರ್ಗಣಾಃ . . . ಸರ್ವೇಽಗ್ರಯೋ ದುಸ್ಸಹಾಃ ॥

ಎಂಬ ಶ್ಲೋಕವನ್ನು ಬರೆದು "ಮಯೂರಸೂನೋಃ ಶಂಕುಕಸ್ಯ" ಎಂದು ಹೇಳಿಕೊಂಡಿರುವನೊಬ್ಬ.

(೨) ಭುವನಾಭ್ಯುದಯಕಾವ್ಯವನ್ನು ಬರೆದ ಶಂಕುಕನೊಬ್ಬ.

(೩) ಜ್ಯೋತಿರ್ವಿದಾಭರಣವೆಂಬ ಜ್ಯೋತಿಷಗ್ರಂಥದಲ್ಲಿ "ಧನ್ವಂತರಿಃ ಕ್ಷಪಣಕಾಮರಸಿಂಹ ಶಂಕು" ಎಂದು ಹೇಳಿರುವ ವಿಕ್ರಮಾರ್ಕ (?) ನ ಸಭೆಯ ನವರತ್ನಗಳಲ್ಲೊಬ್ಬ.

ಈ ಮೂವರಲ್ಲಿ ಶಾರ್ಙ್ಗಧರಪದ್ಧತಿಯಲ್ಲಿ ಹೇಳಲ್ಪಟ್ಟಿರುವ ಶಂಕುಕನು ಕ್ರಿ. ಶ. ೭ನೆಯ ಶತಮಾನದವನು. ಇವನು ಯಾವ ಗ್ರಂಥವನ್ನು ಬರೆದಿರುವನೆಂಬುದು ತಿಳಿಯದು.

ವಿಕ್ರಮಾರ್ಕನ (?) ನವಮಣಿಗಳಲ್ಲೊಬ್ಬನೆಂದು ಹೇಳಲ್ಪಟ್ಟಿರುವ ಶಂಕುವು ಕವಿಮಾಲೆಯಲ್ಲಿ ಸೇರಿಸಲ್ಪಟ್ಟಿರುವುದರಿಂದ ಕವಿಯೆಂದು ಹೇಳಬೇಕಾಗಿರುವುದೆ ಹೊರ್ತು ಇವನು ಬರೆದುದಾಗಿರುವ ಗ್ರಂಥವು ಯಾವುದೆಂಬುದು ತಿಳಿಯದು.

ರ ತ್ನಾ ಕ ರ

ಇವನು ಕಾಶ್ಮೀರದವನು. ಅಮೃತಭಾನುವಿನ ಮಗನು ಎಂಬುದು ಈ ಶ್ಲೋಕದಿಂದ ವ್ಯಕ್ತವಾಗುವುದು.

ಶ್ರೀದುರ್ಗದತ್ತನಿಜವಂಶಹಿಮಾದ್ರಿನಾನು
ಗಂಗಾಹ್ವದಾಶ್ರಯಸುತಾಮೃತಭಾನುಸೂನುಃ।
ರತ್ನಾಕರೋ ಲಲಿತಬಂಧಮಿದಂ ವ್ಯಧತ್ತ
ಚಂದ್ರಾರ್ಧಚೂಡಚರಿತಾಶ್ರಯಚಾರುಕಾವ್ಯಂ ॥
—(ಹರವಿಜಯಗ್ರಂಥಕರ್ತೃಪ್ರಶಸ್ತಿ ಪದ್ಯ ೭೦೭ ಶ್ಲೋಕ ೧)

ಇವನನ್ನು ರಾಜಾನಕರತ್ನಾಕರನೆಂದೂ, ಸೂರ್ಯಚಂದ್ರರನ್ನು ತಾಳಗಳಿಗೆ ಹೋಲಿಸಿ ಹೇಳಿರುವನಾದುದರಿಂದ ತಾಳರತ್ನಾಕರನೆಂದೂ ಕರೆಯುವರು.

ಅಸ್ತಾವಲಂಬಿರವಿಬಿಂಬತಯೋದಯಾದ್ರಿ
ಚೂಡೋನ್ಮಿಷತ್ಸಕಲಚಂದ್ರತಯಾ ಚ ಸಾಯಂ।
ಸಂಧ್ಯಾಪ್ರನೃತ್ತಹರವಾದ್ಯಗೃಹೀತಕಾಂಸ್ಯ
ತಾಲದ್ವಯೇವ ಸಮಲಕ್ಷ್ಯತ ನಾಕಲಕ್ಷ್ಮೀಃ ॥

—ಹರವಿಜಯ ೧೯—೫

ಅಸ್ತಾದ್ರಿಯನ್ನಡರುತ್ತಿರುವ ಸೂರ್ಯನನ್ನೂ ಪೂರ್ವಾದ್ರಿಯಲ್ಲಿ ಅವತರಿಸುತ್ತಿರುವ ಚಂದ್ರನನ್ನೂ ನೋಡಿದರೆ ನಾಕಲಕ್ಷ್ಮಿಯು ಸಂಧ್ಯಾಸಮಯದ ಪರಶಿವನ ತಾಂಡವ ಸಮಯದಲ್ಲಿನ ವಾದ್ಯಗಳಲ್ಲಿ ತಾನೂ ಭಾಗಿಯಾಗಿರಬೇಕೆಂದು ಆಶಿಸಿ ಸೂರ್ಯಚಂದ್ರರೆಂಬ ತಾಳಗಳನ್ನು ಪಿಡಿದು ನಿಂತಿರುವಂತೆ ಕಾಣುವುದು.)

ಇವಲ್ಲದೆ ಇವನಿಗೆ 'ವಾಗೀಶ್ವರಾಂಕ' 'ವಿದ್ಯಾಧಿಪತಿ' ಎಂಬ ಉಪನಾಮಗಳೆದ್ದುವಾಗಿ.—

"ಇತಿಶ್ರೀಬಾಲಬೃಹಸ್ಪತ್ಯನುಜೀವಿನೋ ವಾಗೀಶ್ವರಾಂಕಸ್ಯ ವಿದ್ಯಾ
ಧಿಪತ್ಯಪರನಾಮ್ನೋ ಮಹಾಕವೇ ರಾಜಾನಕಶ್ರೀರತ್ನಾಕರಸ್ಯಕೃತೌ"

ಎಂದು ಕವಿಯು ಪ್ರತಿಸರ್ಗಾಂತ್ಯದಲ್ಲಿ ಹೇಳಿಕೊಂಡಿರುವುದರಿಂದ ಗೊತ್ತಾಗುವುದು. ಇವನ ಆಶ್ರಯದಾತನಾದ ಚಿಪ್ಪಟಜಯಾಪೀಡನಿಗೆ 'ಬೃಹಸ್ಪತಿ' 'ಬಾಲಬೃಹಸ್ಪತಿ' ಎಂಬ ಹೆಸರುಗಳು ಇದ್ದುವಾಗಿ ರಾಜತರಂಗಿಣಿಯಿಂದ ತಿಳಿದುಬರುತ್ತದೆ.

ಕಾಲ:—(೧) ಇವನು ಕ್ರಿ. ಶ. ೮೫೫-೮೮೪ರಲ್ಲಿ ಕಾಶ್ಮೀರದಲ್ಲಿ ಆಳಿದ ಅವಂತಿವರ್ಮನ ಕಾಲದವನೆಂದು.—

ಮುಕ್ತಾಕಣಶಿವಸ್ವಾಮಿ ಕವಿರಾನಂದವರ್ಧನಃ।
ಪ್ರಥಾಂ ರತ್ನಾಕರಶ್ಚಾಗಾತ್ಸಾಮ್ರಾಜ್ಯೇಽವಂತಿವರ್ಮಣಃ ॥

ಎಂದು ಕಲ್ಹಣನು ರಾಜತರಂಗಿಣಿಯಲ್ಲಿ ಬರೆದುಕೊಂಡಿರುವನು.† ಇದರಿಂದ ರತ್ನಾಕರನು ಕ್ರಿ. ಶ. ೯ನೆಯ ಶತಮಾನದ ಉತ್ತರಾರ್ಧದಲ್ಲಿದ್ದನೆಂಬುದು ಸ್ಪಷ್ಟವಾಗುವುದು.

: ರಾಜತರಂಗಿಣೀ ೪—೬೮೦.

† Ibid P. 5—25.

(೨) ಯಂ. ಕೃಷ್ಣಮಾಚಾರ್ಯರವರು ರತ್ನಾಕರನ ಹರವಿಜಯದ ವಿಚಾರವಾಗಿ ಬರೆಯುವಾಗ ಜಯಾಪೀಡನ ಆಳಿಕೆಯು ಕ್ರಿ. ಶ. ೭೭೯-೮೧೩ರ ವರೆಗೆಂದು ಬರೆದಿರುವರು.†

(೩) ಕವಿಯು "ಬಾಲಬೃಹಸ್ಪತ್ಯಪರನಾಮಾ ಚಿಪ್ಪಟಜಯಾಪೀಡಮಹೀಪತಿರ್ನವಮಶತಕಪ್ರಾರಂಭ ಏವ ಕಾಶ್ಮೀರದೇಶಂ ಶಶಾಸ" ಎಂದು ಹೇಳಿರುವುದರಿಂದ ಕವಿಯು ಕ್ರಿ. ಶ. ೯ನೆಯ ಶತಮಾನದ ಪೂರ್ವಾರ್ಧದವನೆಂಬುದು ಸ್ಪಷ್ಟವಾಗುವುದು.

(೪) ಪ್ರೊ. ಮ್ಯಾಕಡಾನಲ್ಲರವರು ಕಲ್ಹಣಪಂಡಿತನ ಅಭಿಪ್ರಾಯವನ್ನು ಅನುಮೋದಿಸಿ ರತ್ನಾಕರನು ಕ್ರಿ. ಶ. ೯ನೆಯ ಶತಮಾನದವನೆಂದು ಹೇಳಿರುವರು. $

ಹೀಗೆ ನವಮಶತಕ ಪೂರ್ವಾರ್ಧವೆಂಬ ಗ್ರಂಥಕಾರನ ಹೇಳಿಕೆಯೂ ಉತ್ತರಾರ್ಧವೆಂಬ ಕಲ್ಹಣಾದಿ ಚಾರಿತ್ರಕರ ಅಭಿಪ್ರಾಯವೂ ಭಿನ್ನವಿಸಿರುವುವು. ಇವುಗಳಿಲ್ಲವನ್ನೂ ಸಮದೃಷ್ಟಿಯಿಂದ ವಿವೇಚಿಸುವವರಿಗೆ ಈ ಕೆಳಗಿನ ವಿಷಯಗಳು ಸಮರ್ಥಿತವಾಗುವುವು.

(೧) ಕ್ರಿ. ಶ. ೭೫೫ ೭೮೬ರ ವರೆಗೆ ಕಾಶ್ಮೀರದಲ್ಲಿ ಆಳಿದ ಜಯಾಪೀಡನಿಗೂ ಕ್ರಿ. ಶ. ೮೫೫-೮೮೪ರ ವರೆಗೆ ಕಾಶ್ಮೀರದಲ್ಲಿ ಆಳಿದ ಅವಂತಿವರ್ಮನಿಗೂ ಇರುವ ಒಂದು ನೂರುವರ್ಷಗಳ ಅಂತರಕಾಲದಲ್ಲಿ ಆಳಿಹೋದ ರಾಜರುಗಳಲ್ಲಿ ಮುಖ್ಯನಾಗಿಯೂ, ಮೊದಲನೆಯವನಾಗಿಯೂ ಕ್ರಿ. ಶ. ೯ನೆಯ ಶತಮಾನ ಪ್ರಾರಂಭದ ಕೆಲವು ವರ್ಷಗಳ ವರೆಗೆ ಎಂದರೆ ಕ್ರಿ. ಶ. ೮೧೩ರ ವರೆಗೆ ಆಳಿದ ಚಿಪ್ಪಟಜಯಾಪೀಡನ ಆಶ್ರಯದಲ್ಲಿ ರತ್ನಾಕರನಿದ್ದಿರಬೇಕೆಂದು ಬೋಧೆಯಾಗುವುದು.

(೨) ಯಂ. ಕೃಷ್ಣಮಾಚಾರ್ಯರವರು ಹೇಳುವ ಜಯಾಪೀಡನೇ ಚಿಪ್ಪಟಜಯಾಪೀಡನಾಗಿರಬೇಕೆಂದೂ ಕ್ರಿ. ಶ. ೭೭೯ರಿಂದ ಕ್ರಿ. ಶ. ೭೮೬ರ ವರೆಗೆ ೭ ವರ್ಷಗಳು ಚಿಪ್ಪಟಜಯಾಪೀಡನು ಯುವರಾಜಪದವಿಯನ್ನಲಂಕರಿಸಿದ್ದಿರಬೇಕೆಂದೂ ಚಿಪ್ಪಟಜಯಾಪೀಡನ ಕಾಲವು ಕ್ರಿ. ಶ. ೭೭೯-೮೧೩ರವರೆಗೆಂದೂ ಬೋಧೆಯಾಗುವುದು.

---

† History of Classical Sanskrit Literature P. 40.

ಃ ಹರವಿಜಯದ ಆಮುಖ ಪುಟ ೧

$ History of Sanskrit Literature P. 330.

(೩) ಕ್ರಿ. ಶ. ೮೧೩ರಿಂದ ಅವಂತಿವರ್ಮನ ಆಳ್ವಿಕೆಯಾರಂಭವಾದ ಕ್ರಿ. ಶ. ೮೫೫ರ ವರೆಗಾಗುವ ೪೨ ವರ್ಷಗಳ ಕಾಲದಲ್ಲಿ ಎಷ್ಟೋ ಜನರು ಆಳಿ ಅಳಿದಿರಬಹುದಾಗಿ ತೋರಿಬರುವುದರಿಂದ ಮೇಲೆ ಹೇಳಿರುವ ಕಲ್ಹಣನ ಶ್ಲೋಕದಂತೆ ರತ್ನಾಕರನು ಅವಂತಿವರ್ಮನ ಕಾಲದವನಾಗನೆಂದೂ.

(೪) ಕವಿಯು ಹೇಳಿರುವುದನ್ನು ಬಿಟ್ಟು ಕಲ್ಹಣನು ಹೇಳುವಂತೆ ಕ್ರಿ. ಶ. ೯ನೆಯಶತಮಾನದ ಉತ್ತರಾರ್ಧದವನೆನ್ನುವುದು ಅಸಂಗತವಾಗಿ ತೋರುವುದರಿಂದ ರತ್ನಾಕರನು ಕ್ರಿ. ಶ. ೯ನೆಯ ಶತಮಾನದ ಪೂರ್ವಾರ್ಧದಲ್ಲಿದ್ದವನೆಂದು ಹೇಳಿದರೆ ತಪ್ಪಾಗದು.

ಗ್ರಂಥಗಳು:—**ರತ್ನಾಕರನು** (೧) **ಹರವಿಜಯ** (೨) **ವಕ್ರೋಕ್ತಿಪಂಚಾಶಿಕಾ** (೩) **ಧ್ವನಿಗಾಥಾಪಂಚಿಕಾ** ಎಂಬ ಮೂರು ಗ್ರಂಥಗಳನ್ನು ರಚಿಸಿದುದಾಗಿ ತಿಳಿಯಬರುತ್ತದೆ.

ಹರವಿಜಯವೆಂಬುದು ಮಹಾಕಾವ್ಯವಾಗಿದ್ದು ೫೦ ಸರ್ಗಗಳಿರುವುವು. ಕಥೆಯನ್ನು ಸ್ಕಾಂದಪುರಾಣದಿಂದ ಆರಿಸಿಕೊಂಡಿರುವನು. ಶಿವನು ಅಂಧಕಾಸುರನನ್ನು ಸಂಹರಿಸಿ ದೇವತೆಗಳನ್ನು ಸಂತೋಷಗೊಳಿಸಿದನೆಂಬುದೆ* ಈ ಮಹಾಕಾವ್ಯ ಕಥಾಸಾರಾಂಶವಾಗಿರುವುದು. ಈ ಕಾವ್ಯಕ್ಕೆ ರಾಜಾನಕ ಅಲಕನೆಂಬುವನು ವ್ಯಾಖ್ಯಾನವನ್ನು ಬರೆದಿರುವನು.

ಎರಡನೆಯದಾದ 'ವಕ್ರೋಕ್ತಿಪಂಚಾಶಿಕಾ' ಎಂಬುದು ಈಶ್ವರ ಮತ್ತು ಪಾರ್ವತಿಯರ ವ್ಯಂಗ್ಯಾರ್ಥಕೌಶಲರೂಪವಾದ ಭಾಷಣಗಳನ್ನೊಳಗೊಂಡಿರುವುದು.

ಮೂರನೆಯದಾದ 'ಧ್ವನಿಗಾಥಾಪಂಚಿಕಾ' ಎಂಬುದು ನಮಗೆ ದೊರೆತಿರುವುದಿಲ್ಲ.

ವಸಂತತಿಲಕವೃತ್ತದ ಶ್ಲೋಕಗಳುಳ್ಳ ಅನೇಕ ಸರ್ಗಗಳು ಹರವಿಜಯದಲ್ಲಿ ದೊರೆಯುವುವು.

ಕ್ಷೇಮೇಂದ್ರನು ಸುವೃತ್ತತಿಲಕವೆಂಬ ತನ್ನ ಗ್ರಂಥದಲ್ಲಿ.—

ವಸಂತತಿಲಕಾರೂಢಾ ವಾಗ್ಮಿಲ್ಲೀ ಗಾಥಸಂಗಿನೀ ।
ರತ್ನಾಕರಸ್ಯೋತ್ಕಲಿಕಾ ಚಕಾಸ್ತ್ಯನನಕಾನನೇ ॥ ೩—೩೨

* ಹರವಿಜಯ ಪುಟ ೧.

ಎಂದು ಒಕ್ಕಣಿಸಿರುವನು. ಹರವಿಜಯದ ಅನೇಕ ಶ್ಲೋಕಗಳು ಮಮ್ಮಟನ ಕಾವ್ಯಪ್ರಕಾಶದಲ್ಲಿ ಕಂಡುಬರುವುವು. ತನ್ನ ಕವಿತಾವಿಚಾರವಾಗಿ ಗ್ರಂಥಕಾರನು ಹೀಗೆ ಬರೆದುಕೊಂಡಿರುವನು.

ಲಲತಮಧುರಾಃ ಸಾಲಂಕಾರಾಃ ಪ್ರಸಾದಮನೋರಮಾ
ವಿಕಟಯಮಕಶ್ಲೇಶೋದ್ಗಾರಪ್ರಬಂಧನಿರರ್ಗಲಃ ।
ಅಸದೃಶಗತಿಶ್ಚಿತ್ರೇ ಮಾರ್ಗೇ ಮಮೋದ್ಗಿರತೋ ಗಿರೋ
ನ ಖಲು ನೃಪತೇ ಚೇತೋ ವಾಚಸ್ಪತೇರಪಿ ಶಂಕತೇ ॥
(ಹರವಿಜಯ ಗ್ರಂಥಕರ್ತುಃ ಪ್ರಶಸ್ತಿ ಶ್ಲೋಕ ೨)

ಎಂದೂ ಹರವಿಜಯಮಹಾಕಾವ್ಯವನ್ನು ಓದುವುದರಿಂದ ಕಾಲಕ್ರಮದಲ್ಲಿ ದೊಡ್ಡ ಕವಿಯಾಗಬಹುದೆಂದೂ.—

ಹರವಿಜಯಮಹಾಕವೇಃ ಪ್ರತಿಜ್ಞಾಂ
ಶೃಣುತ ಕೃತಪ್ರಣಯೋ ಮಮ ಪ್ರಬಂಧೇ ।
ಅಪಿ ಶಿಶುರಕವಿಃ ಕವಿಃಪ್ರಭಾವಾತ್
ಭವತಿ ಕವಿಶ್ಚ ಮಹಾಕವಿಃ ಕ್ರಮೇಣ॥ ಗ್ರಂಥಕರ್ತುಃ ಪ್ರಶಸ್ತಿ ಶ್ಲೋಕ ೬

ಎಂದು ಹೇಳಿಕೊಂಡಿರುವನು.

ಹರವಿಜಯದಲ್ಲಿ ಹೇಳಿರುವ.—

ನಂದೀಶನಿರ್ದಯಕರಾಹತಪುಷ್ಕರೇಷು
ಮಂದ್ರಂ ಧ್ವನತ್ಸು ಮುರಜೇಷು ವಿಭಜ್ಯ ತಂಡುಃ
ಆಸಾತೇಷು ಪರಿಕಲ್ಪಿತಸಪ್ತಭೇದ
ಪರ್ಯಾಪ್ತ ಶೋಭಮಥ ತಾಂಡವಮಭ್ಯಗಾಯತ್ ॥

ಎಂಬ ಶಿವತಾಂಡವವರ್ಣನವು ಮಹಾಕವಿಭವಭೂತಿಯ.—

ಸಾನಂದಂ ನಂದಿಪಸ್ತಾಹತಮುರಜರವಾಹೂತಕೌಮಾರಬರ್ಹಿ
ತ್ಸುನ್ಯಾ ಸಾಗ್ರರಂಭ್ರಂ ವಿಶತಿ ಫಣಿಪತೌ ಭೋಗಸಂಕೋಚಭಾಜಿ ।
ಗಂಡೋಡ್ಡೀನಾಳಿಮಾಲಾಮುಖರಿತಕಕುಭಸ್ತಾಂಡವೇ ಶೂಲಪಾಣೇಃ
ಪೈನಾಯಕ್ಯಶ್ಚಿರಂ ವೋ ವದನ ವಿಧುತಯಃ ಪಾಂತು ಭೀತ್ಯಾರವತ್ಯಃ ॥

ಎಂಬ ಈ ಶ್ಲೋಕವನ್ನು ನೆನಪುಕೊಡುವ್ವದು.

ವಕ್ರೋಕ್ತಿಪಂಚಾಶಿಕೆಯ ಮಾದರಿಯ ಶ್ಲೋಕವು ಹೀಗಿರುವುದು.—

ತ್ವಂ ಹಾಲಾಹಲಭೃತ್ಕರೋಷಿ ಮನಸೋ ಮೂರ್ಧಾಂಮಮಾಲಿಂಗಿತೋ
ಹಾಲಾಂ ನೈವ ಬಿಭರ್ಮಿ ನೈವ ಚ ಹಲಂ ಮುಗ್ಧೇ ಕಥಂ ಹಾಲಿಕಃ।

(೩) ಕ್ರಿ. ಶ. ೮೧೩ರಿಂದ ಅವಂತಿವರ್ಮನ ಆಳ್ವಿಕೆಯಾರಂಭವಾದ ಕ್ರಿ. ಶ. ೮೫೫ರ ವರೆಗಾಗುವ ೪೨ ವರ್ಷಗಳ ಕಾಲದಲ್ಲಿ ಎಷ್ಟೋ ಜನರು ಆಳಿ ಅಳಿದಿರಬಹುದಾಗಿ ತೋರಿಬರುವುದರಿಂದ ಮೇಲೆ ಹೇಳಿರುವ ಕಲ್ಹಣನ ಶ್ಲೋಕದಂತೆ ರತ್ನಾಕರನು ಅವಂತಿವರ್ಮನ ಕಾಲದವನಾಗನೆಂದೂ.

(೪) ಕವಿಯು ಹೇಳಿರುವುದನ್ನು ಬಿಟ್ಟು ಕಲ್ಹಣನು ಹೇಳುವಂತೆ ಕ್ರಿ. ಶ. ೯ನೆಯಶತಮಾನದ ಉತ್ತರಾರ್ಧದವನೆನ್ನುವುದು ಅಸಂಗತವಾಗಿ ತೋರುವುದರಿಂದ ರತ್ನಾಕರನು ಕ್ರಿ. ಶ. ೯ನೆಯ ಶತಮಾನದ ಪೂರ್ವಾರ್ಧದಲ್ಲಿದ್ದವನೆಂದು ಹೇಳಿದರೆ ತಪ್ಪಾಗದು.

ಗ್ರಂಥಗಳು:—**ರತ್ನಾಕರನು** (೧) **ಹರವಿಜಯ** (೨) **ವಕ್ರೋಕ್ತಿಪಂಚಾಶಿಕಾ** (೩) **ಧ್ವನಿಗಾಥಾಪಂಚಿಕಾ** ಎಂಬ ಮೂರು ಗ್ರಂಥಗಳನ್ನು ರಚಿಸಿದುದಾಗಿ ತಿಳಿಯಬರುತ್ತದೆ.

ಹರವಿಜಯವೆಂಬುದು ಮಹಾಕಾವ್ಯವಾಗಿದ್ದು ೫೦ ಸರ್ಗಗಳಿರುವುವು. ಕಥೆಯನ್ನು ಸ್ಕಾಂದಪುರಾಣದಿಂದ ಆರಿಸಿಕೊಂಡಿರುವನು. ಶಿವನು ಅಂಧಕಾಸುರನನ್ನು ಸಂಹರಿಸಿ ದೇವತೆಗಳನ್ನು ಸಂತೋಷಗೊಳಿಸಿದನೆಂಬುದೇ ಈ ಮಹಾಕಾವ್ಯ ಕಥಾಸಾರಾಂಶವಾಗಿರುವುದು. ಈ ಕಾವ್ಯಕ್ಕೆ ರಾಜಾನಕ ಅಲಕನೆಂಬುವನು ವ್ಯಾಖ್ಯಾನವನ್ನು ಬರೆದಿರುವನು.

ಎರಡನೆಯದಾದ 'ವಕ್ರೋಕ್ತಿಪಂಚಾಶಿಕಾ' ಎಂಬುದು ಈಶ್ವರ ಮತ್ತು ಪಾರ್ವತಿಯರ ವ್ಯಂಗ್ಯಾರ್ಥಕೌಶಲರೂಪವಾದ ಭಾಷಣಗಳನ್ನೊಳಗೊಂಡಿರುವುದು.

ಮೂರನೆಯದಾದ 'ಧ್ವನಿಗಾಥಾಪಂಚಿಕಾ' ಎಂಬುದು ನಮಗೆ ದೊರೆತಿರುವುದಿಲ್ಲ.

ವಸಂತತಿಲಕವೃತ್ತದ ಶ್ಲೋಕಗಳುಳ್ಳ ಅನೇಕ ಸರ್ಗಗಳು ಹರವಿಜಯದಲ್ಲಿ ದೊರೆಯುವುವು.

ಕ್ಷೇಮೇಂದ್ರನು ಸುವೃತ್ತತಿಲಕವೆಂಬ ತನ್ನ ಗ್ರಂಥದಲ್ಲಿ.—

ವಸಂತತಿಲಕಾರೂಢಾ ವಾಗ್ಮಲ್ಲೀ ಗಾಥಸಂಗಿನೀ ।
ರತ್ನಾಕರಸ್ಯೋತ್ಕಲಿಕಾ ಚಕಾಸ್ತ್ಯನನಕಾನನೇ ॥ ೩—೩೨

* ಹರವಿಜಯ ಪುಟ ೧.

ಎಂದು ಒಕ್ಕಣಿಸಿರುವನು. ಹರವಿಜಯದ ಅನೇಕ ಶ್ಲೋಕಗಳು ಮಮ್ಮಟನ ಕಾವ್ಯಪ್ರಕಾಶದಲ್ಲಿ ಕಂಡುಬರುವುವು. ತನ್ನ ಕವಿತಾವಿಚಾರವಾಗಿ ಗ್ರಂಥಕಾರನು ಹೀಗೆ ಬರೆದುಕೊಂಡಿರುವನು.

ಲಲತಮಧುರಾಃ ಸಾಲಂಕಾರಾಃ ಪ್ರಸಾದಮನೋರಮಾ
ವಿಕಟಯಮಕಶ್ಲೇಶೋದ್ಗಾರಪ್ರಬಂಧನಿರರ್ಗಲಃ ।
ಅಸದೃಶಗತಿಶ್ಚಿತ್ರೇ ಮಾರ್ಗೇ ಮಮೋದ್ಗಿರತೋ ಗಿರೋ
ನ ಖಲು ನೃಪತೇ ಚೇತೋ ವಾಚಸ್ಪತೇರಪಿ ಶಂಕತೇ ॥
(ಹರವಿಜಯ ಗ್ರಂಥಕರ್ತುಃ ಪ್ರಶಸ್ತಿ ಶ್ಲೋಕ ೨)

ಎಂದೂ ಹರವಿಜಯಮಹಾಕಾವ್ಯವನ್ನು ಓದುವುದರಿಂದ ಕಾಲಕ್ರಮದಲ್ಲಿ ದೊಡ್ಡ ಕವಿಯಾಗಬಹುದೆಂದೂ.—

ಹರವಿಜಯಮಹಾಕವೇಃ ಪ್ರತಿಜ್ಞಾಂ
ಶೃಣುತ ಕೃತಪ್ರಣಯೋ ಮಮು ಪ್ರಬಂಧೇ ।
ಅಪಿ ಶಿಶುರಕವಿಃ ಕವಿಃಪ್ರಭಾವಾತ್
ಭವತಿ ಕವಿಶ್ಚ ಮಹಾಕವಿಃ ಕ್ರಮೇಣ॥ ಗ್ರಂಥಕರ್ತುಃ ಪ್ರಶಸ್ತಿ ಶ್ಲೋಕ ೬

ಎಂದು ಹೇಳಿಕೊಂಡಿರುವನು.

ಹರವಿಜಯದಲ್ಲಿ ಹೇಳಿರುವ.—

ನಂದೀಶನಿರ್ದಯಕರಾಹತಪುಷ್ಕರೇಷು
ಮಂದ್ರಂ ಧ್ವನತ್ಸು ಮುರಜೇಷು ವಿಭಜ್ಯ ತಂಡುಃ
ಆಸಾತೇಷು ಪರಿಕಲ್ಪಿತಸಪ್ತಭೇದ
ಪರ್ಯಾಪ್ತ ಶೋಭಮಥ ತಾಂಡವಮಭ್ಯಗಾಯತ್ ॥

ಎಂಬ ಶಿವತಾಂಡವವರ್ಣನವು ಮಹಾಕವಿಭವಭೂತಿಯ.—

ಸಾನಂದಂ ನಂದಿಪಸ್ತಾಹತಮುರಜರವಾಹೂತಕೌಮಾರಬರ್ಹಿ
ತ್ಸುನ್ಯಾ ಸಾಗ್ರಂಧ್ರಂ ವಿಶತಿ ಫಣಿಪತೌ ಭೋಗಸಂಕೋಚಭಾಜಿ ।
ಗಂಡೋಡ್ಡೀನಾಳಿಮಾಲಾಮುಖರಿತಕಕುಭಸ್ತಾಂಡವೇ ಶೂಲಪಾಣೇಃ
ವೈನಾಯಕ್ಯಶ್ಚಿರಂ ವೋ ವದನ ವಿಧುತಯಃ ಪಾಂತು ಭೀತ್ಯಾರವತ್ಯಃ ॥

ಎಂಬ ಈ ಶ್ಲೋಕವನ್ನು ನೆನಪುಕೊಡುವ್ವದು.

ವಕ್ರೋಕ್ತಿಪಂಚಾಶಿಕೆಯ ಮಾದರಿಯ ಶ್ಲೋಕವು ಹೀಗಿರುವುದು.—

ತ್ವಂ ಹಾಲಾಹಲಭೃತ್ಕರೋಷಿ ಮನಸೋ ಮೂರ್ಧಾಂಮಮಾಲಿಂಗಿತೋ
ಹಾಲಾಂ ನೈವ ಬಿಭರ್ಮಿ ನೈವ ಚ ಹಲಂ ಮುಗ್ಧೇ ಕಥಂ ಹಾಲಿಕಃ।

ಸಖ್ಯಂ ಹಾಲಿಕತ್ವೈವ ತೇ ಸಮುಚಿತಾ ಸಕ್ತಸ್ಯ ಗೋವಾಹನೇ
ವಕ್ರೋಕ್ತ್ಯೇತಿ ಜಿತೋ ಹಿಮಾದ್ರಿಸುತಯಾ ಸ್ಮೇರೋ ಹರಃ ಪಾತು ವಃ ॥

ಹರವಿಜಯದ ಎರಡು ಶ್ಲೋಕಗಳನ್ನು ಮಾದರಿಗಾಗಿ ಬರೆಯುವೆವು.

ತರಳಪಲ್ಲವತಾಮ್ರಕರಾ ಬಳೌ
ಸಮಧುಮುಲ್ಲಸಿತಭ್ರಮರೋತ್ಪಲಂ ।
ಕುಸುಮಕೋಷವಿವಾರ್ಪಯಿತುಂ ಲತಾ
ವಿವಲಿತಾ ಬಲಿತಾಪಪೃತಸ್ತರೋಃ ॥ ೩—೧೮

ಮಧುಮಾಸದ ಸಮಾಗಮದಿಂದ ಪ್ರಫುಲ್ಲವಾದ ಬಾಲಲತೆಗಳು ಆರಕ್ತ ವರ್ಣವಾಗಿರುವ ಪಲ್ಲವಗಳೆಂಬ ತಮ್ಮ ಕರಗಳಲ್ಲಿ ಮಕರಂದದಿಂದ ಪೂರ್ಣವಾದ ಪುಷ್ಪಗಳೆಂಬ ಪಾನಪಾತ್ರೆಗಳನ್ನು ಹಿಡಿದುಕೊಂಡು ತರುಣಿಯರು ತಮ್ಮ ಮನದನ್ನರಿಗೆ ಮದಿರಾಪೂರ್ಣವಾದ ಪಾನಪಾತ್ರೆಯನ್ನು ಕೊಡುವಂತೆ ವೃಕ್ಷಗಳಿಗೆ ಸಮರ್ಪಿಸುತ್ತಿರುವುವು.

ಏಷಾ ವಿಶಾಲವಿಶಿಖಾಮುಖವಿಪ್ರಕೀರ್ಣ
ಪರ್ಯ್ಯಾಪಕಾರಕುಸುಮಪ್ರವಣಾಳಿಪಙ್ಕ್ತಿಃ ॥
ಅಭ್ಯೇತ್ಯ ಬಂಧುಜನತೇವ ನಿಶಾಂಧಕಾರ
ಮರ್ಕಾಂಶುಭಿನ್ನಮನುಶೋಚತಿ ತಾರನಾದ್ಯೈಃ ॥ ೨೯—೩೫

ನಿಶಾಂಧಕಾರವು ಪ್ರಪಂಚದಲ್ಲೆಲ್ಲಾ ನಿರಂಕುಶಪ್ರಭುತ್ವವನ್ನು ಮಾಡುತ್ತಿರಲು ಹಠಾತ್ತಾಗಿ ಚಂಡಕಿರಣನು ಬಂದು ಕತ್ತಲೆಯನ್ನು ಬೆಳ್ತಲೆಯನ್ನಾಗಿ ಮಾಡಲೋಸುಗ ಪ್ರಪಂಚವನ್ನಾಕ್ರಮಿಸಲು ದಿಕ್ಕಾಪಾಲಾಗಿ ಬಹಳ ಅನರ್ಥಕ್ಕೆ ಸಿಲ್ಕಿ ಕಂಗಾಲಾಗಿ ಹೋಗಿರುವ ಅಂಧಕಾರವನ್ನು ಕಷ್ಟಕಾಲದಲ್ಲಿ ಸಮಾಧಾನ ಪಡಿಸುವುದಕ್ಕಾಗಿ ಬಂದ ಬಂಧುಜನರಂತೆ ಭ್ರಮರಗಳು ಝೇಂಕಾರವೆಂಬ ರೋದನಧ್ವನಿಯಿಂದ ಸಂತೈಸುವಂತೆ ಕಾಣುವುದು.

ಭ ಟ್ಟ ಶಿ ವ ಸ್ವಾ ಮಿ

ಹೆಸರಿನಿಂದ ಇವನು ಬ್ರಾಹ್ಮಣನಾಗಿರಬೇಕೆಂದು ತೋರುತ್ತದೆ. ಇವನು ಕ್ರಿ. ಶ. ೮೫೫-೮೮೪ರಲ್ಲಿ ಕಾಶ್ಮೀರದಲ್ಲಿ ಆಳಿದ ಅವಂತಿವರ್ಮನ ಆಶ್ರಯದಲ್ಲಿ "**ಕಪ್ಪಣಾಭ್ಯುದಯ**" ವೆಂಬ ಮಹಾಕಾವ್ಯವನ್ನು ಬರೆದುದಾಗಿ ತಿಳಿಯಬರುತ್ತದೆ. ಇದು ಇದುವರೆಗೂ ಮುದ್ರಿತವಾಗದೆ ಇನ್ನೂ ಹಸ್ತಲಿಖಿತಪ್ರತಿಯಲ್ಲಿರುವುದು. ಕಲ್ಹಣನ ರಾಜ ತರಂಗಿಣಿಯಲ್ಲಿ.—

ಮುಕ್ತಾಕಣಶಿವಸ್ವಾಮಿ . . . . ಸಾಮ್ರಾಜ್ಯೇವಂತಿವರ್ಮಣಃ

ಎಂಬ ಶ್ಲೋಕದಲ್ಲಿ ಹೇಳಿರುವ ಶಿವಸ್ವಾಮಿಯು ಇವನೆ. ಇವನ ಶ್ಲೋಕಗಳು ವಲ್ಲಭದೇವನ ಸುಭಾಷಿತಾವಳಿಯಲ್ಲಿ ಕಂಡುಬರುವುವು. ಕಾವ್ಯಶೈಲಿಯು ಮಾಘಕಾವ್ಯವನ್ನು ಹೋಲುವುದಾಗಿದೆ.*

ಅ ಭಿ ನ ಂ ದ ನ (೨)

ಇವನು ಬ್ರಾಹ್ಮಣನು. ಶತಾನಂದನ ಮಗನು.

ಕಾಲ:—ಇವನು ಕ್ರಿ. ಶ. ೯ನೆಯ ಶತಮಾನದಲ್ಲಿದ್ದ ಯುವರಾಜನಾದ ಹಾರವರ್ಷನ ಆಶ್ರಯದಲ್ಲಿದ್ದನು.

ಗ್ರಂಥ:—ಇವನು ರಾಮಚರಿತವೆಂಬ ೪೦ಸರ್ಗಗಳುಳ್ಳ ಮಹಾಕಾವ್ಯವನ್ನು ಬರೆದಿರುವನು. ಇದರಲ್ಲಿ ೩೬ ಸರ್ಗಗಳು ಅಭಿನಂದನೇ ಬರೆದುದು. ಉಳಿದ ನಾಲ್ಕು ಸರ್ಗಗಳನ್ನು ಭೀಮಕವಿಯೆಂಬವನು ಬರೆದು ಮುಗಿಸಿರುವನು.

ಸೀತಾವಿಯೋಗಾನಂತರ ಚಿಂತಾಕುಲಿತನಾದ ಶ್ರೀರಾಮನು ವರ್ಷಾಕಾಲವು ಮುಗಿಯುತ್ತಿರುವುದನ್ನು ನೋಡಿ ರಾವಣನು ಇರುವ ಸ್ಥಳವನ್ನು ಹುಡುಕಿಕೊಂಡು ಬರಲು ಕಳುಹಿಸಿಕೊಡಬೇಕೆಂದು ಸುಗ್ರೀವನ ಆಗಮನ ನಿರೀಕ್ಷಣೆಯಲ್ಲಿದ್ದ ವಿಚಾರವು ವರ್ಣಿತವಾಗಿರುವುದು. ಕವಿಯು ತನಗೆ ಆಶ್ರಯದಾತನಾದ ಯುವರಾಜ ಹಾರವರ್ಷನ ವಿಚಾರವಾಗಿ ತಾನು ಬರೆದ ರಾಮಚರಿತದಲ್ಲಿ ಹೀಗೆಂದಿರುವನು.—

(೧) ಏತೇ ನಿಕಾಮಮಸಿಕಸ್ಯ ಜಯಂತಿ ಪಾದಾಃ
ಶ್ರೀಹಾರವರ್ಷಯುವರಾಜ ಮಹೀತಲೇಂದೋಃ
ಯೈರ್ದ್ವಾದಶಾರ್ಕಕಿರಣೋತ್ಕರದುರ್ನಿವಾರಃ
ಸ್ಯಾತ್ಸೋಽಭಿನಂದಕುಮುದಸ್ಯ ಮಹಾವಿಕಾಸಃ ॥ ೧—೭

(೨) ಪಾಲಾನ್ವಯಾಂಬುಜವನೈಕವಿರೋಚನಾಯ
ತಸ್ಮೈನಮೋಽಸ್ತು **ಯುವರಾಜ** ನರೇಶ್ವರಾಯ
ಕೋಟಿಪ್ರದಾನ ಘಟಿತೋಜ್ಜ್ವಲಕೀರ್ತಿಮೂರ್ತಿಃ
ಯೇನಾಮರತ್ವಪದವೀಂ ಗಮಿತೋಽಭಿನಂದಃ ॥ ೨—೭ ೧೪—೩೫

(೩) ನಮಃ **ಶ್ರೀಹಾರವರ್ಷಾಯ** ಯೇನ ಹಾಲಾದನಂತರಂ
ಸ್ಫುಟೋಽಯಂ ಕವಿಕೋಶಾನಾಮಾವಿರ್ಭಾವಾಯ ಸಂಭೃತಃ ॥ ೫—೮ ೧೦—೧೨

* History of classical Sanskrit Literature P. 40.

(೪) ಶ್ಯಾಮಃ ಸಿತಾಸಿತನಿರಾಯತಪಕ್ಷ್ಮಲಾಕ್ಷ್ಣಃ
ಕ್ಷ್ಮಾಮೋದರಃ ಕಠಿನಕಾಂತಭುಜಾಂತರಾಲಃ
ಸರ್ವಾಂಗಪಲ್ಲವಿತ ಯೌವನಲಾಂಛನಶ್ರೀಃ
ಶ್ರೀಹಾರವರ್ಷ ಇವ ಕುತ್ರ ಪತಿಃ ಪೃಥಿವ್ಯಾಃ ॥ ೭

(೫) ಯೇನಾದ್ಯ ರಾಮಚರಿತಂ ಚರಿತಾದ್ಭುತೇನ
ಸ್ಪೇನಾಧರೀಕೃತಮತೀವ ಮಹೀತಲೇಽಸ್ಮಿನ್
ತೇನೈವ **ಪಾಲಕುಲ** ಚಂದ್ರಮಸಾ ಶದಿತ್ಥ
ಮುತ್ಥಾಪಿತಂ ಜಗತಿ ಪಶ್ಯತ ಚಿತ್ರಮೇತತ್ ॥ ೧೦

(೬) ದೀಪಃ ಸತಾಂ ಸ ಖಲು ಪಾಲಕುಲಪ್ರದೀಪಃ
ಶ್ರೀಹಾರವರ್ಷ ಇತಿ ಯೇನ ಕವಿಪ್ರಿಯೇಣ
ಸದ್ಯಃ ಪ್ರಸಾದಭರದತ್ತಮಹಾಪ್ರತಿಷ್ಠೇ
ನಿಷ್ಕಾಪಿತಃ ಪಿಶುನವಾಕ್ಪ್ರಸರೋಽಭಿನಂದೇ॥ ೧೧

(೭) ಸುದೃಢವಿಪುಲಗಾತ್ರಃ ಶತ್ರುಕೀಟಾಂತಕಾರೀ
ಸತತಮುಪಚಿತಾಯಾಂ ಸನ್ನಿವಿಷ್ಟೋ ದಶಾಯಾಂ
ಜಗದಮಲಮುದಸ್ಯ ಶೇಷದೋಷಾಂಧಕಾರಂ
ಜನಯತಿ **ಯುವರಾಜಃ** ಪಾಲವಂಶಪ್ರದೀಪಃ ॥ ೨೬

ಎಂಬುದರಿಂದ ಪಾಲವಂಶೀಯನಾದ ಯುವರಾಜ ಹಾರವರ್ಷನಾಶ್ರಯದಲ್ಲಿ ನಮ್ಮ ಕವಿಯು ಇದ್ದುದಾಗಿ ಸ್ಪಷ್ಟಪಡುವುದು. ಆದರೆ ಈ ಪಾಲವಂಶವು ಯಾವುದು ? ಯುವರಾಜನಾರು ? ಹಾರವರ್ಷನಾರು ? ಇವರೀರ್ವರೂ ಭಿನ್ನವ್ಯಕ್ತಿಗಳೇ ಆಲ್ಲವೇ ಎಂಬುದನ್ನೂ ಬಂಗಾಳದಲ್ಲಿ ಆಳಿದ ಪಾಲವಂಶದ ಧರ್ಮಪಾಲನ ಮಗ ದೇವಪಾಲನಿಗೂ ಈ ಹಾರವರ್ಷನಿಗೂ ಏನಾದರೂ ಸಂಬಂಧವಿರಬಹುದೆ ಹೇಗೆಂಬುದನ್ನು ಪ್ರಕೃತ ಬರೆಯಬೇಕಾಗಿರುವುದು.

ಬಂಗಾಳದಲ್ಲಿ ಆಳಿದ ಪಾಲವಂಶವು ಅತ್ಯಂತ ಪ್ರಸಿದ್ಧವಾದುದರಿಂದಲೇ ಪ್ರಾಚೀನ ಹಿಂದುಸ್ಥಾನ ಚರಿತಕಾರನಾದ ವಿ.ಸ್ಮಿಟ್ ಏ. ಸ್ಮಿತ್ತನು 'ಪಾಲಾನ್ವಯ' ವೆಂಬುದು ಬಂಗಾಳದಲ್ಲಾಳಿದ ಪ್ರಸಿದ್ಧವಾದ ಪಾಲವಂಶವೆಂದೇ ಒಕ್ಕಣಿಸಿರುವನು* ಈ ಪಾಲವಂಶಚರಿತವು ಕ್ರಮವರಿತು ಬರೆಯಲ್ಪಟ್ಟಿರುವುದಿಲ್ಲವಾದುದರಿಂದ ಹೀಗೆ ಸರಿಯೆಂದು ನಿಶ್ಚಯಿಸಿ ಹೇಳಲಾಗದಿದ್ದರೂ ಮೇಲಣ ರಾಮಚರಿತ ಕಾವ್ಯಾಧಾರದಿಂದ ಕೊಂಚಮಟ್ಟಿಗೆ ಹೇಳಬಹುದಾಗಿದೆ. ಪಾಲವಂಶಚರಿತವು ಎರಡು ವಿಧವಾಗಿ ಹೇಳಲ್ಪಟ್ಟಿದೆ. (೧) ಟಬೆಟಿಯನ್ನರ ಹೇಳಿಕೆ (೨) ಶಾಸನ

* Vincent A. Smith's Early History of India P. 413.

ಪ್ರಮಾಣ. ಟಬೆಟಿಯನ್ನರ ಹೇಳಿಕೆಯ ಪ್ರಕಾರ ಪಾಲವಂಶದ ಮೂಲಪುರುಷನಾದ ಗೋಪಾಲನ ಆಳ್ವಿಕೆಯು ಕ್ರಿ. ಶ. ೬೬೦ರಿಂದ ಪ್ರಾರಂಭವಾಗುವುದು. ಇವನ ಅನಂತರ ೧೮ ಜನರು ಆಳಿದರು. ಇವರಲ್ಲಿ ಕೊನೆಯವನು ಕ್ರಿ. ಶ. ೧೧೫೯ರಲ್ಲಿ ಆಳಿದುದಾಗಿ ತಿಳಿಯಬರುತ್ತದೆ.† ಟಬೆಟಿಯನ್ನರ ಹೇಳಿಕೆಗೂ ಶಾಸನಕ್ರಮಕ್ಕೂ ಹೆಚ್ಚು ಅಂತರವಿರುವುದು. ಧರ್ಮಪಾಲನಿಂದ ಕೊಡಲ್ಪಟ್ಟುದಾದ ಖಾಲಿಮಪುರ ಪಾನಶಾಸನ (grant) ಮತ್ತು ದೇವಪಾಲನಿಂದ ಕೊಡಲ್ಪಟ್ಟುದಾದ ಮಾಂಘೀರದ ದಾನಶಾಸನದಂತೆ ಪಾಲವಂಶದ ಮೊದಲನೆಯವನು ಗೋಪಾಲ. ಎರಡನೆಯವನು ಇವನಮಗ ಧರ್ಮಪಾಲ. ಮೂರನೆಯವನು ಇವನ ಮಗ ದೇವಪಾಲನೆಂಬುವನು.

ಧರ್ಮಪಾಲನು ಕೆನೂಜಿನಲ್ಲಿ ಕ್ರಿ. ಶ. ೭೮೩ರಲ್ಲಿ ಆಳಿದ ಇಂದ್ರಾಯುಧನೆಂಬ ರಾಜನ ಸಮಕಾಲೀನನಾಗಿದ್ದುದಾಗಿ ಹೇಳಲ್ಪಟ್ಟಿದೆ.* ಈ ಆಧಾರದಮೇಲೆ ಗೋಪಾಲನ ಆಳ್ವಿಕೆಯು ಕ್ರಿ. ಶ. ೮ನೆಯ ಶತಮಾನದ ಪೂರ್ವಾರ್ಧವಾಗಿರಬೇಕೆಂದೂ ಧರ್ಮಪಾಲನ ಆಳ್ವಿಕೆಯ ಕಾಲವು ಕ್ರಿ. ಶ. ೮ನೆಯ ಶತಮಾನದ ಉತ್ತರಾರ್ಧವೆಂದೂ ಹೇಳಬಹುದಾಗಿದೆ. ಪಾಲವಂಶವು ಕ್ರಿ. ಶ. ೧೨ನೆಯ ಶತಮಾನದವರೆಗೆ ಅಭಿವೃದ್ಧಿಸ್ಥಿತಿಯಲ್ಲಿದ್ದು ಕಾಲಕ್ರಮದಲ್ಲಿ ಸೇನರಾಜರ (Sena Kings) ಮತ್ತು ಮಹಮ್ಮದೀಯರ ಅಭ್ಯುದಯವಾದಹಾಗೆಲ್ಲಾ ನಿರ್ನಾಮವಾದುದಾಗಿ ತೋರುತ್ತದೆ. ಪಾಲವಂಶದ ರಾಜರು ಯಾವಾಗಲೂ ಕಾವ್ಯಪ್ರಿಯರಾದ ವಿದ್ವನ್ಮಣಿಗಳಾಗಿಯೂ ಕವಿಜನಾಶ್ರಯರಾಗಿಯೂ ಸಕಲಮತ ಸುಹೃದರಾಗಿಯೂ ಬಾಳುತ್ತಿದ್ದರು. ಆದರೆ ಪಾಲವಂಶದಲ್ಲಿ ಹೇಳಲ್ಪಟ್ಟಿರುವ ರಾಜರಲ್ಲಿ ಹಾರವರ್ಷನೆಂಬ ರಾಜನೊಬ್ಬನು ಆಳಿದುದಾಗಿಯೂ ಅವನು ರಾಮಚರಿತಕಾರನಾದ ಅಭಿನಂದನನ ಆಶ್ರಯದಾತನಾಗಿದ್ದುದಾಗಿ ಹೇಳಿರುವಂತೆ ಎಲ್ಲಿಯೂ ಕಂಡುಬರುವುದಿಲ್ಲ. ಆದರೆ ಪಾಲವಂಶದ ಕೆಲವು ರಾಜರಿಗೆ ಮಾತ್ರ ಯುವರಾಜನೆಂಬ ಹೆಸರು ಇದ್ದುದಾಗಿ ತೋರುತ್ತದೆ.§

ಯುವರಾಜನೆಂಬ ಹೆಸರು ಸಿಂಹಾಸನಕ್ಕೆ ಬಾಧ್ಯನೆಂಬರ್ಥಮಾತ್ರದ ರೂಢಿಯು ಇದೆ. ಅಭಿನಂದನನ ರಾಮಚರಿತಾಧಾರದಿಂದ ಹಾರವರ್ಷನು ಆಗ ಆಳುತ್ತಿದ್ದ ದೊರೆಯೆಂದೂ ಸಿಂಹಾಸನಕ್ಕೆ ಕಾದಿರಲಿಲ್ಲವೆಂದೂ ಅವನೇ ಯುವರಾಜ

† History of Indian Logic P. 517 by Mahamahopadhyaya Satis Chandra Sen.

* Palas of Bengal M. A. S. B Vol V. P. 50.

§ Epigraphica Indica Vol IV P. 249 and Indian Antiquary Vol XXI P. 258.

ನೆಂದೂ ಸಿಂಹಾಸನಕ್ಕೆ ಬಾಧ್ಯನೆಂಬ ಅರ್ಥದಲ್ಲಿ ಹೇಳಿರುವುದಿಲ್ಲವೆಂದೂ ವ್ಯಕ್ತ ಪಡುತ್ತದೆ. ಇದೇ ವಿಚಾರವು ಉದಯಸುಂದರೀ ಕಥಾಕಾರನಾದ ಸೋಡ್ಢಲ (ಸೋಟ್ಟಲ) ನಿಂದಲೂ ಸ್ಪಷ್ಟಪಡಿಸಲ್ಪಟ್ಟಿದೆ. ಉದಯಸುಂದರೀ ಕಥೆಯಲ್ಲಿ ಯುವ ರಾಜನು ಅಭಿನಂದನನ (ರಾಮಚರಿತಕಾರ) ಆಶ್ರಯದಾತನೆಂದೂ ಯುವ ರಾಜನು ಆಗ ಆಳುತ್ತಿದ್ದ ದೊರೆಯೆಂದೂ ಹೇಳಲ್ಪಟ್ಟಿದೆ. ಅದು ಹೀಗಿರುವುದು.

ಶ್ರೀವಿಕ್ರಮೋ ನೃಪತಿರತ್ನ ಪತಿಃ ಸಭಾನಾ
ಮಾಸೀತ್ಸ ಕೋಽಪ್ಯಸದೃಶಃ ಕವಿಮಿತ್ರನಾಮಾ
ಯೋ ವಾರ್ಥಮಾತ್ರಮುದಿತಃ ಕೃತಿನಾಂ ಗೃಹೇಷು
ದತ್ವಾ ಚಕಾರ ಕರಟೀಂದುಘಟೀಂಧಕಾರಂ॥

ಹಾಲೇ ಗತೇ ಗುಣಿನ ಶೋಕಶರಾದ್ಭುಭೂವು *
ರುಚ್ಛಿನ್ನವಾಂಗ್ಯಮಜಡಾಃ ಕೃತಿನಸ್ತಧಾಮಾ
ಯತ್ತಸ್ಯ ನಾಮ ನೃಪತೇರನಿಶಂ ಸ್ಮರಂತೋ
ಹೇತ್ಯಕ್ಷರಂ ಪ್ರಥಮಮೇವ ಪರಂ ವಿದಂತಿ ॥

ಶ್ರೀಹರ್ಷ ಇತ್ಯವನಿವರ್ತಿಷು ಪಾರ್ಥಿವೇಷು
ನಾಮೈವ ಕೇವಲಮಜಾಯತ ವಸ್ತುತಸ್ತು
ಶ್ರೀಹರ್ಷ ಏಷ ನಿಜಸಂಸದಿ ಯೇನ ರಾಜ್ಞಾ
ಸಂಪೂಜಿತಃ ಕನಕಕೋಟಿಶತೇನ ಬಾಣಃ ॥

ಸೃಷ್ಟಂ ಯದತ್ತ **ಯುವರಾಜ** ಸರೇಶ್ವರೇಣ
ಯದ್ದುಷ್ಕರಂ ಕಿಮಪಿ ಯೇನಗಿರಃ ಶ್ರಯಶ್ಚ
ಪ್ರತ್ಯಾಯಸಂ ಸ್ಫುಟಮಕಾರಿ ನಿಜೇ ಕವೀಂದ್ರ
ಮೇಕಾಸನೇ ಸಮುಪವೇಶಯತಾ **ಭಿನಂದಂ** *

ಇದಲ್ಲದೆ

ಶ್ರೀಧರ್ಮಪಾಲಕುಲಕೈರವಕಾನನೇಂದೂ
ರಾಜಾ ವಿಲಾಸಕೃತಿ ಪಂಕಜಿನೀ ವಿವಸ್ವಾ
ಸರ್ವಾಭಿರಾಮ ಗುಣಪತ್ರರಥವ್ರಜಿಕೃ
ನೀಡದ್ರುವೋ ವಿಜಯತೇ **ಯುವರಾಜ** ದೇವಃ $

ಎಂಬುದರಿಂದಲೂ ಯುವರಾಜನೆಂಬುದು ರಾಜನ ಹೆಸರೆಂದೂ ಸಿಂಹಾಸನಕ್ಕೆ ಬಾಧ್ಯನೆಂಬ ಅರ್ಥದಲ್ಲಿ ಯುವರಾಜಶಬ್ದವು ಉಪಯೋಗಿಸಲ್ಪಟ್ಟಿರುವುದಿಲ್ಲವೆಂದೂ ಖಂಡಿತವಾದುದು.

* ಉದಯಸುಂದರೀಕಥಾ ಪುಟ ೨-೩.

$ ರಾಮಚರಿತ ೨೭

ಧರ್ಮಪಾಲನು ಕ್ರಿ. ಶ. ೯ನೆಯ ಶತಮಾನದ ಪೂರ್ವಾರ್ಧದಲ್ಲಿ ಆಳಿದು ದಾಗಿ ಹೇಳಲ್ಪಟ್ಟಿದೆ. ಇವನ ಅನಂತರದ ಕಾಲವೇ ಯುವರಾಜನದು. ಪಾಲ ವಂಶೀಯರಲ್ಲಿ ಪ್ರಸಿದ್ಧ ವಿದ್ಯಾವಂತರೂ, ಪರಾಕ್ರಮಿಗಳೂ, ಕವಿಪೋಷಕರಾದ ದೇವ ಪಾಲ, ವಿಗ್ರಹಪಾಲ, ನಾರಾಯಣಪಾಲ ಮತ್ತು ಒಂದನೆಯ ಮಹೀಪಾಲ ಈ ನಾಲ್ವರು ಮುಖ್ಯರು. ಇವರು ರಾಜ್ಯವಾಳಿ ಕೀರ್ತಿಶೇಷರಾಗಿರುವರು. ಇದಲ್ಲದೆ ಯುವರಾಜರೆಂಬ ಇಬ್ಬರು ದೊರೆಯುವರು. (೧) ಧರ್ಮಪಾಲನ ಮೊದಲನೆಯ ಮಗ ತ್ರಿಭುವನಪಾಲ (೨) ದೇವಪಾಲನ ಮಗ ರಾಜ್ಯಪಾಲ. ಇವರಿಬ್ಬರೂ ಯುವರಾಜ ಪದವಿಯನ್ನು ಹೊಂದಿ ಸಿಂಹಾಸನಕ್ಕೆ ಬಾಧ್ಯರೆನಿಸಿಕೊಂಡಿದ್ದರೇ ಹೊರ್ತು ಯುವರಾಜರೆಂಬ ಹೆಸರಿನಿಂದ ರಾಜ್ಯವಾಳಿದವರಲ್ಲ. ಅಲ್ಲದೆ ಇವರು ಯಾವಾಗಲಾದರೂ ಈ ಹೆಸರಿನಿಂದ ಆಳುವ ಸಂಭವವಿದ್ದುದೇ ಹೇಗೆ? ಎಂಬ ವಿಚಾರದಲ್ಲಿ ಚರಿತ್ರೆಯು ಕುಂಠಿತವಾಗಿರುವುದು. ರಾಮಚರಿತದ ಶ್ಲೋಕಗಳನ್ನು ಭೋಜನೂ ಮಮ್ಮಟನೂ ಕ್ಷೇಮೇಂದ್ರನೂ ಅಭಿನವಗುಪ್ತನೂ ಹೇರಳವಾಗಿ ಉದಾಹರಿಸಿಕೊಂಡಿರುವರು. ಈ ಉದಾಹರಣೆಗಳೆಲ್ಲವನ್ನೂ ನೋಡಿ ಕೆಲವರು ಅಭಿನಂದನು ಕ್ರಿ. ಶ. ೯೭೮-೧೦೩೦ರವರೆಗೆ ಆಳಿದ ಮಹೀಪಾಲನ ಆಸ್ಥಾನ ಪಂಡಿತನಾಗಿದ್ದಿರಬೇಕೆಂದು ತರ್ಕಿಸಬಹುದು. ಆದರೆ ಸೋಡ್ಡಲನುವರ್ಣಿಸಿಕೊಂಡಿರುವ ಪ್ರಾಚೀನ ಕವಿವರ್ಣನಾವಸರದಲ್ಲಿ ಆದಿಕವಿಯಾದ ವಾಲ್ಮೀಕಿಯನ್ನು ಮೊದಲುಗೊಂಡು ಹೇಳುವಾಗ ಅಭಿನಂದನನು ರಾಜಶೇಖರನಿಗಿಂತ ಪ್ರಾಚೀನನೆಂದಿರುವನು. "ಇವನು ವಾಲ್ಮೀಕಿ ವ್ಯಾಸ, ಭರ್ತೃಮೆಂಠ, ಗುಣಾಢ್ಯ, ಕಾಲಿದಾಸ (?) ಭವಭೂತಿ, ವಾಕ್ಪತಿರಾಜ, ಅಭಿನಂದ, ಯಾಯಾವರ (ರಾಜಶೇಖರ) ನನ್ನು ಕ್ರಮವಾಗಿ ಹೇಳಿರುವನು. ಅವನು ಹೇಳುವ ಕೊನೆಯ ಶ್ಲೋಕವು ಹೀಗಿರುವುದು.

ವಂದ್ಯಃಂ ಸ ವಿದ್ವಾನ **ಭಿನಂದ** ನಾಮಾ
ವಿಸ್ರಂಭಪಾತ್ರಂ ವಚನಾಧಿದೇವ್ಯಾಃ
ಯಾಯಾವರಃ ಪ್ರಾಜ್ಞವರೋ **ಗು**ಣಜ್ಞೈ
ರಾಶಂಸಿತಃ ಸೂರಿಸಮಾಜವರ್ಯೈಃ ॥

ರಾಜಶೇಖರನು ಕೆನೂಜಿನ ಮಹೇಂದ್ರಪಾಲನ ಗುರುವಾಗಿದ್ದನು. ಆದುದರಿಂದ ಇವನು ಕ್ರಿ. ಶ. ೧೦ನೆಯ ಶತಮಾನಾರಂಭದಲ್ಲಿದ್ದವನು. ಅಭಿನಂದನು ಮಹೀಪಾಲನ ಆಶ್ರಯದಲ್ಲಿದ್ದು ಅವನ ಸಮಕಾಲೀನನೆನ್ನುವುದಾದರೆ ವಾಲ್ಮೀಕಿ ಕಾಳಿದಾಸ ಬಾಣನೇ ಮೊದಲಾದ ಕವಿಪುಂಗವರ ಜೊತೆಯಲ್ಲಿ ಸೇರಿ ಹೆಗ್ಗಳಿಕೆಯನ್ನು ಹೊಂದುವ ಇಂತಹ ಕಾವ್ಯರಚನೆಗೂ ಪ್ರಸಿದ್ಧಿಗೂ ಅವಕಾಶವಿಲ್ಲದಂತಾ

[೮] Vincent A. Smith's Early History of India P. 394.

ಗುವುದು. ಅಲ್ಲದೆ ಗ್ರಂಥದಲ್ಲಿ ಎಲ್ಲಿಯೂ ಹೇಳಿಕೊಂಡಿರುವುದಿಲ್ಲವಾದುದರಿಂದ ಯುವರಾಜನ ಆಶ್ರಯದಲ್ಲಿದ್ದವನನ್ನು ಮಹೀಪಾಲನ ಆಶ್ರಯದವನೆನ್ನುವುದು ಸರ್ವಥಾ ಅಸಮಂಜಸವಾದುದು. ಆದುದರಿಂದ ಸೋಡ್ಡಲನು ಹೇಳುವ ಹಾಗೆ ಕ್ರಿ. ಶ. ೧೦ನೆಯ ಶತಮಾನಕ್ಕೆ ಮುಂಚೆ ಯುವರಾಜನ ಆಶ್ರಯದಲ್ಲಿ ಅಭಿನಂದನು ಇದ್ದಿರಬೇಕು. ಎಂದರೆ ಕ್ರಿ. ಶ. ೯ನೆಯ ಶತಮಾನದಲ್ಲಿದ್ದವನೆಂದು ಖಂಡಿತವಾಗಿ ಹೇಳಬಹುದು.

ರಾಮಚರಿತದಲ್ಲಿ ಯುವರಾಜ ಹಾರವರ್ಷನ ತಂದೆಯು ವಿಕ್ರಮಶೀಲನೆಂದು ಹೇಳಲ್ಪಟ್ಟಿದೆ. ಅದು ಹೀಗಿರುವದು.

ಕಿಮಿಂದುನಾ ಚಂದನವಾರಿಣಾಪಿ
ಕಿಮಬ್ಜ ಕಂದೈ**ರಭಿನಂದ**ವತ್ಸಲಃ
ವಿಚಿಂತ್ಯ ತಾಮಾಂತರತುಪಶಾಂತಯೇ
ಸ ಕೇವಲಂ **ವಿಕ್ರಮಶೀಲನಂದನಃ** ॥ ೭
ನಿರ್ಮತ್ಸರಃ ಕವಿರಪಿ ಪ್ರಭುರಪ್ಯಮಮಃ
ಪೃಥ್ವೀಪತಿರ್ಜಯತಿ **ವಿಕ್ರಮಶೀಲಜನ್ಮಾ** ॥

ಎಂದಿರುವುದು. ಈ ವಿಕ್ರಮಶೀಲನಾರೆಂಬ ವಿಚಾರವು ಎಲ್ಲಿಯೂ ತಿಳಿಯುವಂತಿಲ್ಲ. ಚರಿತ್ರೆಯೂ ಹೇಳುವುದಿಲ್ಲ. ಸರಿಯಾದ ಪ್ರಮಾಣಗಳಿಲ್ಲದೆ ಹೇಳುವುದೂ ಸುಲಭಸಾಧ್ಯವಲ್ಲ. ವಿಕ್ರಮಶೀಲನೆಂಬುದು ನಿಜವಾದ ಹೆಸರೇ ಅಥವಾ ವ್ಯಕ್ತಿಯಗುಣ ಕಥನವೇ ಹೇಗೆಂಬುದು ತಿಳಿಯದಾಗಿದೆ.

ವಿಕ್ರಮಶಿಲೆಯು ಸರ್ವ ಕಲಾಕೇಂದ್ರವಾಗಿದ್ದುದಲ್ಲದೆ ಪ್ರಾಚೀನಬೌದ್ಧರ ವಿಹಾರಸ್ಥಳವಾಗಿದ್ದಿತೆಂದೂ ಇದನ್ನು ಧರ್ಮಪಾಲನು ಕಟ್ಟಿಸಿದುದಾದ ವಿಚಾರವನ್ನು ಮಾತ್ರ ಚರಿತ್ರೆಯು ಹೇಳುತ್ತದೆ. ಹಾಗಾದರೆ ಧರ್ಮಪಾಲನೆಂದು ಕರೆಯುವ ಬದಲು ಅವನು ಕಟ್ಟಿಸಿದ ವಿಕ್ರಮಶೀಲ (ವಿಕ್ರಮಶಿಲಾ) ಎಂಬ ಹೆಸರಿನಿಂದ ಕರೆದಿರಬಹುದೇ ಹೇಗೆ? ಎಂದು ಕೆಲವರು ಅನುಮಾನಿಸುವರು. ಮತ್ತೆ ಕೆಲವರು ಹಾಗೆ ಇದ್ದರೂ ಇರಬಹುದು. ಎಂದು ಸಮಾಧಾನಗೊಂಡು " ಸ್ವಗ್ಧರಾ ಸ್ತೋತ್ರಟೀಕಾ " ಎಂಬ ಗ್ರಂಥಾಂತ್ಯದಲ್ಲಿರುವ,

" ಶ್ರೀಮದ್ವಿಕ್ರಮಶೀಲ ದೇವಮಹಾವಿಹಾರೀಯ ರಾಜಗುರುಪಂಡಿತಭಿಕ್ಷು ಶ್ರೀಜನರಕ್ಷಿತ ಕೃತಾಬಾಲಾರ್ಕಸ್ತುತಿ ಟೀಕಾಸಮಾಪ್ತಾ " ಎಂಬುದರಿಂದ ಸಿದ್ಧವಾಗುವುದೆಂದೂ ಹೇಳುವರು. ಈ ಹೇಳಿಕೆಯ ಪರಿಶೀಲನದಿಂದ ಅಭಿನಂದನ

[k] Vincent A. Smith's Early History of India P. 414.

ನ ಆಶ್ರಯದಾತನಾದ ಹಾರವರ್ಷ (ಯುವರಾಜ)ನನ್ನು ವಿಕ್ರಮಶೀಲಾಪರನಾಮಕ ನಾದ ಧರ್ಮಪಾಲನ ಮಗ ದೇವಪಾಲನಾಗಿರಬೇಕೆಂದೂ ಇವನೇ ಹಾರವರ್ಷ ಯುವರಾಜಾಂಕಿತನೆಂದೂ ರಾಮಚರಿತದಲ್ಲಿ ವರ್ಣಿತವಾಗಿರುವ ಹಾರವರ್ಷನ ದಾನಶೌಂಡತೆಯ ವಿಚಾರದ ಶ್ಲೋಕಗಳು ಇದೇ ವಿಷಯವನ್ನು ಸಮರ್ಥಿಸುವು ವೆಂದೂ ಹೇಳಬೇಕಾಗಿದೆ. ಇದು ಬರೀ ಊಹೆಯತ್ರಾಣವಾದುದರಿಂದಲೂ ಚರ್ಚಾಸ್ಪದ ವಿಷಯಗಳಾದುದರಿಂದ ಸರಿಯಾದ ಪ್ರಮಾಣಗಳು ದೊರೆಯದೇ ಹೇಳುವುದು ಚಾರಿತ್ರಕ ಮತವಲ್ಲವೆಂದು ನಮಗೆನಿಸುತ್ತದೆ. ಇಲ್ಲಿ ಮತ್ತೊಂದು ಪ್ರಶ್ನೆಯು ಸಹಜವಾಗಿ ಹುಟ್ಟುವುದು. ಏನೆಂದರೆ ಪಾಲವಂಶದ ರಾಜರೆಲ್ಲರೂ "ಪಾಲ" ಎಂಬ ಹೆಸರನ್ನು ಕೊನೆಯಲ್ಲಿ ಸೇರಿಸಿಕೊಂಡು ಹೇಳಿಕೊಳ್ಳುತ್ತಿರು ವಾಗ ಇದಕ್ಕೆ ವಿರುದ್ಧವಾಗಿ "ವರ್ಷ" ಎಂದು ಕೊನೆಯಲ್ಲಿ ಸೇರಿಸಿ ಕರೆ ಯಿಸಿಕೊಂಡ ಬಗೆ ಹೇಗೆಂದು ಕೆಲವರು ವಿಚಾರಪರರಾಗಬಹುದು. ಇದರ ಸಾಧ ನೆಗೆ ಬಹುದೂರ ಹೋಗಬೇಕಾದುದಿಲ್ಲ. ಹೇಗೆಂದರೆ ಧರ್ಮಪಾಲನು ರಾಷ್ಟ್ರಕೂಟದ ಅರಸುಕನ್ಯೆಯಾದ ರನ್ನಾದೇವಿ ಯೆಂಬವಳನ್ನು ಮದುವೆಯಾದುದು ಚರಿತ್ರೆ ಯನ್ನೋದುವ ಪ್ರತಿಯೊಬ್ಬನಿಗೂ ತಿಳಿದ ವಿಷಯವಾಗಿರುವುದು. ರಾಷ್ಟ್ರಕೂಟದ ಅರಸರು ತಮ್ಮ ಹೆಸರಿನ ಕೊನೆಯಲ್ಲಿ 'ವರ್ಷ' ಎಂದು ಸೇರಿಸಿ ಕರೆಯಿಸಿಕೊಳ್ಳುವ ರೂಢಿಯು ಇದ್ದುದಾಗಿದೆ. ಅದರಂತೆ ದೇವಪಾಲನು ತನ್ನ ಸೋದರಮಾವನ ಮನೆಯಲ್ಲಿದ್ದಾಗ ಹಾರವರ್ಷನೆಂದು ಕರೆಯಿಸಿಕೊಂಡಿರಬೇಕೆಂದೂ ಸ್ಪಷ್ಟಪಡಿಸ ಬಹುದಾಗಿದೆ ‡ ಚೇದಿದೇಶದ ಕಲಚೂರಿ ಅರಸರಲ್ಲಿ ಎರಡನೆಯವನ ಹೆಸರು ಯುವರಾಜನೆಂದಿದೆ. ಇವನಿಗೂ ಹಾರವರ್ಷ (ಯುವರಾಜ) ನಿಗೂ ಯಾವ ಸಂಬಂಧವೂ ಇರದು.

ಡಾ|| ಬುಹಲರವರು (Buhler) ಅಭಿನಂದನನು ಕಾದಂಬರೀಕಥಾಸಾರ ಮತ್ತು ರಾಮಚರಿತವೆಂಬೆರಡು ಗ್ರಂಥಗಳನ್ನು ಬರೆದಿರುವುದಾಗಿ ಏಕಕರ್ತೃತ್ವವನ್ನು ಸ್ಥಾಪಿಸಿರುವರು$ ಆದರೆ ಕಾದಂಬರೀಕಥಾಸಾರಕಾರನು ಜಯಂತಭಟ್ಟನ ಮಗ ನೆಂದೂ ರಾಮಚರಿತಕಾರನು ಶತಾನಂದನನ ಮಗನೆಂದೂ ಹೇಳಿಕೊಂಡಿರುವು ದರಿಂದ ಭಿನ್ನಕರ್ತೃತ್ವವು ಏರ್ಪಡುವುದು. ಮಾದರಿಗೆ ಮೇಲಣ ಶ್ಲೋಕಗಳೇ ಸಾಕಾ ಗಿರುವುವು.



* Indian Antiquary Vol. XYI P. 257.

‡ Journal of oriental research Vol. III Pt. 1 P. 57 67

$ Indian antiquary Vol. P. 102.

ಧನಂಜಯ (೧)*

ಇವನ ಮಾತಾಪಿತೃಗಳಾರೆಂಬುದಾಗಲಿ ಎಲ್ಲಿಯವನೆಂಬುದಾಗಲಿ ತಿಳಿಯದು. ಇವನಿಗೆ ದ್ವಿಸಂಧಾನಕವಿಯೆಂಬಾಪರನಾಮವೂ ಇದ್ದಿತು. ಇವನು ಅಕಳಂಕ ಮತ್ತು ಪೂಜ್ಯಪಾದ ಜೈನಪ್ರಭೃತಿಗಳೊಡನೆ ಸೇರಿಸಿ ಹೇಳಲ್ಪಟ್ಟಿರುವುದರಿಂದ ಜಿನ ಧರ್ಮಾನುಯಾಯಿಯೆಂದು ತೋರುತ್ತದೆ. ಆದರೆ ಇವನ ಮಂಗಳಾಚರಣವಾದ.-

ಕೀರ್ತ್ಯಾ ಸರ್ವಲಯಂದಿಶೋ ದಶರಥಶ್ಲಾಘೀ ಸಮುದ್ಘೋದ್ಭವಃ
ಸಂಗ್ರಾಮಪ್ರಕಟೀಕೃತಾರ್ಜುನಯಶಃ ಶತ್ರುಘ್ನವೀರಾದೃತಃ
ವಲ್ಗಜ್ಜಾಂಬವತಾ ಪ್ರಶಂಸಿತಮಹಾಪ್ರಾಢಾಂಗದೋದ್ಭಾಸಿತಃ
ಶ್ರೀಮನ್ನೀಲರುಚಿಃ ಶಿವಂ ದಿಶತುವೋ ರಾಮೋಽಥಕೃಷ್ಣೋಽಥವಾ॥

ಎಂಬ ಶ್ಲೋಕದಲ್ಲಿ ರಾಮ ಮತ್ತು ಕೃಷ್ಣ ಶಬ್ದಪ್ರಯೋಗವಿರುವುದರಿಂದ ಇವನನ್ನು ಬ್ರಾಹ್ಮಣ ಕವಿಯೆಂದು ಕೆಲವರು ತರ್ಕಿಸುವರು. ಗ್ರಂಥಪರಿಶೀಲನದಿಂದ ರಾಮಾಯಣ ಮತ್ತು ಭಾರತ ಕಾರಣರಾದ ರಾಮಕೃಷ್ಣರ ಹೆಸರುಗಳನ್ನು ಪದ್ಧತಿಯನ್ನನುಸರಿಸಿ ಮಂಗಳಾಚರಣದಲ್ಲಿ ಸೂಚಿಸಿರುವನೆಂದೂ ಶ್ಲೇಷಸಾಧನದ ಮೂಲಕ ಗುಣವಿಶೇಷವನ್ನು ಹೇಳುವುದಕ್ಕಾಗಿ ಇಂತಹ ಪ್ರಯೋಗವಿರುವುದೆಂದೂ ಇವನು ಜಿನಧರ್ಮದವನೆಂಬುದಕ್ಕೆ ಈ ಕಾವ್ಯದ ಮೊದಲನೆಯ ಶ್ಲೋಕದಲ್ಲಿ ಇಪ್ಪತ್ತನೆಯ ತೀರ್ಥಂಕರನಾದ ಸುವ್ರತನನ್ನು ಕೊಂಡಾಡಿರುವನೆಂದೂ ಇದು ಜೈನಕಾವ್ಯವಾಗಿರದೆ ಇದ್ದರೆ ವಿನಯಚಂದ್ರನ ಶಿಷ್ಯನಾದ ನೇಮಿಚಂದ್ರನು ವಿಸ್ತೃತಟೀಕೆಯನ್ನು ಬರೆಯುತ್ತಿರಲಿಲ್ಲವೆಂದೂ ಹೇಳಬೇಕಾಗಿದೆ.

ಕಾಲ:—ಇವನಾವಕಾಲದವನೆಂಬ ವಿಚಾರವಾಗಿ ಹೀಗೆಯೇ ಸರಿಯೆಂದು ನಿರ್ಧರಿಸಿ ಹೇಳಲಾಗದಿದ್ದರೂ ಬಾಹ್ಯಸ್ರಮಾಣಂಗಳಿಂದ ಸಾಧಿಸಬಹುದಾಗಿದೆ. ಹೇಗೆಂದರೆ ಧ್ವನ್ಯಾಲೋಕಕಾರನಾದ ಆನಂದವರ್ಧನನು ಇವನನ್ನು ಹೇಳಿರುವುದರಿಂದಲೂ ಪ್ರಸಿದ್ಧಾಲಂಕಾರಿಕನಾದ ವಾಮನನು ಇವನನ್ನು ಹೇಳದೆ ಇರುವುದರಿಂದ ಕ್ರಿ. ಶ. ೮ನೆಯ ಶತಮಾನದವನಾದ ವಾಮನನಿಗಿಂತ ಈಚಿನವನೂ ಕ್ರಿ. ಶ. ೯ನೆಯ ಶತಮಾನದವನಾದ ಆನಂದವರ್ಧನನಿಗಿಂತ ಪ್ರಾಚೀನನೂ ಎಂದರೆ ಕ್ರಿ. ಶ. ೯ನೆಯ ಶತಮಾನದ ಪೂರ್ವಾರ್ಧದವನೂ ಎಂದು ಹೇಳುವುದಾದರೆ ತಪ್ಪಾಗದು.

ಗ್ರಂಥ:—ಇವನು ದ್ವಿಸಂಧಾನಕಾವ್ಯ, ನಾಮಮಾಲಾ ಎಂಬೆರಡು ಗ್ರಂಥಗಳನ್ನು ಬರೆದಿರುವುದಾಗಿ:—

* ವಿಷಾಪಹರಣಸ್ತೋತ್ರಕಾರನಾದ ಧನಂಜಯನು ಇವನಲ್ಲ.

ದ್ವಿಸಂಧಾನೇಽಪುನಃತಾಂ ಸ ತಾಂ ಚಕ್ರೇ **ಧನಂಜಯಃ**
ಯಯಾಜಾತಂಫಲಂ ತಸ್ಯ ಸತಾಂ ಚಕ್ರೇ **ಧನಂಜಯಃ**
ಕವೇರ್ಧನಂಜಯಸ್ಯೇಯಂ ಸತ್ಕವೀನಾಂ ಶಿರೋಮಣೇಃ
ಪ್ರಮಾಣಂನಾಮಮಾಲೇತಿ ಶ್ಲೋಕಾನಾಂಚ ಶತದ್ವಯಂ ॥ †

ಎಂಬ ಈ ಶ್ಲೋಕಗಳಿಂದ ಸ್ಪಷ್ಟಪಡುತ್ತದೆ.

"ಇತಿ ಶ್ರೀಧನಂಜಯವಿರಚಿತೇ..... ...ರಾಘವಪಾಂಡವೀಯಾ‡ಪರನಾಮ್ನಿದ್ವಿಸಂಧಾನಕಾವ್ಯೇ.. ....."ಎಂಬ ಪ್ರತಿಸರ್ಗಾಂತಗದ್ಯದಿಂದ ಈ ದ್ವಿಸಂಧಾನಕಾವ್ಯಕ್ಕೆ ರಾಘವಪಾಂಡವೀಯಾಪರನಾಮವಿದ್ದಿತಾಗಿ ಸ್ಪಷ್ಟಪಡುತ್ತದೆ. ಇದರಲ್ಲಿ ಹದಿನೆಂಟು ಸರ್ಗಗಳಿರುವವು.

ದ್ವಿಸಂಧಾನ ಕಾವ್ಯವೆಂಬ ಹೆಸರಿನ ಬೇರೊಂದು ಕಾವ್ಯವನ್ನು ದಂಡಿಯೊಬ್ಬನು ಬರೆದಿರುವುದಾಗಿಯೂ ಇದರ ಶ್ಲೋಕಗಳನ್ನು ಭೋಜರಾಜನು ತಾನು ಬರೆದಿರುವ ಶೃಂಗಾರ ಪ್ರಕಾಶದಲ್ಲಿ ಉದಾಹರಿಸಿಕೊಂಡಿರುವುದಾಗಿಯೂ ತಿಳಿಯು ಬರುತ್ತದೆ.$ ಈ ಕಾವ್ಯವು ಯಾವುದೆಂಬುದು ತಿಳಿಯದು.

ಸಭಂಗಾಭಂಗಶ್ಲೇಷ ಪ್ರಧಾನವಾದ ಈ ಕಾವ್ಯವನ್ನು ರಾಮಾಯಣ ಮತ್ತು ಭಾರತ ಕಥೆಗಳನ್ನು ಅನುಸಂಧಾನಮಾಡಿ ಅರ್ಧಕೆಡದಂತೆ ಶ್ಲೇಷೆಯನ್ನು ಕಲ್ಪಿಸಿ ಉಪಮಾನೋಪಮೇಯಗಳ ಮೂಲಕಸಾಧಿಸಿರುವನಾದುದರಿಂದ ದ್ವಿಸಂಧಾನಕಾವ್ಯವೆಂಬ ಹೆಸರು ಬಂಗಂತೆಯೂ ಇದಕ್ಕೆ ಬಾರೀನಾಥನು ಸಂಕ್ಷೇಪ ಟೀಕೆಯನ್ನು ಬರೆದಿರುವುದಾಗಿಯೂ ತಿಳಿಯಬರುತ್ತದೆ.

ರಾವಣನ ವಧೆಯಾದ ಅನಂತರ ರಾಮನು ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾದನೆಂಬ ವರೆಗಿನ ರಾಮಾಯಣ ಕಥೆಯನ್ನೂ ಜರಾಸಂಧನ ವಧೆಯಾದ ನಂತರ ಕೃಷ್ಣನು ಧನಂಜಯನೊಡನೆ ಹಸ್ತಿನಾಪುರಕ್ಕೆ ಬಂದು ಕೌರವರನ್ನು ಹತಮಾಡಿ ಪಾಂಡವರು ಪಟ್ಟಾಭಿಷಿಕ್ತರಾದರೆಂಬ ಭಾರತದ ಕಥೆಯನ್ನೂ ತೆಗೆದುಕೊಂಡು ಧನಂಜಯಶಬ್ದಕ್ಕೆ (ಧನಂಜಯಃ) ರಾಮ ಮತ್ತು ಅರ್ಜುನ (ಧನಂಜಯ) ಎಂಬ ಅರ್ಥವನ್ನು ಕಲ್ಪಿಸಿ ಹೇಳಿರುವನು. ಹೀಗೆ ಹೇಳುವುದರಲ್ಲಿ ತಾನು ಹೇಳಬೇಕೆನ್ನುವ ಶ್ಲೇಷಪೋಷಣೆಗೆ ತಕ್ಕುದಾದ ವಿಷಯಸಮರ್ಥನ ಮಾತ್ರವೇ ಕಂಡು

ಜಲ್ಹಣನಸೂಕ್ತಿಮುಕ್ತಾವಳಿ ಮತ್ತು ಸುಭಾಷಿತರತ್ನಹಾರಾವಳಿ.

† ದ್ವಿಸಂಧಾನಕಾವ್ಯದ ಮುನ್ನುಡಿ ಪು. ೧.

‡ ಕವಿರಾಜಕೃತರಾಘವಪಾಂಡವೀಯವು ಇದಲ್ಲ

$ The Mythic Society Journal Vol. XIII P. 6.

ಬಂದು ಕಥಾಸಂವಿಧಾನ ಚತುರತೆಯೂ ಶೈಲಿಯಮಾರ್ದವವೂ ಶ್ಲೇಷಶ್ಲಿಷ್ಟತೆಯಿಂದ ರಸಮಾಧುರ್ಯವೂ ಜಾರಿದಂತಾಗಿದೆ. ಶ್ಲೇಷೆಯ ಸಂಧಾನವೂ ಅಷ್ಟು ಹಿರಿಯದೆನಿಸಿರುವುದಿಲ್ಲ. ಕಥಾನಕ ಪೋಷಣೆಯೂ ಕ್ರಮವರಿತಿಲ್ಲ. ಏಕಾಕ್ಷರ ದ್ವ್ಯಕ್ಷರ ತ್ರ್ಯಕ್ಷರ ಶ್ಲೇಷಾರ್ಥಸಾಧನದಲ್ಲಿ ಗ್ರಂಥವೆಲ್ಲವನ್ನೂ ಮುಗಿಸಿರುವನು.

ದ್ವಿಸಂಧಾನ ಕಾವ್ಯದ ಮುನ್ನುಡಿಯಲ್ಲಿ ಹೇಳಿರುವುದಾದ: —

ಪ್ರಮಾಣಮಕಲಂಕಸ್ಯ ಪೂಜ್ಯಪಾದಸ್ಯಲಕ್ಷಣಂ
ದ್ವಿಸಂಧಾನಕವೇಃ ಕಾವ್ಯಂ ರತ್ನತ್ರಯಮಕಂಟಕಂ ॥

ಎಂಬ ಶ್ಲೋಕವು ಧನಂಜಯ ನಿಘಂಟುವಿನಲ್ಲಿ ಕಂಡುಬರುವುದರಿಂದಲೂ ಕವಿಯ ಹೇಳಿಕೆಯಂತೆ ಅದರಲ್ಲಿ ಇನ್ನೂರು ಶ್ಲೋಕಗಳಿರುವುದರಿಂದ ದ್ವಿಸಂಧಾನ ಕಾವ್ಯಕಾರನೇ ಈ ನಿಘಂಟುವಿನ ಕರ್ತೃವಾಗಿರಬೇಕೆಂದೂ ನಾಮಮಾಲಾ ಎಂಬುದಕ್ಕೆ ಬದಲು ಧನಂಜಯ ನಿಘಂಟುವೆಂದು ಕರೆದಿರಬೇಕೆಂದೂ ಸ್ಪಷ್ಟವಾಗುತ್ತದೆ. ಇವನು ಮತ್ತಾವುದಾದರೂ ಗ್ರಂಥಗಳನ್ನು ಬರೆದಿರುವನೆಂಬುದು ತಿಳಿಯದು.

ದ್ವಿಸಂಧಾನಕಾವ್ಯದ ಮಾದರಿಯ ತೋರಾಣಿಕೆಗಾಗಿ ಎರಡು ಶ್ಲೋಕಗಳನ್ನು ಬರೆಯುವೆವು.

ಪ್ರಭಾವಿರಾಮಸ್ಯ ಸಪತ್ನಸಂತಕೇಃ
ಶರಾಸನಾಭ್ಯಾಸಪದಂ **ಕರೀಟಿನಃ**
ಬಹಿರ್ಯತೋಽದ್ಯಾಪಿ ನಿಜಾಯ್ಯದೂರಗಂ
ಮದಂ ವಿಮುಂಚಂತಿ ಶರಂ ನ ಧನ್ವಿನಃ ॥ ೧—೧೭

ಕೋವಾಕವಿಃ ಪುರವಿಮಾಂ ಪರಮಾರ್ಥವೃತ್ತ್ಯಾ
ಶಕ್ನೋತಿ ವರ್ಣಯಿತುಮತ್ರ ವಿನಾರ್ಣಯೇನ
ನಿತ್ಯಂ ವಿಧಿಃ ಸತತಸಂನಿಹಿತೋ ವಿಭೂತಿ
ಮನ್ಯಾದೃಶಂ ಸೃಜತಿ ಯತ್ರ **ಧನಂಜಯಾಖ್ಯಂ** ॥ ೧—೧೭೭

ಆನಂದವರ್ಧನ

ಇವನು ಬ್ರಾಹ್ಮಣನು. ಕಾಶ್ಮೀರದವನು. ನೋನೋಪಾಧ್ಯಾಯನಮಗನು. ಕೆಲವುಕಡೆ ಜೋನೋಪಾಧ್ಯಾಯನೆಂದಿರುವುದು. ದೇವೀಶತಕಕ್ಕೆ ವ್ಯಾಖ್ಯಾನವನ್ನು ಬರೆದಿರುವ ಹೇಮಚಂದ್ರನು " ನೋನಸುತಃ ಶ್ರೀಮದಾನಂದವರ್ಧನೋನಾಮ "

ಎಂದೂ, ಕಯ್ಯಟನು 'ಸೋನಸುತಃ' ಎಂದು ಹೇಳಿರುವುದರಿಂದ ಇವನು ಸೋನೋಪಾಧ್ಯಾಯನಮಗನೆಂಬುದೇ ಸ್ಪಷ್ಟವು.|

ಕಾಲ:—ಇವನು ಕ್ರಿ. ಶ. ೮೫೫-೮೮೪ ರವರೆಗೆ ಕಾಶ್ಮೀರದಲ್ಲಿ ಆಳಿದ ಅವಂತಿವರ್ಮನ ಸಮಕಾಲೀನನೂ ಮತ್ತು ಆಸ್ಥಾನಪಂಡಿತನೂ ಆಗಿದ್ದನು.$

ಗ್ರಂಥಗಳು:—ಇವನು (೧) ಧ್ವನ್ಯಾಲೋಕ (೨) ವಿಷಮಬಾಣಲೀಲಾ (೩) ಅರ್ಜುನಚರಿತ (೪) ದೇವೀಶತಕ (೫) ತತ್ವಾಲೋಕ ಎಂಬ ಗ್ರಂಥಗಳನ್ನು ಬರೆದಿರುವನು. ಇವಲ್ಲದೆ ಹರವಿಜಯ, ಮತಪರೀಕ್ಷಾ ಎಂಬ ಗ್ರಂಥಗಳನ್ನು ಬರೆದಿರುವುದಾಗಿ ಕಾವ್ಯಾಲೋಕದಲ್ಲಿ ಹೇಳಲ್ಪಟ್ಟಿರುವುದಲ್ಲದೆ ಮೂರನೆಯ ಉದ್ಯೋತದಲ್ಲಿ 'ಮಧುಮಥನವಿಜಯ' ಎಂಬ ಕಾವ್ಯದಿಂದ " ತದ್ಯಥಾಮಧುಮಥನವಿಜಯೇ ಪಾಂಚಜನ್ಯೋಕ್ತಿಷು " ಎಂದು ಹೇಳಿಕೊಂಡಿರುವ ಉದಾಹರಣೆಯೊಂದು ದೊರಕುವುದು.

ಧ್ವನ್ಯಾಲೋಕ ವ್ಯಾಖ್ಯಾನಕಾರನಾದ ಅಭಿನವಗುಪ್ತನು ಧ್ವನ್ಯಾಲೋಕವನ್ನು ಕಾವ್ಯಾಲೋಕ ಅಥವಾ ಸಹೃದಯಾಲೋಕವೆಂದು ಕರೆದಿರುವನು.

ಧ್ವನ್ಯಾಲೋಕವನ್ನು 'ಕಾರಿಕೆ' ಎಂತಲೂ 'ವೃತ್ತಿ' ಎಂತಲೂ ಎರಡು ಭಾಗಗಳನ್ನಾಗಿ ಮಾಡಿಕೊಂಡು ಇವುಗಳೆರಡರ ಕರ್ತೃವು ಬೇರೆ ಬೇರೆಯೆಂದು ಹೇಳುವರು. ಕಾರಿಕೆ ಎಂದರೆ ಶ್ಲೋಕಗಳನ್ನು ಹೇಳಿ ಧ್ವನಿಯೇ ಮುಖ್ಯವೆಂದು ಹೇಳುವುದು. 'ವೃತ್ತಿ' ಎಂದರೆ ಸಾಧಾರಣವಾಗಿ ಗದ್ಯರೂಪದಲ್ಲಿ ಎಲ್ಲರಿಗೂ ತಿಳಿಯುವಂತೆ ಉದಾಹರಣೆಗಳ ಮೂಲಕ ಸ್ಪಷ್ಟಗೊಳಿಸುವುದು. ಮಹಾವ್ಯಾಖ್ಯಾತೃವಾದ ಅಭಿನವಗುಪ್ತನು ಕಾರಿಕಾಕಾರನೇ ಬೇರೆ ವೃತ್ತಿಕಾರನೇ ಬೇರೆ ಎಂದು ಹೇಳಿರುವನು.

ಪ್ರೊ. ಜಾಕೋಬಿಯವರು ಕಾರಿಕೆಗಳ ಕರ್ತೃವಾದ ಧ್ವನಿಕಾರನು ಆನಂದವರ್ಧನನಿಗಿಂತ ಪ್ರಾಚೀನನಾಗಿರಬೇಕೆಂದೂ ಆನಂದವರ್ಧನನು ವೃತ್ತಿಕಾರನೆಂದೂ ಹೇಳುವರು.x

---

ಇವನು ಮಹಾಭಾಷ್ಯವ್ಯಾಖ್ಯಾತೃವಾದಕೈಯ್ಯಟನಲ್ಲ.

| S. K. De's Sanskrit Poetics P. 117.

$ ರಾಜತರಂಗಿಣೀ ೫.೩೪.

x Sanskrit Poetics P. 107 –108

ಅಭಿನವಗುಪ್ತನು ಬೇರೊಂದೆಡೆಯಲ್ಲಿ ಕಾರಿಕಾಕಾರನು ಹೇಳದೆ ಇರುವ ಕೆಲವು ಅಂಶಗಳನ್ನು 'ವೃತ್ತಿ'ಕಾರನು ಹೇಳಿರುವನೆಂದೂ ವೃತ್ತಿಕಾರನ ಕೆಲವು ಅಂಶಗಳು 'ಕಾರಿಕಾ'ಕಾರನಲ್ಲಿ ಕಂಡುಬರುವದಿಲ್ಲವೆಂದೂ ಒಕ್ಕಣಿಸಿರುವನು ಇದರಿಂದ ಕಾರಿಕಾಕಾರನು ಬೇರೆ ಯಾವನೋ ಇರಬೇಕೆಂದೂ, ಆನಂದವರ್ಧನನು ವೃತ್ತಿಯನ್ನು ಬರೆಯುವುದಕ್ಕಾಗಿ ಅಲ್ಲಲ್ಲಿ ದೊರೆತುದಾದ ಕಾರಿಕೆಗಳನ್ನು ಜೊತೆಗೂಡಿಸಿ ವಿಶದವಾಗಿ ತಿಳಿಯುವಂತೆ ವೃತ್ತಿಗಳನ್ನು ಬರೆದಿರಬಹುದಾಗಿಯೂ ಕಾಲಕ್ರಮವಲ್ಲಿ ಕಾರಿಕಾಕಾರನು ಮರೆಯಲ್ಪಟ್ಟು ಧ್ವನಿಯ ವಿಚಾರವನ್ನು ಕಾರಿಕೆಯೊಡನೆ ವಿಶದೀಕರಿಸಿ ಹೇಳಿದ ಆನಂದವರ್ಧನನನ್ನೇ ಧ್ವನಿಕಾರನೆನ್ನುವುದು ರೂಢಿಯಲ್ಲಿ ಬಂದಹಾಗೆ ತೋರುತ್ತದೆ ಇದರಿಂದ ಧ್ವನಿಯೇ ಕಾವ್ಯಾತ್ಮಕವೆನ್ನುವ ಜಿಜ್ಞಾಸುಗಳು ಆನಂದವರ್ಧನನಿಗೆ ಪ್ರಾಚೀನರಾಗಿರಬೇಕೆಂದೂ ಭಿನ್ನಾಭಿಪ್ರಾಯಗಳಿದ್ದ ಆ ಕಾಲದಲ್ಲ ಸಕಲವನ್ನೂ ದೂರೀಕರಿಸಿ ಧ್ವನಿಯೇ ಮುಖ್ಯವೆಂಬ ಸಿದ್ಧಾಂತಗೊಳಿಸಿದ ಆನಂದವರ್ಧನನನ್ನೆ ಧ್ವನಿಕಾರನೆಂದು ಹೆಳಲಾಡುದಾಗಿ ಬೊಧೆಯಾಗುತ್ತದೆ

ಜಲ್ಹಣನೂ ಮತ್ತು ಸಮುದ್ರಬಂಧನೂ ಆನಂದವರ್ಧನನ್ನೆ ಧ್ವನಿಕಾರನೆಂದಿರುವರು

ವ್ಯಕ್ತಿವಿವೇಕಕಾರನಾದ ಮಹಿಮಭಟ್ಟನು 'ಧ್ವನಿಕಾರ' ನೆಂಬ ಸಾಮಾನ್ಯ ಶಬ್ದಪ್ರಯೋಗದಿಂದ ಆನಂದವರ್ಧನನನ್ನು ಹೆಳಿರುವನು ಈಚಿನ ಲಾಕ್ಷಣಿಕರೆಲ್ಲರೂ ಒಬ್ಬರನ್ನೊಬ್ಬರು ಅನುಸರಿಸಿ ಹೇಳಿರುವ ಹಾಗೆ ತೋರುತ್ತದೆ.

ಪ್ರೊ ಜಾಕೋಬಿಯವರು ಧ್ವನ್ಯಾಲೋಕಕ್ಕೆ ಬರೆದಿರುವ ಪ್ರಸ್ತಾವನೆಯಲ್ಲಿ ಕಾವ್ಯಕ್ಕೆ ಧ್ವನಿಯೆ ಆತ್ಮವೆಂದಿರುವುದರ ಹೊರ್ತು ನಿಜವಾದ ಧ್ವನಿಕಾರನು ಯಾರು? ಯಾವಕಾಲವವನೆಂಬುದನ್ನು ನಿಷ್ಕರ್ಷೆಮಾಡಿ ಹೇಳಿರುವುದಿಲ್ಲ ಅಭಿನವಗುಪ್ತನೂ ಹೆಳಿರುವುದಿಲ್ಲ ಕಲ್ಹಣನ ರಾಜತರಂಗಿಣಿಯಲ್ಲಿ ಈ ಧ್ವನಿಕಾರನು ಮನೋರಥನ ಸಮಕಾಲೀನನೆಂದು

ಮನೋರಥಃ ಶಂಖದತ್ತಃ
ಚಟಕಸ್ತಂಧಿಮಾಂಸ್ತಥಾ
ಬಭೂವುಃ ಕವಯಸ್ತಸ್ಯ
ವಾಮನಾದ್ಯಾಶ್ಚ ಮಂತ್ರಿಣಃ ॥[1] ಎಂದು ಹೇಳಲ್ಪಟ್ಟಿದೆ.

ಧ್ವನ್ಯಾಲೋಕದಲ್ಲಿ ಕಂಡುಬರುವುದಾದ —

[1] ರಾಜತರಂಗಿಣೀ ೪—೪೭೭

ಯಸ್ಮಿನ್ನಸ್ತಿ ನ ವಸ್ತು ಕಿಂಚನ ಮನಃ ಪ್ರಹ್ಲಾದಿ ಸಾಲಂಕೃತಿ
ವ್ಯುತ್ಪನ್ನೈ ರಚಿತಂ ಚ ನೈವ ವಚನೈರ್ವಕ್ರೋಕ್ತಿಶೂನ್ಯಂ ಚ ಯತ್
ಕಾವ್ಯಂ ತದ್ಧ್ವನಿನಾ ಸಮನ್ವಿತಮಿತಿ ಪ್ರೀತ್ಯಾ ಪ್ರಶಂಸಂಜದೋ
ನೋ ವಿದ್ಮೋಭಿದಧಾತಿ ಕಿಂ ಸುಮತಿನಾ ಪೃಷ್ಠಃ ಸ್ವರೂಪಂ ಧ್ವನೇಃ ॥

ಎಂಬ ಶ್ಲೋಕಕ್ಕೆ ಅಭಿನವಗುಪ್ತನು ವ್ಯಾಖ್ಯಾನವನ್ನು ಬರೆಯುವಾಗ

" ತಥಾಚಾನ್ಯೇನೇತಿ ಗ್ರಂಥಕೃತ್ಸಮಾನಕಾಲ ಭಾವಿನೈವ ಮನೋರಥ ನಾಮ್ನಾ ಕವಿನಾ " ಎಂದು ಹೇಳಿರುವನು. ಇದರಿಂದ ಮನೋರಥನೆಂಬ ಕವಿಯು ಆನಂದವರ್ಧನನ ಸಮಕಾಲೀನನೆಂದೂ ಈ ಶ್ಲೋಕವು ಮನೋರಥನ ದೆಂದೂ ಸ್ಪಷ್ಟಪಡಿಸಿದಂತಾಗುವುದು.

ಡಾ|| ಎಸ್. ಕೆ. ಡೇಯವರು ಮನೋರಥನೆಂಬುವನು ಧ್ವನ್ಯಾಲೋಕ ಕಾರನಾದ ಆನಂದವರ್ಧನನ ಸಮಕಾಲೀನನೆಂದು ಹೇಳುವುದರ ಮೂಲಕ ಮೇಲಣ ಅಭಿನವಗುಪ್ತನ ಅಭಿಪ್ರಾಯವನ್ನೇ ಸಮರ್ಥಿಸಿ ಬರೆದಿರುವರು.§

ಮೇಲೆ ಹೇಳಿದ ಶ್ಲೋಕಾಧಾರದಿಂದ ಮನೋರಥರಿಬ್ಬರೆಂದು ಕೆಲವರು ತರ್ಕಿಸುವರು. ಅದು ಸಮಂಜಸನೆನಿಲಾಗುವುದಿಲ್ಲ. ಏಕೆಂದರೆ ಅಭಿನವಗುಪ್ತನು " ತಥಾಚಾನ್ಯೇನೇತಿ ಗ್ರಂಥಕೃತ್ಸಮಾನಕಾಲಭಾವಿನೈವ ಮನೋರಥನಾಮ್ನಾ ಕವಿನಾ " ಎಂದು ಮೇಲೆ ಹೇಳಿರುವನಲ್ಲವೆ! 'ಗ್ರಂಥಕೃತ್' ಎಂಬುದಕ್ಕೆ ಅಭಿನವ ಗುಪ್ತನ ಅಭಿಪ್ರಾಯವು ಆನಂದವರ್ಧನನೆಂದೂಹಿಸುವುದಾದರೆ ಮನೋರಥನು ಆನಂದವರ್ಧನನ ಸಮಕಾಲೀನನೂ ಕ್ರಿ. ಶ. ೯ನೆಯ ಶತಮಾನದಲ್ಲಿದ್ದವನೆಂದೂ ಹೇಳಬೇಕಾಗುವುದು. ಇದರಿಂದ ಕಲ್ಹಣನು ಹೇಳುವ ಕಾಲಕ್ಕಿಂತ ಕೊಂಚಕಾಲ ವಿಳಂಬವಿರಬೇಕೆಂದೂ ಮನೋರಥನೆಂಬ ಹೆಸರಿನ ಇಬ್ಬರೆನ್ನುವುದಕ್ಕೆ ಬದಲು ಏಕವ್ಯಕ್ತಿತ್ವವನ್ನು ಹೇಳಿದಂತಾಗುವುದು.

" ಧ್ವನಿಕಾರಿಕಾ " ಕಾರನೂ ಮತ್ತು " ವೃತ್ತಿ " ಕಾರನೂ ಆನಂದವರ್ಧನನೆಂದು ಅಭಿನವಗುಪ್ತನು ಹೇಳಿರುವ ಭರತನ ನಾಟ್ಯಶಾಸ್ತ್ರವ್ಯಾಖ್ಯಾನವಾದ " ಅಭಿನವಭಾರತೀ " ಎಂಬ ಗ್ರಂಥದಿಂದ ಸ್ಪಷ್ಟಪಡುತ್ತಾದುದರಿಂದ ಕಾರಿಕಾ ಕಾರನೂ ವೃತ್ತಿಕಾರನೂ ಭಿನ್ನ ಭಿನ್ನವ್ಯಕ್ತಿಗಳೆಂದು ಹೇಳುವ ಪ್ರೊ. ಜಾಕೋಬಿ ಯವರ ಮತವನ್ನು ಪುಷ್ಟೀಕರಿಸಲಾಗುವುದಿಲ್ಲ.

ಜಯಾಪೀಡನ ಕಾಲದಲ್ಲಿ ಮನೋರಥನೆಂಬ ಕವಿಯು ಇದ್ದುದಾಗಿ ಕಲ್ಹಣನು ಒಕ್ಕಣಿಸಿಕೊಂಡಿರುವನು. ಪ್ರೊ. ಸ್ಟೆಕೊನೋ (Prof. Sten Konow)

§ S. K. De's Sanskrit Poetics Vol 1 P. 112-113.

ರವರು ಜಯಾಪೀಡನ ಕಾಲವನ್ನು ಕ್ರಿ. ಶ. ೭೭೬-೮೦೭ರ ವರೆಗೆಂದಿರುವರು. ಈ ಮನೋರಥನೇ ಕ್ರಿ. ಶ. ೮೦೭-೮೫೯ರವರೆಗೆ ಜಯಾಪೀಡನ ಅನಂತರ ಆಳಿದ ಲಲಿತಾಪೀಡನ ಆಳ್ವಿಕೆಯಲ್ಲಿ ಮಂತ್ರಿಪದವಿಗೆ ಏರಿಸಲ್ಪಟ್ಟಿದ್ದು ಕೊನೆಗೆ ಲಲಿತಾಪೀಡನ ದುಷ್ಟತನಕ್ಕೆ ಮನನೊಂದು ಮಂತ್ರಿಪದವಿಯನ್ನು ಬಿಟ್ಟು ಬಿಟ್ಟುದಾಗಿ ಹೇಳಲ್ಪಟ್ಟಿದೆ. ಈ ವಿಚಾರವಾಗಿ ಕಲ್ಹಣನು.—

ಮಾನೀ ಮನೋರಥೋ ಮಂತ್ರೀ
ಪರಂ ಪರಿಜಹಾರ ತಂ
ಅಶಕ್ನುವ ಯಮಯಿತುಂ
ಮಧ್ಯವಾತಪರಾಙ್ಮುಖಃ ॥$

ಎಂದು ಹೇಳಿರುವನು. ಆನಂದವರ್ಧನನು ಕ್ರಿ. ಶ. ೮೫೫-೮೮೪ರಲ್ಲಿ ಆಳಿದ ಅವಂತಿವರ್ಮನ ಆಶ್ರಯದಲ್ಲಿದ್ದುದಾಗಿ ತಿಳಿದುಬರುತ್ತದೆ. ಕ್ರಿ. ಶ. ೭೭೬-೮೫೯ರ ವರೆಗೆ ಆಳಿದ ಜಯಾಪೀಡ ಮತ್ತು ಲಲಿತಾಪೀಡನ ಸಮಕಾಲೀನನಾದ ಮನೋರಥನೇ ಕ್ರಿ. ಶ. ೮೫೫-೮೮೪ ರವರೆಗೆ ಆಳಿದ ಅವಂತಿವರ್ಮನ ಆಳ್ವಿಕೆಯಲ್ಲಿದ್ದ ಆನಂದವರ್ಧನನ ಸಮಕಾಲೀನನೆಂದು ಹೇಳುವುದು ಸಾಧುವಾದವಾಗಿ ತೋರುತ್ತದೆ ಹೇಗೆಂದರೆ ಮನೋರಥಕವಿಯ ಸಮಕಾಲೀನನಾದ ಜಯಾಪೀಡನ ಕಾಲವು ಕ್ರಿ ಶ. ೮೦೭ ಕ್ಕೆ ಮುಕ್ತಾಯವಾಗುತ್ತದೆ. ಈ ಹೊತ್ತಿಗೆ ಮನೋರಥನ ವಯಸ್ಸು ಸುಮಾರು ಮವ್ವತ್ತುವರ್ಷಗಳಾದರೂ ಆಗಿರಬೇಕು. ಹೀಗೆ ಇದು ೮೦೭-೮೫೯ ರವರೆಗೆ ಆಳಿದ ಲಲಿತಾಪೀಡನ ಕಾಲದಲ್ಲಿ ಮಂತ್ರಿಪದವಿಯಲ್ಲಿದ್ದು ನಿವೃತ್ತನಾಗಿರಬೇಕಾದರೆ ಮನೋರಥನಿಗೆ ೪೦ವರ್ಷಗಳಾಗಿರಬೇಕು. ಅನಂತರ ತನಗೆ ೭೦-೭೫ ವರ್ಷಗಳಾಗುವವರೆಗೂ ರಾಜಕೀಯಪರಿಸ್ಥಿತಿಯನ್ನು ಬಿಟ್ಟುಬಿಟ್ಟು ಧರ್ಮಮಾರ್ಗೈಕರತನಾಗಿದ್ದು ಶೇಷಾಯುಷ್ಯಮಂಕಳೆದಿರಬೇಕು. ಅಥವಾ ಅವಂತಿವರ್ಮನು ರಾಜ್ಯಕ್ಕೆ ಬಂದುದನ್ನು ನೋಡಿ ಕೆಲವುಕಾಲದ ಅನಂತರ ಮೃತನಾಗಿರಬೇಕು ಎಂದು ತೋರುತ್ತದೆ. ಧ್ವನ್ಯಾಲೋಕವನ್ನು ಆನಂದವರ್ಧನನು ತಾನು ವಯೋವೃದ್ಧನಾದನಂತರ ಬರೆದಿರಬೇಕಾಗಿ ಬೋಧೆಯಾಗುತ್ತದೆ. ಏಕೆಂದರೆ ಇವನ ಇತರ ಗ್ರಂಥಸ್ಥ ಶ್ಲೋಕಗಳೆಲ್ಲವೂ ಇದರಲ್ಲಿ ಉದಾಹೃತವಾಗಿವೆ ಆದುದರಿಂದ ಆನಂದವರ್ಧನನು ಧ್ವನ್ಯಾಲೋಕವನ್ನು ಬರೆಯುವವೇಳೆಗೆ ಆನಂದವರ್ಧನನಿಗೆ ಸುಮಾರು ೪೦-೫೦ ವರ್ಷ ವಯಸ್ಸಾಗಿರಬೇಕು. ಅವಂತಿವರ್ಮನು ಸಿಂಹಾಸನಕ್ಕೆ ಬರುವ ವೇಳೆಗೆ ಆನಂದವರ್ಧನನಿಗೆ ಸುಮಾರು ೩೦ ವರ್ಷಗಳಾದರೂ ಆಗಿರಬೇಕು. ಹೀಗೆ ಹೇಳುವದರಿಂದ ತರುಣ ಆನಂದವರ್ಧನನು ವಯೋಗಳಿತನಾಗಿದ್ದ ಮನೋ

$ ರಾಜತರಂಗಿಣೀ ೪—೬೭೧.

ರಥನಿಗೆ ಸಮಕಾಲೀನನಾಗಿದ್ದನೆಂದು ನಿಶ್ಚಯಪಡುವದು. ಆದುದರಿಂದ "ಗ್ರಂಥ ಕೃತ್" ಎಂಬುದಕ್ಕೆ ಕಾರಿಕಾಕಾರನೆಂದು ಅರ್ಥಮಾಡುವುದು ಸರಿಯಲ್ಲ. ಈ ಕಾರಣಗಳಿಂದ ಕಲ್ಹಣನು ಹೇಳುವ ಮನೋರಥನೂ ಅಭಿನವಗುಪ್ತನು ಹೇಳುವ ಮನೋರಥನೂ ಇಬ್ಬರೂ ಒಂದೇ ವ್ಯಕ್ತಿಯೆಂದೂ ಅವನು ಆನಂದವರ್ಧನನ ಸಮಕಾಲೀನನೆಂದೂ ಸ್ಪಷ್ಟವಾಗುವುದು.* ಈ ಮನೋರಥನಲ್ಲದೆ "ಅವಂತಿಸುಂದರೀ ಕಥಾಸಾರ" ವೆಂಬ ಗ್ರಂಥದಲ್ಲಿ 'ಭಾರವಿ' ಎಂಬವನಿಗೆ ಮೂರುಜನ ಮಕ್ಕಳೆಂದೂ ಅವರಲ್ಲಿ ಮಧ್ಯಮನಹೆಸರುಮನೋರಥನೆಂದೂ ಹೇಳಲ್ಪಟ್ಟಿದೆ.§ ಇವನು ಹೆಸರು ಮಾತ್ರದಿಂದ ಪ್ರಸಿದ್ಧನು. ಮೇಲೆ ಹೇಳಿರುವ ಮನೋರಥನು ಮಹಾ ಕವಿ ಆದುದರಿಂದ ಇವರಿಗೂ ಅವನಿಗೂ ಯಾವ ಸಂಬಂಧವೂ ಇರದು. ಸಂಬಂಧಕಲ್ಪನೆಯೂ ಅಸಂಗತವಾದುದು.

ವಿಷಮಬಾಣಲೀಲಾ:—ಧ್ವನ್ಯಾಲೋಕದಲ್ಲಿ ಉದಾಹರಿಸಿಕೊಂಡಿರುವ ಇದರ ಶ್ಲೋಕಗಳಿಂದ ಇದು ಪ್ರಾಕೃತಕಾವ್ಯವಾಗಿರಬೇಕೆಂದು ಗೊತ್ತಾಗುತ್ತದೆ. ಈ ಉದಾಹರಣೆಗಳನ್ನು ಸಮ್ಯಕ್ ದೃಷ್ಟಿಯಿಂದ ಪರಿಶೀಲಿಸುವುದಾದರೆ ಸುಭಾಷಿತಾವಳಿಗಳಂತೆ ಇದೊಂದು ಸಂಕಲಿತ ಗ್ರಂಥವಾಗಿರಬೇಕೆಂದೂ "ಕವಿವ್ಯತ್ಪತ್ತಯೇ" ಎಂದು ಹೇಳಲ್ಪಟ್ಟಿರುವುದರಿಂದ ಕವಿಗಳಿಗೋಸ್ಕರ ಬರೆದುದಾಗಿರಬೇಕೆಂದೂ ಬೋಧೆಯಾಗುತ್ತದೆ. ಧ್ವನ್ಯಾಲೋಕದಲ್ಲಿ ಕಂಡುಬರುವ ಅಪಭ್ರಂಶೋದಾಹರಣೆಗಳನ್ನು ನೋಡಿದರೆ ಈ ಭಾಷೆಯಲ್ಲಿಯೂ ಯಾವುದಾದರೊಂದು ಗ್ರಂಥವನ್ನು ಸುಭಾಷಿತಾವಳಿಯಂತೆ ಸಂಕಲಿತ ಮಾಡಿ ಬರೆಯಲ್ಪಟ್ಟಿರಬಹುದಾಗಿ ಊಹಿಸಲು ಅವಕಾಶವಿದೆ. ಈ ಗ್ರಂಥದ ವಿಚಾರವಾಗಿ ಹೆಚ್ಚಾಗಿ ತಿಳಿಯದು.

ದೇವೀಶತಕ:—ಚಿತ್ರಬಂಧಯಮಕ ಶ್ಲೇಷಗಳಿಂದ ಕೂಡಿ ಅತಿಕ್ಲಿಷ್ಟವಾಗಿದೆ. ಇದರಲ್ಲಿ ಮಹಾರಾಷ್ಟ್ರೀ ಪೈಶಾಚೀ, ಮಾಗಧೀ, ಶೌರಸೇನೀ ಮತ್ತು ಅಪ್ರಭ್ರಂಶ ಭಾಷೆಗಳಿಗೆ ಸಂಸ್ಕೃತಭಾಷೆಯಲ್ಲಿ ಶ್ಲೇಷೆಯನ್ನು ಕಲ್ಪಿಸಿ ಬರೆಯಲ್ಪಟ್ಟಿದೆ.

"**ಅರ್ಜುನಚರಿತ**"ವು ಮಹಾಕಾವ್ಯವೆಂದೂ "**ಹರವಿಜಯ**"ವು ಪ್ರಾಕೃತ ಕಾವ್ಯವೆಂದೂ ತಿಳಿಯಬರುವುದು ಹೊರ್ತು ಗ್ರಂಥವು ಉಪಲಬ್ಧವಿಲ್ಲವಾಗಿದೆ.

ಭಾಷಾಷಟ್ಕಸಮಾವೇಶಮನುಳ್ಳ ದೇವೀಶತಕದ ಒಂದು ಶ್ಲೋಕವನ್ನು ಮಾದರಿಗಾಗಿ ಬರೆಯುವೆವು.

---

* Journal of Oriental Research Vol II Pt. 1 P. 44 47.

§ ಮನೋರಥಾಹ್ವಯಸ್ತೇಷಾಂ ಮಧ್ಯಮೋ ವಂಶವರ್ಧನಃ
(ಅವಂತಿಸುಂದರೀ ಕಥಾಸಾರ ೧-೨೦)

ಆಲೋಲ ಕಮಲೇಚಿತ್ತ
ಲಲಾಮ ಕಮಲಾಲಯೇ
ಪಾಹಿಚಂಡಿಮಹಾಮೋಹ
ಭಂಗಭೀಮಬಲಾಮಲೇ ॥

ದ್ವ್ಯಕ್ಷರಶ್ಲೋಕೋದಾಹರಣೆ :—

ಮೀ ಸೇನೂನಮನೇನಾನನವುಮಾನಾಮ್ನಾ ಸುಮೇನೋನ್ಮನಾ
ನುಸ್ನೇನೇನಮನೇನಿಮಾನ ಮಮುನಾನೋನಾಮನಾನಾನುಮೇ
ಮೌ ನೇನಾಮಮಮಾನನಿಮ್ನ ಮನನನ್ನಾನಾಮಿನಾನೂನಿಮೇ
ಮುನ್ಮೀನ್ನಾ ನನಮಾನಮಿಾಮುನಿಮನೋಮಾನಾನ್ನ ನೋನ್ನಾ ಮಿತಿ ॥

ಹರಿಚಂದ್ರ (೨)

ಇವನ ಮಾತಾಪಿತೃಗಳಾರೆಂಬುದಾಗಲಿ, ಎಲ್ಲಿಯವನೆಂಬುದಾಗಲಿ ಹೇಳುವ ಪ್ರಮಾಣಗ್ರಂಥಗಳು ದೊರೆಯುವಂತಿಲ್ಲ. ಇವನ ಮಂಗಳಾಚರಣ ಶ್ಲೋಕದಿಂದಲೂ ಗ್ರಂಥಾಂತ್ಯ ಶ್ಲೋಕಗಳಿಂದಲೂ ಇವನು ಜೈನಮತೀಯನೆಂದು ಸಿದ್ಧವಾಗುತ್ತದೆ.

ಕಾಲ :—ಇವನು ಕ್ರಿ. ಶ. ೯ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಧರ್ಮಶರ್ಮಾಭ್ಯುದಯಕಾರನನ್ನು ಹೇಳಿಕೊಂಡಿರುವುದರಿಂದ ಅವನಿಗಿಂತ ಈಚಿನವನೂ ಕ್ರಿ. ಶ. ಸುಮಾರು ೧೦ನೆಯ ಶತಮಾನದ ವಾದೀಭಸಿಂಹನು ಈ ಹರಿಚಂದ್ರನನ್ನು ಹೇಳಿಕೊಂಡಿರುವುದರಿಂದ ಇವನಿಗಿಂತ ಪ್ರಾಚೀನನೂ ಸುಮಾರು ಕ್ರಿ. ಶ. ೯ನೆಯ ಶತಮಾನದ ಉತ್ತರಾರ್ಧದವನೂ ಆಗಿರಬೇಕೆಂದು ತೋರುತ್ತದೆ.

ಗ್ರಂಥ—ಇವನು ಬರೆದುದಾದ ಜೀವಂಧರಚಂಪೂ ಎಂಬ ಗ್ರಂಥವು ಮಾತ್ರ ದೊರೆಯುವುದು. ಇದರಲ್ಲಿ ೧೧ಲಂಬಕಗಳಿರುವುವು. ಜಿನಮತ ಪ್ರವಿಷ್ಟನಾದ ಜೀವಂಧರನಚರಿತೆಯು ಸರಸವಾಗಿ ಗರ್ಣಿತವಾಗಿದೆ. ಗದ್ಯವೂ ಪದ್ಯವೂ ಅವುಗಳ ಯೋಗ್ಯತೆಗೆ ತಕ್ಕಂತೆ ಸಂತೋಷಗೊಳಿಸುವುದೆನ್ನುವುದಾದರೂ ಗದ್ಯ ಪದ್ಯಗಳೊಡನೆ ಬರೆದಗ್ರಂಥವು ಮತ್ತಷ್ಟು ಸಂತೋಷವನ್ನು ಹೆಚ್ಚಿಸುವುದೆಂದೂ

ಗದ್ಯಾವಲಿಃ ಪದ್ಯಪರಂಪರಾ ಚ
ಪ್ರತ್ಯೇಕ ಮಪ್ಯಾವಹತಿ ಪ್ರಮೋದಂ
ಹರ್ಷಪ್ರಕರ್ಷಂ ತನುತೇ ಮಿಲಿತ್ವಾ
ದ್ರಾಗ್ಬಾಲ್ಯತಾರುಣ್ಯವತೀವ ಕಾಂತಾ ॥[೧]

ಎಂದು ಹೇಳಿಕೊಂಡಿರುವನು.

[೧] ಜೀವಂಧರಚಂಪೂ ೧-೯

ಹೇಮಾಂಗದೇಶದ ರಾಜಧಾನಿಯಾದ ರಾಜಪುರಿಯನ್ನು ಸತ್ಯಂಧರನೆಂಬ ರಾಜನು ಪಟ್ಟಮಹಿಷಿಯಾದ ವಿಜಯಾ ಎಂಬುವಳೊಡನೆ ಕೂಡಿ ರಾಜ್ಯಭಾರ ಮಾಡುತ್ತ ರಾಜ್ಯವು ನಿಷ್ಕಂಟಕವಾಗಿರುವುದನ್ನು ನೋಡಿ ಕಾಷ್ಠಾಂಗಾರನೆಂಬ ಮಿತ್ರನ ವಶಕ್ಕೆ ರಾಜ್ಯಭಾರವನೊಪ್ಪಿಸಿ ಸುಖಭೋಗಲೋಲುಪನಾಗಿರುತ್ತಿದ್ದು ಕಾಷ್ಠಾಂಗಾರನ ಕಪಟದಿಂದ ವಂಚಿತನಾಗಿ ಹತನಾದನು. ಆಗ ಗರ್ಭವತಿಯಾಗಿದ್ದ ವಿಜಯಾದೇವಿಯು ನಷ್ಟಸಂಪದಳಾಗಿ ಊರನ್ನು ಬಿಟ್ಟು ಶ್ಮಶಾನದಲ್ಲಿ ಸುಖಪ್ರಸೂತಳಾಗಿ ಹಸುಳೆಯನ್ನು ಬಿಟ್ಟು ಅಗಲಬೇಕಾದ ಸಂಭವವು ಒದಗಿ ಹೊರಟುಹೋಗುವಾಗ ಹಸುಳೆಯನ್ನು ನೋಡಿ ಕಣ್ಣೀರಿಡುತ್ತ "ಜೀವಂಧರ" ನೆಂದು ಹರಿಸಿ ಹೊರಟುಹೋದಳು. ಕೊನೆಗೆ ಈ ಹಸುಳೆಯು ಅದೇ ಊರಿನ ಗಂಧೋತ್ಕಟ ನೆಂಬವೈಶ್ಯನ ಮನೆಯಲ್ಲಿ ಬೆಳೆದು ಆರ್ಯನಂದಾಚಾರ್ಯನ ಬಳಿ ಗುರುಕುಲವಾಸವನ್ನುಮಾಡಿ ಸಕಲ ಶಾಸ್ತ್ರಾರ್ಥಂಗಳನ್ನರಿತು ಕಾಲಕ್ರಮದಲ್ಲಿ ಗಂಧರ್ವದತ್ತೆ, ಗುಣಮಾಲೆ, ಪದ್ಮಾ, ಕ್ಷೇಮಶ್ರೀ, ಕನಕಮಾಲೆ, ವಿಮಲಾ, ಸುರಮಂಜರೀ, ಮತ್ತು ಲಕ್ಷಣಾ ಎಂಬುವರನ್ನು ವಿವಾಹಮಾಡಿಕೊಂಡು ದುರ್ಮಾರ್ಗನಾದ ಕಾಷ್ಠಾಂಗಾರನನ್ನ ಕೊಂದು ಮುನಿವೃತ್ತಿಯೊಳಿದ್ದ ತಾಯಿಯನ್ನು ಸಂತೈಸಿ ತಾಯಿಯೊಡನೆ ಸುಖಸಾಮ್ರಾಜ್ಯವನ್ನನುಭವಿಸುತ್ತ ನಷ್ಟವಾಗಿದ್ದ ರಾಜ್ಯವನ್ನು ಮರಳಿ ಸಂಪಾದಿಸಿಕೊಂಡು ಸುಖವಾಗಿರುತ್ತಿದ್ದನೆಂಬುದೇ ಜೀವಂಧರಚರಿತ ಕಥಾಸಾರಾಂಶ. ಶೈಲಿಯು ಅತ್ಯಂತ ಪೇಶಲವಾಗಿ, ಸಹಜವರ್ಣನಗಳಿಂದ ಕೂಡಿ ಸರಳವಾದುದಾಗಿ ಗ್ರಂಥವು ಆಪಾತತಃ ರಮಣೀಯವಾಗಿರುವುದೆಂದರೂ ಸಲ್ಲುವುದು. ಗದ್ಯದ ಮಾದರಿಗಾಗಿ ಕೊಂಚಭಾಗವನ್ನೆತ್ತಿ ಬರೆಯುವೆವು. ಹೇಮಾಂಗದವೆಂಬ ದೇಶವರ್ಣನವು ಹೀಗಿರುವುದು;—

"ಅಥಲವಣರತ್ನಾಕರನಿರ್ಲೋಲಕಲ್ಲೋಲಶಯಕುಶೇಶಯಪ್ರಕ್ಷಿಪ್ತಮುಕ್ತಾವಿದ್ರುಮರಾಜೀವಿರಾಜಿತವೇಲಾಲಂಕೃತೇ, ಸಕಲದ್ವೀಪಮಧ್ಯಮಧ್ಯಾಸೀನೇsಪಿ ಶೋಭಾತಿಶಯೇನತೇಷಾಮುಪರಿವರ್ತಮಾನೇ, ಸ್ವಮಹಿಮನಿರಂಕೃತಸುರಾಧಿಪಲೋಕಂ ಗಗನತಲಚುಂಬಿಜಂಬೂವಿಟಪಿಕಪಟೇನಮಸ್ತಕಮುದ್ಧೃತ್ಯ ಪ್ರತಿಕ್ಷಣವಿಾಕ್ಷಮಾಣ ಇವ, ಅಪಾರಸಂಸಾರಸಂತಮಸಾಂಧೀಕೃತ ಜೀವಲೋಕಸ್ಯ ಪುರುಷಾರ್ಥಚತುಷ್ಟಯಪ್ರಕಾಶನಾಯೇವದಿವಾಕರಯುಗಲನಿಶಾಕರಯುಗಲವ್ಯಾಜೇನ ಪ್ರದೀಪಚತುಷ್ಟಯಮಾಬಿಭ್ರಾಣೇ, ಮೂರ್ತೀಕೃತಲಾವಣ್ಯಇವ ಮಹೀಮಹಿಲಾಯಾಃ, ರಂಗಸ್ಥಲಇವ ಶ್ರೀಲಾಸಿಕಾಲಾಸ್ಯಸ್ಯ, ಪ್ರತಿಚ್ಛಂದಇವ ನಾಕಲೋಕಸ್ಯ, ಸಕಲಲೇಖಲೋಚನವಿಾನಾನಾಮಾಲಂಬನಕೂಪೇ, ಜಂಬೂದ್ವೀಪೇ, ಭರತಖಂಡಮಂಡನಾಯಮಾನಕಮಲವನಮಧುಲುಬ್ಧಭೃಂಗಮಾಲಾವ್ಯಾ

ಜೇನ ಸಕಲಲೋಕಲೋಚನಬಂಧನಾರ್ಥಮಾಯಸಶೃಂಖಲಾಮಿವ ಬಿಭ್ರಾಣಂ, ಪರಿಪಾಕಪಿಶಂಗಕಲಮಮಂಜರೀಪುಂಜಪಿಂಜರೀಭೂತ ತಯಾ ಪತ್ರಿಕುಲಪಾತಭಯಾತ್ಕೃಷೀವಲಸ್ಥಗಿತಪೀತಾಂಬರಮಿವ ಬಿಭ್ರಾಣಂ, ತತ್ರ ತತ್ರ ಸಮರ್ಪಿತೈರಭ್ರಂಲಿಹೈರ್ಬೀಜಾವಾಪಪ್ರಭೃತಿ ತಪನಕಲಿತಸಂತಾಪಜನಿತವೈರಿತಯಾ ತದೀಯಪದವೀಮುಪರುಂಧದ್ಭಿರಿವ ನಿಜಸೌಂದರ್ಯಸಂದರ್ಶನಾರ್ಥಮಾಗತೈಃ ಕುಲಾಚಲೈರಿವ ಉದಯಾಸ್ತಾಚಲಮಧ್ಯಸಂಚಾರಖಿನ್ನಸ್ಯ ಸರೋಜಬಂಧೋರ್ವಿಶ್ರಮಾಯವೇಧಸಾ ವಿರಚಿತೈರಿವ ಧರಾಧರೈರ್ಧಾನ್ಯರಾಶಿಭಿರುದ್ಭಾಸಿತಂ, ಅತಿದೂರಪ್ರವೃದ್ಧಶಾಖಾವಲಯವಿಲಸಿತಕಿಲಯಕೈತವೇನ ಹಸ್ತಮುದಸ್ಯ ವಿಚಿತ್ರಪತತ್ರಿವಿರುತೈಃ ಕಲ್ಪಪಾದಪಾಂಜೇತುಮಿವಾಹ್ವಯಮಾನೈರ್ಜನ್ಮಪ್ರಭೃತಿ ಜಲಸೇಕಾದ್ಯುಪಕಾರೇಣ ವರ್ಧಕೇಭ್ಯೋ ವಲಾಹಕೇಭ್ಯಃ ಫಲಪುಷ್ಪಾದೀನಿ ಸಮರ್ಪಯಿತುಮಿವ ಮೇಘಮಂಡಲಮವಲಂಬಮಾನೈರುಪವನತರುಷಂಡೈರ್ಮಂಡಿತಂ, ವಿಕಚನೀಲೋತ್ಪಲನಯನಾಭಿಃ ಪದ್ಮಮುಖೀಭಿರ್ಭೃಂಗಜಾಲನೀಲಾಲಕಾಭಿರ್ಮುದಿತಮಿವಾನಲಾಂಛನಮಕರೀಶೋಭಿತಚಾರುಚಕ್ರಸಯೋಧರಾಭಿರ್ಘನ ಪುಲಿನಜಘನಾಭಿಸ್ತಟಿನೀವಧೂಟೀಭಿಃ ಪರಿವೃತಮಸ್ತಿ ನಿಸ್ತುಲಂ ಹೇಮಾಂಗದಂ ನಾಮ ಮಂಡಲಂ ॥

ಪದ್ಯಭಾಗದಮಾದರಿಗೆ. —

ವಿದ್ಯಾವಲ್ಲೀ ಪಾತ್ರಸುಕ್ಷೇತ್ರದತ್ತಾ
ಪ್ರಜ್ಞಾಸಿಕ್ತಾ ಸೂಕ್ತಿಭಿಃ ಪುಷ್ಪಿತಾ ಚ
ಆಶಾಯೋಷಿತ್ಕರ್ಣಭೂಷಾಯಮಾಣಾಂ
ಕೀರ್ತಿಪ್ರೋದ್ಯನ್ಮಂಜರೀಮಾದಧಾತಿ ॥ ಲಂಬ ೨—೧೬

ಸುಕ್ಷೇತ್ರದಲ್ಲಿಡಲ್ಪಟ್ಟುದಾದ ವಿದ್ಯಾ ಎಂಬ ಬಳ್ಳಿಯು ಜ್ಞಾನವೆಂಬ ಜಲದಿಂದ ತೋಯಿಸಲ್ಪಟ್ಟುದಾಗಿ ನೀತಿಗಳೆಂಬ ಪುಷ್ಪಗಳಿಂದ ಕೂಡಿದುದಾಗಿ ಶ್ರೋತೃಗಳ ಕರ್ಣಭೂಷಣವಾಗಿ ದಿಕ್ಕು ದಿಕ್ಕುಗಳಲ್ಲಿ ಕೀರ್ತಿ ಎಂಬ ಗೊಂಚಲನ್ನು ಕೊಡುವುದಾಗಿರುವುದು.

ಸೌಂದರ್ಯಸ್ಯ ಪರಾ ಕಾಷ್ಠಾ ಶೃಂಗಾರಸ್ಯ ಪರಾಗತಿಃ
ಖನಿಃ ಕಲಾನಾ ಯಜ್ಞಸೇ ನ್ಮೂರ್ತಿರಾನಂದದಾಯಿನೀ ॥ ೨—೨೧

ವಿದ್ಯೆಯೆಂಬುದು ವಿಶ್ವಸೌಂದರ್ಯಾನುಮಾರ್ಗದಾಯಿಯಾಗಿಯೂ ಪ್ರಣಯತತ್ತ್ವಾಂತಬೋಧಕವಾಗಿಯೂ ಸಕಲಕಲಾಖನಿಯಾಗಿಯೂ ಸಕಲ ಸೌಖ್ಯಗಳ ಮೂರ್ತಿ ಮತ್ತಾಗಿರುವುದು.

ಹತ್ತನೆಯ ಶತಮಾನ.

ರಾಜಶೇಖರ (೧)

"ತದಾಮುಷ್ಯಾಯಣಸ್ಯ ಮಹಾರಾಷ್ಟ್ರಚೂಡಾಮಣೇರಕಾಲಜಲದಸ್ಯ ಚತುರ್ಥೋದೌರ್ಧಕಿಃ ಶೀಲವತೀಸೂನುರುಪಾಧ್ಯಾಯಃಶ್ರೀರಾಜಶೇಖರ ಇತ್ಯಪರ್ಯಾಪ್ತಂಬಹುಮಾನೇನ" ಎಂದು ಹೇಳಿರುವುದರಿಂದ ಇವನು ಮಹಾರಾಷ್ಟ್ರ ಚೂಡಾಮಣಿಯಾದ ಅಕಾಲಜಲದನ ನಾಲ್ಕನೆಯವನಾದ ದೌರ್ಧಕಿ ಮತ್ತು ಶೀಲವತಿಯರಮಗನೆಂದೂ, ಉಪಾಧ್ಯಾಯನೆಂದೂ

ಸ ಮೂರ್ಧೋ ಯತ್ರಾಸೀದ್ಗುಣಗಣ ಇವಾಕಾಲಜಲದಃ
ಸುರಾನಂದಃ ಸೋಽಪಿ ಶ್ರವಣಪುಟಪೇಯೇನ ವಚಸಾ।
ನ ಚಾನ್ಯೇ ಗಣ್ಯಂತೇ ತರಲಕವಿರಾಜಪ್ರಭೃತಯೋ
ಮಹಾಭಾಗಸ್ತಸ್ಮಿನ್ನಯಮಜನಿ **ಯಾಯಾವರಕುಲೇ** ।

ಎಂಬುದರಿಂದ ಅಕಾಲಜಲದ, ಸುರಾನಂದ, ತರಲ, ಕವಿರಾಜನೇ ಮೊದಲಾದ ಮಹಾ ಕವಿಗಳು ಜನ್ಮಿಸಿದ ಯಾಯಾವರವೆಂಬ ಬ್ರಾಹ್ಮಣಕುಲದಲ್ಲಿ ಜನ್ಮಗ್ರಹಣ ಮಾಡಿದವನೆಂದೂ,

ಬಾಲಕವಿಃ† ಕವಿರಾಜೋ ನಿರ್ಭಯರಾಜಸ್ಯ ದ್ಧೋಪಾಧ್ಯಾಯಃ
ಇತ್ಯೇತಸ್ಯ ಪರಂಪರಯಾ ಆತ್ಮಾ ಮಾಹಾತ್ಮ್ಯಮಾರೂಢಂ ॥
ಕಿಮಪರಮಪರೈಃ ಪರೋಪಕಾರ
ವ್ಯಸನಸಧೇರ್ಗುಣೈರ್ಗುಣೈರವಮುಷ್ಯ
ರಘುಕುಲತಿಲಕೋಮಹೇಂದ್ರಪಾಲಃ
ಸಕಲಕಲಾನಿಲಯಃ ಸ ಯಸ್ಯ ಶಿಷ್ಯಃ ॥ ‡

ಎಂಬುದರಿಂದ ಬಾಲಕವಿ, ಕವಿರಾಜನೆಂಬ ನಾಮಾಂತರಗಳುಳ್ಳ ರಾಜಶೇಖರನು "ನಿರ್ಭಯರಾಜಾ"ಪರನಾಮಕನಾದ ರಘುಕುಲತಿಲಕ ಮಹೇಂದ್ರಪಾಲನ ಉಪಾಧ್ಯಾಯನೆಂದೂ ವ್ಯಕ್ತವಾಗುತ್ತದೆ. ಇವನು ಶೈವಮತಾನುಯಾಯಿ.

ಬಾಲರಾಮಾಯಣ ಪ್ರಸ್ತಾವನಾ ಪುಟ ೯.

† Ibid ಅಂಕ ೧—೧೩.

‡ ರತ್ನಕೇತೂದಯಕಾರನಾದ ಬಾಲಕವಿಯು ಇವನಲ್ಲ.

§ ಕರ್ಪೂರಮಂಜರೀ ಪ್ರಸ್ತಾವನಾ ಪುಟ ೨.

"ಯಾಯಾವರ" ಎಂದರೆ ವೈಶ್ವದೇವಾಗ್ನಿಯನ್ನು ಅಥವಾ ಧಾರ್ಯಾಗ್ನಿಯನ್ನು ಇಟ್ಟುಕೊಂಡಿರುವವರೆಂದು ಡಾ॥ ಹಾಲರವರು ಒಕ್ಕಣಿಸಿರುವರು. "ವಿದ್ವಶಾಲಭಂಜಿಕೆ"ಯ ವ್ಯಾಖ್ಯಾನಕಾರನಾದ ನಾರಾಯಣ ದೀಕ್ಷಿತನು ತನ್ನ ವ್ಯಾಖ್ಯಾನದಲ್ಲಿ ದೇವಲ (ಸ್ಮೃತಿಕಾರ) ನನ್ನು ಹೇಳಿ ಯಾಯಾವರ ಎಂಬುದು ಗೃಹಸ್ಥಾಶ್ರಮ ಭೇದವೆಂದೂ ಗೃಹಸ್ಥಾಶ್ರಮದಲ್ಲಿ ಯಾಯಾವರ ಮತ್ತು ಶಾಲೀನ ಎಂಬ ಎರಡು ಪಂಗಡಗಳಿರುವುವೆಂದೂ ಹೇಳಿರುವುದಲ್ಲದೆ.—

ಯಾಯಾವರೇಣ। ದ್ವಿವಿಧೋ ಗೃಹಸ್ಥೋ ಯಾಯಾವರಃ ಶಾಲೀನಶ್ಚೇತಿ ತಯೋರ್ಯಾಯಾವರಃ ಪ್ರವರೋ ಯಾಜನಾಧ್ಯಾಪನ ಪ್ರತಿಗ್ರಹರಿಕ್ಥವರ್ಜನಾತ್ ಷಟ್ಕರ್ಮಾಧಿಷ್ಠಿಕಃ ಪ್ರೇಷ್ಯ ಚತುಷ್ಪದಗೃಹಗ್ರಾಮಧನಧಾನ್ಯಯುಕೆಗ್ತೀ ಲೋಕಾನುವರ್ತೀ ಶಾಲೀನ ಇತ್ಯಾದಿನಾ ದೇವಲೋಕ್ತೋ ವೃತ್ತಿವಿಶೇಷಶಾಲೀ ಗೃಹಸ್ಥವಿಶೇಷಸ್ತೇನ ॥

ಎಂದು ವ್ಯಾಖ್ಯಾನ ಮಾಡಿರುವನು.

ಇದಲ್ಲದೆ ರಾಜಶೇಖರನಿಗೆ ರಜನೀವಲ್ಲಭಶಿಖಂಡ ಸರ್ವಭಾಷಾವಿಚಕ್ಷಣ† ಸರ್ವಭಾಷಾಚತುರ‡ ನೆಂಬ ಪರ್ಯಾಯನಾಮಗಳಿದ್ದುವಾಗಿ ತಿಳಿಯಬರುತ್ತದೆ.

ರಾಜಶೇಖರನೆನ್ನುವ ಬದಲು ಯಾಯಾವರೀಯನ್ನು ನೆಂದು ಕಾವ್ಯಮೀಮಾಂಸಾವಲ್ಲಿಯೂ ಯಾಯಾವರಕವಿ¶ ಎಂದು ತಿಲಕಮಂಜರಿಯಲ್ಲಿಯೂ ಯಾಯಾವರx ಎಂದು "ಉದಯಸುಂದರೀಚಂಪೂ" ವಿನಲ್ಲಿಯೂ ಹೇಳಿದೆ.

ಅಪರಾಜಿತ, ಶಂಕರವರ್ಮ, ಮತ್ತು ದೈವಜ್ಞರೆಂಬ ಈ ಮೂವರೂ ರಾಜಶೇಖರನ ಸಮಕಾಲೀನರಾದ ಕವಿಗಳು.

ಅಪರಾಜಿತನಿಗೆ "ಬಬ್ಬರರಾ" ಎಂದು ಮತ್ತೊಂದು ಹೆಸರಿಂದೂ ಅವನು "ಮೃಗಾಂಕಲೇಖಾ" ಕಥಾಕಾರನೆಂದೂ ತಂಜಾವೂರಲ್ಲಿರುವ ಹಸ್ತಲಿಖಿತ ಪ್ರತಿ

ರಜನೀವಲ್ಲಭಶ್ಚಂದ್ರಃ ಶಿಖಂಡಃ ಶೇಖರೋಯಸ್ಯೇತಿ ಪದಧರ್ಃ

| ಬಾಲರಾಮಾಯಣ ೧—೧೦

† ಕರ್ಪೂರಮಂಜರೀ ೧ –೭

‡ ಯಾಯಾವರೀಯಃ ಸಂಕ್ಷಿಪ್ಯ ಮುನೀನಾಂ ಮತ ವಿಸ್ತರಂ॥
ಕಾವ್ಯಮೀಮಾಂಸಾ ಪುಟ ೨.
ಪಂಚವಿಧಾ ಸಾಹಿತ್ಯವಿದ್ಯಾ ಇತಿ ಯಾಯಾವರೀಯಃ ಪುಟ ೪.

¶ ಸಮಾಧಿಗುಣಶಾಲಿನ್ಯಃ ಪ್ರಸನ್ನಪರಿಪಕ್ತಿಮಾಃ
ಯಾಯಾವರಕವೇರ್ವಾಚೋ ಮುನೀನಾಮಿವ ವೃತ್ತಯಃ॥ ತಿಲಕಮಂಜರೀ

x ಯಾಯಾವರಃ ಸ್ಪಾಜ್ಜ್ವಲರೋ ಗುಣಜ್ಞೈಃ
ರಾಜಂಸಿತಃ ಸೂರಿಸಮಾಜವರ್ಯೈಃ
ನೃತ್ಯತ್ಕುದಾರಂ ಭಣಿತೇ ರಸಸ್ಥಾ
ನಟೀವ ಯಸ್ಯೋದರಸಾ ಪದಶ್ರೀಃ ॥ ಉದಯಸುಂದರೀಚಂಪೂಃ ಉಲ್ಲಾಸ ೮.

ಯಲ್ಲಿ ಹೇಳಲ್ಪಟ್ಟಿದೆ. ಭಟ್ಟಾಪರಾಜಿತನ ಶ್ಲೋಕಗಳು ಸುಭಾಷಿತಾವಳಿಯಲ್ಲಿಯೂ 'ಪದ್ಯಾವಳಿ'ಯಲ್ಲಿಯೂ ದೊರೆಯುತ್ತವೆ. ಶಂಕರವರ್ಮ ಅಥವಾ ಕೃಷ್ಣಶಂಕರ ವರ್ಮನೇ ಎರಡನೆಯವನು. ಇವನಿಗೆ 'ಸಭ್ಯ'ನೆಂದು ಬಾಲರಾಮಾಯಣದಲ್ಲಿಯೂ 'ಗೋಷ್ಠೀಗರಿಷ್ಠನೆಂದು' ವಿದ್ಧಶಾಲಭಂಜಿಕೆಯಲ್ಲಿಯೂ ಹೇಳಲ್ಪಟ್ಟಿದೆ. ದೈವಜ್ಞನೆಂಬುವನೇ ಮೂರನೆಯವನು. ಈ ಹೆಸರು ಬಾಲರಾಮಾಯಣ ಮತ್ತು ಬಾಲಭಾರತದಲ್ಲಿ ಹೇಳಿರುವುದು ಕಂಡುಬರುತ್ತದೆ. ಇದು ಕವಿಯಹೆಸರೋ ಅಥವಾ ಯಾರಾದರೊಬ್ಬ ಜೋತಿಷ್ಯನ ಹೆಸರೋ ತಿಳಿಯದು.

ರಾಜಶೇಖರನ ತಂದೆಯಾದ ದುರ್ದುಕ (ದುಹಿಕ)ನು ಚೇದಿರಾಜರಬಳಿ ಮುಖ್ಯಾಮಾತ್ಯನಾಗಿದ್ದನು. ವಿದ್ಧಶಾಲಭಂಜಿಕೆಯಲ್ಲಿ ಸೂತ್ರಧಾರನು "ತನ್ಮನ್ತ್ರೇ ತದಭಿನಯೇ ಶ್ರೀಯುವರಾಜದೇವಸ್ಯ ಪರಿಷದಾದೇಶಃ" ಎಂದು ಪ್ರಾರಂಭಿಸಿರುವನು. ಈ ಯುವರಾಜದೇವನು ಚೇದಿದೇಶದಲ್ಲಾಳಿದ ಕಲಚೂರ ಅರಸರಲ್ಲಿ ಮೊದಲನೆಯವನೆಂದು ಡಾ|| ಹಲ್ಟಚ್‌ರವರು ಹೇಳಿರುವರು. ಚೇದಿದೇಶದಲ್ಲಿ ಯುವರಾಜನು ಆಳುತ್ತಿದ್ದಾಗ ಕನ್ಯಾಕುಬ್ಜದಲ್ಲಿ ಮಹೇಂದ್ರಪಾಲನು ಆಳುತ್ತಿದ್ದುದಾಗಿಯೂ ಯುವರಾಜದೇವನ ಪೂರ್ವಜನಾದ ಕೋಕಿಲದೇವನೂ ಮಹೇಂದ್ರಪಾಲನ ಪೂರ್ವಜನಾದ ಭೋಜದೇವನೂ ಸಮಕಾಲೀನರಾಗಿದ್ದು ರಾಜ್ಯಭಾರ ಮಾಡಿದುದಾಗಿ ತಿಳಿಯಬರುತ್ತದೆ. ವಿದ್ಧಶಾಲಭಂಜಿಕೆಯ ನಾಯಕನಾದ ಕರ್ಪೂರವರ್ಷನಿಗೂ ಯುವರಾಜದೇವ ವಂಶೀಯನಾದ ಕೇಯೂರ ವರ್ಷನಿಗೂ ಹತ್ತಿರ ಸಂಬಂಧವಿದ್ದಿರಬಹುದಾಗಿ ತೋರುತ್ತದೆ.* ರಾಜಶೇಖರನಪೂರ್ವಜನಾದ ಅಕಾಲಜಲದನು ಮಹಾರಾಷ್ಟ್ರ ಚೂಡಾಮಣಿಯೆಂದು ಹೇಳಲ್ಪಟ್ಟಿರುವುದರಿಂದ ರಾಜಶೇಖರ ಕವಿಯು ಮಹಾರಾಷ್ಟ್ರದವನಾಗಿರಬೇಕೆಂದು ಕೆಲವರು ಹೇಳುವರು. ರಾಜಶೇಖರನ ಪೂರ್ವೀಕರು ಕುಂತಳ ಮತ್ತು ವಿದರ್ಭ ನಗರದವರೆಂದೂ ಕೆಲವರು ಹೇಳುವರು. ಅಕಾಲಜಲದನು ಮಹಾರಾಷ್ಟ್ರ ಚೂಡಾಮಣಿಯಾಗಿದ್ದುದಾದರೂ ಕಾಲಕ್ರಮದಲ್ಲಿ ಮಹಾರಾಷ್ಟ್ರವನ್ನು ಬಿಟ್ಟು ಚೇದಿದೇಶಕ್ಕೆ ಬಂದು ಅಮಾತ್ಯ ಪದವಿಯನ್ನು ಹೊಂದಿರಬೇಕಾಗಿ ತೋರುವುದರಿಂದ ರಾಜಶೇಖರನನ್ನು ಮಹಾರಾಷ್ಟ್ರದವನೆನ್ನುವುದು ಸಮಂಜಸವಾಗದು. ಇವನು ಕುಂತಳದವನೆಂದೂ ವಿದರ್ಭನಗರದವನೆಂದೂ ಸಾಧಿಸುವುದಕ್ಕೆ ಸರಿಯಾದ ಚಾರಿತ್ರಿಕ ಪ್ರಮಾಣಗಳು ದೊರೆಯವು. ಕವಿಯು ತನ್ನ ಗ್ರಂಥಗಳಲ್ಲಿ ದಕ್ಷಿಣದೇಶದ ನಡೆನುಡಿ, ಆಚಾರ, ವ್ಯವಹಾರ, ಪ್ರಾಂತ್ಯಗಳು, ಕಾವೇರೀ, ತಾಮ್ರಪರ್ಣೀ ಮತ್ತು

* Prof Sten Konow and Lanman's Karpuramanjari (Harvard Oriental series) P. 187.

ನರ್ಮದಾ ಮೊದಲಾದ ನದಿಗಳನ್ನು ವರ್ಣಿಸುವುದರಿಂದಲೂ ದ್ರಾವಿಡ, ಕರ್ಣಾಟಕ ಮತ್ತು ಲಾಟ ಮೊದಲಾದ ದೇಶಗಳ ಸ್ತ್ರೀಯರನ್ನು—

ಕರ್ಣಾಟೀದಶನಾಂಕಿತಃ ತಿತಮಹಾರಾಷ್ಟ್ರೀಕಟೂಕ್ಷಾಹತಃ
ಪ್ರೌಢಾಂಧ್ರೀಸ್ತನಪೀಡಿತಃ ಪ್ರಣಯಿನೀಭ್ರೂಭಂಗವಿತ್ರಾಸಿತಃ
ಲಾಟೀಬಾಹುವಿವೇಷ್ಟಿತಶ್ಚ ಮಲಯಸ್ತ್ರೀಗರ್ಜನೀರ್ಜರ್ಜಿತಃ
ಸೋಽಯಂಸಂಪ್ರತಿ **ರಾಜಶೇಖರ**ಕವಿರ್ವಾರಾಣಸೀಂವಾಂಛತಿ॥

ಎಂದು ವರ್ಣಿಸಿರುವುದರಿಂದ ಇವನು ದಾಕ್ಷಿಣಾತ್ಯನಾಗಿರಬೇಕೆಂದು ಪ್ರೊ. ಆಪ್ಟೆಯವರು ಹೇಳುವರು.§ ಈ ಶ್ಲೋಕವು ಕ್ಷೇಮೆಂದ್ರಕೃತ ಔಚಿತ್ಯವಿಚಾರ ಚರ್ಚಾ‡ ಎಂಬ ಗ್ರಂಥದಲ್ಲಿ ಮಾತ್ರ ರಾಜಶೇಖರನು ಹೇಳಿದುದಾಗಿ ಕಂಡುಬರುವುದು ಹೊರ್ತು ರಾಜಶೇಖರಕೃತಗ್ರಂಥಗಳಲ್ಲಿ ಎಲ್ಲಿಯೂ ಹೇಳಿರುವಂತೆ ಕಂಡುಬರುವುದಿಲ್ಲವಾದುದರಿಂದ ಈ ಶ್ಲೋಕಾಧಾರ ಮಾತ್ರದಿಂದ ಕವಿಯ ಸ್ಥಳವನ್ನು ನಿರ್ದೇಶಿಸಿ ಹೇಳುವುದು ತರವಲ್ಲ. ಇವುಗಳಿಲ್ಲವನ್ನೂ ಬಿಟ್ಟು ಕವಿಯನ್ನು ಚೇದಿದೇಶದವನೆಂದು ಹೇಳುವುದರಲ್ಲಿ ಯಾವ ನ್ಯೂನತೆಯೂ ತೋರದು. ರಾಜಶೇಖರನು ಕೆನೂಜ್ ಅಥವಾ ಕನ್ಯಾಕುಬ್ಜರಾಜನ ಆಸ್ಥಾನ ಪಂಡಿತನೂ ಗುರುವೂ (ಉಪಾಧ್ಯಾಯ) ಆಗಿದ್ದುದಾಗಿ ತಿಳಿಯಬರುವುದರಿಂದ ಇವನೂ ಬಿಲ್ಹಣಾದಿ ಇತರ ಕವಿಗಳಂತೆ ತನ್ನ ದೇಶವನ್ನು ಬಿಟ್ಟು ದೇಶಾಟನಕ್ಕಾಗಿ ಹೊರಟು ಕನ್ಯಾಕುಬ್ಜಕ್ಕೆ ಬಂದು ಆಗ ಆಳುತ್ತಿದ್ದ ಮಹೇಂದ್ರಪಾಲನು ಕೇಳಿಕೊಂಡಮೇರೆ ಅಲ್ಲಿಯೇ ಇದ್ದುದಾಗಿ ಹೇಳಬಹುದಾಗಿದೆ. ಇದಲ್ಲದೆ ರಾಜಶೇಖರನು ಮಹೇಂದ್ರಪಾಲನ ಗುರುವೆಂದು ತಾನು ಬರೆದಿರುವ ಎಲ್ಲಾ ನಾಟಕಗಳಲ್ಲಿಯೂ ಹೇಳಿಕೊಂಡಿರುವನು. ಸೂಕ್ತಿಮುಕ್ತಾವಳಿಯಲ್ಲಿ ಅಂತೇವಾಸಿ ಎಂಬ ಅಂಕಿತದಲ್ಲಿ "ಆಗಸ್ಕಾರಿಣಿ ಕೈಟಭಸ್ರಮಥನೇ....." ಎಂಬ ಶ್ಲೋಕವು ಕಂಡುಬರುವುದು. ಈ ಅಂತೇವಾಸಿಯು ಮಹೆಂದ್ರಪಾಲನೋ ಅಥವಾ ಇತರರೋ ಎಂದು ನಿಶ್ಚಯಮಾಡಿ ಹೇಳಲಸದಳವಾಗಿದೆ. ಇವನು ಕೆನೂಜಿನಲ್ಲಿ ಮಹೀಪಾಲನ ಆಳ್ವಿಕೆಯಲ್ಲಿಯೂ ಇದ್ದುದಾಗಿ ಬೋಧೆಯಾಗುತ್ತದೆ. ಏಕೆಂದರೆ ಬಾಲಭಾರತನಾಟಕವು ಮಹೀಪಾಲನ ಕೇಳಿಕೆಯಂತೆ ಪ್ರದರ್ಶಿಸಲ್ಪಟ್ಟಿತಾಗಿ ಹೇಳಿದೆ. ಆದರೆ ಮಹೀಪಾಲನ ಆಳ್ವಿಕೆಯ ಯಾವಕಾಲದವರೆಗೆ ರಾಜಶೇಖರನು ಕೆನೂಜಿನಲ್ಲಿ ಸಭಾಪಂಡಿತನಾಗಿದ್ದನೆಂಬುದನ್ನು ಹೇಳಲಾಗುವುದಿಲ್ಲ.* ರಾಜಶೇಖರನಿಗೆ ಚೇದಿರಾಜರ

§ See Apte P. 20 F. N.

‡ Kavyamala Part 1 P. 148.

* Lanman's Karpuramanjari (Harvard Oriental series) P. 181.

ಸಂಬಂಧವಿದ್ದುದಾಗಿ ಬಿಲಹರಿ ಶಾಸನವು ಹೇಳುವುದಲ್ಲದೆ, ಆ ಶಾಸನದಲ್ಲಿ ರಾಜಶೇಖರನ ಹೆಸರುಇರುವುದು ಕಂಡುಬರುತ್ತದೆ§ ಕ್ಷೇಮೇಂದ್ರನು ರಾಜಶೇಖರನ ವಿಚಾರವಾಗಿ ಹೇಳುವಒಂದಾನೊಂದು ಶ್ಲೋಕದಲ್ಲಿ ಕ್ಯಾಂಬೇ (Cambay) ಯಿಂದ ಕಾಮೊರ್ೀ (Camorin) ವರೆಗಿನಮುಖ್ಯದೇಶಗಳನ್ನು ಹೇಳಿ ರಾಜಶೇಖರನು ದಾಕ್ಷಿಣಾತ್ಯ (Dakhan)ನೆಂದು ಹೇಳಿರುವನು.$

ಪ್ರಸಿದ್ಧ ಚೌಹಣವಂಶತಿಲಕಳಾದ "ಅವಂತಿಸುಂದರೀ" ಎಂಬುವಳು ರಾಜಶೇಖರನ ಪ್ರಣಯಿನಿಯೆಂದು.—

ಚಾಹಮಾನಕುಲx ಮೌಳಿಮಾಲಿಕಾ
ರಾಜಶೇಖರ ಕವೀಂದ್ರಗೇಹಿನೀ
ಭರ್ತುಃ ಕೃತಿವವಂತಿಸುಂದರೀ
ಸಾ ಪ್ರಯೋಜಯಿತುಮೀತದಿಚ್ಛತಿ ॥

ಎಂದು ಕರ್ಪೂರಮಂಜರಿಯಿಂದ ಗೊತ್ತಾಗುತ್ತದೆ.* ಅವಂತಿಸುಂದರಿಯು ಪ್ರಖ್ಯಾತ ಕವಯಿತ್ರಿಯಾಗಿದ್ದುದಾಗಿ ಶ್ರೀ॥ ಸುಶೀಲಕುಮಾರಡೇಯವರು ಹೇಳುವರು. ಕವಿರಾಜನಾದ ರಾಜಶೇಖರನು ತನ್ನ "ಕಾವ್ಯಮಿಮಾಂಸಾ" ಗ್ರಂಥದಲ್ಲಿ ಮೂರುಕಡೆa ಅವಂತಿಸುಂದರಿಯನ್ನೆತ್ತಿ ಹೇಳಿಕೊಂಡಿರುವನು. ಇವುಗಳೆಲ್ಲವನ್ನೂ ನೋಡಿದರೆ ಅವಂತಿಸುಂದರಿಯು ಯಾವುದೋ ಲಕ್ಷಣಗ್ರಂಥವನ್ನು ಬರೆದಿರಬೇಕೆಂದೂ ಅದು ಪ್ರಕೃತ ಉಪಲಬ್ಧವಿಲ್ಲವೆಂದೂ ಬೋಧೆಯಾಗುತ್ತದೆ. (೧) ಅವಂತಿಸುಂದರಿಯು ಚಾಹಮಾನಕುಲದವಳೆಂದೂ ಕ್ಷತ್ರಿಯಕುಲ ಸಂಜಾತಳೆಂದು ಹೇಳಲ್ಪಟ್ಟಿರುವುದರಿಂದಲೂ, ದೋರ್ದಂಡ ಪರಾಕ್ರಮಿಗಳಾದ ಹಮ್ಮೀರ ಮತ್ತು ಪೃಥ್ವೀರಾಜನೇ ಮೊದಲಾದವರು ಈ ಚೌಹಣಕುಲದವರೆಂದು ಹೆಸರುಗೊಂಡಿರುವರೆಂದು ಕೆಲವರೂ. (೨) ಮಾಧವೀಯ ಶಂಕರವಿಜಯದಲ್ಲಿ ಹೇಳಲ್ಪಟ್ಟಿರುವ

§ The Bilohari Inscription of the Rulers of Chedi published by Keilhorn in the Epigraphica Indica P. 251 F. F. verse 85.

$ Lanman's Karpuramanjari P. 181.

x ಚಾಹಮಾನಕುಲಂ ಚೌಹಣ ಇತಿಪ್ರಸಿದ್ಧಂ ಕ್ಷತ್ರಿಯಕುಲಂ ॥

* ಕರ್ಪೂರಮಂಜರೀ ಪುಟ ೧೦.

a (ಅ) "ಇಯಮಶಕ್ತಿರ್ನ ಪುನಃ ಪಾಕಃ" ಇತ್ಯವಂತಿಸುಂದರೀ (ಕಾವ್ಯಮಿಮಾಂಸಾ ಪುಟ ೨೦.)

ರಾಜಶೇಖರನೇ ಇವನೆಂದೂ ನಾಟಕತ್ರಯ ಕರ್ತನೆಂದೂ ಇವನು ಚೌಹಣ (ಚಾಹಮಾನಕುಲ) ದ ಅವಂತಿಸುಂದರಿಯನ್ನು ಮದುವೆಯಾದನೆಂದು ಕೆಲವರೂ (೩) ಕವಿಯು ಉಪಾಧ್ಯಾಯನೆಂದೂ, ಗುರುವೆಂದೂ ಕರ್ಪೂರಮಂಜರಿಯಲ್ಲಿ ಹೇಳಿಕೊಂಡಿರುವುದರಿಂದಲೂ ಕೆಲವುಕಡೆ ರಾಜಶೇಖರನನ್ನು ರಾಜಗುರುವೆಂದೂ ಜ್ಞಾನಬೋಧಕನೆಂದೂ ಹೇಳಲ್ಪಟ್ಟಿರುವನಾದುದರಿಂದ ರಾಜಶೇಖರನು ಕ್ಷತ್ರಿಯ ಗುರುವಾಗಿದ್ದಿರಕೂಡದೇಕೆಂದು ಕೆಲವರು ಹೇಳುವರಲ್ಲದೆ ಅನೇಕ ಕ್ಷತ್ರಿಯರು ರಾಜಶಿಕ್ಷಕರಾಗಿದ್ದು "ಗುರು" ಎಂಬ ಹೆಸರನ್ನು ಸಾರ್ಥಕಗೊಳಿಸಿದ್ದುದಾಗಿ ಪುರಾಣೇತಿಹಾಸಾದಿವಚನಗಳಿಂದ ತಿಳಿಯಬರುತ್ತದೆ. ಬ್ರಾಹ್ಮಣನಿಗೆ ಇರುವ ಅಧ್ಯಾಪನಾದಿ ಕೆಲವು ಕರ್ಮಗಳು ಕ್ಷತ್ರಿಯರಿಗೆ ಇಲ್ಲದಮಾತ್ರಕ್ಕೆ ಶ್ರೋತ್ರಿಯನೆಂದೇಕೆ ಹೇಳಬಾರದು? ಕ್ಷತ್ರಿಯನಿಗೆ ಬ್ರಾಹ್ಮಣನ ಹಾಗೆ ವೇದಾಧಿಕಾರವಿರುವುದು. ಉಪನಯನಾದಿ ಸಂಸ್ಕಾರಕರ್ಮಗಳಿರುವುವು. ಬ್ರಾಹ್ಮಣನಂತೆ ಇವನೂ ಷೋಡಶಕರ್ಮಾಧಿಕಾರಿಯಾಗಿರುವನು. ಅಲ್ಲದೆ.—

ಜನ್ಮನಾಬ್ರಾಹ್ಮಣೋಜ್ಞೇಯ ಸ್ಸಂಸ್ಕಾರೈರ್ದ್ವಿಜಉಚ್ಯತೆ
ವಿದ್ಯಯಾಯಾತಿವಿಪ್ರತ್ವಂ ತ್ರಿಭಿಃ ಶ್ರೋತ್ರಿಯಉಚ್ಯತೇ ॥

ಎಂದು ಹೇಳಲ್ಪಟ್ಟಿರುವುದರಿಂದ ಇವನು ಮಹೇಂದ್ರಪಾಲನೇ ಮೊದಲಾದವರಿಗೆ ರಾಜನೀತಿಗಳನ್ನು ಸತ್ವಗುಣೋಪೇತವಾದ ಜ್ಞಾನಬೋಧೆಯನ್ನು ಮಾಡಿದ ಕ್ಷತ್ರಿಯನೆಂದೂ ಸಾಧಿಸುವರು. ಈ ವಿಚಾರವಾಗಿ ಕೊಂಚ ಬರೆಯುವದು ಅಪ್ರಸಕ್ತವಾಗದು.

(ಅ) "ವಿದಗ್ಧಭಣಿತಿನಿವೇದ್ಯಂ ವಸ್ತು ಸೋ ರೂಪಂ ನ ನಿಯತಸ್ವಭಾವಂ" ಇತ್ಯವಂತಿಸುಂದರೀ ತದಾಹ :—

ವಸ್ತುಸ್ವಭಾವೋಽತ್ರ ಕವೇರತನ್ನೋ
ಗುಣಾಗುಣಾವುಕ್ತವಶೇನ ಕಾವ್ಯೇ ।
ಸ್ತುವನ್ನಬಧ್ನಾತ್ಯಮೃತಾಂಶುಮಿಂದುಂ
ನಿಂದಂಸ್ತು ದೋಷಾಕರಮಾಹ ಧೂರ್ತಃ ॥ ಪುಟ. ೪೬

(೩) "ಅಯಮಪ್ರಸಿದ್ಧಃ ಪ್ರಸಿದ್ಧವಾನಹಂ; ಅಯಮಪ್ರತಿಷ್ಠಃ ಪ್ರತಿಷ್ಠಾವಾನಹಂ; ಅಪ್ರಕ್ರಾಂತಮಿದಮಸ್ಯ ಸಂವಿಧಾನಕಂ ಪ್ರಕ್ರಾಂತಂಮಮ; ಗುರೂಚೀವಚನೋಽಯಂ ಮೃದ್ವೀಕಾವಚನೋಽಹಂ; ಅನಾದ್ಯತಭಾಷಾವಿಶೇಷೋಽಯಂ ಅಹಮಾದ್ಯತಭಾಷಾವಿಶೇಷಃ; ಪ್ರಶಾಂತಜ್ಞಾತೃಕಮಿದಂ, ದೇಶಾಂತರಿತಕರ್ತೃಕಮಿದಂ ಉಚ್ಛ್ವಸ್ತನಿಬಂಧನಮೂಲಮಿದಂ; ಮ್ಲೇಚ್ಛಿತಕೋಪನಿಬಂಧನಮೂಲಮಿದಮಿತ್ಯೇವಮಾದಿಭಿಃ ಕಾರಣೈಃ ಶಬ್ದಹರಣೇ ಅರ್ಥಹರಣೇ ಚಾಭಿರಮೇತ" ಇತ್ಯವಂತಿಸುಂದರೀ — ಪುಟ ೫೭.

ಚೌಹಣರಾಜವಂಶದ ಮೂಲಪುರುಷನು ಸಾಮಂತನೆಂಬುವನು. "ಬಿಜೋಲಿಯದ ಶಾಸನ"ದ ಪ್ರಕಾರ ಇವನು ವತ್ಸಗೋತ್ರದವನೆಂದೂ ಬ್ರಾಹ್ಮಣನೆಂದೂ ಅಹಿಚ್ಛತ್ರವೆಂಬಸ್ಥಲದಿಂದ ವಲಸೆಬಂದವನೆಂದೂ ತಿಳಿಯಬರುತ್ತದೆ. ಇದರಿಂದ ಚಾಹಮಾನಕುಲದ ಪೂರ್ವಿಕರು ಬ್ರಾಹ್ಮಣರೆಂದೂ, ಸಾಂಗವೇದಾಧ್ಯಾಯಿಗಳೆಂದು ಹೇಳಿದಂತಾದುದು. ಮಿವಾರದ ಗೋಹಿಲೋಟ್ ವಂಶೀಯರು ಮೊದಲು ಶ್ರೋತ್ರಿಯರಾಗಿದ್ದು ಕಾಲಕ್ರಮದಲ್ಲಿ ದೇಶರಕ್ಷಣೆ ದೇಹರಕ್ಷಣೆಗಾಗಿ ಕ್ಷಾತ್ರ ಧರ್ಮವನ್ನವಲಂಬಿಸಿದಂತೆ ಸ್ಪಷ್ಟಪಡುತ್ತದೆ. ಈ ಕಾರಣಗಳಿಂದ ರಾಜಶೇಖರನು ಚಾಹಮಾನ ಕುಲದವರು ಶ್ರೋತ್ರಿಯರೆಂದು ತಿಳಿದು ಅವಂತಿಸುಂದರಿಯನ್ನು ಮದುವೆಯಾದುದಾಗಿ ಭಾಸವಾಗುತ್ತದೆ. ವತ್ಸಗೋತ್ರದವರು ಕಾಲಕ್ರಮದಲ್ಲಿ "ವತ್ಸ" ಎಂಬ ಋಷಿಯ ನೇತ್ರೋತ್ಪನ್ನರೆಂದು ಹೇಳಿಕೊಳ್ಳುವದು ರೂಢಿಗೆಬಂದಿರಬೇಕಾಗಿ ಶೋಧೆಯಾಗುತ್ತದೆ. ಕದಂಬರೂ, ಪಲ್ಲವರೂ ಮೊದಲು ಬ್ರಾಹ್ಮಣರಾಗಿದ್ದು ಕೊನೆಕೊನೆಗೆ ಕ್ಷತ್ರಿಯರಾದರೆಂದು ಡಾ|| ಭಂಡಾರಕರವರು ಹೇಳಿರುವರು ಇದರಿಂದ ರಾಜಶೇಖರನು ಬ್ರಾಹ್ಮಣಿಯಾದ ಅವಂತಿಸುಂದರಿಯನ್ನು ಮದುವೆಯಾದುದು ಸಾಧುವೆಂದು ಹೇಳಿದಂತಾದುದು. ಕೆಲವರು ರಾಜಶೇಖರನು ಕ್ಷತ್ರಿಯನು. ರಾಜ್ಯಸಂಪಾದನಕ್ಕಾಗಿಯೋ ಅಥವಾ ದ್ರವ್ಯಸಂಪಾದನಕ್ಕಾಗಿಯೋ ಸ್ವದೇಶವನ್ನು ಬಿಟ್ಟು ಇಲ್ಲಿಗೆಬಂದು ಕ್ಷತ್ರಿಯಕುಲಸಂಜಾತಳಾದಅವಂತಿಸುಂದರಿಯನ್ನು ಮದುವೆಯಾಗಿ ಮಹೇಂದ್ರಪಾಲನಕೋರಿಕೆಯಂತೆ ಅವನಿಗೆ ಉಪಾಧ್ಯಾಯನಾಗಿರಲು ನಿಂತುದಾಗಿ ಹೇಳುವರು. ಆದರೆ ಇದುಸರಿಯಲ್ಲವೆಂದು ನಮಗೆ ತೋರುವದು. ಏಕೆಂದರೆ ಅಂವತಿ ಸುಂದರಿಯು ರಾಜಕುವರಿ. ದೇಶಾಟನಕ್ಕಾಗಿಯೋ ಏತಕ್ಕಾಗಿಯೋ ಇಲ್ಲಿಗೆ ಬಂದ ರಾಜಶೇಖರನ ಕುಲಗೋತ್ರಂಗಳೊಂದನ್ನೂ ವಿಚಾರಿಸದೆ ದೇಶಕೋಶಗಳಿಲ್ಲದವನಿಗೆ ರಾಜಕುವರಿಯನ್ನು ಕೊಟ್ಟರೆಂದು ಹೇಳುವುದು ಅಸಂಭವವಾಗುವುದು. ಅಲ್ಲದೆ ವಿದ್ಯಾಧೀತಸಂಪನ್ನಳಾದಅವಂತಿಸುಂದರಿಯು ಮೆಚ್ಚುಗೆಯನಿತ್ತು ಇಂತಹನನ್ನು ವಿವಾಹಮಾಡಿಕೊಂಡಳೆಂದರೆ ಕೇವಲ ಹಾಸ್ಯಾಸ್ಪದ ವಿಚಾರವಾಗುವುದು. ಹೀಗೆ ಹೇಳುವುದಕ್ಕಿಂತ ರಾಜಶೇಖರನು ಮಹಾ ವಿದ್ಯಾವಂತನಾದ ಬ್ರಾಹ್ಮಣನೆಂದು ವಿದ್ಯಾವಂತಳಾದ ಅವಂತಿಸುಂದರಿಯು ರಾಜಶೇಖರನ ವಿದ್ಯಾವೈದುಷ್ಯ ಸುರೂಪ ಕೌಶಲಗಳಿಗೆ ಮೆಚ್ಚಿ ಮದುವೆಯಾದಳೆನ್ನುವುದು ಸರಿಯೆಂದೂ ಶಿಷ್ಟಸಂಪ್ರದಾಯಾನುಸಾರವೆಂದೂ ಹೇಳಬಹುದಾಗಿದೆ. ರಾಜಶೇಖರ ಶಬ್ದಕ್ಕೆ ರಾಜ್ಞಾಂಶೇಖರಃ ರಾಜಶೇಖರಃ ಎಂದು ಹೇಳಿ ಕ್ಷತ್ರಿಯನೆಂದು ಸಾಧಿಸುವುದಕ್ಕಿಂತ 'ರಾಜಾಚಂದ್ರಶೇಖರೋ ಯಸ್ಯಸಃ ರಾಜಶೇಖರಃ' (ಚಂದ್ರಶೇಖರಃ) ಎಂದು ಹೇಳುವುದಾದರೆ ಪ್ರಕೃತೋಚಿತಸಮಾಸವಾಗುವುದು.

Indian Antiquary January 1911 P. 26 (See. to Foreign Elements in the Hindu population.)

ಕಾಲ;—ರಾಜಶೇಖರ ಕೃತಬಾಲರಾಮಾಯಣದಲ್ಲಿ ಮಹೇಂದ್ರಪಾಲನ ವರ್ಣನೆ ಇರುವುದು. ಇವನು ಕೊಟ್ಟಿರುವ ದಾನಪತ್ರದಲ್ಲಿ:—

ಓಂಸ್ವಸ್ತಿ **ಶ್ರೀಮಹೋದಯ**ಸಮಾವಾಸಿತಾನೇಕ ಗೋಹಸ್ತ್ಯಶ್ವರಥಪತ್ತಿ ಸಂಪನ್ನಸ್ಕಂಧಾವಾರಾತ್ ಪರಮಭಗವತೀಭಕ್ತ್ಯೋಮಹಾರಾಜಶ್ರೀಭೋಜ ದೇವಸ್ತಸ್ಯಪುತ್ರಸ್ತತ್ಪಾದಾನುಧ್ಯಾತಶ್ರೀ ಚಂದ್ರಭಟ್ಟಾರಿಕಾದೇವ್ಯಾಮುತ್ಪ ನ್ನಃಪರಮಭಗವತೀಭಕ್ತ್ಯೋಮಹಾರಾಜ ಶ್ರೀಮಹೇಂದ್ರಪಾಲದೇವಶ್ರಾ ವಸ್ತಿಭುಕ್ತೌಶ್ರಾವಸ್ತೀಮಂಡಲಾಂತಃ ಪಾತಿಬಾಲಯಿಕಾವಿಷಯ ಸಂಬದ್ಧ ಪಾನೀಯಕ ಗ್ರಾಮಸಮುಪಗತಾ ಸರ್ವಾನೇವಯಥಾಸ್ಥಾನನಿಯುಕ್ತಾ ಪ್ರತಿವಾಸಿನಶ್ಚ ಸಮಾಜ್ಞಾಪಯತಿ ||

ಎಂಬುದರಲ್ಲಿ ಮಹೋದಯ\$ ವೆಂಬ ನಗರವನ್ನು ಮಹೇಂದ್ರಪಾಲನು ಆಳುತ್ತಿದ್ದಂತೆಯೂ ಕವಿಯಾದ ರಾಜಶೇಖರನು ಇವನ ಆಶ್ರಯದಲ್ಲಿ ಇದ್ದಂತೆಯೂ ಬಾಲಭಾರತದ ಪ್ರಸ್ತಾವನೆಯಿಂದ ತಿಳಿಯಬರುತ್ತದೆ. ಮಹೋದಯವೆಂಬ ನಗರಕ್ಕೆ ಕೆನೂಜ್, ಕಾನ್ಯಕುಬ್ಜ, ಗಾಧಿಪುರ, ಕೌಶ, ಕುಶಸ್ಥಲ ಎಂಬಾಪರನಾಮಗಳಿದ್ದು ವಾಗಿ ತಿಳಿಯಬರುತ್ತದೆ. ಇದಲ್ಲದೆ ಬಾಲರಾಮಾಯಣದಲ್ಲಿ.—

ಲಕ್ಷ್ಮಣಃ :—ಇದಂ ಪುನಸ್ತತೋಪಿ ಮಂದಾಕಿನೀ ಪರಿಕ್ಷಿಪ್ತಂ **ಮಹೋದಯಂ** ನಾಮನಗರಂದೃಶ್ಯತೇ.

ರಾಮಃ :—ಶಶ್ವತ್ಸುಧಾಮವಸುಧಾಮಹಿತಂದ್ವಿಷದ್ಬಿ
ರ್ನೋಗಾಹಿತಂ ಭವತಿ **ಗಾಧಿಪುರಂ** ಪುರಸ್ತಾತ್ |
ವೈದೇಹಿ ದೇಹಿ ಶಫರೀಸದೃಶಂದೃಶಂತ
ದಸ್ಮಿನ್ನಿತಂಬಿನಿನಿತಂಬವಹದ್ಯು ಸಿಂಧೌ || ೧೦—೮೮
ಇದಂದ್ವಯಂ ಸರ್ವಮಹಾಪವಿತ್ರಂ
ಪರಸ್ಪರಾಲಂಕರಣೈಕಹೇತುಃ
ಪುರಂಚ ಹೇ ಜಾನಕಿ! **ಕನ್ಯಾಕುಬ್ಜಂ**
ಸರಿಚ್ಚ ಗೌರೀಪತಿ ಮೌಳಿಮಾಲಾ || ೧೦—೮೯

ಎಂದು ಮಹೋದಯನಗರಕ್ಕೆ ಗಾಧಿಪುರ (ಕನ್ಯಾಕುಬ್ಜ)ವೆಂದು ಹೇಳಲ್ಪಟ್ಟಿದೆ.

\$ (ಅ) ಮಹೋದಯಾಃ ಕಾನ್ಯಕುಬ್ಜಂ ಕನ್ಯಾಕುಬ್ಜಂ ಮಹೋದಯಂ|| ಅಮರಕೋಶ.
(ಆ) ಕನ್ಯಾಕುಬ್ಜಂಗಾಧಿಪುರಂ ಕೌಶಂ ಕುಶಸ್ಥಲಂ ಚ ತತ್ ಇತಿ ಹೈಮನಾಮಮಾಲಾಯಾಂ
(ಇ) "ಮಹೋದಯಃ ಕಾನ್ಯಕುಬ್ಜೇ" ಇತಿವಿಶ್ವಪ್ರಕಾಶಮೇದಿನೀಕೋಶೇ.

ಡಾ|| ಫ್ಲೀಟರವರು ಅಸ್ನಿ (Asni) ಶಾಸನದಲ್ಲಿ ಹೇಳಲ್ಪಟ್ಟಿರುವ ಮಹೀಪಾಲರಾಜನೇ ಈ ಮಹೇಂದ್ರಪಾಲನ ಮಗನೆಂದೂ ಇವನೇ ರಾಜಶೇಖರನ ಶಿಷ್ಯನೆಂದೂ ಇವನು ವಿ. ಸಂ. ೯೭೪ ಅಥವಾ ಕ್ರಿ. ಶ. ೯೧೭ರಲ್ಲಿ ಆಳುತ್ತಿದ್ದನೆಂದೂ ಹೇಳಿ ರಾಜಶೇಖರನು ಕ್ರಿ. ಶ. ಹತ್ತನೆಯ ಶತಮಾನಾರಂಭದಲ್ಲಿದ್ದನೆನ್ನುವರು.$

ಮಹೋದಯವೆಂಬ ನಗರವನ್ನು ಮಹೇಂದ್ರಪಾಲ ಮತ್ತು ಇವನ ಮಗ ಮಹೀಪಾಲ ಇವರೀರ್ವರೂ ಆಳಿದುದಾಗಿ ಸಿಯೊದೊನೀಶಾಸನ (Siyodoni Inscription) ದಿಂದ ತಿಳಿಯಬರುತ್ತದೆ.

ಡಾ|| ಫ್ಲೀಟರವರು ನಿರ್ಭಯರಾಜನೂ ಮತ್ತು ಮಹೇಂದ್ರಪಾಲನೂ ಬೇರೆ ಬೇರೆಯೆಂದೂ ಮಹೇಂದ್ರಪಾಲನು ನಿರ್ಭಯರಾಜನ ಇನ್ನೊಬ್ಬ ಮಗನೋ ಅಥವಾ ಮುಮ್ಮಗನೋ ಆಗಿರಬೇಕೆಂದೂ ನಿರ್ಭಯರಾಜನ ನಿಜವಾದ ಹೆಸರು ಮಹಿಷಪಾಲನೆಂದೂ ಹೇಳುವರು.‡ ಆದರೆ ರಾಜಶೇಖರನು ಬರೆದಿರುವ ಗ್ರಂಥಗಳಲ್ಲಿ ನಿರ್ಭಯರಾಜನೆಂಬುದು ಮಹೇಂದ್ರಪಾಲನ ಪರ್ಯಾಯನಾಮವೆಂದು ವ್ಯಕ್ತವಾಗುತ್ತದೆ.§ ಮೆ|| ಕೇಲಹಾರ್ನರವರು ಸಿಯೊದೊನೀಶಾಸನದಂತೆ ಮಹೋದಯ (ಕನ್ಯಾಕುಬ್ಜ) ದಲ್ಲಾಳಿದ ನಾಲ್ಕುಜನ ರಾಜರನ್ನೂ ಅವರ ಆಳ್ವಿಕೆಯ ಕಾಲದೊಂದಿಗೆ ಹೇಳಿರುವರು. ಅದು ಹೀಗಿರುವುದು.

(೧) ಭೋಜ (ಇವನಾರೆಂಬುದಾಗಲಿ) ಕ್ರಿ. ಶ. ೮೬೨, ೮೭೬, ೮೮೨. (ಈ ಕಾಲಗಳಲ್ಲಿ ಆಳಿದವರು ಯಾರು ಯಾರೆಂಬುದಾಗಲಿ ಕೇಲಹಾರ್ನರವರು ಸ್ಪಷ್ಟಪಡಿಸಿಲ್ಲ.) (೨) ಮಹೇಂದ್ರಪಾಲ ಅಥವಾ ನಿರ್ಭಯನರೇಂದ್ರ ಅಥವಾ ಮಹಿಷಪಾಲ (ರಾಜಶೇಖರನ ಶಿಷ್ಯ) ಕ್ರಿ. ಶ. ೯೦೩-೯೦೭. (೩) ಇವನ ಮಗ ಕ್ಷಿತಿಪಾಲ ಅಥವಾ ಮಹೀಪಾಲ ಅಥವಾ ಹೇರಂಬಪಾಲ ಕ್ರಿ. ಶ. ೯೧೭. (೪) ಇವನ ಮಗ ದೇವಪಾಲ ಕ್ರಿ. ಶ. ೯೪೮.

ಡಾ|| ಫ್ಲೀಟರವರು ಹರ್ಷಸಂವತ್ಸರ ೧೫೫ ಅಥವಾ ಕ್ರಿ. ಶ. ೭೬೧-೨ರಲ್ಲಿ ಬರೆಯಲ್ಪಟ್ಟುದಾಗಿ, ಮಹೋದಯದಲ್ಲಾಳಿದ ಮಹೇಂದ್ರಪಾಲನ ವಿಚಾರವಾಗಿ ಹೇಳಲ್ಪಟ್ಟಿರುವ ಒಂದು ಶಾಸನವನ್ನು ಮುದ್ರಿಸಿರುವರು. ಇದರಲ್ಲಿ ಹೇಳಿರುವ ಮಹೇಂದ್ರಪಾಲನು ರಾಜಶೇಖರನ ಶಿಷ್ಯನಾದ ಮಹೇಂದ್ರಪಾಲನಿಗೆ ಪ್ರಾಚೀನ

$ Lanman's Karpuramanjari P. 179.

‡ Ibid — — ,,

§ ಕರ್ಪೂರಮಂಜರೀ ಪುಟ ೨.

* Lanman's Karpuramanjari P. 179.

ನಾಗಿರಬೇಕಾಗಿ ತೋರುತ್ತದೆ. ಈ ಕಾರಣದಿಂದ ರಾಜಶೇಖರನು ಶಂಕರಾಚಾರ್ಯರ ಸಮಕಾಲೀನನೆಂದು ಹೇಳುವ ಗ್ರಂಥವು ನಮಗೆ ಪ್ರಮಾಣವಾಗಿ ತೋರುವುದಿಲ್ಲ. ಅದರಲ್ಲಿ ಹೇಳಿರುವ ರಾಜಶೇಖರನು ಇವನಲ್ಲ.

ರಾಜಶೇಖರನು ಮಲಬಾರಿಗೆ ರಾಜನಾಗಿದ್ದನೆಂದೂ ಅವನ ನಿಜವಾದ ಹೆಸರು ಕುಲಶೇಖರಪೆರುಮಾಳೆಂದು ದಾಕ್ಷಿಣಾತ್ಯ ಕಥೆಗಳು ಹೇಳುವುವು. ಆದರೆ ಕೇರಳೋತ್ಪತ್ತಿ ಅಥವಾ ಕೇರಳವಿಶೇಷ ಮಹಾತ್ಮ್ಯವೆಂಬ ಗ್ರಂಥದಲ್ಲಿ ರಾಜಶೇಖರನೆಂಬ ರಾಜನು ಕ್ರಿ. ಶ. ೩೨೨ರಲ್ಲಿ ಆಳಿದುದಾಗಿ ಹೇಳಿರುವುದು ಹೊರ್ತು ಅವನ ಹೆಸರು ಕುಲಶೇಖರಪೆರುಮಾಳೆಂದಾಗಲೀ ಅವನ ಸಂಬಂಧವಾದ ಐತಿಹಾಸಕ ಕಥೆಯಾಗಲೀ ಹೇಳಲ್ಪಟ್ಟಿರುವುದಿಲ್ಲ.† ರಾಜಶೇಖರನು ಮಹೀಪಾಲನ ಆಶ್ರಯದಲ್ಲಿ ಎಲ್ಲಿಯವರೆಗೆ ಇದ್ದನೆಂದು ಖಂಡಿತಮಾಡಿ ಹೇಳಲಾಗುವುದಿಲ್ಲ. ಮಹೀಪಾಲನು ನರ್ಮದೆಯ ಉತ್ತರ ದೇಶವೆಲ್ಲವನ್ನೂ ಸ್ವಾಧೀನಪಡಿಸಿಕೊಂಡು ಸಮಗ್ರ ಆರ್ಯಾವರ್ತಕ್ಕೆಲ್ಲಾ ಒಡೆಯನಾಗಿದ್ದನೆಂಬುದು "(ತೇನ) ಮಹೀಪಾಲದೇವೇನ ಚ ರಘುವಂಶಮುಕ್ತಾಮಣೇರ್ ಆರ್ಯಾವರ್ತಮಹಾರಾಜಾಧಿರಾಜೇನ ಶ್ರೀನಿರ್ಭಯನರೇಂದ್ರನಂದನೇನಾರಾಧಿತಃ ಸಭಾಸದಃ" ಎಂಬುದರಿಂದ ಊಹಿಸಲಾಗುತ್ತದೆ. ಈ ಮೇಲ್ಕಂಡ ಕಾರಣಗಳಿಂದ ರಾಜಶೇಖರನು ಕ್ರಿ. ಶ. ಹತ್ತನೆಯ ಶತಮಾನದ ಪ್ರಾರಂಭದಲ್ಲಿದ್ದನೆಂಬುದು ಸ್ಪಷ್ಟವು. ಇದನ್ನೇ ಮತ್ತೊಂದು ವಿಧವಾಗಿ ಸ್ಥಾಪಿಸಿ ಹೇಳಬಹುದಾಗಿದೆ. ಮಹೇಂದ್ರಪಾಲನು ಕ್ರಿ. ಶ. ೯೦೩-೯೦೭ ರಲ್ಲಿ ಆಳಿದುದಾಗಿ ಸಿಯೊದೊನೀ ಶಾಸನವು ಹೇಳುತ್ತದೆ. ಮಹೀಪಾಲನು (ಮಹೇಂದ್ರಪಾಲನ ಮಗ) ಕ್ರಿ. ಶ. ೯೧೭ರಲ್ಲಿ ಆಳಿದುದಾಗಿ ಸ್ಥಿರಪಡುತ್ತದೆ. ಈ ಕಾರಣಗಳಿಂದ ರಾಜಶೇಖರನು ಕ್ರಿ. ಶ. ೯೦೩-೯೧೭ರ ಮಧ್ಯಕಾಲದಲ್ಲಿರಬೇಕೆಂದು ನಿಶ್ಚಯವಾಗುತ್ತದೆ. ಇದಲ್ಲದೆ ರಾಜಶೇಖರನು ತನ್ನ ಕಾವ್ಯಮೀಮಾಂಸಾಗ್ರಂಥದಲ್ಲಿ 'ಗೌಡವಧ' ಕಾರನಾದ ವಾಕ್ಪತಿರಾಜನನ್ನೂ* ಕ್ರಿ. ಶ. ೭೭೯-೮೧೩ ರವರೆಗೆ ಕಾಶ್ಮೀರದಲ್ಲಾಳಿದ ಜಯಾಪೀಡನ ಸಭಾಸದನಾದ ಉದ್ಭಟನನ್ನೂ‡ ಆನಂದವರ್ಧನನನ್ನೂ ಉದಾಹರಿಸಿಕೊಂಡಿರುವನು. ಕ್ರಿ. ಶ. ೯೬೦ರಲ್ಲಿ ಪೂರ್ತಿಗೊಳಿಸಲ್ಪಟ್ಟುದಾದ 'ಯಶಸ್ತಿಲಕಚಂಪೂ'ಕಾರನಾದ ಸೋಮದೇವನು ರಾಜಶೇಖರನನ್ನು ಹೇಳಿರುವುದರಿಂದ ರಾಜಶೇಖರನು ಆನಂದವರ್ಧನನಗಿಂತ ಈಚಿನವನೂ ಸೋಮದೇವನಿಗೆ ಪ್ರಾಚೀನನೂ ಆಗಿರಬೇಕು. ಎಂದರೆ ಕ್ರಿ. ಶ. ೮೮೦-೯೨೦ರ ಮಧ್ಯಕಾಲದಲ್ಲಿ ರಾಜಶೇಖರನು ಜೀವಿಸಿದ್ದಿರಬೇಕು

† Karpuramanjari P. 180.

* "ನ" ಇತಿವಾಕ್ಪತಿರಾಜಃ ಕಾವ್ಯಮೀಮಾಂಸಾ ಪುಟ ೬೨.

‡ ತಸ್ಯ ಚ ತ್ರಿಧಾಭಿಧಾವ್ಯಾಪಾರಃ ಇತ್ಯುದ್ಭಟಾಃ ಕಾವ್ಯಮೀಮಾಂಸಾ ಪುಟ ೨೨ ಮತ್ತು ೪೧.

ಎಂದರೆ ಒಟ್ಟನಲ್ಲಿ ಕ್ರಿ. ಶ. ಹತ್ತನೆಯ ಶತಮಾನದ ಪ್ರಾರಂಭದಲ್ಲಿದ್ದವನೆಂದು ಧಾರಾಳವಾಗಿ ಹೇಳಬಹುದು.

ಗ್ರಂಥಗಳು:— (೧) ಬಾಲರಾಮಾಯಣ.
(೨) ಬಾಲಭಾರತ.
(೩) ವಿದ್ಧಶಾಲಭಂಜಿಕಾ.
(೪) ಕರ್ಪೂರಮಂಜರೀ
(೫) ಕಾವ್ಯಮೀಮಾಂಸಾ.
(೬) ಹರವಿಲಾಸ.
(೭) ಭುವನಾಭ್ಯುದಯ (ಭುವನ) ಕೋಶವೆಂಬ

ಏಳು ಗ್ರಂಥಗಳು ಪ್ರಕೃತ ದೊರೆತಿರುವುವು. ಇವುಗಳಲ್ಲಿ ಮೊದಲಣ ನಾಲ್ಕು ನಾಟಕಗಳು. ಐದನೆಯದು ಅಲಂಕಾರಶಾಸ್ತ್ರ. ಆರನೆಯದು ಕಾವ್ಯ. ಏಳನೆಯದು ಕೋಶ.

ರಾಜಶೇಖರನು ತನ್ನನ್ನು ಕವಿರಾಜ*ನೆಂದು ಕರೆದುಕೊಂಡಿರುವನು ಇವನು ಮೊದಲು ಬಾಲಕವಿಯಾಗಿದ್ದು ಅನಂತರ ಮಹಾಕವಿಯಾಗಿ ಕೊನೆಗೆ ಕವಿರಾಜನಾದುದಾಗಿ ತಿಳಿಯಬರುತ್ತದೆ. ಇವನು ಬರೆದಿರುವ ಕಾವ್ಯಮೀಮಾಂಸಾಗ್ರಂಥದಲ್ಲಿ ದಶವಿಧ ಕವಿಲಕ್ಷಣ§ಗಳನ್ನು ಹೇಳಿ ಅದರಲ್ಲಿ ಆರನೇಯದು ಮಹಾಕವಿ ಲಕ್ಷಣ†ವೆಂದೂ ಏಳನೆಯದೇ ಕವಿರಾಜಲ$ಕ್ಷಣವೆಂದೂ ಹೇಳಿರುವನಾದುದರಿಂದ ಇವನು ಮಹಾಕವಿಗಿಂತಲೂ ಹಿರಿಯನು.

ಇವನು ಚಿಕ್ಕತನದಲ್ಲಿ ಬಾಲಕವಿಯಾಗಿದ್ದು ಬಾಲರಾಮಾಯಣ. ಬಾಲಭಾರತ ನಾಟಕಗಳನ್ನು ಬರೆದುದಾಗಿ ಕರ್ಪೂರಮಂಜರಿಯಿಂದ ಗೊತ್ತಾಗುತ್ತದೆ.

ವಿದ್ಧಶಾಲಭಂಜಿಕೆಯನ್ನು ಬಾಲ್ಯದಲ್ಲಿಯೇ ಬರೆದಿರಬೇಕಾಗಿ ತೋರುತ್ತದೆ ಕರ್ಪೂರಮಂಜರೀ ಮತ್ತು ಕಾವ್ಯಮೀಮಾಂಸಾಗ್ರಂಥವನ್ನು ಕವಿರಾಜನಾದ ನಂತರ ಬರೆದಿರಬೇಕಾಗಿ ಬೋಧೆಯಾಗುತ್ತದೆ. ಹೇಗೆಂದರೆ ಬಾಲರಾಮಾಯಣ,

---

* 'ಬಾಲಕವಿಃ ಕವಿರಾಜೋ' ಕರ್ಪೂರಮಂಜರೀ ೧-೯.

§ ದಶ ಚ ಕವೇರವಸ್ಥಾ ಭವಂತಿ· ಕಾವ್ಯಮೀಮಾಂಸಾ ಪುಟ ೧೯.

† ಯೋಽನ್ಯತರಪ್ರಬಂಧೇ ಪ್ರವೀಣಃ ಸ ಮಹಾಕವಿಃ Ibid ಪುಟ ೧೯.

$ ಯಸ್ತು ತತ್ರ ತತ್ರ ಭಾಷಾವಿಶೇಷೇ ತೇಷು ಪ್ರಬಂಧೇಷು ತಸ್ಮಿಂಸ್ತಸ್ಮಿಂಶ್ಚ ರಸೇ ಸ್ವತಂತ್ರಃ ಸ ಕವಿರಾಜಃ Ibid ಪುಟ. ೧೯.

ಬಾಲಭಾರತ, ಮತ್ತು ವಿದ್ಧಶಾಲಭಂಜಿಕೆಯ ಶ್ಲೋಕಗಳು ಕಾವ್ಯಮೀಮಾಂಸಾ ದಲ್ಲಿ ಕಂಡುಬರುತ್ತವೆ. ಆದರೆ:—

ಬ್ರೂತೇ ಯಃ ಕೋಽಪಿ ದೋಷಂ ಮಹದಿತಿ ಸುಮತಿರ್ಬಾಲರಾಮಾಯಣೇಽಸ್ಮಿ
ನ್ಪ್ರಾಪ್ತಪ್ರಬ್ಯೋಽಸೌ ಪಠೀಯಾನಿಹ ಭಣತಿಗುರೋ ವಿದ್ಮ ತೇ ವಾ ನ ವೇತಿ
ಯದ್ಯಸ್ತಿ ಸ್ವಸ್ತಿ ತುಭ್ಯಂ ಭವ ಪರನರುಚಿರ್ವಿದ್ಧಿ ನಃ **ಷಟ್ ಪ್ರಬಂಧಾ**
ನ್ಕೃವಂ ಚೇದ್ವೀರ್ಯಮಾಸ್ತಾಂ ನಟವಟುವದನೇ ಜರ್ಜರಾಕಾವ್ಯಕಂಥಾ ॥
ಬಾಲರಾಮಾಯಣ ೧-೧೨

ಎಂಬ ಬಾಲರಾಮಾಯಣದ ಶ್ಲೋಕದಿಂದ ಆರುಗ್ರಂಥಗಳನ್ನು ಬರೆದಿರುವುದಾಗಿ ಸ್ಪಷ್ಟಪಡುತ್ತದೆ. ಇದರಿಂದ ಬಾಲರಾಮಾಯಣನಾಟಕರಚನೆಯು ಕಾಲಕ್ಕೆ ಆರುಗ್ರಂಥಗಳು ರಚನೆಯಾಗಿದ್ದಿರಬೇಕಾಗಿ ತೋರುವುದಲ್ಲದೆ ಬಾಲರಾಮಾಯಣವು ಕೊನೆಯದೆನ್ನಬೇಕಾಗುತ್ತದೆ. ಇದು ನಿಜವೆನ್ನುವುದಾದರೆ ಬಾಲರಾಮಾಯಣದ ವೇಳೆಗೆ ಬರೆದಿದ್ದ ಆರುಗ್ರಂಥಗಳಾವುವು ? ಎಂಬ ಪ್ರಶ್ನೆಯುಂಟಾಗುತ್ತದೆ. ಮೇಲೆ ಹೇಳಿರುವ ಗ್ರಂಥಗಳಲ್ಲಾವುವು? ಉಪಲಬ್ಧವಿಲ್ಲದವುಗಳಾವುವು? ಎಂಬುದರ ಸಮರ್ಥನವು ಅವಶ್ಯಕವೆನಿಸುತ್ತದೆ. ಹೀಗಾಗಿಸಂದೇಹಸಾಮ್ರಾಜ್ಯದಲ್ಲೋಲಾಡಬೇಕಾಗಿದೆ.

ರಾಜಶೇಖರನು ಹರವಿಲಾಸವೆಂಬ ಕಾವ್ಯವನ್ನು ಬರೆದಿರುವುದಾಗಿ ಹೇಮಚಂದ್ರನು ತನ್ನ 'ಕಾವ್ಯಾನುಶಾಸನ' ದಲ್ಲಿ ಹೇಳಿಕೊಂಡಿರುವುದಲ್ಲದೆ ಹರವಿಲಾಸದ ಎರಡು ಶ್ಲೋಕಗಳನ್ನು ಉದಾಹರಿಸಿಕೊಂಡಿರುವನು. ಮೊದಲನೆಯದು ಮಂಗಳಾಚರಣ.* ಎರಡನೆಯದು ದುರ್ಜನ ಮತ್ತು ಸಜ್ಜನವರ್ಣನವಾಗಿರುವುದು.†

ಉಜ್ವಲದತ್ತನು ಹರವಿಲಾಸದ ಶ್ಲೋಕಾರ್ಧವನ್ನು‡ ಉದಾಹರಿಸಿಕೊಂಡಿರುವನು. ಇವುಗಳೆಲ್ಲವನ್ನೂ ನೋಡಿದರೆ ಹರವಿಲಾಸವು ಕಾವ್ಯವಾಗಿರಬೇಕೆಂದೂ ಕವಿರಾಜನಾದ ಅನಂತರ ಬರೆದಿರಬೇಕೆಂದು ಸ್ಪಷ್ಟವಾಗುತ್ತದೆ. ಇವನು ಶ್ಲೋಕಾರ್ಧ

---

* ಆಶೀರ್ಯಥಾ ಹರವಿಲಾಸೇ:—
ಓಮಿತ್ಯೇಕಾಕ್ಷರಂಬ್ರಹ್ಮ ಶ್ರುತೀನಾಂ ಮುಖಮಕ್ಷರಂ
ಪ್ರಸೀದತು ಸತಾಂ ಸ್ವಾಂತೇಷ್ವೇಕಂ ತ್ರಿಪುರುಷೀಮಯಂ ॥

† ಸುಜನ ದುರ್ಜನಸ್ವರೂಪಂ ಹರವಿಲಾಸೇ: —
ಇತಸ್ತತೋ ಭಷನ್ಭೂರಿ ನ ಪತೇತ್ಪಿಶುನಃ ಶುನಃ
ಅವದಾತತಯಾ ಕಿಂಚ ನ ಭೇದೋ ಹಂಸತಃ ಸತಃ ॥

‡ ದಶಾನನಕ್ಪಿಪ್ತ ಶಿರಪ್ರಖಂಡಿತಃಕ್ಪಚಿ
ದ್ಗತಾರ್ಧೋ ಹರದೀಧಿತಿರ್ಯಥಾ॥ ಇತಿಹರವಿಲಾಸೇ ॥ ii ೨೮

ವನ್ನು ಉದಾಹರಿಸಿಕೊಂಡಿರುವುದರ ಜೊತೆಗೆ ಶಿವನಪ್ರತಿನಾಮಗಳ ವಿಚಾರವಾಗಿ ಬೇರೆ ಶ್ಲೋಕಾರ್ಧವನ್ನು ದಾಹರಿಸಿಕೊಂಡು ಅದನ್ನು ರಾಜಶೇಖರನದೆಂದಿರುವನು. ಈ ಕೋಶವಾವುದೆಂಬುದು ತಿಳಿಯದು. ಇವುಗಳೆಲ್ಲವನ್ನೂ ನೋಡಿದರೆ ರಾಜ ಶೇಖರನು ಮೇಲೆಹೇಳಿರುವಗ್ರಂಥಗಳಲ್ಲದೆ ಇನ್ನೂ ಅನೇಕ ಗ್ರಂಥಗಳನ್ನು ಬರೆದಿರ ಬಹುದಾಗಿಯೂ ಅವು ಉಪಲಬ್ಧವಿಲ್ಲವಾಗಿಯೂ ಊಹಿಸಬಹುದಾಗಿದೆ.

ರಾಜಶೇಖರನು ಭುವನಕೋಶವೆಂಬ ಭೂಗೋಳ ವಿಷಯಕ ಗ್ರಂಥವನ್ನು ಬರೆದಿರುವುದಾಗಿ ಕಾವ್ಯಮೀಮಾಂಸೆಯ ಹದಿನೇಳನೆಯ ಅಧ್ಯಾಯದ ಕೊನೆಯಲ್ಲಿ ಹೇಳಿಕೊಂಡಿರುವುದು ಕಂಡುಬರುತ್ತದೆ.§

ಬಾಲರಾಮಾಯಣ:—ಇದು ಪತ್ತು ಅಂಕಗಳುಳ್ಳ ನಾಟಕ. ಇದು ಪ್ರಕರಣ ಜಾತಿಗೆ ಸೇರಿದುದು. ಇದರಲ್ಲಿ ಒಳಗೆ ಶ್ಲೋಕಗಳಿರುವುವು. ಸೀತಾ ಸ್ವಯಂವರ ಮೊದಲು ರಾವಣನವಧಾನಂತರ ಅಯೊಧ್ಯೆಗೆಬಂದು ಅಗ್ನಿಪ್ರೂತಳಾದ ಜಾನಕಿಯೊಡನೆ ರಾಜ್ಯವಾಳಿದವರೆಗೆ ಕಥೆಯು ಬರೆಯಲ್ಪಟ್ಟಿದೆ. ಇದರಲ್ಲಿ ಶೂರ್ಪ ಣಖಿಯೇ ಮೊದಲಾದರಾಕ್ಷಸರು ದಶರಥ ಮತ್ತು ಕೈಕೆಯಿಯ ರೂಪದಿಂದಬಂದು ರಾಮನನ್ನು ವನವಾಸಕ್ಕೆಕಳುಹಿದುದಾಗಿ ಸೂಚಿಸಿದೆ. ಸೀತಾವಿಷಯಕವಾದ ರಾವ ಣನಮೋಹವೂ, ಸೌಂದರ್ಯಮುಗ್ಧನಾಗಿ ಹೆಂಬಲಿಸುವಿಕೆಯೂ, ಅವನ ನಿರ್ದಯ ಕ್ಕಿಂತಲೂ ಹೆಚ್ಚಾಗಿ ವರ್ಣಿತವಾಗಿದೆ. ಇವನು ರಾಮಾಯಣ ಕಥೆಯನ್ನು ತೆಗೆದುಕೊಂಡು ಭವಭೂತಿಯ ಶೈಲಿಯನ್ನನುಕರಿಸಲಾಶಿಸಿ ಮಹಾವೀರಚರಿತೆ ಯನ್ನು ಎದುರಿಗೆ ಇಟ್ಟುಕೊಂಡು ಬರೆದಿರಬೇಕಾಗಿ ತೋರುತ್ತದೆ.† ಆರನೆಯ ಅಂಕ ದಲ್ಲಿ ದಶರಥನ ಹೆಂಡತಿಯನ್ನು (ಕೈಕೆಯಿಯನ್ನು) ದೋಷದೂರಳೆಂದು ಸಮಾ ಧಾನ ಪೇಳುವ ವಿಚಾರದಲ್ಲಿ ಮಹಾಕವಿ ಭವಭೂತಿಯನ್ನು ಹಿಂಬಾಲಿಸಿರುವನಲ್ಲದೆ, ಲಂಕಾ ಮತ್ತು ಅಲಕ ಇವುಗಳವರ್ಣನದಲ್ಲಿ,'ನೋಟಗಳ ಪ್ರದರ್ಶನಚತುರತೆಯಲ್ಲಿ ಭವಭೂತಿಯನ್ನು ಅನುಸರಿಸಿರುವನು. ಕವಿಯ ಭಾಷಾಸಾಮರ್ಥ್ಯವೂ ಶಬ್ದ ಯೋಜನಕೌಶಲವು ಇವನ ಎಲ್ಲಾ ನಾಟಕಗಳಿಗಿಂತಲೂ ಇದರಲ್ಲಿ ಕಡುಜಾಣ್ಮೆ

$ ಚಂಡೀಕಾಂತೋ ಭಗಾಲೀ ಚ
ಲೇಲಹಾನೋ ವೃಷಧ್ವಜಃ ॥ ii ೬೬.

§ ಇತ್ಥಂ ದೇಶವಿಭಾಗೋ ಮುದ್ರಾಮಾತ್ರೇಣ ಸೂತ್ರಿತಃ ಸುಧಿಯಾಂ
ಯಸ್ತು ಜಗೀಷತ್ಯಧಿಕಂ ಪಶ್ಯಂತು ಮದ್ಭುವನಕೋಶಮಸ್ಮೌ ॥
ಕಾವ್ಯಮೀಮಾಂಸಾ ೧೭ನೆಯ ಅಧ್ಯಾಯ—

† ಬಾಲರಾಮಾಯಣದ ೧೦—೬೫ ಮತ್ತು ಮಹಾವೀರಚರಿತೆ ೧—೫೫ನೆಯ ಶ್ಲೋಕ ಗಳನ್ನು ಹೋಲಿಸಿ ನೋಡಿ.

ಯಿಂದ ವರ್ಣಿತವಾಗಿದೆ. ಈ ನಾಟಕವು ಮಹೇಂದ್ರಪಾಲನ ಅಪೇಕ್ಷೆಯಂತೆ ಅಭಿನಯಿಸಲ್ಪಟ್ಟಿರುವುದಾಗಿದೆ.

ಬಾಲಭಾರತ‡:—ಇದಕ್ಕೆ ಪ್ರಚಂಡ ಪಾಂಡವವೆಂದು ಹೆಸರು. ಇದು ಅಪೂರ್ಣವಾಗಿರುವುದಾಗಿ ಎರಡು ಅಂಕಗಳು ಮಾತ್ರವೇ ಉಪಲಬ್ಧವಿರುವುವು. ಇದರಲ್ಲಿ ದ್ರೌಪದಿಯ ಸ್ವಯಂವರ ಮತ್ತು ವಸ್ತ್ರಾಪಹರಣ ಇವು ವರ್ಣಿತವಾಗಿವೆ. "ರಾಜಶೇಖರವೇರ್ಮಹಾತ್ಮನೋ ಬಾಲಭಾರತಮಿದಂಹಿನಾಟಕಂ" ಎಂಬುದನ್ನು ನೋಡಿದರೆ೫ಅಂಕಗಳಿಗಿಂತ ಹೆಚ್ಚಾಗಿರಬೇಕಾಗಿ ಬೋಧೆಯಾಗುತ್ತದೆ. ಮೊದಲನೆಯ ಅಂಕದಲ್ಲಿ ವ್ಯಾಸಪ್ರಾಚೇತಸಪ್ರವೇಶ, ಅರ್ಜುನನು ಮತ್ಸ್ಯಯಂತ್ರವನ್ನು ಭೇದಿಸುವಿಕೆ. ಎರಡನೆಯ ಅಂಕದಲ್ಲಿ ದ್ಯೂತಾರಂಭ ಧರ್ಮರಾಜನ ಸೋಲು. ದುಶ್ಶಾಸನನಿಂದ ಅವಮಾನಿತಳಾದ ದ್ರೌಪದಿಯ ಪ್ರತಿಜ್ಞೆ ಇವೇ ಮೊದಲಾದವು ವನಗಮನದವರೆಗೆ ವರ್ಣಿತವಾಗಿದೆ. ಇದು ಮಹೋದಯದಲ್ಲಿ ಮಹೀಪಾಲನ ಆಳ್ವಿಕೆಯಲ್ಲಿ ಅಭಿನಯಿಸಲ್ಪಟ್ಟಿತು.

ವಿದ್ಧಶಾಲಭಂಜಿಕಾ ಅಥವಾ ಪ್ರತಿಮಾ$:—ಇದು ನಾಲ್ಕು ಅಂಕಗಳುಳ್ಳ ನಾಟಿಕಾ. ರತ್ನಾವಳೀನಾಟಿಕೆಯನ್ನನುಕರಿಸಿ ಬರೆದಿರುವಹಾಗೆ ತೋರುತ್ತದೆ. ಕಥಾವಸ್ತುವು ಕರ್ಪೂರಮಂಜರಿಯಂತೆ ಇದೆ. ಪುತ್ರಸಂತಾನವಿಲ್ಲದ ಲಾಟದೇಶದ ರಾಜನಾದ ಚಂದ್ರವರ್ಮನು ತನ್ನ ಒಬ್ಬಳೇ ಮಗಳಾದ ಮೃಗಾಂಕಾವಳಿಗೆ ಗಂಡು ವೇಷವನ್ನಳವಡಿಸಿ ಮೃಗಾಂಕವರ್ಮಾಭಿಧಾನದಿಂದ ವಿದ್ಯಾಧರಮಲ್ಲನ ರಾಣಿಯ ಬಳಿಗೆ ಕಳುಹಿಸಿಕೊಡುವನು. ಮೊದಲನೆಯ ಅಂಕದಲ್ಲಿ ವಿದ್ಯಾಧರಮಲ್ಲನು ಸ್ವಪ್ನದಲ್ಲಿ ತಾನೋರ್ವ ಸುಂದರಿಯನ್ನು ನೋಡಿದುದಾಗಿಯೂ ಅವಳನ್ನು ಹಿಡಿದುಕೊಳ್ಳುವಷ್ಟರಲ್ಲಿ ಅವಳು ಜಾರಿಹೋದ ತನ್ನ ಕಂಠಾಭರಣವನ್ನು ಬಿಟ್ಟು ತಪ್ಪಿಸಿಕೊಂಡು ಹೋದುದಾಗಿ ವಿದೂಷಕನ ಬಳಿ ಹೇಳಿಕೊಳ್ಳುವನು. ಆದರೆ ಅದು ಸ್ವಪ್ನವಲ್ಲವೆಂದೂ ನಿಜವಾದುದೆಂದೂ ಮಂತ್ರಿಯ ಸಲಹೆಯಿಂದ ನಡೆಯಿಸಲ್ಪಟ್ಟುದಾಗಿ ಮೂರನೆಯ ಅಂಕದಿಂದ ತಿಳಿಯಬರುತ್ತದೆ. ಕಾಮದೇವನನ್ನು ನೋಡಲು ರಾಜನ ಶಯ್ಯಾಗೃಹಕ್ಕೆ ಹೋಗಬೇಕೆಂದು ದಾಸಿಯೊಬ್ಬಳು ಮೃಗಾಂಕಲೇಖೆಯನ್ನು ಒತ್ತಾಯಮಾಡುವಳು. ಅನಂತರ ರಾಜನು ಉದ್ಯಾನವಿಹಾರಕ್ಕೆ ಹೋಗಿ ಅಲ್ಲಿಗೆಬಂದಿದ್ದ ಸುಂದರಿಯರನೇಕರಮಧ್ಯದಲ್ಲಿ ವಿಹರಿಸುತ್ತಾ ತಾನು ಸ್ವಪ್ನದಲ್ಲಿ ಕಂಡಂತಾದ ಪ್ರತಿಮೆಯೊಂದನ್ನು ವಿಹಾರಮಂದಿರದಲ್ಲಿ ನೋಡಿ ಗುರ್ತಿಸಿ ಮೋಹಪರವಶನಾಗಿ ತನಗೆ ದೊರೆತಿದ್ದ ಕಂಠಾಭರಣವನ್ನು ಅದರ ಕೊರಳಿಗೆ ಹಾಕು

‡ ಮಹಾಕವಿ ಶ್ರೀಮದಮರಚಂದ್ರಸೂರಿ ವಿರಚಿತ ಬಾಲಭಾರತ (ಕಾವ್ಯವು) ಇದಲ್ಲ.

$ ಇದು ಭಾಸಕೃತಪ್ರತಿಮಾ ನಾಟಕವಲ್ಲ.

ವನು. ಕೊನೆಗೆ ಮೃಗಾಂಕಾವಳಿಯ ಸಂದರ್ಶನ ಲಾಭವಾದರೂ ಅವಳು ಬಹಳ ಹೊತ್ತು ಅಲ್ಲಿ ನಿಲ್ಲಲಿಲ್ಲ. ಎರಡನೆಯ ಅಂಕದಲ್ಲಿ ತಾನು ಹೇಗೆ ಮೃಗಾಂಕಾವಳಿಯಲ್ಲಿ ಅನುರಕ್ತನೋ ಹಾಗೆಯೇ ಮೃಗಾಂಕಾವಳಿಯೂತನ್ನಲ್ಲಿ ಅನುರಕ್ತಳಾಗಿರುವಳೆಂಬು ದನ್ನು ತಿಳಿಯುವನು. ಮೂರನೆಯ ಅಂಕದಲ್ಲಿ ವಿದೂಷಕನು ರಾಣಿಯ ಗೆಳತಿ ಯಾದ ಮೇಖಲೆಯೊಡನೆ ಯೋಚಿಸಿ ಉಪಾಯದಿಂದ ರಾಜನೂ ನಾಯಕಿಯೂ ಸೇರುವಂತೆ ಮಾಡಿದನಾದರೂ ರಾಣಿಯು ಬಂದಳೆಂಬುದನ್ನು ತಿಳಿದು ಪರಸ್ಪರ ಅಗಲಬೇಕಾದುದು. ನಾಲ್ಕನೆಯ ಅಂಕದಲ್ಲಿ ವಿದೂಷಕನ ಪತ್ನಿಯು ನಿದ್ರೆಯಲ್ಲಿ ರಾಣಿಯು ಮೃಗಾಂಕಾವಳಿಯನ್ನು ರಾಜನಿಗೆ ಕೊಟ್ಟು ಮದುವೆಯನ್ನು ಮಾಡ ಲಿಚ್ಛಿಸುವುದೇ ಮೊದಲಾದ ವಿಷಯಗಳನ್ನು ಕನವರಿಸುತ್ತಿರುವಂತೆ ನಟಿಸುವಳು. ಹೀಗಾಗಿ ಕೊಂಚಕಾಲಡಲ್ಲಿ ಇವರೀರ್ವರಿಗೂ ಮದುವೆಯಾಗುವುದು. ಇಷ್ಟರಲ್ಲಿ ದೂತನೋರ್ವನು ಬಂದು ,ಚಂದ್ರವರ್ಮನಿಗೆ ಪುತ್ರೋತ್ಸವವಾದುದೆಂದು ತಿಳಿ ಸುವನು. ಎಲ್ಲರೂ ಹೃಷ್ಟಚಿತ್ತರಾಗುವರು. ಕಥೆಯೂ ಮುಗಿದುದು. ಇದನ್ನು ಶ್ರೀಯುವರಾಜನ ಹೇಳಿಕೆಯಂತೆ ಅಭಿನಯಿಸಲ್ಪಟ್ಟುದಾಗಿದೆ. ಇದಕ್ಕೆ ಘನ ಶ್ಯಾಮನೆಂಬುವನು ವ್ಯಾಖ್ಯಾನವನ್ನು ಬರೆದಿರುವನು. ಸುಂದರೀ ಮತ್ತು ಕಮಲಾ ಎಂಬ ಹೆಂಗಳೆಯರಿಬ್ಬರು ಘನಶ್ಯಾಮನ ಮಡದಿಯರು. ಇವರು ವಿದ್ಧಶಾಲಭಂಜಿ ಕೆಗೆ ಟೀಕೆಯನ್ನು ಬರೆದು ಅದನ್ನು 'ವಿದ್ಧಶಾಲಭಂಜಿಕಾವ್ಯಾಖ್ಯಾ' ಎಂದೂ, ಚಮು ತ್ಕಾರತರಂಗಿಣೀ, ಎಂದೂ 'ಸುಂದರೀಕಮಲೀಯ'ವೆಂದೂ ಕರೆದಿರುವರು. ಇದು.

ಸುಂದರೀಕಮಲಾಭ್ಯಾಂ ಸಾ
　ವ್ಯುತ್ಪನ್ನಾನಾಂ ಸುಬೋಧನೇ
ಇಯಂ ಪ್ರಣೀಯತೇ ಟೀಕಾ
　ಚಮುತ್ಕಾರತರಂಗಿಣೀ॥

ಎಂಬ ಶ್ಲೋಕದಿಂದಲೂ ವ್ಯಾಖ್ಯಾನದ ಕೊನೆಯಲ್ಲಿ " ಇತಿಮಹಾರಾಜಪದ + ಸುಂದರೀ ಕಮಲೀಯ ಸಹಜಸಮಾಖ್ಯಾನೇ　ತೃತೀಯೋಂಕಃ " ಎಂದು ಹೇಳಿರುವುದರಿಂದ ಸ್ಪಷ್ಟಪಡುತ್ತದೆ. ಈ ಅಪೂರ್ವ ವ್ಯಾಖ್ಯಾನವು ಇನ್ನೂ ಅಚ್ಚಾ ಗಿರುವುದಿಲ್ಲ.

ಕರ್ಪೂರಮಂಜರೀ :—ಇದು ರೂಪಕಭೇದವಾದ ಸಾಟ್ಟಕ$ ಜಾತಿಗೆ ಸೇರಿದುದು. ಇದು ಪ್ರಾಕೃತದಲ್ಲಿರುವುದು :—

$ ಸಾಟ್ಟಕವೆಂದರೆ ಪ್ರವೇಶಕ ವಿಷ್ಕಂಭಂಗಳೊಂದೂ ಇಲ್ಲದೆ ನಾಲ್ಕು ಜವನಿಕಾಂತರ ಗಳಿಂದ ಕೂಡಿರುವ ಪ್ರಾಕೃತ ಭಾಷಾರೂಪಕಕ್ಕೆ ಸಾಟ್ಟಕವೆಂದು ಹೆಸರು.

" ಭೈರವಾನಂದಃ! ತ್ವಂ ಸುಷ್ಪುತರಂ ಭ್ರಾಂಕೊಽಸಿ।
ಯತಃಕರ್ಪೂರಮಂಜರ್ಯಾ **ಘನಸಾರನುಂಜರೀ** ತಿನಾಮಾಂತರಂ ಚಾನಾಸಿ‡ "

ಎಂದು ಹೇಳಲ್ಪಟ್ಟಿರುವುದರಿಂದ ಕರ್ಪೂರಮಂಜರಿಗೆ ಘನಸಾರಮಂಜರೀ ಎಂಬ ನಾಮಾಂತರವಿರುವುದಾಗಿ ತಿಳಿಯಬರುತ್ತದೆ. ಇದರ ಕೆಲವು ವಿಚಾರಗಳು ನಾಟಿಕೆಯನ್ನು ಹೋಲುವುವು. ರಾಜನಾದ ಚಂಡಪಾಲನು ಕುಂತಳ ರಾಜ ಕುವರಿಯಾದ ಕರ್ಪೂರಮಂಜರಿಯನ್ನು ಮದುವೆಯಾಗಿ ಹೇಗೆ ಚಕ್ರವರ್ತಿಪದವಿ ಯನ್ನು ಹೊಂದಿ ಸುಖಿಸಿದನೆಂಬ ವಿಚಾರವು ವರ್ಣಿತವಾಗಿರವುದು. ಭೈರವಾ ನಂದನು ಮಾಡುವ ತಂತ್ರಗಳು ಅದ್ಭುತರಸವನ್ನು ಸೂಚಿಸುವುವಾಗಿವೆ. ಇದು ಪ್ರಾಕೃತದಲ್ಲಿ ಬರೆಯಲ್ಪಟ್ಟಿರುವುದು. ಪ್ರಾಕೃತದ ವಿಚಾರವಾಗಿ ರಾಜಶೇಖರನ ಮತವು ಹೀಗಿರುವುದು.—

ಪರುಷಾಃ ಸಂಸ್ಕೃತಗುಂಫಾಃ
ಪ್ರಾಕೃತಗುಂಫೋಽಪಿ ಭವತಿ ಸುಕುಮಾರಃ।
ಪುರುಷಮಹಿಲಾನಾಂ
ಯಾವದಿಹಾಂತರಂ ತೇಷು ತಾವತ್ ॥§

ಸಂಸ್ಕೃತವು ಕಟುವೆಂದೂ ಪ್ರಾಕೃತವು ಸುಕುಮಾರ (ಚೆಲು) ವೆಂದೂ ಇವೆರಡರ ವ್ಯತ್ಯಾಸವು ಗಂಡಸರಿಗೂ ಹೆಂಗಸರಿಗೂ ಇರುವಷ್ಟೆಂದೂ ಒಕ್ಕಣಿಸಿರು ವನು. ಇದನ್ನು ರಾಜಶೇಖರನ ಹೆಂಡತಿಯಾದ ಅವಂತಿಸುಂದರಿಯ ಹೇಳಿಕೆ ಯಂತೆ ಅಭಿನಯಿಸಲ್ಪಟ್ಟುದಾಗಿದೆ.

ಕಾವ್ಯಮೀಮಾಂಸಾ :—ಇದು ಅಲಂಕಾರ ಗ್ರಂಥ. ಇದರಲ್ಲಿ ಹದಿನೆಂಟು ಅಧ್ಯಾಯಗಳಿರುವುವು. ಶೈಲಿಯು ಕೌಟಲ್ಯನ ಅರ್ಥಶಾಸ್ತ್ರದಂತೆ, ವಾತ್ಸ್ಯಾಯನನ ಕಾಮಸೂತ್ರದಂತೆ ಇರುವುದು. ಪ್ರಕೃತ ನಮಗೆ ದೊರೆತಿರುವ ಕಾವ್ಯಮೀ ಮಾಂಸಾ ಗ್ರಂಥಾಂತ್ಯದಲ್ಲಿ ಕಂಡುಬರುವ " ಇತಿರಾಜಶೇಖರಕೃತೌ ಕಾವ್ಯ ಮೀಮಾಂಸಾಯಾಂ ಕವಿರಹಸ್ಯೇ¶ ಪ್ರಥಮೋಽಧಿಕರಣೇ ಕಾಲವಿಭಾಗೋ ನಾಮ ಅಷ್ಟಾದಶೋಧ್ಯಾಯಃ " ಎಂದೂ " ಸಮಾಪ್ತಮಿದಂ ಪ್ರಥಮಾಧಿ ಕರಣಂ ಕವಿರಹಸ್ಯಂ ಕಾವ್ಯಮೀಮಾಂಸಾಯಾಂ " ಎಂದಿರುವುದನ್ನು ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿದರೆ ಕಾವ್ಯಮೀಮಾಂಸಾ ಗ್ರಂಥವು ಈಗ ದೊರೆತಿರುವುದ ಕ್ಕಿಂತಲೂ ಇನ್ನೂ ಹೆಚ್ಚಾಗಿರಬೇಕಾಗಿ ಬೋಧೆಯಾಗುತ್ತದೆ.

‡ ಕರ್ಪೂರಮಂಜರೀ ಪುಟ ೧೦೬
§ — Ibid — ಪು ೯.
¶ ಹಲಾಯುಧನ ಕವಿರಹಸ್ಯವು ಇದಲ್ಲ.

ಇವನ ಕೆಲವು ಶ್ಲೋಕಗಳನ್ನು ಮಾದರಿಗಾಗಿ ಬರೆಯುವೆವು:--

ಚೈತ್ರವರ್ಣನವು ಹೀಗಿರುವದು :—

ಲಂಕಾತೋರಣಮಾಲಿಕಾವಲಿನಃ ಕುಂಭೋದ್ಭವಸ್ಯಾಶ್ರಮೇ
ಮಂದಾಂದೋಲಿತಚಂದನದ್ರುಮಲತಾಕರ್ಪೂರಸಂಪರ್ಕಿಣಃ
ಕಂಕೋಲೀಕುಲಕಂಪಿನಃ ಫಣಿಲತಾನಿಷ್ಪಷ್ಪಸಂಪರ್ಕಕಾ
ಶ್ಚಂಡಂ ಚುಂಬಿತತಾಮ್ರಪರ್ಣಸಲಿಲಾ ವಾಂತಿ ಚೈತ್ರಾನಿಲಾಃ
ಕರ್ಪೂರಮಂಜರೀ ೧—೧೭

ಅಹಹ! ಚೈತ್ರಮಾಸದ ಪ್ರಸಾದ ಮಾಧುರ್ಯ ಸೌಕುಮಾರ್ಯ ವಿಶಿಷ್ಟನಾದ ಸಮೀರಣನು ದಕ್ಷಿಣದಿಗ್ದರ್ಶಿಯಾದ ಅಗಸ್ತ್ಯಮಹರ್ಷಿಯ ಪುಣ್ಯಾಶ್ರಮದತೋರ್ಪ ಣಮಾಲೆಯನ್ನಲುಗಿಸಿ, ಮೆಲ್ಲನೆ ಆಂದೋಳನವಾಡುತ್ತಿರುವ ಶ್ರೀಗ್ರಂಥವೃಕ್ಷಗಳನ್ನು ಸ್ಪರ್ಶಿಸಿ, ಕರ್ಪೂರಲತೆಗಳನ್ನು ಕುಲುಕಿಸಿ, ಕಾಂತಾಜನವಾದ ಸ್ಪರ್ಶನಗಳಿಂದ ಪಲ್ಲವಿತ ಗಳಾದ ಕಂಕೋಲವೃಕ್ಷಗಳನ್ನಾಡಿಸಿ, ವಿಧವಿಧವಾದ ಲತೆಗಳನರ್ತನವನ್ನು ಮಾಡಿಸಿ ದಣಿದು ಗಂಭೀರವಾಹಿನಿಯಾದ ತಾಮ್ರಪರ್ಣಿಯಜಲಮಂ ಚುಂಬಿಸಿ ಮೆಲ್ಲಗೆ ಬೀಸುತ್ತಿರುವನು.

ಸೀತೆಯನ್ನು ನೋಡಿದ ರಾವಣನ ಹೇಳಿಕೆ:—ಇಯಮಸೌ ಹೃದಯವಿಶಲ್ಯ ಕರಣೌಷಧಿರ್ಮೈಥಿಲೀ |

ದಮ್ಮಿಲ್ಲೋ ಲಲಿತಃ ಸ್ಮಿತಂ ಶುಚಿ ದೃಶೌ ದೀರ್ಘೇ ಭ್ರುವೌ ಭಂಗುರೇ
ಸುಶ್ಲಾಘೇ ಶ್ರವಸೀ ವಿಶಾಲಮಲಿಕಂ ಮಾಂಜಿಷ್ಠಪುಷ್ಪೋತ್ತರಃ
ಕಂಠೋ ರುಚ್ಯರುಚಿಃ ಸಮನ್ನತಮುರಃ ಕಾಮ್ಯಂ ಚ ಕಾಂಚೀಪದಂ
ದೃಗ್ಭ್ಯಾಂದ್ಯಾನಿ ಚಿರಂ ವಿಭಜ್ಯ ದಶಧಾ ತಸ್ಯೈಧಿಲೀಂ ಪಶ್ಯತ ॥
ಬಾಲರಾಮಾಯಣ ೩—೨೪.

ಎಲೈ ದಶನೇತ್ರಯುಗ್ಮಗಳೆ!

ಲಾವಣ್ಯಮಯಿಯಾ ಆದ ಸೀತೆಯ ಮನೋಹರವಾದ ಕೇಶಕಲಾಪವನ್ನೂ, ಪರಿಶುದ್ಧವಾದ ಮಂದಹಾಸವನ್ನೂ, ವಿಶಾಲವಾದ ಕಣ್ಣುಗಳನ್ನೂ, ಕುಟಿಲವಾಗಿರುವ ಭ್ರೂಯುಗ್ಮಗಳನ್ನೂ, ದೀರ್ಘವಾದ ಶ್ರೋಣಿಪ್ರದೇಶಗಳನ್ನೂ, ವೈಭವೋ ಪೇತವಾದ ವಿಶಾಲಲಲಾಟವನ್ನೂ, ಅತ್ಯುನ್ನತ ವಕ್ಷಸ್ಥಲಭಾವವನ್ನೂ, ಇಷ್ಟಾರ್ಥ ಸಿದ್ಧಿಯನ್ನುಂಟುಮಾಡುವುದಾದ ಕಾಂಚೀ (ನಾಭಿ) ಪ್ರದೇಶವನ್ನೂ, ಮಾಂಜಿಷ್ಠ (ಕೆಂಪಾದ) ದಂತಿರುವ ಅಧರವನ್ನೂ ಯಥಾ ಕ್ರಮವಾಗಿ ನೋಡಿ ನೋಡಿ ದಣಿಯುವರಾಗಿ. ಪುನಃ ಉನ್ಮಾದ ನಂತೆ ಸೀತಾನುಸಂಧಾನವನ್ನು ಮಾಡಿ ಆಕಾಶವನ್ನು ನೋಡುತ್ತ:—

* ಚಿತ್ತಸಂಮೋಹ ಉನ್ಮಾದಃ ಕಾಮಶೋಕಭಯಾದಿಭಿಃ
ಅಸ್ಥಾನ ಹಾಸರುದಿತಗೀತಪ್ರಲಪನಾದಿಕೃತ್ ॥

ತರಂಗಯ ದೃಶೋಸ್ತಂಗನೇ ಪತತು ಚಿತ್ರಮಿಂದೀವರಂ
ಸ್ಫುಟೀಕುರು ರದಚ್ಛದಂ ವ್ರಜತು ವಿದ್ರುಮಃ ಶ್ವೇತತಾಂ
ಕೃಣಂ ವಪುರಪಾವೃಣು ಸ್ಪೃಶತು ಕಾಂಚನಂ ಕಾಲಿಕಾ
ಮುದಂಚಯ ಮುಖಾಮ್ಬುಜಂ ಭವತು ಚ ದ್ವಿಚಂದ್ರಂ ನಭಃ ॥

ಬಾಲರಾಮಾಯಣ ೩—೨೫

ಎಲೌ ! ಸೀತೆ ! ಇಂದೀವರಗಳಂತಿರುವ ನಿನ್ನ ಕಣ್ಣುಗಳನ್ನು ಇತ್ತಕಡೆ ತಿರುಗಿಸು. ಹವಳದಂತೆ ಕೆಂಪಾಗಿರುವ ತುಟಿಗಳು ಶುಭ್ರವಾಗಿರುವ ನಿನ್ನ ದಂತ ಪಙ್ತಿಗಳಿಂದ (ಮುಂದಸ್ಮಿತದಿಂದ) ಧಾವಳ್ಯವನ್ನು ಹೊಂದಲಿ. ನಿನ್ನ ಹೇಮಾಂಗವನ್ನು ನೋಡಿ ಸುವರ್ಣವು ವಿವರ್ಣವಾಗಲಿ ಅಥವಾ ಕಪ್ಪಾಗಿಹೋಗಲಿ. ಮುಖವನ್ನೆತ್ತುವುದರಿಂದ ನಿನ್ನ ಮುಖಚಂದ್ರನನ್ನು ನೋಡಿ ಅಂತರಿಕ್ಷದಲ್ಲಿ ಚಂದ್ರದ್ವಯವಾದಂತಾಗಲಿ.

ಸೀತೆಯು ಶ್ರೀರಾಮನೊಡನೆ ಅಡವಿಗೆ ಹೊರಟುಹೋದ ವಿಚಾರವನ್ನು ಸುಮಂತ್ರನು ದಶರಥನೊಡನೆ ಹೇಳುವ ಸಂದರ್ಭವು ಎಷ್ಟು ಶೃಂಗಾರಕರುಣರಸಯುಕ್ತವಾಗಿರುವದು.

ಮನ್ಯಣಚರಣಪ್ರತಂ ಗಮ್ಯತಾಂ ಭೂಸ್ಪದರ್ಭಾ
ವಿರಚಯ ಸಿಚಯಾಂತಮಾಧ್ನಿ ಘರ್ಮಃ ಕಠೋರಃ
ಇದಿತಿಜನಕಪುತ್ರೀಲೋಚನೈರಶ್ರುಪೂರ್ಣೈಃ
ಪಥಿಪಥಿಕವಧೂಭಿ ರ್ವೀಕ್ಷಿತಾ ಶಿಕ್ಷಿತಾಚ ॥ ಬಾಲರಾಮಾಯಣ.

ಮಾರ್ಗದಲ್ಲಿ ಪತಿವಿರಹಿತಸ್ತ್ರೀಯರು ಸೀತೆಯನ್ನು ನೋಡಿ ಅಮ್ಮ ! ಸೀತೆ ! ದರ್ಭೆಗಳ ಕೂಳೆಗಳುಳ್ಳ ಈ ದಾರಿಯಲ್ಲಿ ಮೆಲ್ಲನೆ ಅಡಿಯಿಡು. ಬಿಸಿಲು ಅತ್ಯಂತ ತೀಕ್ಷ್ಣವಾಗಿರುವುದರಿಂದ ಸೀರೆಯ ನೆರಗನ್ನು ತಲೆಯಮೇಲೆ ಹೊದ್ದುಕೊಳ್ಳಮ್ಮ ಎಂದು ಕಣ್ಣೀರ್ಗರೆಯುತ್ತ ಹೇಳಿದರು. (ಇದರಲ್ಲಿ ಸೀತೆಯ ಸೌಕುಮಾರ್ಯವೂ ಗಂಡನೊಡನೆ ವನಪ್ರವೇಶವೂ ಸೂಚಿತವಾಗುವುದಲ್ಲದೆ ಸೀತೆಯು ಹಾಗೆ ಪತಿಯನ್ನು ಅನುಸರಿಸಿಹೋಗುವ ಭಾಗ್ಯವು ತಮಗಾಗದುದಕ್ಕಾಗಿ ದುಃಖಿಸುವರೆಂಬ ಮನೋವೈಕಲ್ಯವನ್ನು ಸೂಚಿಸುವುದಾಗಿದೆ.)

ದ್ರೌಪದಿಯ ಹೇಳಿಕೆ:—ರೆ ! ರೇ ! ದುರ್ಯೋಧನ !

ಏಷ ಮೇ ಕಚ ಕರ್ಷಣಾಪರಿಭವಃ ಅಮುಕ್ತಾ ಬಂಧಕ್ರಮ
ಸ್ತತ್ಸತ್ಯಮೇವ ಚಂಚರೀಕ ರಮಣೀಯಾ ಕೇಶಪಾಶಚ್ಛಟಾ
ನಖಾಗ್ರಾಂಕುಶಕೋಟಿ ಪಾಟಿತಮಹಾದುಃಶಾಸನೋರಸ್ಥಲೀ
ರಕ್ತೋಲ್ಲೇಖಿಕರೇಣ ನಿಶ್ಚಿತಮಿದಂ ಭೀಮೇನ ಯಾ ಬಧ್ಯತೇ

ಬಾಲಭಾರತ ೨—೫೦.

ಎಲವೆಲ್ಲವೋ ದುರ್ಯೋಧನ! ಕೇಳು.

ಆ ಪಾಪಿ ದುಶ್ಶಾಸನನ ಉರಸ್ಥಲವನ್ನು ತನ್ನ ಉಗುರುಗಳೆಂಬ ಅಂಕುಶದಿಂದ ಬಗೆದು ರಕ್ತ ಲೇಪನಗೊಂಡ ತನ್ನ ಕೈ ಗಳಿಂದ ಇದೋ! ಬಿಚ್ಚಿ ಹೋಗಿರುವ ಈ ಕೇಶಪಾಶಗಳನ್ನು ಭೀಮನು ನಿಶ್ಚಯವಾಗಿಯೂ ಎತ್ತಿ ಕಟ್ಟುವನೆಂಬುದನ್ನು ನೀನು ತಿಳಿ.

ಕೋಪದ ಪ್ರಗತಿಯನ್ನು ತಿಳುಹುವುವಾದ ಭೀಮಸೇನನ ಪ್ರತಿಜ್ಞಾಶ್ಲೋಕ ಗಳು ಹೀಗಿರುವುವು:—

ರೇ! ರೇ! ದುರ್ಯೋಧನ! ಭೀಮಸೇನಸ್ಯ ಶ್ರುಣುಪ್ರತಿಜ್ಞಾಂ:—

ಯೇನೇಯಂ ಯಾಜ್ಞಸೇನೀ ನೃಪಸದಸಿ ಹರಾತ್ಕೇಶಹಸ್ತೇ ಗೃಹೀತಾ
ಯಶ್ಚಾಸ್ಯಾಃ ಕೋಟವೀತ್ವಂ ಬತ ವಿದಧದಿತೋ ವಾಸಸಾಂ ರಾಶಿಕಾರಃ
ಸೋಽಹಂ ತೇನೈವ ರೋಷಾರುಣನಯನಪಟುಃ ಪಾಣಿನೋತ್ಪಾಟತೇನ
ತ್ವಾಂ ಹಂತಾ ಹಂತ ವಕ್ಷಸ್ತಟಭುವಿರಟತೋ ದುಷ್ಪದುಃಶಾಸನಸ್ಯ ॥ ಬಾಲಭಾರತ೨—೫೨.

ಎಲೆ! ದುರ್ಯೋಧನ ಕೇಳು :—

ರಾಜಸಭೆಯಲ್ಲಿ ಯಾವಕಾರಣದಿಂದ ಈ ದ್ರುಪದನಂದನೆಯ ಕೇಶಪಾಶ ಗಳನ್ನು ಕೈಯಲ್ಲಿ ಹಿಡಿದು ಸೀರೆಯನ್ನೆಳಸಿ ರಾಶಿಹಾಕಿಸಿದೆಯೋ ಅದು ಕಾರಣದಿಂದ ಆರಕ್ತನೇತ್ರಕಷಾಯಿತನಾದ ಈ ಭೀಮನು ನಿನ್ನನ್ನೂ ಆ ದುಶ್ಶಾಸನನನ್ನೂ ಭೂಮಿಯಲ್ಲಿ ಕೆಡಹಿಕೊಂಡು ಉರಸ್ಥಲವನ್ನು ಇದೋ! ಈ ಕೈಗಳಿಂದ ಬಗೆದು ರಾಶಿಹಾಕುವನೆಂಬುದನ್ನು ತಿಳಿ.

ಅಪಿಚ ರೇ! ರೇ! ದುರ್ಯೋಧನ:—

ನಖಿಕ್ರಕ ಚ ಪಾಟನಶ್ರುತಕೀಕಸಾದ್ವಕ್ಷಸಃ
ಶಿರಾಸರಣಿಭಿರ್ಮ್ಮಥೇ ರುಧಿರಮುತ್ಪಲತ್ವೇನಲಂ
ಮಹಾಂಜಲಿಮಯಂ ರುಷಾ ಹೃದಿ ನಿವೇಶ್ಯ ದುಃಶಾಸನೇ
ಯುಧಿಷ್ಠಿರಸಹೋದರಃ ಶ್ರುಣು ವೃಕೋದರಃ ಪಾಸ್ಯತಿ॥ ಬಾಲಭಾರತ ೨—೫೨,

ದುರ್ಯೋಧನ! ಇನ್ನೂ ಕೇಳು:—

ಯುಧಿಷ್ಠಿರನ ಸೋದರನೂ, ರೋಷಗೊಂಡಿರುವನೂ, ಆದ ಈ ವೃಕೋದರನು ಆ ದುಶ್ಶಾಸನನ ಎದೆಯ ಕೀಕಸೆ (ಮೂಳೆ) ಗಳನ್ನು ಉಗುರುಗಳೆಂಬ ಗರಗಸದಿಂದ ಸೀಳಿ ನರಗಳ ಸಂದಣಿಯಿಂದ ನೊರೆನೊರೆಯಾಗಿ ಹರಿದು ಬರುತ್ತಿರುವ ರಕ್ತವನ್ನು ತನ್ನ ಬೊಗಸೆಗಳಿಂದ ಪಾನಮಾಡುವನೆಂಬುದನ್ನು ತಿಳಿ.

ದ್ರೋಣಾದುಪಾರ್ಜಿತಧನುರ್ನಿಗಮಪ್ರಕರ್ಷಾ
ತ್ಸರ್ವಾನಪಿ ಸ್ಥಿತವತೋ ವಯಸಿ ಪ್ರಕಾಶೇ
ಭ್ರಾತ್ಕಾಜ್ಞಾತಂ ತವ ಹನಿಷ್ಯತಿ ಭೀಮಸೇನಃ
ಕಾಲೇ ಗದಪ್ರಹರಣೋ ರಣಕರ್ಮಶೌಂಡಃ ॥ ಭಾಲಭಾರತ ೨—೫೩.

ಎಲಾ ! ದುರ್ಯೋಧನ,

ಆಚಾರ್ಯ ದ್ರೋಣನಿಂದ ಅನುಗ್ರಹಿಸಲ್ಪಟ್ಟ ವಿಧವಿಧವಾದ ಶಾಸ್ತ್ರಸಮ್ಮತ ಶಸ್ತ್ರಾಸ್ತ್ರಗಳಿರುವುವಾದರೂ ಅವುಗಳಾವುದನ್ನೂ ಲಕ್ಷಿಸದ ರಣಕರ್ಮಧೌರೇಯನಾದ ಈ ಭೀಮಸೇನನ ಗದಾಪ್ರಹರಣದಿಂದ ನಿನ್ನ ನೂರುಜನ ಸೋದರರೂ ನಾಶ ಹೊಂದುವರೆಂಬುದನ್ನು ತಿಳಿ.

ದೋರ್ದಂಡಮಂಡಲಿತ ಚಂಡಗದಾಪ್ರಹಾರೈ
ರಾಮೂಲತಸ್ತಡದಿತಿ ತ್ರುಟಿತೋರುಸಂಧೇಃ
ದುರ್ಯೋಧನಸ್ಯ ವಿಕಟೋಂಮುಕುಟೋಗ್ರಪೀಠೀಂ
ದ್ರಾಗ್ಲೋಟಯಿಷ್ಯತಿ ರಣೇ ಚರಣೇನ ಭೀಮಃ ॥ ಬಾಲಭಾರತ ೨—೫೪

ಹೆಚ್ಚೇಕೆ! ಮಹಾಪರಾಕ್ರಮದಿಂದ ತಿರುಗಿಸಲ್ಪಟ್ಟ ಈ ಚಂಡಗದೆಯ ಪ್ರಹಾರದಿಂದ ಭಿನ್ನವಾದ ಊರುಪ್ರದೇಶವುಳ್ಳ ದುರ್ಯೋಧನನ ಶ್ರೇಷ್ಠತಮವಾದ ಈ ಕಿರೀಟವು ಯುದ್ಧರಂಗದಲ್ಲಿ ಈ ಭೀಮನ ಚರಣತಲದಲ್ಲಿ ಸಿಲುಕಿ ಪುಡಿಪುಡಿಯಾಗುವುದೆಂದು ತಿಳಿ.

ವಿದ್ಧಶಾಲಭಂಜಿಕೆಯು ಮಂಗಳಾಚರಣವು ಹೀಗಿರುವುದು : —

ಕುಲಗುರುರಬಲಾನಾಂ ಕೇಳಿ ದೀಕ್ಷಾಪ್ರದಾನೇ
ಪರಮಸುಹೃದನಂಗೋ ರೋಹಿಣೀವಲ್ಲಭಸ್ಯ
ಅಪಿ ಕುಸುಮಪೃಷತ್ಕೈ ರ್ದೇವದೇವಸ್ಯ ಜೇತಾ
ಜಯತಿ ಸುರತಲೀಲಾನಾಟಕಾಸೂತ್ರಧಾರಃ

ವಿದ್ಧಶಾಲಭಂಜಿಕಾ ೧—೧ ॥

ರತಿಕೇಳಿಗೆ ದೀಕ್ಷಾದಾನವನ್ನು ಮಾಡುವುದರಲ್ಲಿ ಕುಲಗುರುವಾಗಿಯೂ, ರೋಹಿಣೀವಲ್ಲಭನಾದ ಚಂದ್ರನಿಗೆ ಪರಮಮಿತ್ರನಾಗಿಯೂ, ದೇವದೇವೋತ್ತಮನಾದ ಪರಶಿವನನ್ನು ಪುಷ್ಪಬಾಣಂಗಳಿಂದ ಜಯಿಸಿದವನಾಗಿಯೂ, ಸುರತಕ್ರೀಡಾನಾಟಕ ಸೂತ್ರಧಾರನಾಗಿಯೂ ಇರುವ ಅನಂಗನು ಸರ್ವೋತ್ಕರ್ಷನಾಗಿರುವನು.

ಕಂದುಕಕ್ರೀಡಾವರ್ಣನವು ಹೀಗಿರುವುದು:—

ಅಮಂದಮಣಿನೂಪುರಕ್ವಣನಚಾರುಚಾರಿಕ್ರಮಂ
ಝಣ ಝ್ಝುಣಿತಿಮೇಖಲಾಸ್ಖಲಿತಹಾರಹಾರಚ್ಛಟಂ
ಇದಂ ತರಲಕಂಕಣಾವಲಿ ವಿಶೇಷವಾಚಾಲತಂ
ಮನೋಹರತಿ ಸುಭ್ರುವಃ ಕಿಮಪಿ ಕಂದುಕಕ್ರೀಡನಂ ॥

ವಿದ್ಧಶಾಲಭಂಜಿಕಾ—೩—೬

ಕಾಲಿನ ಅಂದುಗೆಯ ಝಣತ್ಕಾರದಿಂದಲೂ, ಆಡುತ್ತಿರುವಾಗ ಒಡ್ಯಾಣಕ್ಕೆ ತಗುಲಿ ತಗುಲಿ ಎಗರುತ್ತಿರುವ ಹಾರಗಳ ಚ್ಛಟಚ್ಛಟವೆಂಬ ಅನುಕರಣ ಶಬ್ದಗಳಿಂದಲೂ, "ಕೈಬಳೆಗಳ ಮನೋಹರವಾದ ಶಬ್ದತಾನದಿಂದಲೂ ಕೂಡಿರುವ ರಮಣಿಯರ ಕಂದುಕಕ್ರೀಡೆಯು ಹೃದಯಂಗಮವಾಗಿರುವುದು.

ಆ ರ್ಯ ಕ್ಷೇ ಮಿ ಶ್ವ ರ

ಇವನು ವಿಜಯಪ್ರಕೋಷ್ಠನ ಮುಮ್ಮಗನೆಂಬುದು " ಯಥಾ ಕಿಲ ವಿಜಯ ಪ್ರಕೋಷ್ಠಪ್ರಣಪ್ತುಃ ಕವೇರಾರ್ಯಕ್ಷೇಮಿಶ್ವರಸ್ಯ ಕೃತಿರಭಿನವಂ ಚಂಡಕೌಶಿಕಂ " ಎಂಬುದರ ಪ್ರಸ್ತಾವನೆಯಿಂದ ತಿಳಿಯಬರುತ್ತದೆ. ಇವನು ಕೆನೂಜಿನವನು. ಬ್ರಾಹ್ಮಣನು. ನಾಮಸಾಮ್ಯದಿಂದ ಕ್ಷೇಮೇಂದ್ರನೂ ಕ್ಷೇಮಿಶ್ವರನೂ ಒಂದೇ ವ್ಯಕ್ತಿಯೆಂದು ಕೆಲವರು ತರ್ಕಿಸುವರು. ಕ್ಷೇಮಿಶ್ವರನು ತಾನು ವಿಜಯಪ್ರಕೋಷ್ಠನ ಮುಮ್ಮಗನೆಂದೂ ಕ್ಷೇಮೇಂದ್ರನು ಸಿಂಧುವಿನ ಮುಮ್ಮಗನೆಂದೂ ಪ್ರಕಾಶೇಂದ್ರನ ಮಗನೆಂದೂ ಹೇಳಿಕೊಂಡಿರುವುದರಿಂದ ಇವರೀರ್ವರೂ ಭಿನ್ನ ವ್ಯಕ್ತಿಗಳೆಂದು ನಿಶ್ಚಯವಾಗುತ್ತದೆ. ಅದನ್ನು ಹೀಗೆ ಸಮರ್ಥಿಸಬಹುದು.

ಕ್ಷೇಮಿಶ್ವರ.	ಕ್ಷೇಮೇಂದ್ರ
೧. ತಾನು ವಿಜಯಪ್ರಕೋಷ್ಠನ ಮುಮ್ಮಗನೆಂಬುದು ಹೊರ್ತು ತಾಯಿ ತಂದೆಗಳ ಹೆಸರನ್ನು ಹೇಳಿಕೊಂಡಿರುವುದಿಲ್ಲ.	ಇವನು ಬರೆದುದಾದ 'ಔಚಿತ್ಯವಿಚಾರಚರ್ಚಾ' ಎಂಬ ಗ್ರಂಥದಲ್ಲಿ ತನ್ನ ವಂಶಾವಳಿ, ತಾಯಿ ತಂದೆಗಳ ಹೆಸರನ್ನು ಹೇಳಿಕೊಂಡಿರುವನು.
೨. ಇವನು ಆರ್ಯಶಬ್ದದಿಂದ ವಿಶೇಷಿಸಿಹೇಳಲ್ಪಟ್ಟಿರುವನು.	ಇವನು ವ್ಯಾಸದಾಸನೆಂಬ ಹೆಸರಿನಿಂದ ಮಾತ್ರವೇ ಪರಿಚಿತನು.
೩. ಇವನು ಬರೆದುದಾದ 'ಚಂಡಕೌಶಿಕ' ಎಂಬ ಏಕಗ್ರಂಥಮಾತ್ರದಿಂದ ಪ್ರಸಿದ್ಧನು.	ಇವನು ಬಹುಗ್ರಂಥಕರ್ತೃವೆಂದೆನಿಸಿಕೊಂಡಿರುವನು.
೪. ಇವನು ಮಹೀಪಾಲದೇವನ ಆಶ್ರಿತನೆಂದು ಹೇಳಿಕೊಂಡಿರುವನು.	ಇವನು ಕಾಶ್ಮೀರದ ಅರಸನಾದ ಅನಂತರಾಜನ ಸಮಕಾಲೀನನೆಂದು ಹೇಳಿಕೊಂಡಿರುವನು.
೫ ಮಹೀಪಾಲನ ಆಳ್ಕೆಯಕಾಲವು ಕ್ರಿ. ಶ. ೯೧೦---೯೪೦.	ಅನಂತರಾಜನ ಆಳ್ಕೆಯ ಕಾಲವು ಕ್ರಿ. ಶ. ೧೦೨೪ — ೧೦೮೦.
೬. ಇವನು ಕೆನೂಜನವನು	ಇವನು ಕಾಶ್ಮೀರದವನು.

ಕಾಲ:—ಇವನು ಕೆನೂಜಿನಲ್ಲಿ ಸುಮಾರು ಕ್ರಿ. ಶ. ೯೧೦—೯೪೦ರಲ್ಲಿ ಕ್ಷಿತಿಪಾಲನೆಂಬಾಪರನಾಮಕನಾದ ಮಹೀಪಾಲನ ಆಶ್ರಯದಲ್ಲಿದ್ದವನೆಂದೂ ಇವನು ಹಿಂದಣಜನ್ಮದಲ್ಲಿ ಚಂದ್ರಗುಪ್ತನಾಗಿದ್ದಂತೆಯೂ ಆಗಣನಂದರು ಈಗ ಕರ್ಣಾಟಕರಾಜರಾಗಿ ಹುಟ್ಟಿರುವುದಾಗಿ.—" ಅಲಮತಿವಿಸ್ತರೇಣ, ಆಧಿಷ್ಠೋಸ್ಮಿ ದುಷ್ಟಾಮಾತ್ಯವಾಗುರ್ವಾಲಂಘ್ಯ ಸಿಂಹರಂಹಸಾ ಭ್ರೂಭಂಗಲೀಲಾಸಮುದ್ಧೃತಾಶೇಷಕಂಟಕೇನ ಸಮರಸಾಗರಾಂತ ರ್ಭ್ರಮದ್ಭುಜದಂಡಮಂದರಾಕೃಷ್ಟಲಕ್ಷ್ಮೀಸ್ವ

ಯಂವರಪ್ರಣಯಿನಾ ಶ್ರೀಮಹೀಪಾಲದೇವೇನ ಯಸ್ಯೇಮಾಂಪುರಾವಿದಃ ಪ್ರಶಸ್ತಿ ಗಾಧಾಮುದಾಹರಂತಿ" ಎಂದು—

ಯಃ ಸಂಶ್ರಿತ್ಯ ಪ್ರಕೃತಿಗಹನಾಮಾರ್ಯ ಚಾಣಕ್ಯನೀತಿಂ
ಜಿತ್ವಾ ನಂದಾ ಕುಸುಮನಗರಂ ಚಂದ್ರಗುಪ್ತೋ ಜಿಗಾಯ।
ಕರ್ಣಾಟತ್ಸಂ ಧ್ರುವಮುಪಗತಾನದ್ಯ ತಾಸೇವ ಹಂತುಂ
ದೋರ್ದರ್ಪಾಢ್ಯಃ ಸ ಪುನರಭವಚ್ಛ್ರೀಮಹೀಪಾಲದೇವಃ ॥
ಚಂಡಕೌಶಿಕ. ಅಂಕ ೧—೪.

ಎಂದು ನಾಟಕದಲ್ಲಿ ವರ್ಣಿತವಾಗಿರುವುದರಿಂದ, ಕರ್ಣಾಟಕ ರಾಜರಾದ ರಾಷ್ಟ್ರಕೂಟ ದೊರೆಗಳಲ್ಲಿ ಮೂರನೆಯ ಇಂದ್ರನೆಂಬುವನಿಗೂ ಕೆನೂಜಿನಲ್ಲಿ ಆಗ ಆಳುತ್ತಿದ್ದ ಮಹೀಪಾಲನಿಗೂ ವೈರವಿದ್ದು ಕ್ರಿ. ಶ. ೯೧೬ರಲ್ಲಿ ಯುದ್ಧವನಡೆದು ಇಂದ್ರನು ಪರಾಜಿತನಾದುದಾಗಿ¶ ತಿಳಿಯಬರುವುದರಿಂದ ಇವನು ಕ್ರಿ. ಶ. ಹತ್ತನೆಯ ಶತಮಾನದಲ್ಲಿದ್ದವನೆಂಬುದು ಸ್ಪಷ್ಟವು.

ಗ್ರಂಥ:—ಇವನು ಚಂಡಾಕೌಶಿಕವೆಂಬ ನಾಟಕವನ್ನು ಬರೆದಿರುವನು. ಇವನು ಮಹಾಭಾರತದ ನಳನ ಕಥೆಯನ್ನು ತೆಗೆದುಕೊಂಡು "ಸ್ಮೈಷಧಾನಂದ" ಎಂಬ ಏಳು ಅಂಕಗಳುಳ್ಳ ಬೇರೊಂದು ನಾಟಕವನ್ನು ಬರೆದಿರುವುದಾಗಿ ಡಾ|| ಎ. ಬಿ. ಕೀತರವರು ಹೇಳಿರುವರು§ ಇದಾವುದೆಂಬುದು ನಮಗೆ ತಿಳಿಯದು.

ಚಂಡಕೌಶಿಕ ನಾಟಕ:—ಇದರಲ್ಲಿ ೫ ಅಂಕಗಳಿರುವುವು. ಹೆಸರುಮಾತ್ರದಿಂದಲೇ ಕಥಾವಿಚಾರವನ್ನು ಸೂಚಿಸುವುದಾದ ನಾಗಾನಂದ, ಮುದ್ರಾರಾಕ್ಷಸ ವೇಣೀಸಂಹಾರ ನಾಟಕಗಳಂತೆ ತನ್ನ ತಪೋಭಂಗವಾದುದಕ್ಕಾಗಿ ರಾಜನಾದ ಹರಿಶ್ಚಂದ್ರನಲ್ಲಿ ಖತಿಗೊಂಡು ಅತ್ಯಂತ ಕಾಠಿಣ್ಯದಿಂದವರ್ತಿಸಿದ ಕೌಶಿಕನ (ವಿಶ್ವಾಮಿತ್ರ) ವರ್ಣನವಿರುವುದರಿಂದ ಕವಿಯು ಇದನ್ನು **ಚಂಡಕೌಶಿಕ** ನೆಂದೇ ಕರೆದಿರುವನು. ಕಥೆಯನ್ನು ಮಾರ್ಕಂಡೇಯ ಪುರಾಣದಿಂದ ಆರಿಸಿಕೊಂಡಿರುವನು. ದೇವೀಭಾಗವತದಲ್ಲಿಯೂ ಹರಿಶ್ಚಂದ್ರೋಪಾಖ್ಯಾನವಿರುವುದು. ಇವನು ಪುರಾಣ ಕಥೆಯನ್ನು ತೆಗೆದುಕೊಂಡಿರುವನಾದರೂ ಕವಿಸಮಯಕ್ಕೆ ತಕ್ಕಂತೆ ಸುಧಾರಿಸಿ ಹೇರುವನು. ಇತಿಹಾಸರತ್ನಭಾಂಡಾಗಾರವಾದ ಮಹಾಭಾರತದಲ್ಲಿ ಹರಿಶ್ಚಂದ್ರನ ಕಥೆಯು ಹೇಳಲ್ಪಡದೇ ಇರುವುದರಿಂದ ಪ್ರಕ್ಷಿಪ್ತ ಕಥೆಯೆಂದು ಕೆಲವರ ತರ್ಕವಿರುವುದು.

ಚಂಡಕೌಶಿಕ ಪ್ರಸ್ತಾವನಾ ಪುಟ ೪.

¶ The Indian Antiquary Vol. 37 P. 138.

§ Dr. A. B. Keiths The Sanskrit Drama P. 241.

ಆದರೆ ಹೀಗೆಹೇಳುವುದು ಸಮಂಜಸವಾಗದು. ಕ್ಲೇಶಸಹಿಷ್ಣುತೆ ಧರ್ಮಶೀಲತೆ ಕರ್ಮನಿಷ್ಠತೆ ಇವೇ ಮೊದಲಾದವುಗಳಿಂದ ಕೂಡಿ ನೀತಿಬೋಧಕವಾದ ಕಥೆಗಳ ನೇಕಗಳಲ್ಲಿ ನಳದಮಯಂತಿಯರ ಕಥೆ, ಮತ್ತು ಹರಿಶ್ಚಂದ್ರೋಪಾಖ್ಯಾನವು ಮುಖ್ಯವೆಂದು ಹೇಳುವುದಾದರೂ ನಳೋಪಾಖ್ಯಾನವು ಎಷ್ಟು ಪ್ರಾಚೀನವೋ ಹರಿಶ್ಚಂದ್ರೋಪಾಖ್ಯಾನವು ಅಷ್ಟು ಅರ್ವಾಚೀನವೆಂದು ತೋರುವುದು. ಆದಿಕಾವ್ಯವಾದ ಶ್ರೀಮದ್ರಾಮಾಯಣದಲ್ಲಿ ಒಂದುಕಡೆ "ನಳದಮಯಂತೀವ" ಎಂದು ಹೇಳಿರುವುದು ಕಂಡುಬರುವುದರಿಂದ ನಳೋಪಾಖ್ಯಾನದ ಪ್ರಾಚೀನತ್ವವು ವ್ಯಕ್ತವಾಗುವುದು. ನಳದಮಯಂತಿಯರ ಕಥೆಯನ್ನು ವಿಧವಿಧವಾಗಿ ಬಣ್ಣಿಸಿ ಕಣ್ಣಿರ್ಗರೆಯುವಂತೆ ಹೇಳುವುದರಲ್ಲಿ ಭಾರತೀಯ ಕವಿಗಳು ತಮ್ಮಪ್ರತಿಭೆ ಎಲ್ಲವನ್ನೂ ತೋರಿಸಿ ಸ್ಮೃತಿಶೇಷರಾಗಿರುವರು. ಕಥೆಯಂತೆ (೧) ವಿಶ್ವಾಮಿತ್ರನೂ, ವಸಿಷ್ಠನೂ ಮತ್ತು ಹರಿಶ್ಚಂದ್ರನೂ ಸಮಕಾಲೀನರೆನ್ನಬೇಕಾಗುವುದು. (೨) ರಾಜಸೂಯಯಾಗವನ್ನು ಧರ್ಮನಂದನನು ಮಾಡಿದುದಾಗಿ ಮಹಾಭಾರತವು ಹೇಳುವುದು. (೩) ತ್ರೇತಾಯುಗದಲ್ಲಿ ಶ್ರೀಮದ್ರಾಮಾಯಣದಲ್ಲಿ ವಸಿಷ್ಠ, ವಿಶ್ವಾಮಿತ್ರರ ಸಮಕಾಲೀನತ್ವವು ಸೂಚಿತವಾಗಿರುವುದು. ಹೀಗೆ ಸಮಯವಿನಿಯೋಗ ವಿಚಾರದಲ್ಲಿ ಎಷ್ಟೋ ಅಂತರಾಯವು ತೋರಿಬರುವುದರಿಂದ ವಿಚಾರವು ಚರ್ವಾಸ್ಪದವಾಗಿರುವುದಲ್ಲದೆ.—

(೧) ಹರಿಶ್ಚಂದ್ರನೆಂಬ ರಾಜನು ಒಬ್ಬನೇ ಅಥವಾ ಹಲವರೇ? (೨) ಬ್ರಹ್ಮಸೃಷ್ಟಿಗೆ ಪ್ರತಿಸೃಷ್ಟಿಯನ್ನಾಚರಿಸಬಲ್ಲ ನಿಗ್ರಹಾನುಗ್ರಹಶಕ್ತನಾದ ವಿಶ್ವಾಮಿತ್ರನು ರಾಜಸೂಯಯಾಗದ ದಕ್ಷಿಣಾಧನಕ್ಕಾಗಿ ರಾಜನ ಬಳಿಗೆಬಂದು ಧನವನ್ನು ಯಾಚಿಸಬೇಕಾದಕೌತುಕವಾದರೂ ಏನು? (೩) ದಾರಾಪುತ್ರಾದಿಗಳಿಂದ ರಾಜನನ್ನು ದೂರಮಾಡಿ ಅವನನ್ನು ಕೋಟಲೆಗೆ ಈಡುಮಾಡಿ ಆತ್ಮವಿಕ್ರಯದಿಂದಾದರೂ ದ್ರವ್ಯಾರ್ಜನೆಯನ್ನು ಮಾಡಿಕೊಡಲೇಬೇಕೆಂಬ ಬಲುಮೆಯ ಸನ್ನಿವೇಶನೇನಾದರೂ ಇದ್ದಿತೇ ಹೇಗೆ? ಎಂಬಿವೇ ಮೊದಲಾದ ವಿಚಾರಗಳಿಗೆ ಪ್ರಮಾಣಗಳನ್ನೊದಗಿಸಿ ಹೇಳುವುದು ಸುಲಭವಲ್ಲ. ಇವುಗಳಿಲ್ಲವನ್ನೂ ಸಮದೃಷ್ಟಿಯಿಂದ ಪರಿಶೀಲಿಸಿದರೆ ಋಣಭಾರಕ್ಕಿಂತ ಭಾರವಾದುದು ಮತ್ತಾವುದೂ ಇಲ್ಲವೆಂದೂ, ಋಣಭಾರ ಸಹನವು ಬಹುಕಷ್ಟವೆಂದೂ, ಸಮಾಜಕ್ಷೋಭೆಗೆ ಕಾರಣವೆಂದೂ, ಆತ್ಮಶಾಂತಿಗೆ ವಿಘ್ನಕಾರಿಯೆಂದೂ, ಸ್ವಾತಂತ್ರ್ಯಹೀನದ ಮೂಲವೆಂದೂ, ಗೃಹಚಾರದೋಷದಿಂದ ಋಣಗ್ರಸ್ತನಾದವನು ಹೇಗಾದರೂ ತನ್ನ ಸರ್ವತ್ಯಾಗದಿಂದ ಋಣಮುಕ್ತನಾಗಲೇಬೇಕೆಂಬುದನ್ನೂ$ ಋಣವು ಬಹುಹೇಯವೆಂಬುದನ್ನು ಸಮಾಜಕ್ಕೆ ಪ್ರತ್ಯಕ್ಷವಾಗಿ ತೋರಿಸಬೇಕೆಂಬ ಉದ್ದೇಶದಿಂದ ಇಂತಹ ನೀತಿಬೋಧಕ ನಾಟಕರಚನೆಯಾಗಿರ

$ ಪುನರ್ಜನ್ಮದಲ್ಲಿ ನಂಬಿಕೆ ಇರುವವರು ಋಣವನ್ನು ತೀರಿಸುವುದಕ್ಕಾದರೂ ಪುನಃ ಜನ್ಮಧಾರಣಮಾಡಲೇಬೇಕೆಂದು ತರ್ಕಿಸುವರು.

ಬೇಕೆಂದು ತೋರುತ್ತದೆ. ಇದರಲ್ಲಿ ಋಣಭಾರದ ಅವಹೇಳನ, ಪರಸೇವೆಯಕಷ್ಟ, ಸತ್ಯದಬೆಲೆ ಇವು ಪ್ರತಿಯೊಬ್ಬರೂ ಕಣ್ಣಿಗ್ರರೆಪಂತೆ ಚಿತ್ರಿಸಲ್ಪಟ್ಟು ಲೋಕಾನುಭವವನ್ನು ನೈಸರ್ಗಿಕರೀತಿಯಲ್ಲಿ ತೋರುವುದಾಗಿದೆ.

ಸೂರ್ಯಕುಲೋತ್ಪನ್ನನಾದ ತ್ರಿಶಂಕುವಿನ ಮಗ ಹರಿಶ್ಚಂದ್ರನ ಸತ್ಯಸಂಧತೆಯ ವಿಚಾರವಾಗಿ ಪ್ರಶಂಸಿಸುತ್ತಿರುವ ವಶಿಷ್ಠನ ಮಾತನ್ನು ಕೇಳಿ ಕೋಪಗೊಂಡ ಕೌಶಿಕನು ಇದರ ನೆಲೆಯನ್ನು ತಿಳಿಯಲಾಶಿಸಿ ರಾಜನಿಗೆ ಬೇಕಾದಷ್ಟು ತೊಂದರೆಗಳನ್ನು ಕೊಟ್ಟುದಲ್ಲದೆ ರಾಜ್ಯಪದಭ್ರಷ್ಟನನ್ನಾಗಿ ಮಾಡಲ್ಪಟ್ಟನಾದರೂ ಸತಿಸುತರು ವಿಕ್ರಯಿಸಲ್ಪಟ್ಟರಾದರೂ ಹೆಚ್ಚೇಕೆ! ಶ್ಮಶಾನದ ತೆರಿಗೆಯನ್ನು ಕೊಡಲು ಗತಿಕಾಣದ ತನ್ನ ಹೆಂಡತಿಯನ್ನು ಮೃತನಾದ ತನ್ನ ಮಗನ ಹೊದಿಕೆಯನ್ನಾದರೂ ಕೊಡಬೇಕೆಂದು ಕೇಳುವಷ್ಟು ಕಾರ್ಪಣ್ಯಕ್ಕೆ ಈಡುಮಾಡಲ್ಪಟ್ಟನಾದರೂ ಸತ್ಯಪಥದಿಂದ ಕೊಂಚವೂ ಹಿಮ್ಮೆಟ್ಟದ ರಾಜನನ್ನು ನೋಡಿ ಅವನ ದೃಢಸಂಕಲ್ಪಕ್ಕೆ ಮೆಚ್ಚಿ ಮೃತನಾದ ಮಗನನ್ನು ಬದುಕಿಸಿ ಅವನ ರಾಜ್ಯವನ್ನು ಅವನಿಗೆ ಪುನಃ ಕೊಟ್ಟು ಸಂತೋಷಗೊಳಿಸಿದನೆಂಬುದೇ ಕಥಾವಸ್ತು.

ನಾಟಕದಲ್ಲಿ ಶೃಂಗಾರರಸವಾಗಲಿ ಅಥವಾ ವೀರರಸವಾಗಲಿ ಇದ್ದೇ ತೀರಬೇಕೆಂಬ ಲಾಕ್ಷಣಿಕ ನಿಯಮದಂತೆ ಇದರಲ್ಲಿ ವೀರರಸವು ಪ್ರಧಾನವಾಗಿರುವುದೆಂದು ಹೇಳಬೇಕಾಗುವುದು. ಅದರಲ್ಲಿಯೂ **ದಾನವೀರ**§ರಸವು ಮೂರ್ತಿಮತ್ತಾಗಿರುವುದು. ವೀರರಸದಲ್ಲಿ ದಾನವೀರ, ಧರ್ಮವೀರ, ಯುದ್ಧವೀರ, ದಯಾವೀರ, ಎಂಬ ನಾಲ್ಕು ವಿಧಗಳಿರುವುವು. ಶೋಕರಸಸ್ಥಾಯಿಯು ಕರುಣರಸವೆಂದೂ ಈ ರೂಪಕವು ಸಾದ್ಯಂತ ಶೋಕಮಯವಾಗಿರುವುದರಿಂದ ಇದರ ರಸವು ಕರುಣರಸವೆಂದೂ ಕೆಲವರ ತರ್ಕವಿರುವುದು. ಕರುಣರಸವೆಂದು ಹೇಳುವುದಾದರೆ ನಾಟಕ ಪ್ರಯೋಜನವೂ ಕವಿಯ ಆಶಯವೂ ಮಾರ್ಪಡುವುದಾದುದರಿಂದ ಹಾಗೆ ಹೇಳುವುದು ಸರಿಯಾಗಿ ನಮಗೆ ತೋರುವುದಿಲ್ಲ.

(೧) ಈ ನಾಟಕದಲ್ಲಿ ಶೃಂಗಾರರಸಕ್ಕೆ ಕಾರಣವೇ ಇಲ್ಲದಿದ್ದರೂ ನಾಟಕದಲ್ಲಿ ಶೃಂಗಾರರಸವು ಇರಲೇಬೇಕೆಂದು ಬಹು ಯತ್ನಪೂರ್ವಕವಾಗಿ ಮೊದಲನೆಯ ಅಂಕದಲ್ಲಿಶೃಂಗಾರರಸವು ಯೋಜಿತವಾಗಿರುವುದು. (೨) ಪಾತ್ರಗಳಲ್ಲಿ ನಾಯಿಕಾನಾಯ

§ ದಾನವೀರ ರಸಲಕ್ಷಣಂ—

ಸ್ಮಿತಪೂರ್ವಾಭಿಭಾಷಿತ್ವಂ ಸ್ಮಿತಪೂರ್ವಂಚವೀಕ್ಷಣಂ
ಪ್ರಸಾದಾದ್ಭುದಾತ್ಮತ್ವಂ ತದ್ಭಾವಾನುಮೋದನಂ
ಗುಣಾಗುಣವಿಚಾರಾದ್ಯಾ ಅನುಭಾವಾಸ್ಸಮಿರಿತಾಃ
ದಾನವೀರೇಧೃತಿರ್ಹರ್ಷ ಇತ್ಯಾದ್ಯಾವ್ಯಭಿಚಾರಿಣಃ (ಭರತರಸ ಪ್ರಕರಣ)

ಕರ ಗುಣತೋರಾಣಿಕೆಯಿಂದ ಕವಿಚಾತುರ್ಯಕ್ಕೆ ಭಂಗಬರುವಂತಿದೆ. (೩) ನಿದ್ರಾ ನಿದ್ರ, ಫಲಾಫಲ, ಗುಣಾವಗುಣಗಳ ಹೆಗ್ಗಳಿಕೆಯು ಕಥಾ ನಾಯಕನೇ ಹೇಳಿರು ವಂತೆ ಬರೆದಿರುವುದಕ್ಕಿಂತಲೂ ಮತ್ತಾರಿಂದಾದರೂ ಹೇಳಿಸಿದ್ದರೆ ಚೆಲುವಾಗಿ ದ್ದಿತಾಗಿ ತೋರುತ್ತದೆ. (೪) ಸೂಕರ ವಿಚಾರವಾಗಿ ಮಿತಿಮೀರಿ ವರ್ಣಿಸಿರುವುದು ಹೆಚ್ಚೆಂದು ತೋರುತ್ತದೆ. ಅಥವಾ ಅನುಪಯುಕ್ತವೆಂದರೂ ಸಲ್ಲುವುದು. (೫)ಅನಿಷ್ಟ ಪರಿಹಾರಾರ್ಥವಾಗಿ ಆಚರಿಸಲ್ಪಟ್ಟ ಶಾಂತಿಕರ್ಮಾಂಗವಾದ ಜಾಗರಣೆಯ ಅನಂತರ ಪ್ರಾತಃಕಾಲದಲ್ಲಿ ಶೈಚ್ಯೆಯಪರಹಪೀಡನ ಸೂಚನೆಯು ಧರ್ಮವಿರುದ್ಧ ವಾದುದಾಗಿ ನಿಷ್ಕಾಮಕರ್ಮಫಲಪ್ರಾಪ್ತಿಗೆ ಕುಂದನ್ನುಂಟುಮಾಡುವುದಾದುದರಿಂದ ಉಚಿತವಾದುದಾಗಿ ನಮಗೆ ತೋರುವದಿಲ್ಲ.

(೬) ಮಹಾತ್ಮನಾದ ಮುಖ್ಯಾಮಾತ್ಯಚಾಣಕ್ಯನತಂತ್ರದಿಂದ ಚಂದ್ರಗುಪ್ತನು ನವನಂದರನ್ನು ಜಯಿಸಿ ಕುಸುಮಪುರವನ್ನು ವಶಪಡಿಸಿಕೊಂಡಂತೆ ಚಂದ್ರ ಗುಪ್ತನೇ ಈಗ ಮಹೀಪಾಲದೇವಾಭಿಧಾನದಿಂದವತರಿಸಿ ನಂದರೂಪರಾದ ಕರ್ಣಾ ಟಕ ರಾಜರನ್ನು ನಾಶಗೊಳಿಸುವುದಕ್ಕಾಗಿ ಜನ್ಮಿಸಿದುದಾಗಿ ಹೇಳಲ್ಪಟ್ಟಿದೆ. ಈ ಉಪಮಾನವು ಅಷ್ಟು ಸೊಗಸೆಂದು ನಮಗೆ ತೋರುವುದಿಲ್ಲ. ಏಕೆಂದರೆ ಕರ್ಣಾ ಟಕ ರಾಜರು ನವನಂದನರಂತೆ ಒಂಭತ್ತು ಜನರಿರಬೇಕು. ಚಂದ್ರಗುಪ್ತನನ್ನು ಮಹೀಪಾಲನೆನ್ನುವುದಾದರೆ ಆರ್ಯಚಾಣಕ್ಯನಬದಲು ಇಲ್ಲಿ ಯಾರೆಂಬುದು ತಿಳಿಯದಾಗಿದೆ.

ಇದರ ಕೆಲವು ಶ್ಲೋಕಗಳನ್ನು ಮಾದರಿಗಾಗಿ ಬರೆಯುವೆವು:—

ಲೋಕದಲ್ಲಿ ಜೀವಿಗಳಿಗೆಲ್ಲಾ ಶರೀರಾರೋಗ್ಯಕ್ಕೆ ನಿದ್ರೆಯೇ ಕಾರಣವೆಂಬುದಕ್ಕೆ:-

ಚಿತ್ತಂ ಪ್ರಸಾದಯತಿ ಲಾಘವ ಮಾದಧಾತಿ
ಪ್ರತ್ಯಂಗ ಮುಜ್ಜ್ವಲಯತಿ ಪ್ರತಿಭಾ ವಿಶೇಷಂ
ದೋಷಾನುದಸ್ಯತಿ ಕರೋತಿಚ ಧಾತುಸಾಮ್ಯಂ
ಆನಂದಮರ್ಪಯತಿ ಯೋಗವಿಶೇಷಗಮ್ಯಂ॥ ಚಂಡಕೌಶಿಕ ೧—೮

ನಿದ್ರೆಯು ಮನಸ್ಸನ್ನು ನಿರ್ಮಲ ಮಾಡುವುದು. ಅವಯವಗಳಿಗೆ ಲವ ಲವಿಕೆಯನ್ನುಂಟುಮಾಡುವುದು. ಶರೀರದ ದೋಷಗಳನ್ನು ನಾಶಗೊಳಿಸಿ ಶರೀರ

---

* ಇಂತಹ ಸಂಭವವು ಒದಗಿದಾಗ ಮಹಾಕವಿ ಕಾಳಿದಾಸನು ತನ್ನ ಶಾಕುಂತಲನಾಟಕದಲ್ಲಿ ಕವಿಸಮಯವು ಕೆಡದಂತೆ, ಧರ್ಮಲೋಪವಾಗದಂತೆ, ಓದುಗರು ಅಚ್ಚರಿಪಡುವಂತೆ, ಚಕ್ರವಾಕಮಿಥುನವನ್ನು ಹೇಗೆ ಕೆಲ್ಲಿಸಿ ಹೇಳಿರುವನೆಂಬುದನ್ನು ನೋಡಿ.

(ಶಾಕುಂತಲನಾಟಕ ಅಂಕ ೫)

ಧಾತುವನ್ನು ಸಮಸ್ಥಿತಿಯಲ್ಲಿರಿಸಿ ಯೋಗಗಮ್ಯವಾದ ಆನಂದವನ್ನುಂಟುಮಾಡುವುದು. ನಿದ್ರಾಭಂಗದಿಂದ ಆಗುವ ಅನರ್ಥಗಳು :—

ನಿದ್ರಾಲಸಂ ಭಂಗಮುಪೈತಿ ಗಾತ್ರಂ
ಖೇದಾತಿಭಾರಸ್ತಿಮಿತಂ ಮನಶ್ಚ
ಮುಹುರ್ಮುಹುರ್ವಕ್ತ್ರಮುಪೈತಿ ಜೃಂಭಾಂ
ಬಾಲಾತಪಾಲೋಕಸಹಾ ನದೃಷ್ಟಿಃ ॥ ೧—೯

ನಿದ್ರೆಯು ಇಲ್ಲದುದರಿಂದ ಶರೀರದಲ್ಲಿ ಆಲಸಿಕೆಯುಂಟಾಗುವುದು. ಖೇದದಿಂದನುನಸ್ಸು ಜಡವಾಗುವುದು. ಪದೆ ಪದೇ ಆಕಳಿಕೆಯನ್ನುಂಟುಮಾಡುವುದು. ದೃಷ್ಟಿಯು ಬಾಲಸೂರ್ಯನನ್ನು ಅಥವಾ ಎಳೆಯ ಬಿಸಿಲನ್ನು ನೋಡದಂತಾಗುವುದು.

ಕ್ಷತ್ರಿಯರ ಧರ್ಮನಿರೂಪಣವು ಹೀಗಿರುವುದು: —

ದಾತವ್ಯಂ ರಕ್ಷಿತವ್ಯಂಚ ದೋದ್ಧವ್ಯಂ ಕ್ಷತ್ರಿಯೈರಿತಿ
ಗೀತಃ ಪುರಾಣೈರ್ಮುನಿಭಿ ರೇಷಧರ್ಮಸ್ಸನಾತನಃ ॥ ೨—೨೯

ಕೊಡತಕ್ಕದ್ದು; ರಕ್ಷಿಸತಕ್ಕುದ್ದ; ಯುದ್ಧಮಾಡತಕ್ಕದ್ದು ಇವು ಮೂರೂ ಕ್ಷತ್ರಿಯನ ಸನಾತನ ಧರ್ಮಗಳು. ಯಾರಿಗೆ ಕೊಡತಕ್ಕುದು? ಯಾರೊಡನೆ ಯುದ್ಧವನ್ನು ಮಾಡತಕ್ಕುದೆಂದು ಕೇಳಿದ ವಿಶ್ವಾಮಿತ್ರನನ್ನು ಕುರಿತು ಹರಿಶ್ಚಂದ್ರನು ಹೇಳುವುದು.—ಗುಣವಂತರಾದ ಕ್ಷತ್ರಿಯರಲ್ಲಿ ಕೊಡತಕ್ಕುದು. ಭಯಾರ್ತರನ್ನು ರಕ್ಷಿಸತಕ್ಕುದು. ಶತ್ರುಗಳೊಡನೆ ಯುದ್ಧಮಾಡತಕ್ಕುದು.

ಸುಖದುಃಖ ವಿವೇಚನೆ.—

ಸುಖಂವಾದುಃಖಂವಾಕಿಮಿವಹಿಜಗತ್ಯಸ್ಮಿನಿಯತಂ
ವಿವೇಕಸ್ಪರ್ಧ್ಯಂಸಾದ್ಧ್ವತಿ ಸುಖದುಃಖಿವೃತಿಕರಃ
ಮನೋವೃತ್ತಿಃ ಪುಂಸಾಂಜಗತಿಜಯಿನೀಕಾಪಿಮಹತಾಂ
ಯಯಾದುಃಖಿದುಃಖಿಂ ಸುಖಿಮುಪಿಸುಖಿಂವಾನುಭವತಿ ॥ ೪—೨೯

ಪ್ರಪಂಚದಲ್ಲಿ ಸುಖವೇ ಆಗಲಿ ದುಃಖವೆ ಆಗಲಿ ಯಾವುದೂ ಸ್ಥಿರವಾದುದಲ್ಲ. ಇದು ಸುಖ ಅದು ದುಃಖವೆಂಬ ವೈಲಕ್ಷಣ್ಯವು ವ್ಯಕ್ತಿಯ ವಿವೇಕಾಭಾವ (ಅವಿವೇಕ) ದಿಂದಾಗುವುವು. ಇಂತಹ ವಿಲಕ್ಷಣಕ್ಕೊಳಪಡದ ಮಹಾತ್ಮರ ಮನೋಧೈರ್ಯವೇ ಜಯಶೀಲವಾಗುವುದು. ಎಂದರೆ ವಿಪತ್ಪರಂಪರೆಗಳನ್ನು ದಾಟುವುದು

ಋಣಬಾಧೆಯಿಂದ ಸಂತಪ್ತನಾದ ಹರಿಶ್ಚಂದ್ರನ ಹೇಳಿಕೆ :—

ಲೋಕದ್ವಯಪ್ರತಿಭಯೈಕನಿದಾನಮೇತ
ದ್ಧಿಕ್ ಕಾ ಪ್ರಾಣಿನಾಂ ಋಣಮಹೋ! ಪರಿಣಾಮಘೋರಂ

ಏಕಃ ಸ ಏವ ಹಿ ಪುರ್ಮಾ ಪರಮಸ್ತಿಲೋಕೇ
ಕ್ರುದ್ಧಸ್ಯ ಯೇನ ಧನಿಕಸ್ಯ ಮುಖಂ ನ ದೃಷ್ಟಂ ॥ ೩—೧೬

ಅಹೋಧಿಕ್ :—ಲೋಕದ್ವಯದಲ್ಲಿ ಅತ್ಯಂತಭೀತಿಯನ್ನೂ ಪರಿಣಾಮ ದಲ್ಲಿ ಅತ್ಯಂತ ದುಃಖವನ್ನೂ ಉಂಟುಮಾಡುವುದಾದ ಈ ಋಣಬಾಧೆಯು ಎಷ್ಟು ಘೋರವಾದುದು! ಯಾವನು ಕುಪಿತನಾದ ತನ್ನ ಸಾಲಗಾರನಿಂದ ಎಲ್ಲಿಯವರೆಗೆ ನೋಡಲ್ಪಡುವುದಿಲ್ಲವೋ ಅವನು ಮೂರು ಲೋಕಗಳಲ್ಲಿಯೂ ಧನ್ಯನೆಂದೇ ಹೇಳಬೇಕು.

ಶ್ಮಶಾನದ ಭೀಭತ್ಸತೆಯು ಹೀಗಿರುವುದು :—

ಇಮಾಮೂರ್ಧ್ವಂತ್ಯಂತಃ ಪ್ರತಿರವಭೃತಃ ಕರ್ಣಕಟವಃ
ಶಿವಾಃಕ್ರೂರಾಕ್ರಂದೈರಶಿವಪಟಹಾಡಂಬರರವಾಃ
ಜ್ವಲಂತ್ಯೇತೇ ತಾಪಸ್ಫುಟತನ್ಮಕರೋಟೀಪುರದರೀ
ಲಸನ್ಮಸ್ತಿಷ್ಕಾತ್ತಾ ಸ್ತಿಮಿತಜಟಿಲಾಗ್ರಾ ಹುತಭುಜಃ ॥ ೪—೮

ಅಹಹ! ಈ ಶ್ಮಶಾನದ ಇರವನ್ನೇನೆಂದು ಬಣ್ಣಿಸಲಿ. ಮರಣಸೂಚಕ ವಾದ ವಾದ್ಯಗಳಂತೆ ಕೇಳಬರುವ ನರಿಗಳ ಭಯಂಕರವಾದ ಕೂಗು ಈ ಶ್ಮಶಾನ ಪ್ರಾಂತರದಲ್ಲಿ ಪ್ರತಿಧ್ವನಿಯನ್ನು ಕೊಡುವುದರಿಂದ ಕರ್ಣಕಠೋರವಾಗಿದೆ. ಕಪಾಲವು ಸಿಡಿದು ರಂಧ್ರದಿಂದ ಸ್ರವಿಸುತ್ತಿರುವ ಮಸ್ತಿಷ್ಕದ ಬಿಂದುಗಳಿಂದ ಉರಿಯು ವೇಗಗೊಳಿಸಲ್ಪಟ್ಟುಹಾಗೆಯೇ ಕಡಿಮೆಯಾಗಿ ನಂದಿಹೋಗುತ್ತಿದೆ.

ಭನತ್ತ್ಯಕ್ಷ್ಣೋರ್ಮುದ್ರಾಂ ಶರಸಿ ಚರಸೌನ್ಯಸ್ಯ ಕರಟಃ
ಶಿವಾ ಸ್ಫಿಕ್ಪೀಠಾಂತೇ ಗ್ರಸತಿರಸನಾಗ್ರಂ ವಿಲುಠಿತಂ
ಭನತ್ತಿ ಶ್ವಾ ಮೇಢ್ರಂ ಪ್ರಥಯತಿ ಚ ಗೃಧ್ರೀತ್ರವಿವರಂ
ಯಥೇಷ್ಟವ್ಯಾಪಾರಾಸ್ತ್ವಯಿ ಕೃಣಪ! ಯಚ್ಛ್ವಾಪದಗಣಾಃ ॥ ೪—೯

ಹರಿಶ್ಚಂದ್ರನು ಮುಂದೆನಡೆದು ಹಾಯ್! ಈ ಶ್ಮಶಾನವಾಟಿಕೆಯು ನೋಡು ವುದಕ್ಕೆ ಜಿಹಾಸಾಸ್ಪದವಾಗಿರುವುದಾದರೂ ನೊಂದಿರುವ ಈ ಮನಸ್ಸಿಗೆ ಇಂಪಾ ಗಿಯೆ ತೋರುವುದು. ಎಂದು ಹೆಳುತ್ತ (ಎದುರುನಲ್ಲಿ ಕಂಡುಬರುವ ಒಂದಾ ನೊಂದು ಮೃತಕಳೇಬರವನ್ನುದ್ದೇಶಿಸಿ) ಎಲೈ! ಕೃಣಪ! ನಿನ್ನಶರೀರವು ಮಾಂಸಾ ಹಾರಿಗಳಾದ ಮೃಗಪಕ್ಷಿಗಳಿಂದ ಯಥೇಚ್ಛವಾಗಿ ಭುಜಿಸಲ್ಪಡುವುದಾದುದರಿಂದ ನೀನೇಧನ್ಯನು ಹೇಗೆಂದರೆ ಇಗೋ! ಕಾಗೆಯು ನಿನ್ನತಲೆಯಮೇಲೆ ಕುಳಿತುಕೊಂಡು ನಿನ್ನಕಣ್ಣುರಿಪ್ಪೆಯನ್ನು ಗೀಳಿ ತೆರೆಯುತ್ತಿದೆ. ಕೊನೆಯಬಾಯಿಯಿಂದ ಹೊರ ಬಿದ್ದಿರುವನಾಲಿಗೆಯ ತುದಿಯನ್ನು ನರಿಗಳು ಕಚ್ಚಿತಿನ್ನುತ್ತಿವೆ. ನಾಯಿಗಳು ಮರ್ಮ ಸ್ಥಾನವನ್ನು ಕಚ್ಚಿ ಎಳೆಯುತ್ತಿವೆ. ರಣಹದ್ದುಗಳು ರಂಧ್ರವನ್ನು ತಮ್ಮ ಕೊಕ್ಕಿ

ನಿಂದ ಎಳೆದೆಳೆದು ದೊಡ್ಡದಾಗಿ ಮಾಡುತ್ತಿವೆ. ಹೀಗೆ ಮಾಂಸಾಹಾರಿಗಳಾದ ಈ ಜಂತುಗಳು ನಿನ್ನ ಶರೀರವನ್ನು ಭುಂಜಿಸಿ ಯಥೇಷ್ಟವಾಗಿ ವಿಹರಿಸುತ್ತಿವೆ.

ಶರೀರನಿಸ್ಸಾರತೆಯ ವರ್ಣನವು ಹೀಗಿರುವುದು;—

ತನ್ಮಧ್ಯೇತದುರಸ್ತದೇವ ವದನಂ ತೇಲೋಚನೇ ತೇಭ್ರುವೌ
ಜಾತಂ ಸರ್ವಮಮೇಧ್ಯಶೋಣಿತವಸಾಮಾಂಸಾಸ್ಥಿ ಲೀಲಾಮಯಂ
ಭೀರೂಣಾಂಭಯದಂ ಕೃಪಾಸ್ಪದಮಿದಂ ವಿದ್ಯಾವಿನೀತಾತ್ಮನಾಂ
ತನ್ಮೋಧೈಃ ಕ್ರಿಯತೇವೃಥಾ ವಿಷಯಿಭಿಃ ಕ್ಷುದ್ರೋಭಮಾನಗ್ರಹಃ ೪—೧೦

ಕೇವಲ ವಿಷಯಲೋಲುಪರಾದವರಿಂದ ವಿಷಯಸುಖಕ್ಕೋಸುಗವಾಗಿಯೇ ಶರೀರವು ಸುಂದರವೆಂದೂ ಉಪಭೋಗ ಯೋಗ್ಯವೆಂದೂ ವಿಧವಿಧವಾಗಿ ಬಣ್ಣಿಸಲ್ಪಡುವವುಗಳಾದ ತಲೆ, ಎದೆ, ಮುಖ, ಕಣ್ಣು, ಹುಬ್ಬುಗಳು ರಕ್ತ, ಕೊಬ್ಬು ಮೊದಲಾದವು ಮಾಂಸ,ಮೂಳೆ ಮತ್ತು ಜೊಲ್ಲಿನಿಂದ ಕೂಡಿದುದಾಗಿದ್ದು ಕ್ಷಣಾರ್ಧದಲ್ಲಿ ಕೊಳೆತು ನೋಡುವುದಕ್ಕೆ ಅಸಹ್ಯಕರವಾಗಿ ಹೋಗುವುದು. ಇಂತಹ ಹೇಯವಾದಶರೀರವು ಅವಿವೇಕಿಗಳಿಗೆ ಭೀತ್ಯಾಸ್ಪದವೂ ವಿದ್ಯಾವಿನೀತರಿಗೆ ಕೃಪಾಸ್ಪದವಾದುದಾಗಿಯೂ ಇರುವುದು.

ಶ್ಮಶಾನಕ್ಕೆ ಹೋಲಿಸುವ ಸಂಧ್ಯಾವರ್ಣನವು ಹೀಗಿರುವುದು:—

ಸಂಧ್ಯಾಬಧ್ಯಾಸ್ಯ ಶೋಣಂ ವಿಸೃಮರಪತಿತಾಂಗಾರಮಿಂದ್ವರ್ಕಬಿಂಬಂ
ತಾರಾನಾರಾಸ್ಥಿಕೀರ್ಣಂ ವಿರಚನರತಲಂ ಕಾಯಮಾಕೋಜ್ಜ್ವಲೀಂದು
ಹ್ಯಸ್ಯಸ್ನಕ್ತಂಚ ರಾಕ್ಷೇಂದ್ರತಿವಿರಮಹಾಡೂಮಪೂಮ್ರಾನುಕಾರಂ
ಜಾತಂ ಲೀಲಾಶ್ಮಶಾನಂ ಜಗದಖಿಲಮಯೋ ಕಾಲಕಾಪಾಲಿಕಸ್ಯ॥ ೪—೨೯

ಅಹಹ! ಚೇತನಹೀನವಾದ ಕಳೇಬರದರಕ್ತದಿಂದ ಬಣ್ಣಬಳಿದಂತಿರುವ ವಿಶ್ವಸಂಧ್ಯಾ. ಉರಿದುರಿದು ನಂದಿಹೋಗುತ್ತ ಕೊಂಚಕೊಂಚವಾಗಿ ಕಾಣುತ್ತಿರುವ ಪ್ರೇತಾಗ್ನಿಯಂತೆ ಮಂದವಾಗಿಕಾಣುವ ಸೂರ್ಯಬಿಂಬ. ಚೂರುಚೂರಾದ ಅಸ್ಥಿಸಂಕೀರ್ಣದಂತಿರುವ ನಕ್ಷತ್ರಗಳು. ಶುಭ್ರವಾದ ತಲೇಬುರುಡೆಯಂತಿರುವ ಚಂದ್ರ. ದಟ್ಟವಾಗಿಪ್ರಸರಿಸಿರುವ ಪ್ರೇತಾಗ್ನಿಯ ಧೂಮದಂತೆ ಅಂಧಕಾರಯುಕ್ತವಾದುದಾಗಿ ಈ ವಿಶ್ವವು ಕಾಲನೆಂಬ ಕಾಪಾಲಿಕನ ಕ್ರೀಡಾಕ್ಷೇತ್ರದಂತೆ ಕಾಣುತ್ತಿರುವುದು.

ದುಃಖಾರ್ತನಾದ ಹರಿಶ್ಚಂದ್ರನ ಹೇಳಿಕೆ: —

ಮಾಮಾವಮ್ರಶಿರೋಧರಂ ಪ್ರಭವತಾಕ್ರುದ್ಧೇನರಾಜ್ಯಶ್ರಿಯಾ
ಯದ್ವಿಶ್ಲೇಷಯತಾಪಿತೇನ ಮುನಿನಾನಿಶ್ಶೇಷಿತಂನಸ್ವಯಂ
ತತ್ಪಾಪಿವ್ಯಸನಪ್ರಿಯೇಣ ವಿಧಿನಾವೃತ್ತಂತದಾನಿಷ್ಕರಂ
ಯೇನಾತ್ಮಾತನಯಃ ಕಳತ್ರಮಪಿಮೇ ಸರ್ವಂವಿಲುಪ್ತಂಕ್ಷಣಾತ್॥ ೨—೫.

ಸತಿಸುತರನ್ನು ವಿಕ್ರಯಿಸಿ ತಾನೂ ಪರಾಧೀನನಾಗಿ ಈ ಶ್ಮಶಾನಮಂ ಬಹು ದುಃಖದಿಂದ ಕಾಯುತ್ತ ಹಾಯ್! ಹತವಿಧಿ! ನಿಷ್ಕಾರಣವಾಗಿ ನನ್ನೊಡನೆ ಕುಪಿತನಾದ ಆ ವಿಶ್ವಾಮಿತ್ರನು ನನ್ನ ಅಶೇಷ ರಾಜ್ಯಲಕ್ಷ್ಮಿಯನ್ನು ಅಪಹರಿಸಿದನಾದರೂ ಹೆಂಡತಿಯನ್ನೂ ಮಗನನ್ನೂ ಉಳಿಸಿದ್ದನು. ನೀನಾದರೋ ಕ್ಷಣಾರ್ಧದಲ್ಲಿ ನನ್ನ ಸತಿಸುತರನ್ನು ಅಪಹರಿಸಿರುವೆಯಲಾ! ಅಯ್ಯೋ!

ಸೋಮದೇವ ಸೂರಿ.

ಇವನ ಮಂಗಳಾಚರಣ ಶ್ಲೋಕಗಳಿಂದಲೂ ಈತನ ಕೃತಿಯಲ್ಲಿ ಜಿನ ಜೈನಾಚಾರ್ಯವರ್ಣನೆಗಳಿರುವುದರಿಂದ ಇವನು ಜೈನನೆಂದೂ ತನ್ನ ಗ್ರಂಥದ ಪ್ರತ್ಯಾಶ್ವಾಸದ ಕೊನೆಯಲ್ಲಿರುವ "ಇತಿ ಸಕಲತಾರ್ಕಿಕಲೋಕಚೂಡಾಮಣೇಃ **ಶ್ರೀಮನ್ನೇಮಿದೇವ**ಭಗವತಃ ಶಿಷ್ಯೇಣ ಸದ್ಯೋಽನವದ್ಯಗದ್ಯಪದ್ಯವಿದ್ಯಾಧರಚಕ್ರವರ್ತಿಶಿಖಂಡಮಂಡನೀಭವಚ್ಚರಣಕಮಲೇನ **ಶ್ರೀಸೋಮದೇವ** ಸೂರಿಣಾವಿರಚಿತೇ **ಯಶೋಧರ**ಮಹಾರಾಜಚರಿತೇ **ಯಶಸ್ತಿಲಕಾ**ಪರನಾಮ್ನಿ ಮಹಾಕಾವ್ಯೇ" ಎಂಬುದರಿಂದ ಇವನು ನೇಮಿದೇವನ ಶಿಷ್ಯನೆಂದೂ ಯಶಸ್ತಿಲಕಾಪರನಾಮಕವಾದ ಯಶೋಧರ ರಾಜಚರಿತೆಕಾರನೆಂದೂ ಗೊತ್ತಾಗುತ್ತದೆ.

ಕಾಲ:—"ಶಕನೃಪಕಾಲಾತೀತಸಂವತ್ಸರ ಶತೇಷ್ವಷ್ಟಸ್ವೇಕಾಶೀತ್ಯಧಿಕೇಷು (೮೮೧) ಗತೇಷು ಸಿದ್ಧಾರ್ಥಿಸಂವತ್ಸರ ಚೈತ್ರಮಾಸಮದನತ್ರಯೋದಸ್ಯಾಂ..... ಶ್ರೀಮದರಿಕೇಸರಿಣಃ ಪ್ರಥಮಪುತ್ರಸ್ಯ ಶ್ರೀಮದ್ವಾಗರಾಜ ಪ್ರವರ್ಧಮಾನವಸುಧಾರಾಯಾಂ ಗಂಗಧಾರಾಯಾಂ ವಿನಿರ್ಮಿತಮಿದಂಕಾವ್ಯಂ" ಎಂಬ ಗ್ರಂಥಾಂತಗದ್ಯದಿಂದ ಇವನು (ಚೋಳರಾಜ್ಯದಲ್ಲಿರುವ?) 'ಗಂಗಧಾರಾ' ಎಂಬ ಗ್ರಾಮದವನೆಂದೂ ಗ್ರಂಥನಿರ್ಮಾಣ ಕಾಲವು ಶಕಸಂವತ್ಸರ ೮೮೧ ಅಥವಾ ಕ್ರಿ. ಶ. ೯೫೯ ಎಂದೂ ಅದೇ ಕವಿಯ ಕಾಲವೆಂದೂ ಗೊತ್ತಾಗುತ್ತದೆ. ಎಂದರೆ ಕವಿಯು ಕ್ರಿ. ಶ. ಹತ್ತನೆಯ ಶತಮಾನದವನೆಂಬುದು ಸ್ಪಷ್ಟವಾಗಿದೆ.

ಗ್ರಂಥ:—ಇವನು "ಯಶಸ್ತಿಲಕ" ಎಂಬ ಚಂಪೂಕಾವ್ಯವನ್ನು ಬರೆದಿರುವನು. "ಅಹಿಂಸಾಪರಮೋಧರ್ಮಃ ಅಥವಾ ನಾಹಿಂಸ್ಯಾತ್ಸರ್ವಭೂತಾನಿ" ಎಂಬ ತತ್ವಾರ್ಥವೇ ಇದರ ಸಾರ. ಸಕಲಪಾಪಕಾರ್ಯಗಳಿಗೂ ತತ್ತನ್ಮನೋವೃತ್ತಿಯೇ ಕಾರಣವಾಗುವುದಾದುದರಿಂದ ಅಂತಹ ಮಾನಸಿಕ ಪಾಪಕೃತ್ಯಗಳ ದೆಸೆ

ಯಿಂದ ಪುನರ್ಜನ್ಮವನೆತ್ತಿ ಅನರ್ಥಕಾರಣನಾಗುವನೆಂದು ನಿರೂಪಿಸುವುದೇ ಕಥಾಧ್ಯೇಯ. ಇದರಲ್ಲಿ ೮ ಆಶ್ವಾಸಗಳಿರುವುವು. ಯಶೋಧರ ಚರಿತೆಯನ್ನು ಹೇಳುವ ನೆಪದಲ್ಲಿ ಜಿನೋಪಾಸನಾಧ್ಯಯನಾದಿ ಕ್ರಮಗಳು ಸಾಂಗವಾಗಿ ವರ್ಣಿತವಾಗಿರುವುವು. ಜಿನಮತದ ತತ್ವಬೋಧಕಗಳಾದ ಅನೇಕ ಉಪಾಖ್ಯಾನಗಳು ಇದರಲ್ಲಿ ಉದಾಹೃತವಾಗಿವೆ. ಇದರ ನಾಲ್ಕನೆಯ ಆಶ್ವಾಸದಲ್ಲಿ.—

ಮಯಾವಾಗರ್ಥಸಂಭಾರೇ ಭುಕ್ತೇಸಾರಸ್ವತೇರಸೇ
ಕವಯೋಽನ್ಯೇಭವಿಷ್ಯಂತಿ ನೂನಮುಚ್ಛಿಷ್ಟ ಭೋಜನಾಃ

ಎಂಬ ಅಭಿಮಾನೋಕ್ತಿಯು ಇರುವುದು.

ಬ್ರಾಹ್ಮಣನು ಯಾರೆಂಬ ವಿಚಾರದಲ್ಲಿ ಹೀಗೆಂದು ಹೇಳಿರುವನು.

ವೈರಾಗ್ಯಂಜ್ಞಾನಸಂಪತ್ತಿ ರಸಂಗಸ್ಥಿರಚಿತ್ತತಾ
ಊರ್ಮಿಷ್ಮಯಸಹತ್ವಂಚ ಪಂಚಯೋಗಸ್ಯ ಹೇತವಃ
ಪರೇಬ್ರಹ್ಮಣ್ಯನೂಚಾನೋ ಧೃತಿಮೈತ್ರೀದಯಾನ್ವಿತಃ
ಅನ್ಯತ್ರಸೂನೃತಾದಾತ್ಕ್ಯಾನಿತ್ಯಂವಾಚಂ ಯಮೀ ಭವೇತ್
ಜಾತಿರ್ಜರಾವೃತಿಃ ಪುಂಸಾಂತ್ರಯೀಸಂಸೃತಿಕಾರಣಂ
ಏಷಾತ್ರಯೀಯತಸ್ತ್ಯಾಃ ಕ್ಷೀಯತೇಸಾತ್ರಯೀಮತಾ
ಅಪಿಂಸಸ್ಸಿದ್ಧಭೋಜ್ಞಾನೀ ನಿರೀಹೋಸಪರಿಗ್ರಹಃ
ಯಸ್ಮಾತ್ಸಬ್ರಾಹ್ಮಣಸ್ಸತ್ಯಂ ನತುಜಾತಿಮದಾಂಧಲಃ ॥

ಇದನ್ನು ಯೋಚಿಸುವ ಪ್ರತಿಯೊಬ್ಬನಿಗೂ ನಾಮುನೇದದಲ್ಲಿ ಹೇಳಿರುವ ವಜ್ರಸೂಚಿಕೋಪನಿಷತ್ತಿನ ಹೇಳಿಕೆಯ ಜ್ಞಾಪಕವು ಬಾರದಿರದು.

ಯಜ್ಞಾದಿ ಕರ್ಮವಿಚಾರವಾಗಿ ಇವನ ಮತವು ಹೀಗಿರುವುದು:—

ಲೋಲೇಂದ್ರಿಯೈರ್ಲೋಕ ಮನೋಽನುಕೂಲೈ
ಸ್ವಾಜೀವನಾಯಾಗಮಏವಸೃಷ್ಟಃ
ನ್ನರ್ಗೋಯದಿಸ್ಯಾತ್ಪಶು ಹಿಂಸಕಾನಾಂ

ಯಃಕಶ್ಚಿದಾತ್ಮಾನಮದ್ವಿತೀಯಂ ಜಾತಿಗುಣಕ್ರಿಯಾಹೀನಂ ಷಡೂರ್ಮಿಷಡ್ಭಾವೇತ್ಯಾದಿಸರ್ವದೋಷರಹಿತಂ ಸತ್ಯ ಜ್ಞಾನಾನಂದಾನಂತಸ್ವರೂಪಂ ಸ್ವಯಂ ನಿರ್ವಿಕಲ್ಪಮಶೇಷ ಕಲ್ಪಾಧಾರಮಶೇಷಭೂತಾಂತರ್ಯಾಮಿತ್ವೇನವರ್ತಮಾನ ಮಂತರ್ಬಹಿಶಾ ಕಾಶವದನು ಸ್ಯೂತ ಮಖಿಂಡಾನಂದಸ್ವಭಾವ ಮಶ್ರುಮೇಯ ಮನುಭವೈಕವೇದ್ಯಮಪರೋಕ್ಷತಯಾಭಾಸ ಮಾನಂ ಕರತಲಾಮಲಕವತ್ಸಾಕ್ಷಾದಪರೋಕ್ಷೀಕೃತ್ಯ ಕೃತಾರ್ಥತಯಾಕಾಮರಾಗಾದಿ ದೋಷರಹಿತಶ್ಯಮಾದಿ ಸಂಪನ್ನೋಭೂವಮಾತ್ಸರ್ಯತೃಷ್ಣಾಶಾಮೋಹಾದಿರಹಿತೋದಂ ಭಾಹಂಕಾರಾದಿಭಿರಸಂಸ್ಪೃಷ್ಟಚೇತಾವರ್ತತೇ। ಏವಮುಕ್ತಲಕ್ಷಣೋಯಸ್ಸಏವಬ್ರಾಹ್ಮಣ ಇತಿ ಶ್ರುತಿಸ್ಮೃತಿಪುರಾಣೇತಿಹಾಸಾನಾಮಭಿಪ್ರಾಯಃ ॥

ಸೂನಾಕ್ಯತಾಂತರ್ಹಭವೇತ್ಸಕಾಮಂ ॥
ಮಂತ್ರೇಣಶಸ್ತ್ರೈರ್ಗಲಪೀಡನಾದ್ವಾ
ವೇದ್ಯಾಂಬಹಿರ್ವಾಪಿ ವದಸ್ಸಮಾನಃ
ಸ್ಪರ್ಗೋಯದಿಸ್ಯಾನ್ನಖಿಂಸಿತಾನಾಂ
ಸ್ಪಬಾಂಧವೈರ್ಯಜ್ಞವಿಧಿರ್ನಕಿಂತು ॥

ಗ್ರಂಥವಿಚಾರದಿಂದ ಇವನು ಉದ್ದಂಡತಾರ್ಕಿಕನೆಂಬುದು ವ್ಯಕ್ತವಾಗುತ್ತದೆ. ಇವನ ಪದ್ಯಶೈಲಿಯನ್ನು ತೀಸುವುದಕ್ಕೆ ಮೇಲಣ ಶ್ಲೋಕಗಳು ಸಾಕೆಂದು ತೋರುವುದು.

ದ ಂ ಡಿ (೨)

ಇವನಾವನೆಂಬುದಾಗಲಿ, ಎಲ್ಲಿಯವನೆಂಬುದಾಗಲಿ, ಜನನೀಜನಕರಾರೆಂಬುದಾಗಲಿ ಯಾವುದೂ ತೀರ್ಯಬರುವಂತಿಲ್ಲ. 'ದಂಡಿ' ಎಂದರೆ ಸಾಮಾನ್ಯವಾಗಿ 'ಸನ್ಯಾಸಿ' ಎಂದು ಅರ್ಥಮಾಡುವ ರೂಢಿಯು ಇರುವುದು. (೧) ಇವನನ್ನು ಸನ್ಯಾಸಿಯೆಂದು ಕೆಲವರೂ. (೨) ತನ್ನ ಗ್ರಂಥದಲ್ಲಿ ಕೆಲವುಕಡೆ 'ಇತಿ ಶ್ರೀಮದಾಚಾರ್ಯಮಹಾಕವಿದಂಡಿನಾವಿರಚಿತೇ ದಶಕುಮಾರಚರಿತೇ' ಎಂದು ಹೆಳಲ್ಪಟ್ಟಿರುವದರಿಂದ ಇವನು ಮಹಾವೇತ್ತನಾದ ಆಚಾರ್ಯನೆಂದು ಕೆಲವರೂ, (೩) ಮಂಗಳಾಚರಣಶ್ಲೋಕದ ಪದ, ಪದಾಂತ್ಯದಲ್ಲಿ ಹೇಳಲ್ಪಟ್ಟಿರುವ ದಂಡಃ ದಂಡಃ ಎಂಬ ಶಬ್ದಪ್ರಯೋಗದಿಂದ ಇವನಿಗೆ ದಂಡಿ ಎಂಬ ಹೆಸರು ಬಂದಿರಬಹುದಾಗಿ ಕೆಲವರೂ (೪) ಕಾವ್ಯಾದರ್ಶಕಾರನಾದ ದಂಡಿಯು ಇವನೇ ಎಂದು ಕೆಲವರೂ ಹೇಳುವರು. ಈ ವಿಚಾರವಾಗಿ ಒಳಹೊಕ್ಕು ನೋಡುವುದು ಯುಕ್ತವಾಗಿರುವುದು. ದಂಡವೃಳ್ಳವನು ದಂಡಿಯೆಂದೂ, ಸನ್ಯಾಸಿಯೆಂದೂ ಹೇಳುವುದಾದರೆ ಗ್ರಂಥವಿಷಯಪರಿತೀಲನದಿಂದ ಹೆಸರಿಗೆ ಗೌಣಬರುವುದು. ಕಾವ್ಯಾದರ್ಶಕಾರನಾದ ದಂಡಿಯು ಮಾತ್ರವೇ ಆಚಾರ್ಯಪದವಿಗೆ ಯೋಗ್ಯನು ಹೊರ್ತು ಈ ದಂಡಿಗೆ ಆಚಾರ್ಯಪದಪ್ರಯೋಗವು ಸಲ್ಲದು. ಏಕೆಂದರೆ ಇವನ ಹೇಳಿಕೆಯಾದ (೧) "ಕನ್ಯೇಕಾಮಯಮಾನಂ ಮಾಂನತ್ವಂಕಾಮಯಸೇಕಥಂ" ಎಂದೂ. (೨) "ತ್ವಾಮಯಮಾಬದ್ಧಾಂಜಲಿದಾಸಜನಸ್ತಮಿಮಮರ್ಥಮರ್ಥಯತೇ| ಸ್ವಪಿಮಯಾಸಹ ಸುರತವ್ಯತಿಕರಖಿನ್ನೇವಮಾಮೈವಂ||" ಎಂಬಿವೇ ಮೊದಲಾದ ಗ್ರಾಮ್ಯ, ಅಶ್ಲೀಲ, ನಿರಸನವಿಷಯಚಾಟೂಕ್ತಿಗಳನ್ನು ಕಾವ್ಯಾದರ್ಶಕಾರನೂ, ರಸಜ್ಞನೂ ಆದ ಆಚಾರ್ಯದಂಡಿಯು ಎಂದಿಗೂ ಹೇಳಿರುವುದಿಲ್ಲವೆಂಬುದನ್ನು ವಿಚಾರಪರರಾದ ರಸಿಕರು

ತಿಳಿದುಕೊಂಡಿರುವರು. ಈ ದಂಡಿಯು ವಿಷಯಲಂಪಟನೂ, ವಿಷಯಲಾಲಸಚಿತ್ತನೂ, ಧರ್ಮದೂರನೂ ಆಗಿರಬೇಕಾಗಿ ತೋರುವುದರಿಂದಲೇ:—

"ಪಿತಾಮಹಸ್ಯತಿಲೋತ್ತಮಾಭಿಲಾಷಃ, ಭವಾನೀಪತೇರ್ಮುನಿಸಹಸ್ರಕಳತ
ಸಂದೂಷಣಂ, ಪದ್ಮನಾಭಸ್ಯಷೋಡಶಸಹಸ್ರಾಂತಃಪುರವಿಹಾರಃ, ಪ್ರಜಾ
ಪತೇಸ್ಸ್ವದುಹಿತರ್ಯಪಿಪ್ರಣಯಪ್ರವೃತ್ತಿಃ, ಶಚೀಪತೇರಹಲ್ಯಾಜಾರತಾ,
ಶಶಾಂಕಸ್ಯಗುರುತಲ್ಪಗಮನಂ, ಅಂಶುಮಾಲಿನೋಬಡಬಾಲಂಘನಂ, ಅನಿ
ಲಸ್ಯಕೇಸರಿಕಳತ್ರಸಮಾಗಮಃ, ಬೃಹಸ್ಪತೇರುತಥ್ಯಭಾರ್ಯಾಭಿಸರಣಂ, ಪರಾ
ಶರಸ್ಯಭ್ರಾತೃದಾರಸಂಗತಿಃ ಅತ್ರೇರ್ಮಗೀಸಮಾಗಮಃ"

ಎಂಬಿವೇ ಮೊದಲಾದ ದೂಷಣೆಗಳನ್ನು ದೇವಾದಿದೇವತೆಗಳು ಮಹರ್ಷಿಗಳ ಮೊದಲುಗೊಂಡು ವಿವೇಕಶೂನ್ಯತೆಯಿಂದ ಹೇಳಿಕೊಂಡಿರುವನು. ಇವನಿಗೆ ಸ್ತ್ರೀ ಎಂಬುದೇ ಪರಾಪರವಸ್ತು. ತಚ್ಚಿಂತನವೇಯೋಗ. ವಿಷಯಾನಂದವೇ ಮೋಕ್ಷವೆಂಬುದನ್ನು ಮೂಲಮಂತ್ರವನ್ನಾಗಿಟ್ಟುಕೊಂಡು ಇಂತಹ ಅಸಭ್ಯಬುದ್ಧಗ್ರಂಥವನ್ನು ಬರೆದಿರುವುದಾಗಿ ಭಾಸವಾಗುತ್ತದೆ. ಮಂಗಳಾಚರಣದಲ್ಲಿ ಪ್ರಯೋಗಿಸಿರುವ ದಂಡಃ ದಂಡಃ ಎಂಬುದರಿಂದ ದಂಡಿಯೆಂದು ಕರೆದಿರಬೇಕೆಂಬ ವಿಚಾರದಲ್ಲಿ ಪಾರ್ವತಿಯನ್ನು ವರ್ಣಿಸಲುಜ್ಜುಗಿಸಿದ ಶ್ರೀಕಂಠನಿಗೆ ಭವಭೂತಿಯೆಂದೂ 'ನಿದ್ರಾದರಿದ್ರ' ವೆಂಬ ಪದಪ್ರಯೋಗವನ್ನು ಮಾಡಿದ ಕವಿಯನ್ನು ನಿದ್ರಾದರಿದ್ರನೆಂದೂ 'ಚಮು ಚ್ಚಮಿತಿ' ಯೆಂಬ ಪದಪ್ರಯೋಗಮಾಡಿದ ಕವಿಯನ್ನು ಚಮಚ್ಚಮಕನೆಂದು ಕರೆದಿರುವಂತೆ ಇವನನ್ನು ದಂಡಿಯೆಂದು ಕರೆದಿರಬಹುದಾಗಿ ಹೇಳಲ್ಪಟ್ಟಿದೆ. ದಂಡವೆಂಬ ಶಬ್ದಪ್ರಯೋಗಮಾತ್ರದಿಂದ ದಂಡಿಯೆಂದು ಕರೆಯುವುದಾದರೆ ಇಂತಹ ಪ್ರಾಸಬದ್ಧ ಶ್ಲೋಕಗಳು ಗೀರ್ವಾಣವಾಙ್ಮಯದಲ್ಲಿ ಬೇಕಾದಷ್ಟು ಸಾಕಾದಷ್ಟು ದೊರೆಯುವುವು. ಅವುಗಳೆಲ್ಲವೂ ಆಯಾ ಕವಿಗಳ ಹೆಸರಿನಲ್ಲಿ ಹೇಳಲ್ಪಟ್ಟರುವುವೇ ಹೊರ್ತು ಅವರವರ ಶ್ಲೋಕಗಳಲ್ಲಿ ಕಂಡುಬರುವ ಶಬ್ದಪ್ರಯೋಗದಿಂದ ಕರೆಯಲ್ಪಟ್ಟಿರುವುದಿಲ್ಲ.

ಕಾಲ:—ಪ್ರೊ. ವಿಲ್ಸನ್ ಪಂಡಿತರು ಇವನ ಕಾಲವನ್ನು ಕಂಡುಹಿಡಿಯುವು ಎರಡು ವಿಚಾರಗಳನ್ನು ಸಮರ್ಥಿಸಿ ಹೇಳಿರುವರು.

(೧) ಯವನರ ಸಂಗತಿ.

(೨) ಭೋಜವಂಶ ವಿಚಾರ.

---

* ಕರ್ಣಾಟಕ ಸಾಹಿತ್ಯಪರಿಷತ್ಪತ್ರಿಕೆ ೧೯೧೬ ಅಕ್ಟೋಬರ ಪುಟ ೨೫೩—೨೫೪.

ಮೊದಲನೆಯದಾದ ಯವನರ ವಿಚಾರವು ಸಾಂಪ್ರತ ಕಥಾಸಂದರ್ಭದಲ್ಲಿ ಒಂದೆರಡುಕಡೆ ಹೇಳಲ್ಪಟ್ಟಿದೆ. ಹಿಂದುಗಳು ಯವನರನ್ನು ವ್ಯಾಪಾರಿಗಳೆಂದೂ ಅಥವಾ ದರೋಡೆಯವರೆಂದು ಮಾತ್ರವೇ ತಿಳಿದುಕೊಂಡಿದ್ದರು. ಎಂಟನೆಯ ಉಚ್ಛ್ವಾಸದಲ್ಲಿ ಭೋಜವಿಚಾರವು ಹೇಳಲ್ಪಟ್ಟಿದೆ. ಭೋಜನು ಕ್ರಿ. ಶ. ೧೧ನೆಯ ಶತಮಾನದವನೆಂದೂ ಬಲ್ಲಾಳಕೃತ ಭೋಜಪ್ರಬಂಧದಲ್ಲಿ ದಂಡಿಯ ಹೆಸರು ಉಲ್ಲೇಖಿಸಲ್ಪಟ್ಟಿರುವುದರಿಂದಲೂ ಯವನಶಬ್ದವು 'ಅಯೋನಿರ್ಯ' ಎಂಬ ಶಬ್ದದಿಂದ ಹುಟ್ಟಿದುದೆಂದೂ ಹೇಳಿ ದಶಕುಮಾರಚರಿತವು ಕ್ರಿ. ಶ. ೧೧, ೧೨ನೆಯ ಶತಮಾನಗಳಲ್ಲಿ ಬರೆಯಲ್ಪಟ್ಟಿರಬೇಕೆಂದೂ ಹೇಳುವರು. ಈವಿಚಾರವಾಗಿ ಕೊಂಚ ಬರೆಯಬೇಕಾಗುವುದು. "ಯವನ" ಶಬ್ದದ ಉಲ್ಲೇಖವು ಹಿಂದೂ ಗ್ರಂಥಗಳಲ್ಲಿ ಬಹುಪ್ರಾಚೀನಕಾಲದಿಂದ ಇರುವುದಾಗಿ ತೋರುತ್ತದೆ.

(೧) ಮಹಾಭಾರತದಲ್ಲಿ ಯವನರು ದುರ್ಯೋಧನನ ಆಶ್ರಿತಗಳಾಗಿದ್ದರೆಂದು ಹೇಳಲ್ಪಟ್ಟಿದೆ. (೨) ಲಾಕ್ಷಾಗಾರದಹನವನ್ನು ಪುರೋಚನನೆಂಬ ಯವನನಿಗೆ ನಿರೂಪಿಸಿದುದು ವ್ಯಕ್ತವಾಗುತ್ತದೆ. (೩) 'ಮುದ್ರಾರಾಕ್ಷಸ' ಕಾಲಕ್ಕೆ ಯವನರಿದ್ದರೆಂಬುದು ಸ್ಪಷ್ಟಪಡುತ್ತದೆ. (೪) ಪಾರಸೀಕರೇ ಹೂಣರೆಂದೂ ಹೂಣರೇ ಯವನರೆಂದು ಹೇಳುವುದಾದರೆ ಕಾಳಿದಾಸನ ರಘುವಂಶದಲ್ಲಿ ಹೂಣರ ಉಲ್ಲೇಖವಿದೆ. (೫) ಬಾಣನ ಕಾದಂಬರಿಯಲ್ಲಿ ಚಂದ್ರಾಪೀಡನ ಇಂದ್ರಾಯುಧವೆಂಬ ಕುದುರೆಯು ಪಾರಸೀಕ ಮಹಾರಾಜನಿಂದ ಕೊಡಲ್ಪಟ್ಟುದಾಗಿ ಹೇಳಲ್ಪಟ್ಟಿದೆ. ಇವುಗಳೆಲ್ಲವೂ ಮುಸಲ್ಮಾನರ ಪದಾರ್ಪಣಕ್ಕೆ ನೂರಾರುವರ್ಷಗಳಹಿಂದೆ ಬರೆಯಲ್ಪಟ್ಟುವಾಗಿವೆ. (೬) ಭೋಜವಂಶದ ಉಲ್ಲೇಖನದ ಆಧಾರವೆನ್ನುವುದಾದರೆ ಈ ಹೆಸರಿನ ಅನೇಕ ರಾಜರು ಆಳಿ ಅಳಿದು ಹೋಗಿರುವುದಾಗಿ ಗ್ರಂಥಾನೇಕಗಳಿಂದ ಗೊತ್ತಾಗುತ್ತದೆ. ಮಹಾಭಾರತದಲ್ಲಿ ಭೋಜವಂಶ ವಿಚಾರವಿರುವುದು. ಕುಂತಿಯು ಭೋಜವಂಶದವಳು. (೭) ಬಲ್ಲಾಳಕೃತ 'ಭೋಜಪ್ರಬಂಧ'ವನ್ನುವುದಾದರೆ ಇದನ್ನು ಇತಿಹಾಸವನ್ನಾಗಿ ತೆಗೆದುಕೊಂಡು ಸಂಸ್ಕೃತ ಕವಿಕಾಲನಿರ್ದೇಶವಾಡುವುದು ಅಶ್ರೇಯಸ್ಕರವೆನ್ನಿಸುವ ಕಥಾಧಾರವಮೇಲೆ ಚರಿತ್ರೆಯನ್ನು ಬರೆವಂತಾಗುವುದು. ಇದಲ್ಲದೆ ಬಲ್ಲಾಳ ಮಿಶ್ರನು ಕ್ರಿ. ಶ. ೧೩ನೆಯ ಶತಮಾನದವನು. ಇವನು ಸ್ವಲ್ಪ ಹೆಚ್ಚುಕಡಿಮೆ ತನಗೆ ತಿಳಿದುಬಂದ ಸಂಸ್ಕೃತ ಕವಿಗಳೆಲ್ಲರನ್ನು ತನ್ನ ಗ್ರಂಥದಲ್ಲಿ ಹೇಳಿ ಕೊಂಡಿರುವನು. ಆದುದರಿಂದ ಇದನ್ನು ಪ್ರಮಾಣ ಗ್ರಂಥವನ್ನಾಗಿ ಅಂಗೀಕರಿಸಲಾಗುವುದಿಲ್ಲ. (೮) 'ಯವನ' ಶಬ್ದವು ಅಯೋನಿರ್ಯಶಬ್ದದಿಂದ ಹೇಗಾದುದೆಂಬ ರೂಪನಿಷ್ಪತ್ತಿಯು ತಿಳಿಯದಾಗಿದೆ.

ಈ ಕಾರಣಗಳಿಂದ ವಿಲ್ಸ್ ಪಂಡಿತರ ಅಭಿಪ್ರಾಯವು ಚಾರಿತ್ರಿಕ ದೃಷ್ಟಿಯಿಂದ ದೂರವಾಗುವುದು. ಸಂಸ್ಕೃತದಲ್ಲಿ ವಾಸವದತ್ತಾ, ಕಾದಂಬರೀ ಮತ್ತು

ದಶಕುಮಾರಚರಿತೆ. ಈ ಮೂರು ಗದ್ಯಕಾವ್ಯಗಳು ದೊರೆತು ಈ ಮೂರೂ ಬೇರೆ ಬೇರೆ ಕಾಲದವುಗಳೆಂದು ಸ್ಪಷ್ಟವಾಗುತ್ತವೆ.

ಕ್ರಿ. ಶ. ೭ನೆಯ ಶತಮಾನದ ಬಾಣ, ಹರ್ಷವರ್ಧನ, ಮಯೂರಾದಿ ಕವಿಗಳಾಗಲಿ ಕ್ರಿ. ಶ. ೯ನೆಯ ಶತಮಾನದ ಲಾಕ್ಷಣಿಕರಾಗಲಿಅಥವಾ ಕವಿರಾಜಮಾರ್ಗವೆಂಬ ಅಲಂಕಾರ ಗ್ರಂಥವನ್ನು ಬರೆದ ಕನ್ನಡಕವಿ ನೃಪತುಂಗನಾಗಲಿ ಈ ದಂಡಿಯ ಹೆಸರನ್ನು ಹೇಳಿರುವದಿಲ್ಲ. ಕಾವ್ಯಲಕ್ಷಣಗಳನ್ನು ಹೇಳಿದವರು ದಶಕುಮಾರ ಚರಿತೆಯನ್ನು 'ಆಖ್ಯಾಯಿಕೆಯ' ಉದಾಹರಣಕ್ಕಾದರೂ ಹೇಳುತ್ತಿದ್ದರೆಂಬ ಭರವಸೆಯುಂಟಾಗುತ್ತದೆ. ದಶಕುಮಾರ ಚರಿತೆಯು ಕ್ಷುಲ್ಲಕ ಗ್ರಂಥವೆಂದು ಸುಮ್ಮನೆ ಯಾಗಿರಬಹುದೆನ್ನುವುದಾದರೆ ಅವರು ಕವಿಯ ಹೆಸರನ್ನಾದರೂ ಹೇಳಿ ಗ್ರಂಥವು ಸಮಾದರಣೀಯವಲ್ಲವೆಂದಾದರೂ ಹೇಳಬಹುದಾಗಿದ್ದಿತು. ಇತಿಹಾಸ ದೃಷ್ಟಿಯಿಂದ ಭರತಖಂಡವು ಕ್ರಿ. ಶ. ೧೦ನೆಯ ಶತಮಾನದಲ್ಲಿ ನೆಲ್ಲಿಚ್ಛಪದಾರ್ಪಣದಿಂದ ಕಂಗಾಲಾಗಿ ಧರ್ಮಹ್ರಾಸದಿಂದ ಹಾಹಾಕಾರಗೊಂಡಿದ್ದಿತಾಗಿ ಚರಿತ್ರೆಯು ಹೇಳುವುದು. ಮಂಗಳಾಚರಣ ಶ್ಲೋಕವೂ ನೆಲ್ಲಿಚ್ಛನಾಶವನ್ನು ಕೊರಿ ಬರೆದಿರಬಹುದಾಗಿ ಭಾಸವಾಗುತ್ತದೆ. ಕಾವ್ಯಾದರ್ಶಕಾರನಾದ ದಂಡಿಯು ಕ್ರಿ. ಶ. ೬ನೆಯ ಶತಮಾನದಲ್ಲಿದ್ದನೆಂಬುದನ್ನು ಸ್ಪಷ್ಟಪಡಿಸಿದುದಾಗಿದೆ. ಕ್ರಿ. ಶ. ೯ನೆಯ ಶತಮಾನದಲ್ಲಿದ್ದ ನೃಪತುಂಗನು ದಂಡಿಯ ಕಾವ್ಯಾದರ್ಶವನ್ನವಲಂಬಿಸಿ ಕನ್ನಡದಲ್ಲಿ ಬರೆದಿರುವ ಕವಿರಾಜಮಾರ್ಗವೆಂಬ ಲಕ್ಷಣಗ್ರಂಥದಲ್ಲಿ ಕಾವ್ಯಭೇದ ವಿಚಾರವಾಗಿ ಬರೆಯುವಾಗ "ಗದ್ಯಪದ್ಯಾಖ್ಯಾತಂಗದ್ಯ ಮನೇಕರೂಪಭೇದ ವಿವಿಕ್ತಂ ಸದಮಲಸಮಸಂಸ್ಕೃತ ವಾಕ್ಯದ ಹೃದಯಂ ಹರ್ಷಚರಿತಕಾದಂಬರಿಗಳ್" ಎಂದು ಹೇಳಿರುವುದರಿಂದ ನೃಪತುಂಗನ ಕಾಲಕ್ಕೆ ಹರ್ಷಚರಿತ ಮತ್ತು ಕಾದಂಬರೀ ಎಂಬ ಗದ್ಯಗ್ರಂಥಗಳು ಮಾತ್ರವೇ ಇದ್ದುದಾಗಿಯೂ ದಶಕುಮಾರಚರಿತವು ಆಗ ಇದ್ದುದಾಗಿದ್ದರೆ ಹರ್ಷಚರಿತ ಮತ್ತು ಕಾದಂಬರೀ ಗ್ರಂಥಗಳ ಹೆಸರನ್ನು ಹೇಳಿದಂತೆ ದಶಕುಮಾರಚರಿತದ ಹೆಸರನ್ನೂ ಹೇಳುತ್ತಿದ್ದನೆಂದು ನಮ್ಮ ಭರವಸೆ.

ತುರುಷ್ಕರಹಾವಳಿಯು ಕ್ರಿ. ಶ. ೧೦-೧೧ನೆಯ ಶತಮಾನಗಳಲ್ಲಿ ಬಲಗೊಂಡಿದ್ದಿತಾಗಿಯೂ ಬ್ರಾಹ್ಮಣಧರ್ಮಹ್ರಾಸವು ಅಸೀಮವಾಗಿದ್ದುದಾಗಿ ಚರಿತ್ರೆಯು ಹೇಳುತ್ತದೆಯಲ್ಲದೆ, ಇವನ ಗ್ರಂಥದಿಂದಲೂ ಸ್ಪಷ್ಟಪಡುತ್ತದೆ.*

(೧) " ರಾಜನಂದನ! ಕೇಚದಸ್ಯಾಮಟವ್ಯಾಂವೇದಾದಿ ವಿದ್ಯಾಭ್ಯಾಸಮುಪ
ಹಾಯ ನಿಜಕುಲಾಚಾರಂ ದೂರೀಕೃತ್ಯ ಸತ್ಯಶೌಚಾದಿಧರ್ಮವ್ರಾತಂಪರಿ

* ದ. ಮಾ. ಪೀ. ಉ. ೨

ಹೃತ್ಯ ಕಿಲ್ಬಿಷಮನ್ವಿಷ್ಯಂತಃ ಪುಳಿಂದಪುರೋಗಮಾಸ್ತದನ್ನಮುಪ
ಭುಂಜಾನಾಃಬಹವೋಬ್ರಾಹ್ಮಣಬ್ರುವಾಃ ನಿವಸಂತಿ" "(೨) ಸೌಮ್ಯ!
ಸೋಹಮಸ್ಮಿದ್ವಿಜನ್ಮಾ. ಶತ್ರುಹಸ್ತಾದರ್ಣವಂ. ಅರ್ಣವಾದ್ಯವನನಾವಂ.
ಯವನನಾವಶ್ಚಿತ್ರಗ್ರಾವಾಣಮೇನಂಪರ್ವತಪ್ರವರಂಗತಃ"\$

ಎಂಬಿವೇ ಮೊದಲಾದವುಗಳೆಲ್ಲದರ ಪರಿಶೀಲನದಿಂದ ತುರುಕರ ಹಾವಳಿಯು ಎಷ್ಟುಮಟ್ಟಿಗೆಪ್ರಬಲಗೊಂಡಿದ್ದಿತೆಂಬುದನ್ನೂ ಧರ್ಮಹ್ರಾಸವನ್ನೂ ನೋಡಿದರೆ ಎಂತ ಹನೂ ಚಕಿತನಾಗದಿರನು. ಕ್ರಿ. ಶ. ೯ನೆಯ ಶತಮಾನದ ಪ್ರಸಿದ್ಧ ಲಾಕ್ಷಣಿಕನಾದ ನೃಪತುಂಗನು ದಶಕುಮಾರಚರಿತದ ವಿಷಯವಾಗಿ ಹೇಳದೆ ಇರುವುದರಿಂದಲೂ ಕ್ರಿ. ಶ. ೧೧ನೆಯ ಶತಮಾನದ ಗ್ರಂಥಗಳಲ್ಲಿ ದಶಕುಮಾರಚರಿತ ವಿಚಾರವು ಕಂಡು ಬರುವುದರಿಂದಲೂ ಈ ಮಧ್ಯಕಾಲದಲ್ಲಿ ಎಂದರೆ ಕ್ರಿ. ಶ. ಹತ್ತನೆಯ ಶತಮಾನದವ ನೆಂಬುದು ಖಂಡಿತವಾಗುವುದು.

ಗ್ರಂಥ:—ದಶಕುಮಾರ ಚರಿತ. ಇದು ಗದ್ಯ ಗ್ರಂಥ. ಹೆಸರಿಗೆ ತಕ್ಕಂತೆ ಇದ ರಲ್ಲಿ ಹತ್ತುಜನ ರಾಜಪುತ್ರರ ಚರಿತೆಯು ಹೇಳಲ್ಪಟ್ಟಿರುವದು. ಇದರಲ್ಲಿ ಪೂರ್ವ ಪೀಠಿಕೆಯೆಂದೂ ಉತ್ತರ ಪೀಠಿಕೆಯೆಂದೂ ಎರಡು ಭಾಗಗಳಿರುವುವು. ಕಾದಂಬರಿ ಗಿಂತ ದಶಕುಮಾರಚರಿತವು ವಿಲಕ್ಷಣಗ್ರಂಥವಾಗಿದೆ. ಇದರಲ್ಲಿ ಮೊದಲನೆಯ ಪರಿಚ್ಛೇದವನ್ನು ಓದಿದ ಕೂಡಲೆ ಸ್ತ್ರೀಪುರುಷರ ಶೃಂಗಾರ ಭಾಷಣಕ್ಕೆ ಮೊದಲಾಗುವದು. ಅವರು ಯಾರು? ಯಾವಸ್ಥಳದವರೆಂಬುದೇ ತಿಳಿಯದು. ಕಥಾಪ್ರಾರಂಭಾಂತ್ಯಗಳು ಪರಸ್ಪರ ಅಸಂಬದ್ಧವಾಗಿವೆ. ಕೆಲವು ಶಬ್ದಗಳು ಎರಡೆರ ಡಾವರ್ತಿ ಬಂದಿವೆ. ಕಾದಂಬರೀ ವಾಸವದತ್ತಾ ಗದ್ಯ ಗ್ರಂಥಗಳಂತೆ ಕೃತ್ರಿಮರಚ ನೆಯು ಇದರಲ್ಲಿರದೆ ಶೈಲಿಯು ಸರಳವಾಗಿದೆ. ದಶಕುಮಾರಚರಿತೆಯು ಅಪೂ ರ್ಣವಾಗಿರುವುದಾಗಿ ಕಂಡುಬರುತ್ತದೆ. ಕಥೆಯು ಒಂದರಹಾಗೆ ಮತ್ತೊಂದು ಹೇಳಲ್ಪಟ್ಟಿದೆ. ಯಾವಕಾಲದಲ್ಲಿ ಕ್ರೂರ ಮತ್ತು ನೀಚಕೃತ್ಯಗಳು ನಡೆದುವೋ ಯಾವಕಾಲದಲ್ಲಿ ಧರ್ಮಹ್ರಾಸವು ಸವರ್ತ ಪ್ರಚುರವಾಗಿದ್ದಿತೋ ಅದರ ಕಲ್ಪ ನೆಯೂ ಭಯಂಕರವಾಗಿದೆ. ಇದರಲ್ಲಿ ಯಾವರಸಪೋಷಣೆಯೂ ಪೂರ್ಣ ವಾಗಿರುವುದಿಲ್ಲ. ಅಲ್ಲಲ್ಲಿ ಗ್ರಾಮ್ಯವೂ ಅಶ್ಲೀಲತೆಯೂ ತಲೆದೋರಿದೆ. ಪ್ರತಿಯೊಬ್ಬ ಕುಮಾರನ ಚರಿತದಲ್ಲಿ ವೀರರಸ ಮತ್ತು ಶೃಂಗಾರರಸ ಇವೆರಡು ಮಾತ್ರವೇ ಕಂಡು ಬರುವುವಾದರೂ ಈ ರಸಗಳಾದರೂ ಪೂರ್ಣವಾಗಿ ಸಾಧಿಸಲ್ಪಟ್ಟಿರುವುದಿಲ್ಲ ಈ ಎರಡು ರಸಗಳೂ ಕೇವಲದುಷ್ಟರೂಪದಿಂದಿರುವುದರಿಂದ ವಾಚಕರ ಮನಸ್ಸು ಪ್ರಸನ್ನವಾಗದೆ ಉದ್ವೇಗಮಾತ್ರ ಆಗುತ್ತದೆ. ಕೆಲವರ ವೃತ್ತಾಂತದಲ್ಲಿ ಅದ್ಭುತ

\$ ದ. ಉ. ೬

ಮತ್ತು ಭಯಾನಕ ರಸಗಳಿರುವುವಾದರೂ ಅವುಗಳೂ ಅಪೂರ್ಣವಾಗಿವೆ. ಬಾಣನ ಕಾದಂಬರಿಯ ರಚನೆ, ವರ್ಣನಾತೀತ ಕೌಶಲ, ಪದಸಂಯೋಜನವು ಹೇಗೆ ಉತ್ಕೃಷ್ಟರೀತಿಯಿಂದಿರುವುದೋ ಅಥವಾ ಅರೇಬಿಯನ್ನೈಟ್ಸಿನ ಪ್ರತಿಯೊಂದು ಕಥೆಯೂ ಹೇಗೆ ಅದ್ಭುತರಸ ಯುಕ್ತವಾಗಿರುವುದೋ ಹಾಗೆ ಇದರ ಒಂದುಕಥೆಯಲ್ಲಿಯೂ ಕಂಡುಬರುವುದಿಲ್ಲ. ಒಂದೆರಡುಕಥೆಗಳು ಇದ್ದುದರಲ್ಲಿಕೊಂಚ ಚೆಲುವೆನ್ನುವುದಾದರೂ ಉಳಿದವುಗಳೆಲ್ಲವೂ ಸಾಧಾರಣತರದುದೆಂದೇ ಹೇಳಬೇಕಾಗುವುದು. ಅಪಹಾರವರ್ಮನ ಚರಿತದಲ್ಲಿ ವಾರಾಂಗನಾಮಾತೃ (ಕುಟ್ಟಣಿ)ವಿಗೆ ಇರತಕ್ಕ ಅಧಿಕಾರವೂ, ಪ್ರಮಿತೆಯಚರಿತದಲ್ಲಿ ರತಿಶಾಸ್ತ್ರವಿಷಯಗಳು, ಪ್ರಥಮಯೌವನಾದಿಭಾಗಗಳು, ಪದ್ಮಿನಿ, ಹಸ್ತಿನಿ, ಶಂಖಿನಿ, ಚಿತ್ತಿನಿ ಎಂಬ ಸ್ತ್ರೀಭೇದಗಳಲ್ಲಿ ಮುಖ್ಯವಾದ ಪದ್ಮಿನೀಜಾತಿಯ ನಾಯಿಕಾಲಕ್ಷಣವೂ, ವಿಶ್ರುತನಚರಿತೆಯಲ್ಲಿ ದಂಡನೀತಿ ಮೊದಲಾದ ರಾಜವಿದ್ಯಾವಿಚಾರವು ವರ್ಣಿತವಾಗಿರುವುದು. ಯಾವುದು ಹೇಗಾದರೂ ಇರಲಿ ಗ್ರಂಥವು ರಸವೈಚಿತ್ರ್ಯದಿಂದ ತುಂಬಿಹೋಗಿದೆ. ಗ್ರಂಥದಲ್ಲಿ ಎಲ್ಲೆಲ್ಲಿ ಹೇಗೆ ಹೇಗೆ ನೋಡಿದರೂ ಸ್ತ್ರೀವರ್ಣನೆ ಆ ರಾಮಣೀಯಕಗಳೇ ಹೆಚ್ಚಾಗಿರುವುವು. ಇದರಲ್ಲಿ ಚಮತ್ಕಾರವಿಶೇಷವಾವುದೂ ಇಲ್ಲದೆ ಇರುವುದರಿಂದ ರಸಿಕನಾದವನು ಇವನಗ್ರಂಥವನ್ನು ಓದಿ ಮುಗಿಸಿದ ಕೂಡಲೇ ನೀರಸನಾಗುವನು. ಕೆಲವು ಸ್ಥಳಗಳು ಕೇವಲ ಹೃದಯಂಗಮವಾಗಿರುವುದಾದರೂ ಮತ್ತೊಂದು ಸಲ ಓದಬೇಕೆಂಬಾಸೆಯನ್ನುಹುಟ್ಟಿಸುವಂತಿಲ್ಲ. ಇದರ ಅರ್ಥರಚನೆಯು ಪದ್ಯದ ಹೋಲಿಕೆಯಂತಿರುವುದು. ಸುಬಂಧು ಮತ್ತು ಬಾಣಕವಿಗಳ ಗ್ರಂಥಗಳಿಗಿಂತಲೂ ಲಲಿತಪದಸಮಾವೇಶಿತವಾದ ಉತ್ಕೃಷ್ಟ ಗದ್ಯಕಾವ್ಯವನ್ನು ಒರೆಯಲಾಶಿಸಿ ದಶಕುಮಾರಚರಿತೆಯನ್ನು ಬರೆದಿರಬೇಕಾಗಿ ಬೋಧೆಯಾಗುತ್ತದೆ. ಅನೇಕಕಥಾಭಾಗಗಳನ್ನು ಒಂದೇಕಪಸೇರಿಸಿ ಬರೆದಿರುವುದರಿಂದಲೂ ಯಾವುದಾದರೊಂದು ರಸವನ್ನು ಪ್ರಧಾನವಾಗಿತೆಗೆದುಕೊಂಡು ಅದನ್ನು ಕ್ರಮವಾಗಿ ಪೋಷಿಸದೇ ಇರುವುದರಿಂದ ಇದನ್ನು 'ಕಾದಂಬರೀ' ಎಂದೂ ಹೇಳಲಾಗುವುದಿಲ್ಲ. ದಶಕುಮಾರಚರಿತೆಯನ್ನು ಹಿತೋಪದೇಶ ಪಂಚತಂತ್ರಗಳಿಗೆಹೋಲಿಸಬಹುದಾಗಿದೆ. ಮಹಾಕವಿ ಭವಭೂತಿಯು ತನ್ನಕಾಲದಲ್ಲಿ ನಡೆದವಿಚಾರವಾಗಿ ಬರೆದಿರುವನಾಧರೂ ಬಹುತರ ಒಳ್ಳೆಯವುಗಳನ್ನೇ ಆರಿಸಿಕೊಂಡುಬರೆದಿರುವನು. ದಶಕುಮಾರಚರಿತದಲ್ಲಿ ಹಾಗಿರದೆ ಕುಮಾರರ ಧಾಂಡಿಗತನ, ದುಂಡಾವರ್ತಿ, ಚೌರ್ಯ, ಲೂಟಿ ಇವುಗಳನ್ನು ಹೇಳಿರುವುದೇ ಹೊರ್ತು ಇತರ ಸುಗುಣಗಳ ವಿಚಾರವಾಗಿ ಯಾವುದನ್ನೂ ಹೇಳಿರುವುದಿಲ್ಲ. ಗಣಪತಿ, ಭಗವತಿ ಇವರಿಬ್ಬರಲ್ಲಿ ಭಕ್ತಿಯನ್ನು ನಟಿಸುತ್ತ ಅವರ ಹೆಸರಿನಲ್ಲಿ ಜನಗಳನ್ನು ಮೋಸಪಡಿಸುವುದು ಕಂಡುಬರುತ್ತದೆ. ಇವನು ಬುದ್ಧಸ್ತ್ರೀಗೆ ಕುಟ್ಟನಿಯ ಕೆಲಸವನ್ನು ಯೋಜಿಸಿರುವನು. ಭವಭೂತಿಯು ತಾನು ಬರೆದುದಾದ ಮಾಲತೀಮಾಧವನಾಟಕದಲ್ಲಿ ಬುದ್ಧಸ್ತ್ರೀ ವಿಚಾರವನ್ನು

ತೆಗೆದುಕೊಂಡು ಅವರ ಶೀಲಸ್ವಭಾವ ಚತುರತೆಗಳನ್ನು ಬಹೂತ್ಕೃಷ್ಟ ರೀತಿಯಿಂದ ಸಾಧಿಸಿರುವುದು ಕಂಡುಬರುತ್ತದೆ. ಇದನ್ನು ನೋಡಿದರೆ ದಶಕುಮಾರಚರಿತೆ ಕಾರನ ಕಾಲಕ್ಕೆ ಬುದ್ಧಮತದ ಅವಹೇಳನದೆಸೆಯು ಮಿತಿಮೀರಿರಬಹುದಾಗಿ ಊಹಿಸಬಹುದಾಗಿದೆ. ದಶಕುಮಾರಚರಿತದಲ್ಲಿ ರಾಜವಾಹನನು ಇತರರ ಕೃತ್ಯ ಗಳನ್ನು ನೋಡಿ ಸಂತುಷ್ಟನಾಗಿ ಜಾರಚೋರಮೋಸಕೃತ್ಯಗಳನ್ನು ಮಾಡಿದರೂ ಚಿಂತೆಯಿಲ್ಲ. ಅರ್ಥಲಾಭ, ರಾಜ್ಯಪ್ರಾಪ್ತಿ, ಜನ್ಮದಾತರ ಬಂಧವಿಮೋಚನವಾದುದಕ್ಕೆ ಸಂತೋಷಿಸಿದುದಾಗಿ ಹೇಳಿರುವನು. ಈ ಸಮಾರಂಭದಲ್ಲಿ ಜಾರತ್ವವೂ ಕಾಪಟ್ಯವೂ ವಿಚಿತ್ರಾಕಾರಗಳೆಂಬುದನ್ನು ಮರೆತೇ ಹೋಗಿರುವನು. ದಶಕುಮಾರಚರಿತದ ಏಳನೆಯ ಅಧ್ಯಾಯದಲ್ಲಿ ಮಂತ್ರಗುಪ್ತನ ಚರಿತವಿರುವುದು. ಅವನ ಹೇಳಿಕೆಯು ಹೀಗಿರುವದು. "ರಾಜವಾಹನ! ನಾನು ಕಳಿಂಗದೇಶಕ್ಕೆ ಹೋದೆನು. ಅಲ್ಲಿದ್ದ ಒಂದಾನೊಂದು ಕೆರೆಯ ದಂಡೆಯಮೇಲೆ ಮಲಗಿಕೊಂಡೆನು. ಅಲ್ಲಿ ಮರಗಿಡಗಳು ಬಹುವಾಗಿದ್ದವು. ಅದರಾಚೆ ಶ್ಮಶಾನವಿದ್ದಿತು. ಅಲ್ಲಿ ಎರಡು ಪಿಶಾಚಗಳು ಮಾತನಾ ಡುತ್ತ ಹತ್ತಿರಬಂದಂತಾಗಿ ಎಚ್ಚರಗೊಂಡೆನು. ಆ ಪಿಶಾಚಗಳು ಶ್ಮಶಾನದಲ್ಲಿರುವ ಸಿದ್ಧರ ವಿಚಾರವಾಗಿ ಮಾತನಾಡುತ್ತಿದ್ದವು. ನಾನೂ ಅವನ್ನು ನೋಡಬೇಕೆಂಬ ಕುತೂಹಲದಿಂದ ಅವುಗಳನ್ನು ಹಿಂಬಾಲಿಸಿದೆನು. ಅಲ್ಲಿ ಸರ್ವಾಂಗಭಸ್ಮಧಾರಣೆ ಯನ್ನು ಮಾಡಿಕೊಂಡು ನರಕಪಾಲಮಾಲಾಲಂಕೃತನಾಗಿ ಅಗ್ನಿಯಲ್ಲಿ ಪದೇ ಪದೇ ಎಳ್ಳನ್ನು ಹಾಕುತ್ತಿರುವವನೊಬ್ಬನನ್ನು ನೋಡಿದೆನು. ಅವನ ಶಿಷ್ಯರು ಅವನ ಅಪ್ಪಣೆ ಯಂತೆ ಕಳಿಂಗರಾಜನ ಕುವರಿಯಾದ ಕರ್ಣರೇಖೆಯನ್ನು ಕರೆದುಕೊಂಡುಬಂದು ಅವನ ಮುಂದೆ ನಿಲ್ಲಿಸಿದರು. ಅವಳು ಹೆದರಿಕೆಯಿಂದ ಅಳುತ್ತಿದ್ದಳು. ಅವಳನ್ನು ಕೊಲ್ಲಲು ಸಿದ್ಧನು ಕೈಯೆತ್ತಿದ ಕೂಡಲೇ ನಾನು ಹೋಗಿ ಸಿದ್ಧನನ್ನು ಕೊಂದೆನು ಎಂದು ಹೇಳಿದುದನ್ನು ನೋಡಿದರೆ ಮಾಲತೀ ಮಾಧವದ ಐದನೆಯ ಅಂಕದಲ್ಲಿನ ಶ್ಮಶಾನ, ಪಿಶಾಚ, ಅಘೋರಘಂಟ, ಮಾಲತಿ, ಮತ್ತು ಮಾಧವ ಇವರಜ್ಞಾಪಕವು ಬಾರದಿರದು. ದಶಕುಮಾರ ಚರಿತದ ಪೂರ್ವಪೀಠಿಕೆಯ ಅಂತ್ಯವೂ ಉತ್ತರಪೀಠಿ ಕೆಯ ಮೊದಲನೆಯ ಕಥಾಭಾಗವೂ ಪರಸ್ಪರ ಭಿನ್ನವಾಗಿರುವುದರಿಂದ ಇವನನ್ನು ಕಥಾಸಂವಿಧಾನ ಚತುರನೆನಲಾಗುವುದಿಲ್ಲ.

ಪೂರ್ವಪೀಠಿಕೆಯ ಐದುಜನ ರಾಜಪುತ್ರರ ಕಥೆಯನ್ನು ದಂಡಿಯು ಬರೆದು ವಾಗಿಯೂ ಉಳಿದುದನ್ನು ಮತ್ತಾರೋಬರೆದುವಾಗಿಯೂ ಕೆಲವರ ಮತವಿರು ವುದು. ಇದಕ್ಕೆ ಸರಿಯಾದ ಆಧಾರಗಳು ದೊರೆಯುವುದಿಲ್ಲ. ದಕ್ಷಿಣದೇಶದ ಚಕ್ರಪಾಣಿದೀಕ್ಷಿತನೆಂಬುವನು " ದಶಕುಮಾರಚರಿತಶೇಷ " ಎಂಬ ಒಂದು ಗ್ರಂಥ ವನ್ನು ಬರೆದಿರುವುದಾಗಿ ತಿಳಿಯಬರುತ್ತದೆ. ಗ್ರಂಥವು ಉಪಲಬ್ಧವಿಲ್ಲ. ಗ್ರಂಥಕಾರನ

ವಿಚಾರವೂ ತಿಳಿಯುವುದು. ಪ್ರಸಿದ್ಧಗ್ರಂಥಕರ್ತನೂ, ರಸಿಕಾಗ್ರಣಿಯೂ ಆದ ಅಪ್ಪಯ್ಯದೀಕ್ಷಿತನು ದಂಡಿಯಪದಲಾಲಿತ್ಯದ ವಿಚಾರವಾಗಿ ಕೇವಲ ಅಭಿಮಾನಿಸಿ ಬರೆದಿರುವನು. ಇದೆ' ಪ್ರಕಾರ ವಿನಾಯಕನೆಂಬುವನೂ ಬರೆದಿರುವುದಾಗಿ ತಿಳಿಯ ಬರುತ್ತದೆ. ಈ ರೀತಿಯಾದ ಪ್ರಶಸ್ತಿಗೆ ಮೂರು ಕಾರಣಗಳಿರುವುವು :—

(೧) ಆಗಣ ಕಾಲದಲ್ಲಿ ಗೀರ್ವಾಣ ಭಾಷೆಯಲ್ಲಿ ಪದಲಾಲಿತ್ಯವುಳ್ಳ ಗದ್ಯ ಪುಸ್ತಕಗಳು ಒಹಳಕಡಿಮೆ. ಅಲ್ಲದೆ ದಶಕುಮಾರಚರಿತದಂತೆ ಸುಲಭಶೈಲಿಯ ಗ್ರಂಥಗಳಾವುವೂ ಬರೆಯಲ್ಪಡಲಿಲ್ಲ. ಕಾದಂಬರೀ ವಾಸವದತ್ತಾದಿ ಗ್ರಂಥಗಳಿದ್ದು ವಾದರೂ ಅವುಗಳ ರಚನೆಯು ಕೇವಲ ಕೃತಕ. ಇದರ ಭಾಷೆಯು ಹಾಗಿರದೆ ಕೇವಲ ವ್ಯವಹಾರ ಭಾಷೆಯಂತಿರುವುದು. (೨) ಪಂಡಿತ ವಿಲ್ಸ್ ಮಹಾಶಯನೇ ಮೊದಲಾದ ಯೂರೋಪಿನ ಸಂಸ್ಕೃತಜ್ಞರಿಂದ ದಶಕುಮಾರಚರಿತವು ಶ್ಲಾಘಿಸಲ್ಪ ಟ್ಟಿರುವುದರಿಂದ ಇದರ ಪ್ರಶಸ್ತಿಯು ನ್ಯಾಯವಾಗಿರಬೇಕಾದುದಕ್ಕಿಂತಲೂ ಹೆಚ್ಚಾಗಿ ಹೋಗಿದೆ. ಯೂರೋಪಿನಲ್ಲಿ ಗ್ರೀಕು ಮತ್ತು ಲ್ಯಾಟಿನ್ ಭಾಷೆಗಳು ಪ್ರಚಾರದಲ್ಲಿರುವಂತೆ ಗೀರ್ವಾಣಭಾಷಾಪ್ರಚಾರವು ಅಲ್ಲಿರುವುದಿಲ್ಲ. ಉದಾಹರ ಣೆಗಾಗಿ ಬಾಣನ ಕಾದಂಬರೀ ಮತ್ತು ಪಂಡಿತ ರಾಜನ ಗ್ರಂಥಗಳಿಗೆ ನಮ್ಮ ದೇಶ ದಲ್ಲಿರುವಷ್ಟು ಗೌರವವು ಪಾಶ್ಚಾತ್ಯದೇಶದಲ್ಲಿರುವದಿಲ್ಲ. ಅವರಿಗೆ ಹಿತೋಪ ದೇಶವು ಹೇಗೆ ಆದರ ಪಾತ್ರವಾಗಿರುವುದೋ ಹಾಗೆ ಕಿರಾತಾರ್ಜುನೀಯವು ಆಗಿರುವದಿಲ್ಲ. ಪಂಡಿತರಾಜನ 'ಭಾಮಿನೀವಿಲಾಸ' 'ರಸಗಂಗಾಧರ' ದಂತಹ ಅನುಪಮ ಗ್ರಂಥಗಳು ಬಹು ಜನರಿಗೆ ಗೊತ್ತೇ ಇಲ್ಲ. ಮುಂಬಯಿಯ ವಿದ್ಯಾ ಖಾತೆಯ ಮುಖ್ಯಾಧಿಕಾರಿಯಾದ ಗ್ರಾಂಟ್ ಸಾಹೇಬನು ಮಹಾರಾಷ್ಟ್ರಕವಿ ಕುಲತಿಲಕನಾದ ತುಕಾರಾಮನ ಅಭಂಗಗಳನ್ನು ಕೇಳಿ ಹೇಗೆ ಅವನ ಗ್ರಂಥಗಳನ್ನು ಮಾನಿಸಿದನೋ ಹಾಗೆಯೇ ವಿಲ್ಸನ ಪಂಡಿತ ಮಹಾಶಯನು ದಶಕುಮಾರ ಚರಿತೆ ಯನ್ನು ಮಾನಿಸದಿದ್ದರೆ ಈ ಕವಿಯೂ ಎಷ್ಟೋಜನ ಅಪ್ರಸಿದ್ಧರಾದ ಕವಿಗಳ ಜೊತೆಗೆ ಸೇರಿಹೋಗುತ್ತಿದ್ದನು. (೩) ಇದರಲ್ಲಿ ಆಕಾಲದ ರಾಜಕೀಯ, ಧಾರ್ಮಿಕ, ಸಮಾಜಸ್ಥಿತಿಗಳು ವರ್ಣಿತಗಳಾಗಿರುವುದರಿಂದ ಇತಿಹಾಸ ಸಂಶೋಧಕರಿಗೂ, ಪ್ರಾಕ್ಕಾಲಜಿಜ್ಞಾಸುಗಳಿಗೂ ಉಪಯೋಗವಾಗಿರುವುದು.

ದಶಕುಮಾರಚರಿತೆಗೆ ಪದದೀಪಿಕಾ, ಪದಚಂದ್ರಿಕಾ, ಭೂಷಣಾ, ಲಘು ದೀಪಿಕಾ ಎಂಬ ನಾಲ್ಕು ವ್ಯಾಖ್ಯಾನಗಳಿರುವುವು. ಈ ದಂಡಿಯಲ್ಲದೆ ಅವಂತಿ ಸುಂದರೀ ಕಥಾಕಾರನಾದ ದಂಡಿಯೊಬ್ಬನೂ ದ್ವಿಸಂಧಾನ ಕಾವ್ಯಕಾರನಾದ ದಂಡಿ ಯೊಬ್ಬನೂ ದೋಯುವರು. ಇದರ ವಿಚಾರವು ಕ್ರಮಶಃ. ಮಾದರಿಗಾಗಿ ದಶ ಕುಮಾರ ಚರಿತದ ಕೆಲವು ಭಾಗಗಳನ್ನು ಬರೆಯುವೆವು. ಇದರಿಂದ ಪದಲಾಲಿತ್ಯ,

ಮತ್ತು ಶೈಲಿಯರೂಪವನ್ನು ತಿಳಿಯಬಹುದಾಗಿದೆ.—ಶ್ರುತ್ವಾ ತು ಭುವನವೃತ್ತಾಂ
ತಮುತ್ತಮಾಂಗನಾ ವಿಸ್ಮಯವಿಕಸಿತಾಕ್ಷೀ ಸಸ್ಮಿತ ಮಿದಮಭಾಷತ|
ದಯಿತ ತ್ವತ್ಪ್ರಸಾದಾದದ್ಯ ಮೇಚರಿತಾರ್ಥಾ ಶ್ರೋತ್ರವೃತ್ತಿರದ್ಯ ಮೇ
ಮನಸಿ ತಮೋಽಪಹಸ್ತ್ವ ಯಾ ದತ್ತೋಜ್ಞಾನಪ್ರದೀಪಃ| ಪಕ್ವಮಿದಾನೀಂ
ತ್ವತ್ಪಾದಪದ್ಮಪರಿಚರ್ಯಾಫಲಂ| ಅಸ್ಯ ಚ ತ್ವತ್ಪ್ರಸಾದಸ್ಯಕಿಮುಪಕೃತ್ಯಪ್ರತ್ಯು
ಪಕೃತವತೀ ಭವೇಯಂ ಅಭವದೀಯಂ ಹಿ ನೈವಕಿಂಚಿನ್ಮತ್ಸಂಬದ್ಧಂ |*
ಅಥವಾಽಸ್ತ್ಯೇವಾಸ್ಯಾಪಿ.....ರಾಗವೃತ್ತ್ಯಾ ಭೂಯೋ ಭೂಯಃ ಪ್ರಾವರ್ತ
ತಾತಿಮಾತ್ರಚಿತ್ರೋಪಚಾರಶೀಫರೋ ರತಿಪ್ರಬಂಧಃ (ಉತ್ತರಪೀಠಿಕೆ
ರಾಜವಾಹನನ ಚರಿತೆ ಪ್ರಥಮೋಚ್ಛ್ವಾಸ).

ಇದರಲ್ಲಿನ ನೃತ್ಯವರ್ಣನೆ:—

ವಿದ್ಯುಲ್ಲತಾಮಿವ ವಿಡಂಬಯಂತೀ ಭೂಷಣಮಣಿರಣಿತದತ್ತಲಯಸಂವಾ
ದಿಪಾದಚಾರಂ ಅಪದೇಶಸ್ಮಿತಪ್ರಭಾಭಿಷಿಕ್ತಬಿಂಬಾಧರಂ ಅವಸ್ಪಂಸಿ
ಪ್ರತಿಸಮಾಹಿತ ಶಿಖಂಡಭಾರಂ ಸಮಾಘಟ್ಟಿತ ಕ್ವಣಿತರತ್ನಮೇಖಲಾ
ಗುಣಂಅಂಚಿತೋತ್ಥಿತಪೃಥುನಿತಂಬವಿಲಂಬಿತವಿಚಲದಂಶುಕೋಜ್ಜ್ವಲಂ
ಆಕುಂಚಿತಪ್ರಸೃತವೇಲ್ಲಿತಭುಜಲತಾಭಿಹತಲಲಿತಕಂದುಕಂ ಆವರ್ಜಿತ
ಬಾಹುಪಾಶಂ ಉಪರಿವರ್ತಿತತ್ರಿಕವಿಲಗ್ನಲೋಲಕುಂತಲಂ ಅವಗಲಿತ
ಕರ್ಣಪೂರಕನಕಪತ್ರಪ್ರತಿಸಮಾಧಾನಶೀಘ್ರತಾನತಿಕ್ರಮಿತಪ್ರಕೃತಕ್ರೀಡ
ನಂ ಅಸಕೃದುತ್ಪಿಕ್ಷ್ಯಮಾಣಹಸ್ತಪಾದಬಾಹ್ಯಾಭ್ಯಂತರಭ್ರಾಂತಕಂದು
ಕಂ ಅವನಮನೋನ್ನಮನೈರಂತರ್ಯನಷ್ಟದಷ್ಟಮಧ್ಯಯಷ್ಟಿಕಂ ಅನ
ಪತನೋತ್ಪತನನಿರ್ವ್ಯವಸ್ಥಮುಕ್ತಹಾರಂ ಅಂಕುರಿತಘರ್ಮಸಲಿಲಗೂಷಿತ

---

* 'ನನ್ನಸಂಬಂಧವಾದ ಸಮಸ್ತವೂ ನಿಮ್ಮದಾಗಿಯೇ ಇರುವದೆಂಬರ್ಥವುಳ್ಳ ಮೇಲಿ ಹೇಳಿದ ಅಭವದೀಯಂ ಹಿನ್ನೈವ ಕಿಂಚಿನ್ಮತ್ಸಂಬದ್ಧಂ' ಎಂಬುದನ್ನು ಮಹಾಕವಿ ಷೇಕ್ಸಪಿಯರು ತಾನು ಬರೆದಿರುವ 'ವೆನಿಸಿನ ವರ್ತಕರು' (Merchant of Venice) ಎಂಬ ನಾಟಕದಲ್ಲಿ ನಾಯಿಕಾ ನಾಯಕರ ಭಾಷಣದಲ್ಲಿ ನಾಯಕಿಯ ಕೈಲಿ ಹೇಳಿಸಿರುವುದು ಎಷ್ಟು ಚೆಲುವೆಂಬುದನ್ನು ನೋಡಿ.

" Myself and what is mine, to you and yours.
Is now converted, but now I was the lord.
Of this fair mansion, master of my servants
Queen over myself: and even now, but now,
This house, these servants, and this same myself,
Are yours my lord!—"

Merchant of Venice act III scene II

ಕಪೋಲ ಪತ್ರಭಂಗಶೋಷಣಾಧಿಕೃತಶ್ರವಣಪಲ್ಲವಾನಿಲಂ ಆಗಲಿತಸ್ತನ ತಟಾಂಶುಕ ನಿಯಮವ್ಯಾಪೃತೈಕ ಪಾಣಿಪಲ್ಲವಂ ಚ ನಿಷದ್ಯೋತ್ಥಾಯ ನಿಮೀಲ್ಯೋನ್ಮೀಲ್ಯ ಸ್ಥಿತ್ವಾ ಗತ್ವಾಚೈವಾತಿಚಿತ್ರಂ ಪರ್ಯ ಕೀಡತ ರಾಜ ಕನ್ಯಾ| ಅಭಿಹತ್ಯ ಭೂತಲಾಕಾಶಯೋರಪಿ ಕ್ರೀಡಾಂತರಾಣಿ ದರ್ಶನಿ ಯಾನ್ಯೇಕೇನೈವ ವಾನೇಕೇನೈವ ಕಂದುಕೇನಾದರ್ಶಯತ್ ||

ಉಚ್ಛ್ವಾಸ. ೬. —

ಪದ್ಮಗುಪ್ತ.

"ಮೃಗಾಂಕದತ್ತಸೂನೋಃ ಪರಿಮಳಾಪರನ್ನಾಮ್ನಃ ಪದ್ಮಗುಪ್ತಸ್ಯಕೃತೌ" ಎಂಬ ಸರ್ಗಾಂತಗದ್ಯದಿಂದ ಇವನು ಮೃಗಾಂಕದತ್ತನ ಮಗನೆಂದೂ, ಪದ್ಮಗುಪ್ತ ನೆಂದೂ ಇವನಿಗೆ 'ಪರಿಮಳ'ನೆಂಬ ಮತ್ತೊಂದು ಹೆಸರಿದ್ದಿತೆಂದೂ ತಿಳಿಯಬರುತ್ತದೆ. ಇವನಕಾವ್ಯದ ೧,೩,೫ ನೆಯ ಸರ್ಗಾಂತಗಳಲ್ಲಿ 'ಮೃಗಾಂಕಗುಪ್ತಸೂನೋಃ' ಎಂದೂ ೬ನೆಯ ಸರ್ಗಾಂತ್ಯದಲ್ಲಿ 'ಮೃಗಾಂಕಸೂನೋಃ' ಎಂದೂ ಉಳಿದವುಗಳಲ್ಲಿ 'ಮೃಗಾಂಕದತ್ತಸೂನೋಃ' ಎಂದಿರುವುದು.

ಡಾ|| ಬರ್ನೆಲ್ಲರವರು ತಾವು ಒರೆದಿರುವ ಪುಸ್ತಕಪಟ್ಟಿಯಲ್ಲಿ ಇವನನ್ನು ಪರಿಮಳಕಾಳಿದಾಸನೆಂದು ಕರೆದಿರುವರು.§ ಇವನ ಹುಟ್ಟುಹೆಸರನ್ನು ಬಿಟ್ಟು ಕಾಳಿದಾಸನೆಂದು ಇಟ್ಟ ಹೆಸರಿನಿಂದ ಕರೆಯುವುದಾದರೆ ಇವನನ್ನು ನಾಲ್ಕನೆಯ ಕಾಳಿದಾಸನೆನ್ನಬೇಕಾಗುವುದು. ಇವನ ಲಲಿತಕವಿತೆಗಾಗಿ ಲೋಕವು ಇವನನ್ನು ಕಾಳಿದಾಸನೆಂದು ಕರೆದಿರಬಹುದೆ? ಹೇಗೆ? ಎಂಬ ವಿಚಾರವು ಯೋಚಿಸತಕ್ಕದಾಗಿದೆ.

ಪಂಡಿತ ರಾಮನಾರೇಶ ತ್ರಿಪಾಠಿಯವರು ಇವನನ್ನು 'ಅಭಿನವಕಾಳಿದಾಸ' ಎಂದು ಕರೆದಿರುವುದು ಹೊರತು ಈ ವಿಚಾರವಾಗಿ ಯಾವ ಪ್ರಮಾಣವನ್ನೂ ಸಾಧಿಸಿರುವುದಿಲ್ಲ.* ಇವನನ್ನು ಕಾಳಿದಾಸನಿಗೆ ಹೋಲಿಸುವುದಾದರೆ ಇವನ ಕಾವ್ಯದಲ್ಲಿ ಕಾಳಿದಾಸನ ಕೃತಿಗಳಲ್ಲಿ ಕಂಡುಬರುವ ಶೈಲಿಯ ಸರಳತೆ, ಪ್ರಸಾದ, ಮಾಧುರ್ಯ, ಉಪಮಾನೋಪಮೇಯಗಳ ಉತ್ಕರ್ಷತೆ, ಉದಾತ್ತಭಾವ, ವಿಷಯನಿರೂಪಣ ಚತುರತೆ, ರಸಸಂಗೋಪನ, ನಿಯಮಮಾರ್ಗಾದಿ ಇವೇ ಮೊದಲಾದ ಮನೋಹರ

§ Dr. Burnell's catalogue of the M. S S. in the Tanjore Palace Library

* ಕವಿತಾ ಕೌಮುದಿ, ಪುಟ ೧೪೨

ವಿಷಯಗಳು ಜಾರಿ, ಲಲಿತಪದಬಂಧುರವು ಮಾತ್ರವೇ ಹೆಚ್ಚಾಗಿ ತೋರುವುದನ್ನು ನೋಡಿ ಮನಸೋತ ತ್ರಿಪಾಠಿಯವರು ಕೇವಲ ಅಭಿಮಾನದಿಂದ ಪದ್ಮಗುಪ್ತನನ್ನು 'ಅಭಿನವಕಾಳಿದಾಸ'ನೆಂದು ಕರೆದಿರಬಹುದಾಗಿ ನಮಗೆನಿಸುತ್ತದೆ.

ಡಾ|| ಬರ್ನೆಲ್ಲರವರ 'ಪುಸ್ತಕಾನುಕ್ರಮಣಿಕೆ'ಯಂತೆ ಪದ್ಮಗುಪ್ತನನ್ನು 'ಕಾಳಿದಾಸ' ಎಂದು ಕರೆಯಬೇಕಲ್ಲದೆ ಅವನು ಬರೆದಿರುವ ಗ್ರಂಥದಲ್ಲಿ ಎಲ್ಲಿಯೂ ಹೇಳಿಕೊಂಡಿರುವಂತೆ ಕಂಡುಬರುವುದಿಲ್ಲ. ಹಾಗೆ ಇದ್ದುದಾಗಿದ್ದರೆ 'ಪರಿಮಳಾಪರನಾಮ' ನೆಂದು ಕವಿಯು ಹೇಳಿಕೊಂಡಿರುವಂತೆ 'ಕಾಳಿದಾಸ'ನೆಂಬಾಪರನಾಮವೂ ಇದ್ದಿತಾಗಿ ಹೇಳಿಕೊಳ್ಳುತ್ತಿದ್ದನೆಂದು ನಮಗೆ ತೋರುತ್ತದೆ.

ಸ್ಥಳ, ಕುಲ, ಗೋತ್ರಗಳೊಂದೂ ತಿಳಿಯದ ಈ ಕವಿಯನ್ನು ಕಾಶ್ಮೀರ ಬ್ರಾಹ್ಮಣನೆಂದೂ‡ ಜಿನಮತಾನುಯಾಯಿ ಎಂದು ತ್ರ್ಯಂಬಕಗುರುನಾಥಕಾಳೆ ಯವರೂ ಹೇಳುವರು* ಇವನು ಜೈನನೆಂಬುವುದಕ್ಕೆ ಯಾವ ಪ್ರಮಾಣವನ್ನೂ ಸಾಧಿಸಿರುವುದಿಲ್ಲ. ಇವನು ಕಾಶ್ಮೀರದವನೆಂದೂ ದೇಶಪರ್ಯಟನಕ್ಕಾಗಿ ಹೊರಟು ಮಾಳವಕ್ಕೆ ಬಂದು ನಿಂತುದರ ವಿಚಾರವಾಗಿ ಎಲ್ಲಿಯೂ ಸಮರ್ಥಿಸಿ ಹೇಳಿರುವು ದಿಲ್ಲ. ಹಾಗೆ ಹೇಳುವ ಪ್ರಮಾಣಗಳೊಂದೂ ದೊರೆಯವು. 'ಕುಟ್ಟನೀಮತ' ಕಾರನಾದ ದಾಮೋದರ ಗುಪ್ತನನ್ನು ಬ್ರಾಹ್ಮಣನೆಂದು ಹೇಳಿರುವಂತೆ ಪದ್ಮ ಅಥವಾ ಪರಿಮಳನ ಹೆಸರಿಗೆ 'ಗುಪ್ತ ಅಥವಾ 'ದತ್ತ' ಶಬ್ದಗಳ ಜೋಡಣೆಯಿಂದ ಇವನು ಬ್ರಾಹ್ಮಣನಾಗಿರಬಹುದಾಗಿ ಹೇಳಲು ಅವಕಾಶವಿದೆ. ಕವಿಯು 'ಧಾರಾ' ನಗರದವನೆಂದು 'ಭೋಜರಾಜ' ಚರಿತವು ಹೇಳುತ್ತದೆ$ ಕವಿಯು ಅಲ್ಲಿಯೇ ಇದ್ದವನಾದುದರಿಂದ ಹಾಗೆ ಹೇಳಿರಬಹುದು ಹೊರ್ತು ನಾನೋಲ್ಲೇಖನ ಮಾತ್ರ ದಿಂದ ಹಾಗೆ ಸಾಧಿಸುವುದು ಸಾಹಸದ ಕೆಲಸ.

ಕಾಲ :—ಧಾರಾನಗರದ ಪರಮಾರ ಸಿಂಧು (ಲ) ರಾಜನು ಕ್ರಿ. ಶ. ೯೯೫-೧೦೧೦ ವರೆಗೆ ಆಳಿದುದಾಗಿ ಚರಿತ್ರೆಯು ಹೇಳುತ್ತದೆ. ಪದ್ಮಗುಪ್ತನು ಇವನ ಆಶ್ರಯದಲ್ಲಿದ್ದವನಾದುದರಿಂದ ಇವನು ಕ್ರಿ. ಶ. ೧೦ನೆಯ ಶತಮಾನದವ ನೆಂಬುದು ಸ್ಪಷ್ಟವು.

ಗ್ರಂಥ :—ಇವನು ತನಗೆ ಆಶ್ರಯವನ್ನು ಕೊಟ್ಟ ಸಿಂಧು (ಲ) ರಾಜನ ವಿಚಾರವಾದ ಕಾವ್ಯವನ್ನು ಹದಿನೆಂಟು ಅಧ್ಯಾಯಗಳಲ್ಲಿ ಬರೆದು ಅದನ್ನು 'ನವಸಾಹ

‡ ಸಂಸ್ಕೃತಕವಿಜೀವಿತವು ಪುಟ ೧೬೪.

* ಸಂ ಕವಿಚರಿತೆ ಪುಟ ೩೨.

$ Bhoja Raja Published by Annamalai University P. 16

ಸಾಂಕಚರಿತ' ಎಂದುಕರೆದಿರುವನು. ಸಿಂಧು (ಲ) ರಾಜನನ್ನು **ನವಸಾಹಸಾಂಕ** ನೆಂದೂ **ಕುಮಾರನಾರಾಯಣ**ನೆಂದೂ ಕರೆಯುವ ರೂಢಿಯುಇದ್ದುದಾಗಿ :—

ನಿರ್ವ್ಯೂಢನಾನಾದ್ಭುತಸಾಹಸಂ ಚ
ರಣೇ ವೃತಂ ಚ ಸ್ವಯಮೇವ ಲಕ್ಷ್ಮ್ಯಾ
ನಾಮ್ನಾಯಮೇಕೇ **ನವಸಾಹಸಾಂಕಂ**
ಕುಮಾರನಾರಾಯಣಮಾಹುರನ್ಯೇ ॥
ನವಸಾಹಸಾಂಕ ಚರಿತ ೧—೫೯.

ಎಂಬ ಶ್ಲೋಕದಿಂದ ಸ್ಪಷ್ಟಪಡುತ್ತದೆ.

ಸಿಂಧುರಾಜನು ಒಂದಾನೊಂದುದಿವಸ ಮೃಗಯಾ ವಿನೋದಕ್ಕಾಗಿ ಹೊರಟು ದೃಷ್ಟಿಪಥಕ್ಕೆ ದೊರೆತ ಒಂದು ಹರಿಣದ ಬೆನ್ನಟ್ಟಿ ವಿಂಧ್ಯಕಂದರಪ್ರಾಂತವನ್ನೈದಿ ಮಾರ್ಗಮಧ್ಯದಲ್ಲಿ ದೊರೆತ ರತ್ನಹಾರವನ್ನು ನೋಡಿ ಆಶ್ಚರ್ಯಗೊಂಡು ಇದಾರದೋ ರಾಜಾಂತಃಪುರ „ಪುರಂಧ್ರಿಯರದಾಗಿರಬೇಕೆಂದು ತರ್ಕಿಸುತ್ತಾ ಮಾರ್ಗಕ್ರಮಣ ಮಾಡಿ ಸುಯೋಗದಿಂದ ದೊರೆತ ಶಶಿಪ್ರಭಾ ಮೊದಲಾದ ಸುಂದರಿಯರನ್ನು ವರಿಸಿ ರಾಜಧಾನಿಗೆ ಹಿಂತಿರುಗಿ ಸಾಮ್ರಾಜ್ಯ ಸುಖವನ್ನನುಭವಿಸಿದನೆಂಬುದು ಕಾವ್ಯದ ತಿರಳು. ಪರಮಾರ ವಂಶಾವಳಿಯು ಈ ಕಾವ್ಯದ ಹನ್ನೊಂದನೆಯ ಸರ್ಗದಲ್ಲಿ ವರ್ಣಿತವಾಗಿರುವುದು. ಪ್ರಾಚೀನಕವಿವರ್ಣನಾವಸರದಲ್ಲಿ ಇವನು ಆದರ್ಶ ಕವಿಯಾದ ಭರ್ತೃಮೇಂಠನನ್ನು ಹೇಳಿಕೊಂಡಿರುವನು. ಇದು ಕಾವ್ಯಲಕ್ಷಣಗಳಿಂದ ಕೂಡಿರುವುದಾಗಿ ಪೇಶಲಶೈಲಿಯನುಳ್ಳುದಾಗಿ ಹೇಳಿರುವುದಾದರೂ ಕಥಾಮಧ್ಯದಲ್ಲಿ ಅಲ್ಲಲ್ಲಿ ಪರಸ್ಪರ ಭಾಷಣಗಳನ್ನು ಲಂಬಿಸಿ ವಿಸ್ತೃತವರ್ಣನೆಗಳನ್ನು ತುಂಬಿರುವನಾದುದರಿಂದ ಕಥೆಯಕಲ್ಪನಾತಂತುವು ಅಲ್ಲಲ್ಲಿಕಿತ್ತುಹೋಗಿ ಪುನಃ ಗಂಟುಹಾಕಿದಂತೆ ಇದೆ. ಇವನದೆಂದುಹೇಳುವ ಅನೇಕ ಶ್ಲೋಕಗಳು ಕ್ಷೇಮೇಂದ್ರನ 'ಔಚಿತ್ಯವಿಚಾರ ಚರ್ಚಾ', ಧನಂಜಯಕೃತ, 'ದಶರೂಪಕ' ಸುಭಾಷಿತಾವಳಿ, ಶಾರ್ಙ್ಗಧರ'ಪದ್ಧತಿ' ಸುವೃತ್ತತಿಲಕಾದಿ ಗ್ರಂಥಗಳಲ್ಲಿ ದೊರೆಯುವುವು. ಗ್ರಂಥವು ಸರಳವಾಗಿದ್ದರೂ ರಸದೌರ್ಬಲ್ಯವು ಅಲ್ಲಲ್ಲಿ ಮೂಡಿರುವ ಹಾಗೆ ತೋರುತ್ತದೆ. ಅಲ್ಲದೆ ಕವಿಯ ಮತ್ತು ಓದುಗರ ಅಂತಃಕರಣಗಳೊಂದಾಗಿ ಅದರಲ್ಲಿ ಸರ್ವವನ್ನೂ ಲೀನಮಾಡಿಕೊಳ್ಳುವ ಪ್ರಕೃತಿ ವಿಶೇಷವು ಇರುವೆಡೆಯಲ್ಲಿ ಕವಿತೆಯು ಶೋಭಿಸುವುದು. ಅದು ಇದರಲ್ಲಿ ವ್ಯಗ್ಯವು. ಬಾಣಮಹಾಕವಿಕೃತ 'ಹರ್ಷಚರಿತೆ', ಬಿಲ್ಹಣಕವಿಕೃತ ವಿಕ್ರಮಾಂಕದೇವಚರಿತೆ, ವಾಮನಭಟ್ಟ ಬಾಣವಿರಚಿತ, 'ವೇಮಭೂಪಾಲಚರಿತೆ' ಇವುಗಳಂತೆ ಇರದೆ ಯಾವುದೋ ನೂತನ ಮಾರ್ಗವನ್ನು ಅವಲಂಬಿಸಿದೆ.

ಮಾದರಂಗಾಗಿ ಕೆಲವು ಶ್ಲೋಕಗಳು:—

ಮಯಿ ಗೋಪ್ತರಿ ಚೋರೋಽಯಮಬಲಾಲೋಚನಶ್ರಿಯಃ
ಇತೀವ ಮುಮುಚೇ ತೇನ ಕೃಷ್ಣಸಾರೇ ಶಿಲೀಮುಖಃ ॥ ೨-೧೭

ನವಸಾಹಸಾಂಕನು ವನವಿಹರಣಕ್ಕಾಗಿ ಮಹಾಟವಿಯನ್ನು ಹೊಕ್ಕು ಅಲ್ಲಿರುವ ಕ್ರೂರಮೃಗಗಳನ್ನು ಕೊಲ್ಲುತ್ತ ಜಿಂಕೆಯ ತಂಡವನ್ನು ನೋಡಿ ನಾನು ಪ್ರಜೆಗಳನ್ನು (ಚೋರಭಯದಿಂದ ತಪ್ಪಿಸಿ) ಕಾಪಾಡುತ್ತಿದ್ದಾಗ್ಯೂ ರಾಜನಾದ ನನ್ನ ಎದುರಿನಲ್ಲಿ ನಿರ್ಭಯವಾಗಿ ಈ ಹರಿಣಗಳು ಚಂಚಲಾಕ್ಷಿಯರ (ಸುಂದರಿಯರ) ನೋಟವನ್ನು ಅಪಹರಿಸಿರುವುವಾಗಿ ತಿಳಿದು (ಕಳ್ಳತನದ ಶಿಕ್ಷೆಗಾಗಿ) ಅವುಗಳ ಮೇಲೆ ಬಾಣಪ್ರಯೋಗವನ್ನು ಮಾಡಿದನು.

ಅರಣ್ಯಾನೀ ಕೈತೀಯಂ ಧೃತಕನಕಸೂತ್ರಃ ಕ್ವ ಸ ಮೃಗಃ
ಕ್ವ ಮುಕ್ತಾಹಾರೋಽಯಂ ಕ್ವ ಚ ಸ ಪತಗಃ ಕೈತೀಯಮಬಲಾ
ಕ್ವ ತತ್ಕನ್ಯಾರತ್ನಂ ಲಲಿತಮಹಿಭರ್ತುಃ ಕ್ವ ಚ ವಯಂ
ಸ್ಮಾಕೊತಂ ಧಾತಾ ಕಿಮಪಿ ನಿಭೃತಂ ಪಲ್ಲವಯತಿ ॥ ೫—೮೧

ರಾಜನು 'ಶಶಿಪ್ರಭಾ' ದರ್ಶನಾರ್ಥವಾಗಿ ಹೋದಾಗ ಅವಳನ್ನು ನೋಡಿ ಅಚ್ಚರಿಗೊಂಡು ಹೇಳುವಿಕೆ:—

ಈ ಮಹಾರಣ್ಯವು ಎಲ್ಲಿ? ಸುವರ್ಣಸೂತ್ರ (ಚಿನ್ನೆ) ಗಳಿಂದ ಕೂಡಿದ ಆ ಮೃಗವು ಎಲ್ಲಿ? ಆ ಮುತ್ತಿನ ಸರವೆಲ್ಲಿ? ಆಪಕ್ಷಿಯು ಎಲ್ಲಿ? ಆ ಸ್ತ್ರೀ ಎಲ್ಲಿ? ಮನೋಹರಳಾದ ಆ ನಾಗಕನ್ಯಾಮಣಿಯು ಎಲ್ಲಿ? ಎಂದು ಈರೀತಿಯಾಗಿ ಬ್ರಹ್ಮನು ಅನಿರ್ವಚನೀಯವಾದ ತನ್ನ ಇಂಗಿತವನ್ನು (ಅಪೇಕ್ಷೆಯನ್ನು) ಸ್ಥಳಕಾಲನಿರ್ದೇಶವಿಲ್ಲದೆ ಎಲ್ಲೆಲ್ಲಿಯೋ ಅಂಕುರಿಸುವಂತೆ ಮಾಡುತ್ತಾನೆ. ಇದು ಆಶ್ಚರ್ಯ.

ನರ್ಮದೆಯು ಹೇಳುವ ರಾಜನ ಪರಾಕ್ರಮವರ್ಣನೆಯು ಹೀಗಿರುವುದು:—

ಸಮಾನಭಾವೈಸ್ತ್ರಿಭಿರೇವ ಮನ್ಯೇ
ಸಮುದ್ರನೇಮಿರ್ವಸುಧಾ ಧೃತೇಯಂ
ಭುಜಂಗಮೇಂದ್ರೇಣ ಚ ಮೇರುಣಾ ಚ
ದೋಷ್ಣಾ ಚ ಮೌರ್ವ್ಯಕಿಣಶೋಭನಾತೇ ॥ ೯—೭

ಸಮುದ್ರನೇ ಎಲ್ಲೆಯಾಗಿರತಕ್ಕ ಈ ಭೂಮಿಯು ಪರಸ್ಪರ ಸಮಾನಗಳಾಗಿರತಕ್ಕ ಸರ್ಪರಾಜನಾದ ಆದಿಶೇಷನಿಂದಲೂ, ಮೇರುಪರ್ವತದಿಂದಲೂ, ಅನವರತವೂ ಬಾಣಪ್ರಯೋಗದಿಂದ ಜೆಡ್ಡುಕಟ್ಟಿರತಕ್ಕ (ಬಾಣಗಳಿಂದ ಕ್ಷತವಾಗಿ ಶೋಭಿಸುತ್ತಿರುವ) ನಿನ್ನ ಬಾಹುವಿನಿಂದಲೂ ಧರಿಸಲ್ಪಟ್ಟಿರುವುದಾಗಿ ತಿಳಿಯುತ್ತೇನೆ.

ತ್ವಯಿ ಸ್ಥಿತೇ ಸಂಪ್ರತಿ ಜಾಗರೂಕೇ
ಜಗದ್ವಿಧೇಯೇಷು ವಿಧೂತಚಿಂತಃ

ಕರೋತಿ ನೇತ್ರೇ ಭಗವಾನವೈಮಿ
ಸಯೋಗನಿದ್ರಾಮುಕುಲೇ ಮುಕುಂದಃ ॥ ೯—೮

ಎಲೈ ರಾಜನೆ! ನೀನು ಯಾವಾಗಲೂ ಬಹುಜಾಗರೂಕನಾಗಿದ್ದುಕೊಂಡು ರಾಜ್ಯ (ಭೂ) ರಕ್ಷಣೆಯನ್ನು ಮಾಡುತ್ತಲಿರುವುದರಿಂದ ಮುಕುಂದನು ಲೋಕ ವ್ಯಾಪಾರಗಳಲ್ಲಿ ಚಿಂತಾರಹಿತನಾಗಿ ಯೋಗನಿದ್ರಾಪರವಶನಾಗಿರುತ್ತಾನೆಂದು ತಿಳಿಯುತ್ತೇನೆ.

ಧನಂಜಯ (೨)

ವಿಷ್ಣೋರಿವಸ್ಯತೇನಾಪಿಧನಂಜಯೋಽಸ ವಿದ್ವನ್ಮನೋರಂಗನಿಬದ್ಧತೋತು
ಅವಿಷ್ಕೃತಂಮುಂಜಮಹೀಪಗೋಷ್ಠೀ ವೈದಗ್ಧ್ಯಭಾಜಾದಶರೂಪಮೇತತ್

ಎಂಬಶ್ಲೋಕದಿಂದ, ಇವನು ವಿಷ್ಣುವಿನ ಮಗನೆಂದೂ, ಮುಂಜರಾಜನ ಆಸ್ಥಾನ ಪಂಡಿತನೆಂದೂ, ದಶರೂಪವೆಂಬ ಲಕ್ಷಣಗ್ರಂಥಕಾರನೆಂದೂ, ಬ್ರಾಹ್ಮಣನೆಂದೂ ತಿಳಿಯಬರುತ್ತದೆ.

ಕಾಲ:—ಮುಂಜನು ಕ್ರಿ. ಶ. ಹತ್ತನೆಯ ಶತಮಾನದವನು. ಧನಂಜಯನು ಇವನ ಸಮಕಾಲೀನನು.

ಗ್ರಂಥ:—ಇವನು 'ದಶರೂಪಕ' ಎಂಬ ಲಕ್ಷಣಗ್ರಂಥವನ್ನು ಬರೆದಿರುವುದಾಗಿ ಮೇಲೆ ಹೇಳಿರುವೆವು. ಇವನು ಭರತಾದಿನಾಟ್ಯಶಾಸ್ತ್ರಕಾರರ ಗ್ರಂಥಗಳನ್ನು ಪರಿಶೀಲಿಸಿ ಉಪಯುಕ್ತ ವಿಷಯಗಳನ್ನು ಮಾತ್ರವೆ ಸಂಗ್ರಹಿಸಿ ಸುಲಭವಾಗಿ ತಿಳಿಯುವಂತೆ ಬರೆದಿರುವನು. ಕಾಲಕ್ರಮದಲ್ಲಿ ರೂಪಕ ನಿರ್ಮಾಣಾದಿ ಗ್ರಂಥ ರಚನೆಗೆ ಇದು ಪ್ರಮಾಣ ಗ್ರಂಥವಾಗಿರುವುದು. ಇದಕ್ಕೆ ಧನಿಕನು "ದಶರೂಪಾವಲೋಕ" ಎಂಬ ವ್ಯಾಖ್ಯಾನವನ್ನು ಬರೆದಿರುವನು.

ಧನಿಕ

ಇವನು ದಶರೂಪಕಕಾರನಾದ ಧನಂಜಯನ ಸೋದರನು. ಇವನು ಕ್ರಿ. ಶ. ೧೦ನೆಯ ಶತಮಾನದವನು.

ಗ್ರಂಥಗಳು:—ಇವನು 'ಕಾವ್ಯನಿರ್ಣಯ' ಎಂಬ ಲಕ್ಷಣಗ್ರಂಥವನ್ನು ಬರೆದಿರುವುದಲ್ಲದೆ 'ದಶರೂಪಾವಲೋಕ'ವೆಂಬ ವ್ಯಾಖ್ಯಾನವನ್ನು ಬರೆದಿರುವನು. ದಶರೂ

* ದಶರೂಪಕ ಪುಟ ೧೧೦

ಪಾವಲೋಕದ ಒಂದಾನೊಂದು ಹಸ್ತಪ್ರತಿಯಲ್ಲಿ ಇವನಿಗೆ ಉತ್ಪಲರಾಜ(ಮುಂಜರಾಜ)ನಬಳಿ ಮಹಾಸಾಧ್ಯಪಾಲ (ಇದಕ್ಕೆ ಈಗಣ್ ಹೆಸರೇನೆಂಬುದು ತಿಳಿಯದು) ಕೆಲಸವಿದ್ದುದಾಗಿ ತಿಳಿಯಬರುತ್ತದೆ. §

'ಸಾಹಿತ್ಯದರ್ಪಣ'ಕಾರನು ಧನಂಜಯನೂ ಧನಿಕನೂ ನಾಮಸಾಮ್ಯದಿಂದ ಒಬ್ಬನೇ ಎನ್ನುವನು. ಆದರೆ ಇಂತಹ ಸಂಶಯಕ್ಕೆಡೆಗೊಡದಂತೆ ಗ್ರಂಥಕಾರನೇ ಸ್ಪಷ್ಟಪಡಿಸಿರುವನು. ಇದಲ್ಲದೆ ಭಾರತಕೇ 'ಪ್ರಾಚೀನರಾಜವಂಶ' ಎಂಬ ಹಿಂದೀ ಗ್ರಂಥದಲ್ಲಿ ಧನಿಕನ ವಿಚಾರವಾಗಿ ಬರೆಯುವಾಗ "ಯಹ ಧನಂಜಯಕಾಭಾಯೀಥಾ. ಇಸನೇ ಅಪನೇ ಭಾಯೀಕೇ ರಚನೇಹುಯೇ ದಶರೂಪಕಪರದಶರೂಪಾವಲೋಕನಾಮಕೀಠಿಕಾಲೀಖೀ. ಔರ 'ಕಾವ್ಯನಿರ್ಣಯ' ನಾಮಕಾ ಅಲಂಕಾರ ಗ್ರಂಥ ಬನಾಯ" ಎಂದು ಸ್ಪಷ್ಟಪಡಿಸಿರುವುದರಿಂದ ಧನಿಕನು ಧನಂಜಯನ ಸೋದರನೆಂಬುದು ವ್ಯಕ್ತವು.

ಅಜಿತಸೇನ

ಇವನು ಜೈನನು ಕ್ರಿ. ಶ. ೧೦ನೆಯ ಶತಮಾನದಲ್ಲಿದ್ದ ಚಾಮುಂಡರಾಜನ ಪುರೋಹಿತನೂ ಗಂಗರಸನಾದ ರಾಯಮಲ್ಲನ ಮುಖ್ಯಾಮಾತ್ಯನೂ ಕನ್ನಡಕವಿಯಾದ ನಾಗವರ್ಮನ ಉಪಾಧ್ಯಾಯನೂ, ಬೆಂಕೀಪುರಮಠದ ಸರ್ವಾಧಿಕಾರಿಯೂ ಆಗಿದ್ದನು. ಚಂದ್ರವಂಶದ ಕಾಮಿರಾಯನು ಕೇಳಿಕೊಂಡುದರಿಂದ ಇವನು 'ಶೃಂಗಾರಮಂಜರಿ' ಎಂಬ ಗ್ರಂಥವನ್ನು ಬರೆದುದಾಗಿ ಹೇಳಲ್ಪಟ್ಟಿರುವದು. ಇದರಲ್ಲಿ ೧೨೮ ಶ್ಲೋಕಗಳಿದ್ದು ಮೂರು ಪ್ರಕರಣಗಳಾಗಿ ವಿಂಗಡಿಸಲ್ಪಟ್ಟಿರುವುದು. $

ಹಲಾಯುಧ

ಇತಿಸಮಾಪ್ತಮವಾಪ್ತಗುಣೋದಯಂ
ಕವಿರಹಸ್ಯವಿದಂರಸಿಕಪ್ರಿಯಂ
ಸದಭಿಧಾನನಿದಾನಹಲಾಯುಧ
ದ್ವಿಜವರಸ್ಯಕೃತಿಃ ಸುಕೃತಾತ್ಮನಃ ॥

§ S. K De's Sanskrit Poetics P 132
$ History of Sanskrit Literature P. 163.

ಅಸ್ತ್ಯಗಸ್ತ್ಯಮುನಿಜ್ಯೋತ್ಸ್ನಾ ಪವಿತ್ರೀದಕ್ಷಿಣಾಪಥೇ
ಕೃಷ್ಣರಾಜ ಇತಿಖ್ಯಾತೋ ರಾಜಾಸಾಮ್ರಾಜ್ಯದೀಕಿತಃ ॥

ಎಂಬ ಶ್ಲೋಕಗಳಿಂದ ಇವನು ಬ್ರಾಹ್ಮಣನೆಂದೂ ದಕ್ಷಿಣದೇಶದವನೆಂದೂ ಕೃಷ್ಣರಾಜನ ಸಮಕಾಲೀನನೆಂದೂ ತಿಳಿಯಬರುವದು. ಈ ಕೃಷ್ಣರಾಜನಾರೆಂಬುದು ತಿಳಿಯದು.

ಕಾಲ:—ಇವನು 'ಅಭಿಧಾನರತ್ನಮಾಲೆ'ಯನ್ನು ಕ್ರಿ. ಶ. ೯೫೦ರಲ್ಲಿ ಬರೆದುದಾಗಿ ಪ್ರೊ. ಮ್ಯಾಕಡಾನಲ್ಲರವರು ಹೇಳುವರು. * ಕವಿರಹಸ್ಯವು ಕ್ರಿ. ಶ. ೧೦ನೆಯ ಶತಮಾನದಲ್ಲಿ ಬರೆಯಲ್ಪಟ್ಟುದಾಗಿ ಡಾ|| ಕೀತರವರ ಮತವಿರುವುದು. ಆದುದರಿಂದ ಇವನು ಕ್ರಿ. ಶ. ಹತ್ತನೆಯ ಶತಮಾನದವನೆಂಬುದು ಸ್ಪಷ್ಟವು.

ಗ್ರಂಥಗಳು:—ಮೇಲೆ ಹೇಳಿದ ಅಭಿಧಾನ ರತ್ನಮಾಲಾ ಮತ್ತು ಕವಿರಹಸ್ಯ ಗ್ರಂಥಗಳಲ್ಲದೆ 'ಮೃತಸಂಜೀವಿನೀ' ಎಂಬ ವ್ಯಾಖ್ಯಾನವನ್ನೂ ಬರೆದಿರುವುದಾಗಿ ತಿಳಿಯಬರುತ್ತದೆ ಇದು ಕವಿರಹಸ್ಯದ ವ್ಯಾಖ್ಯಾನವಾಗಿರಬಹುದು. § ಕವಿರಹಸ್ಯದ ವಿಚಾರವಾಗಿ ಕವಿಯಪ್ರತಿಜ್ಞೆಯು ಹೀಗಿರುವದು.

ಲೋಕೇಷುಶಾಸ್ತ್ರೇಷುಚಯೇಪ್ರಸಿದ್ಧಾಃ
ಕಾವ್ಯೇಷುಯೇಸತ್ಕವಿಭಿಃ ಪ್ರಯುಕ್ತಾಃ
ಉದ್ಧೃತ್ಯಕಾಂಶ್ಚಿತ್ಯವಿನೋದನಾಯ
ಶಬ್ದಾನಹಥಾಽತುಭರುದ್ಧರಾಮಿ ॥

ಇದರಲ್ಲಿ ೨೭೪ ಶ್ಲೋಕಗಳಿರುವವು. ಗ್ರಂಥಾಂತ್ಯದಲ್ಲಿ "ಇತಿಹಲಾಯುಧ ಪ್ರಣೀತಂ ಶ್ರೀ ಕವಿರಹಸ್ಯಂ ಸಮಾಪ್ತಂ" ಎಂದಿದೆ.

ಭ ಟ್ಟ ನಾ ಯ ಕ

ಇವನು ಮೀಮಾಂಸಕನೆಂಬುದು ಹೊರ್ತು ಇವನ ವಿಚಾರವಾಗಿ ಮತ್ತಾವುದೂ ತಿಳಿಯದು. ರಾಜತರಂಗಿಣಿಯಲ್ಲಿ ಕಲ್ಹಣನು ಶಂಕರವರ್ಮನ ಆಶ್ರಯದಲ್ಲಿ ಭಟ್ಟನಾಯಕನೊಬ್ಬನಿದ್ದುದಾಗಿ ಹೇಳಿರುವನು. ಇವನೇನಾವು ಹೇಳುವ ಭಟ್ಟನಾಯಕನಾಗಿರಬಹುದು.

---

* A. A Macdonell's History of Sanskrit Literature P 433.

§ The Classical Sanskrit Literature P 161.

ಕಾಲ:—ಕ್ರಿ. ಶ, ೯ನೆಯ ಶತಮಾನದ ಉತ್ತರಾರ್ಧದವನಾದ ಆನಂದವರ್ಧನನ ಗ್ರಂಥಗಳ ವಿಚಾರವಾಗಿ ಖಂಡಿಸಿಬರೆದಿರುವುದರಿಂದಲೂ ಹತ್ತನೆಯ ಶತಮಾನದವನಾದ ಅಭಿನವಗುಪ್ತಾಚಾರ್ಯನು ತಾನು ಬರೆದಿರುವ 'ಅಭಿನವಭಾರತ' ಎಂಬ ಗ್ರಂಥದಲ್ಲಿ ಭಟ್ಟನಾಯಕನನ್ನು ಹೇಳಿಕೊಂಡಿರುವುದರಿಂದ ಆನಂದವರ್ಧನನ ಈಚಿನವನೂ ಅಭಿನವಗುಪ್ತನ ಪ್ರಾಚೀನನೂ ಕ್ರಿ. ಶ. ಹತ್ತನೆಯ ಶತಮಾನದವನೂ ಎಂಬುದು ಸ್ಪಷ್ಟವು.

ಇವನು "**ಹೃದಯದರ್ಪಣ**" † ಎಂಬ ಅಲಂಕಾರ ಗ್ರಂಥವನ್ನು ಬರೆದಿರುವನು. ಇದನ್ನು ಸಹೃದಯದರ್ಪಣವೆಂದೂ ಕರೆಯುವುದುಂಟು.

ಧ್ವನಿಯೇ ಕಾವ್ಯದಜೀವನೆಂದೂ, ರಸಸ್ಥಿತಿಗೆ ವ್ಯಂಜನೋಪಕರಣಗಳೆನ್ನುವ ಆನಂದವರ್ಧನನ ಮತವನ್ನು ಖಂಡಿಸಿ ರಸೋಪಪತ್ತಿಗೆ (೧) ಅಭಿಧಾಯಕತ್ವ. (೨) ಭಾವಕತ್ವ. (೩) ಮತ್ತು ಭೋಜಕತ್ವವೆಂಬ ಕ್ರಿಯಾ ತ್ರಯಂಗಳನ್ನು ವಿಸ್ತರಿಸಿ ಉದಾಹರಣೆಗಳನ್ನು ಸಾತವಾಹನನ 'ಗಾಥಾಸಪ್ತಶತಿ' ಶ್ರೀಮದ್ರಾಮಾಯಣ ಮತ್ತು ಯಶೋವರ್ಮನ ರಾಮಾಭ್ಯುದಯವೆಂಬ ಗ್ರಂಥಗಳಿಂದಾರಿಸಿಕೊಂಡು ಹೇಳಿರುವನು.

ಪ್ರಸಿದ್ಧವ್ಯಾಖ್ಯಾನಕಾರನಾದ ಮಲ್ಲಿನಾಥನು ರಸವೈಶಿಷ್ಟ್ಯವನ್ನು ಹೇಳುವ (Rasa-realization) ಆಲಂಕಾರಿಕರನ್ನು ನಾಲ್ಕುವಿಧವಾಗಿ ವಿಂಗಡಿಸಿ ಲೊಲ್ಲಟನ ಮತಾನುಯಾಯಿಗಳಾದ ಆಲಂಕಾರಿಕರನ್ನು ಉತ್ಪತ್ತಿವಾದಿಗಳೆಂದೂ ಶಂಕುಕನ ಮತಾನುಯಾಯಿಗಳಾದ ಆಲಂಕಾರಿಕರನ್ನು ಅನುಮಿತಿವಾದಿಗಳೆಂದೂ ಆನಂದವರ್ಧನನ ಮತಾನುಯಾಯಿಗಳಾದ ಆಲಂಕಾರಿಕರನ್ನು ಅಭಿವ್ಯಕ್ತಿವಾದಿಗಳೆಂದೂ ಭಟ್ಟನಾಯಕನ ಮತಾನುಯಾಯಿಗಳನ್ನು ಭುಕ್ತಿವಾದಿಗಳೆಂದೂ ವ್ಯವಹರಿಸಿರುವನು. §

ಕುಂತಳ

ಇವನನ್ನು ಕುಂಟುಕ * ನೆಂದೂಕರೆಯುವರು

ಕಾಲ:—ಇವನು ರಾಜಶೇಖರನನ್ನು ಹೇಳಿರುವುದರಿಂದಲೂ, ಅಭಿನವಗುಪ್ತನು ತಾನು ಬರೆದಿರುವ ಲೋಚನ ಗ್ರಂಥದಲ್ಲಿ ವಕ್ರೋಕ್ತಿಗೆ ಉದಾಹರಣೆ

† ಸಹೃದಯದರ್ಪಣ ಅಥವಾ ಹೃದಯದರ್ಪಣವೆಂಬ ಹೆಸರುಳ್ಳ ಭರತನ ನಾಟ್ಯಶಾಸ್ತ್ರವ್ಯಾಖ್ಯಾನವು ಇದಲ್ಲ.

§ Journal of Oriental research Madras Vol I. Part 3. P. 267-276.

* ವ್ಯಕ್ತಿವಿವೇಕ ಪುಟ ೫೮

ಯನ್ನು ಹೇಳುವಾಗ ಕುಂತಳನ ಶ್ಲೋಕಗಳನ್ನುಹೇಳದೆ ಇರುವುದರಿಂದ ಅಭಿನವ ಗುಪ್ತನ ಅನಂತರ ಇದ್ದವನೇದೂ ಕ್ರಿ. ಶ. ಹತ್ತನೆಯ ಶತಮಾನಾಂತ್ಯದಲ್ಲಿರ ಬೇಕೆಂದೂ ಖಂಡಿತವಾಗುವುದು.

ಗ್ರಂಥ:—ಇವನು "ವಕ್ರೋಕ್ತಿಜೀವಿತ"ವೆಂಬ ಅಲಂಕಾರಗ್ರಂಥವನ್ನು ಬರೆದಿರುವನು. ಇದರ ಮೊದಲನೆಯ ಎರಡು ಪರಿಚ್ಛೇದಗಳುಮಾತ್ರ ಅಚ್ಚಾಗಿರುವುವು.*

ವೀರನಂದಿ.

ಇವನು ಜೈನನು. ಇವನ ಸ್ಥಳ, ಮಾತಾಪಿತೃಗಳಾರೆಂಬುದು ತಿಳಿಯದು. ಇವನ ಆಚಾರ್ಯಾವಳಿಯು ಹೀಗಿರುವುದು.

(೧) ಗುಣನಂದಿ.
(೨) ವಿಬುಧಗುಣನಂದಿ.
(೩) ಅಭಯನಂದಿ.

ಕಾಲ—ಇವನ ಕಾಲವನ್ನು ನಿಶ್ಚಯಮಾಡಿ ಬರೆದಿರುವಂತೆ ಎಲ್ಲಿಯೂ ಕಂಡು ಬರುವದಿಲ್ಲವಾದುದುರಿಂದ ಕೇವಲ ಬಾಹ್ಯಪ್ರಮಾಣಗಳಿಂದ ಇವನ ಕಾಲವನ್ನು ಊಹಿಸಿ ಹೇಳಲು ಅವಕಾಶವಿದೆ.

(೧) ಕನ್ನಡ ಜೈನಕವಿಯಾದ ಅಗ್ಗಳನು ವೀರನಂದಿಯ ಚಂದ್ರಪ್ರಭ ಚರಿತಕಾವ್ಯಾಧಾರದ ಮೇಲೆ ಸುಮಾರು ಕ್ರಿ.ಶ. ೧೦೪೯ರಲ್ಲಿ ಕನ್ನಡದಲ್ಲಿ ಚಂದ್ರಪ್ರಭ ಚರಿತವನ್ನು ಚಂಪೂರೂಪದಲ್ಲಿ ಹದಿನಾರು ಆಶ್ವಾಸಗಳಾಗಿ ಬರೆದು ಅದನ್ನು ಚಂದ್ರಪ್ರಭಪುರಾಣ ಎಂದು ಕರೆದಿರುವನು.

(೨) ಆವೇಳೆಗೆ ಕನ್ನಡಭಾಷೆಯು ಉಚ್ಛ್ರಾಯ ಸ್ಥಿತಿಯಲ್ಲಿದ್ದು ಸಂಸ್ಕೃತ ಭಾಷಾಜ್ಞಾನಭಿಜ್ಞರಾದ ಕರ್ನಾಟಕ ಜೈನಸಮುದಾಯಕ್ಕೆ ಮತಪ್ರಕ್ರಿಯೆಗಳನ್ನು ಕನ್ನಡದಲ್ಲಿ ಬೋಧಿಸಲೋಸುಗ ಬರೆದುದಾಗಿ ತೋರುತ್ತದೆ.

---

* ಅಲಂಕಾರಸರ್ವಸ್ವ ಪುಟ ೮

" ಹತ್ತನೆಯ ಶತಮಾನದಲ್ಲಿಯೇ ಕನ್ನಡವಲ್ಲಿ ಉದ್ಗ್ರಂಥಗಳು ಹುಟ್ಟಿದುವು. ೯ನೆಯ ಶತಮಾನದ ಕೆಲವು ಉದ್ಗ್ರಂಥಗಳ ಮಾತ್ರಕೆಗಳು ಈಚೆಗೆ ದೊರೆತಿವೆ. ೯ನೆಯ ಶತಮಾನಕ್ಕೆ ಮುಂಚೆಯೇ ಉದ್ಗ್ರಂಥಗಳು ಇದ್ದುವೆಂದು ನೃಪತುಂಗನು ಹೇಳುವನು.

(೩) ದೇಶೀಯ ಸಾಹಿತ್ಯಾಭಿಮಾನ (ಕನ್ನಡ) ವು ಜನಸಮುದಾಯದಲ್ಲಿ ಬೇರೂರಿ ಸಂಸ್ಕೃತಸಾಹಿತ್ಯಾವಲೋಕನವು ಕೇವಲ ಸಂಸ್ಕೃತಜ್ಞರಿಗೆ ಮಾತ್ರವೇ ರುಚಿಸುವಂತಾಗಿ ದೇಶೀಯ ಭಾಷೆಯಲ್ಲಿ ಇಂತಹ ಉದ್ದಾಮಗ್ರಂಥರಚನೆಗಳಾಗಿರ ಬೇಕಾದರೆ ಪರಸ್ಪರ ಗ್ರಂಥಗಳ ಅಂತರಕಾಲವು ಕನಿಷ್ಠಪಕ್ಷ ಒಂದು ಅಥವಾ ಎರಡು ಶತಮಾನಗಳಾದರೂ ಆಗಿರಬಹುದಾಗಿ ಬಹುತರ ಬೋಧೆಯಾಗುತ್ತದೆ. ಆದುದರಿಂದ ವೀರನಂದಿಯ ಕಾಲವು ಸುಮಾರು ಕ್ರಿ. ಶ. ಹತ್ತನೆಯ ಶತಮಾನದ ಅಂತ್ಯ ಭಾಗದಲ್ಲಿರಬೇಕೆಂದು ಹೇಳುವ ಊಹೆಯು ತಪ್ಪಾಗದು. ಇದಲ್ಲದೆ ವಾದಿರಾಜ ನೆಂಬ ಜೈನಮಹಾಕವಿಯು ಶಕ ಸಂವತ್ಸರ ೯೪೭ ಅಥವಾ ಕ್ರಿ. ಶ. ೧೦೨೫ ರಲ್ಲಿ ಪಾರ್ಶ್ವನಾಥಕಾವ್ಯವನ್ನು ಬರೆದುದಾಗಿ —

ಶಾಕಾಬ್ದೀನಗವಾರ್ಧಿರಂಧ್ರಗಣನೇ ಸಂವತ್ಸರೇ ಕ್ರೋಧನೇ
ಮಾಸೇ ಕಾರ್ತಿಕ ನಾಮ್ನಿ ಬುದ್ಧಿಮಹಿತೇಶುದ್ಧೇ ತೃತೀಯಾದಿನೇ
ಸಿಂಹೇಪಾತಿಜಯಾದಿಕೇ ವಸುಮತೀಂ ಜೈನೀಕಥೇಯಂಮಯಾ
ನಿಷ್ಪತ್ತಿಂಗಮಿತಾಸತೀಭವತುವಃ ಕಲ್ಯಾಣನಿಷ್ಪತ್ತಯೇ ॥ [೧]

ಎಂಬುದರಿಂದ ಗೊತ್ತಾಗುತ್ತದೆ.

ಇವನು **ಪಾರ್ಶ್ವನಾಥಕಾವ್ಯಾರಂಭದಲ್ಲಿ** ತನ್ನ ಪೂರ್ವಾಚಾರ್ಯರನ್ನು ನುತಿಸುವಾಗ ಚಂದ್ರಪ್ರಭಚರಿತಕಾರನಾದ ವೀರನಂದಿಯನ್ನು:—

ಚಂದ್ರಪ್ರಭಾಭಿಸಂಬದ್ಧಾ ರಸಪುಷ್ಪಾಮನಪ್ರಿಯಂ
ಕುಮುದ್ವತೀವನೋದ್ಭತ್ತೇ ಭಾರತೀವೀರನಂದಿನಃ ॥

ಎಂದು ಹೇಳಿಹೊಗಳಿಕೊಂಡಿರುವುದರಿಂದ ಪಾರ್ಶ್ವನಾಥಕಾವ್ಯರಚನೆಗೆ ಮೊದಲೇ ಚಂದ್ರಪ್ರಭಚರಿತೆಯ ನಿರ್ಮಾಣವೆಂದು ಸ್ಪಷ್ಟವಾಗುತ್ತದೆ. ಈ ಕಾರಣಗಳಿಂದ ವೀರನಂದಿಯನ್ನು ಹತ್ತನೆಯ ಶತಮಾನದವನನಬೇಕಾಗುವದು.

ಗ್ರಂಥ:—ಇವನು **ಚಂದ್ರಪ್ರಭಚರಿತ** ಎಂಬ ಮಹಾಕಾವ್ಯವನ್ನು ಬರೆದಿರುವನು. ಇದರಲ್ಲಿ ೧೮ ಸರ್ಗಗಳಿರುವುವು. ಅಷ್ಟಾದಶಲಕ್ಷಣಗಳಿಂದ ಕೂಡಿದುದಾಗಿದ್ದು **ಜಿನಧರ್ಮತತ್ವವನ್ನು** ಬೋಧಿಸುವುದಾದ ಮತಗ್ರಂಥವೆಂದರೂ ಸಲ್ಲುವುದು. ಜೈನರು ಪೂಜಿಸುವ ಇಪ್ಪತ್ತುನಾಲ್ಕು ತೀರ್ಥಂಕರರಲ್ಲಿ ಚಂದ್ರಪ್ರಭನು ಎಳನೆಯವನು. ಅದು ಈ ಶ್ಲೋಕದಿಂದ ವ್ಯಕ್ತಪಡುವುದು.

ಯಃ ಶ್ರೀವರ್ಮಸ್ವಪೋ ಬಭೂವವಿಬುಧಃಸೌಧರ್ಮಕಲ್ಪೇ ತತ
ಸ್ತಸ್ಮಾಚ್ಚಾ ಜಿತಸೇನಚಕ್ರ ಭೃದಭೂದ್ಯಶ್ಚು ಚೇಂದ್ರಸ್ತತಃ

[೧] ತ್ರಿಲೋಕಸಾರ ಪುಟ ೪.

ಯಶ್ಚಾಜಾಯತ ಪದ್ಮನಾಭನೃಪತಿರ್ಯೋ ವೈಜಯಂತೇಶ್ವರೋ
ಯಃ ಸ್ಯಾತ್ತೀರ್ಥಕರಃ ಸ ಸಪ್ತಮಭವೇ ಚಂದ್ರಪ್ರಭಃಪಾತುನಃ ॥

ಚಂದ್ರಪ್ರಭನು ತೀರ್ಥಂಕರನಾಗುವುದಕ್ಕೆ ಮುಂಚೆ ಆರುಜನ್ಮಗಳನು ತ್ತರಿಸಿ ಬಂದಂತೆಯೂ ಈತೀರ್ಥಂಕರರಿಗೆ ಗರ್ಭಾವತರಣ, ಜನ್ಮಾಭಿಷೇಕ, ಪರಿನಿಷ್ಕ್ರಮಣ, ಕೇವಲಜ್ಞಾನ, ನಿರ್ವಾಣಗಳೆಂಬ ಪಂಚಕಲ್ಯಾಣಂಗಳು ನಡೆಯುವುವೆಂದು ಚಂದ್ರಪ್ರಭಚರಿತದಿಂದ ಗೊತ್ತಾಗುತ್ತದೆ. ಇದು ಸುಲಭಶೈಲಿಯನುಳ್ಳದ್ದಾಗಿ ಚಂದ್ರಪ್ರಭನ ಹಿಂದಣ ತೀರ್ಥಂಕರರ ಉಪಾಖ್ಯಾನಗಳಿಂದ ಕೂಡಿ, ಆತ್ಮಾನಾತ್ಮ ವಿವೇಚನೆ, ಜೀವಕಾರುಣ್ಯ, ವಿಷಯಗರ್ಹಣ, ಜೀವನ್ಮುಕ್ತಿ ಮೊದಲಾದ ವಿಷಯಗಳಿಂದ ಕೂಡಿ ಲೋಕಬೋಧಕವಾಗಿದೆ. ಇದರ ೧೭ ಮತ್ತು ೧೮ನೆಯ ಸರ್ಗಗಳು ಜಿನೋತ್ಪತ್ತಿವರ್ಣನ ಮತ್ತು ಸಂಕ್ಷೇಪಜಿನಸಿದ್ಧಾಂತಕಥೆಗಳಿಂದ ಕೂಡಿದೆ. ಮಹಾಕಾವ್ಯಲಕ್ಷಣಕ್ಕೆ ತಕ್ಕಂತೆ ಅಲ್ಲಲ್ಲಿ ಗಿರಿ, ನದೀ, ಕಾನಾರ, ಆರಾಮ ಮೊದಲಾದವುಗಳ ವರ್ಣನೆಗಳು ಜೋಡಣೆಯಾಗಿವೆ. ಕಥೆಯಕಲ್ಪನಾಚತುರತೆಗಿಂತ ಮತಪ್ರಕಿಯಾವರ್ಣನೆಗಳೇ ಹೆಚ್ಚಾಗಿವೆ. ಹೆಚ್ಚೇಕೆ! ಜೈನಮತದ ಮುಖ್ಯ ತತ್ವಗಳೆಲ್ಲಾ ಸಾಮಾನ್ಯವಾಗಿ ಈ ಒಂದು ಕಾವ್ಯದಲ್ಲಿ ಅಡಗಿರುವುದೆಂದರೆ ಅತ್ಯುಕ್ತಿಯಾಗದು. ಕಥಾಭಾಗವು ಒಂದಾದರೆ ವರ್ಣನಾಭಾಗವು ಹತ್ತರಷ್ಟು ಹೆಚ್ಚಾಗಿರುವುದು. ಇದರಲ್ಲಿ ಮೊದಲನೆಯವನಾದ ಶ್ರೀವರ್ಮನ ಚರಿತೆಯನ್ನು ಮಾದರಿಗಾಗಿ ಬರೆಯುವೆವು:—

ಮಂಗಳಾವತೀ ರಾಜ್ಯಕ್ಕೆಮುಖ್ಯಪತ್ತನವಾದರತ್ನಸಂಜ(ಚ)ಯವೆಂಬುದನ್ನು ಕನಕಪ್ರಭನೆಂಬ ರಾಜನು ಪಟ್ಟಮಹಿಷಿಯಾದ ಸವರ್ಣಮಾಲಾ ಎಂಬುವಳೊಡನೆ ಸುಖದಿಂದ ರಾಜ್ಯವಾಳುತ್ತಿರುತ್ತ ಒಂದಾನೊಂದುದಿವಸ ಅಂತಃಪುರದ ಮೇಲ್ಚಾವಣಿಯಲ್ಲಿಕುಳಿತು ನೋಡುತ್ತಿರುವಾಗ ಸವಿಾಪವರ್ತಿಯಾದ ಹಳ್ಳದಲ್ಲಿ ನೀರನ್ನು ಕುಡಿಯುವುದಕ್ಕಾಗಿ ಬಂದ ಹಿಂಡುದನದಲ್ಲಿ ಒಂದು ಮುದಿ ಎತ್ತು ಕೆಸರಿನಲ್ಲಿ ಹೂತುಹೋಗಿ ಮರಣೋನ್ಮುಖವಾಗಿರುವುದನ್ನು ನೋಡಿ ಮನಸ್ಸಿನಲ್ಲಿ ಕಡು ನೊಂದು ವೈರಾಗ್ಯವನ್ನು ತಾಳಿ ಮಗನಾದ ಪದ್ಮನಾಭನಿಗೆ ರಾಜ್ಯವನ್ನು ಕೊಟ್ಟು ತಪಶ್ಚರಣಕ್ಕಾಗಿ ಅರಣ್ಯಕ್ಕೆ ಹೊರಟನು. ಪದ್ಮನಾಭನು ತಂದೆಯಿಂದ ಕೊಡಲ್ಪಟ್ಟ ರಾಜ್ಯವನ್ನು ಪರಿಪಾಲಿಸುತ್ತ ತನ್ನ ಮಗನಾದ ಸುವರ್ಣನಾಭನಿಗೆ ಯುವರಾಜ ಪಟ್ಟವನ್ನಿತ್ತು ತಾನು ರಾಜಭೋಗಗಳನ್ನನುಭವಿಸುತ್ತ ಸುಖದಿಂದಿರುತ್ತಿರಲು ಒಂದಾನೊಂದುದಿವಸ ವನಪಾಲಕನೊಬ್ಬನು ರಾಜಸಮ್ಮುಖಕ್ಕೆ ಬಂದು ಜಯ್ಯಾ! ನಮ್ಮ ಉಪವನಕ್ಕೆ ಶ್ರೀಧರನೆಂಬ ಒಬ್ಬಾನೊಬ್ಬ ತಪಸ್ವಿಯು ಬಂದಿರುವುದಾಗಿ ಹೇಳಿದುದನ್ನು ಕೇಳಿ ಮುನಿದರ್ಶನಕ್ಕಾಗಿ ಮಿತಪರಿವಾರದೊಡನೆ ಹೋಗಿ ಬದ್ಧಾಂಜಲಿಪುಟನಾಗಿ ನಮಸ್ಕರಿಸಿ ಮುನಿಯಿಂದ ಆಶೀರ್ವಾದವನ್ನು ಹೊಂದಿನಿಂತು

ಕೊಂಚಹೊತ್ತಿನ ಅನಂತರ ರಾಜನು ಜೀವಾಜೀವ ವಿಚಾರವನ್ನು ಮುನಿಯೊಡನೆ ಪ್ರಶ್ನಿಸುತ್ತಾ ತನ್ನ ಪೂರ್ವಜನ್ಮ ವಿಚಾರವನ್ನು ಕುರಿತು ಮುನಿಯನ್ನು ಕೇಳಲು ಮುನಿವರನು ಹೀಗೆಂದನು :—

. ಶ್ರೀಪುರವೆಂಬ ರಾಜಧಾನಿಯುಳ್ಳ ಸುಗಂಧದೇಶವನ್ನು ಶ್ರೀಷೇಣನೆಂಬ ರಾಜನು ಶ್ರೀಕಾಂತೆಯೆಂಬ ಸತಿಯೊಡಗೂಡಿ ರಾಜ್ಯವಾಳುತ್ತ ಸುಖದಿಂದ ಬಹು ಕಾಲ ಕಳೆದರಾದರೂ ಪುತ್ರಸಂತಾನವಿಲ್ಲದುದಕ್ಕಾಗಿ ಚಿಂತಿಸುತ್ತಿದ್ದು ಒಂದಾ ನೊಂದುದಿವಸ ಉದ್ಯಾನ ವಿಹಾರಕ್ಕೆಂದು ಹೋಗಿ ಅಲ್ಲಿ ಅಕಸ್ಮಾತ್ತಾಗಿ ದರ್ಶನವಿತ್ತ ಚಾರಣಮುನಿಯನ್ನು ಕಂಡು ಸ್ತುತಿಸಿ ನಮಸ್ಕರಿಸಿ ಎಲೈ ! ಮಹಾಭಾಗನೇ ! ನನ್ನ ಮನಸ್ಸು ಅಶಾಂತವಾಗಿರಲು ಕಾರಣವೇನೆಂದು ವಿನಯದಿಂದ ಕೇಳಿದುದಕ್ಕೆ ಆ ಮುನಿಯು ಕರುಣೆಗೊಂಡು ಭೂಪಾಲ ! ನಿನಗೆ ಸಂತಾನವಾಗುವವರೆಗೂ ಮನ ಶ್ಶಾಂತಿಯು ದೊರಕದು. ನೀನು ನಂದೀಶ್ವರನನ್ನಾರಾಧಿಸು. ಪುತ್ರಸಂತಾನ ವಾಗುವುದು ಎಂದು ಹೇಳಿಹೋಗಲು ಮುನಿಯಾಣತಿಯಂತೆ ನಂದೀಶ್ವರನನ್ನಾರಾಧಿ ಸಿದ ಕೆಲವುಕಾಲಕ್ಕೆ ರಾಣಿಯು ಗರ್ಭಿಣಿಯಾಗಿ ಮುಂದಣ ತೀರ್ಥಂಕರನಾದ ಶ್ರೀವ ರ್ಮನೆಂಬ ಕುಮಾರನನ್ನು ಪ್ರಸವಿಸಿದಳು. ಹೀಗೆ ಕೆಲವುಕಾಲ ಕಳೆಯಲು ಶ್ರೀವ ರ್ಮನು ವಿವಾಹಯೋಗ್ಯನಾದುದನ್ನರಿತು 'ಪ್ರಭಾವತಿ' ಎಂಬ ಕನ್ಯೆಯನ್ನು ಪಾಣಿ ಗ್ರಹಣಮಾಡಿಸಿ ಕುಮಾರನಿಗೆ ಯುವರಾಜ ಪದವಿಯನಿತ್ತು ಸುಖದಿಂದಿರುತ್ತ ಒಂದಾನೊಂದುದಿವಸ ಆಕಾಶದಿಂದ ಬಿದ್ದು ಹೋಗುತ್ತಿರುವ ನಕ್ಷತ್ರವನ್ನು ನೋಡಿ ಸಂಸಾರದ ಅನಿತ್ಯತೆಯನ್ನು ತಿಳಿದು ವಿರಕ್ತನಾಗಿ ವಿಷಯಗರ್ಹಣಮಾಡಿ ರಾಜ್ಯ ವನ್ನು ಮಗನಿಗೆ ಒಪ್ಪಿಸಿ ಶ್ರೀಪ್ರಭಮುನಿಯ ದರ್ಶನಲಾಭದಿಂದ ತಪಸ್ಸನ್ನಾಚರಿಸಿ ಕೊನೆಗೆ ಕೈವಲ್ಯವನ್ನು ಹೊಂದಿದನು. ಶ್ರೀವರ್ಮನು ರಾಜೋಚಿತ ಧರ್ಮಮಂ ಕೈಗೊಂಡು ದಿಗ್ವಿಜಯಕ್ಕಾಗಿ ಹೊರಟು ವಿಜಯಿಯಾಗಿ ಹಿಂತಿರುಗಿ ಶ್ರೀಪುರಕ್ಕೆ ಬಂದು ಸುಖದಿಂದಿರುತ್ತಿರಲು ಶರತ್ಕಾಲದ ಒಂದಾನೊಂದುದಿವಸ ಬಿಳುಪುಗಟ್ಟಿದ ಮೋಡವನ್ನು ನೋಡಿ ಬೇಸತ್ತು ಪುತ್ರನಾದ ಶ್ರೀಕಾಂತನಿಗೆ ರಾಜ್ಯಭಾರವನೊಪ್ಪಿಸಿ ಅರಣ್ಯವನ್ನು ಹೊಕ್ಕು ತಪವನಾಚರಿಸಿ ಸೌಧರ್ಮದಲ್ಲಿ ಶ್ರೀಧರಾಖ್ಯದೇವನಾಗಿ ಜನ್ಮಿಸಿದನು. ಇಂತು ಶ್ರೀವರ್ಮನ ಚರಿತೆಯು ಹೇಳಿ ಚಂದ್ರಪ್ರಭತೀರ್ಥಂಕರ ಚರಿತದೊಡನೆ ಮುಗಿಸಲ್ಪಟ್ಟಿರುವುದು.

ಕಹಿಮದ್ದಂ ಸವಿಯಲಾರದ ರೋಗಿಗೆ ಜೇನನ್ನುಸೇರಿಸಿ ಉಣಲಿಡುವಂತೆ ವಿಷಯವ್ಯಾಪ್ತವಿಶ್ವಕ್ಕೆ ಜೈನಮತದ ತತ್ವನಿರೂಪಣದ ಜೊತೆಗೆ ಬೇಕುಬೇಕಾದಷ್ಟು ವರ್ಣನೆಗಳನ್ನು ಸಾಕುಸಾಕಾದಷ್ಟು ಕೂಡಿಸಿಹೇಳಿ ಕಾವ್ಯವನ್ನು ಸೊಗಸುಮಾಡಿರು ವನು. ಹೀಗೆ ಪ್ರತಿಕಥೆಯಲ್ಲಿಯೂ ವೈರಾಗ್ಯಪ್ರಾಪ್ತಿ, ಮುನಿದರ್ಶನ, ಜಿನಮತದ ತತ್ವನಿರೂಪಣವಿರುವುದು

ಮಾದರಿಗಾಗಿ ಇದರ ಕೆಲವು ಶ್ಲೋಕಗಳು :—ಮರಣೋನ್ಮುಖವಾಗುತ್ತಿದ್ದ ಮುದಿ ಎತ್ತನ್ನು ನೋಡಿ ವೈರಾಗ್ಯಗೊಂಡ ಕನಕಪ್ರಭನ ಮನೋವಾಣಿಯು ಹೇಳಿಕೆ.—

ಕ್ಷಣಭಗುರವೃತ್ತಿ ಜೀವಿತಂ ಭವಭಾಜಾಮಿತಿನಾತ್ರವಿಸ್ಮಯಃ
ತದಿಹಾದ್ಭುತಮೇತದೀದೃಶಂ ಯದವಸ್ಥ್ಯಧ್ರುವಮಪಿಪ್ರಮುಹ್ಯತೇ ॥
ಚಂ. ಚ. ೧—೬೭

ಅಯ್ಯೋ! ಪ್ರಪಂಚದಲ್ಲಿ ಜನ್ಮಿಸಿದ ಪ್ರತಿಯೊಂದು ಪ್ರಾಣಿಯ ಜೀವಿತವು ಕೇವಲ ನಶ್ವರವೆಂಬುದೇನೂ ಆಶ್ಚರ್ಯವಾಗಿ ತೋರುವುದಿಲ್ಲ. (ಅದು ಪ್ರತಿದಿವಸದ ಅನುಭವ) ಆದರೆ ತಿಳಿದವರೆನಿಸಿಕೊಂಡಿರುವವರು ತಿಳಿದೂ ತಿಳಿದೂ ತಾವು ಶಾಶ್ವತರಾಗಿರುವರಂತೆ ಯೋಚಿಸಿನಡೆಯುತ್ತಿರುವುದೆಂಬುದೊಂದೆ ಆಶ್ಚರ್ಯಕರವಾದುದು.

ಮಲ್ಲಿಗೆಯ ವರ್ಣನೆ : —

ಜಯಶಬ್ದಂ ವಯಃ ಶಬ್ದೈಃ ಕುರ್ವತ್ಯಾಃ ಕಾನನಶ್ರಿಯಃ
ದಂತಾವಳಿರಿವಾಭಾತಿ ಕುಂದಕುಡ್ಮಲಸಂಹತಿಃ ॥ ೨—೧೮.

ಪಕ್ಷಿಗಳ ಕಲಕಲ ಶಬ್ದದಿಂದ ಮುನಿಗೆ ಜಯಶಬ್ದವನ್ನುಚ್ಚರಿಸುತ್ತಿರುವ ಉದ್ಯಾನಲಕ್ಷ್ಮಿಯ ದಂತಪಂಙ್ತಿಗಳೋ ಎಂಬಂತೆ ಉಪವನದ ಮಲ್ಲಿಗೆಯಮೊಗ್ಗುಗಳು ರಾಜಿಸುತ್ತಿದ್ದವು.

ಕೃತ್ಸ್ನಕರ್ಮಕ್ಷಯೋಮೋಕ್ಷೋ ಭವ್ಯಸ್ಯಪರಿಣಾಮಿನಃ
ಜ್ಞಾನದರ್ಶನಚಾರಿತ್ರ ತ್ರಯೋಪಾಯಃ ಪ್ರಕೀರ್ತಿತಃ ॥ ೧೮—೧೨೩
ತತ್ಪ್ರಕಾಶಿಕಂ ಜ್ಞಾನಂದರ್ಶನಂತತ್ಪರೋಚಕಂ
ಪಾಪಾರಂಭಪರಿತ್ಯಾಗಶ್ಚಾರಿತ್ರಮಿತಿಕಥ್ಯತೇ ॥ ೧೮—೧೨೪
ಸಂಸಾರವ್ಯಾಧಿವಿಧ್ವಂಸೇಭಾವ್ಯಮಾನವಿದಂತ್ರಯಂ
ಹೇತುರೇಕಾಂಗವಿಕಲೋನಹೇತುರಿವಭೇಷಜಂ ॥೧೮—೧೨೫

ಕರ್ಮಕ್ಷಯದಿಂದ ಮೋಕ್ಷ ಹೊಂದುವುದಕ್ಕೆ ಜ್ಞಾನ, ದರ್ಶನ, ಚಾರಿತ್ರಗಳೆಂಬ ಮೂರು ಉಪಾಯಗಳೆಂದು ಹೇಳಲ್ಪಟ್ಟಿರುವುದು. ಜೀವಾದಿಸಪ್ತತತ್ವಗಳ (ಜೀವ ಅಜೀವ, ಆಸ್ರವ, ಬಂಧ, ಸಂವರ, ನಿರ್ಜರ, ಮೋಕ್ಷಗಳೆಂಬುದೇ ಜೀವಾದಿಸಪ್ತತತ್ವಗಳು) ಯಾಥಾತ್ಮ್ಯವನ್ನು ತಿಳಿಯುವುದೇ ಜ್ಞಾನವೆಂದೂ ಇಂತಹ ಸಪ್ತತತ್ವಗಳನ್ನು ತಿಳಿಯಬೇಕೆಂಬ ಅಪರಿಹಾರ್ಯವಾದ ಅತ್ಯಾಸಕ್ತಿಗೆ ದರ್ಶನವೆಂದೂ ಪಾಪಾರಂಭ ಪರಿತ್ಯಾಗವೇ ಚಾರಿತ್ರಕವೆಂದೂ ಹೇಳಲ್ಪಟ್ಟಿರುವುದು. ಸಂಸಾರವೆಂಬ ವ್ಯಾಧಿನಾಶಕ್ಕೆ ಈ ಮೂರು ರತ್ನಗಳೇ(ಜ್ಞಾನ, ದರ್ಶನ, ಚಾರಿತ್ರ)ಭಾವಿಸಲ್ಪಡತಕ್ಕವುಗಳು ಹೊರ್ತು ಮತ್ತಾವುದರಿಂದಲೂ ನಿವಾರಿಸಲ್ಪಡತಕ್ಕವುಗಳಾಗುವುದಿಲ್ಲ.

ವಾ ಧೀ ಭ ಸಿ ಂ ಹ

"ಅಯಮಂವಾದೀಭಸಿಂಹಃ ಕವಿರ್ದಿಗಂಬರಜೈನೋ ಯತಿಃ ಪುಷ್ಪಸೇನ ಮುನೇ ರಂತೇವಾಸೀಚ | ಅಸ್ಯಾನಿತರಸಾಧಾರಣೀಂ ನೈಪುಣೀಂಪಶ್ಯಂತಃ ಪಂಡಿತಾಃ **ವಾದೀಭಸಿಂಹ** ಇತಿನಾಮಚಕುರಿತಿಪ್ರತೀಯತೇ | ಸಾಂಸ್ಕಾರಿಕಂತು ನಾಮಓಡಯದೇವಃ ಇತ್ಯವಗಮ್ಯತೇ||"

ಎಂದು ಹೇಳಲ್ಪಟ್ಟಿರುವುದರಿಂದ ಇವನ ಮೊದಲಿನ ಹೆಸರು ಓಡಯದೇವ ನೆಂದೂ ಇವನ ಅಸಾಧಾರಣ ಪಾಂಡಿತ್ಯಕ್ಕೆ ಮೆಚ್ಚಿ ಪಂಡಿತರು **ವಾದೀಭಸಿಂಹ** ನೆಂದು ಕರೆದುದಾಗಿಯೂ ಇವನು ದಿಗಂಬರಜೈನ ಯತಿಯೆಂದೂ ಪುಷ್ಪಸೇನ ಮುನಿಯ ಅಂತೇವಾಸಿಯೆಂದೂ ಗೊತ್ತಾಗುತ್ತದೆ. ಇದೇ ವಿಚಾರವು ಈ ಶ್ಲೋಕ ಗಳಿಂದಲೂ ಸಿದ್ಧಪಡುತ್ತದೆ.

ಶ್ರೀಪುಷ್ಪಸೇನಮುನಿನಾಥ ಇತಿ ಪ್ರತೀತೋ
ದಿವ್ಯೋಮುನರ್ಮಮಸದಾಹೃದಿ ಸಂನಿಧತ್ತಾಂ
ಯಚ್ಛಕ್ತಿತಃ ಪ್ರಕೃತಿಮೂಢಮತಿರ್ಜನೋಪಿ
ವಾದೀಭಸಿಂಹ ಮುನಿಪುಂಗವತಾಮುಪೈತಿ ।

ಎಂದೂ,

" ಶ್ರೀಮದ್ವಾದೀಭಸಿಂಹೇನಚಿರಾದಾಸ್ಥಾನಭೂಷಣಃ
ಸ್ಥೇಯಾದೋಡಯದೇವೇನವಾದೀಭಹರಿಣಾಕೃತಃ "

ಎಂದೂ,

" ಕವಿತ್ವಸ್ಯ ಪುರಾಸೀಮಾವಾಗ್ಮಿತ್ವಸ್ಯ ಪರಂಪದಂ
ಗಮಕೆತ್ವಸ್ಯ ಪರ್ಯಂತೋ ವಾದಿಸಿಂಹೋಚ್ಯತೇನಕೈಃ "

ಎಂದೂ,

" ಪ್ರವಾದಕರಿಯೂಥಾನಾಂ ಕೇಸರೀನಯಕೇಶರಃ "

ಎಂದು ಹೇಳಲ್ಪಟ್ಟಿರುವುದರಿಂದಲೂ ವಾದದಲ್ಲಿ ಎದುರಾಳಿಯನ್ನು ಜಯಿಸು ತ್ತಿದ್ದನಾದುದರಿಂದ ಇವನು '**ವಾದೀಭಸಿಂಹ**' ಎಂದು ಕರೆಯಿಸಿಕೊಂಡುದಾಗಿ ತೋರುತ್ತದೆ. ಇವನು ದಾಕ್ಷಿಣಾತ್ಯನಾಗಿರಬೇಕೆಂದು ಬಹುತರ ಬೋಧೆಯಾಗು ತ್ತದೆ. ಇವನ ತಾಯಿತಂದೆಗಳಾರೆಂಬದು ತಿಳಿಯದು.

ಕಾಲ:—ಇವನು ಕಾದಂಬರೀಕಾರನಾದ ಬಾಣನನ್ನೂ ಜೀವಂಧರಚಂಪೂ ಕಾರನಾದ ಎರಡನೆಯ ಹರಿಚಂದ್ರನನ್ನು ಹೇಳಿಕೊಂಡಿರುವುದರಿಂದ ಹರಿಚಂದ್ರನಿ ಗಿಂತ ಈಚಿನವನೂ ಕ್ರಿ. ಶ. ಹತ್ತನೆಯ ಶತಮಾನದವನೆಂದೂ ಖಂಡಿತವಾಗುವುದು.

* ಗದ್ಯಚಿಂತಾಮಣಿ ಲಂಬಕ. ೧—೬

ಗ್ರಂಥಗಳು:—" ಕ್ಷತ್ರಚೂಡಾಮಣಿ, ಗದ್ಯಚಿಂತಾಮಣಿಶ್ಚೇತಿ, ದ್ವಾವೇವ ಗ್ರಂಥಾವೇತತ್ಕೃತಾವುಪಲಭ್ಯತೇ " ಎಂದು ಹೇಳಿರುವುದರಿಂದ ಪ್ರಕೃತ ಉಪಲಬ್ಧವಾಗಿ ಇವನು ಬರೆದುದಾಗಿರುವ **ಕ್ಷತ್ರಚೂಡಾಮಣಿ, ಗದ್ಯಚಿಂತಾಮಣಿ** ಎಂಬೆರಡು ಗ್ರಂಥಗಳು ದೊರೆಯುತ್ತವೆ.

ಕ್ಷತ್ರಚೂಡಾಮಣಿಯೆಂಬುದು ಹನ್ನೊಂದು ಲಂಬಕಗಳೊಡಗೂಡಿರುವ ಚಂಪೂಗ್ರಂಥ. ಗದ್ಯಚಿಂತಾಮಣಿಯಲ್ಲಿಯೂ ಹನ್ನೊಂದು ಲಂಬಕಗಳಿದ್ದು ಹೆಸರಿಗೆ ತಕ್ಕಂತೆ ಗದ್ಯಗ್ರಂಥವಾಗಿರುವುದು. ಕಥಾವಿಚಾರವು ಇವುಗಳೆರಡರಲ್ಲಿಯೂ ಒಂದೇ ಆಗಿರುವುದು. ಇವನು ಏಕವಿಷಯಕವಿಚಾರವನ್ನು ತೆಗೆದುಕೊಂಡು ಗದ್ಯಪದ್ಯಗಳೆರಡರಲ್ಲಿಯೂ ಏಕೆ ಬರೆದನೆಂದರೆ ಕ್ಷತ್ರಚೂಡಾಮಣಿಯು ಮೊದಲು ಬರೆಯಲ್ಪಟ್ಟುದಾಗಿ ಅದು ಕೇವಲ ಪಂಡಿತಮಾನ್ಯವಾಗಿ ತೋರಿದುದರಿಂದಲೂ ಹರಿಚಂದ್ರವಿರಚಿತವಾದ ಜೀವಂಧರಚರಿತ ಚಂಪೂಕಾವ್ಯವನ್ನು ನೋಡಿ ಲೋಕವು ಆನಂದಪಡುತ್ತಿದ್ದುದನ್ನರಿತು ಬೇರೆಬೇರೆಯೇ ಬರೆಯಲಾಶಿಸಿ ಅದರಂತೆ ಕಥೆಯನ್ನು ಗದ್ಯರೂಪದಲ್ಲಿ ಬರೆದು ಗದ್ಯಚಿಂತಾಮಣಿಯೆಂದು ಕರೆದಿರಬೇಕಾಗಿ ನಮಗೆ ತೋರುತ್ತದೆ. ಇವೆರಡರಲ್ಲಿಯೂ ಹಿಂದೆ ಹೇಳಲ್ಪಟ್ಟಿರುವ ಜೀವಂಧರ ಚರಿತವೇ ಕಥಾವಸ್ತು. ಇವನು ಬಾಣನ ಕಾದಂಬರಿಯನ್ನೂ ಹರಿಚಂದ್ರನ ಚಂಪೂವನ್ನೂ ಆದರ್ಶವಾಗಿಟ್ಟುಕೊಂಡು ಬರೆದುದಾಗಿ ತೋರುವುದರಿಂದ ಸಮಾನಾಭಿಪ್ರಾಯಗಳುಳ್ಳ ಅನೇಕ ವಿಚಾರಗಳು ಹಾಗೆಹಾಗೆಯೇ ಕೆಲವುಕಡೆ ಕೊಂಚಮಾರಿಸಿಬರೆದಿರುವಂತಿದೆ. ಈ ಕಾವ್ಯದಲ್ಲಿ ಪದಲಾಲಿತ್ಯ, ನಿರರ್ಗಳವಾಗ್ವೈಖರಿ, ಶ್ರಾವ್ಯಶಬ್ದಪದವಿನ್ಯಾಸ, ಧರ್ಮೋಪದೇಶ ಮೊದಲಾದುವು ಯೋಗ್ಯರೀತಿಯಿಂದ ವರ್ಣಿತವಾಗಿವೆ. ಗದ್ಯಚಿಂತಾಮಣಿಯಲ್ಲಿ ಗರ್ಭಿಣಿಯಾದ ವಿಜಯಾದೇವಿಯವರ್ಣನವು ಹೀಗಿರುವುದು.—

" ಅಥಕತಿಪಯದಿವಸಾಪಗಮೇ ಪರಿಣತಶರಸಾಂಡುನಾ ಕಪೋಲಯೋಃ ಕಾಂತಿಮಂಡಲೇನ ತುಹಿನಮಹಸಮಿವ ವಾಸವೀ ದಿಶಾಶಂಸತಿ ಸ್ಮ ಗರ್ಭೇ ಗರ್ಭರೂಪಸ್ಯಪರಿಣಾಮಂಹರಿಣಾಕ್ಷ್ಯೇ | ಕಾಷ್ಠಾಂಗಾರಕಾನನ ದಿಧಕ್ಷಯಾ ಜ್ವಲಿಷ್ಯತಃ ಸುತಪ್ತಾಪಾನಲಸ್ಯಧೂಮಕಂದಲ ಇವ ಕಾಲಿಮಾ ಕುಚಚೂಚಕಯೋರದೃಶ್ಯತ | ತನಯಮನಸಃ ಪ್ರಸಾದ ಇವ ಬಹಿಃಪ್ರಸೃತಶ್ಚಕ್ಷುಷೋರಲಕ್ಷ್ಯತಧವಲಿಮಾ | ನಿಖಿಲಜನದೌರ್ಗತ್ಯ ದುಃಖದ್ರುಹಿ ಗತವತಿ ಗರ್ಭಮರ್ಭಕೇ ಬಿಭೃತೀವ ಭೀತಿಮುದರಾದತಿ ದೂರಂ ದರಿದ್ರತಾ ಪ್ರಾದ್ರವತ್ | ಬುಧ್ದ್ವೇವಭಾವಿನಂ ಸ್ನುಷಾಭಾವಮು ಭವದವನೌ ಪದನ್ಯಾಸಪರಾಙ್ಮುಖೀ | ಗರಿಮ್ಣಾ ಗರ್ಭೇಸಮುಪೇಯುಷಿ

ದುರ್ಧರತಾಂ ಕ್ಲೇಶಿತಾಧರಪಲ್ಲವಾಶ್ಚಾಮರಪವನಾ ಇವ ದೌಃಕೃದಶ್ರಿ
ಯಃ ಪ್ರತಿಕ್ಷಣಂನಿಃಶ್ವಾಸಾಃ ಪ್ರಾಸರ್ಪ | ನಿಖಿಲಭುವನವಾಸ್ತವ್ಯಾನಾಂ
ವಸ್ತೂನಾಂ ಭೋಕ್ತಾರಮಾತ್ಮಜಮಾವೇದಯಂತೀವ ವಿವಿಧರಸಾಸ್ವಾದ
ಲಾಲಸಾ ಸಮಜನಿ ರಾಜ್ಞೀ | ಪರಿಜನವನಿತಾಕರಪಲ್ಲವಾತ್ಪಾದಯುಗಳ
ಗಳಮಾಕೃಷ್ಯ ಪಾರ್ಥಿವಮಕುಟಮಣಿಶಿಲಾಶಯನೇಷು ಶಾಯಯಿತು
ಮಚಕಮತಕಮಲಾಕ್ಷೀ| ಅಪಿ ಭೂಷಣಾನಾಮುದ್ವಹನೇ ಕ್ಲಾಮ್ಯದಂಗ
ಯಷ್ಟಿಸ್ತ್ರಯಾಣಾಮಪಿವಿಷ್ಟಪಾನಾಂ ಭಾರಮಸಶಿಖರೇ ನಿವೇಶಯಿತು
ಮುದಕಂತಕಂಬುಕಂಠೀ || ”

ಜೀವಂಧರನಿಗೆ ಮಾಡಿದ ಗುರೂಪದೇಶದ ಕೆಲವು ಭಾಗವನ್ನೆತ್ತಿ ಬರೆ
ಯುವೆವು :—

“ ವತ್ಸ ! ಬಲನಿಸೂದನಪುರೋಧಸಮಪಿ ಸ್ವಭಾವತೀಕ್ಷ್ಣಯಾ ಧಿಷಣಯಾ
ಧಿಕ್ಕುರ್ವತಿ ಸರ್ವಪಥಿನಪಾಂಡಿತ್ಯೇ ಭವತಿ ಪಶ್ಯಾಮಿನಾವಕಾಶಮುಪ
ದೇಶಾನಾಂ | ತದಪಿಕಲಶಭವಸಹಸ್ರೇಣಾಪಿ ಕಬಲಯಿತುಮಶಕ್ಯಃ ಪ್ರಲ
ಯತರಣಿಪರಿಷದಾಪ್ಯಲೋಷ್ಯೋ ಯೌವನಜನ್ಮಾಮೋಹಮಹೋದಧಿಃ |
ಅಶೇಷಭೇಷಜಪ್ರಯೋಗವೈಫಲ್ಯನಿಷ್ಪಾದನದಕ್ಷೋ ಲಕ್ಷ್ಮಿಕಟಾಕ್ಷವಿಕ್ಷೇ
ಪವಿಸರ್ಪಿದರ್ಪಜ್ವರಃ ಪುರೋವರ್ತ್ಯಪಿ ವಸ್ತು ನ ವಿಲೋಕಯಿತುಂ ಪ್ರಭ
ವತಃ ಪ್ರಭೂತೈಶ್ವರ್ಯಮದಕಾಚಕಂಚುಕಿತರೋಚಿಷೀ ಚಕ್ಷುಷೀ| ಮಂದೀ
ಕೃತಮಣಿಮಂತ್ರೌಷಧಿಪ್ರಭಾವಃ | ಪ್ರಭಾವನಾಟಕನಟನಸೂತ್ರಧಾರಃ
ಸ್ಮಯಾಪಸ್ಮಾರಃ | ಪಾತಾಲವಿವರಪತಿತವಿಶ್ವಂಭರಾಸಮುದ್ಧರಣಧೀರೋ
ಮುರಾರಿರಪಿವರಾಹರೂಪಿ ನಾಲಮುದ್ಧರ್ತುಮುದರ್ಕವಿಷಮವಿಷಯಾ
ಭಿಲಾಷಬಹಲಜಂಬಾಲಜಾಲಮಗ್ನಂಮನಃ ಸಕಲಸಾಗರ ಸಲಿಲ ಪೂರೇ
ಣಾಪಿ ನ ಪಾರ್ಯತೇ ಕ್ಷಾಲಯಿತುಮುತ್ತಾಲರಾಗಪರಾಗಪಟಲಪರಿಷ್ವಂ
ಗ ಸಂಗಿಮಾಲಿನ್ಯಂ | ಅವಸ್ಥಾವಿಷಮವಿಷಮೋಕ್ಷಭೀಷಣ ರಾಜಲಕ್ಷ್ಮೀ
ಭುಜಂಗೀ ಇತಿಕಿಂಚಿದಿಹವಿಕ್ಷ್ಯಸೇ | ಅವಿನಯವಿಹಂಗಲೀಲಾವನಂ ಯೌ
ವನಂ ; ಅನಂಗಭುಜಂಗನಿವಾಸರಸಾತಲಂಸೌಂದರ್ಯಂ ; ಸ್ವೈರವಿಹಾರ
ಶೈಲೂಷನೃತ್ತಾಸ್ಥಾನಮೈಶ್ವರ್ಯಂ ಪೂಜ್ಯಪೂಜಾವಿಲಂಘನ ಲಘಿಮ
ಜನನೀ ಮಹಾಸತ್ತ್ವತಾ ಚ ಪ್ರತ್ಯೇಕಮಪಿ ಭವತಿ ಜನಾನಾಮನ
ರ್ಥಾಯ | ಚತುರ್ಣಾಂ ಪುನರೇತೇಷಾಮೇಕತ್ರಸಂನಿಪಾತಃಸದ್ಮ ಸರ್ವಾ
ನರ್ಥಾನಾ ಮಿತ್ಯರ್ಥೇಽಸ್ಮಿಕಾಸಂಶೀತಿಃ..... .”[1]

[1] ಗದ್ಯಚಿಂತಾಮಣಿ ಲಂಬಕ ೧ ಪುಟ ೨೦.

[2] ಗದ್ಯಚಿಂತಾಮಣಿ ಲಂಬಕ ೨ ಪುಟ ೪೧—೪೨.

ಇದನ್ನೋದುವ ಪ್ರತಿಯೊಬ್ಬನಿಗೂ ಬಾಣನ ಕಾದಂಬರಿಯಲ್ಲಿ ಶುಕನಾಸನು ಚಂದ್ರಾಪೀಡನಿಗೆ ಮಾಡಿದ ಉಪದೇಶವು ಜ್ಞಾಪಕಕ್ಕೆ ಬಾರದಿರದು, ಕ್ಷತ್ರಚೂಡಾಮಣಿಯ ಶ್ಲೋಕಗಳ ಕೆಲವನ್ನು ಮಾದರಿಗಾಗಿ ಬರೆಯುವೆವು.—

ಗುರುಲಕ್ಷಣ :—

ರತ್ನತ್ರಯವಿಶುದ್ಧಸ್ಸ್ವಾ ಪಾತ್ರಸ್ನೇಹೀಪರಾರ್ಥಕೃತ್
ಪರಿಪಾಲಿತಧರ್ಮೋ ಹಿ ಭವಾಬ್ಧೇಸ್ತಾರಕೋಗುರುಃ ॥

ರತ್ನತ್ರಯಂಗಳಾದ ಸಮ್ಯಗ್ದರ್ಶನ ಜ್ಞಾನ ಚಾರಿತ್ರಗಳಿಂದ ಪರಿಶುದ್ಧನಾಗಿ ಯೋಗ್ಯಪಾತ್ರದಲ್ಲಿ ದಾನಮಾಡುವುದರಲ್ಲಾಸಕ್ತನಾಗಿ ಪರಪ್ರಯೋಜನವೇ ತನ್ನ ದೆಂದು ಆಚರಿಸುತ್ತ ಯಾವನು ಧರ್ಮಪಾಲಕನಾಗಿರುವನೋ ಅವನು ಗುರುವೆನಿಸಿಕೊಳ್ಳುವನು.

ಶಿಷ್ಯನಲಕ್ಷಣ :—

ಗುರುಭಕ್ತೋ ಭವಾದ್ಭೀತೋ ವಿನೀತೋಧಾರ್ಮಿಕಸ್ಸುಧೀಃ
ಶಾಂತಸ್ತಾಂತೋಹ್ಯತಂದ್ರಾಳುಃ ಶಿಷ್ಯಃಶಿಷ್ಯೋಯಮಿಷ್ಯತೇ ॥
ಲಂಬಕ ೨—೩೧.

ಯಾವಾಗಲೂ ಗುರುಭಕ್ತನಾಗಿ, ಸಂಸಾರಭೀತನಾಗಿ, ವಿನೀತನೂ, ಧರ್ಮಿಷ್ಠನೂ ಆಗಿ ಕುಶಲಬುದ್ಧಿಯುಳ್ಳವನಾಗಿ ರಾಗದ್ವೇಷಾದಿರಹಿತ ನಿರ್ಮಲ ಮನಸ್ಸುಳ್ಳವನಾಗಿ ಸಂಗ್ರಹತ್ರಯಂಗಳಾದ ವಿದ್ಯಾ, ಧರ್ಮ, ಮೋಕ್ಷಸಂಗ್ರಹದಲ್ಲಿ ಜಾಗರೂಕನಾಗಿ ಶಾಸ್ತ್ರಾರ್ಥವಿಚಾರದಲ್ಲಿ ಭ್ರಾಂತಿದೂರನೂ, ದೃಢವಿಶ್ವಾಸಿಯೂ ಆಗಿರುವನು ಶಿಷ್ಯನೆನಿಸಿಕೊಳ್ಳುವನು.

ಹೇಯೋಪಾದೇಯವಿಜ್ಞಾನಂ ಸೋಚೇದ್ಯರ್ಥಶ್ರಮಶ್ರುತೌ
ಕಿಂವ್ರೀಹಿಮಂಡನಾಯಸ್ಯೈ ಸ್ತಂಡುಲಾನಾಮಸಂಭವೇ ॥
ಲಂಬ ೨—೪೪.

ಭತ್ತವನ್ನು ಎಷ್ಟುಕುಟ್ಟಿದರೂ ಅಕ್ಕಿಯುದೊರಕದೇ ಹೋದರೆ ಹಾಗೆ ಕುಟ್ಟುವಶ್ರಮವು ಹೇಗೆ ನಿರರ್ಥಕವೋ ಹಾಗೆ ಎಷ್ಟು ಓದಿದರೂ ಯುಕ್ತಾಯುಕ್ತವಿವೇಚನೆಯೇ ಇಲ್ಲವಾದರೆ ಅಥವಾ ಹುಟ್ಟದೇಹೋದರೆ ಅಂತಹ ಶಾಸ್ತ್ರಾಭ್ಯಾಸದಿಂದ ಏನೂ ಪ್ರಯೋಜನವಾಗದು.

ತತ್ಪಚ್ಛಾನಂ ಚ ಮೋಘಂ ಸ್ಯಾ ತ್ತದ್ವಿರುದ್ಧಪ್ರವರ್ತಿನಾಂ
ಪಾಣೌಕೃತೇನದೀಪೇನ ಕಿಂಕೂವೇಪತತಾಂಫಲಂ ॥ ೨—೪೫.

ಕೈಯಲ್ಲಿ ದೀಪವನ್ನು ಹಿಡಿದುಕೊಂಡು ಭಾವಿಯಲ್ಲಿ ಬೀಳುವುದಾದರೆ ಅಂತಹ ದೀಪದಿಂದ ಹೇಗೆ ಪ್ರಯೋಜನವಿಲ್ಲವೋ ಹಾಗೆಯೇ ಅಮೋಘವಾದ

ಶಾಸ್ತ್ರಾರ್ಥಂಗಳನ್ನು ಮನನಮಾಡಿಯೂ ನಿಷಿದ್ಧಕಾರ್ಯಪ್ರವರ್ತಕರಿಗೆ ಅಂತಹ ಶಾಸ್ತ್ರಾರ್ಥ ತತ್ವಜ್ಞಾನವೂ ನಿಷ್ಫಲವಾದುದೇ ಸರಿ.

ಸಜ್ಜನ ದುರ್ಜನರ ಸ್ವಭಾವವು ಹೀಗಿರುವುದು :—

ಅಪಕಾರೋಪಕಾರಾಭ್ಯಾಂ
ಸದಸಂತೌನಭೇದಿನೌ
ದಗ್ಧಂ ಚ ಭಾತಿಕಲ್ಯಾಣಂ
ಕೇನಾಂಗಾರವಿಶುದ್ಧತಾ ॥ ೧೦—೫೨

ಅಪಕಾರಮಾಡಿದವರಿಗೆ ಉಪಕಾರವನ್ನು ಮಾಡುವುದು ಸಜ್ಜನರ ಸಹಜ ಧರ್ಮ. ಸರ್ವತ್ರ ಅಪಕಾರವನ್ನು ಮಾಡುವುದು ದುರ್ಜನ ಧರ್ಮವಾದುದರಿಂದ ಉಪಕಾರವನ್ನು ಮಾಡಿದವರಿಗೆ ಅಪಕಾರವನ್ನು ಮಾಡುವುದು ದುರ್ಜನರ ಸಹಜ ಧರ್ಮವಾಗಿರುವುದು. ಹೇಗೆಂದರೆ ಭಂಗಾರವನ್ನು ಎಷ್ಟುಸಲ ಬೆಂಕಿಯಲ್ಲಿಹಾಕಿ ಕಾಸಿದರೂ ಪ್ರತಿಸಲಕ್ಕೂ ಹೆಚ್ಚಾಗಿ ಕಾಂತಿಯನ್ನು ಬೀರುವುದು ಸುವರ್ಣದ ಸಹಜಧರ್ಮ. ಏನು ಮಾಡಿದರೂ ಸ್ವಚ್ಛವಾಗದೆ ಕಪ್ಪಾಗಿಯೇ ಇರುವುದು ಇದ್ದಲಿನ ಸಹಜಧರ್ಮವಾಗಿರುವುದು.

ರಿಕ್ತಾರಿಕ್ತದತಾಯಾಂ ಚ
ಸದಸಂತೌ ನಭೇದಿನೌ
ಖಾತಾಪಿ ಹಿ ನದೀದತ್ತೇ
ಪಾನೀಯಂ ನ ಪಯೋನಿಧಿಃ ॥ ೧೦—೫೩.

ಹೊಳೆಯಲ್ಲಿ ನೀರು ಇಲ್ಲದೆ ಇರುವಾಗ ಎಷ್ಟು ಅಗೆದರೂ ಸಿಹಿನೀರೇ ದೊರಕುವಂತೆ ಸತ್ಪುರುಷರು ತಮಗೆ ಎಷ್ಟು ಬಡತನ ಬಂದಡಸಿದರೂ ಅವರ ಸಹಜ ಗುಣವಾದ ಉತ್ತಮ ಸ್ವಭಾವವನ್ನು ಬಿಡರು. ಸಮುದ್ರವು ಜಲಸಂಪತ್ಪರಿಪೂರ್ಣವಾಗಿರುವುದಾದರೂ ಉಪ್ಪುನೀರೇ ದೊರೆಯುವಂತೆ ದುರ್ಜನರು ಎಷ್ಟು ಸಂಪತ್ಪರಿಪೂರ್ಣರಾದರೂ ತಮ್ಮ ನೀಚಬುದ್ಧಿಯನ್ನು ಬಿಡರು.

೧೧ನೆಯ ಶತಮಾನ

ಕ್ಷೇಮೇಂದ್ರ

ಇವನು ಕಾಶ್ಮೀರದವನು. ಸಿಂಧುವಿನ ಮುಮ್ಮಗನು. ಪ್ರಕಾಶೇಂದ್ರನ ಮಗನು. ಇವನಿಗೆ ವ್ಯಾಸದಾಸನೆಂಬಾಪರನಾಮವಿದ್ದುದಾಗಿ.—

ಆಸೀತ್ಪ್ರಕಾಶೇಂದ್ರ ಇತಿಪ್ರಕಾಶಃ ಕಾಶ್ಮೀರದೇಶೇತ್ರಿದಶೇಶ್ವರಶ್ರೀಃ
ತಸ್ಯಾತ್ಮಜಸ್ಸರ್ವಮನೀಷಿಶಿಷ್ಯ ಶ್ರೀವ್ಯಾಸದಾಸಾಪರಪುಣ್ಯನಾಮಾ ॥

ಎಂಬುದರಿಂದ ಗೊತ್ತಾಗುತ್ತದೆ.

ಕಾಲ:—ಇವನು ಬರೆದಿರುವ ಔಚಿತ್ಯವಿಚಾರಚರ್ಚಾ, ಕವಿಕಂಠಾಭರಣ ಮತ್ತು ಸುವೃತ್ತತಿಲಕಗಳನ್ನು ಕಾಶ್ಮೀರದ ರಾಜನಾದ ಅನಂತರಾಜನ ಕಾಲದಲ್ಲಿ ಬರೆದುದಾಗಿ.—

ಕಾಶ್ಮೀರೇಷುಪೃಥುಪ್ರತಾಪಸವಿತುಃ ಕೀರ್ತ್ಯಂಶುತಾರಾಪತೇಃ
ಪ್ರೌಢಾರಾತಿವನಾನಲಸ್ಯ ಧನದಸ್ಯೇಂದ್ರಸ್ಯ ಭೂಮಂಡಲೇ
ವಿಶ್ವಾಕಾರವತಃ ಪುನಃ ಕಲಿಯುಗೇವಿಷ್ಣೋರಿನೋತ್ಸವಿನೋ
ರಾಜ್ಯೇ ಶ್ರೀಮದನಂತರಾಜನೃಪತೇಃ ಕಾವ್ಯೋದಯೋಯಂಕೃತಃ ॥

ಎಂಬ ಗ್ರಂಥಾಂತ್ಯ ಶ್ಲೋಕದಿಂದ ವ್ಯಕ್ತಪಡುತ್ತದೆ. 'ಸಮಯಮಾತೃಕಾ' ಗ್ರಂಥವನ್ನು ಆ ರಾಜನ ಆಳ್ವಿಕೆಯಲ್ಲಿ ಕ್ರಿ. ಶ. ೧೦೫೦ರಲ್ಲಿ ಬರೆದು ಮುಗಿಸಿದುದಲ್ಲದೆ ಅನಂತರಾಜನ ಮಗ ಕಲಶನ ಕಾಲದಲ್ಲಿ 'ದಶಾವತಾರ ಚರಿತ' ಎಂಬ ಗ್ರಂಥವನ್ನು ಬರೆದು ಮುಗಿಸಿದುದಾಗಿ ಹೇಳಿಕೊಂಡಿರುವನು. ಅನಂತರಾಜನು ಕ್ರಿ. ಶ. ೧೦೩೮-೧೦೬೦ರ ವರೆಗೆ ಕಾಶ್ಮೀರದಲ್ಲಿ ಆಳಿದನು. ಕ್ಷೇಮೇಂದ್ರನು ವಿದ್ಯಾವಿವೃತಿ ಅಥವಾ ಪ್ರತ್ಯಭಿಜ್ಞಾವಿವೃತಿವಿಮರ್ಶಿನೀ ಗ್ರಂಥಕಾರನಾದ ಅಭಿನವಗುಪ್ತಾಚಾರ್ಯನ ಬಳಿ ಸಾಹಿತ್ಯವನ್ನು ಕಲಿತುದಾಗಿ ಭಾರತಮಂಜರಿಯಲ್ಲಿ ಹೇಳಿಕೊಂಡಿರುವನು. ಅಭಿನವಗುಪ್ತನು ಕ್ರಿ. ಶ. ೧೦೧೪ರಲ್ಲಿ ಪ್ರತ್ಯಭಿಜ್ಞಾನದರ್ಶನ ವ್ಯಾಖ್ಯಾನವನ್ನು ಬರೆದನು. ಕ್ಷೇಮೇಂದ್ರನು ಅಭಿನವಗುಪ್ತನ ಬಳಿ ಸಾಹಿತ್ಯ ಪಾಠವನ್ನು ಮಾಡುವುದಕ್ಕೂ ಆಗಣಕಾಲದ ಕಾವ್ಯಗಳ ಪರಿಚಯವನ್ನು ಮಾಡಿಕೊಳ್ಳುವುದಕ್ಕೂ ಸುಮಾರು ೨೦-೨೫ ವರ್ಷಗಳ ವಯಸ್ಸಿನವನಾದರೂ ಆಗಿರಬೇಕೆಂದು ತೋರುವುದು. ಎಂದರೆ ಸುಮಾರು ಕ್ರಿ. ಶ. ೯೯೦ರಲ್ಲಿ ಹುಟ್ಟಿರಬೇಕು. ಇವನು ವಿರಾಗಿಯಾಗಿ ತ್ರಿಪುರೇಶಪರ್ವತದಲ್ಲಿದ್ದುಕೊಂಡು ಲೌಕಿಕವರ್ಷ ೧೦೪೧ ಅಥವಾ ಕ್ರಿ. ಶ. ೧೦೬೫ರಲ್ಲಿ ಆಳುತ್ತಿದ್ದ ಕಲಶನ ಕಾಲದಲ್ಲಿ 'ದಶಾವತಾರಚರಿತ'ವನ್ನು ಬರೆದು ಅನಂತರ ಕಾಲವಾಗಿರಬೇಕೆಂದು ಗೊತ್ತಾಗುತ್ತದೆ. ಈ ಕಾಲ

ಗಳಿಂದ ಇವನು ಕ್ರಿ. ಶ. ೧೧ನೆಯ ಶತಮಾನದ ಮಧ್ಯಕಾಲದವನೆನಬೇಕಾಗುವುದು. ಡಾ|| ಬುಹಲರವರು ಈ ಕಾಲವನ್ನೇ ಸಾಧಿಸಿರುವರು.

ಗ್ರಂಥ:— ೧. ಬೃಹತ್ಕಥಾಮಂಜರೀ
೨. ಭಾರತಮಂಜರೀ
೩. ರಾಮಾಯಣ ಮಂಜರೀ
೪. ಪವನಪಂಚಾಶಿಕಾ
೫. ಸುವೃತ್ತತಿಲಕ
೬. ವಿನಯವಲ್ಲಿ
೭. ಮುನಿಮತಮೀಮಾಂಸಾ
೮. ನೀತಿಲತಾ
೯. ಅವಿಧಾನಕಲ್ಪಲತಾ
೧೦. ಅವಸರಸಾರ
೧೧. ಲಲಿತರತ್ನಮಾಲಾ
೧೨. ಮುಕ್ತಾವಳೀಕಾವ್ಯ
೧೩. ಸಮಯಮಾತೃಕಾ
೧೪. ಸೇವ್ಯಸೇವಕೋಪದೇಶ
೧೫. ದಶಾವತಾರಚರಿತ
೧೬. ವಾತ್ಸ್ಯಾಯನ ಸೂತ್ರಸಾರ
೧೭. ಔಜಿತ್ಯವಿಚಾರಚರ್ಚಾ
೧೮. ಪದ್ಯಕಾದಂಬರೀ
೧೯. ಶಶಿವಂಶಮಹಾಕಾವ್ಯ
೨೦. ದೇಶೋಪದೇಶ
೨೧. ನರ್ಮಮಾಲಾ
೨೨. ಚಿತ್ರಭಾರತ ನಾಟಕ
೨೩. ಕನಕಜಾನಕೀ
೨೪. ಅಮೃತತರಂಗಕಾವ್ಯ
೨೫. ಚತುರ್ವರ್ಗಸಂಗ್ರಹ
೨೬. ಕವಿಕಂಠಾಭರಣ
೨೭. ದರ್ಪದಳನ
೨೮. ಕಲಾವಿಲಾಸ
೨೯. ಚಾರುಚರ್ಯಾ
೩೦. ಲಾವಣ್ಯವತೀ
೩೧. ರಾಜಾವಳಿ
೩೨. ಲೋಕಪ್ರಕಾಶಕೋಶ

ಕ್ಷೇಮೇಂದ್ರನು ಅಭಿನವಗುಪ್ತಾಚಾರ್ಯನ ಬಳಿಯಲ್ಲಿ ಓದಿದುದಲ್ಲದೆ ಭಾಗವತ ಸಂಪ್ರದಾಯದವರಾದ ಸೋಮ ಮತ್ತು ಗಾಂಗರ ಬಳಿಯಲ್ಲಿಯೂ ವಿದ್ಯಾಭ್ಯಾಸವನ್ನು ಮಾಡಿದುದಾಗಿ ಹೇಳಿಕೊಂಡಿರುವನು. ಇವನು ಕಾವ್ಯರಚನೆಗೆ ಅನಂತರಾಜನಕಾಲಕ್ಕಿಂತಲೂ ಹಿಂದೆ ಪ್ರಾರಂಭಿಸಿರಬೇಕಾಗಿ ತೋರುತ್ತದೆ. ಪೈಶಾಚಭಾಷೆಯಲ್ಲಿ ಗುಣಾಢ್ಯನು ಬರೆದುದಾದ 'ಬೃಹತ್ಕಥೆಯನ್ನು' ಸಂಸ್ಕೃತಭಾಷೆಯಲ್ಲಿ ಬರೆದು ಅದನ್ನು ಬೃಹತ್ಕಥಾಮಂಜರೀ ಎಂದು ಕರೆದಿರುವನು. ಅನಂತರ ಭಾರತಮಂಜರೀ ರಾಮಾಯಣಮಂಜರೀ ಎಂಬುವುಗಳನ್ನು ಬರೆದು ಮುಗಿಸಿ ವಾತ್ಸ್ಯಾಯನ ಸೂತ್ರಸಾರವನ್ನು ಬರೆದನು. ಆಗಣಕಾಲದಲ್ಲಿ ಪ್ರಸಿದ್ಧವಾಗಿದ್ದ ಸಕಲವಿದ್ಯೆಗಳಲ್ಲಿಯೂ ಪಾರಂಗತನಾಗಿ ಗಣಿತ ಜ್ಯೋತೀಷ ವೈದ್ಯಶಾಸ್ತ್ರ ರಾಜಕೀಯ ಸಾಮಾಜಿಕ ನೈತಿಕ ಮತ್ತು ಶೃಂಗಾರ ಶಾಸ್ತ್ರ ಮೊದಲಾದವುಗಳಲ್ಲಿ ಪ್ರವೀಣನಾಗಿದ್ದುದಲ್ಲದೆ ಬೌದ್ಧವೇದಾಂತತತ್ವ ಮಂತ್ರಶಾಸ್ತ್ರಗಳಲ್ಲಿಯೂ ನಿಪುಣ

[1] Cashmere Reports P. 46.

ನಾಗಿದ್ದನು. ಇವನು ರಾಮಾಯಣ ಭಾರತ ಬೃಹತ್ಕಥೆಗಳನ್ನು ಬರೆದನಾದುದರಿಂದ ಇವನು ಬರೆಯುವ ಗ್ರಂಥಗಳಿಗೆ ಕಥಾವಸ್ತುಗಳನ್ನು ಸುಲಭವಾಗಿ ದೊರಕಿಸಿ ಕೊಳ್ಳುವ ಸುಯೋಗವು ದೊರಕಿತು. 'ನೀತಿಲತಾ' ಎಂಬುದನ್ನು ರಾಮಾಯಣ ಮಂಜರಿಯ ಆಧಾರದಿಂದಲೂ 'ವಿನಯವಲ್ಲಿ'ಯನ್ನು ಭಾರತಮಂಜರಿಯ ಆಧಾರ ರಿಂದಲೂ ಬರೆದಿರುವನು. 'ಮುನಿಮತ ಮಿಮಾಂಸಾ' ಎಂಬುದು ಪ್ರಾಚೀನ ಋಷಿ ಗಳ ದೂಷಣೆಯಿಂದ ಕೂಡಿದುದಾಗಿರುವುದು. ಇವನು ಬರೆದಿರುವ ಪರಾಕ್ರಮ ವರ್ಣನ ರೂಪವಾದ ಶ್ಲೋಕಗಳನ್ನು ನೋಡಿದರೆ ವೇಣೀಸಂಹಾರಕಾರನಾದ ಭಟ್ಟ ನಾರಾಯಣನಿಗೂ ಮಹಾವೀರಚರಿತಕಾರನಾದ ಭವಭೂತಿಗೂ ಹೋಲಿಸಬಹು ದಾಗಿದೆ. ಶಬ್ದ, ಅಲಂಕಾರ ಮತ್ತು ಉಪಮಾನೋಪಮೇಯಗಳು ಇವನಿಗೆ ಹೃದ್ಗತ ವಾಗಿದ್ದುಯಾವುದನ್ನು ವರ್ಣಿಸಿದರೂ ಪ್ರತ್ಯಕ್ಷವಾಗಿ ನಡೆದಂತೆ ವರ್ಣಿಸುವುದು ಇವನ ಕೌಶಲವಾಗಿದ್ದುದಲ್ಲದೆ ಮೂಲಾಭಿಪ್ರಾಯಕ್ಕೆ ವಿರೋಧವಿಲ್ಲದಂತೆ ಹೇಳುವ ಜಾಣ್ಮೆಯನ್ನು ಹೊಂದಿದ್ದನು. ಹೀಗಾಗಿ ಮುಂದೆ ಮಹಾ ಕವಿಯಾಗುವುದಕ್ಕೆ ಬೇಕಾದ ಸಮಸ್ತ ವಿದ್ಯೆಗಳೆಲ್ಲವನ್ನೂ ಚಿಕ್ಕವಯಸ್ಸಿನಲ್ಲಿ ಕಲಿತು ದಾಗಿ 'ಕವಿಕಂಠಾಭರಣ'ದಲ್ಲಿ ಹೇಳಿಕೊಂಡಿರುವನು. ಕವಿತೆಯು ಸ್ವಾಭಾವಿಕವಾಗಿ ಪ್ರಕೃತಿಯನ್ನು ಹೋಲುವುದೆಂದೂ ವಿದ್ಯೆಯು ಅದಕ್ಕೆ ಸಹಾಯಮಾತ್ರವೆಂದೂ ಹೇಳಿರುವನು. ಇವನು ನೀರಸವಾದ ತರ್ಕವ್ಯಾಕರಣಗಳನ್ನೂ ವೈಯ್ಯಾಕರಣರನ್ನೂ ಹಿಯ್ಯಾಳಿಸುತ್ತಿದ್ದನು. ಯಾರು ಸರಳಹೃದಯರಲ್ಲವೋ, ಯಾರಿಗೆ ಸ್ವಾಭಾ ವಿಕ ವಿಶ್ವ ಸೌಂದರ್ಯವು ರುಚಿಸದೋ, ಯಾರಿಗೆ ಸರಳಕವಿತಾಮಾಧುರ್ಯವು ರುಚಿ ಸದೋ ಅಂತಹರು ವ್ಯಾಕರಣ ವ್ಯಾಕರಣ ತರ್ಕ ತರ್ಕ ಗಳೆಂಡು ಅರಚುತ್ತಿರಲಿ ಅಂತಹರ ವಿದ್ಯವು ಕುರುಡನು ಸೂರ್ಯನನ್ನು ನೋಡಿದಂತಾಗುವದು ಎಂದು ಹೇಳು ತ್ತಿದ್ದನು. ಇವನು ಸರಸ್ವತೀ ಮಂತ್ರೋಪದೇಶವನ್ನು ಅಭಿನವಗುಪ್ತಾಚಾರ್ಯನಿಂದ ಹೊಂದಿದುದಾಗಿ ಹೇಳಿರುವನು. ಇವನ ಆಯುಷ್ಯದ ಹೆಚ್ಚುಭಾಗವು ದೇಶಾಟನ ದಲ್ಲಿಯೂ ಪಂಡಿತಭಾಷಣದಲ್ಲಿಯೂ ಕಳೆದಿರಬೇಕಾಗಿ ತೋರುತ್ತದೆ. ಯಾವಾಗಲೂ ನಾಟಕಾಭಿನಯಗಳನ್ನು ನೋಡುವುದರಲ್ಲಿ ಇವನಿಗೆ ಆಸಕ್ತಿಬಹಳ. ಸಂಗೀತ ಮತ್ತು ಚಿತ್ರಕಲೆಗಳಲ್ಲಿ ಹೆಚ್ಚಾದ ನೈಪುಣ್ಯಸಂಪಾದನೆಯಿದ್ದಿತು. ಗ್ರಂಥಕಾರರನ್ನು ಬಹು ಮಾನಿಸುತ್ತಿದ್ದನು. ತಾನು ಬರೆದ ಗ್ರಂಥಗಳಮೇಲೆ ಬರೆಯುವ ಇತರರ ವಿಮರ್ಶೆ ಗಳನ್ನು ಬಹು ಜಾಣ್ಮೆಯಿಂದಲೂ ತಾಳ್ಮೆಯಿಂದಲೂ ನೋಡಿಕೊಳ್ಳುತ್ತಿದ್ದನಲ್ಲದೆ ಸಣ್ಣ ಸಣ್ಣ ಗ್ರಂಥಗಳನ್ನು ಬರೆದು ಇತರರ ದೋಷೋದ್ಘಾಟನ ಮಾಡುವುದರಲ್ಲಿ ಅದ್ವಿತೀಯನಾಗಿದ್ದನು. ಇಂತಹ ಸಣ್ಣಗ್ರಂಥಗಳಲ್ಲಿ 'ದರ್ಪದಳನವು' ಮುಖ್ಯವಾ ದುದು. ಕಲಾವಿಲಾಸ, ಸೇವ್ಯಸೇವಕೋಪದೇಶ, ಸಮಯಮಾತೃಕಾ ನರ್ಮಮಾಲಾ ಮೊದಲಾದವು ಈ ಜಾತಿಗೆ ಸೇರಿದುದು. ಇವನು ತನ್ನ ಕಾಲದಲ್ಲಿ ಅವಿವೇಕವೆಂದು

ಕಂಡುಬಂದ ಯಾವುದನ್ನೂ ಖಂಡಿಸದೆ ಬಿಟ್ಟಿರುವುದಿಲ್ಲ. ಸಮಾಜಸುಧಾರಣೆಯ ವಿಷಯದಲ್ಲಿ ಇವನಿಗೆ ಹೆಚ್ಚು ಆಸಕ್ತಿ ಇದ್ದಿತು. ಲೋಕಾನುಭವವನ್ನು ತಿಳಿಸುವು ದಾದ ಕಲಾವಿಲಾಸದಲ್ಲಿ ಮೋಹ, ಡಂಭ, ಕಾಮ ಮೊದಲಾದವುದರ ದುರ್ಲಕ್ಷಣ ಗಳು ಹೇಳಲ್ಪಟ್ಟು, ಹತ್ತನೆಯ ಅಧ್ಯಾಯದಲ್ಲಿ ಕರಣಿಕರ ದುರ್ಮಾರ್ಗತನವು ವರ್ಣಿತ ವಾಗಿದೆ. ಅವರಲಂಚಕೋರತನ, ಸುಳ್ಳು, ತಟವಟ, ಮೋಸ, ಅಕ್ಷರಸ್ಖಲಿತ್ಯಾಚರಣ, ಕಳ್ಳಕೈಬರಹ, 'ಸಹಿತ' ಎಂದಿರುವುದನ್ನು 'ರಹಿತ' ಎಂದು ಮಾಡುವುದು, ಕಾಗದ ಪತ್ರಗಳನ್ನು ಸುಟ್ಟುಹಾಕುವುದು, ಅನೇಕ ಸಮಯಗಳಲ್ಲಿ ದೊಡ್ಡದೊಡ್ಡ ಅಧಿ ಕಾರಿಗಳಿಗೂ ಅವರು ಬರೆದುಕಳುಹಿದ ಕಾಗದಪತ್ರಗಳು ಸರಿಯಾಗಿಲ್ಲವೆಂದು ಹೇಳುವುದರ ಮೂಲಕ ಅವರಿಗೆ ಸರಿಯಾಗಿ ವೇತನವು ದೊರೆಯದಂತೆ ಮಾಡುವಿಕೆ ಇವೇ ಮೊದಲಾದವುಗಳನ್ನು ಕೇವಲ ಅನುಭವಿಯಂತೆ ವರ್ಣಿಸಿರುವನು. ತನಗೆ ಪ್ರಾಚೀನರಾದ ಮತ್ತು ತನ್ನ ಸಮಕಾಲೀನರಾದ ಗ್ರಂಥಕಾರರ ಬರವಣಿಗೆಯನ್ನು ಬಹುಶ್ರದ್ಧೆಯಿಂದ ಪರಿಶೀಲಿಸುತ್ತಿದ್ದನು. ಈವಿಚಾರಗಳನ್ನು ಔಚಿತ್ಯವಿಚಾರಚರ್ಚಾ, ಕಂಠಾಭರಣ, ಸುವೃತ್ತತಿಲಕದಲ್ಲಿ ಅಡಕಮಾಡಿರುವನು. ದೇಶಾಟನಾವಸರದಲ್ಲಿ ಕಾಬೂಲು, ತುರ್ಕಸ್ಥಾನ, ಚೈನಾ, ಜಲಂಧರ, ಗೌಡ, ಅಫಘಾನಿಯರೇ ಮೊದ ಲಾದವರ ದೇಶ, ವೇಷ, ಭಾಷೆ, ಆಚಾರ ವ್ಯವಹಾರಗಳನ್ನು ಕುರಿತು ಸಮಯಮಾ ತ್ರಕೆಯಲ್ಲಿಯೂ ಗೌಡದೇಶೀಯರ ವಂಚನೆಗಳನ್ನು (ಬಂಗಾಳಿ ವಿದ್ಯೆ) ಕುರಿತು ಕಲಾವಿಲಾಸದಲ್ಲಿಯೂ, ಬಾಹ್ಲೀಕರ ಮಾತಿನ ಠಕ್ಕು, ದಾಕ್ಷಿಣಾತ್ಯ ಮತ್ತು ಪೌರ್ವಾ ತ್ಯರನಟನೆ, ಕಿರಾತರದರ್ವ, ಸೇವಕರ ಕಪ್ಪನಿಷ್ಕುರಗಳು, ಅಧಿಕಾರಿಗಳ ಉಚ್ಛೃಂಖಲ ವರ್ತನ ಇವುಗಳನ್ನು ಸೇವ್ಯಸೇವಕೋಪದೇಶಗಳಲ್ಲಿ ಹೇಳಿರುವನು. ಇವನು ತನ್ನ ಅಂತ್ಯಕಾಲದಲ್ಲಿ ಉಪದೇಶಾತ್ಮಕ ಗ್ರಂಥಗಳನ್ನು ಬರೆಯುವುದರಲ್ಲಿಯೂ, ಉಪ ದೇಶಿಸುವುದರಲ್ಲಿಯೂ ಕಳೆಗಂತೆ ಚಾರುಚರ್ಯಾದಿಂದ ತಿಳಿಯಬರುತ್ತದೆ. ಇವನು ಮೊದಲು ಶೈವಾರಾಧಕನಾಗಿದ್ದು ಸೋಮಭಾಗವತನ ಶಿಕ್ಷಣಪ್ರಭಾವದಿಂದ ಭಾಗ ವತಸಂಪ್ರದಾಯವನ್ನು ಕೈಕೊಂಡಂತೆಯೂ ಕಾಲಕ್ರಮದಲ್ಲಿ ಬೌದ್ಧಮತ ತತ್ವ ವನ್ನು ತಿಳಿದು 'ಅವದಾನಕಲ್ಪಲತಾ' ಎಂಬ ಗ್ರಂಥವನ್ನು ಬರೆದನು. ಇವನು ಮಹಾವೇದಾಂತಿಯೂ, ವೇದಮತ ತತ್ವದಲ್ಲಿ ಸಂಪೂರ್ಣ ನಂಬಿಕೆಯುಳ್ಳವನೂ, ಆಗಿದ್ದನು. ಶ್ರುತಿ, ಸ್ಮೃತಿ ಮತವು ಯುಕ್ತವೆಂದೂ ಅಂತ್ಯಕಾಲದಲ್ಲಿ ವಿಷ್ಣುಸ್ಮರ ಣೆಯು ಆವಶ್ಯವೆಂದೂ 'ಚಾರುಚರ್ಯಾ'ದಲ್ಲಿ ಹೇಳಿರುವನು. ಔಚಿತ್ಯವಿಚಾರಚರ್ಚಾ ಎಂಬುದು ಕವಿಕಂಠಾಭರಣಕ್ಕಿಂತ ಮೊದಲು ಬರೆದುದಾಗಿಯೂ ಶಿಷ್ಯಭಟ್ಟೋ ದಯಸಿಂಹನಿಗಾಗಿ ಬರೆಯಲ್ಪಟ್ಟುದಾಗಿಯೂ ಅದರಲ್ಲಿಯೇ ಹೇಳಲ್ಪಟ್ಟಿರುವುದು. ಇವನು 'ಲಲಿತಮಹಾಕಾವ್ಯ' ಎಂಬುದನ್ನು ಬರೆದಿರುವುದಾಗಿ ಕವಿಕಂಠಾ

ಭರಣದಲ್ಲಿ ಹೇಳಲ್ಪಟ್ಟಿದೆ. 'ಲೋಕಪ್ರಕಾಶ' ಎಂಬ ಗ್ರಂಥವನ್ನು ಕ್ಷೇಮೇಂದ್ರನು ಬರೆದನೆಂದು ಕೆಲವರು ಹೇಳುವರು. ಆದರೆ ಅದರಲ್ಲಿ ಕಂಡುಬರುವ ಹಿಂದುಸ್ಥಾನಿ ಮತ್ತು ಫಾರಸಿ ಶಬ್ದಗಳ ಪ್ರಯೋಗಗಳಿಂದ ನೊಗಲರಕಾಲದ ಯಾವನೋ ಇದೇ ಹೆಸರಿನವನು ಬರೆದಿರಬಹುದಾಗಿ ಹೇಳಬೇಕಾಗುತ್ತದೆ. 'ಸುವೃತ್ತತಿಲಕ'ವು ವೃತ್ತ ಲಕ್ಷಣಗಳಿಂದ ಕೂಡಿರುವುದು. ಚತುರ್ವರ್ಗಸಂಗ್ರಹವು ಪುರುಷಾರ್ಥಪ್ರತಿಪಾದಕವಾಗಿದೆ. ರಾಜಾವಳಿಯಲ್ಲಿ ಕಾಶ್ಮೀರರಾಜರ ಚರಿತೆಯನ್ನು ಹೇಳಿದೆ. ಕಲ್ಹಣನು ಸರಿಯಾಗಿಲ್ಲವೆಂದು ಆಕ್ಷೇಪಿಸಿದುದು ಇದೇ. ರಾಜಪುತ್ರ ಮತ್ತು ಲಕ್ಷಣಾದಿತ್ಯ ಇವರಿಬ್ಬರೂ ಕ್ಷೇಮೇಂದ್ರನ ಶಿಷ್ಯರು.

ಕ್ಷೇಮೇಂದ್ರನ ಕಾಲದ ರಾಜ್ಯಸ್ಥಿತಿ:—

ಅನಂತರಾಜನ ಆಳ್ವಿಕೆಯಲ್ಲಿ ಕಾಶ್ಮೀರವು ಸುಖಭೋಗಭಾಗ್ಯಾಗಾರವಾಗಿ ಇದ್ದಿತು. ರಾಜ್ಯಭಾರಕ್ರಮವು ಬ್ರಾಹ್ಮಣರದಾಗಿದ್ದಿತು. ಸರಕಾರದ ಉದ್ಯೋಗಸ್ಥರಿಗೆ ದಿವಿರ (Divira) ರೆಂದೂ, ಗುಮಾಸ್ತ (clerk) ರಿಗೆ ಕಾಯಸ್ಥರೆಂದೂ ಹೆಸರಿದ್ದಿತು. ನ್ಯಾಯಾಸ್ಥಾನಭಾಷೆಯು (Court-language) ಗೀರ್ವಾಣಭಾಷೆಯಾಗಿದ್ದಿತು. ರಸೀತಿ ಪತ್ರವೇ ಮೊದಲಾದುವು 'ಉಜ್ಜಮ' ಪತ್ರಗಳೆಂದು ಕರೆಯಲ್ಪಡುತ್ತಿದ್ದವು. ರಾಜ್ಯಶಾಸನಕಾರರ ರುಜು ಮೊಹರಿಲ್ಲವ ಕಾಗದ ಪತ್ರಗಳು ಅನಂಗೀಕಾರಮಾಡಲ್ಪಡುತ್ತಿದ್ದವು. ನ್ಯಾಯಾಸ್ಥಾನ (Court) ವನ್ನು ಅಧಿಕರಣಸ್ಥಾನವೆನ್ನುತ್ತಿದ್ದರು. ನ್ಯಾಯಾಸ್ಥಾನದಲ್ಲಿ ತೀರ್ಪುಹೊಂದಿದ ಪತ್ರಗಳಿಗೆ 'ಜಯಪತ್ರ' ಎಂಬ ಹೆಸರಿದ್ದಿತು. ಪಾಠಶಾಲೆಗಳನೇಕಗಳಿದ್ದುವು. ವಿದ್ಯಾಭ್ಯಾಸವು ಪುಕ್ಕಟೆಯಾಗಿ ದೊರಕುತ್ತಿತ್ತು. ಮರದ ಹಲಗೆಗೆ ಬಣ್ಣವನ್ನು ಒಳಿದು ಅದರ ಮೇಲೆ ಬರೆಯುವುದು ರೂಢಿಯಾಗಿದ್ದಿತು. ಮೊದಲು ಅಕ್ಷರಾಭ್ಯಾಸವನ್ನು ಮಾಡಿಸುವಾಗ "ಓಂಸ್ವಸ್ತಿಸಿದ್ಧಂನಮಃ ಸರಸ್ವತ್ಯೈ" ಎಂದು ಬರೆದು ಕೊಡುತ್ತಿದ್ದರು. ಆಯುರ್ವೇದಸೈದ್ಧಾಂತಿಕವು ಹೆಚ್ಚಾಗಿದ್ದಿತು. ವಾಗ್ಭಟನ ಅಷ್ಟಾಂಗಹೃದಯವೂ, ಚಕ್ರದತ್ತನ ಸಂಗ್ರಹವೆಂಬ ಪುಸ್ತಕವೂ ಆಧಾರ ಗ್ರಂಥಗಳಾಗಿದ್ದವು. ಆನಂದವರ್ಧನ, ರತ್ನಾಕರ, ಶಿವಸ್ವಾಮಿ, ಭಟ್ಟಕಲ್ಲಟ, ಭಟ್ಟಮುಕುಲ, ಉತ್ಪಲ, ಭಟ್ಟೇಂದುರಾಜ, ಭಟ್ಟತೋಟನೇ ಮೊದಲಾದವರು ಅಲಂಕಾರಶಾಸ್ತ್ರಗಳನ್ನೂ, ಕಾವ್ಯಗಳನೇಕಗಳನ್ನೂ ಬರೆದು ಪ್ರಸಿದ್ಧರಾಗಿದ್ದರು. ಅಲಂಕಾರ, ಸಾಹಿತ್ಯ, ವೇದಾಂತ, ತರ್ಕ ಮೊದಲಾದ ಗ್ರಂಥಗಳನ್ನು ಓದಬೇಕೆಂಬ ವಿದ್ಯಾರ್ಥಿಗಳೆಂದಯೂ ವಿಧವಾದ ಪ್ರತಿಫಲಾಕಾಂಕ್ಷೆಯೂ ಇಲ್ಲದೆ ಪಾಠವನ್ನು ಹೇಳಿಕೊಡಲು ಅಭಿನವಗುಪ್ತನಂತಹ ಪಂಡಿತರು ಹಾತೊರೆಯುತ್ತಿದ್ದರು. ಕ್ಷೇಮೇಂದ್ರನಿಗೆ ಅನಂತರಾಜನೂ ಮತ್ತು ಇವನ ಮಗ ಕಲಶರಾಜನೂ ಆಶ್ರಯದಾತರಾಗಿರುತ್ತಿದ್ದರು.

ಪ್ರಕೃತ ಕ್ಷೇಮೇಂದ್ರನು ಬರೆದುದಾದ 'ಕವಿಕಂಠಾಭರಣ' 'ಚಾರುಚರ್ಯಾ' ವಿಚಾರವಾಗಿ ಕೊಂಚ ಹೇಳುವೆವು :—

ಕವಿಕಂಠಾಭರಣ:—ಇದು ಅಲಂಕಾರ ಗ್ರಂಥ. ಇದಕ್ಕೆ 'ಕವಿಕರ್ಣಿಕ' ಎಂಬ ನಾಮಾಂತರವೂ ಇರುವುದಾಗಿ ಚಾರುಚರ್ಯಾದಿಂದ ಗೊತ್ತಾಗುತ್ತದೆ. ವಿಷ್ಯೋಪ ದೇಶಕ್ಕೆ ತಕ್ಕುದಾಗಿಯೂ ವಿದ್ವಾಂಸರಿಗೆ ವಿಶೇಷ ವಿಷಯಗಳನ್ನು ತಿಳಿಯಹೇಳು ವುದಕ್ಕೂ ಈ ಗ್ರಂಥವನ್ನು ಬರೆದುದಾಗಿ.—

ಸುವಿಭಕ್ತಿಸಮಸ್ತಕಂಬುಧೈ
ರ್ಗುಣಸಂಯುಕ್ತಮುಮುಕ್ತ ಸ್ಪಷ್ಟವೈ
ರಚಿತಂಪದಕೈಃ ಸುವರ್ಣವ
ತ್ಕವಿಕಂಠಾಭರಣಂ ವಿಭಾರ್ಯತಾಂ ॥

ಎಂದು ಹೇಳಿಕೊಂಡಿರುವನು. ಸಮಗೆ ಇದುವರೆಗೆ ಚಿರಪರಿಚಿತವಾಗಿರುವ 'ಪ್ರತಾಪ ರುದ್ರೀಯ', 'ಕಾವ್ಯಪ್ರಕಾಶ' ಮೊದಲಾದ ಅಲಂಕಾರಗ್ರಂಥಗಳಂತೆ ಇರದೆ ಇದೊಂದು ನೂತನ ಮಾರ್ಗವನ್ನನುಸರಿಸಿದೆ. ಇತರ ಲಕ್ಷಣಗ್ರಂಥಗಳಲ್ಲಿ ಕಂಡುಬರುವುದಾದ ನಾಯಿಕಾನಾಯಕ ಲಕ್ಷಣಗಳಾಗಲಿ, ಕಾವ್ಯನಾಟಕಾದಿ ಲಕ್ಷಣಗಳಾಗಲಿ ಯಾವುದೂ ಹೇಳಲ್ಪಟ್ಟಿರುವುದಿಲ್ಲ.

ಇದರಲ್ಲಿ (೧) ಕವಿತ್ವಪ್ರಾಪ್ತಿ, (೨) ಕವಿಲಕ್ಷಣ (೩) ಕವಿತ್ವ ಚಮತ್ಕಾರ (೪) ಗುಣದೋಷವಿಭಾಗ (೫) ಪರಿಚಯಪ್ರಾಪ್ತಿ ಎಂಬ ಐದು ಪ್ರಕರಣಗಳಿರುವುವು. ಕವಿತ್ವಪ್ರಾಪ್ತಿಗೆ ದೈವಾನುಗ್ರಹವೂ ಮನುಷ್ಯಪ್ರಯತ್ನವೂ ಕಾರಣವೆಂದೂ, ಸರಸ್ವತೀ ಪೂಜಾದಿಗಳು ದೈವಿಕವೆಂದೂ, ಗುರುಶಿಷ್ಯ ಸಂಬಂಧವು ಮಾನುಷಿಕ ವೆಂದೂ ಹೇಳಲ್ಪಟ್ಟಿದೆ. ಕವಿಯು ಮೊದಲನೆಯ ಪ್ರಕರಣಾಂತ್ಯದಲ್ಲಿ ಈ ವಿಚಾರ ವನ್ನು ಸಂಗ್ರಹವಾಗಿ ಸೂಚಿಸಿರುವನು.

ಇತಿ ತತ್ರ ಸುಕೃತಾನಾಂ ಪ್ರಾಕ್ತನಾನಾಂವಿಪಾಕೇ
ಭವತಿ ಶುಭಮತೀನಾಂ ಮಂತ್ರಸಿದ್ಧಂ ಕವಿತ್ವಂ
ತದನುಪುರುಷ ಯತ್ನೈರ್ಧೀಮತಾಮಭ್ಯುದೇತಿ
ಸ್ಫುರತಿಜಡಧಿಯಾಂ ಶ್ರೀಶಾರದಾ ನಾದಸೇವಾ ॥

ಎರಡನೆಯ ಪ್ರಕರಣದಲ್ಲಿ ಕವಿಗಳನ್ನು ೧) ಛಾಯೋಪಜೀವಿ ೨) ಪದಕೋಪ ಜೀವಿ ೩) ಪಾದೋಪಜೀವಿ ೪) ಸಕಲೋಪಜೀವಿ ೫) ಭುವನೋಪಜೀವಿ ಎಂದು ೫ ಭಾಗಗಳಾಗಿ ವಿಂಗಡಿಸಿ ಕವಿಯು ಎಂತಹ ಶಿಕ್ಷಣವನ್ನು ಹೊಂದಬೇಕೆಂಬುದನ್ನು ಹೇಳಿರುವನು. ಕವಿಯಾಗಬೇಕೆನ್ನುವನು ಈ ಪ್ರಕರಣದಲ್ಲಿ ಹೇಳಿರುವುದಾದ

ನೂರು ವಿಷಯಗಳಲ್ಲಿಯೂ ಕ್ರಮವಾಗಿ ಶಿಕ್ಷಣವನ್ನು ಹೊಂದಲೇಬೇಕೆಂಬುದು ಕ್ಷೇಮೇಂದ್ರನ ಅಭಿಪ್ರಾಯ.

ಚಮತ್ಕಾರನಿರೂಪಣವು ೩ನೆಯ ಪ್ರಕರಣದಲ್ಲಿರುವುದು. ಚಮತ್ಕಾರವಿಚಾರವಾಗಿ ಕವಿಯು ಕೆಳಗಣ ಶ್ಲೋಕವನ್ನು ದಾಹರಿಸಿರುವನು.

ರಕ್ತಸ್ತ್ವಂ ನವಪಲ್ಲವೈರಪ ಮುಪಿಶ್ಲಿಷ್ಯೈಃ ಪ್ರಿಯಾಯಾಗುಣೈಃ
ತ್ವಾಮಾಯಾಂತಿಲೀಮುಖಾಃ ಸ್ಮರಧನುರ್ಮುಕ್ತಾಃ ಸಖೇಮಾಮಪಿ
ಕಾಂತಾಪಾದ ತಲಾಹತಿಸ್ತವಮುದೇತದ್ಧನ್ಮಾ ಪ್ಯವಯೋಃ
ಸರ್ವಂಪೆಲ್ಯಮಶೋಕ ಕೇವಲಮಹಂ .....ಸಶೋಕಃಕೃತಃ ॥

ಚಮತ್ಕಾರವು.—

೧) ಅವಿಚಾರ್ಯಮಾಣರಮಣೀಯತೆ
೨) ವಿಚಾರ್ಯಮಾಣರಮಣೀಯತೆ.
೩) ಸಮಸ್ತಸೂಕ್ತೈವ್ಯಾಪಿ.
೪) ಸೂಕ್ತೈಕದೇಶದೃಶ್ಯ
೫) ಶಬ್ದಗತ.
೬) ಅರ್ಥಗತ.
೭) ಶಬ್ದಾರ್ಥಗತ
೮) ಅಲಂಕಾರಗತ
೯) ರಸಗತ
೧೦) ಪ್ರಖ್ಯಾತವೃತ್ತಿಗತ

ಎಂದು ಹತ್ತು ವಿಧಗಳನ್ನು ಹೇಳಿ ತಾನು ಬರೆದಿರುವ ಶಶಿವಂಶಮಹಾಕಾವ್ಯ, ಪದ್ಯಕಾದಂಬರ್ಯಾದಿಗ್ರಂಥಂಗಳಿಂದ ಉದಾಹರಣೆಗಳನ್ನು ಆರಿಸಿಕೊಂಡಿರುವನು.

೪ನೆಯ ಪ್ರಕರಣದಲ್ಲಿ ಗುಣದೋಷದ ವಿಭಾಗವು ವರ್ಣಿತವಾಗಿದೆ. ಇದರಲ್ಲಿ ಅಪ್ರಯುಕ್ತ, ಅಪ್ರಸಿದ್ಧಾರ್ಥ, ವಿರುದ್ಧಾರ್ಥ ದೋಷ ಪ್ರಶಂಸೆಗಳಿರುವುವೇಹೊರ್ತು ಶ್ಲೇಷ, ಪ್ರಸಾದ, ಮಾಧುರ್ಯಾದಿಗುಣಪ್ರಶಂಸೆಗಳೊಂದೂ ಕಂಡುಬರುವುದಿಲ್ಲ. ಕಾವ್ಯದಲ್ಲಿ ಗುಣದೋಷಗಳು ಶಬ್ದಾರ್ಥರಸಗಳ ಕಾಲುಷ್ಯದಿಂದ ಹುಟ್ಟುವುವಾಗಿ ಕ್ಷೇಮೇಂದ್ರನ ಮತ. ಕಾವ್ಯಗಳು ಸಗುಣ, ನಿರ್ಗುಣ, ಸದೋಷ, ನಿರ್ದೋಷ, ಸಗುಣದೋಷಗಳೆಂದು ೫ ವಿಧಗಳು.

೫ನೆಯ ಪ್ರಕರಣದಲ್ಲಿ ಕವಿಯಾದವನಿಗೆ ತರ್ಕ, ವ್ಯಾಕರಣ, ಭರತ, ಚಾಣಕ್ಯ, ವಾತ್ಸ್ಯಾಯನ, ಭಾರತ, ರಾಮಾಯಣ, ಮೋಕ್ಷೋಪಾಯಾತ್ಮಜ್ಞಾನ,

ಧಾತುವಾದ, ರತ್ನಪರೀಕ್ಷಾ, ವೈದ್ಯಕ,ಜ್ಯೋತಿಷ, ಧನುರ್ವೇದ, ಗಜತುರಗ, ಪುರುಷ ಲಕ್ಷಣ, ದ್ಯೂತ ಇಂದ್ರಜಾಲಾದಿ ಸಕಲ ವಿದ್ಯೆಗಳ ಪರಿಚಯವು ಇದ್ದೇತೀರಬೇ ಕೆಂಬುದು ಹೇಳಲ್ಪಟ್ಟಿದೆ. ಈ ವಿವಿಧ ವಿದ್ಯಾಪರಿಚಯಗಳಿಗೆ ಉದಾಹರಣೆಗಳು ಸಮರ್ಥಿಸಲ್ಪಟ್ಟಿವೆ.

ಕ್ಷೇಮೇಂದ್ರನು ಔಚಿತ್ಯವಿಚಾರಚರ್ಚಾ ಎಂಬಗ್ರಂಥದಲ್ಲಿ ಉದಾಹೃತ ರಾಗಿರುವ ಕವಿಗಳನ್ನಲ್ಲದೆ ಭಟ್ಟಶಿವಸ್ವಾಮಿ, ಭಟ್ಟವಾಚಸ್ಪತಿ, ದಾಮೋದರಗುಪ್ತ, ವಿದ್ಯಾನಂದ, ಭಟ್ಟಮುಕ್ತಿಕಲಶ, ಮುಕ್ತಾಕಣ, ಚಕ್ರಪಾಲ, ಆರ್ಯಭಟ್ಟ, ಇಂದ್ರ ಭಾನು ಈಕವಿಗಳ ಶ್ಲೋಕಗಳನ್ನು ಈ ಗ್ರಂಥದಲ್ಲಿ ಉದಾಹರಿಸಿಕೊಂಡಿರು ವನು. ಇವರಲ್ಲಿ ಕೆಲವರ ಕಾಲನಿರ್ಣಯವೂ ಗ್ರಂಥನಿರ್ಣಯವೂ ಅವಶ್ಯಕ ವಾದುದಾಗಿರುವುದು.

ಮುಕ್ತಾಕಣನೂ ಚಕ್ರಪಾಲನೂ ಸೋದರರೆಂದು ಈ ಗ್ರಂಥದ ಎರಡನೆಯ ಪ್ರಕರಣದಲ್ಲಿ ಹೇಳಲ್ಪಟ್ಟಿದೆ. ಇಂದ್ರಭಾನುವಿನದೆಂದು ಉದಾಹರಿಸಿಕೊಂಡಿರುವ "ಸ್ನಾತುಂವಾಂಛಸಿ....." ಎಂಬ ಶ್ಲೋಕವನ್ನು ರಿಸ್ಸು ಎಂಬವನದೆಂದು ಸುವೃತ್ತತಿಲಕದಲ್ಲಿ ಹೇಳಿರುವುದರಿಂದ ಇಂದ್ರಭಾನುವಿಗೆ ರಿಸ್ಸು ಎಂಬ ನಾಮಾಂತರ ವಿರಬಹುದೆ ಹೇಗೆಂಬದು ತಿಳಿಯದಾಗಿದೆ.

ಕ್ಷೇಮೇಂದ್ರನಿಗೆ ರಾಜಪುತ್ರಲಕ್ಷ್ಮಣಾದಿತ್ಯನಲ್ಲದೆ ಭಟ್ಟೋದಯಸಿಂಹನೊ ಬ್ಬನು ಶಿಷ್ಯನೆಂದೂ, ಭಟ್ಟೋದಯಸಿಂಹನು 'ಭಕ್ತಿಭವ' 'ಲಲಿತಾಭಿಧಾನ' ಎಂಬ ಕಾವ್ಯಗಳನ್ನು ರಚಿಸಿರುವನೆಂದೂ ೫ನೆಯ ಪ್ರಕರಣದಲ್ಲಿ ಹೇಳಲ್ಪಟ್ಟಿದೆ.

ಭರ್ತೃಹರಿಯ ವೈರಾಗ್ಯಶತಕದಲ್ಲಿ ಕಾಲಮಹಿಮಾನುವರ್ಣನ ಭಾಗದಲ್ಲಿ ಕಂಡುಬರುವ ಈಶ್ಲೋಕವು ಚಂದ್ರಕನದೆಂದುದಾಹರಿಸಲ್ಪಟ್ಟಿವೆ.

ಯತ್ಪಾಣೇಕೇಕ್ಷಚಿಡಪಿ ಗೃಹೇತತ್ರತಿಪ್ರತ್ಯರ್ಥಕೋ
ಯತ್ರಾಸ್ಯೇಕಸ್ತದನು ಬಹವಸ್ತತ್ರಸ್ಥೈಕೋಽಪಿ ಚಾಂತೇ
ಇತ್ಥಂನೇಯೇ ರಜನಿದಿವ ಸೌಲೋಲಯಾಸಾ ವಿಧಾತ್ರಾ
ಕಾಲಃಕಾಲ್ಯಸಹ ಬಹುಕುಲಃ ಕ್ರೀಡತಿಪ್ರಾಣಸಾರೈಃ ॥

ಎಂದು ಹೇಳಿರುವುದನ್ನು ನೋಡಿದರೆ ಭರ್ತೃಹರಿಗೆ ಚಂದ್ರಕನೆಂಬ ಬೇರೆ ಹೆಸರು ಇದ್ದಿತೇ? ಹೇಗೆಂಬುದು ತಿಳಿಯದಾಗಿದೆ.

ಚಾರುಚರ್ಯಾ:—ಇದು ನೀತಿಪ್ರಧಾನಗ್ರಂಥ. ಉದಾಹರಣೆಗಳನ್ನು ರಾಮಾ ಯಣ ಭಾರತಾದಿ ಪ್ರಾಚೀನ ಗ್ರಂಥಗಳಿಂದ ಆರಿಸಿಕೊಂಡು ಹೇಳಿರುವನು. ಮಾವರಿಗಾಗಿ ಕೆಲವನ್ನು ಬರೆಯುವೆವು:—

ನಕುರ್ವೀತ ಕ್ರಿಯಾಂ ಕಾಂಚಿದನಭ್ಯರ್ಚ್ಯ ಮಹೇಶ್ವರಂ
ಈಶಾರ್ಚನರತಂ ಶ್ವೇತಂ ನಾಭೂನ್ನೇತುಂ ಕೃತೋ ಯಮಃ ॥

ಈಶ್ವರಾರ್ಚನವನ್ನು ಮಾಡದೆ ಯಾವ ಕೆಲಸವನ್ನೂ ಮಾಡಬಾರದು. ದೇವಾರಾಧನತತ್ಪರನಾಗಿರುವ ಶ್ವೇತನನ್ನು ಕರೆದುಕೊಂಡುಹೋಗಲು ಯಮನಿಗೂ ಸಾಧ್ಯವಾಗದೆ ಹೋದುದು.

ನಕುರ್ಯಾತ್ಪರದಾರೇಚ್ಛಾಂ ವಿಶ್ವಾಸಂ ಸ್ತ್ರೀಷುವರ್ಜಯೇತ್
ಹತೋ ಪರಸ್ತ್ರೀತಾಭೂರ್ಜ ಹತಃ ಪತ್ನ್ಯಾವಿದೂರಥಃ

ಪರಸ್ತ್ರೀಯರನ್ನು ಆಶಿಸಬಾರದು. ಸ್ತ್ರೀಯರಲ್ಲಿ ವಿಶ್ವಾಸವನ್ನಿಡಬಾರದು. ಪರಸತಿಯನ್ನು ಆಶಿಸಿದ ರಾವಣನು ಸಂಹೃತನಾದನು. ವಿದೂರಥನಾದರೊ ಹೆಂಡತಿಯನ್ನು ನಂಬಿ ಅವಳ ಕೈಯಿಂದಲೇ ಹತನಾದನು.

ಈರ್ಷ್ಯಾಕಲಹಮೂಲಂ ಹಿ ಮೃತ್ಯೋಃ ಕೃಪಣತಾಮೂಲಂ ಹಿ ಸಂಪದಾಂ
ಈರ್ಷ್ಯಾದೋಷಾಭಿಪ್ರಶಾಪ ಮಾಗಾಪಜಸವೇಜಯಃ ॥

ಈರ್ಷ್ಯೆಯು (ಅಸಹನವು) ಕಲಹಮೂಲವು. ತಾಳ್ಮೆಯು ಸಂಪತ್ತುಗಳ ಮೂಲವು. ಈರ್ಷ್ಯಾದೋಷಕ್ಕೊಳಗಾದ ಜನಮೇಜಯನು ಬ್ರಾಹ್ಮಣ ಶಾಪವನ್ನು ಹೊಂದಬೇಕಾದುದು.

ನೇರ್ಷ್ಯಾವಚಸಿ ವಿಶ್ವಾಸೇ ನಭವೇತ್ಸ್ತ್ರೈಕೈತವೇ
ಋಷ್ಯಶೃಂಗೋಪಿನಿಸ್ಸಂಗ ಶ್ಚಾಂಗನಾವೇಶ್ಯಯಾಕೃತಃ ॥

ಯಾವಾಗಲೂ ಸೋಸಯುಕ್ತವಾದ ಹೆಂಗಸಿನ ಮಾತಿನಲ್ಲಿ ವಿಶ್ವಾಸವನ್ನಿಡಕೂಡದು. ನಿಸ್ಸಂಗಾತ್ಮಕನಾದ ಋಷ್ಯಶೃಂಗನು ತಾನು ಎಂತಹವನಾದರೂ ವೇಶ್ಯೆಯಿಂದ ಸಂಸಾರಪಾಶಕ್ಕೊಳಗಾದನು.

ಬಿಲ್ಹಣ.

ಕಾಶ್ಮೀರದೇಶದಲ್ಲಿ ಪ್ರವರಪುರವೆಂಬ ನಗರವಿರುವುದು. ಅದಕ್ಕೆ ಮೂರು ಕ್ರೋಶದೂರದಲ್ಲಿರುವ 'ಜಯವನ' ಎಂಬುದಕ್ಕೆ ಸಪೂಪದಲ್ಲ ಖೋನಮುಖವೆಂಬ ಗ್ರಾಮವಿರುವುದು. ಅಲ್ಲಿ ಗೋಪಾದಿತ್ಯಮಹೀಪಾಲನಿಂದ ಮಧ್ಯದೇಶದಿಂದ ಕರೆಯಿಸಿ ಸ್ಥಾಪಿಸಲ್ಪಟ್ಟ ಕೌಶಿಕಗೋತ್ರದ ಬ್ರಹ್ಮನಿಷ್ಠಾಗರಿಷ್ಠರಾದ ಬ್ರಾಹ್ಮಣೋತ್ತಮರು ಇರುವರು. ಅವರಲ್ಲಿ ವೇದವೇದಾಂಗವೇತ್ತನಾದ **ಮುಕ್ತಿಕಲಶ**ನೆಂಬವನಿಗೆ ರಾಜಕಲಶನೆಂಬ ಮಗನಾದನು. ಇವನಿಗೆ ಮಹಾಭಾಷ್ಯವ್ಯಾಖ್ಯಾತೃವಾದ ಜ್ಯೇಷ್ಠಕಲಶನೆಂಬ ಮಗನು ಹುಟ್ಟಿದನು. ಇವನ ಹೆಂಡತಿ ನಾಗಾದೇವಿ. ಇವರಲ್ಲಿ

ಇಷ್ಟರಾಮ, ಬಿಲ್ಹಣ, ಆನಂದನೆಂಬ ಮೂರುಜನ ಮಕ್ಕಳು. ಇವರಲ್ಲಿ ಪ್ರಕೃತ ವಿಷಯೈಕನು ಬಿಲ್ಹಣ.

ಮುಕ್ತಿಕಲಶ
I
ರಾಜಕಲಶ
I
ಜ್ಯೇಷ್ಠಕಲಶ + ನಾಗಾದೇವಿ
೧ ಇಷ್ಟರಾಮ ೨ ಬಿಲ್ಹಣ ೩ ಆನಂದ

ಇವನು ಚಿಕ್ಕತನದಲ್ಲಿ ಸಂಸ್ಕೃತಭಾಷಾಪಾರಂಗತನಾಗಿ ದೇಶಪರ್ಯಟನಾಸಕ್ತನಾಗಿ ಕಾಶ್ಮೀರವನ್ನು ಬಿಟ್ಟು ಮಥುರೆ, ಬೃಂದಾವನ, ಕಾನ್ಯಕುಬ್ಜ, ಕಾಶಿ, ಪ್ರಯಾಗ ಅಯೋಧ್ಯಾ, ದಾಹಲ, ಗೂರ್ಜರ, ಸೋಮನಾಥ ಮೊದಲಾದ ದೇಶಗಳಲ್ಲಿ ಸಂಚರಿಸಿ ಆಯಾ ದೇಶದ ರಾಜರಿಂದ ಮಾನಿಸಲ್ಪಟ್ಟವನಾಗಿ ಕೊನೆಗೆ ದಕ್ಷಿಣದೇಶದಲ್ಲಿ ಚಾಳುಕ್ಯರಾಜರ ರಾಜಧಾನಿಯಾದ ಕಲ್ಯಾಣಪುರಕ್ಕೆ ಬಂದು ಚಾಳುಕ್ಯಯಶೋಭೂಷಣನೂ ತ್ರಿಭುವನಮಲ್ಲಾಪರನಾಮಧೇಯನೂ ಕರ್ಣಾಟದೇಶಾಧೀಶ್ವರನೂ ಆದ ಆಹವಮಲ್ಲನಿಂದ ಸತ್ಕೃತನಾಗಿ ಆತನಿಂದ ವಿದ್ಯಾಪತಿ ! ಎಂಬ ಬಿರುದನ್ನು ಸಂಪಾದಿಸಿ ಆತನ ಕುಮಾರನಾದ ವಿಕ್ರಮಾಂಕದೇವನ ಕಾಲದಲ್ಲಿ ಅಲ್ಲಿಯೇ ಇದ್ದು ವಿಕ್ರಮಾಂಕದೇವಚರಿತವೆಂಬ ಕಾವ್ಯವನ್ನು ಬರೆದು ತನ್ನ ಜೀವಿತಾಯುಷ್ಯವನ್ನು ಕಲ್ಯಾಣದಲ್ಲಿ ಕಳೆದುದಾಗಿ ತೋರುತ್ತದೆ.

ಕಾಲ: ೧. ಬಿಲ್ಹಣನು ಕಾಶ್ಮೀರದ ರಾಜರವಿಚಾರವಾಗಿ ಹೇಳಿರುವುದನ್ನೂ ಕ್ರಿ. ಶ. ೧೦೭೬ ೧೧೨೭ರ ವರೆಗೆ ಕಲ್ಯಾಣದಲ್ಲಿ ಆಳಿದ ತ್ರಿಭುವನಮಲ್ಲವಿಕ್ರಮಾದಿತ್ಯನವಿಚಾರವಾಗಿ ಕೊಂಡಾಡಿರುವುದನ್ನೂ ನೋಡಿದರೆ ಬಿಲ್ಹಣನ ದೇಶಪರ್ಯಟನ, ವಿದ್ಯಾವೈದುಷ್ಯವೆ ಮೊದಲಾದವು ಕ್ರಿ. ಶ. ಹನ್ನೊಂದನೆಯ ಶತಮಾನದ ಉತ್ತರಾರ್ಧದಲ್ಲಿ ನಡೆದಿರಬೇಕಾಗಿ ತೋರುತ್ತದೆ.

(೨) ಕಾಶ್ಮೀರರಾಜರಾದ ಅನಂತ ಮತ್ತು ಕಲಶರಾಜರವಿಚಾರವಾಗಿ ಹೇಳುವಾಗ 'ಆಸೀತ್' ಎಂಬ ಭೂತಕಾಲಪ್ರಯೋಗದಿಂದ ಬಿಲ್ಹಣನು ವಿಕ್ರಮಾಂಕಚರಿತವನ್ನು ಬರೆಯುವನೆಂಳಿಗೆ ಅನಂತರಾಜನು ಮೃತಪಟ್ಟಿರಬೇಕಾಗಿ ಬೋಧೆಯಾಗುತ್ತದೆ.

ವಿಕ್ರಮಾಂಕದೇವಚರಿತ ಸರ್ಗ ೧೪.

! ನೀಲಪ್ಪತ್ರೋನ್ನದಗಜಘಟಾಪಾತ್ರಮುತ್ರಸ್ತಚೋಲಾ
ಚ್ಚಾಲುಕ್ಯೇಂದ್ರಾದಲಭತಕೃತೀಯೋತ್ರವಿದ್ಯಾಪತಿತ್ವಂ ॥
ವಿಕ್ರಮಾಂಕದೇವಚರಿತ ೧೪-೧೮೧

(೩) ಅನಂತರಾಜನು ೩೫ ವರ್ಷಗಳು ರಾಜ್ಯವನ್ನಾಳಿ ಮಗನಾದ ಕಲಶನಿಗೆ ನೆಪಮಾತ್ರಕ್ಕೆ ರಾಜ್ಯಪದವಿಯನ್ನು ಕೊಟ್ಟನಾದರೂ ಸುಮಾರು ೧೫ ವರ್ಷಗಳ ವರೆಗೆ ರಾಜ್ಯಸ್ವಾಧೀನವನ್ನು ಮಾಡದೆ ಕೊನೆಗೆ ತನ್ನ ಮಗನದುಷ್ಕತನಕ್ಕೆ ಬೇಸರ ಗೊಂಡು ರಾಜ್ಯಭಾರಪರಾಙ್ಮುಖನಾಗಿ 'ವಿಜಯ' ಎಂಬಕ್ಷೇತ್ರಕ್ಕೆ ಹೋದನಾದರೂ ಮಗನಹಿಂಸೆಯನ್ನು ತಾಳಲಾರದೆ ಎರಡೂವರೆ ವರ್ಷಗಳ ಅನಂತರ ಆತ್ಮಹತ್ಯ ವನ್ನು ಮಾಡಿಕೊಂಡುದಾಗಿಯೂ ಇವನ ಹೆಂಡತಿಯಾದ ಸುಭಟಾ ಅಥವಾ ಸೂರ್ಯ ಮತಿಯು ಸತಿಯನ್ನು ಆಚರಿಸಿದುದಾಗಿಯೂ ರಾಜತರಂಗಿಣಿಯು ಸಾರುತ್ತದೆ.

(೪) ಜನರಲ್ ಕನ್ನಿಂಗ್‌ಹ್ಯಾಂರವರು ಅನಂತರಾಜನ ರಾಜ್ಯಭಾರಕಾಲವು ಕ್ರಿ. ಶ. ೧೦೨೮-೧೦೬೦ರವರೆಗೆಂದೂ, ಕಲಶನ ಸಂಪೂರ್ಣ ರಾಜ್ಯಾಧಿಕಾರವು ಕ್ರಿ.ಶ. ೧೦೮೦ ೧೦೮೯ರವರೆಗೆಂದೂ, ನೆಪಮಾತ್ರಕ್ಕೆ ಕೊಟ್ಟ ರಾಜ್ಯಾಧಿಕಾರಕಾಲವು ಕ್ರಿ.ಶ. ೧೦೬೨ ಎಂದೂ ಹೇಳುವರು.†

(೫) ವಿಕ್ರಮಾಂಕ ದೇವಚರಿತವು ಚೋಳರ ಕಥನದೊಡನೆ ಮುಕ್ತಾಯ ವಾಗಿರುವುದು.‡

(೬) ಕಲಶನ ಮಗ ಹರ್ಷನು ರಾಜ್ಯಭಾರ ಮಾಡುತ್ತಿದ್ದುದನ್ನು ಬಿಲ್ಹಣನು ನೋಡಿದುದಾಗಿಯೂ ಹರ್ಷನು ಕವಿಬಾಂಧವನೆಂದು ಕೀರ್ತಿ ಪಡೆದುದನ್ನು ಬಿಲ್ಹಣನು ಕೊಳಿದಂತೆಯೂ,

ತ್ಯಾಗಿನಂಹರ್ಷದೇವಂಸ ಶ್ರುತ್ವಾ ಸುಕವಿಬಾಂಧವಂ
ಬಿಲ್ಹಣೋವಂಚನಾಂಗೀನೇ ವಿಭೂತಿಂತ ನತಾಮಯಿ§

ಎಂಬ ಶ್ಲೋಕದಿಂದ ಸ್ಪಷ್ಟವಪಡುತ್ತದೆ. ಈ ಸೊಕ್ಕಿಂಡ ವಿಚಾರಗಳೆಲ್ಲದರ ಸಮ್ಯಕ್ಪರಿಶೀಲನದಿಂದ ಬಿಲ್ಹಣನು ಸುಮಾರು ಕ್ರಿ. ಶ. ೧೦೫೦ ರಲ್ಲಿ ಜನ್ಮಿಸಿ ಅನಂತರಾಜನು ಕಾಶ್ಮೀರವನ್ನಾಳುತ್ತಿದ್ದ ಕಾಲದಲ್ಲಿಯೇ ಪೂರ್ಣವಿದ್ಯಾಪಂಡಿತ್ಯವನ್ನು ಸಂಪಾದಿಸಿ ಮಹಾಕವಿಗಳಾದ ಸೋಮಭಟ್ಟ, ಕ್ಷೇಮೇಂದ್ರನೇ ಮೊದಲಾದ ಕವಿಗಳ ಸಮಕಾಲೀನನಾಗಿದ್ದು ಕ್ರಿ. ಶ. ೧೦೬೨ರಲ್ಲಿ ಆಳಿದ ಕಲಶರಾಜನ ಕಾಲದಲ್ಲಿ ಅವನ ಆಸ್ಥಾನದಲ್ಲಿರಲೊಪ್ಪದೆ ರಾಜಾನ್ಯತ್ರದರ್ಶನೋತ್ಸುಕನಾಗಿ ಹೊರಟು ಸಂಚರಿಸು ತ್ತಾ ಸುಮಾರು ಕ್ರಿ. ಶ. ೧೦೫೫ ರಲ್ಲಿ ಧಾರಾನಗರಾಧಿನಾಥನಾದ ಭೋಜರಾಜನು ಮೃತನಾದುದನ್ನು ಕೇಳಿ ಆತನ ದರ್ಶನಲಾಭವು ದೊರೆಯದುದಕ್ಕಾಗಿ ಚಿಂತಿಸಿ,

---

ರಾಜತರಂಗಿಣೀ VII ೧೫೫-೪೫೬.

† ವಿಕ್ರಮಾಂಕ ದೇವಚರಿತ ಮುನ್ನುಡಿ ಪುಟ ೨೦.

‡ J. R. A. S. Vol 4 P 15

§ ರಾಜತರಂಗಿಣೀ ೭ನೆಯ ತರಂಗ. ಬಿಲ್ಹಣನವರ್ಣನ

ಭೋಜಃಕ್ಷ್ಮಾಭೃತ್ಸು ಖಲುನ ಖಿಲ್ಪೈಸ್ತಸ್ಯ ಸಾಮ್ಯಂ ನರೇಂದ್ರೈ
ಸ್ತತ್ಪ್ರತ್ಯಕ್ಷಂ ಕಿಮಿತಿಭವತಾ ನಾಗಧೇ ಹಾ ಪತಾಸ್ಮಿ
ಯಸ್ಯ ದ್ವಾರೋ ಡ್ಡಮರಶಿಖರಕ್ರೋಡಪಾರಾವತಾನಾಂ
ನಾದವ್ಯಾಜಾದಿತಿಸಕರುಣಾ ವ್ಯಾಜಹಾರೇವಧಾರಾ ॥*

ಎಂದು ಭೋಜಪ್ರಶಂಸಾಪರವಿಯೋಗಮಂ ವರ್ಣಿಸಿ ಆತನ ಸಮಕಾಲೀನನೂ ದಾಹಲದೇಶಾಧೀಶ್ವರನೂ ಆದ ಭೀಮದೇವನ ಮಗ ಕರ್ಣರಾಜ§ನಿಂದ ಗೌರವಿಸಲ್ಪಟ್ಟು ಆ ಕರ್ಣರಾಜನನ್ನೇ ಕಥಾನಾಯಕನನ್ನಾಗಿ ಮಾಡಿಕೊಂಡು **ಕರ್ಣಸುಂದರೀ** ಎಂಬ ನಾಟಕೆಯನ್ನು ಬರೆದು ಅನಂತರ ಕಲ್ಯಾಣದ ತ್ರಿಭುವನ ಮಲ್ಲವಿಕ್ರಮಾಂಕನ ಆದರಕ್ಕೆ ಪಾತ್ರನಾಗಿ ಕ್ರಿ. ಶ. ೧೦೮೦ರಲ್ಲಿ ವಿಜಯಕ್ಷೇತ್ರದಲ್ಲಿ ಆಳಿದ ಅನಂತರಾಜನ ಮರಣವಾರ್ತೆಯನ್ನು ಕೇಳಿ ಕ್ರಿ. ಶ. ೧೦೮೮ರಲ್ಲಿ ಕಲಶನ ಮಗ ಹರ್ಷನು ರಾಜ್ಯವಾಳಿದುದನ್ನು ನೋಡಿ ಬಹುಕಾಲ ಬದುಕಿದ್ದು ಸುಮಾರು ಕ್ರಿ ಶ. ೧೧೦೦ರಲ್ಲಿ ಕಾಲಧರ್ಮವನ್ನು ಹೊಂದಿದುದಾಗಿ ಸ್ಪಷ್ಟಪಡುತ್ತದೆ. ಆದುದರಿಂದ ಇವನು ಕ್ರಿ. ಶ. ೧೧ನೆಯ ಶತಮಾನದವನೆಂದು ಹೇಳಬೇಕಾಗುತ್ತದೆ.

ಗ್ರಂಥಗಳು:—೧) ಕರ್ಣಸುಂದರೀನಾಟಿಕಾ.
೨) ವಿಕ್ರಮಾಂಕದೇವ ಚರಿತ.

ಕರ್ಣಸುಂದರೀ:—ಇದೊಂದು ನಾಟಿಕಾ. ನಾಲ್ಕು ಅಂಕಗಳಿರುವುವು. ಇದರಲ್ಲಿ ಚಾಳುಕ್ಯರಾಜನಾದ ಕರ್ಣಭೂಪಾಲನು ವಿದ್ಯಾಧರಕನ್ಯೆಯಾದ ಕರ್ಣಸುಂದರಿಯನ್ನು ವರಿಸಿದ ಕಥೆ ಕಲ್ಪಿಸಿ ಹೇಳಲ್ಪಟ್ಟಿದೆ.

ವಿಕ್ರಮಾಂಕದೇವಚರಿತ:—ಇದು ೧೮ ಸರ್ಗಗಳುಳ್ಳ ಕಾವ್ಯ. ಮೊದಲಣ ೧೭ ಸರ್ಗಗಳಲ್ಲಿ ಚಾಳುಕ್ಯಚರಿತ ಮೊದಲು ವಿಕ್ರಮಾಂಕನ ರಾಜ್ಯಭಾರ, ಪರಾಕ್ರಮಾತಿಶಯ ವರ್ಣನೆಗಳು ಹೇಳಲ್ಪಟ್ಟು ಚೋಳರಾಜನೊಡನೆ ನಡೆದ ಕದನದೊಡನೆ ಮುಕ್ತಾಯಮಾಡಲ್ಪಟ್ಟಿದೆ. ಹದಿನೆಂಟನೆಯ ಸರ್ಗದಲ್ಲಿ ಕವಿಯ ಜೀವನಚರಿತ ವಿರುವುದು. ಅಲ್ಲದೆ ಕವಿಯು ಜನ್ಮವೆತ್ತಿದ ದೇಶ, ಅದನ್ನು ಆಳಿದ ರಾಜರ ವರ್ಣನೆಗಳು, ವಿತಸ್ತಾ (ಜೀಲಂ) ಮತ್ತು ಸಿಂಧೂನದಿಗಳ ಸಂಗಮಸ್ಥಳದಲ್ಲಿದ್ದುದಾಗಿ ಕಾಶ್ಮೀರದ ಪ್ರಾಚೀನ ರಾಜಧಾನಿಯಾಗಿದ್ದ 'ಪ್ರವರಪುರ' ವರ್ಣನವಿರುವುದು. ಈಗಣಕಾಶ್ಮೀರದ ರಾಜಧಾನಿಯು ಶ್ರೀನಗರ. ಇದು ಜೀಲಂ ನದಿಯ ದಡದಲ್ಲಿ

* ವಿಕ್ರಮಾಂಕ ದೇವಚರಿತ ೧೮—೮೬.

§ ಕರ್ಣರಾಜನು ಕ್ರಿ. ಶ. ೧೦೭೨-೧೦೯೪ರ ವರೆಗೆ ಆಳಿದುದಾಗಿ ಕರ್ಣಸುಂದರೀನಾಟಿಕೆಯಿಂದ ತಿಳಿಯಬರುತ್ತದೆ. ಪು. ೨.

ಇದೆ. ಪ್ರವರಪುರನಾಮಾಂತರವೇ ಶ್ರೀನಗರವೆಂದಾಗಿರಬಹುದೇ ? ಹೇಗೆಂಬುದು ತಿಳಿಯದಾಗಿದೆ. ವಿಕ್ರಮಾಂಕಚರಿತವು ಯಾವುದಾದರೊಂದು ಕ್ರಮವನ್ನು ಅನುಸರಿಸಿ ಬರೆಯಲ್ಪಟ್ಟಿರುವುದಿಲ್ಲ. ಮೊದಲು ಚಾಳುಕ್ಯವಂಶೋತ್ಪತ್ತಿ, ಚಾಳುಕ್ಯ ವಂಶದ ಪ್ರಾಚೀನರಾಜರ ವಿಚಾರವಾಗಿ ಅಲ್ಲಲ್ಲಿ ಕೊಂಚ ಹೇಳಿ ಅನಂತರ ತೈಲಪ ನಿಂದ ಪ್ರಾರಂಭವಾಗುತ್ತದೆ. ಅನಂತರ ಆಹವಮಲ್ಲನ ಪ್ರತಾಪಾದಿವರ್ಣನಗಳು ಹೇಳಲ್ಪಟ್ಟಿರುವುದು ಹೊರ್ತು ರಾಜ್ಯಭಾರವನ್ನುಮಾಡಿದ ಎಲ್ಲಾರಾಜರನ್ನು ಕ್ರಮ ವರಿತು ಹೇಳಿರುವುದಿಲ್ಲ. ತೈಲಪನ ಹಿಂದೆ ಆಗಿಹೋದವರಲ್ಲಿ ಹಾರೀತ ಮತ್ತು ಮಾಣವ್ಯನೆಂಬವರು ಮುಖ್ಯರು. ಬಿಲ್ಹಣನು ಚಾಳುಕ್ಯವಂಶಾವಳಿಯನ್ನು ಹೀಗೆ ಹೇಳಿರುವನು:—

ಬ್ರಹ್ಮ
|
ಹಾರೀತ
|
ಮಾಣವ್ಯ
|
ತೈಲಪ ಕ್ರಿ. ಶ. ೯೭೩-೯೯೭
|
ಸತ್ಯಾಶ್ರಯ ಕ್ರಿ. ಶ. ೯೯೭-೧೦೦೮
|
ಜಯಸಿಂಹ ಕ್ರಿ. ಶ. ೧೦೦೮-೧೦೪೦
|
ಆಹವಮಲ್ಲ ಅಥವಾ ಸೋಮೇಶ್ವರ (೧) ಕ್ರಿ. ಶ. ೧೦೪೦-೧೦೬೯
I
I I
ಸೋಮೇಶ್ವರ (೨) ವಿಕ್ರಮಾದಿತ್ಯ (೬) ಜಯಸಿಂಹ (೨)
I
ಸೋಮೇಶ್ವರ (೩)

ವಿಕ್ರಮಾಂಕಚರಿತದ ಕಥಾಭಾಗವು ಹೀಗಿರುವುದು.

ಕರ್ಣಾಟಕಚಕ್ರೇಶ್ವರನಾದ ಆಹವಮಲ್ಲನು ಬಹುಕಾಲದಮೇಲೆ ಮೂರು ಮಕ್ಕಳನ್ನು ಪಡೆದು ಸೋಮೇಶ್ವರ, ವಿಕ್ರಮ, ಮತ್ತು ಜಯಸಿಂಹನೆಂದು ಹೆಸ ರಿಟ್ಟು ಸೋಮೇಶ್ವರನನ್ನು ಯುವರಾಜನನ್ನಾಗಿಮಾಡಿ, ಮಹಾಪರಾಕ್ರಮಿಯಾದ ವಿಕ್ರಮನನ್ನು ಶತ್ರುಗಳಾದ ಚೋಳರಾಜರಮೇಲೆ ದಂಡೆತ್ತಿಹೋಗಲು ಕಳುಹಿ

ಸಿದ ಕೊಂಚಕಾಲದಲ್ಲಿ ತಂದೆಯಾದ ಆಹವಮಲ್ಲನು ನಿಧನನಾಗಲು ವಿಕ್ರಮನು ಇದನ್ನು ಕೇಳಿ ಕಡುದುಃಖದಿಂದ ಹಿಂತಿರುಗಿ ಅಣ್ಣತಮ್ಮಂದಿರಿಬ್ಬರನ್ನೂ ಸಮಾಧಾನಗೊಳಿಸಿ ಕೆಲವುಕಾಲವಿದ್ದು, ಕೊನೆಗೆ ಈರ್ಷ್ಯಾಪರರಾಗಿ ತನ್ನಮೇಲೆ ದಾಳಿಯೆತ್ತಿ ಬಂದ ಅಣ್ಣತಮ್ಮಂದಿರಿರ್ವರನ್ನೂ ನಿಗ್ರಹಿಸಿ ಕೆಲವುಕಾಲ ಬನವಾಸಿ*ಯಲ್ಲಿದ್ದು ಅನಂತರ ಚೋಳರಾಜ$ನ ಮಗಳನ್ನು§ ಮದುವೆಯಾಗಿ ಕಾಂಚಿಯ ದಾನ್ದಲೆ ಗಾರರನ್ನಡಗಿಸಿ ತನ್ನಹೆಂಡತಿಯ ತಮ್ಮsನನ್ನು ಸಿಂಹಾಸನದಮೇಲೆ ಕುಳ್ಳಿರಿಸಿ ಹಿಂತಿರುಗಿದ ಕೊಂಚದಿನಕ್ಕೆ ವೆಂಗಿಯ ಅರಸನಾದ ರಾಜಿಗನು † ಇವನನ್ನು ಕೊಂದು ಕಂಚಿಯ ಸಿಂಹಾಸನವೇರಿದುದನ್ನು ತಿಳಿದು ದಂಡೆತ್ತಿಹೋಗಿ ಅವನನ್ನು ನಿಗ್ರಹಿಸಿ ಕರಹಾಟದ ರಾಜ್ಯವನಾಳುತ್ತಿದ್ದ ಶಿಲಾಹಾರರಾಜನ ಮಗಳಾದ ಚಂದ್ರಲೇಖೆ¦ ಯನ್ನು ಮದುವೆಯಾಗಿ (ಇವಳ ಹೆಸರು ಚಾಂದಲದೇವಿಯೆಂದು ಹೇಳಲ್ಪಟ್ಟಿದೆ) § ಶತ್ರುದಮನನಮಂ ಮಾಡಿ ಕಪ್ಪಕಾಣಿಕೆಗಳನ್ನು ಕೊಂಡು ತನ್ನಾಳ್ವಿಕೆಯ ಜ್ಞಾಪಕಾರ್ಥವಾಗಿ ಕೋಟಿಕೊತ್ತಲಗಳನ್ನೂ, ಭವ್ಯವಾದ ಅರಮನೆ, ದೇವಾಲಯ, ಕಾಸಾರಗಳನ್ನು ಕಟ್ಟಿಸಿ ಯಶಶ್ಶರೀರಿಯಾದನು. ಈ ವಿಕ್ರಮನಿಗೆ ವಿಕ್ರಮಾಂಕ, ವಿಕ್ರಮಾಂಕದೇವ, ವಿಕ್ರಮಲಾಂಛನ, ವಿಕ್ರಮಾದಿತ್ಯದೇವ, ವಿಕ್ರಮಾರ್ಕನೆಂಬ ನಾಮಾಂತರಗಳಿದ್ದುವಲ್ಲದೆ, ತ್ರಿಭುವನಮಲ್ಲ$ ಪಾರ್ಮಡಿ¶ ಕಾಲವಿಕ್ರಮx ನೆಂಬ ಬಿರುದುಗಳಿದ್ದುವು. ವಿಕ್ರಮನ ಸಾಮಂತರಾಜರಲ್ಲಿ ಕದಂಬಕುಲತಿಲಕನಾದ ಜಯಕೇಶಿಯು ಮುಖ್ಯನು. ವಿಕ್ರಮಾಂಕನು ಇವನ ಪರಾಕ್ರಮಾತಿಶಯಗಳಿಗೆ ಮೆಚ್ಚಿ ತನ್ನ ಮಗಳಾದ ವೈಳಲದೇವಿಯನ್ನು ಇವನಿಗೆ ಕೊಟ್ಟುದಾಗಿ.—

ನುತಾಂಚಾಲುಕ್ಯಮಾಣಿಕ್ಯ ವಿಕ್ರಮಾರ್ಕಮಹೀಪತೇಃ
ಶ್ರೀವೈಳ್ಲಲ ಮಹಾದೇವೀ ಮುವಾಹಸ್ಯಪತಿಸ್ಮತಾಂ I

---

* ವನವಾಸಿ (ಬನವಾಸಿ) ಇದು ತುಂಗಭದ್ರಾ ಮತ್ತು ವರದಾ ನದಿಗಳ ಮಧ್ಯಪ್ರದೇಶದಲ್ಲಿ ಚಾಲುಕ್ಯರಾಜ್ಯದ ಒಂದು ಭಾಗವಾಗಿರ್ಪಿತು.

$ ವೀರರಾಜೇಂದ್ರ ಚೋಳ.

§ ಹೆಸರು ತಿಳಿಯದು.

s ಪರಕೇಸರಿವರ್ಮ ಇವನು ವೀರರಾಜೇಂದ್ರಚೋಳನ ಹಿರಿಯಮಗನು. ಇವನಿಗೆ ಅಧಿರಾಜೇಂದ್ರನೆಂಬ ನಾಮಾಂತರವೂ ಇದ್ದಿತು.

| ಇವನಿಗೆ ರಾಜೇಂದ್ರಚೋಳನೆಂದೂ ಹೆಸರು.

§ J. R. A. S. Vol. IV P. 13.

$ Bilhana Inscription.

¶ Kalhana's Inscription.

x ವಿಕ್ರಮಾಂಕಚರಿತ ಮುನ್ನುಡಿ ಪುಟ ೩೦.

I J. R. A. S. B. B. Vol. IV P. 279.

ಯಾಪಾರಿಜಾತ ದ್ರುಮಪಲ್ಲವಾಭಾಂ ಕಾಂತಿಂ ನಿತಾಂತಂ ಕರಪಲ್ಲವೇನ
ಪುಷ್ಣಾತಿಪುಷ್ಣಾತಿ ಸದರ್ಧಿಸಾರ್ಧಂ ತೇನೈವದಾನಾಂಬುಸುಧಾನ್ನತೇವ॥ o

ಎಂಬ ಶ್ಲೋಕದಿಂದ ಗೊತ್ತಾಗುತ್ತದೆ. ತ್ರಿಭುವನಮಲ್ಲ ವಿಕ್ರಮಾದಿತ್ಯನು ತನ್ನ ಹೆಸರಿನ ಶಕವನ್ನು ಸ್ಥಾಪಿಸಿ ಅದನ್ನು ಚಾಲುಕ್ಯವಿಕ್ರಮವರ್ಷವೆಂದು ಕರೆದಿರುವನು. ಈ ವಿಚಾರವಾಗಿ ಹೇಳಲ್ಪಟ್ಟಿರುವ ಶಿಲಾಲೇಖನಗಳು ದೊರೆಯುವುವು. ಅವುಗಳ ಒಂದರಲ್ಲಿ:—

"ಆಹವದೇವನಮಗಂಸೋಮೇಶ್ವರೋರ್ವೀಶ್ವರಂಗನುಜಂವಿಕ್ರಮಚಕ್ರಿಚಕ್ರ ಧರರೂಪಂ ವಿಕ್ರಮಾದಿತ್ಯಂ ನಂದನರೇಂದ್ರರ್ಕಳತೇಜಂ ಅಡ್ಡಿಹುದು ಯಿನ್ಯಾಕೆಂದ ತನ್ನ ಆಣೆಗೋಸಗೆಯಾಗಲ್ ಶಕನಾಮಂತಳೆದು ಚಾಲುಕ್ಯಾಂಕಮಂ ಮಾಡಿದಂ"§

ಎಂದೂ, ಮತ್ತೊಂದರಲ್ಲಿ:—

"ಬಲ್ಲಾಳ್ಕನದಿಂ ರಿಪುನೃಪರೆಲ್ಲರಂ ಏಕಾಂಗದಿಂ ಒರಗಿಸಿ ಧರಣೀವಲ್ಲಭ ಮಾದಂ ತ್ರಿಭುವನಮಲ್ಲಂ ಚಾಲುಕ್ಯವಿಕ್ರಮಾದಿತ್ಯನೃಪಂ ಎಸೆವ ಶಕವರುಷಮಂ ಮಾಣಿಸಿ ವಿಕ್ರಮ ವರುಷಮೆಂದು ತನ್ನಯಪೆಸರಂ ವಸುಮತಿಗೆನೆಗಳ್ಚಿದಂ ಸಾಹಸಿಕಂ ಜಗದೇಕದಾನಿ ಧರ್ಮಸಿನೋವಂ" ಎಂದಿರುವುದು.s

ವಿಕ್ರಮನ ಮಗನಾದ ಮೂರನೆಯ ಸೋಮೇಶ್ವರನು ತನ್ನ ತಂದೆಯಂತೆ ಮಹಾ ಪರಾಕ್ರಮಶಾಲಿಯಾಗಿ ಭೂಲೋಕಮಲ್ಲನೆಂದು ಖ್ಯಾತಿಗೊಂಡುದಲ್ಲದೆ ವಿದ್ಯಾವಿನೋದಿಯಾಗಿ 'ಮಾನಸೋಲ್ಲಾಸ' ಅಥವಾ 'ಅಭಿಲಷಿತಚಿಂತಾಮಣಿ' ಎಂಬ ಗ್ರಂಥವನ್ನು ಬರೆದಿರುವನು.·

ಯಾಜ್ಞವಲ್ಕ್ಯಸ್ಮೃತಿಗೆ ಮಿತಾಕ್ಷರಟೀಕೆಯನ್ನು ಬರೆದು ಹೆಸರುಗೊಂಡ ವಿಜ್ಞಾನೇಶ್ವರನು ವಿಕ್ರಮಾಂಕನ ಆಸ್ಥಾನ ಪಂಡಿತನೂ ಬಿಲ್ಹಣನ ಗೆಳೆಯನೂ ಆಗಿದ್ದನು. ವಿಕ್ರಮಾಂಕಚರಿತದಲ್ಲಿ ಚಾಲುಕ್ಯವಂಶ ವಿಚಾರವೂ ಮತ್ತು ವಿಕ್ರಮನ ಶೌರ್ಯವರ್ಣನವೂ ಹೆಚ್ಚಾಗಿ ಹೇಳಲ್ಪಟ್ಟಿರುವುದಾದರೂ ಇತರ ರಸಪೋಷಣೆಯೂ ಅಲ್ಲಲ್ಲಿ ಮಾಡಲ್ಪಟ್ಟಿವೆ. ತನಗೆ ಆಶ್ರಯವನ್ನಿತ್ತ ರಾಜನ ಕುಲಚರಿತವನ್ನು ಕಾವ್ಯರೂಪದಲ್ಲಿ ಬರೆಯುವುದರಲ್ಲಿ ಇವನನ್ನು ಬಾಣನಿಗೆ ಎರಡನೆಯವನೆನ್ನಬಹುದು. ವಿಕ್ರಮಾಂಕಚರಿತದಲ್ಲಿ ಚೋಳಕುವರಿಯೊಡನೆ ನಡೆದ ವಿವಾಹ

o E. C. VII. Skrpr PP 98-9.
§ ಹೈದರಾಬಾದು ಸುರಪುರಜಿಲ್ಲೆಯೊಳಗೆ ಎಡರಾವೆಹಳ್ಳಿಯಲ್ಲಿರುವ ಶಾಸನ
s Indian antiquary Vol· VIII P. 87.
· ವಿಕ್ರಮಾಂಕ ದೇವಚರಿತ ಮುನ್ನುಡಿ ಪುಟ ೪೧.

ಸಮಾರೋಹವೂ ೭, ೮, ೯ನೆಯ ಸರ್ಗಗಳಲ್ಲಿ ಹೇಳಲ್ಪಟ್ಟಿರುವ ಋತುವರ್ಣನಾದಿಗಳೂ ೯, ೧೦, ೧೧ರಲ್ಲಿ ವರ್ಣಿತರಾಗಿರುವ ರಾಜಕುವರರ ಆನಂದವಿಹರಣವ ಸೊಬಗೂ, ೧೨ರಲ್ಲಿ ರಾಜನನ್ನು ನೋಡಿ ಪ್ರಣಯಕಾತುರರಾದ ಸುಂದರಿಯರ ವರ್ಣನವೂ ಕಾವ್ಯಕ್ಕೆ ಕಳೆಯನ್ನು ಬೀರುವುದಾಗಿದೆ.

ವಿಕ್ರಮಾಂಕ ಚರಿತದಲ್ಲಿ ಕಂಡುಬರುವ. —

ಯಸ್ಯಾತ್ಯಪ್ತಃ ಸ್ಫಟಿಕಗಿರಿಣಾ ತಂ ವಿನಿಕ್ಷಿಪ್ಯ ವಾಮೇ
ಪ್ರಾಲೇಯಾದ್ರೇಃ ಕ್ಷಣಮಭಮುಖೋ ದಕ್ಷಿಣಃ ಪಾಣಿರಾಸೀತ್
ತಂ ಪೌಲಸ್ತ್ಯಂ ವಿದಳಿತವತಃ ಸೂಕ್ತಿನಿಃ ಸ್ಯಂದಶೀತಾಂ
ಸೀತಾಭರ್ತುರ್ವ್ಯರಚಯದಸೌ ರಾಜಧಾನೀಮಯೋಧ್ಯಾಂ ॥†

ಎಂಬ ಶ್ಲೋಕಮಾತ್ರದಿಂದ ಬಿಲ್ಹಣನು ರಾಮಚರಿತವೆಂಬ ಗ್ರಂಥವನ್ನು ಬರೆದಿರುವುದಾಗಿ ಊಹಿಸಲವಕಾಶವಿರುವುದಾಗಿ ಹೇಳುವರು. ಅಂತಹ ಊಹೆಗೆ ಮೇಲೆಹೇಳಿದ ಶ್ಲೋಕ ಒಂದರಿಂದಲೇ ಸಾಕಾಗದಾಗಿ ನಮಗೆ ತೋರುವುದು.

" ಚೋರಪಂಚಾಶಿಕಾ " ಎಂಬುದನ್ನು ಬಿಲ್ಹಣನು ಬರೆದುದಾಗಿ ಬಹುಜನ ಮತವಿರುವುದು. ಅದರ ಸಾಧನೆಗಾಗಿ ವಿಧವಿಧವಾದ ಕಲ್ಪನಾಕಥೆಗಳೂ ದೊರೆಯುವುವು.

(೧) ಗುರ್ಜರದೇಶದ ರಾಜ, ವೈರಿಸಿಂಹಭೂಪಾಲನ ಮಗಳಾದ 'ಶಶಿಲೇಖೆ' ಯನ್ನು ಇವನು ಮದುವೆಯಾದಂತೆ ಹೇಳುವುದಾದ ಬಿಲ್ಹಣಚರಿತವೆಂಬ ಖಂಡಕಾವ್ಯವು ಉತ್ತರದೇಶದಲ್ಲಿಯೂ

(೨) 'ಯಾಮಿನೀಪೂರ್ಣತಿಲಕಾ' ಎಂಬರಾಜಕನ್ಯೆಯು ಈತನನ್ನು ಮದುವೆಯಾದುದಾಗಿ ಹೇಳುವ ಬಿಲ್ಹಣವೆಂಬ, ಆಂಧ್ರಲೇಖಾತ್ಮಕ ಸಂಸ್ಕೃತಗ್ರಂಥವು ಆಂಧ್ರದೇಶದಲ್ಲಿಯೂ §

(೩) ಬರ್ದವಾನದ ವೀರಸಿಂಹನ ಪುತ್ರಿ ರೂಪಸೀ ಆದ 'ವಿದ್ಯಾ' ಎಂಬುವಳನ್ನು ಕಾಂಚೀನಗರದ ರಾಜನಾದ ಗುಣಸಿಂಧುವಿನ ಕುಮಾರ ಸುಂದರನೆಂಬವನು ವರಿಸಿದುದಾಗಿ ಹೇಳುವ ವಿದ್ಯಾಸುಂದರ ಕಥೆಯು ವಂಗದೇಶದಲ್ಲಿಯೂ $

† ವಿಕ್ರಮಾಂಕ ದೇವಚರಿತ ಸ. ೧೮—೯೪.

‡ Kavyamala Series Vol. XIII P 145—169.

§ Bilhana Published by V. Ramaswami Sastrulu & Sons 192, Esplanade Madras.

$ Bengali Language and Literature by Dinesh Cahendrasen P. 637-663.

(೪) 'ವಿದ್ಯಸುಂದರ' ಎಂಬ ಸಂಸ್ಕೃತಮೂಲ, ಹಿಂದೀಭಾಷಾಟೀಕಾತ್ಮಕವಾದ ಪುಟ್ಟಗ್ರಂಥವು ಮುಂಬಯಿ ಪ್ರಾಂತ್ಯದಲ್ಲಿಯೂ ¶

(೫) 'ಚೌರೀಸುರತ ಪಂಚಾಶಿಕಾ' ಅಥವಾ 'ಚೌರಪಂಚಾಶಿಕಾ' ಎಂಬ ೫೦ ಶ್ಲೋಕಪೂರ್ಣಾತ್ಮಕ ಗ್ರಂಥವು ಕಾಶ್ಮೀರದಲ್ಲಿಯೂ ‡ ದೊರೆಯುವುವು. ಈ ಪಂಚಾಶಿಕಾತ್ಮಕ ೫೦ ಶ್ಲೋಕಗಳು ಎಲ್ಲದರಲ್ಲಿಯೂ ಒಂದೇಯಾಗಿ ಹೇಳಲ್ಪಟ್ಟು ಇರುವುದನ್ನೂ ಇತ್ತೀಚಿನವರು ಮನೋರಂಜಕ ಕಥೆಗಳಿಗೆ ಅಣಿಮಾಡಿ ಜೋಡಿಸಿ ಹೇಳಿರುವುದಾಗಿ ತೋರುವುದರಿಂದಲೂ, ಉಳಿದ ಹಲವರು 'ಚೋರ'ಶಬ್ದಪ್ರಯೋಗವಿರುವುದರಿಂದ " ಯಸ್ಯಾಶ್ಚೌರಶ್ಚಿಕುರನಿಕರಃ ಕರ್ಣಪೂರೋಮಯೂರೋ " ಎಂಬ ಶ್ಲೋಕದಲ್ಲಿ ಕಂಡುಬರುವ ಚೋರಕವಿಯು ಸುರತಪಂಚಾಶಿಕಾಕಾರನಾಗಿರಬೇಕೆಂದೂ ಹೇಳುವರು.

ವಂಗಸಾಹಿತ್ಯ ಚರಿತಕಾರರಾದ ದಿನೇಶಚಂದ್ರಸೇನರು ವಿದ್ಯಾಸುಂದರನ ಕಥೆಯಲ್ಲಿ ಹೇಳಲ್ಪಟ್ಟಿರುವ ೫೦ ಶ್ಲೋಕಗಳು ಸಂಸ್ಕೃತದಲ್ಲಿ ಚೋರಪಂಚಾಶಿಕೆಯೆಂದು ಹೆಸರುಗೊಂಡಿರುವುದಾಗಿಯೂ ಅವು 'ವಿದ್ಯಾ' ಎಂಬವಳ ವಿಚಾರವಾಗಿ ಹೇಳಿದ ಪ್ರಣಯನಿವೇದಾತ್ಮಕ ವಿಷಯವೆಂದೂ ಅವುಗಳನ್ನು ಕಾಳಿಯ ಪರವಾಗಿ ಅರ್ಥ ಮಾಡಬಹುದಾಗಿಯೂ ಹೇಳುವರು ! ಈ ವಿದ್ಯಾಸುಂದರ ಕಥೆಗನುಸಾರವಾಗಿ ಚೋರಪಂಚಾಶಿಕೆಯ ಮೊದಲನೆಯ ಶ್ಲೋಕದಲ್ಲಿ 'ವಿದ್ಯಾ' ಎಂಬವಳ ವಿಚಾರವನ್ನೇ ತೆಗೆದುಕೊಂಡು ಹೇಳಲ್ಪಟ್ಟಿದೆ. ಅದು ಹೀಗಿರುವುದು.

ಅದ್ಯಾಪಿತಾಂ ಕನಕಚಂಪಕ ದಾಮಗೌರೀಂ
ಫುಲ್ಲಾರವಿಂದನಯನಾಂತಸು ರೋಮರಾಜಾಂ
ಸುಪ್ತೋತ್ಥಿತಾಂವದನ ವಿಹ್ವಲಲಾಲಸಾಂಗೀಂ
ವಿದ್ಯಾಂ ಪ್ರಮಾದಗಳಿತಾಮಿವಚಿಂತಯಾಮಿ ॥

ಈ ವಿದ್ಯಾಸುಂದರ ಕಥೆಯು ಭವಿಷ್ಯೋತ್ತರ ಪುರಾಣದ ಬ್ರಹ್ಮಖಂಡದಲ್ಲಿ ವರ್ಣಿತವಾಗಿದೆ.$

ಪ್ರಾಚ್ಯೋಜ್ಜಯಿನೀಪ್ರಾಂತ್ಯದವರು ಉದಯನ ಮತ್ತು ವಾಸವದತ್ತಾ ವಿಚಾರವಾದ ಕಥೆಗಳಲ್ಲಿ ಅಭಿಮಾನಗೊಂಡು ವಿಧವಿಧವಾಗಿ ಕಥೆಗಳನ್ನು ಬರೆದಿರು

¶ Vidya Sundara Published by Khemaraja Krishnadass Bombay.

‡ ಕರ್ಣಸುಂದರೀನಾಟಿಕಾ ಪ್ರಸ್ತಾವನಾ ಮತ್ತು ಬಿಲ್ಹಣ ಚರಿತ ಪುಟ ೩.

| Bengali Language & Literature P. 651

$ The Indian Antiquary Vol. XX P. 419.

ವಂತೆ ವಂಗೀಯರು ವಿದ್ಯಾಸುಂದರ ಕಥೆಯಲ್ಲಿ ಅಭಿಮಾನಗೊಂಡು ವಿಧವಿಧವಾಗಿ ತಮ್ಮ ಕಾವ್ಯಗಳಲ್ಲಿ ವರ್ಣಿಸಿ ಕೀರ್ತಿಶೇಷರಾಗಿರುವರು. ಈ ಕಥೆಯು ಬಹು ಪ್ರಾಚೀನ ಕಾಲದಿಂದಲೂ ವಂಗದೇಶದಲ್ಲಿ ಅನುಸರಿಸಿ ಬಂದಿರುವುದಾಗಿ ತೋರುತ್ತದೆ. ಕ್ರಿ. ಶ. ೧೬ನೆಯ ಶತಮಾನದಲ್ಲಿ ಗೋವಿಂದದಾಸ ಕೃಷ್ಣರಾಮನೂ, ೧೬ನೆಯ ಶತಮಾನದಲ್ಲಿ ಕ್ಷೇಮಾನಂದಮಧುಸೂದನನೂ ಕ್ರಿ. ಶ. ೧೮ನೆಯ ಶತಮಾನದಲ್ಲಿ ರಾಮಪ್ರಸಾದ ಮತ್ತು ಭಾರತಚಂದ್ರನೂ ಈ ವಿದ್ಯಾಸುಂದರ ಕಥೆಯನ್ನು ಬರೆದಿರುವರು. ಇಂತಹ ಸುಂದರವಾದ ಕಥೆಯು ಯಾವದಿರಬೇಕೆಂದು ತರ್ಕಿಸುವರಿಗಾಗಿ ವಿದ್ಯಾಸುಂದರ ಕಥಾಸಾರವನ್ನು ಬರೆಯುವೆವು:—

ಕಾಂಚೀನಗರದರಾಜನಾದ ಸಿಂಧುವಿನ ಮಗಳು ಸುಂದರನೆಂಬವನು ಬರ್ದವಾನದ ದೊರೆ ವೀರಸಿಂಹನ ಮಗಳಾದ 'ವಿದ್ಯಾ' ಎಂಬವಳ ಸೌಂದರ್ಯವನ್ನೂ, ವಿದ್ಯಾವೈದುಷ್ಯವನ್ನೂ, ವಿದ್ಯಾಕೌಶಲದಲ್ಲಿ ತನ್ನನ್ನು ಗೆದ್ದವರನ್ನು ಮದುವೆಯಾಗುವ ಳೆಂಬ ಪ್ರತಿಜ್ಞೆಯನ್ನು ಕೇಳಿ ಯಾರಿಗೂ ತಿಳಿಯದಂತೆ ತಾನೋರ್ವನೇ ಹೊರಟು ವೀರಸಿಂಹನ ಬಕುಳಪುಷ್ಪೋದ್ಯಾನದಲ್ಲಿ ವಿಹರಿಸುತಿರ್ದು ಪುಷ್ಪಾಪಚಯಕ್ಕಾಗಿ ಅಲ್ಲಿಗೆ ಬಂದ ಮಾಲಾಕಾರಳಾದ ಹೀರೆಯ ಪರಿಚಯವನ್ನು ಮಾಡಿಕೊಂಡು ಅವಳೊಡನೆ ಮನೆಗೆ ಹೋಗಿ ತಾನೂ ಪುಷ್ಪಮಾಲೆಯನ್ನು ಕಟ್ಟಿಕಳುಹಿಸುವುದರ ಮೂಲಕ ವಿದ್ಯಾಸುಂದರಿಗೆ ತನ್ನ ಮನೋಭಿಪ್ರಾಯವನ್ನು ತಿಳುಹಿಸಿ ಹೀರೆಯ ಮೂಲಕ ಅವಳ ದರ್ಶನಲಾಭವನ್ನು ಹೊಂದಿ ಪರಸ್ಪರಸೇರುವಿಕೆಗೆ ಅವಕಾಶ ದೊರೆಯದೆ ವಿರಹನಮ್ರನಾಗಿ ಕಾಳಿಯನ್ನು ಭಕ್ತಿಯಿಂದ ಪ್ರಾರ್ಥಿಸಲು ಪ್ರಸನ್ನಳಾದ ಗೌರಿಯು ಒಂದು ಉಕ್ಕಿನ ತುಂಡನ್ನು ಕೊಟ್ಟು ಇದರ ಮೂಲಕ ಎಂತಹ ಕೆಲಸವನ್ನಾದರೂ ಕೈಗೂಡಿಸಿಕೊಳ್ಳಲಾಗುವುದೆಂದು ಅನುಗ್ರಹಿಸಿ ಮರೆಯಾಗಲು, ಸುಂದರನು ಸಂತುಷ್ಟನಾಗಿ ಆ ಉಕ್ಕುತುಂಡಿನ ಮೂಲಕ ಹೀರೆಯ ಮನೆಯಿಂದ ರಾಜಪುತ್ರಿಯ ಬಳಿಗೆ ಸುರಂಗಮಾರ್ಗವನ್ನು ಕಲ್ಪಿಸಿ ತನ್ಮೂಲಕ ರಾಜಪುತ್ರಿಯ ಬಳಿಗೆ ಹೋಗಿಬರುತ್ತಿರಲು ಇದನ್ನು ಕಾವಲಿನವರು ಕಂಡು ರಾಣಿಯಲ್ಲಿ ಬಿನ್ನವಿಸಿಕೊಳ್ಳಲು ಆಕೆಯು ಹಾಹಾಕಾರಗೊಂಡು ರಾಜನಿಗೆ ಈ ವಿಚಾರವನ್ನು ಅರಿಕೆ ಮಾಡಲಾಗಿ ರಾಜನು ಕೋಪಗೊಂಡು ಗೂಢಚಾರರಮೂಲಕ ಕಳ್ಳನನ್ನು ಹಿಡಿತರಿಸಿ ಸಮ್ಮುಖದಲ್ಲಿ ನಿಲ್ಲಿಸಿಕೊಂಡು.—

ರಾಜ.—ಎಲೈ ನೀನು ಯಾರು ? ನಿನ್ನ ಹೆಸರೇನು ?
ಸುಂ.—ನನ್ನ ಹೆಸರು ವಿದ್ಯಾಪತಿ (ವಿದ್ಯೆಯೆಂಬವಳ ಗಂಡ)
ರಾ.—ನಿನ್ನ ತಂದೆಯ ಹೆಸರೇನು ?
ಸುಂ.—'ವಿದ್ಯಾ' ಎಂಬವಳ ಮಾವ.

ರಾ.—ನಿನ್ನ ವಾಸಸ್ಥಾನವಾವುದು?
ಸುಂ.—ನನ್ನ ವಾಸಸ್ಥಾನವು ವಿದ್ಯಾನಗರ.
ರಾ.—ನಿನ್ನ ಜಾತಿ.

ಸುಂ.—ವಿದ್ಯೆಯ ಜಾತಿ. (ಎಂದರೆ ಕ್ಷತ್ರಿಯನು) ಎಂದು ಭಾವಗರ್ಭಿತವಾಗಿ ಆಡಿದುದನ್ನೂ ಅವನ ನಿರ್ಭೀಕತೆಯನ್ನೂ ನೋಡಿ ಶಿರಚ್ಛೇದನ ಮಾಡಲಾಜ್ಞಾಪಿಸಲು ಸುಂದರನು ವಿದ್ಯಾಸುಂದರಿಯ ವಿಯೋಗ ದುಃಖವನ್ನು ಸಹಿಸಲಾರದೆ ಕಾಳಿಯನ್ನು ಈ ೫೦ ಶ್ಲೋಕಗಳಿಂದ ಧ್ಯಾನಿಸಿದನಂತರ, ಭವಾನಿಯು ಮೈದೋರಿ ಕೊಲೆಗಡುಕರನ್ನು ದೂರಮಾಡಿ ಸುಂದರನನ್ನು ಅನುಗ್ರಹಿಸಿ ಮರೆಯಾಗಲು ರಾಜನು ಇವುಗಳೆಲ್ಲವನ್ನೂ ವಿಚಾರಿಸಿ ಚೋರನು ರಾಜಕುವರನೆಂದೂ ಗುಣಸಿಂಧು ರಾಜನ ಮಗನೆಂದೂ, ತಿಳಿದು ಸುಂದರನಿಗೆ ವಿದ್ಯೆಯನ್ನು ಕೊಟ್ಟು ವಿವಾಹ ಸಮಾರೋಹ ಮಂಬೆಳೆಯಿಸಿ ಬಾಳದನೆಂದೂ ಮೇಲೆಹೇಳಿದ ೫೦ಶ್ಲೋಕಗಳೇ'ಚೋರಪಂಚಾಶಿಕಾ' ಯೆಂದೂ ಕರೆಯಲ್ಪಟ್ಟುದಾಗಿ ಅನ್ನದಾಮುಂಗಳನೆಂಬ ಗ್ರಂಥದಲ್ಲಿ ಈ ಕಥೆ ಹೇಳಲ್ಪಟ್ಟಿದೆ. ಅನ್ನದಾಮುಂಗಳಕ್ಕೆ ಕಾಳಿಕಾಮುಂಗಳವೆಂದೂ ನಾಮಾಂತರವಿರುವುದು. ಅನ್ನದಾ, ಚಂಡಿ ಇವುಕಾಳಿಯ ಪ್ರತಿನಾಮಗಳು. ಕಥೆಯೂ ಮುಗಿದುದು.

ಈ ಕಥೆಯನ್ನೋದುವುದರಿಂದ ಚೋರಪಂಚಾಶಿಕಾಕಾರನು ಬಿಲ್ಹಣನಲ್ಲವೆಂದು ನಿಶ್ಚಯವಾಗಿಯೂ ಸ್ಪಷ್ಟಪಡುವುದು. ಇದಲ್ಲದೆ 'ವಿದ್ಯಾಪತಿ' ಎಂಬ ಶಬ್ದದಿಂದ ತರ್ಕಿಸುವುದಾದರೆ ಮೇಲೆ ಹೇಳಿದ ವಿದ್ಯಾಪತಿ (ವಿದ್ಯೆಯಗಂಡ)ಗೂ ವಿದ್ಯಾಪತಿಯೆಂದು ಬಿರುದನ್ನು ಹೊಂದಿದ ಬಿಲ್ಹಣನಿಗೂ ಯಾವ ಸಂಬಂಧವೂ ಇರದು. ಕಾಲವೂ ಮೇಳೈಸದು. ಒಂದುವೇಳೆ ಚೋರಪಂಚಾಶಿಕೆಯು ಬಿಲ್ಹಣನ ಹೆಸರಿನಲ್ಲಿ ಮುದ್ರಿತವಾಗಿರುವುದರಿಂದ ಅವನಿಂದಲೇ ಬರೆಯಲ್ಪಟ್ಟುದಾಗಿ ಸಂಶಯಗ್ರಸ್ತರಾದವರಿಗೆ ಖಂಡಿತವಾಗಿಯೂ ಅದು ಸಾಧುವಲ್ಲವೆಂದೂ ಬಿಲ್ಹಣನು ಬರೆದುದಾಗಿದ್ದರೆ 'ಚೋರಪಂಚಾಶಿಕಾ' ಎಂದು ಕರೆಯುವದಕ್ಕೆ ಬದಲು 'ಬಿಲ್ಹಣ ಪಂಚಾಶಿಕಾ' ಎಂದು ಕರೆಯಬಹುದಾಗಿದ್ದಿತೆಂದೂ, ಬಿಲ್ಹಣನ ಇತರ ಗ್ರಂಥಗಳಲ್ಲಿ ಹಾಗೆ ಎಲ್ಲಿಯಾದರೂ ಹೇಳಬಹುದಾಗಿದ್ದಿತೆಂದೂ, ಅಥವಾ ವರ್ಣನ ಸಾಮ್ಯ, ನಾಮಸಾಮ್ಯಗಳಾಗಲಿ ದೊರೆಯಬಹುದಾಗಿದ್ದಿತೆಂದೂ, ಸಕಲ ಶಾಸ್ತ್ರಾರ್ಥಸಂಪನ್ನನಾದ ಬಿಲ್ಹಣನು ಇಂತಹ ಕಾವ್ಯವನ್ನು ಬರೆರುವನೆಂಬದು ನಿರಾಧಾರವೆಂದೂ ಶೋಚನೀಯವೆಂದೂ, ಬಿಲ್ಹಣನು ಅಂತಹ ಅಶ್ಲೀಲಪಥಗಾಮಿಯಾಗಿದ್ದರೆ ವಿಕ್ರಮಾಂಕನಂತಹ ರಾಜಾಶ್ರಯವೂ, ಮಿತಾಕ್ಷರಕಾರನಾದ ವಿಜ್ಞಾನೇಶ್ವರನ ಗೆಳೆತನವು ದೊರೆಯುತ್ತಿರಲಿಲ್ಲವೆಂದೂ, ಚಾಣಾಕ್ಷರು ತಿಳಿದುಕೊಳ್ಳಬಹುದಾಗಿದೆ. ಇನ್ನುಳಿದಿರುವುದು 'ಚೋರ'ಶಬ್ದವಿಚಾರ. ಚೋರನೆಂಬ ಕವಿಯೊಬ್ಬನು ಇದು

ದಾಗಿ " ಯಸ್ಯಾಶ್ಚೌರಶ್ಚಿಕುರನಿಕರಃ " ಎಂಬಶ್ಲೋಕಮಾತ್ರದಲ್ಲಿ ಹೊರ್ತು ಮತ್ತೆಲ್ಲಿಯೂ ದೊರೆಯುವಂತಿಲ್ಲ. ಇವನ ವಿಚಾರವಾಗಿ ನಮಗೆ ಏನೂ ತಿಳಿಯದು. ಮಹಾಕವಿಗಳ ಜತೆಯಲ್ಲಿ ಸೇರಿಸಿ ಹೇಳಲ್ಪಟ್ಟಿರುವುದರಿಂದ ಇವನೂ ಕವಿಯಾಗಿದ್ದಿರಬಹುದಾಗಿ ಊಹಿಸಲು ಅವಕಾಶವಿದೆ. ಆದರೆಶ್ಲೋಕದಲ್ಲಿ ಕಂಡುಬರುವ ಕವಿಗಳು ಭಿನ್ನಭಿನ್ನಕಾಲದವರಾಗಿರುವುದರಿಂದ ಶ್ಲೋಕವು ವಿಶ್ವಾಸಾರ್ಹವಾಗಿ ತೋರುವುದಿಲ್ಲ.

ಬೊಂಬಾಯಿಯಲ್ಲಿ ಅಚ್ಚಾಗಿರುವ ಸಂಸ್ಕೃತ 'ಕಾವ್ಯಮಾಲಾ' ಗುಚ್ಛದಲ್ಲಿ* ಕಂಡುಬರುವ ಬಿಲ್ಹಣಚರಿತಾಂತ್ಯದಲ್ಲಿ "ಇತಿ ಕಾಶ್ಮೀರಕ ಬಿಲ್ಹಣ ಕವಿವಿರಚಿತಂ, ಬಿಲ್ಹಣಚರಿತಾಪರನಾಮಧೇಯಂ ಚಂದ್ರಲೇಖಾಸಕ್ತ ಬಿಲ್ಹಣಕಾವ್ಯಂ" ಎಂಬದು ಪ್ರಮಾದದಿಂದ ತಪ್ಪಾಗಿ ಹೇಳಲ್ಪಟ್ಟಿರಬೇಕೆಂದು ಬೋಧೆಯಾಗುತ್ತದೆ. ಹಾಗಲ್ಲದಿದ್ದರೆ ಇವನಾವನೋ ಮತ್ತೊಂರ್ವ ಬಿಲ್ಹಣನಾಗಿರಬೇಕು.

ಇವನ ಕವಿತಾ ಧಾಟಿಯನ್ನು ತಿಳಿಹಿಸುವುದಕ್ಕೆ ಈ ಶ್ಲೋಕಗಳು ಸಾಕಾಗಿರುವುವು:—

ವಿಕ್ರಮಾಂಕದೇವಚರಿತದಲ್ಲಿ ಲೋಕಬೋಧಕವಾದ ತಂದೆಮಕ್ಕಳ ಭಾಷಣವು ಹೀಗಿರುವುದು:—

ತಂದೆಯಾದ ಆಹವಮಲ್ಲನು ಹಿರಿಯಮಗನಾದ ಸೋಮೇಶ್ವರನನ್ನು ಬಿಟ್ಟು ಎರಡನೆಯ ಮಗನಾದ ವಿಕ್ರಮಾಂಕನಿಗೆ ರಾಜ್ಯವನ್ನು ಕೊಡಬೇಕೆಂದಿರುವುದನ್ನರಿತು ವಿಕ್ರಮನು ತಂದೆಯಬಳಿ ಸಾರ್ದು, ಸಾಂಜಲಿಪುಟನಾಗಿ:—

(೧) ವಿಚಾರಚಾತುರ್ಯಮಪಾಕರೋತಿ ತಾತಸ್ಯ ಭೂಯಾನ್ಮಯಿ ಪಕ್ಷಪಾತಃ
ಜ್ಯೇಷ್ಠೇತರಸ್ಮಿಂಶ್ಚ ಸತಿ ಸೋಮದೇವೇ ನಯೌವರಾಜ್ಯೇಽಸ್ತಿ ಮಮಾಧಿಕಾರಃ

ಕೇಳು! ತಂದೆ! ಮಹಾರಾಜನಾದ ನಿನಗೆ ನನ್ನಲ್ಲಿರುವ ಅಸೀಮಸ್ನೇಹರೂಪವಾದೀಪಕ್ಷಪಾತವು ನಿನ್ನ ವಿಚಾರಚತುರತೆಯನ್ನು ಹಾಳುಮಾಡುವುದಾಗಿದೆ. ಎಂದರೆ ನೀನು ವಿಚಾರಹೀನನೆಂಬ ದೋಷಾರೋಪಣೆಗೆ ಒಳಗಾಗುವೆ. ಅಣ್ಣನಾದ ಸೋಮದೇವನು ರಾಜ್ಯವನ್ನಾಳುವುದಕ್ಕೆ ಶಕ್ತನಾಗಿರುವಲ್ಲಿ ಯುವರಾಜಪದವಿಯನ್ನು ಹೊಂದಲು ನನಗಾವವಿಧವಾದ ಅಧಿಕಾರವೂ ಇರದು.

(೨) ಚಾಲುಕ್ಯವಂಶೋಪಿ ಯದಿಪ್ರಯಾತಿ ಪಾತ್ರತ್ವಮಾಚಾರವಿಪರ್ಯಯಸ್ಯ
ಅಹೋ! ಮಹದ್ಧ್ವಂಶಸಮಾಃ ಕಿಮನ್ಯದನಂಕುಶೋ ಭೂತ್ಕಲಿಕುಂಜರೋಯಂ

* Kavyamala Ser es Part XIII P. 145—169.

ಇದುವರೆಗೆ ಧರ್ಮಮಾರ್ಗರತರೆಂಬ ಪ್ರಸಿದ್ಧವಾದ ಈ ಚಾಲುಕ್ಯವಂಶವು ವಂಶಪರಂಪರಾಚಾರವಿಪರ್ಯಾಸವುಳ್ಳದ್ದಾಗಿ ಹೋಗಿಬಿಟ್ಟುದೆಂಬುದನ್ನು ಕೇಳಲು ಇದೇ ವಂಶದಲ್ಲಿ ಜನ್ಮಾವತರಣ ಮಾಡಿದ ನಾನು ದುಃಖಿಸುವುದಲ್ಲದೆ, ಧರ್ಮ ಹ್ರಾಸಯುಕ್ತವಾದ 'ಕಲಿ' ಎಂಬ ಆನೆಯು ಅನಂಕುಶವುಳ್ಳದಾಗಿಹೋಯಿತೆಂದು ಭಾವಿಸುತ್ತೇನೆ. (ಎಂದರೆ ಆನೆಗೆ ಅಂಕುಶವು ಸನ್ಮಾರ್ಗದರ್ಶಿ. ಧರ್ಮ ವಿಹೀನವಾದ ಈ ಕಲಿಎಂಬಾನೆಗೆ ರಾಜನೀತಿಚತುರತೆ ಎಂಬ ಅಂಕುಶವಿರಲೇ ಬೇಕು. ನೀನು ಯಾವುದನ್ನೂ ಯೋಚಿಸದೆ ನನಗೆ ರಾಜ್ಯವನ್ನು ಕೊಡುವ ದರಿಂದ ಧರ್ಮಚ್ಯುತನಾಗುವೆಯಾದುದರಿಂದ ನಾನು ದುಃಖಿಸುವೆನು ಎಂದಭಿ ಪ್ರಾಯವು.)

(೩) ಲಕ್ಷ್ಮ್ಯಾಃ ಕರಂಗ್ರಾಹಯಿತುಂ ತದಾದ್ಯೌ
ತಾತಸ್ಯ ಯೋಗ್ಯಃ ಸ್ವಯಮಗ್ರಜೋ ಮೇ
ಕಾರ್ಯಂ ವಿಪರ್ಯಾಸಮಲೀಮಸೇನ
ನ ಮೇ ನೃಪಶ್ರೀ ಪರಿರಂಭಣೇನ ॥

ಆದುದರಿಂದ ಈ ರಾಜ್ಯಲಕ್ಷ್ಮಿಯ ಪಾಣಿಗ್ರಹಣವನ್ನುಮಾಡಿಸಲು ತಂದೆಯಾದ ನಿನಗೆ ನನ್ನ ಅಣ್ಣನು ಯೋಗ್ಯನಾಗಿರುವನು. ಈ ಮರ್ಯಾದೆಯನ್ನು ನೀನು ಅತಿಕ್ರಮಿಸುವುದಾದರೆ ರಾಜ್ಯಲಕ್ಷ್ಮಿಯು ಇಂತಹ ಧರ್ಮಹ್ರಾಸದಿಂದ ದೂಷಿತಳಾಗುವಳಾದುದರಿಂದ ಅಂತಹ ಮಲಿನ ದೂಷಿತಳಾದ ರಾಜ್ಯಲಕ್ಷ್ಮಿಯನ್ನು ಗ್ರಹಣ ಮಾಡಲು ನಾನು ಸರ್ವಾತ್ಮನಾ ಆಶಿಸುವುದಿಲ್ಲ.

(೪) ಜ್ಯೇಷ್ಠಂಪರಿಮ್ಲಾನಮುಖಂವಿಧಾಯ
ಭವಾವಿಲಕ್ಷ್ಮೀಪ್ರಣಯೋನ್ಮುಖಶ್ಚೇತ್
ಕಿಮನ್ಯದನ್ಯಾಯಪರಾಯಣೇನ
ಮಯೈವಗೋತ್ರೇಲಿಖಿತಃ ಕಳಂಕಃ ॥

ರಾಜ್ಯಲಕ್ಷ್ಮಿಯು ತನಗೆ ದೊರಕಲಾರಳೆಂದು ಕೇವಲ ಮ್ಲಾನಮುಖನಾದ ಸೋದರನನ್ನು ಬಿಟ್ಟು ನಾನು ರಾಜ್ಯವನ್ನು ಹೊಂದಲು ಇಷ್ಟಪಡುವೆನಾದರೆ, ಅನ್ಯಾಯಪರಾಯಣನಾದ ನನ್ನಿಂದಲೇ ಈ ಚಾಲುಕ್ಯವಂಶಕ್ಕೆ ಅಪಕೀರ್ತಿ ಬಂದಂತಾಗುವುದಿಲ್ಲವೆ !

(೫) ತಾತಶ್ಚಿರಂ ರಾಜ್ಯಮಲಂಕರೋತು
ಜ್ಯೇಷ್ಠೋ ಮಮಾರೋಹತು ಯೌವರಾಜ್ಯಂ
ಸಲೀಲಮಾಕ್ರಾಂತದಿಗಂತರೋಹಂ
ದ್ವಯೋಃ ಪದಾತಿವ್ರತಮುದ್ವಹಾಮಿ ॥

ಆದುದರಿಂದ ತಂದೆಯೇ! ನನ್ನ ಅಣ್ಣನು ರಾಜ್ಯವನ್ನು ಅಲಂಕರಿಸುವ ನಾಗಲಿ. ಯುವರಾಜತ್ವವನ್ನು ನನಗೆ ಅನುಗ್ರಹಿಸುವನಾಗು. ನಾನು ಈ ವಿಶಾಲ ರಾಜ್ಯದ ರಕ್ಷಣಾವೇಕ್ಷಣಭಾರವನ್ನು ನಿಮ್ಮಿರ್ವರ ಆಜ್ಞೆಯಂ ಶಿರಸಾಧರಿಸಿ ಆಳು ಒಲದಿಂದ ವಹಿಸಿಕೊಳ್ಳುವೆನು.

(೬) ರಾಮಸ್ಯಪಿತ್ರಾಭರತೋಭಿಷಿಕ್ತಃ
ಕ್ರಮಂ ಸಮುಲ್ಲಂಘ್ಯ ಯದಾತ್ಮರಾಜ್ಯೇ
ತೇನೋದ್ಧಿತಾ ಸ್ತ್ರೀಜಿತ ಹತ್ಯಕೀರ್ತಿ
ರದ್ಯಾಪಿ ತಸ್ಯಾಸ್ತಿ ದಿಗಂತರೇಷು ॥

ದಶರಥನು ಹಿರಿಯಮಗನಾದ ರಾಮನಿಗೆ ರಾಜ್ಯವನ್ನು ಕೊಡುವುದು ಬಿಟ್ಟು ಧರ್ಮವಿರುದ್ಧವಾಗಿ ಭರತನಿಗೆ ರಾಜ್ಯವನ್ನು ಕೊಟ್ಟುದರ ದೆಸೆಯಿಂದ ದಶರಥನು ಸ್ತ್ರೀಜಿತನಾಗಿ ಕುಲಗೌರವಕೀರ್ತಿನಾಶಕನಾದನೆಂಬ ಅಪಕೀರ್ತಿಯು ಇನ್ನೂ ದಿಕ್ಕು ದಿಕ್ಕುಗಳಲ್ಲಿ ಮೊಳಗುತ್ತಿರುವುದಿಲ್ಲವೇ !

(೭) ಜಾನಾಮಿಮಾರ್ಗಂ ಭವತೋಪದಿಷ್ಟ
ಮಮಾಪಿ ಚಾಲುಕ್ಯಕುಲೇಪ್ರಸೂತಿಃ
ಕಿಂತ್ವತ್ರ ಲಕ್ಷ್ಮೀರ್ಗುಣವಂಧಹೀನೇ
ನಿಸರ್ಗಲೋಲಾಕಥಮೇತಿ ದಾಢ್ಯಂ ॥

ತಂದೆಯೇ ! ನಾನು ನಿನ್ನಿಂದ ಧರ್ಮೋಪದಿಷ್ಟನಾಗಿರುವೆನು. ಅಲ್ಲದೆ ನನ್ನ ಜನ್ಮಾವತರಣವೂ ಈ ಚಾಲುಕ್ಯವಂಶದಲ್ಲಿಯೇ. ಮತ್ತೇನಂದರೆ ಅಣ್ಣನು ಗುಣ ಹೀನನೆಂದೂ ಸ್ವಭಾವಚಪಲಳಾದ ಲಕ್ಷ್ಮಿಯು ಇಂತಹವನಲ್ಲಿ ಹೇಗೆ ನೆಲೆಯಾಗಿ ನಿಲ್ಲುವಳೆಂದೂ ಶಂಕಿಸುವೆಯಾ ?

(೮) ಯದಿಗ್ರಹಸ್ಯೈನರಾಜಸ್ಯ ದೂತಾಃ
ಕಾರುಣ್ಯಶೂನ್ಯಃ ಶಶಿಶೇಖರೋವಾ
ತ್ಕೈರೇಷತುತೋ ಭವಿತಾಕೃತಾರ್ಥ
ಸ್ತದ್ಧಾರ್ಯತಾಂಕೀರ್ತಿವಿಪರ್ಯಯೋಮೇ ॥

ನನ್ನ ಅಣ್ಣನಿಗೆ ರಾಜ್ಯಪ್ರಾಪ್ತಿಯಾಗದಂತಹ ಪ್ರತಿಕೂಲಗ್ರಹವಿರುವುದಾದರೆ ಅಥವಾ ಅವನು ರಾಜ್ಯವಾಳುವುದು ಕಾರುಣ್ಯಶೂನ್ಯನಾದ ಆ ಮಹೇಶ್ವರನಿಗೆ ಇಷ್ಟವಿರುವುದಿಲ್ಲವೆಂದಾದರೆ ಹಾಯ್ ! ಇಂತಹ ಕೀರ್ತಿವಿಪರ್ಯಸ್ತವಾಗುವುದಾದ ರಾಜ್ಯಭಾರಾರೋಪಣ ವಿಚಾರವನ್ನು ನನ್ನಲ್ಲಿಡದಹಾಗೆ ಸರ್ವೇಶ್ವರನು ನಿವಾರಿಸಲಿ.

(೯) ಅಶಕ್ತಿರಸ್ಯಾಸ್ತಿ ನ ದಿಗ್ವಿಜಯೇಷು
ಯಸ್ಯಾನುಜೋಹಂ ಶಿರಸಾಧೃತಾಜ್ಞಃ
ಸ್ಥಾನಸ್ಥ ಏವಾದ್ಭುತಕಾರ್ಯಕಾರೀ
ವಿಭರ್ತು ರಕ್ಷಾಮಣಿನಾ ಸಮತ್ವಂ ॥

ಹೆಚ್ಚೇಕೆ! ನನ್ನ ಅಣ್ಣನು ದಿಗ್ವಿಜಯದಲ್ಲಿ ಅಪ್ರತಿಮಶೂರನು. ನಾನು ಅಂತಹ ಶೂರನ ತಮ್ಮನು. ಅವನ ಆಜ್ಞೆಯನ್ನು ಶಿರಸಾಧರಿಸಿ ಅದರಂತೆ ಆಚರಿಸುವನಾಗಿರುವೆನು. ಅವನು ರಾಜಧಾನಿಯಲ್ಲಿದ್ದುಕೊಂಡು ರಾಜಕೀಯಾದ್ಭುತ ವಿಷಯಗಳಿಗೆ ಗಮನಕೊಡಲಿ. ನಾನು ಕೇವಲ ರಕ್ಷಾಮಣಿಯಂತೆ ಅವನ ಛಾಯಾನುವರ್ತಿಯಾಗಿದ್ದುಕೊಂಡಿರುವೆನು.

*ಸಾಹಿತ್ಯಪಾಥೋ ನಿಧಿಮಂಥನೋತ್ಥಂ
ಕರ್ಣಾಮೃತಂ ರಕ್ಷತ ಹೇ ಕವೀಂದ್ರಾಃ
ಯತ್ತಸ್ಯದೈತ್ಯಾ ಇವಲುಂಠನಾಯ
ಕಾವ್ಯಾರ್ಥಚೋರಾಃ ಪ್ರಗುಣೀಭವಂತಿ ॥

ಎಲೈ ಕವಿಗಳೇ! ನೀವು ಎಷ್ಟೋ ಕಷ್ಟಪಟ್ಟು ಸಾಹಿತ್ಯ ಸಮುದ್ರವನ್ನು ಮಥಿಸಿತಂದ ಕರ್ಣಾಮೃತವನ್ನು ರಕ್ಷಿಸಿಕೊಳ್ಳಿ. ಏಕೆಂದರೆ ಈ ಕರ್ಣಾಮೃತವನ್ನು ಕದ್ದುಕೊಂಡು ಹೋಗುವರಾದ ರಾಕ್ಷಸರಂತಿರುವ ಕಾವ್ಯಾರ್ಥಚೋರರು ಹೆಚ್ಚುತ್ತಿರುವರು.

ಗೃಹ್ಣಂತುಸರ್ವೇ ಯದಿ ವಾ ಯಥೇಚ್ಛಂ
ನಾಸ್ತಿಕ್ಷತಿಃ ಕಾಪಿಕವೀಶ್ವರಾಣಾಂ
ರತ್ನೇಷು ಲುಪ್ತೇಷು ಬಹುಷ್ವಮರ್ತ್ಯೈ
ರದ್ಯಾಪಿ ರತ್ನಾಕರಏವ ಸಿಂಧುಃ॥

ಸಮಸ್ತರೂ ಅವರವರಿಗೆ ಬೇಕುಬೇಕಾದಷ್ಟು ಕಾವ್ಯಾಮೃತವನ್ನು ತೆಗೆದುಕೊಂಡು ಹೋಗಲಿ. ಅದರಿಂದ ಕವೀಶ್ವರರಿಗೆ ಯಾವ ಕೊರತೆಯೂ ಉಂಟಾಗದು. ಸಮುದ್ರದಿಂದ ಎಷ್ಟೋ ರತ್ನಗಳು ಅಪಹರಿಸಿಕೊಳ್ಳಲ್ಪಟ್ಟುವಾದರೂ ಈ ಹೊತ್ತಿಗೂ ಸಮುದ್ರನು ರತ್ನಾಕರನೇ.



* ಈ ಎರಡು ಶ್ಲೋಕಗಳನ್ನು ಅಪ್ಪಯ್ಯದೀಕ್ಷಿತರು ತಮ್ಮ ಚಿತ್ರಮೀಮಾಂಸಾಲಂಕಾರಕ್ಕೆ ಉದಾಹರಿಸಿಕೊಂಡಿರುವರು.

ಭೋ ೀ ಜ

ಸಂಸ್ಕೃತ ಸಾಹಿತ್ಯದಲ್ಲಿ ಭೋಜನಾಮಕರನೇಕರು ದೊರೆಯುವರು. ಪ್ರಕೃತವಿಷಯೈಕನು ಧಾರಾನಗರದ ಭೋಜನಾಗಿರುವನು. ಇವನು ಪರಮಾರ ವಂಶೋತ್ಪನ್ನನು. ಇವನ ತಂದೆ ಸಿಂಧುಲ ಅಥವಾ ಸಿಂಧುರಾಜ. ಇವನ ದೊಡ್ಡಪ್ಪ ಮುಂಜ. (ವಾಕ್ಪತಿ) ತಾತ ಶ್ರೀಹರ್ಷ (ಸೀಯಕ.) ಇವನು ಶೈವಸಂಪ್ರದಾಯದವನು.

ಉದಯಪುರ ಪ್ರಶಸ್ತಿಯಿಂದ ಮತ್ತು ಪರಿಮಳಾಪರನಾಮಧೇಯ ಪದ್ಮಗುಪ್ತ ವಿರಚಿತ ನವಸಾಹಸಾಂಕಚರಿತದ ೧೧ನೆಯ ಸರ್ಗದಿಂದ ಪರಮಾರವಂಶದ ಮೂಲಪುರುಷನು ವಸಿಷ್ಠನಿಂದ ಅಗ್ನಿಕುಂಡದಲ್ಲಿ ಜನ್ಮಿಸಿದುದಾಗಿ ತಿಳಿಯಬರುತ್ತದೆ.*

ಇದಲ್ಲದೆ ಭೋಜನು 'ಸರಸ್ವತೀಕಂಠಾಭರಣ' ದಲ್ಲಿ, ನಾಯಕಗುಣಗಳಲ್ಲಿ ಮಹಾಕುಲೀನತ್ವೋದಾಹರಣೆಗೆ ತನ್ನ ವಂಶವಿಚಾರವಾಗಿ ಹೇಳಿಕೊಂಡಿರುವನು.† ನಾಯಕಗುಣೇಷು ಮಹಾಕುಲೀನತ್ವಂ ಪುಂಸೋಯಥಾ:—

ವಾಸಿಷ್ಠ್ಯಃ ಸುಕೃತೋದ್ಭವೋಽದ್ಭುರಶತೈರಸ್ತ್ಯಗ್ನಿಕುಂಡೋದ್ಭವೋ।
ಭೂಪಾಲಃ ಪರಮಾರ ಇತ್ಯಧಿಪತಿಃ ಸಪ್ತಾಬ್ಧಿಕಾಂಚೀರ್ಭುವಃ
ಅದಾಪ್ಯದ್ಭುತಹರ್ಷಗದ್ಗದಗಿರೋ ಗಾಯಂತಿಯಸ್ಯೋದ್ಭಟಂ
ವಿಶ್ವಾಮಿತ್ರಜಯೋರ್ಜಿತಸ್ಯ ಭುಜಯೋರ್ವಿಸ್ಫೂರ್ಜಿತಂ ಗುರ್ಜರಾಃ ॥

ಎಂದಿರುವುದು.

ಭೋಜಕೃತ "**ಯೋಗಸೂತ್ರವೃತ್ತಿ**"ಯಲ್ಲಿ ಕಂಡುಬರುವ —

ಶಬ್ದಾನಾಮನುಶಾಸನಂ ವಿದಧತಾ ಪಾತಂಜಲೇ ಕುರ್ವತಾ
ವೃತ್ತಿಂ ರಾಜಮೃಗಾಂಕ ಸಂಜ್ಞಮಪಿ ಚವ್ಯಾಖ್ಯಾತವ್ಯೇದ್ಯಕೇ
ವಾಕ್ಚೇತೋವಪುಷಾಂ ಮಲಃ ಫಣಿಭೃತಾಂಭರ್ತ್ರೇವಯೋಸೋದ್ಭವಃ
ತಸ್ಯ ಶ್ರೀರಣರಂಗಮಲ್ಲನೃಪತೇಃ ಪಾಚೋಜಯಂತ್ಯುಜ್ಜ್ವಲಾಃ ॥

---

* ಅಸ್ತ್ಯುರ್ವೀಘ್ನಂ ಪ್ರತೀಚ್ಯಾಂ ಹಿಮಗಿರಿತನಯಃ ಸಿದ್ಧದಾಂಪತ್ಯಸಿದ್ಧೇಃ
ಸ್ಥಾನಂ ಚ ಜ್ಞಾನಭಾಜಾಮಭಿಮತಫಲದೋಽಖರ್ವಿರಃ ಸೋಽರ್ಬುದಾಖ್ಯಃ
ವಿಶ್ವಾಮಿತ್ರೋ ವಸಿಷ್ಠಾದಹರತಬಲತೋಯತ್ರ ಗಾಂ ತತ್ಪ್ರಭಾವಾ
ಜ್ಜಜ್ವಲ್ಲೀ ವೀರೋಗ್ನಿಕುಂಡಾದ್ರಿಪುಬಲನಿಧನಂ ಯಶ್ಚಕಾರೈಕ ಏವ ॥
ಮಾರಯಿತ್ವಾ ಪರಾ ಧೇನುಮಾನಿನ್ಯೇ ಸ ತತೋಮುನಿಃ
ಉವಾಚ ಪರಮಾರಾಖ್ಯಃ ಪಾರ್ಥಿವೇಂದ್ರೋಭವಿಷ್ಯಸಿ ॥

(Epigraphica Indica Vol. I Pt 5.)

† ಸರಸ್ವತೀಕಂಠಾಭರಣ ಪುಟ ೬೮೪.

ಎಂಬ ಶ್ಲೋಕದಿಂದ ಮಹಾರಾಜಾಧಿರಾಜನಾದ ಭೋಜನಿಗೆ ರಣರಂಗಮಲ್ಲ ನೆಂಬಾಪರನಾಮವೂ ಇದ್ದುದಾಗಿ ಬೋಧೆಯಾಗುತ್ತದೆ.

ಪರಮಾರವಂಶದ ಮೂಲಪುರುಷನು ಉಪೇಂದ್ರನೆಂಬವನು. ಮೂಲವದ ಲ್ಲಾಳಿದ ಪರಮಾರವಂಶಾವಳಿಯೂ ಅವರಸಮಯವೂ ಹೀಗೆ ಹೇಳಿರುವುದು.—

ಹೆಸರು.			ಕಾಲ.
ಉಪೇಂದ್ರ	....	...	ಕ್ರಿ. ಶ. ೮೦೦-೮೩೫
ವೈರಿಸಿಂಹ (೧)	...	...	,, ೮೩೫-೮೫೦
ಸೀಯಕ (೧)	...	...	,, ೮೫೦-೮೭೫
ವಾಕ್ಪತಿ (೧)	...	...	,, ೮೭೫-೯೧೪
ವೈರಿಸಿಂಹ (೨) ವಜ್ರಟಾಪರನಾಮಕ		...	,, ೯೧೪-೯೪೦
ಸೀಯಕ(೨) ಹರ್ಷಾಪರನಾಮಕ		...	,, ೯೪೦-೯೭೫ ?
ಮಹಾರಾಜಾಧಿರಾಜ ವಾಕ್ಪತಿ (೨) ಮುಂಜಾಪರನಾಮಕ			,, ೯೭೫-೯೯೫
ಸಿಂಧುರಾಜ (ಸಿಂಧುಲ)	...	...	,, ೯೯೫-೧೦೧೦
ಭೋಜದೇವ (೧)	...	...	,,೧೦೧೦-೧೦೫೦

ಪರಮಾರವಂಶದ ವಿಚಾರವಾಗಿ ಉದಯಪುರಪ್ರಶಸ್ತಿ, ನವಸಾಹಸಾಂಕ ಚರಿತ, ನಾಗಪುರಪ್ರಶಸ್ತಿ, ತಿಲಕಮಂಜರೀ ಮತ್ತು ಇಂಡಿಯ್ ಆಂಟಿಕ್ವೈರಿಯಲ್ಲಿ ಹೇಳಿರುವುದು ಕಂಡುಬರುತ್ತದೆ. ಅವುಗಳಿಲ್ಲದರ ಸಮಾಲೋಚನದಿಂದ ಹೀಗೆ ಹೇಳಲಾಗುತ್ತದೆ. (ಮುಂದಣ ಪುಟವನ್ನು ನೋಡಿ.)

ಕಾಲ:—ಧಾರಾನಗರವನ್ನು ಭೋಜನು ಸುಮಾರು ಕ್ರಿ. ಶ. ೧೦೧೫-೧೦೬೦ರ ವರೆಗೆ ಆಳಿದುದಾಗಿ ವಿನ್ಸೆಂಟು ಸ್ಮಿತ್ತರು ಹೇಳುವರು.

ಡಾ. ಬುಹೆಲರವರೂ, ಡಾ. ಸ್ಟೈನ್ರವರೂ ಭೋಜನು ಕಲಶನ ಸಮ ಕಾಲೀನನೆನ್ನುವುದರ ಮೂಲಕ ಭೋಜನ ಜೀವಿತಸಮಯವು ಕ್ರಿ. ಶ. ೧೦೬೫ ಎಂದಿರುವರು.$

ಭೋಜರಾಜನ ಉತ್ತರಾಧಿಕಾರಿಯಾದ ಜಯಸಿಂಹನ ಶಾಸನಪತ್ರ ಸಮು ಯವು ಕ್ರಿ. ಶ. ೧೦೫೫ ಎಂದೂ ಇವನ ಉತ್ತರಾಧಿಕಾರಿಯಾದ ಉದಯಾದಿತ್ಯನ ಲೇಖವು ಕ್ರಿ. ಶ. ೧೦೫೯ ಎಂದೂ ಹೇಳಲ್ಪಟ್ಟಿರುವುದರಿಂದ ಭೋಜರಾಜನ ಜೀವಿತ ಸಮಯವು ಕ್ರಿ. ಶ. ೧೦೫೫ಕ್ಕಿಂತ ಮುಂಚೆಯಾಗಿರಬೇಕೆಂದೂ ಆ ಸಮಯದಲ್ಲಿ ಗುರ್ಜರ ಮತ್ತು ಚೇದಿದೇಶದ ಅರಸರು ಒಂದಾಗಿ ಧಾರಾನಗರವನ್ನು

* Vincent Smith's Early History of India P 395

$ Introduction to Saraswathi Kantabharana P. 14.

ಪರಮಾರ ವಂಶಾವಳಿಃ

ಉದಯಪುರ ಪ್ರಶಸ್ತಿತಃ	ನವಸಾಹಸಾಂಕ ಚರಿತಃ	ನಾಗಪುದಪ್ರಶಸ್ತಿತಃ	ತಿಲಕಮಂಜರೀತಃ	ಇಂಡಿಯ್ ಆಂಟಿಕ್ವೈರಿ
ಪರಮಾರ	ಪರಮಾರ	ಪರಮಾರ	ಪರಮಾರ	
ಉಪೇಂದ್ರರಾಜ	ಉಪೇಂದ್ರರಾಜ			
ವೈರಿಸಿಂಹ (೧)				
ಸೀಯಕ				ಕೃಷ್ಣರಾಜ
ವಾಕ್ಪತಿ (೧)	ವಾಕ್ಪತಿ			ವೈರಿಸಿಂಹ
ವೈರಿಸಿಂಹ (೨) ವಜ್ರರ	ವೈರಿಸಿಂಹ	ವೈರಿಸಿಂಹ	ವೈರಿಸಿಂಹ	ಸೀಯಕದೇವ
ಹರ್ಷ	ಸೀಯಕ-ಹರ್ಷ	ಸೀಯಕ	ಶ್ರೀಹರ್ಷ ಸೀಯಕ	ವಾಕ್ಪತಿರಾಜ ಅಮೋಘವರ್ಷ
ವಾಕ್ಪತಿ ಸಿಂಧುರಾಜ	ವಾಕ್ಪತಿ ಉತ್ಪಲರಾಜ -	ಮುಂಜ	ಮುಂಜ ವಾಕ್ಪತಿ	
	ಸಿಂಧುರಾಜ ನವಸಾಹಸಾಂಕ, ಕುಮಾರನಾರಾಯಣ	ಸಿಂಧುರಾಜ	ಸಿಂಧುರಾಜ	ಸಿಂಧುರಾಜ
ಭೋಜದೇವ	ಭೋಜದೇವ	ಭೋಜದೇವ	ಭೋಜದೇವ	ಭೋಜದೇವ

ಮುತ್ತಿದಾಗ ಜ್ವರಗ್ರಸ್ತನಾಗಿದ್ದ ಭೋಜನು ಮೃತನಾಗಿರಬೇಕೆಂದೂ ಬೋಧೆಯಾಗುತ್ತದೆ.‡

ಭೋಜರಾಜನು ಕೊಟ್ಟಿರುವ ದಾನಶಾಸನದಕಾಲವು ವಿ.ಸಂ. ೧೦೭೮ ಮಾಘ ಶುದಿ ೫ ಅಥವಾ ಕ್ರಿ. ಶ. ೧೦೧೯ ಆಗುತ್ತದೆ. ಭೋಜನು ಕ್ರಿ. ಶ. ೧೦೪೨ರಲ್ಲಿ **'ರಾಜಮೃಗಾಂಕ'** ಎಂಬ 'ಕರಣ' (ಖಗೋಳಶಾಸ್ತ್ರಸಂಬಂಧವಾದ) ಗ್ರಂಥವನ್ನು ಬರೆದುದಾಗಿ ಅಹರ್ಗಣಸಾಧನವನ್ನು ಸೂಚಿಸುವ ಅದರ ಪ್ರಾರಂಭ ಶ್ಲೋಕದಿಂದ ಗೊತ್ತಾಗುತ್ತದೆ.†

ಭೋಜನ ತಂದೆಯಾದ ಸಿಂಧುಲನು ಗತಾಯುವಾದ ಸಮಯವು ಕ್ರಿ. ಶ. ೧೦೧೦ ಎಂದು ಚರಿತ್ರೆಯು ಹೇಳುತ್ತದೆ. ಒಂದುವೇಳೆ ಶಾಸನದಲ್ಲಿ ಹೇಳಿರುವ ಕ್ರಿ. ಶ. ೧೦೧೯ ಆಗಲಿ, ಅಥವಾ ವಿಸೆಂಟುಸ್ಮಿತರ್ತು ಹೇಳಿರುವ ಕ್ರಿ. ಶ. ೧೦೧೪ ಆಗಲಿ ಭೋಜನು ಸಿಂಹಾಸನಕ್ಕೆ ಬಂದಿರಬೇಕೆನ್ನುವುದಾದರೆ ಭೋಜನು ಸಿಂಹಾಸನಕ್ಕೇರಿದ ಮತ್ತು ಸಿಂಧುಲನು ಮೃತನಾದ ಕಾಲದ ಮಧ್ಯಕಾಲದ ೮-೯ ವರ್ಷಗಳಲ್ಲಿ ರಾಜ್ಯವು ಅನಾಯಕವಾಗಿದ್ದಿತೆಂದು ಹೇಳಬೇಕಾಗುವುದು. ಈ ಅನಾಯಕತ್ವದ ವಿಚಾರವಾಗಿ ಅಥವಾ ಪರಮಾರವಶಂದವರ ಕೈಬಿಟ್ಟು ಅನ್ಯಾಕ್ರಾಂತವಾದ ವಿಚಾರವಾಗಿ ಚರಿತ್ರೆಯಲ್ಲಿ ಎಲ್ಲಿಯೂ ಹೇಳಿರುವಂತೆ ಕಂಡುಬರುವುದಿಲ್ಲ.

ಬಲ್ಲಾಳಸೇನನ ಭೋಜಪ್ರಬಂಧದಲ್ಲಿ ಸಿಂಧುಲನು ಅಣ್ಣನೆಂದೂ ಪರಲೋಕಯಾತ್ರಾಸಮಯದಲ್ಲಿ ತಮ್ಮನಾದ ಮುಂಜನಕೈಲಿ ಚಿಕ್ಕವನಾದ ಭೋಜನನ್ನಿರಿಸಿ ರಕ್ಷಿಸತಕ್ಕುದೆಂದು ಹೇಳಿದಂತೆ ಇರುವುದು. ಇದರಿಂದ ಸಿಂಧುಲನ ತಮ್ಮನು ಮುಂಜನೆಂದೂ ಮುಂಜನು ಭೋಜನ ಚಿಕ್ಕಪ್ಪನೆಂದೂ ಹೇಳಿದಂತಾದುದು. ಒಂದುವೇಳೆ ಕಾಲಸಾಧನೆಗಾಗಿ ಸಿಂಧುಲನು ಕ್ರಿ. ಶ. ೧೦೧೦ರಲ್ಲಿ ಮೃತನಾಗಿ ತಮ್ಮನಾದ ಮುಂಜನು ಕ್ರಿ. ಶ. ೧೦೧೯ರ ವರೆಗೆ ರಾಜ್ಯಭಾರವನ್ನು ಮಾಡಿರಬಹುದಾಗಿ ಊಹಿಸುವುದಾದರೆ.—

(೧) "ವಂಶೋಸ್ಮಿನ್ಯೆರಿಸಿಂಹಃ ಕ್ಷಿತಿಪತಿರಭವತ್ ಭೂರಿಭೂತಿಪ್ರಭಾವ...
.....।
(೨) ತಸ್ಮಾದ್ಯೈ.....ಶ್ರೀಸೀಯಕೋಭೂನ್ನೃಪಃ।
(೩) ತಸ್ಮಾದ್ವೈರವರೂಥಿನೀ ಬಹುವಿಧಪ್ರಾರಬ್ಧಯುದ್ಧಾಧ್ವರ
ಪ್ರಧ್ವಂಸೈಕಪಿನಾಕಪಾಣಿರಜನಿ ಶ್ರೀಮುಂಜರಾಜೋನ್ನೃಪಃ.....।
(೪) ತಸ್ಯಾಸೀದಥ ಸಾರ್ಧಿವಃ ಪೃಥುಯಶಾಃ ಶ್ರೀಸಿಂಧುರಾಜೋನ್ನೃಪಃ.....
.....।

‡ Epigraphica Indica.

† ಸರಸ್ವತೀಕಂಠಾಭರಣದ ಮುನ್ನುಡಿ ಪುಟ ೧೪.

(೫) ತಕ್ಷೂನುರ್ಭುವನೈಕ ಭೂಷಣಮಭೂದ್ಭೂಪಾಲಚೂಡಾಮಣಿ
ಭ್ಯಾಯಾಡಂಬರಚುಂಬಿತಾಂಘ್ರಿಕಮಲಃ ಶ್ರೀಭೋಜದೇವೋನೃಪಃ ॥

ಎಂಬವುಗಳಲ್ಲಿ ಕಂಡುಬರುವುದಾದ ವೈರಿಸಿಂಹನಮಗ ಸೀಯಕ. ಇವನ ಮಗ ಮುಂಜ. ಇವನ ಕನಿಷ್ಠ ಸೋದರನಾದ ಸಿಂಧುಲ. ಇವನಮಗ ಭೋಜ ನೆಂದು ಹೇಳುವ ಊಹೆಯು ತಪ್ಪೆಂದೂ, ವಂಶಾವಳಿಯಂತೆ ಮುಂಜನ ಅನಂತರ ಸಿಂಧುಲನೆಂದೂ, ಅವನಮಗ ಭೋಜನು ಕ್ರಿ. ಶ. ೧೦೧೦ರಲ್ಲಿ ಸಿಂಹಾಸನವೇರಿರಬೇ ಕೆಂದೂ ಸ್ಪಷ್ಟಪಡುತ್ತದೆ. ಇದೇ ವಿಚಾರವು ನವಸಾಹಸಾಂಕಚರಿತದ ೧೧ನೆಯ ಅಧ್ಯಾಯದಲ್ಲಿಯೂ, ಧನಪಾಲನ ತಿಲಕಮಂಜರಿಯಲ್ಲಿಯೂ ೪೦, ೪೧, ೪೩, ೪೪ ನೆಯ ಶ್ಲೋಕಗಳಿಂದ ಸಿದ್ಧಾಂತವಾಗುತ್ತದೆ. ಆದುದರಿಂದ ಸಿಂಧುವಿನ ತಮ್ಮ ಮುಂಜನೆಂದು ಊಹಿಸುವುದು ತಪ್ಪಾಗುತ್ತದೆ. ಬಲ್ಲಾಳಕೃತಭೋಜ ಪ್ರಬಂಧವು ಚರಿತ್ರೆಯಲ್ಲ. ಕೇವಲಮನೋರಂಜಕ ಗ್ರಂಥ. ಅಥವಾ 'ಕಟ್ಟುಕಥೆಗಳಮೊಟ್ಟೆ' ಎಂದರೂ ಸಲ್ಲುವುದು.

ಭೋಜನು ಕಲಶರಾಜನ ಸಮಕಾಲೀನನಲ್ಲ. ಕಲಶನ ತಂದೆಯಾದ ಅನಂತ ರಾಜನ ಸಮಕಾಲೀನನೆಂದೂ, ಅನಂತರಾಜನು ಕ್ರಿ. ಶ. ೧೦೩೮-೧೦೪೦ರ ವರೆಗೆ ಕಾಶ್ಮೀರವನ್ನಾಳಿದನೆಂದೂ ಭೋಜನೂ ಮತ್ತು ಅನಂತರಾಜನೂ, ವಿದ್ಯಾಪಕ್ಷಪಾತಿ ಗಳೂ, ಕವಿಜನಾಶ್ರಯರೂ, ದಾನವೀರರೂ ಆಗಿದ್ದರೆಂದು.—

ಸಚಭೋಜನರೇಂದ್ರಶ್ಚ ದಾನೋತ್ಕರ್ಷಣವಿಶ್ರುತೌ
ಸೂರೀಕಸ್ಮಿಕ್ಕಪೇತಲಭ್ಯಂ ದ್ವಾವಾಸ್ತಾಂಕವಿಭಾಂಧವೌ ॥§

ಎಂದು ಕಲ್ಹಣನು ಹೊಗಳಿ ಬರೆದಿರುವನು. ಅನಂತರಾಜನು ಕಲಶನಿಗೆ ರಾಜ್ಯಭಾರವನ್ನು ಕೊಟ್ಟಂತೆ ಮಾಡಿದುದು ಕ್ರಿ. ಶ. ೧೦೬೫ರಲ್ಲಿ. ಆ ವೇಳೆಗೆ ಭೋಜ ರಾಜನು ಪಾರ್ಥಿವ ಶರೀರವನ್ನು ಬಿಟ್ಟು ಸ್ಮೃತಿಶೇಷನಾಗಿದ್ದನು. ಈ ಕಾರಣ ಗಳಿಂದ ಭೋಜರಾಜನ ಕಾಲವು ಕ್ರಿ. ಶ. ೧೦೧೦-೧೦೫೫ರ ವರೆಗೆಂದು ನಿಶ್ಚಯ ಪಡುವುದು.

ಗ್ರಂಥಗಳು:—ಭೋಜರಾಜನು ಜ್ಯೋತಿಷ (astronomy) ಶಿಲ್ಪ (architecture) ಮತ್ತು ಕಾವ್ಯ (poetry) ಮೊದಲಾದ ಅನೇಕ ಗ್ರಂಥ ಗಳನ್ನು ಬರೆದಿರುವುದಾಗಿ ಹೇಳಲ್ಪಟ್ಟಿದೆ. ಭೋಜರಾಜನ ಹೆಸರಿನಲ್ಲಿ ಈ ಗ್ರಂಥ ಗಳು ಇರುವುವಾಗಿ ತಿಳಿಯಬರುತ್ತದೆ. ಅವನ್ನು ಹೀಗೆ ವಿಂಗಡಿಸಬಹುದು.

* Epigraphica Indica Vol. II P. 183-185.

§ ರಾಜತರಂಗಿಣೀ ೭—೨೫೯.

೧. **ಖಗೋಳ ಮತ್ತು ಜ್ಯೋತಿಷ**: –(Astronomy and Astrology.)

ರಾಜಮಾರ್ತಾಂಡ

* ರಾಜಮೃಗಾಂಕ

ವಿದ್ವಜ್ಜನವಲ್ಲಭ

ಆದಿತ್ಯಪ್ರತಾಪಸಿದ್ಧಾಂತ

೨ **ವೈದ್ಯ**:—(Medicine)

ಆಯುರ್ವೇದ ಸರ್ವಸ್ವಂ

† ರಾಜಮಾರ್ತಾಂಡ

ವಿಶ್ರಾಂತವಿದ್ಯಾವಿನೋದ

ಪಶುವೈದ್ಯ:—(Veterinary Manual)

ಶಾಲಿಹೋತ್ರ

೩. **ಶಿಲ್ಪ**: –(architecture)

ಸಮರಾಂಗಣ ಸೂತ್ರಧಾರ

೪. **ವ್ಯಾಕರಣ**:—(Grammar)

ಶಬ್ದಾನುಶಾಸನ

೫. **ವೇದಾಂತ**: –(Philosophy)

ರಾಜಮಾರ್ತಾಂಡ

,, (ಪತಂಜಲಿಯ ಯೋಗಸೂತ್ರವ್ಯಾಖ್ಯಾನ)

ತತ್ತ್ವಪ್ರಕಾಶ

ಸಿದ್ಧಾಂತ ಸಂಗ್ರಹ

ಶಿವತತ್ವರತ್ನಕಲಿಕಾ

೬. **ಧರ್ಮಶಾಸ್ತ್ರ**:—

ವ್ಯವಹಾರ ಸಮುಚ್ಚಯ

‡ ಚಾರುಚರ್ಯಾ

೭. **ಅರ್ಥಶಾಸ್ತ್ರ**:—

ಚಾಣಕ್ಯನೀತಿ (ದಂಡಶಾಸ್ತ್ರ)

---

* ಇದಕ್ಕೆ ಕರಣಮೃಗಾಂಕವೆಂದೂ ಹೆಸರು. ಸಂಸ್ಕೃತಕವಿಚರಿತೆಯು ಪುಟ ೧೪೭-೧೪೯

† Edited & Published by Vaidya Jadaviji Tricumji Acharya

‡ ಕ್ಷೇಮೇಂದ್ರನು ಚಾರುಚರ್ಯಾ ಎಂಬ ಗ್ರಂಥವನ್ನು ಬರೆದಿರುವನು. ಇದು ಬೇರೆಗ್ರಂಥವಾಗಿರಬಹುದು.

§ ಪುತ್ರಮಾರ್ತಾಂಡ

೮. **ಅಲಂಕಾರ.**—

ಸರಸ್ವತೀ ಕಂಠಾಭರಣ

\$ ಶೃಂಗಾರಪ್ರಕಾಶ

೯. **ಕಾವ್ಯ:**—(Poetry and Prose)

ವಿದ್ಯಾವಿನೋದ

x ಪ್ರಾಕೃತ ಕಾವ್ಯಗಳು

ರಾಮಾಯಣ ಚಂಪೂ

ಶೃಂಗಾರಮಂಜರೀ

ಸುಭಾಷಿತ ಪ್ರಬಂಧ

೧೦. **ಕೋಶ:**—(Lexicography)

ನಾಮಮಾಲಿಕಾ

೧೧. **ಶತಕಗಳು:**—

A { ಪ್ರಾಕೃತಕೂರ್ಮ ಶತಕ
  ಅವನೀಶಕತ

೧೨. **ನಾಟಿಕಾ:**—

A ಪಾರಿಜಾತ ಮಂಜರೀ

೧೩. **ಕಾರಿಕಾ:** —

A ಭರ್ತೃಹರಿಕಾರಿಕಾ

೧೪. **ಟೀಕಾ:**—

A ಮನುಸಂಹಿತಾಟೀಕಾ

೧೫. **ಸ್ತೋತ್ರ:**—

C ಮಹಾಕಾಳೀ ವಿಜಯ

೧೬. **ನೌಕಾವಿಷಯಕ ಗ್ರಂಥ:**—

T ಯುಕ್ತಿಕಲ್ಪತರು

\$ BhojaRaja Published by annamalai University P. 79

\$ ಸರಸ್ವತೀ ಕಂಠಾಭರಣ, ಮುನ್ನುಡಿ ಪುಟ ೧೧

x Bhoja Raja P. 70

A ಸರಸ್ವತೀ ಕೆಂಠಾಭರಣದ ಮುನ್ನುಡಿ ಪುಟ ೧೧

C Bhoja Raja P. 70 Published by Annamalai University

T 'ಯುಕ್ತಿಕಲ್ಪತರು' ಎಂಬ ನೌಕಾವಿಷಯಕ ಗ್ರಂಥವು ನಮಗೆ ದೊರೆತಿದೆ. ಈ ಹೆಸರಿನ ನೇದಾಂತ ಗ್ರಂಥವಾವುದೆಂಬುದು ತಿಳಿಯದು

ಮೇಲೆ ಹೇಳಿದ ಗ್ರಂಥಗಳಲ್ಲಿ ಅನೇಕ ಗ್ರಂಥಗಳು ಉಪಲಬ್ಧವಿಲ್ಲ. ದೊರೆಯು ಬಹುದಾದವುಗಳನ್ನು ಏಕ ಕರ್ತೃಕಗಳೆನಲಾಗುವುದಿಲ್ಲ. ಪ್ರಕೃತದೊರೆತಿರುವ ಭೋಜನ ಹೆಸರಿನ ಪುಸ್ತಕಗಳು;—

೧. ಚಂಪೂ ರಾಮಾಯಣ
೨. ವಾತಂಜಲ ಸೂತ್ರವೃತ್ತಿ } ರಾಜಮಾರ್ತಾಂಡ
೩. ರಾಜಮಾರ್ತಾಂಡ }
೪. ತತ್ತ್ವಪ್ರಕಾಶ
೫. ಸರಸ್ವತೀ ಕಂಠಾಭರಣ
೬. ಶೃಂಗಾರಪ್ರಕಾಶ

(೧) ಚಂಪೂರಾಮಾಯಣ:—

ಚಂಪೂರಾಮಾಯಣಕಾರನು ಗ್ರಂಥಾಂತ್ಯದಲ್ಲಿ "ವಿದರ್ಭರಾಜ ವಿರಚಿತೇ ಚಂಪೂರಾಮಾಯಣೇ" ಎಂದಿರುವುದರಿಂದ ಈ ಗ್ರಂಥಕಾರನು ಬೇರೆಯೆಂದೂ ಭೋಜನಲ್ಲವೆಂದೂ ಸ್ಪಷ್ಟಪಡುವುದು. ಚಂಪೂರಾಮಾಯಣಕ್ಕೆ ವ್ಯಾಖ್ಯಾನಕಾರನಾದ ರಾಮಚಂದ್ರಬುಧೇಂದ್ರನೂ, ಯುದ್ಧಕಾಂಡವನ್ನು ಬರೆದ ಲಕ್ಷ್ಮಣಸೂರಿಯೂ ವಿದರ್ಭರಾಜನನ್ನು ಭೋಜನೆಂದು ಕರೆದಿರುವುದರ ಹೊರ್ತು ಬೇರೆಯಾವ ಪ್ರಮಾಣವೂ ದೊರೆಯುವಂತಿಲ್ಲ. ವಿದರ್ಭದೇಶದ ವಿಚಾರವು ಸರಿಯಾಗಿ ತಿಳಿಯದೆ, ಅಲ್ಲಿ ಭೋಜರಾಜನೆಂಬವನಿದ್ದುದನ್ನು ಚರಿತೆಯು ಹೇಳುವುದಿಲ್ಲವಾದುದರಿಂದ ಚಂಪೂರಾಮಾಯಣಕರ್ತನು ಯಾವನೋ ಭೋಜನಾಮಕನಾದ ವಿದರ್ಭರಾಜನೋರ್ವನು.

(೨) ವಾತಂಜಲ ಸೂತ್ರವೃತ್ತಿ:—ಪತಂಜಲಿಯು ವಾಙ್ಮನಶ್ಶರೀರಗಳ ಮಲಾಪನಯನಾರ್ಥವಾಗಿ ಮೂರುವಿಧ ಗ್ರಂಥಗಳನ್ನು ಬರೆದಿರುವುದಾಗಿ—

ಸೂತ್ರಾಣಿ ಯೋಗಶಾಸ್ತ್ರೇ ವೃದ್ಧಶಾಸ್ತ್ರೇಚ ವಾರ್ತಿಕಾನಿತತಃ
ಕೃತ್ವಾಪತಂಜಲಿಮುನಿಃ ಪ್ರಚಾರಯಾಮಾಸಜಗದಿದಂತ್ರಯಂ ॥

ಎಂಬ ಶ್ಲೋಕದಿಂದ ಗೊತ್ತಾಗುತ್ತದೆ. ಇದಲ್ಲದೆ ಶ್ರೀಸದಾಶಿವೇಂದ್ರಸರಸ್ವತಿಗಳು ತಾವು ಬರೆದಿರುವ 'ಯೋಗಸುಧಾಕರ' ಎಂಬ ಯೋಗಸೂತ್ರವೃತ್ತಿಯಲ್ಲಿ:—

ಶ್ರೀಮತ್ಪತಂಜಲೇಸ್ತಸ್ಯ ಪದದ್ವಂದ್ವಮನಿಂದಿತಂ
"ವಂದೇ ವಾಙ್ಮನಃಕಾಯಾವಾಚಾಂಶುದ್ಧಿಕಾರ್ಯಸೌ" ॥

ಎಂದು ಹೇಳಿರುವುದರಿಂದಲೂ ನಿಶ್ಚಿತವಾಗುವುದು. ಅದರಂತೆ ವಾಕ್ಶುದ್ಧಿಗಾಗಿ ಅವರ ವ್ಯಾಕರಣಮಹಾಭಾಷ್ಯವೂ ಮನಶ್ಶುದ್ಧಿಗಾಗಿ ಯೋಗಶಾಸ್ತ್ರವೂ ಬರೆಯಲ್ಪಟ್ಟಿರುವುದು. ಇದರಂತೆ ಕಾಯಶುದ್ಧಿಗಾಗಿ ಅವರಿಂದ ಬರೆಯಲ್ಪಟ್ಟುದಾದ ವೈದ್ಯಗ್ರಂಥವು ಇರಬೇಕೆಂಬುದರಲ್ಲಿ ಸಂಶಯವಿರದು. ಅದರೆ ಗ್ರಂಥವಾವು

ದೆಂಬುದು ತಿಳಿಯದು. ಈ ಭೋಜನೂ ಪತಂಜಲಿಯಂತೆ ಮೂರುವಿಧ ಗ್ರಂಥಗಳನ್ನು ಬರೆದಿರುವುದಾಗಿ ತಾನು ಬರೆದಿರುವ ಯೋಗಸೂತ್ರವೃತ್ತಿಯಲ್ಲಿ ಹೇಳಿಕೊಂಡಿರುವನು. ಅಲ್ಲದೆ, ತಾನು ಬರೆದಿರುವ ಯೋಗಸೂತ್ರವೃತ್ತಿಯನ್ನು 'ರಾಜಮಾರ್ತಾಂಡ' ಎಂದು ಕರೆದಿರುವನು. ಈ ಹೇಳಿಕೆಗೆ ಅನುಸಾರವಾಗಿ ಭೋಜರಾಜನ ಹೆಸರಿನ 'ರಾಜಮಾರ್ತಾಂಡ' ಎಂಬ ವೈದ್ಯಗ್ರಂಥವು ದೊರೆಯುವುದು. ಗ್ರಂಥಾರಂಭದಲ್ಲಿಯೂ, ಗ್ರಂಥಾಂತ್ಯದಲ್ಲಿಯೂ " ಶ್ರೀಮಹಾರಾಜಭೋಜರಾಜವಿರಚಿತೋ ರಾಜಮಾರ್ತಾಂಡಾಖ್ಯೋಯೋಗಸಂಗ್ರಹಃ " ಎಂದು ಹೇಳಲ್ಪಟ್ಟಿರುವುದರಿಂದ ಭೋಜನು ರಾಜಮಾರ್ತಾಂಡವೆಂಬ ವ್ಯಾಕರಣವನ್ನು ಬರೆದಿರಬೇಕೆಂದು ಊಹಿಸಿದರೆ ತಪ್ಪಾಗದು. ಆದರೆ ಭೋಜರಾಜನ ಹೆಸರಿನಲ್ಲಿ ಶಬ್ದಶಾಸ್ತ್ರಗ್ರಂಥವಾವುದೂ ಇದ್ದುದಾಗಿ ಕಂಡುಬರುವುದಿಲ್ಲ. ಹಿಂದೆ ಹೇಳಲ್ಪಟ್ಟಿರುವುದಾದ, " ಶಬ್ದಾನಾಮನುಶಾಸನಂ .....ಜ್ವ್ವಲಾಃ ಎಂಬ ಶ್ಲೋಕದಲ್ಲಿ ಕಂಡುಬರುವ ಶಬ್ದಾನುಶಾಸನವೆಂಬ ವ್ಯಾಕರಣವೇ ವಾಕ್ಯದ್ದಿಗಾಗಿ ಬರೆದುದೆನ್ನುವುದಾದರೆ ರಾಜಮಾರ್ತಾಂಡವೆಂಬ ಹೆಸರು ಅದಕ್ಕಿರುವುದೋ ಇಲ್ಲವೋ ಎಂಬುದನ್ನು ಗ್ರಂಥಪರಿಚಯವಿಲ್ಲದೆ ಹೇಳುವುದು ಸಾಧುವಾಗಿ ತೋರುವುದಿಲ್ಲ. ಹೀಗೆ ಹೇಳುವುದರಿಂದ ಅವನು ಇತರಗ್ರಂಥಗಳನ್ನು ಬರೆಯಲಿಲ್ಲವೆಂದು ಹೇಳುವ ಸಾಹಸಕ್ಕೆ ನಾವು ಹೋಗುವುದಿಲ್ಲ.

ಇದಲ್ಲದೆ ಮಾಳವದೇಶದ ಪರಮಾರವಂಶದಲ್ಲಿ ಭಿನ್ನ ಭಿನ್ನ ಕಾಲಗಳಲ್ಲಿ ಎಂದರೆ ಸುಮಾರು ಕ್ರಿ. ಶ. ೫೭೫ರಲ್ಲಿ, ಕ್ರಿ. ಶ. ೬೬೫ರಲ್ಲಿ, ಕ್ರಿ. ಶ. ೧೦೪೪ರಲ್ಲಿ ಭೋಜರಾಜನೆಂಬುವರು ಮೂವರು ಆಳಿದುದಾಗಿಯೂ, ಅವರು ಪ್ರಸಿದ್ಧರೂ, ಯೋಧ್ಧರೂ ಮತ್ತು ವಿದ್ಯಾವಿಲಾಸಿಗಳಾಗಿದ್ದುದಾಗಿಯೂ, ಇವರಲ್ಲಿ ರಾಜಮಾರ್ತಾಂಡಕಾರನಾದ ಭೋಜನಾರೆಂಬುದು ತಿಳಿಯದಾಗಿ: –

> " ಪ್ರಮಾರವಂಶೋದ್ಭೂತಾ ಭೋಜನಾಮಾನಸ್ತ್ರಯೋ.....ಪ್ರಸಿದ್ಧಾಃ ಪರಾಕ್ರಮಶಾಲಿನೋ ವಿದ್ಯಾವಿಲಾಸಿನಶ್ಚ । ತೇಷುಕತಮೋಯಂ ರಾಜಮಾರ್ತಾಂಡಪ್ರಣೇತಾ ಭೋಜ ಇತಿ ನಿರ್ಣೇತುಂ ನಕಿಂಚಿದಪಿಸಾಧನಮುಪಲಭೇ " ಎಂದು ಸಾಶಂಕರಾಗಿ ಹೇಳಿರುವುದು ಕಂಡುಬರುತ್ತದೆ.§

ಪ್ರಕೃತ ದೊರೆಯುವುವಾದ ಶಾಸನ, ಪ್ರಶಸ್ತಿ, ಮತ್ತು ಭೋಜನ ವಿಚಾರವಾಗಿ ಹೇಳುವ ಮುಖ್ಯಗ್ರಂಥಗಳಲ್ಲಿ ಇವನಿಗಿಂತ ಹಿಂದೆ ಆಳಿಹೋದ ಇಬ್ಬರು ಭೋಜರಾಜರಹೆಸರು ಇರುವಂತೆಲ್ಲಿಯೂ ಕಂಡುಬರುವುದಿಲ್ಲ. ಪರಮಾರ ಭೋಜವಂಶಾವಳಿಯು ಉಪೇಂದ್ರರಾಜ (ಕೃಷ್ಣರಾಜ) ನಿಂದಾರಂಭಿಸಲ್ಪಟ್ಟುದಾಗಿ ಭಿನ್ನ ಭಿನ್ನ

§ ತತ್ಪ್ರಕಾಶದ ಮುನ್ನುಡಿ ಪುಟ ೧

ಗ್ರಂಥಗಳಲ್ಲಿ, ಶಾಸನ, ಪ್ರಶಸ್ತಿಗಳಲ್ಲಿ, ಕಂಡುಬರುವುದನ್ನು ಮೊದಲೇ ಹೇಳಿರುವೆವು. ಅದರಂತೆ ಭೋಜರಾಜನು ಮೊದಲನೆಯವನು ಹೊರ್ತು ಮೇಲೆ ಹೇಳಿರುವಂತೆ ಮೂರನೆಯವನಲ್ಲ. ಈ ಕಾರಣಗಳಿಂದ ತತ್ತ್ವಪ್ರಕಾಶದ ಮುನ್ನುಡಿಕಾರರ ಹೇಳಿಕೆಯು ಅದರಣೀಯವಾಗದು.

ರಾಜಮಾರ್ತಾಂಡವೆಂಬ ವೈದ್ಯಗ್ರಂಥಕರ್ತೃತ್ವವಿಚಾರವಾಗಿ ಇಷ್ಟು ಹೇಳಬಹುದಾಗಿದೆ:—

ಮುಖಪತ್ರದಲ್ಲಿ 'ಶ್ರೀಭೋಜಮಹಾರಾಜ ವಿರಚಿತೋ ರಾಜಮಾರ್ತಾಂಡಃ' ಎಂದೂ, ಗ್ರಂಥಾಂತ್ಯದಲ್ಲಿನ ಶ್ಲೋಕವು:—

ಸಮಸ್ತಪಾಥೋನಿಧಿವೀಚಿಸಂಚಯು
ಪ್ರವರ್ತಿತಾಂಡೋಳಸ ಕೇಳಿಕೀರ್ತಿನಾ
ಪ್ರಕಾಶಿತೋ ಭೋಜನೃಪೇಣ ದೇಹಿನಾಂ
ಹಿತಾಯ ನಾನಾವಿಧಯೋಗಸಂಗ್ರಹಃ ॥

ಎಂದಿರುವುದರಿಂದಲೂ, 'ಶ್ರೀ ಮಹಾರಾಜಭೋಜರಾಜ ವಿರಚಿತೋ ರಾಜಮಾರ್ತಾಂಡನಾಮಾ' ಎಂಬ ಗದ್ಯದಿಂದಲೂ ಈ ಭೋಜರಾಜನೇ ಬರೆದುದೆಂದು ಸ್ಪಷ್ಟವಾಗುತ್ತದೆ. ರಾಜಮಾರ್ತಾಂಡವೆಂಬ ಯೋಗಸೂತ್ರ ವೃತ್ತಿಯನ್ನು ಬರೆದಿರುವುದರ ವಿಚಾರವಾಗಿ,

ಉತ್ಸೃಜ್ಯ ವಿಸ್ತರಮುದಸ್ಯ ವಿಕಲ್ಪಜಾಲಂ
ಫಲ್ಗುಪ್ರಕಾಶಮವಧಾರ್ಯ ಚ ಸಮ್ಯಗರ್ಥಾನ್
ಅಂತಃ ಪತಂಜಲಿಮುನೇಃ ವಿವೃತಿರ್ಮಯೇಯಂ
ಆತನ್ಯತೇ ಬುಧಜನಪ್ರತಿಬೋಧಹೇತುಃ ॥ ಅಥ ಯೋಗಾನುಶಾಸನಂ ॥೧॥

ಅನೇನಸೂತ್ರೇಣ ಶಾಸ್ತ್ರಸ್ಯ ಸಂಬಂಧಾಭಿಧೇಯ ಪ್ರಯೋಜನಾನಿ ಆಖ್ಯಾಯಂತೇ ....ಎಂದೂ, ಗ್ರಂಥಾಂತ್ಯದಲ್ಲಿಃ—

ಸರ್ವೇಯಸ್ಯ ಯಶಃಪ್ರತಾಪವಸತೇಃ ಪಾದಾಂತಸೇವಾಸತಿ
ಪ್ರಭ್ವಶ್ಯನ್ಮೆಕುಟೇಷು ಮೂರ್ಧಸು ದಧತ್ಯಾಜ್ಞಾಂ ಧರಿತ್ರೀಭೃತಃ
ಯದ್ಭಕ್ತ್ಯಾಬ್ಜಮವಾಪ್ಯ ಸರ್ಮವಸಮಂ ವಾಗ್ದೇವತಾಪಿಶ್ರಿತಾ
ಸಃ ಶ್ರೀಭೋಜ ಮಹೀಪತಿಃ ಫಣಪತೇಃ ಸೂತ್ರೇಷುವೃತ್ತಿಂ ವ್ಯಧಾತ್ ॥

'ಇತಿ ಶ್ರೀಮಹಾರಾಜಾಧಿರಾಜ ಶ್ರೀಭೋಜದೇವವಿರಚಿತಾಯಾಂ ರಾಜಮಾರ್ತಾಂಡಾಭಿಧಾಯಾಂ ಪತಂಜಲಯೋಗಶಾಸ್ತ್ರವೃತ್ತೌ ಕೈವಲ್ಯಪಾದಶ್ಚತುರ್ಥಃ' ಎಂದು ಹೇಳಲ್ಪಟ್ಟಿರುವುದರಿಂದ ಹಿಂದೆ ಸೂಚಿತವಾಗಿರುವ ಈ ಭೋಜನೇ ಧಾರಾ

ನಗರೇಶ್ವರನೆಂದೂ, ಇವನೇ ಇದರ ಕರ್ತೃವೆಂದೂ, ಅನ್ಯಭೋಜರಾರೂ ಪರಮಾರ ವಂಶಾವಳಿಯಲ್ಲಿ ಕಂಡುಬರದೆ ಇರುವುದರಿಂದ ಇವನ ಹೊರ್ತು ಮತ್ತಾರೂ ಅಲ್ಲ ವೆಂದು ಸ್ಪಷ್ಟವಾಗುತ್ತದೆ.

(೩) ತತ್ತ್ವಪ್ರಕಾಶ:—ಇದನ್ನೂ ಭೋಜದೇವನು ಬರೆದುದಾಗಿ.—

ಯಸ್ಯಾಖಿಲಂ ಕರತಲಾಮಲಕಕ್ರಮೇಣ
ದೇವಸ್ಯವಿಸ್ಫುರತಿ ಚೇತಸಿ ತತ್ತ್ವಜಾತಂ
ಶ್ರೀಭೋಜದೇವನೃಪತಿಃ ಸ ಶಿವಾಗಮಾರ್ಥ
ತತ್ತ್ವಪ್ರಕಾಶಮಸಮಾನಮಿದಂ ವ್ಯಧತ್ತ ॥

ಎಂಬ ಗ್ರಂಥಾಂತ್ಯಶ್ಲೋಕದಿಂದ ತಿಳಿಯಬರುತ್ತದೆ. ಇದರಲ್ಲಿ ೬ ಪರಿಚ್ಛೇದ ಗಳಿರುವು. ಇದರಲ್ಲಿ ಧಾರಾನಗರದ ಭೋಜರಾಜನೆಂದು ಸ್ಪಷ್ಟವಾಗಿ ಹೇಳದಿದ್ದರೂ ಶೈವಸಂಪ್ರದಾಯ ಪ್ರವರ್ತಕನಾದ ಈತನೇ ಬರೆದಿರಬಹುದಾದ ಊಹೆಯು ನ್ಯೂನತೆಯಾಗದು. ಇದಕ್ಕೆ ಶ್ರೀಕುಮಾರನೆಂಬವನು 'ತಾತ್ಪರ್ಯ ದೀಪಿಕಾ' ಎಂಬ ವ್ಯಾಖ್ಯಾನವನ್ನು ಬರೆದಿರುವುದಾಗಿ "ಇತಿ ಭಾರದ್ವಾಜ ಕುಲಾಲಂಕರಣಭೂತೇನ ಶಂಕರಸೂನುನಾವಿಧಿವಿಹಿತ ಸೋಮರಸಾಸ್ವಾದನ ಪರಿತೋಷಿಣಾ ಶಿವಾಂಘ್ರಿ ಕಮಲದ್ವಯಾಸಕ್ತ ಮಧುಕರಾಯಮಾಣ ಮಾನಸೇನ ಶ್ರೀಮತಾಶ್ರೀಕುಮಾರೇಣ ರಚಿತಾ ತತ್ತ್ವಪ್ರಕಾಶ ತಾತ್ಪರ್ಯದೀಪಿಕಾ ಪರಿಪೂರ್ಣಾ" ಎಂಬ ಗ್ರಂಥಾಂತ್ಯ ಗದ್ಯ ದಿಂದ ತಿಳಿಯಬರುತ್ತದೆ. ಗ್ರಂಥವಿಷಯವು ಸುಲಭವಾಗಿಯೂ ಶೈವತತ್ತ್ವನಿರ್ಣಯ ಬೋಧಕವಾಗಿಯೂ ಆಪಾತತಃ ರಮಣೀಯವಾಗಿರುವುದರಿಂದ ಇದಕ್ಕೆ ತತ್ತ್ವ ಪ್ರಕಾಶವೆಂಬ ಹೆಸರು ಸಲ್ಲುತ್ತದೆ. ಇದರ ಒಂದು ಶ್ಲೋಕವನ್ನು ಮಾದರಿಗಾಗಿ ಬರೆಯುವೆವು.

ಕರ್ಮಾನಾದಿಪ್ರೋಕ್ತಂ ಧರ್ಮಾಧರ್ಮಾತ್ಮಕಂ ವಿಚಿತ್ರಂಚ
ಮಾಯಾಚವಸ್ತುರೂಪಾ ಮೂಲಂವಿಶ್ವಸ್ಯನಿತ್ಯಾ ॥
ತತ್ತ್ವಪ್ರಕಾಶ ೧—೧೪.

(೪) ಸರಸ್ವತೀಕಂಠಾಭರಣ:—ಇದು ಅಲಂಕಾರ ಗ್ರಂಥ. ಇದರಲ್ಲಿ ೫ ಪರಿ ಚ್ಛೇದಗಳಿರುವುವು. ಇದಕ್ಕೆ ರತ್ನೇಶ್ವರನೆಂಬುವನು 'ದರ್ಪಣ' ಎಂಬ ವ್ಯಾಖ್ಯಾನ ವನ್ನೂ' ಹರಿನಾಥನು 'ಮಾರ್ಗಣ' ಎಂಬ ವ್ಯಾಖ್ಯಾನವನ್ನೂ ಲಕ್ಷ್ಮೀನಾಥಭಟ್ಟ ನೆಂಬವನು 'ದುಷ್ಕರಚಿತ್ರಪ್ರಕಾಶಿಕಾ' ಎಂಬ ವ್ಯಾಖ್ಯಾನವನ್ನೂ ಬರೆದಿರುವುದಲ್ಲದೆ ಜಗದ್ಧರನೂ ಮತ್ತು ಹರಿಕೃಷ್ಣವ್ಯಾಸನೂ ಟೀಕೆಯನ್ನು ಬರೆದಿರುವರು\$ ಗ್ರಂಥದ ಮುಖಪತ್ರದಲ್ಲಿ ಸಂಶಯಕ್ಕೆಆಸ್ಪದವಿಲ್ಲದಂತೆ "ಧಾರೇಶ್ವರ ಶ್ರೀಭೋಜದೇವ ವಿರ

\$ S. K De's History of Sanskrit poetics Vol I P. 144

ಚಿತಂ ಸರಸ್ವತೀ ಕಂಠಾಭರಣಂ" ಎಂದೂ ಗ್ರಂಥಾಂತ್ಯದಲ್ಲಿ "ಇತಿ ಶ್ರೀಮಹಾರಾಜಾಧಿರಾಜ ಶ್ರೀ ಭೋಜದೇವವಿರಚಿತೇ ಸರಸ್ವತೀ ಕಂಠಾಭರಣಾಲಂಕಾರೇ" ಎಂದು ಹೇಳಿ ಮುಗಿಸಲ್ಪಟ್ಟಿರುವುದು.

ದ್ವಿನಿರ್ವರ್ಣಾಃಪದಂವಾಕ್ಯಮಿತ್ಯಾಸ್ಪದಚತುಷ್ಟಯಂ
ಯಸ್ಯಾಸ್ಸೂಕ್ಷ್ಮಾದಿಭೇದೇನ ವಾಗ್ದೇವೀಂತಾಮುಪಾಸ್ಮಹೆ ॥

ಎಂಬ ಮಂಗಳಾಚರಣದಲ್ಲಿಯೇ ತನ್ನ ಗ್ರಂಥೋದ್ದೇಶವನ್ನು ಸೂಚಿಸಿ ಸಾಧಿಸಿರುವನು.

(೫) ಶೃಂಗಾರಪ್ರಕಾಶ:—ಸರಸ್ವತೀಕಂಠಾಭರಣ ಕಾರನಾದ ಭೋಜನೇ ಇದನ್ನೂ ಬರೆದುದಾಗಿದೆ. ಇದು ಲಕ್ಷಣಗ್ರಂಥ. ಇದರಲ್ಲಿ ೩೬ ಭಾಗಗಳಿರುವುವು. ಇದಕ್ಕಿಂತ ದೊಡ್ಡದಾದ ಅಲಂಕಾರಗ್ರಂಥವು ಇದುವರೆಗೆ ಯಾವುದೂ ದೊರೆತಿರುವುದಿಲ್ಲ. ಇದರಲ್ಲಿ ೧-೮ರ ವರೆಗೆ ವ್ಯಾಕರಣ ವಿಚಾರವೂ ೯-೧೦ ದೋಷಗಳ ವಿಚಾರವೂ ೧೦ ೧೨ ಮಹಾಕಾವ್ಯಲಕ್ಷಣ, ರೂಪಕ ವಿಚಾರಗಳೂ, ಉಳಿದ ೨೪ ಭಾಗಗಳಲ್ಲಿ ರಸವಿವೇಚನೆಯೂ ಮಾಡಲ್ಪಟ್ಟಿರುವುದಲ್ಲದೆ ಶೃಂಗಾರರಸದ ವಿಚಾರವಾಗಿ ಹೆಚ್ಚಾಗಿ ಹೇಳಲ್ಪಟ್ಟಿರುವುದರಿಂದ ಈ ಗ್ರಂಥಕ್ಕೆ ಶೃಂಗಾರಪ್ರಕಾಶವೆಂಬ ಹೆಸರೇ ಕೊಡಲ್ಪಟ್ಟಿದೆ. ಶಾರದಾ ತನಯನು ಬರೆದುದಾದ ಭಾವಪ್ರಕಾಶವು ಭೋಜನಿಂದ ಬರೆಯಲ್ಪಟ್ಟುವಾದ ಲಕ್ಷಣಗ್ರಂಥಗಳ ಸಾರಾಂಶ ಮಾತ್ರ

ಭೋಜನು ಸರಸ್ವತೀಕಂಠಾಭರಣ ಎಂಬೊಂದು ಸಂಸ್ಕೃತ ಪಾಠಶಾಲೆಯೊಂದನ್ನೂ, ಬಾವಿಯೊಂದನ್ನೂ ಕಟ್ಟಿಸಿದುದಾಗಿ ಹೇಳಲ್ಪಟ್ಟಿದೆ.†

ಇವನು ತನ್ನ ಹೆಸರಿನಲ್ಲಿ ಭೋಜಸಾಗರವೆಂಬ ವಿಶಾಲಕಾಸಾರವನ್ನು ಕಟ್ಟಿಸಿದನು. ಇದು ೨೫೦ ಚದುರ ಮೈಲಿಗಳ ವಿಶಾಲತೆಯನ್ನೊಳಗೊಂಡು ಭೂಪಾಲ ಸಂಸ್ಥಾನದ ಆಗ್ನೇಯ ದಿಕ್ಕಿನಲ್ಲಿದ್ದು ಕ್ರಿ. ಶ. ೧೫೫೦ನೆಯ ಶತಮಾನದವರೆಗೆ ಆಗಣ ಕಲಾನೈಪುಣ್ಯವನ್ನು ಜಗತ್ತಿಗೆ ಸಾರುತ್ತ ಲೋಕವನ್ನು ಬೆಡಗುಗೊಳಿಸುತ್ತಿದ್ದಿತು.‡

ಲೋಕಬೋಧಕವಾದ ಮಹಾರಾಜಾಧಿರಾಜ ಭೋಜರಾಜನ ದಾನಪತ್ರದ ಶ್ಲೋಕಗಳೆರಡನ್ನು ಬರೆದುಮುಗಿಸುವೆವು.

ಪಾತಾಳ್ಪವಿಭ್ರಮಮಿದಂ ವಸುಧಾಧಿಪತ್ಯ
ಮಾಪಾತಮಾತ್ರಮಧುರೋ ವಿಷಯೋಪಭೋಗಃ

---

* Sanskrit Poetics Vol. I P. 144.

† ಸರಸ್ವತೀ ಕಂಠಾಭರಣದ ಮುನ್ನುಡಿ ಪುಟ ೧೯.

‡ Vincent Smith's Early History of India P 396.

ಪ್ರಾಣಾಸ್ತೃಣಾಗ್ರಜಲಬಿಂದು ಸಮಾ ನರಾಣಾಂ
ಧರ್ಮಸ್ಸಖಾಪರಮಹೋ ಪರಲೋಕಯಾನೇ ॥

ಈ ಪ್ರಭುತ್ವವಾದರೋ ಮಹಾವಾಯುಪಥದಲ್ಲಿರುವ ಮೇಘಶೋಭೆಯಂತೆ ಕೇವಲ ಅಸ್ಥಿರವಾದುದು. ವಿಷಯಸುಖಗಳಾದರೋ ತತ್ತತ್ಕಾಲದಲ್ಲಿ ಮಾತ್ರವೇ ರುಚಿಸತಕ್ಕುದಾಗಿರುವುದು. ಪ್ರಾಣಗಳಾದರೋ ತೃಣಾಗ್ರಜಲಬಿಂದುವಿನಂತೆ ಕ್ಷಣಿಕಗಳು. ಅಹೋ! ಮೋಕ್ಷೇಚ್ಛುಗಳಿಗೆ ಪರಲೋಕಸಾಧನಕ್ಕೆ ಧರ್ಮವೆಂಬ ಸ್ನೇಹಿತನು ಹೊರ್ತು ಮತ್ತಾವುದೂ ಇಲ್ಲ.

ಭ್ರಮತ್ಸಂಸಾರಚಕ್ರಾಗ್ರ
ಧಾರಾಧಾರಾಮಿಮಾಂ ಶ್ರಿಯಂ
ಪ್ರಾಪ್ಯಯೇನದದುಸ್ತೇಷಾಂ
ಪಶ್ಚಾತ್ತಾಪಃಪರಂಫಲಂ ॥

ಗಿರ್ರನೆ ತಿರುಗುತ್ತಿರುವ ಈ ಭವಸಂಸಾರಚಕ್ರದಲ್ಲಿ ಐಶ್ವರ್ಯವುಳ್ಳವನು ಪಾತ್ರವರಿತು ದಾನನೂಡದೇ ಹೋದಲ್ಲಿ ಅಂತಹವನಿಗೆ ಕೊನೆಯಲ್ಲಿ ಪಶ್ಚಾತ್ತಾಪ ಪಡುವುದೇ ಫಲವಾಗಿರುವುದು.

ಧ ನ ಪಾ ಲ

ಆಸೀದ್ವಿಜನ್ಮಾಖಿಲ**ಮಧ್ಯದೇಶೇ** ಪ್ರಕಾಶಶಾಂತಾತ್ಮಸವೇಶಜನ್ಮಾ
ಆಲಬ್ಧದೇವರ್ಷಿರಿತಿ ಪ್ರಸಿದ್ಧಂ ಯೋದಾನವರ್ಷಿತ್ವವಿಭೂಷಿತೋಽಪಿ ॥
ಶಾಸೇಷ್ಪಧೀತೀಃಕುಶಲಃ ಕಲಾಸು ಬಂಧೇಚಬೋಧೇಚ ಗಿರಾಂಪ್ರಕೃಷ್ಟಃ
ತಸ್ಯಾತ್ಮಜನ್ಮಾ ಸಮಭೂನ್ಮಹಾತ್ಮಾ ದೇವಃಸ್ವಯಂಭೂರಿವ **ಸರ್ವದೇವಃ**
ತಜ್ಜನ್ಮಾ ಜನಕಾಽಪ್ರಿಪಂಕಜರಜಃಸೇವಾಪ್ತವಿದ್ಯಾಲವೋ
ವಿಪ್ರಃ **ಶ್ರೀಧನಪಾಲ** ಇತ್ಯವಿರದಾಮೇತಾಮಬಧ್ನಾತ್ಕಥಾಂ ''

ಎಂಬುದರಿಂದಲೂ "ಪುರಾಪ್ರಸಿದ್ಧವಿಶಾಲಾಯಾಂ ವಿಶಾಲಾಯಾಂಪುರಿ ಮಧ್ಯದೇಶ‡ಜನ್ಮಾಕಾಶ್ಯಪಗೋತ್ರಃ ಸರ್ವದೇವನಾಮಾದ್ವಿಜಃ" ಎಂದು ಹೇಳುವ ಪ್ರಬಂಧ ಚಿಂತಾಮಣಿಯಿಂದಲೂ.

* ತಿಲಕಮಂಜರೀ ಪುಟ ೬ ಶ್ಲೋ ೫೧, ೫೨, ೫೩.

‡ ಉತ್ತರಕ್ಕೆ ಹಿಮಾಲಯ ದಕ್ಷಿಣಕ್ಕೆ ವಿಂಧ್ಯ ಪಶ್ಚಿಮಕ್ಕೆ ವಿನಾಶಿನಿ, ಪೂರ್ವಕ್ಕೆ ಪ್ರಯಾಗ ಈ ಮಧ್ಯದ ಪ್ರದೇಶಕ್ಕೆ ಮಧ್ಯದೇಶವೆಂದು ಹೆಸರು.

ಸವಃಪಾತುಜಿನಃಕೃತ್ಸ್ನವಿಸಾಕ್ಷೀತೀಯಃ ಪ್ರತಿಕ್ಷಣಂ
ರೂಪೈರನಂತೈಕೇಕ ಜಂತೋರ್ವ್ಯಾಪ್ತಂಜಗತ್ತ್ರಯಂ ॥

ಎಂಬ ಮಂಗಳಾಚರಣದಿಂದ ಇವನು ಜೈನಬ್ರಾಹ್ಮಣನು. ಮಧ್ಯದೇಶಕ್ಕೆ ಸೇರಿದ ವಿಶಾಲನಗರದವನು. ಕಾಶ್ಯಪಗೋತ್ರದವನು, ಸರ್ವದೇವನ ಮಗನೆಂಬುದು$ ಸ್ಪಷ್ಟವಾಗುತ್ತದೆ, ಇವನು ಸಕಲಶಾಸ್ತ್ರಾರ್ಥಗಳನ್ನು ತಂದೆಯ ಬಳಿಯಲ್ಲಿ ಕಲಿತು ಧಾರಾನಗರಾಧಿನಾಥನಾದ ಮುಂಜರಾಜನಿಂದ 'ಸರಸ್ವತಿ'ಎಂಬ ಬಿರುದನ್ನು ಹೊಂದಿದುದಾಗಿ.—

ಅಳ್ಪಶ್ಲೋಕೈಪಿ ವಿವಿಕ್ತ ಸೂಕ್ತಿ ರಚನೇಯಃ ಸರ್ವವಿದ್ಯಾಭ್ಯಿನಾ
ಶ್ರೀಮುಂಜೇನ **ಸರಸ್ವತೀತಿ** ಸದಸಿಕ್ಷ್ಮಾಣೀಭೃತಾವ್ಯಾಹೃತಃ ‡

ಎಂಬುದರಿಂದ ತಿಳಿಯಬರುತ್ತದೆ. ಇವನು ಕಾಲಕ್ರಮದಲ್ಲಿ ಭೋಜರಾಜನ ಸಭಾಪಂಡಿತನಾಗಿ "ಮಹಾಕವಿ" ಎನಿಸಿಕೊಂಡನು.

ಕಾಲ:—ಇವನು ಮುಂಜನ ಆಸ್ಥಾನದಲ್ಲಿದ್ದು ಭೋಜನ ಸಭಾಮಂಡನಾಯಮಾನನಾಗಿದ್ದುದರಿಂದ ಇವನನ್ನು ಕ್ರಿ. ಶ. ಹನ್ನೊಂದನೆಯ ಶತಮಾನದವನೆನಬೇಕಾಗುವುದು.

ಗ್ರಂಥಗಳು:—(೧) ತಿಲಕಮಂಜರೀ (೨) ಋಷಭಪಂಚಾಶಿಕಾ. ಇವುಗಳಲ್ಲಿ ತಿಲಕಮಂಜರೀಯೆಂಬುದು ದೊಡ್ಡಕಾವ್ಯ. ಋಷಭಪಂಚಾಶಿಕೆಯು ೫೦ ಶ್ಲೋಕಗಳಿಂದಕೂಡಿರುವ ಪ್ರಾಕೃತನಿಬದ್ಧ ಗ್ರಂಥ.

ಜಿನಾಗಮ ಕಥೆಗಳನ್ನು ತಿಳಿಯಬೇಕೆಂಬ ಕುತೂಹಲಚಿತ್ತನಾದ ಭೋಜರಾಜನಿಗೋಸ್ಕರ 'ತಿಲಕಮಂಜರೀ' ಎಂಬ ಕಾವ್ಯವನ್ನು ಬರೆದುದಾಗಿ.—

ನಿಶ್ಶೇಷವಾಙ್ಮಯವಿದೋಪಿ ಜಿನಾಗಮೋಕ್ತಾಃ
ಶ್ರೋತುಂಕಥಾಃ ಸಮುಪಜಾತಕುತೂಹಲಸ್ಯ
ತಸ್ಯಾವದಾತಚರಿತಸ್ಯ ವಿನೋದಹೇತೋ
ರಾಜ್ಞಃ ಸ್ಫುಟಾದ್ಭುತರಸಾರಚಿತಾಕಥೇಯಂ ॥

ಎಂಬ ಶ್ಲೋಕದಿಂದ ವ್ಯಕ್ತವಾಗುತ್ತದೆ. ತಿಲಕಮಂಜರಿಯ ಕೆಲವು ಭಾಗಗಳು ಬಾಣನ ಕಾದಂಬರಿಯನ್ನು ಹೋಲುವುವಾದರೂ, ಶೈಲಿಯು ಪೇಶಲವಾಗಿರದೆ

$ ಮೇರುತುಂಗಾಚಾರ್ಯನು ತನ್ನ ಗ್ರಂಥದಲ್ಲಿ ಧನಪಾಲ, ಶೋಭನರೆಂಬ ಸೋದರದ್ವಯವನ್ನು ಸಾಧಿಸಿರುವನು. ಹಾಗೆ ಇದ್ದುದಾಗಿದ್ದರೆ ಪದ್ಯಗಳನು ತಿಲಕಮಂಜರಿಯಲ್ಲಿ ಬರೆಯದೇ ಇರುತ್ತಿರಲಿಲ್ಲ.

‡ ತಿಲಕಮಂಜರೀ ಪುಟ ೬ ಶ್ಲೋಕ ೫೩

ಮೇಲೆ ಹೇಳಿದ ಪ್ರತಿಜ್ಞೆಯಂತೆ ಅಲ್ಲಲ್ಲಿ ಅದ್ಭುತರಸಗಳೊಡನೆ ಕೂಡಿರುವುದಾದರೂ, ಕೆಲವು ಭಾಗಗಳು ರಸಯುಕ್ತವಾಗಿಯೂ ರಮಣೀಯವಾಗಿಯೂ ಇರುವುವು.

ಅಯೋಧ್ಯಾಧಿಪನಾದ ಮೇಘವಾಹನನಿಗೆ ಮದಿರಾವತಿ ಎಂಬ ಹೆಂಡತಿ. ಬಹುಕಾಲಾನಂತರ ಇವರಿರ್ವರಿಗೆ ಹರಿವಾಹನನೆಂಬ ಮಗನು ಜನ್ಮಿಸಿದಂತೆಯೂ ಕಾಲಕ್ರಮದಲ್ಲಿ ಯೌವನಸಂಪನ್ನನಾದ ಇವನಿಗೂ ವಿದ್ಯಾಧರಕನ್ಯೆಯಾದ ತಿಲಕ ಮಂಜರಿಗೂ ವಿವಾಹವು ನಡೆದು ಪರಸ್ಪರಾನುರಾಗವರ್ತಿಗಳಾಗಿ ಸುಖದಿಂದ ಇದ್ದರೆಂಬುದು ಕಥಾವಸ್ತು.

ಇದರಲ್ಲಿ ವೈಶಾಖಕನುಹೇಳುವ ಪ್ರಭಾತಾರಂಭವರ್ಣನವು ಹೀಗಿರುವುದು:—

ಗೇಹೇದೇವ್ಯಾಃ ಸುಷಿರನಿಪತನ್ಮಾರುತೋತ್ಥಾನವೇಣೌ
ಧೃತ್ವಾಕೋಣಂ ವಿರಚಿತವಲಯೋ ವಾದಯ್ಯ ದಂತವೀಣಾಂ
ರಾತ್ರಿಂದ್ರಿತ್ರೈಃ ಸಹ ಸಹಚರೈಃ ಸೇವತೇ ಕ್ಷಪ್ತಿಪಕ್ಷಃ
ಕಿಂ ಸಂಗೀತಂ ನಹಿ ನಹಿ ಮುಹೀನಾಥ ಹೇಮಂತ ಶೀತಂ ॥
ಇಯಂ ವ್ಯೋಮಾಂಭೋಧೇಸ್ತಟಮಿವ ಜವಾತ್ಪ್ರಾಪ್ಯ ತಪನಂ
ನಿಶಾಸ್ಯೈರ್ವಿಶ್ಲಿಷ್ಯದ್ಭಿನ ಘಟತ ಕಾಷ್ಠಾ ವಿಘಟಿತೇ
ಅಸಾವಪ್ಯಾಮೂಲತ್ಪ್ರುಟತಕ ರಸಂತಾಸತನಿಕಃ
ಪ್ರಯಾತ್ಯಸ್ತಂ ಸ್ರಸ್ತಃ ಶಿತಪಟ ಇವ ಶ್ವೇತಕಿರಣಃ ॥
ಭವತ್ಯಾವಿರ್ಭಾವಃ ಶಿಖಿರಪರಿಪಾಟ್ಯಾ ಶಿಖಿರಿಣಾಂ
ವನಾನಾಂ ವೃಕ್ಷಶ್ರೀರಕಲಿತವಿವೇಕಾ ವಿಕಸತಿ
ಸಸೀಮಾಸಗ್ರಾಮಾಸನಗರ ಸರಿದ್ವೀಪವಲಯಾ
ತವಿಸ್ರಾ ದುನ್ಮಜ್ಜ ತ್ಪು ದಧಿಜಲಮಧ್ಯಾದಿವ ಮಹೀ ॥
ಯಥಾ ಸ್ಥೂಲಂ ಮೂಲೇಷವಕರತಿ ದೃಶಾಮರ್ಧನಿಕರೋ
ಯಥಾ ಸೂಕ್ಷ್ಮಂ ಲಕ್ಷ್ಮೀಂ ತ್ಯಜತಿ ವಿಧುರಸ್ತಾರಕಗಣಃ
ಯಥಾವೃದ್ಧಂಬಂಧಃ ಕಮಲಮುಕುಲಾನಾಂ ವಿಘಟತೇ
ಯಥಾನಿಮ್ನಂಭೂಮ್ಯಾ ರಚಯತಿ ಪದಂ ಧ್ವಾಂತನಿಚಯಃ ॥
ಅಯಂವಾರಸ್ತ್ರೀಣಾಂ ಸುರತವಿಧಿವೈಜಾತ್ಯಪಿಶುನ
ಸ್ತಿರೋಧತ್ತೇ ಕಾಂಚಿತ್ಪ್ರಸಿಬಹಲಿತಃ ಕಂದರನಿನದಃ ॥
ಅಸಾವಪ್ಯಾವೃತ್ತಿಪ್ರಸೃತರವರೇಖಾವಲಿಖಿತೈ
ರ್ಗವಲಕ್ಷ್ಮಿದ್ಭಿರ್ನದ್ಯಾಂ ವ್ರಜತಿ ರತಿಸಾರಾವತಗಣಃ ॥
ಅವಶ್ಯಾಯಸ್ಪಂದೈ ರಭನರತನಿಷ್ಪಂದವಪುಷಾಂ
ವಿಲಾಸಿದ್ವಂದ್ವಾನಾಂ ದ್ರುತನಿಬಿಡತಾಶ್ಲೇಷವಿಧಯಃ
ದಿಶಂತೋ ಮೌಖರ್ಯಂ ಭವನವಲಭೀಜಾಲಕಭುವಾಂ
ಧುತಕ್ಷೀಡೋದ್ಯಾನದ್ರುಮವಿತತಯೋ ವಾಂತಿ ಮರುತಃ ॥

ಪ್ರಭಾತವ್ಯಾಯಾಸೌ ರಜನಿರರುಣಜ್ಯೋತಿರರುಣಂ
ರುಣದ್ಧೀದಂ ರೋದೋ ದಿತಿದಿತಿ ತಮಸ್ತಾಮ್ಯತಿತಮಾಂ
ಪ್ರಭಾಚ್ಛದ್ರಶ್ಚಂದ್ರೋ ದಲತಿ ದಲಮೈತ್ರೀ ಜಲರುಹಾಂ
ರಹೋಽನುತ್ಸಾಹಸ್ಯ ಶ್ಲಥಯ ನೃಪ ನದ್ರಾಸುಖರಸಂ ॥*

ತಿಲಕಮಂಜರಿಯು ಹರಿವಾಹನನಿಗೆ ಬರೆದ ವಿಜ್ಞಾಪನಾ ಪತ್ರಿಕೆಯು ಇಂತಿರುವುದು:—

" ಸ್ವಸ್ತಿ ಏಕಶೃಂಗಾಚಲಕ್ಷತಾವಾಸಂ ಮಹಾರಾಜಪುತ್ರ ಶ್ರೀ ಹರಿವಾಹನ ಮುದೀರ್ಣದುರ್ವಾರದುಃಖಾತಿಲಕಮಂಜರೀ ದೂರಾನತೇನ ಮೂರ್ಧ್ನಾ ಪ್ರಣಮ್ಯ ವಿಜ್ಞಾಪಯತಿ: —

ಆಶ್ಲಿಷ್ಯಕಂರಮಮುನಾ ಮುಕ್ತಾಹಾರೇಣ ಹೃದಿನಿವಿಷ್ಟೇನ
ಸ ರುಷೇವ ವಾರಿತೋಮೇ ತ್ಪ್ರಥಮಃ ಪರಿರಂಭಣಾರಂಭಃ ॥§

ಗದ್ಯದಮಾದರಿ:—

"ಅಥಪಲ್ಲವಾಂತರಾಲಪಾತಿಭಿರುದ್ವೇಲ್ಲಿತಾರವಿಂದಿನೀದಲಕಲಾಪೈರುಲ್ಲಸಿತಾಂ ಬುರುಹ ಪರಾಗರಾಶಿಭಿರುತ್ಸಂಗಿತತರಂಗತಿಖರಶೀಕರಸಾರೈಃ ಸರಲೀಕೃತ ಸಾರಸಕ್ರೌಂಕಾರವಿರುತಿಭಿಃ ಸೌರಭಾಹೃತ ಭ್ರಮರೀನಿಕರಹ್ಯಂಕಾರ ಮನೋಹರೈಃ ಸಂತಾಪಹಾರಿಭಿಃ ಸರಃ ಸವಿಧಾರೈಃ ಸರಭಸಪರಿರಭ್ಯ ಮಾಣಸರ್ವಾಂಗಃ ಪ್ರಭೂತಕಾಲ ಪರಿಹೃತದರ್ಶನಾಯ ಪ್ರಸ್ತುತಪರಿ ಹಾಸಯೇವ ಕುತೋಽಸ್ಯಾಗತನಿದ್ರಯಾ ಮುದ್ರಿತನಯನಯುಗಳಃ ಸ್ವಪ್ನೇ ರಸಾತಲಾತ್ತತ್ಕಾದಲಮೇವೋದ್ಗತಮನೇಕ ಪುಷ್ಪಸ್ತಬಕಸಂಬಾಧ ವಿಟಪಚ್ಛನ್ನಮಚ್ಛಿನ್ನಸಂತಾನ ಮಧುಕರಸಹಸ್ರೋಪಸೇವಿತ ಮುತ್ಫುಲ್ಲ ವಲ್ಲೀ ನಿಕರಪರಿಕರಿತಯಾ ಕಿಂಚಿದಾಸನ್ನವರ್ತಿನ್ಯಾಪರಿಮ್ಲಾನಸಕಲಾವ ಯವಯಾಪಿಪ್ರತಿಕಾಲೋನ್ಮೀಲದಧಿಕಾಧಿಕಸೌಕುಮಾರ್ಯಾ ಮಂಗಲ ಲಕ್ಷ್ಮ್ಯಾ ಮುದ್ವಹಂತ್ಯಾಶ್ಚನವಕಲ್ಪಲತಯಾ ಸವಿಧಾಹಿತಾಶ್ಲೇಷವಿಷ ತ್ಪ್ರಾಪ್ತಿಮಾಯಾತಂ ವಾರಿಜಾತದ್ರುಮಮುದ್ವಾಹ್ಯೇತ್ ॥§

---

* ತಿಲಕಮಂಜರೀ ಪುಟ ೨೯೩.

§ Ibid ಪುಟ ೩೨೪.

§ Ibid ಪುಟ ೧೬೮—೧೬೯.

ಮ ಮ್ಮ ಟ

ಇವನನ್ನು ರಾಜಾನಕ ಮಮ್ಮಟನೆಂದೂ ಕರೆಯುವುದುಂಟು. ಇವನು ಕಾಶ್ಮೀರದವನು. ಕಾವ್ಯಪ್ರಕಾಶಕ್ಕೆ ವ್ಯಾಖ್ಯಾನಕಾರರಲ್ಲೊಬ್ಬನಾದ ಭೀಮಸೇನನು ಮಮ್ಮಟನು ಜಯ್ಯಟನ ಮಗನೆಂದೂ ಇವನಿಗೆ ಕಯ್ಯಟ ಮತ್ತು ಉವ್ವಟರೆಂಬ ಇಬ್ಬರು ಸೋದರರು ಇದ್ದರೆಂದೂ, ಉವ್ವಟನು ವೇದಗ್ರಂಥಗಳನೇಕಗಳಿಗೆ ವ್ಯಾಖ್ಯಾತೃವೆಂದೂ ಹೇಳಿರುವುದಲ್ಲದೆ, ಅವಂತಿಯಲ್ಲಿ ಭೋಜರಾಜನ ಆಳ್ವಿಕೆಯಲ್ಲಿ ಬರೆದುದಾಗಿ ಹೇಳಿರುವನು.*

ಉವ್ವಟನು ತನ್ನ ತಂದೆಯ ಹೆಸರು ವಜ್ರಟನೆಂದು ಹೇಳಿಕೊಂಡಿರುವುದರಿಂದ ಜಯ್ಯಟನಲ್ಲವೆಂಬುದು ಸ್ಪಷ್ಟವಾಗುವುದು.†

ಡಾ. ಹಾಲರವರೂ‡ ಮತ್ತು ವೀಬರಪಂಡಿತರೂ§ ಇವನನ್ನು ನೈಷಧಕಾರನ ಸೋದರಮಾವ (maternal uncle) ನೆಂದು ಹೇಳಿರುವರು.

ಡಾ. ಅಪ್ರಷಿಟರವರು ಕೇಶವಮಿಶ್ರನ ಹೇಳಿಕೆಯನ್ನು ಪುಷ್ಟೀಕರಿಸಿ ಮಮ್ಮಟನನ್ನು ಮಹಿಮಭಟ್ಟನೆನ್ನುವರು. ಕೇಶವಮಿಶ್ರನ ಹೇಳಿಕೆಯು ವ್ಯಕ್ತಿವಿವೇಕಕಾರನನ್ನು ಹೇಳುವುದು ಹೊರತು ಮಮ್ಮಟನ ವಿಚಾರವಾದುದಲ್ಲ. ಕೇಶವಮಿಶ್ರನು ಮಹಿಮನದೆಂದು ಉದಾಹರಿಸಿರುವ ಶ್ಲೋಕವು ಧ್ವನ್ಯಾಲೋಕದ ವೃತ್ತಿಯಲ್ಲಿ ಕಂಡುಬರುವುದು.$ ಇದೇ ಶ್ಲೋಕವು ವ್ಯಕ್ತಿವಿವೇಕದಲ್ಲಿ ಇತರ ಶ್ಲೋಕಗಳೊಡನೆ ಹೇಳಲ್ಪಟ್ಟಿರುವುದು. ವ್ಯಕ್ತಿವಿವೇಕಕಾರನು ಆ ಶ್ಲೋಕಗಳನ್ನು ಎಲ್ಲಿಂದ ತೆಗೆದುಕೊಂಡು ಹೇಳಿರುವನೆಂಬುದನ್ನು ಕೇಶವಮಿಶ್ರನು ಲಕ್ಷಿಸದೆ ಅದನ್ನು ಮಹಿಮ್ನ (ಮಹಿಮಭಟ್ಟ) ಎಂಬುವನ ಹೆಸರಿನಲ್ಲಿ ತಪ್ಪಾಗಿ ಹೇಳಿರುವುದು ಕಂಡುಬರುತ್ತದೆx ಈ ವಿಚಾರಗಳಾವುವೂ ಮಮ್ಮಟನ ಕಾವ್ಯಪ್ರಕಾಶದಲ್ಲಿ ಎಲ್ಲಿಯೂ ಹೇಳಿರುವಂತಿಲ್ಲ. ರುದ್ರಭಟ್ಟನು ರುದ್ರಟನಾದಂತೆ, ಮಹಿಮಭಟ್ಟನು ಮಮ್ಮಟನೆಂದು ಊಹಿಸಿ ಹೇಳುವ ಡಾ. ಅಪ್ರಷಿಟರವರ ಹೇಳಿಕೆಯು ಸಮರ್ಥನವಾಗದು.

---

* Introduction to Kavyaprakasha P. 6-7.
† S. K. De's Sanskrit Poetics P 55
‡ Introduction to Vasavadatta P. 55.
§ History of Indian Literature P. 232.
$ ಧ್ವನ್ಯಾಲೋಕವೃತ್ತಿ ಪುಟ ೧೪೫.
x ವ್ಯಕ್ತಿವಿವೇಕ ಪುಟ ೩೧—೧೧೪.

ಕಾಲ:—ಇವನ ಕಾಲವನ್ನು ಖಂಡಿತವಾಗಿ ಹೇಳಲಾಗದಿದ್ದರೂ ಕಾವ್ಯ ಪ್ರಕಾಶಕ್ಕೆ ಬರೆಯಲ್ಪಟ್ಟಿರುವ ಎರಡು ವ್ಯಾಖ್ಯಾನಗಳಿಂದ ಇವನ ಕಾಲವನ್ನು ಕಂಡುಹಿಡಿಯಬಹುದಾಗಿದೆ.

(೧) ಮಾಣಿಕ್ಯಚಂದ್ರನು ಕಾವ್ಯಪ್ರಕಾಶದ ವ್ಯಾಖ್ಯಾನಪೂರ್ತಿಯಾದ ಕಾಲವು ಸಂವತ್ ೧೨೧೬ ಅಥವಾ ಕ್ರಿ. ಶ. ೧೧೬೦ ಎಂದು ಸ್ಪಷ್ಟವಾಗಿ ಹೇಳಿರುವನು.

(೨) ರುಯ್ಯಕನು ತನ್ನ ವ್ಯಾಖ್ಯಾನದಲ್ಲಿ ಸ್ಪಷ್ಟವಾಗಿ ಹೇಳದಿದ್ದರೂ ಬಾಹ್ಯ ಪ್ರಮಾಣಗಳಿಂದ ರುಯ್ಯಕನು ಕ್ರಿ. ಶ. ೧೨ನೆಯ ಶತಮಾನದ ಮಧ್ಯಕಾಲದಲ್ಲಿ ದ್ದವನೆಂದು ತಿಳಿಯಬರುತ್ತದೆ.

(೩) "ಭೋಜನೃಪತೇಸ್ತತ್ಯಾಗಲೀಲಾಯತಂ" ಎಂದು ಮಮ್ಮಟನು ಉದಾಹರಿಸಿಕೊಂಡಿರುವ ಯಾವುದೋ ಶ್ಲೋಕಮಾತ್ರದಿಂದ ಮಮ್ಮಟನು ಭೋಜನ ಸಮಕಾಲೀನನೆಂದು ಹೇಳಲಾಗುವುದಿಲ್ಲ. ಏಕೆಂದರೆ ಈ ಶ್ಲೋಕದ ಮುಖ್ಯ ಗುರಿಯು ಭೋಜನ ದಾತೃತ್ವವನ್ನು ಕೊಂಡಾಡುವುದಾಗಿರುವುದು. ಆದರೆ ವ್ಯಾಖ್ಯಾನಕಾರರ ಮತವನ್ನು ಮನ್ನಿಸಿ ಧಾರಾನಗರದಲ್ಲಾಳಿದ ಭೋಜನೇ ಸರಸ್ವತೀಕಂಠಾಭರಣಕಾರನೆಂದೂ ಹೇಳುವುದಾದರೆ ಮಮ್ಮಟನು ಭೋಜನಿಗಿಂತ ಈಚೆನವನೂ ರುಯ್ಯಕನ ಪ್ರಾಚೀನನೂ ಆಗಿರಬೇಕು. ಎಂದರೆ ಕ್ರಿ. ಶ. ೧೧ನೆಯ ಶತಮಾನದ ಉತ್ತರಾರ್ಧದವನೆಂದು ತರ್ಕಿಸಬಹುದಾಗಿದೆ.

ಗ್ರಂಥಗಳು:—ಇವನು ಕಾವ್ಯಪ್ರಕಾಶವೆಂಬ ಅಲಂಕಾರ ಗ್ರಂಥವನ್ನು ಬರೆದಿರುವುದಲ್ಲದೆ 'ಶಬ್ದವ್ಯಾಪಾರಪರಿಚಯ' ಎಂಬ ಮತ್ತೊಂದು ಗ್ರಂಥವನ್ನು ಬರೆದಿರುವುದಾಗಿ ತಿಳಿಯಬರುತ್ತದೆ. ಈ ಗ್ರಂಥವಾವುದೆಂಬುದು ತಿಳಿಯದು. ಕಾವ್ಯ ಪ್ರಕಾಶಕ್ಕೆ ಆನಂದನೆಂಬ ಕವಿಯು ಬರೆದಿರತಕ್ಕ 'ನಿದರ್ಶನ' ಎಂಬ ವ್ಯಾಖ್ಯಾನದಿಂದ ಮಮ್ಮಟನು ಪರಿಕರಾಲಂಕಾರದವರೆಗಿನ ಹತ್ತು ಉಲ್ಲಾಸಗಳನ್ನುಮಾತ್ರವೇ ಬರೆದು ದಿಂತಲೂ ಉಳಿದವುಗಳನ್ನು ಅಲ್ಲಟನೆಂಬವನು ಬರೆದುದಾಗಿ "ಕೃತಃ ಶ್ರೀಮಮ್ಮಟಾಚಾರ್ಯವರ್ಯೈಃ ಪರಿಕರಾವಧಿಃ ಪ್ರಬಂಧಃ ಪೂರಿತಃ ಶೇಷೋಽಪಿ ತಾಯಾಲಟ ('ಲಕ' ಅಥವಾ 'ಲ್ಲಟ') ಸೂರಿಣಾ" ಎಂದು ಗ್ರಂಥಾಂತ್ಯದಲ್ಲಿ ಹೇಳಿರುವ ಗದ್ಯದಿಂದ ಗೊತ್ತಾಗುತ್ತದೆ. ಇದೇ ವಿಚಾರವನ್ನು ಕ್ರಿ. ಶ. ೧೩ನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಅರ್ಜುನವರ್ಮನು ತಾನು ಬರೆದಿರುವ 'ಅಮರುಶತಕ'ದ ವ್ಯಾಖ್ಯಾನದಲ್ಲಿ "ಯತೋದಾಹೃತಮಂದೋಷನಿರ್ಣಯೇ ಮಮ್ಮಟೌಲಕಾಭ್ಯಾಂ" ಎಂದು ಹೇಳಿ ಸ್ಪಷ್ಟಪಡಿಸಿರುವನು. ರತ್ನಕಂಠನು ಈ ಅಲಕನನ್ನು ಅಲಂಕಾರ ಸರ್ವಸ್ವಕ್ಕೆ ವ್ಯಾಖ್ಯಾನಕಾರನಾದ ರಾಜಾನಕ ಅಲಕನೆಂದು ಹೇಳಿರುವನು. ಕಾವ್ಯ ಪ್ರಕಾಶವು ಕಾರಿಕಾ, ವೃತ್ತಿ ಮತ್ತು ಉದಾಹರಣೆಗಳಿಂದ ಕೂಡಿಕೊಂಡಿರುವುದು.

ಕಾರಿಕೆಯನ್ನೂ, ವೃತ್ತಿಯನ್ನೂ ಮಮ್ಮಟನೇ ಬರೆದುದಾಗಿದೆ. ಉದಾಹರಣೆಗಳನ್ನು ಆಗ ಪ್ರಚುರವಾಗಿದ್ದ ಉದ್ದಾಮ ಗ್ರಂಥಗಳಿಂದಾರಿಸಿ ತೆಗೆದುಕೊಂಡಿರುವನು. ಇದರಲ್ಲಿ ಉದಾಹೃತವಾಗಿರುವ ಅನೇಕ ಗ್ರಂಥಗಳು ಈಗಲೂ ಪ್ರಚಾರದಲ್ಲಿರುವುವು. ಕೆಲವು ಕಾರಿಕೆಗಳನ್ನು ಪ್ರಸಿದ್ಧರಾದ ಭರತ ವಾಮನಾದಿ ಗ್ರಂಥಗಳಿಂದ ಹಾಗೆ ಹಾಗೆಯೇ ತೆಗೆದುಕೊಂಡು ಅಲ್ಲಲ್ಲಿ ಸ್ವಲ್ಪ ಬದಲುಮಾಡಿ ಹೇಳಿರುವನು. ಕಾವ್ಯಪ್ರಕಾಶವು ಹೆಸರಿಗೆ ತಕ್ಕಂತೆ ಕಾವ್ಯಲಕ್ಷಣಗಳನ್ನು ಹೇಳುವುದು. ಇದು ಬಹುದುರವಗಾಹ ಗ್ರಂಥವಾದುದರಿಂದ ಇದಕ್ಕೆ ಬಹುಜನರು ವ್ಯಾಖ್ಯಾನವನ್ನು ಬರೆದಿರುವರು. ಹಾಗೆ ಬರೆಯಲ್ಪಟ್ಟಿರುವುದಾದರೂ ಇನ್ನೂ ಕಟುವಾದುದಾಗಿಯೆ ಇರುವುದು. ಸಂಸ್ಕೃತ ಗ್ರಂಥಗಳಲ್ಲಿ ಇಷ್ಟೊಂದು ವ್ಯಾಖ್ಯಾನ ಕಾರಣವಾದ ಗ್ರಂಥವು ಮತ್ತೊಂದು ದೊರೆಯದು. ಹೀಗೆ ಬರೆಯಲ್ಪಟ್ಟಿರುವ ವ್ಯಾಖ್ಯಾನಗಳನೇಕಗಳು ಇನ್ನೂ ಅಚ್ಚಾಗದೆ ಹಸ್ತಪ್ರತಿಕೆಯಲ್ಲಿರುವುವು. ಪ್ರಸಿದ್ಧವಾದ ಕೆಲವನ್ನು ಇಲ್ಲಿ ಕೊಟ್ಟಿದೆ:—

ವ್ಯಾಖ್ಯಾನಕಾರರ ಹೆಸರು		ವ್ಯಾಖ್ಯಾನದ ಹೆಸರು.
ರಾಜಾನಕರುಯ್ಯಕ	....	ಸಂಕೇತ
ಮಾಣಿಕ್ಯಚಂದ್ರ	....	ಸಂಕೇತ
ನರಹರಿ (ಸರಸ್ವತೀತೀರ್ಥ)	...	ಬಾಲಚಿತ್ತಾನುರಂಜಿನೀ
ಜಯಂತ ಭಟ್ಟ	....	ದೀಪಿಕಾ [ಜಯಂತಿ]
ಸೋಮೇಶ್ವರ	....	ಕಾವ್ಯಾದರ್ಶ
ಶ್ರೀಧರ	....	ವಿವೇಕ
ಚಂಡೀದಾಸ	...	ದೀಪಿಕಾ
ವಿಶ್ವನಾಥ	....	ದರ್ಪಣ
ಭಾಸ್ಕರ	....	ಸಾಹಿತ್ಯದೀಪಿಕಾ
ಪರಮಾನಂದ ಚಕ್ರವರ್ತಿ	....	ವಿಸ್ತಾರಿಕಾ
ಗೋವಿಂದ ಠಾಕೂರ	....	ಪ್ರದೀಪ
ಜಯರಾಮನ್ಯಾಯಪಂಚಾನನ	....	ತಿಲಕ [ಜಯರಾಮೀ]
ಶ್ರೀವತ್ಸಲಾಂಛನ ಮತ್ತು ಸದ್ಬುದ್ಧಿಮಿಶ್ರ		ಸಾರಬೋಧಿನೀ
ರವಿ ಮತ್ತು ರತ್ನಪಾಣಿ	....	ಮನೋಧರ [ಕಾವ್ಯದರ್ಪಣ]
ಮಹೇಶ್ವರ	....	ನ್ಯಾಯಾಲಂಕಾರ [ಆದರ್ಶ]
ರಾಜಾನಕ ಆನಂದ	....	ನಿದರ್ಶನ[ಶಿತಕಂಠವಿಬೋಧನಾ]
ರಾಜಾನಕ ರತ್ನಕಂಠ	...	ಸಾರಸಮುಚ್ಚಯ
ನೃಸಿಂಹಠಾಕೂರ	....	ನೃಸಿಂಹಮಾನಸ

ವೈದ್ಯನಾಥತತ್ಸತ್ [ಉದಾಹರಣ ಚಂದ್ರಿಕಾ] ಸುಧಾಸಾಗರ [ಸುಧೋದಧಿ]

ಭೀಮಸೇನ ದೀಕ್ಷಿತ
ಬಲದೇವ ವಿದ್ಯಾಭೂಷಣ } ....ವಿದ್ಯಾಭೂಷಣ [ಸಾಹಿತ್ಯಕೌಮುದೀ]

ನಾಗೋಜ [ನಾಗೇಶಭಟ್ಟ] ... ಲಘುದ್ಯೋತಕ ಬೃಹದ್ದ್ಯೋತಕ

ಬಳಕೆಯಲ್ಲಿಲ್ಲದ ಅಪರೂಪವ್ಯಾಖ್ಯಾನಕಾರರು ಮತ್ತು ಅವರ ವ್ಯಾಖ್ಯಾನಗಳ ಕೆಲವನ್ನು ಇಲ್ಲಿ ಕೊಟ್ಟಿದೆ.

ವ್ಯಾಖ್ಯಾನಕಾರರು		ವ್ಯಾಖ್ಯಾನಗಳು
ಕಲಾಧರ	....	ಕಾಂತಾವಳಿ
ಕೃಷ್ಣದ್ವಿವೇದಿ	...	ಮಧುರರಸಾ
ಕೃಷ್ಣಶರ್ಮ	....	ರಸಪ್ರಕಾಶ
ಗೋಪಾಲ	...	ಸಾಹಿತ್ಯಚೂಡಾಮಣಿ
ಗೋಪೀನಾಥ	....	ಸುಮನೋಮನೋಹರ
ಜಗದೀಶತರ್ಕಾಲಂಕಾರ ಭಟ್ಟಾಚಾರ್ಯ	....	ರಹಸ್ಯಪ್ರಕಾಶ
ಜನಾರ್ದನವ್ಯಾಸ	....	ಶ್ಲೋಕದೀಪಿಕಾ
ದೇವನಾಥತರ್ಕಪಂಚಾನನ	...	ಕಾವ್ಯಕೌಮುದೀ
ನೃಸಿಂಹಸೂರಿ	...	ಋಜುವೃತ್ತಿ
ನಾಗರಾಜಕೇಶವ	....	ಪದವೃತ್ತಿ
ಮಧುಮತಿಗಣೇಶ	....	ಕಾವ್ಯದರ್ಪಣ
ಯಜ್ಞೇಶ್ವರ	....	ವ್ಯಾಖ್ಯಾ
ರಘುದೇವ	....	ಕಾರಿಕಾರ್ಥಪ್ರಕಾಶಿಕಾ
ರಾಘವ	...	ಅವಸೂರಿ ಟಿಪ್ಪಣಿ
ರಾಮಚಂದ್ರ	....	ಕಾವ್ಯಪ್ರಕಾಶಸಾರ
ರಾಮನಾಥವಿದ್ಯಾವಾಚಸ್ಪತಿ	...	ರಹಸ್ಯಪ್ರಕಾಶಿಕಾ
ರಾಮಕೃಷ್ಣ	...	ಭಾವಾರ್ಥ [ಕವಿನಂದಿನಿ]
ವಿದ್ಯಾಚಕ್ರವರ್ತಿ	...	ಸಂಪ್ರದಾಯಪ್ರಕಾಶಿಕಾ
ವೆಂಕಟಾಚಲಸೂರಿ	...	ಸುಬೋಧಿನೀ
ಶಿವನಾರಾಯಣದಾಸ	....	ಸರಸ್ವತೀಕಂಠಾಭರಣ (ದೀಪಿಕಾ)

ಇವುಗಳಲ್ಲದೆ ಇನ್ನೂ ಎಷ್ಟೋವ್ಯಾಖ್ಯಾನಗಳಿರುವುವು.

ಶಂಭುಕವಿ.

ಇವನು ಬ್ರಾಹ್ಮಣನು. ಕಾಶ್ಮೀರದವನು. ಇವನ ಮಾತಾಪಿತೃಗಳಾರೆಂಬುದು ತಿಳಿಯದು.

ಕಾಲ:---ಕ್ರಿ. ಶ. ೧೦೪೪ ರಿಂದ ೧೧೦೦ ರ ವರೆಗೆ ಕಾಶ್ಮೀರದಲ್ಲಾಳಿದ ಹರ್ಷದೇವನ ಆಶ್ರಿತನಾದುದರಿಂದ ಕ್ರಿ. ಶ. ೧೧ನೆಯ ಶತಮಾನದವನು.

ಗ್ರಂಥ:---ಇವನು 'ರಾಜೇಂದ್ರಕರ್ಣಪೂರ' ಎಂಬ ೭೫ ಶ್ಲೋಕಗಳುಳ್ಳ ಚಿಕ್ಕ ಗ್ರಂಥವನ್ನು ಬರೆದಿರುವನು. ಈಗ್ರಂಥವು ತನ್ನ ಆಶ್ರಯದಾತನಾದ ಶ್ರೀಹರ್ಷದೇವನ ಸ್ತುತಿಪರರೂಪವಾಗಿರುವುದು. ಈಗ್ರಂಥದ ಹತ್ತೊಂಭತ್ತನೆಯ ಶ್ಲೋಕದಲ್ಲಿ---

ಶೇಷ ಕ್ಲೇಶಮಶೇಷಮುತ್ಸೃಜ ಭಜತ್ಸಂ ಕೂರ್ಮ ಕರ್ಮಸ್ಥತಂ
ಸ್ಫೈರಂ ಖೇಲತ ಸಿಂಧುಸೈಕತಲತಾ ಕುಂಜೇಷುದಿಕ್ಕುಂಜರಾಃ
ಅಪ್ಯೇತಾಂ ಸಕಲಾಚಲಾಂ ಸನಗರಾಂ ನಾಂಭೋನಿಧಿಂ ಸಾಪಗಾಂ
ಸದ್ವೀಪಾಂಚಭುವಂಭಿಭರ್ತಿ ಹಿ ಭುಜಃ ಶ್ರೀಹರ್ಷಪೃಥ್ವೀಭುಜಃ ॥

ಎಂದು ಹೇಳಿಕೊಂಡಿರುದುವು ಕಂಡುಬರುತ್ತದೆ. ಇವನ ಅನೇಕ ಶ್ಲೋಕಗಳು ಸುಭಾಷಿತಾವಳಿಗಳಲ್ಲಿ ಕಂಡುಬರುತ್ತವೆ. ಶೈಲಿಯು ಮೃದುವಾಗಿ ವಿಷಯವು ಮಧುರವಾಗಿದೆ: ಮಾದರಿಗಾಗಿ ಎರಡು ಶ್ಲೋಕಗಳನ್ನು ಬರೆಯುವೆವು.

ನೇನ್ಮೋರ್ತಂ ಭುವನೇ ಮುಹೂರ್ತಮಮೃತಂ ಮನ್ಯೇಭೃಶಂ ವಾಸರಂ
ಸಾರಂ ವೇದ್ಮಿತದೇವ ನೈವಚ ಗುಣೈರಾಯಾಮಿನೀ ಯಾಮಿನೀ
ಶ್ರೀವಾಸೋ ಯಶಸಾಂ ಪದಂಸುಮನಸಾಮಪ್ಯಾಸ್ಪದಂಸಂಪದಾಂ
ಯತ್ರಾಗಚ್ಛತಿ ಗೋಚರಂ ನಯನಯೋಃ ಕಾಶ್ಮೀರಮಾನಪ್ಪಜಃ ॥ ೪೨

ಔದಾರ್ಯಂ ಸಫನೇ ನಯೋಗುಣಜನೇ ಲಜ್ಜಾ ಕುಲಸ್ತ್ರೀಜನೇ
ಸತ್ಯಂ ವದನೇ ಮದೋದ್ಧಿರದನೇ ಪುಂಸ್ಕೋಕಿಲಃಕಾನನೇ
ರೋಲಂಬಃ ಕಮಲೇ ನಖಾಂಕರಚನಾ ಕಾಂತಾಕಪೋಲಸ್ಥಲೇ
ತನ್ನೀತಲ್ಪತಲೇ ಭವಾನಪಿವಿಭೋ ಭೂಮಂಡಲೇ ಮಂಡನಂ ॥ ೫೪

ಇದಲ್ಲದೆ ಇವನು "ಅನ್ಯೋಕ್ತಿಮುಕ್ತಾಲತಾ" ಎಂಬ ಶತಕವನ್ನು ಬರೆದಿರುವದಾಗಿ ತಿಳಿಯಬರುವದಾದರೂ ಗ್ರಂಥವು ಉಪಲಬ್ಧವಿಲ್ಲ.

ಸೋಮದೇವಭಟ್ಟ.

ಇವನು ಕಾಶ್ಮೀರದವನು. ರಾಮಭಟ್ಟನ ಮಗನು[*] ಬ್ರಾಹ್ಮಣನು. ಅನಂತರಾಜನ ಆಸ್ಥಾನಪಂಡಿತನು. ಕ್ರಿ. ಶ. ೧೧ನೆಯ ಶತಮಾನದವನು. ಅನಂತರಾಜನ

* ಕಥಾಸರಿತ್ಸಾಗರ, ಮುನ್ನುಡಿ ಪುಟ ೨.

ಪಟ್ಟಮಹಿಷಿಯಾದ ಸೂರ್ಯಾವತಿಯ ಪ್ರೋತ್ಸಾಹದಿಂದ **ಕಥಾಸರಿತ್ಸಾಗರ**ವೆಂಬ ಗ್ರಂಥವನ್ನು ಬರೆದಿರುವನು. ಇದರಲ್ಲಿ ಸುಮಾರು ೨೨೦೦೦ ಶ್ಲೋಕಗಳಿದ್ದು ೧೨೪ ತರಂಗಗಳಾಗಿಯೂ ೧೮ ಲಂಬಕಗಳಾಗಿಯೂ ಭಾಗಿಸಿ ಬರೆಯಲ್ಪಟ್ಟಿರುವುದು. ಇದರಲ್ಲಿ ಕೌಶಾಂಬೀನಾಥನಾದ ಉದಯನನ ವಿಚಾರವು ವಿಪುಲವಾಗಿ ಬರೆಯಲ್ಪಟ್ಟಿರುವುದು.

ಮಹಿಮಭಟ್ಟ.

ಇವನನ್ನು "ರಾಜಾನಕ ಮಹಿಮ" "ಮಹಿಮಕ" "ಮಹಿಮಭಟ್ಟ" ಎಂದೂ ವ್ಯಕ್ತಿವಿವೇಕಕಾರನೆಂದೂ ಕರೆಯುವರು. ಹೆಸರಿನಿಂದ ಇವನು ಕಾಶ್ಮೀರದವನೆಂದು ಬೋಧೆಯಾಗುವುದು. ಇವನು ಶ್ರೀಧೈರ್ಯನೆಂಬವನ ಮಗನು. ಮಹಾಕವಿ ಶ್ಯಾಮಲನ ಶಿಷ್ಯನು.‡

ಕಾಲ:---ಕ್ರಿ. ಶ. ೧೧ನೆಯ ಶತಮಾನದ ಆದಿಭಾಗದವನಾದ ಲೋಚನಕಾಗ ಅಭಿನವ ಗುಪ್ತನ ಹೇಳಿಕೆಯನ್ನು ಅನೇಕ ಕಡೆ ಇವನು ಖಂಡಿಸಿ ಹೇಳಿರುವುದರಿಂದ ಅಭಿನವಗುಪ್ತನಿಗಿಂತ ಈಚಿನವನೂ ಕ್ರಿ. ಶ. ೧೨ನೆಯ ಶತಮಾನದ ಪೂರ್ವಾರ್ಧದವನಾದ ರುಯ್ಯಕನು ಮಹಿಮಭಟ್ಟನನ್ನು ಹೇಳಿಕೊಂಡಿರುವುದರಿಂದ ರುಯ್ಯಕನಿಗಿಂತ ಹಿಂದಲವನೂ ಎಂದರೆ ೧೧ನೆಯ ಶತಮಾನದ ಮಧ್ಯಕಾಲದವನೆಂದೂ ಸ್ಪಷ್ಟಪಡುವದು.

ಗ್ರಂಥಗಳು:---ಇವನು 'ವ್ಯಕ್ತಿವಿವೇಕ' ಎಂಬ ಅಲಂಕಾರ ಗ್ರಂಥವನ್ನು ಬರೆದಿರುವನು. ಇದಕ್ಕೆ ರಾಜಾನಕರುಯ್ಯಕನು ವ್ಯಾಖ್ಯಾನವನ್ನು ಬರೆದಿರುವನು. ಇದಲ್ಲದೆ ತತ್ತ್ವೋಕ್ತಿಕೋಶವೆಂಬ ಮತ್ತೊಂದು ಗ್ರಂಥವನ್ನು ಬರೆದಿರುವುದಾಗಿ ತಿಳಿಯಬರುತ್ತದೆ. ಗ್ರಂಥವು ಉಪಲಬ್ಧವಲ್ಲ.

ಪುರುಷೋತ್ತಮ.

ಇವನು ಬ್ರಾಹ್ಮಣನು. ಕ್ರಿ. ಶ. ೧೧ನೆಯ ಶತಮಾನದಲ್ಲಾಳಿದ 'ಧೃತಸಿಂಹ' ರಾಜನ ಆಶ್ರಯದಲ್ಲಿ "ತ್ರಿಕಾಂಡಶೇಷ" ಎಂಬ ಕೋಶಗ್ರಂಥವನ್ನು ಬರೆದನು. ಈ ಧೃತಸಿಂಹನಾರೆಂಬುದಾಗಲಿ ಎಲ್ಲಿ ಆಳಿದನೆಂಬುದಾಗಲಿ ತಿಳಿಯದು.†

‡ S. K. De's Sanskrit Poetics P. 152

† Classical History of Sanskrit Literature P. 119

ಲೋಲಂಬರಾಜ*

ಇವನು ಬ್ರಾಹ್ಮಣನು. ದಕ್ಷಿಣದೇಶಸ್ಥನು. ಚಿಕ್ಕತನದಲ್ಲಿಯೇ ತಾಯಿ ತಂದೆಗಳನ್ನು ಕಳೆದುಕೊಂಡು ಅಣ್ಣನ ಪೋಷಣೆಯಲ್ಲಿರುತ್ತಿದ್ದು ಅತ್ತಿಗೆಯು ಬೈಗಳನ್ನು ಸಹಿಸಲಾರದೆ ಕುಪಿತನಾಗಿ ಮನೆಯನ್ನು ಬಿಟ್ಟು ದೇಶಾಟನವನ್ನು ಮಾಡುತ್ತ ಸಪ್ತಶೃಂಗಕ್ಕೆ ಹೋಗಿ "ಹರಿವಿಲಾಸ" ಎಂಬ ಗ್ರಂಥವನ್ನು ಬರೆದನು. ಕೃಷ್ಣನು ನಂದನ ಮನೆಯಲ್ಲಿ ಬೆಳೆದುದು ಮೊದಲು ಉದ್ಧವನಬಳಿಗೆ ಹೋದನೆಂಬ ವರೆಗಿನಕಥೆಯು ಬರೆಯಲ್ಪಟ್ಟಿರುವುದು. ಇವನು ಹರಿಹರ ರಾಜನ ಆಸ್ಥಾನದಲ್ಲಿದ್ದುದಾಗಿತಿಳಿಯಬರುತ್ತದೆ. ಈ ರಾಜನು ಯಾರೆಂದಾಗಲಿ ಎಲ್ಲಿ ಆಳಿದವನೆಂಬುದಾಗಲಿ ತಿಳಿಯಬರುವುದಿಲ್ಲ. ಇವನು ಭೋಜರಾಜನ ಸಮಕಾಲೀನನೆಂದು ತಿಳಿಯಬರುವುದರಿಂದ ಇವನು ಕ್ರಿ. ಶ. ೧೧ನೆಯ ಶತಮಾನದವನೆಂದು ಹೇಳಬೇಕಾಗಿದೆ. ಭಾಷೆಯು ಸರಳವಾಗಿಯೂ ಶೈಲಿಯು ಮೋಹಕರವಾಗಿಯೂ ಕಥಾಸಂವಿಧಾನಚತುರತೆಯು ರಸಿಕಾಹ್ಲಾದಕರವಾಗಿಯೂ ಇರುವುದು.

ಕೃಷ್ಣಮಿಶ್ರ

"ಪುರಾಕಿಲವಿದ್ವದ್ಬ್ರಂದಲಲಾಮಭೂತೋಽಖಿಲವಿದ್ಯೋಧದಿಪಾರದೃಶ್ವೇವಾಸಿತ್ಕೃಷ್ಣಮಿಶ್ರಾಖ್ಯೋದಂಡಿ" ಎಂಬುದರಿಂದ ಇವನು ಸಂನ್ಯಾಸಿಯಾಗಿರಬೇಕೆಂದು ಬೋಧೆಯಾಗುವುದು. ಇವನು ಔತ್ತರೇಯನೆಂದೂ, ವಂಗೀಯನಾಗಿರಬಹುದೆಂದೂ ಊಹಿಸಬಹುದಾಗಿದೆ. ಇವನ ಮಾತಾಪಿತೃಗಳಾರೆಂಬುದು ತಿಳಿಯದು. ಗ್ರಂಥಪ್ರಸ್ತಾವನದಿಂದ ಕೃಷ್ಣಮಿಶ್ರನು ತನ್ನ ಶಿಷ್ಯನಾದ ಗೋಪಾಲಭೂಪಾಲನಿಗೆ ಶಾಂತರಸಯುಕ್ತವಾದ ಈ ಗ್ರಂಥವನ್ನು ರಚಿಸಿಕೊಟ್ಟಂತೆಯೂ ಈ ಗೋಪಾಲನು ತನ್ನ ಮಿತ್ರನಾದ ಚಂದ್ರವಂಶದ ಕೀರ್ತಿವರ್ಮನ ರಾಜ್ಯಾಭಿಷೇಕ ಸಮಯದಲ್ಲಿ, ಇದನ್ನು ಅಭಿನಯಿಸಿದುದಾಗಿಯೂ ತಿಳಿಯಬರುತ್ತದೆ.

ಕಾಲ:—ಕೀರ್ತಿವರ್ಮನು ಚಾಂಡಿಲ್ಯ (ಚಂದೇಲ)ವಂಶದವನೆಂದೂ ಕ್ರಿ ಶ. ೧೦೯೫ರ ಸುಮಾರಿನಲ್ಲಿ ರಾಜ್ಯವಾಳಿದುದಾಗಿಯೂ ಕೆಲವು ಶಾಸನಗಳಿಂದ ತಿಳಿಯಬರುತ್ತದೆ. ಈ ಕೀರ್ತಿವರ್ಮನು ಎಲ್ಲಿ ಆಳಿದನೆಂಬ ವಿಚಾರವು ಸರಿಯಾಗಿತಿಳಿಯುವಂತಿಲ್ಲ. ಕೀರ್ತಿವರ್ಮನು ಚೇದಿದೇಶವನ್ನಾಳುತ್ತಿದ್ದ ಕಲಚೂರಿವಂಶದ ಕರ್ಣರಾಜನಿಂದ ಪರಾಜಿತನಾಗಿ ರಾಜ್ಯವು ಕೈಬಿಟ್ಟುಹೋಗಲು ಕೀರ್ತಿವರ್ಮನ ಸೇನಾನಿಯಾದ ಗೋಪಾಲನು ಅದನ್ನು ತಿಳಿದು ಕರ್ಣರಾಜನ ಮೇಲೆ ದಂಡೆತ್ತಿ ಕೀರ್ತಿವರ್ಮನಿಗೆ

---

* ಲೋಲಕರಬರಾಜೀಯವೆಂಬ ವೈದ್ಯಗ್ರಂಥಕಾರನು ಇವನಲ್ಲ.

ಹೋದರಾಜ್ಯವನ್ನು ಪುನಃ ದೊರಕಿಸಿಕೊಟ್ಟು ರಾಜ್ಯಶಾಸನ ದಕ್ಷನಾಗಿ ಕೆಲವುಕಾಲ ವಿದ್ದು ಅನಂತರ ಬ್ರಾಹ್ಮಣ ಸಹಜವಾದ ಶಾಂತಿಯಿಂದ ಶೇಷಾಯುಷ್ಯವನ್ನು ಕಳೆದಂತೆ ತಿಳಿದುಬರುತ್ತದೆ. ಈ ಕರ್ಣರಾಜನು ವಿಕ್ರಮಾಂಕದೇವನ ಸಮಕಾಲೀನನಾಗಿದ್ದನೆಂದು ವಿಕ್ರಮಾಂಕದೇವ ಚರಿತದಿಂದ ವ್ಯಕ್ತವಾಗುತ್ತದೆ.

ಕಾಲಃ ಕಾಲಂಜರಗಿರಿಪತೇರ್ಯಃ ಪ್ರಯಾತೇ ಧರಿತ್ರೀಂ
ತುಖ್ಖಾರಾಣಾಮಿರಪುಟರವೈಃ ಕ್ಷ್ಮಾಪಶೂನ್ಯಾಂಚಕಾರ
ಶ್ರೀದಾಹಾಲಕ್ಷ್ಮಿತಿಪರಿವೃಢಃ ಸೋಽಪಿಯುಂಪ್ರಾಪ್ಯವೃತ್ತಂ
ಕರ್ಣಃ ಕರ್ಣಾಮೃತರಸಭರಾಸ್ಪದ ಮುಂತಸ್ತತಾನ ॥

ಎಂದು ಹೇಳಿರುವುದರಿಂದ ಕರ್ಣ,ವಿಕ್ರಮಾಂಕ, ಕೀರ್ತಿವರ್ಮ ಈ ಮೂವರೂ ಸಮಕಾಲೀನರೆಂದಾದುದು. ವಿಕ್ರಮಾಂಕದೇವನು ಕ್ರಿ. ಶ. ೧೦೭೬-೧೧೨೬ರವರೆಗೆ ರಾಜ್ಯವಾಳಿದುದಾಗಿ ಸ್ಪಷ್ಟಪಡುವುದರಿಂದಲೂ ಇವನ ಸಮಕಾಲೀನರಾದ ಕೀರ್ತಿವರ್ಮನೂ, ಕರ್ಣರಾಜನೂ ಕ್ರಿ. ಶ. ಹನ್ನೊಂದನೆಯ ಶತಮಾನಾಂತ್ಯದಲ್ಲಿದ್ದವರಾದುದರಿಂದ ಕೀರ್ತಿವರ್ಮನ ಸಮಕಾಲೀನನಾದ ಕೃಷ್ಣಮಿಶ್ರನು ಕ್ರಿ. ಶ. ಹನ್ನೊಂದನೆಯ ಶತಮಾನಾಂತ್ಯದವನೆಂಬುದು ಸ್ಪಷ್ಟವು.

'ಫಲರತ್ನಮಾಲಾ' ಎಂಬ ಒಂದಾನೊಂದು ಜ್ಯೋತಿಷಗ್ರಂಥಕಾರನಾದ ಕೃಷ್ಣಮಿಶ್ರನೊಬ್ಬನು ದೊರೆಯುವನು. ಅವನು:—

ಶ್ರೀವಿಕ್ರಮಾಂಕೋಜಗತೀತಲೇಽಸ್ಮಿ
ಜೀರ್ಯಾಮನುಪ್ರಖ್ಯಯಶಾನರೇಂದ್ರಃ
ಪ್ರವೋಷಯಂ ಕೋಟಿಸುವರ್ಣತೋವಾ
ಸಬಾಂಧವಂ ಸಪ್ತತಿವತ್ಸರಾಣಿ ॥

ಎಂಬ ಶ್ಲೋಕದಲ್ಲಿ ವಿಕ್ರಮಾಂಕನ ಹೆಸರನ್ನು ಹೇಳಿರುವುದರಿಂದ ಪ್ರಬೋಧಚಂದ್ರೋದಯಕಾರನೂ, ಫಲರತ್ನಮಾಲಾಕಾರನೂ ಬೇರೆಬೇರೆ ವ್ಯಕ್ತಿಗಳೇ ಅಥವಾ ಒಬ್ಬನೇ ಎಂಬದು ವಿಚಾರಾಸ್ಪದವಾಗಿದೆ.

ಗ್ರಂಥ:—ಇವನು ಪ್ರಬೋಧಚಂದ್ರೋದಯವೆಂಬ ಆರು ಅಂಕಗಳುಳ್ಳ ನಾಟಕವನ್ನು ಬರೆದಿರುವನು. ಪ್ರಬೋಧಚಂದ್ರೋದಯ ನಾಟಕದ ಎರಡನೆಯ ಅಂಕದಲ್ಲಿ ಕಂಡುಬರುವ.—

ನೈವಾಶ್ರಾವಿ ಗುರೋರ್ಮತಂ ನ ವಿದಿತಂ ಕೌಮಾರಿಲಂ ದರ್ಶನಂ
ತತ್ತ್ವಜ್ಞಾನಮಹೋ ನ ಶಾರಿಕಗಿರಾಂ ವಾಚಸ್ಪತೇಃ ಕಾ ಕಥಾ

ಸೂಕ್ತಂ ನಾಪಿ **ಮಹೋದಧೇ**ರಧಿಗತಂ **ಮಾಹಾವ್ರತೀ** ನೇಕ್ಷಿತಾ
ಸೂಕ್ಷ್ಮಾವಸ್ತುವಿಚಾರಣಾ ನ ಪರುಭಃ ಸ್ಪಷ್ಟೈಃ ಕಥಂ ಸ್ಥೀಯತೇ ॥೨-೩

ಎಂಬ ಶ್ಲೋಕದಲ್ಲಿ ಮಹಾ ಪ್ರಖ್ಯಾತರಾದ ಪ್ರಭಾಕರ, ಕುಮಾರಿಲ, ಶಾಲಿಕನಾಥ ಮತ್ತು ವಾಚಸ್ಪತಿಮಿಶ್ರ ಇವರ ಜತೆಯಲ್ಲಿ ಪ್ರಾಚೀನಮೀಮಾಂಸಾಕಾರರಾದ ಮಹೋದಧಿ ಮತ್ತು ಮಹಾವ್ರತರ ಹೆಸರು ಹೇಳಲ್ಪಟ್ಟಿದೆ. ಚಾರಿತ್ರಕ ದೃಷ್ಟಿಯಿಂದ ಈ ಇರ್ವರೂ ಮುಖ್ಯರು. ವ್ಯಾಖ್ಯಾನಕಾರನು ಇವರಿರ್ವರವಿಚಾರವಾಗಿ ಕೆಲವು ಹೆಚ್ಚು ವಿಷಯಗಳನ್ನು ತಿಳಿಸಿರುವನು. "ಮಹೋದಧಿನಾ೯ಮ ಶಾರಿಕನಾಮಾ (ಶಾಲಿಕನಾಥ) ಸಹ ಬ್ರಹ್ಮಚಾರೀ ಗುರುಮತೇನಿಬಂಧನ ಕರ್ತಾ ಭವನಾಥವತ್| .....**ಮಹಾವ್ರತೋ** ನಾಮ ಭಟ್ಟಮತಾನುವರ್ತೀ ಮಹೋದಧಿ ಪ್ರತಿಸ್ಪರ್ಧೀ.....ಇದಾನೀಮಾಚಾರ್ಯಮತೇ ಭವದೇವಮತಸ್ಯ ಗುರುಮತೇ ಭವನಾಥಮತಸ್ಯೈವಪ್ರಾಚುರ್ಯಮಿತಿ ಗ್ರಂಥಕಾರೈರನುಲ್ಲಿಖಿತಮಪಿ ಮತದ್ವಯಮಸ್ಮಾಭಿರುಕ್ತಂ॥ ಎಂಬುದರಿಂದ ಮಹೋದಧಿಯು ಪ್ರಭಾಕರನ ಶಿಷ್ಯನಾಗಿದ್ದು ಅವನ ಅನುಯಾಯಿಯಾಗಿಯೂ. ಶಾಲಿಕನಾಥನಸಹಾಧ್ಯಾಯಿಯಾಗಿಯೂ ಇದ್ದನೆಂದೂ, ಮಹಾವ್ರತನು **ಕುಮಾರಿಲ**ನ ಶಿಷ್ಯನೂ, ಅವನ ಅನುಯಾಯಿಯಾಗಿದ್ದನು ಎಂದು ಹೇಳಿರುವುದು ವ್ಯಕ್ತವಾಗುಗುತ್ತದೆ. ಪ್ರಬೋಧಚಂದ್ರೋದಯಕಾರನಾದ ಕೃಷ್ಣಮಿಶ್ರನು ತಾನು ಈ ನಾಟಕವನ್ನು ಬರೆಯುವ ವೇಳೆಗೆ ಸುಮಾರು ಕ್ರಿ. ಶ. ೭ನೆಯ ಶತಮಾನದವರಾದ ಮಹೋದಧಿ ಮತ್ತು ಮಹಾವ್ರತರ ಗ್ರಂಥಗಳನ್ನು ದೊರಕಿಸಿಕೊಂಡಿರಬೇಕಾಗಿ ಬೋಧೆಯಾಗುತ್ತದೆ. ಪ್ರಬೋಧಚಂದ್ರೋದಯದ ವ್ಯಾಖ್ಯಾನಕಾರನು ಈ ಮೇಲ್ಕಂಡವರ ಅಭಿಪ್ರಾಯಗಳು ಎಲ್ಲಿಯೂ ಹೇಳಲ್ಪಟ್ಟಿರುವುದಿಲ್ಲವೆಂದು ಹೇಳುವನಾದರೂ ಭವನಾಥನ "ನ್ಯಾಯವಿವೇಕ"§ ಎಂಬ ಗ್ರಂಥದಲ್ಲಿ ಇವರಿರ್ವರ ವಿಚಾರವಾಗಿ ಹೇಳಲ್ಪಟ್ಟಿರುವುದಾಗಿ ಒಕ್ಕಣಿಸಿರುವನು.† ಇದನ್ನೇಕೆ ಬರೆದನೆಂಬ ವಿಚಾರವಾಗಿ ಇವನು ಸಂನ್ಯಾಸಿಯಾಗಿದ್ದು ಈತನಲ್ಲಿ ಅನೇಕರು ಪಾಠ ಪ್ರವಚನಗಳನ್ನು ಓದುತ್ತಿದ್ದಂತೆಯೂ, ಅವರಲ್ಲೊಬ್ಬನು ವೇದಾಂತ ವಿಷಯಸರಾಜ್ಯಮುಖನಾಗಿ ಶೃಂಗಾರರಸ ಪ್ರಧಾನವಾದ ಕಾವ್ಯನಾಟಕಾದಿ ಗ್ರಂಥಗಳನ್ನು ಮಾತ್ರವೇ ಓದುತ್ತಿದ್ದಹಾಗೂ ಅವನಿಗೆ ಶೃಂಗಾರಾದಿರಸಗಳ ಮೂಲಕ ವೇದಾಂತ ವಿಚಾರವನ್ನು ಬೋಧಿಸುವುದಕ್ಕಾಗಿ ಈ ನಾಟವನ್ನು ಬರೆದುದಾಗಿ ವಿದ್ವತ್ಸಂಪ್ರದಾಯಕ್ರಮಾಗತಕಥೆಯೂ ಇರುವುದು ಈ ನಾಟಕವಿಷಯವೇನೆಂಬುದನ್ನು ಗ್ರಂಥದ ಹೆಸರಿನಿಂದಲೇ ಊಹಿಸ

* ಪ್ರಬೋಧಚಂದ್ರೋದಯ. Nirnaya Sagara Edition P 53.
§ ನ್ಯಾಯವಿವೇಕ ಪುಟ ೧೦೪—೧೧೮.
† Journal of oriental Research Vol II P. 62-63.

ಬಹುದಾಗಿದೆ. ಇದರ ರಸವು ಶಾಂತರಸವೆಂದು ಸೂತ್ರಧಾರನು " ಶಾಂತರಸ ಪ್ರಯೋಗಾಭಿನಯೇನಾತ್ಮಾನಂ " ಎಂದು ಹೇಳಿಕೊಂಡಿರುವುದರಿಂದ ಸ್ಪಷ್ಟವು.

ಪ್ರಬೋಧಚಂದ್ರೋದಯದ ಕಥಾಸಾರ: —

ಈಶ್ವರನಿಂದ ಮಾಯೆಯಲ್ಲಿ ಮನಸ್ಸೆಂಬ ಮಗನು ಹುಟ್ಟಿದನು. ಆ ಮಗನಿಗೆ ಪ್ರವೃತ್ತಿ ಮತ್ತು ನಿವೃತ್ತಿ ಎಂಬ ಇಬ್ಬರು ಮಡದಿಯರು. ಮೊದಲನೆಯ ಹೆಂಡತಿಯಾದ ಪ್ರವೃತ್ತಿಯು ಮಹಾಮೋಹ, ಕಾಮ, ಕ್ರೋಧ, ಅಹಂಕಾರ, ಮದ ಮಾತ್ಸರ್ಯ ಮೊದಲಾದ ಮಕ್ಕಳನ್ನೂ ರತಿ ಹಿಂಸೆ ಮೊದಲಾದ ಸೊಸೆಯರನ್ನೂ ಲೋಭ, ತೃಷ್ಣಾ ಮೊದಲಾದ ಮುಮ್ಮಕ್ಕಳನ್ನೂ ಅನೃತ ಮೊದಲಾದ ಮರಿಮಕ್ಕಳನ್ನೂ ಪಡೆದು ಮೂರುಲೋಕಗಳನ್ನೂ ವ್ಯಾಪಿಸಿದನು. ಮಹಾಮೋಹನು ಅಣ್ಣತಮ್ಮಂದಿರೊಡಗೂಡಿ ತಂದೆಯನ್ನು ಕ್ಷಣಮಾತ್ರವೂ ಎಡೆಬಿಡದೆ ಕಲಿ, ಚಾರ್ವಾಕ, ಸೌಗತ ಕ್ಷಪಣಕ ಸೋಮಸಿದ್ಧಾಂತ, ತಾಮಸಿಶ್ರದ್ಧಾ ರಾಜಸೀಶ್ರದ್ಧಾ ಮೊದಲಾದವರ ಸಹಾಯದಿಂದ ತನ್ನ ತಂದೆಯ ರಾಜ್ಯವನ್ನು ತನ್ನಾಳ್ವಿಕೆಗೆ ಒಳಪಡಿಸಿಕೊಂಡಿದ್ದನು ನಿವೃತ್ತಿಯ ಮಗನಾದ ವಿವೇಕನು ಮತಿಯೆಂಬ ಸತಿಯಿಂದೊಡಗೂಡಿ ಯಮನಿಯಮಾದ್ಯಷ್ಟ ಮಂತ್ರಿಗಳ ನೆರವನ್ನು ಪಡೆದು ಧನು[illegible]ನ ಮಗಳಾದ ಶ್ರದ್ಧೆಯಿಂದಲೂ ಅವಳ ಮಗಳಾದ ಶಾಂತಿಯಿಂದಲೂ ಶಾಂತಿಯನಪೆಯರಾದ ಕರುಣಾ, ಮೈತ್ರಿ, ಮುದಿತಾ, ಉಪೇಕ್ಷಾ ಇವರಸಹಾಯದಿಂದಕೂಡಿ ವಿಷ್ಣುಭಕ್ತಿಯ ಅನುಗ್ರಹದಿಂದ ವಸ್ತುವಿಚಾರ, ಕ್ಷಮಾ, ಸಂತೋಷ ಮೊದಲಾದ ಸಭ್ಯರೊಡನೆಬೆರೆದು ಕಾಮಾದಿಗಳನ್ನು ಗೆದ್ದು ಒರಿಯಹೆಂಡತಿಯಾದ ಪ್ರವೃತ್ತಿಯ ಏರಹದಿಂದ ಮನಸ್ಸೆಂಬ ಮಗನನ್ನು ತಪ್ತನಾಗುವಂತೆ ಮಾಡುವನು.

ಅನಂತರ 'ಮನಸ್ಸು' ಎಂಬ ಮಗನು ನರಸ್ಪತಿಯಿಂದ ವೈರಾಗ್ಯಭೋಧೆಯನ್ನು ಪಡೆದು ಪೂರ್ವಮೀಮಾಂಸಾ, ಶ್ರೌತಪಿದ್ಯಾ ಇವುಗಳಲ್ಲಿ ಸ್ಥಳವನ್ನು ಹೊಂದಿದಿ ಮುಂದಾಗಿ ತರ್ಕವಿದ್ಯೆಗೆಸಿಲುಕಿ ನರಳಿ ಗೀತಾ ಎಂಬ ಮಿತ್ರಕೊಡಗೂಡಿದ ಉಪನಿಷದ್ದೇವಿಯಲ್ಲಿ ನುರಕ್ತನಾಗಿ ಪ್ರಬೋಧಚಂದ್ರನೆಂಬ ಮಗನನ್ನೂ ವಿದ್ಯಾಎಂಬ ಮಗಳನ್ನೂ ಪಡೆದು ಮಧುಮತೀ ಮೊದಲಾದವರ ಮಾಯೆಗೆ ಒಳಗಾಗದೆ ಪುಣ್ಯಪೂತನಾದ ಪುರುಷನಿಗೆ ನಿತ್ಯಸುಖವನ್ನುಂಟುಮಾಡುವನು. ಇದನ್ನು ಇನ್ನೂ ಸಂಗ್ರಹಿಸಿಹೇಳುವುದಾದರೆ ಮತಿವಿವೇಕವೇ ಕಥಾನಾಯಕ. ಪ್ರಬೋಧಚಂದ್ರೋದಯವೇ ಕಥಾವಿಷಯ. ಬೌದ್ಧಕಾಪಾಲಾದಿಮತಖಂಡನವೂ; ಕಾಮಕ್ರೋಧಾದಿನಿರಸನವೂ ಶಮದಮಾದಿ ಷಟ್ಕಸಂಪತ್ತಿಯಿಂದಕೂಡಿ ವಿವೇಕನನ್ನು ಬೋಧಿಸುವುದರಿನೂಲಕ ಅವಜ್ಞಾನಸ[illegible] ಚರನಾದ ಪರಬ್ರಹ್ಮಪದಾರ್ಥನಿರೂಪಣದಿಂದ ಸಚ್ಚಿದಾನಂದ ಪದವಿಯನ್ನು ದೊರಕಿಸಿಕೊಡುವುದಾಗಿದೆ ಎಂದು ಹೇಳಬೇಕಾಗುವುದು ಅಥವಾ ಅದ್ವೈತವೇ

ಕಥಾವಸ್ತು ಎಂದರೂ ಸಲ್ಲುವುದು. 'ಶಾಂತ' ರಸದ ಜೊತೆಗೆ ಇತರ ರಸಗಳೂ ಅಲ್ಲಲ್ಲಿ ಜೋಡಣೆಯಾಗಿರುವುವು.

ರಾಮಾಯಣದಲ್ಲಿ ರಾಮರಾವಣರಿಗೆ, ಮಹಾಭಾರತದಲ್ಲಿ ಕೌರವ ಪಾಂಡವರಿಗೆ ಯುದ್ಧವು ಜರುಗಿದಂತೆ, ಈ ಪ್ರಬೋಧಚಂದ್ರೋದಯ ನಾಟಕದಲ್ಲಿ ಮಾನವ ಪ್ರಕೃತಿಯಲ್ಲಿ ಕಂಡುಬರುವ ಸುಗುಣ ದುರ್ಗುಣ ಸಂಕುಲ ಸಮರವು ನಿರೂಪಿತವಾಗಿದೆ. ಇಂತಹ ಅಧ್ಯಾತ್ಮ ವಿಷಯಗಳನ್ನೊಳಗೊಂಡಿರುವ ಮತಗ್ರಂಥಗಳು ಲಕ್ಷೋಪಲಕ್ಷವಿರುವುವಾದರೂ ಮನೋಹರವಾದ ನವರಸಪೋಷಣೆಗಳ ಮೂಲಕ ಸಮಾಜ ಕಲ್ಯಾಣವನುದ್ದೀಪಿಸಿ ವಿಲಕ್ಷಣಪಾತ್ರಗಳುಳ್ಳ ಇಂತಹ ದೃಶ್ಯಕಾವ್ಯಗಳು ಅತ್ಯಂತವಿರಳವೆನಬೇಕಾಗುವುದು.

ಮಹಾಮೇಧಾವಿಯಾದ **ಬನಿಯರ್ಡ** ಎಂಬವನು ಆಂಗ್ಲಭಾಷೆಯಲ್ಲಿ "ಯಾತ್ರಿಕರ ಪಯ್ಯಟನ" (Pligrims Progress) ಎಂಬ ಗದ್ಯಗ್ರಂಥವನ್ನು ಬರೆದಿರುವನು.

ಕವಿಪುಂಗವನಾದ ಗೀಟೆ (Goethe) ಯು "ಫಾಸ್ಟ್" ಎಂಬ ಲೋಕೋತ್ತರ ಗ್ರಂಥವನ್ನು ಬರೆದು ಇರುವನು.

ಸರಸಕವಿತಾಮಾಧುರೀಧುರೀಣನಾದ ವೇಂಕಟನಾಥನು ಸಂಕಲ್ಪಸೂರ್ಯೋದಯವೆಂಬ ನಾಟಕವನ್ನು ಸಂಸ್ಕೃತದಲ್ಲಿ ಬರೆದು ಕೀರ್ತಿಶೇಷನಾಗಿರುವನು. ಇದಲ್ಲದೆ ಪಿಂಗಲಿಸೂರಣಾರ್ಯನೆಂಬವನು 'ಕಳಾಪೂರ್ಣೋದಯವೆಂಬ ಗ್ರಂಥವನ್ನು ಆಂಧ್ರಭಾಷೆಯಲ್ಲಿಯೂ, ಅನಂತನಾರಾಯಣಸೂರಿಯು ಮಾಯಾವಿಜಯವೆಂಬುದನ್ನೂ, ವಾದಿಚಂದ್ರನು ಜ್ಞಾನಸೂರ್ಯೋದಯವೆಂಬುದನ್ನೂ ಬರೆದಿರುವುದಲ್ಲದೆ ಪದ್ಮಸುಂದರನ ಜ್ಞಾನಚಂದ್ರೋದಯ, ಕವಿಕರ್ಣಪೂರನ ಚೈತನ್ಯಚಂದ್ರೋದಯ; ಗೋಕುಲನಾಥೋಪಾಧ್ಯಾಯ ವಿರಚಿತ ಅಮೃತೋದಯ, ಯಶಃಪಾಲನಮೋಹ ರಾಜಪರಾಜಯ ಇವು ಈ ಜಾತಿಗೆ ಸೇರಿದವುಗಳಾಗಿರುವುವು.

ಪ್ರಬೋಧ ಚಂದ್ರೋದಯ ನಾಟಕದಲ್ಲಿ ಚಾರಿತ್ರಿಕ ವಿಷಯಗಳಾಗಲೀ ಸಾಂಸಿಕ ವಿಚಾರಗಳಾಗಲಿ, ಅಂತರ್ನಿಬದ್ಧ, ಅನ್ಯೋಪದಿಷ್ಟ ಭಾಗಗಳಾಗಲಿ ಯಾವುವೂ ಇಲ್ಲದೆ, ಸ್ವಾಭಾವಿಕತತ್ವವನ್ನು ವಿಸ್ತರಿಸಿ ಕಥಾನಿರ್ಮಾಣವು ಅತ್ಯಂತ ವಿಶದವಾಗಿಯೂ, ಆಡಂಬರ ಶೂನ್ಯವಾಗಿಯೂ ಕಲ್ಪಿಸಿ ಬರೆಯಲ್ಪಟ್ಟಿರುವುದರಿಂದ ಕೇವಲ ನಾಟಕದೃಷ್ಟಿಯಿಂದಲೆ ಪರಿಶೀಲಿಸುವ ರಸಿಕ ಜಿಜ್ಞಾಸುಗಳಿಗೆ ಅಲ್ಲಲ್ಲಿ ಕೊಂಚ ನೀರಸವಾಗಿ ತೋರಬಹುದಾಗಿದೆ. ಪ್ರಬೋಧ ಚಂದ್ರೋದಯಕ್ಕೆ 'ಚಂದ್ರಿಕಾ' ಮತ್ತು 'ಪ್ರಕಾಶ' ಎಂಬವ್ಯಾಖ್ಯಾನವಿರುವುದು. ಇದರಲ್ಲಿ ಲೋಕಾಯತ (ಚಾರ್ವಾಕ)ಮತ ತತ್ವವು ಹೀಗೆಂದು ಹೇಳಿರುವುದು.—

" ಸರ್ವಥಾ ಲೋಕಾಯತಮೇವ ಶಾಸ್ತ್ರಂ, ಯತ್ರಪ್ರತ್ಯಕ್ಷಮೇವಪ್ರಮಾಣಂ ಪೃಥಿವ್ಯಪ್ತೇಜೋವಾಯವಸ್ತತ್ವಾನಿ, ಅರ್ಥಕಾವೌ ಪುರುಷಾರ್ಥೌ, ಭೂತಾನ್ಯೇವಚೇತಯಂತೇ, ನಾಸ್ತಿಪರಲೋಕಃ, ಮೃತ್ಯುರೇವಾಪವರ್ಗಃ||."

ಚಾರ್ವಾಕಮತವೇಶಾಸ್ತ್ರ ಪ್ರತ್ಯಕ್ಷವಾದುದೇ ಪ್ರಮಾಣ. ಕಾಣುವ ಪೃಥ್ವಿವಾಯ್ವಾದಿಗಳೇ ಭೂತಗಳು. ಅರ್ಥಕಾಮಗಳೇ ಪುರುಷಾರ್ಥ. ಸಮುಷ್ಟಿ ರೂಪದಿಂದ ಭೂತಗಳೆ ಜ್ಞಾನವನ್ನುಂಟುಮಾಡುವುವು. ಪರಲೋಕವಿಲ್ಲ. ಮರಣವೆ ಮೋಕ್ಷ

ಇದರಲ್ಲಿನವಾರಾಣಸಿಯ ವರ್ಣನ :—

" ಇಯಂ ಚ ನಾತಿದೂರೆ ದರ್ಶನಪಥಮವತೀರ್ಣಾ ತ್ರಿಭುವನಪಾವನೆ ವಾರಾಣಸೀನಾಮನಗರೀ |

ಅವಿರಾಧಾರಾಯಂತ್ರಸ್ಖಲಿತ .....ಪತಾಕಾವಲಿರಿಯಂ ॥ ಪ್ರ. ಚಂ. ೪—೨೭.

ಏತಾಶ್ಚ ಪ್ರತಿಮುಕುಲಂ ಲಗ್ನಮಧುಪಾವಲೀರಣಿತಮುಖರಾ ಜೃಂಭಾಭರ ವಿಗಲನ್ಮಕರಂದಬಿಂದುದುರ್ದಿನಾಃ ಕುಸುಮಸುರಭಯೋ ನಾತಿದೂರೆ ಶ್ಯಾಮಾಯವಾನಫಲನಚ್ಛಂದಚ್ಛಾಯಾತರವೊ ನಗರಪರ್ಯಂತೋದ್ಯಾನ ಭೂಮಯಃ|ಯತ್ರೈತೇ ಮರುತೋಽಪಿ ಗೃಹೀತಪಾಶುಪತವ್ರತಾ ಧೂಲಿ ಮುದ್ಧೂಲಯಂತಸ್ತಾಪಸಾ ಇವ ಲಕ್ಷ್ಯಂತೆ ! ತಥಾಹಿ —

ತೋಯಾರ್ದ್ರಾಃ ಸುರಸರಿತಃ ಸಿತಾಃ ಪರಾಗೈ
ರರ್ಚಂತಶ್ಚ್ಯುತಕುಸುಮೈರಿವೇಂದುಮೌಲಿಂ
ಪ್ರೋದ್ಗೀತಾಂ ಮುದುಪರುತೈಃ ಸ್ತುತಿಂ ಪರಂತೋ
ನೃತ್ಯಂತಿ ಪ್ರಚಲಲತಾಭುಜೈಃ ಸವಾರಾಃ ॥ ೪-೨೮

ಈ ಪತ್ತನದ ಬಳಿಯಣ ಕೈದೋಟಗಳು:—

ಹೂಗಳ ಮೇಲೆ ಕುಳಿತುಕೊಂಡು ಝೇಂಕರಿಸುವ ದುಂಬಿಗಳಿಂದಲೂ ಅರಳಿದ ಹೂಗಳಿಂದ ಸುರಿವ ವರಾಗಂಗಳಿಂದಲೂ ದಟ್ಟವಾಗಿರುವ ಗಿಡಗಳ ನೆರಳಿನಿಂದಲೂ ಕಂಗೊಳಿಸುತ್ತಿರುವುವು. ಪುಷ್ಪ ಧೂಳಿಯನ್ನು ಧರಿಸಿರುವ ಪವನನು ಪಾಶುಪತವ್ರತವನ್ನು ಧರಿಸಿ ಇಲ್ಲಿ ತಪಸ್ಸುಮಾಡುತ್ತಿರುವ ಮುನಿಜನರಂತೆ ಕಾಣುವನು. ಇಗೋ:—

ಸವಿಾರಣನು ಅಮರಗಂಗೆಯಲ್ಲಿ ಮಿಂದು ಅಲುಗಿಸುವುದರಿಂದ ಅಲ್ಲಾಡುವ ಲತೆಗಳ ನರ್ತನಗಳಿಂದಲೂ, ಭ್ರಮರಗಳ (ಸ್ತುತಿಪರ) ಝೇಂಕಾರ ಗೀತಂಗಳಿಂದಲೂ ಕೂಡಿ ಪುಷ್ಪಗಳ ಶುಭ್ರಪರಾಗಂಗಳಿಂದ ಪರಶಿವನನ್ನು ಅರ್ಚಿಸುತ್ತಿರುವನೋ ಎಂಬಂತೆ ನಲಿಯುತ್ತಿರುವನು.

* ಪ್ರಬೋಧಚಂದ್ರೋದಯನಾಟಕ ಪ್ರಸ್ತಾವನೆ.

ಪ್ರಭವತಿ ಮನಸಿ ವಿವೇಕೋ ವಿದುಷಾಮಪಿ ಶಾಸ್ತ್ರಸಂಭವಸ್ತಾವತ್
ನಿಪತಂತಿ ದೃಷ್ಟಿವಿಶಿಖಾ ಯಾವನ್ನೇಂದೀವರಾಕ್ಷೀಣಾಂ ॥ ೧—೧೧.

ಮನುಷ್ಯನು ಮಹಾವಿದ್ವಾಂಸನೂ ವಿವೇಕಿಯೂ ಆಗಿದ್ದರೂ ಅಂತಹ ವಿವೇಕವು ಯುವತಿಯ ದೃಷ್ಟಿಬಾಣವು ನೆಡುನವರೆಗೆ. ಅನಂತರ ಆ ವಿವೇಕವು ಇರದು.

ಆದಿಕೇಶವನಸ್ತುತಿಯು ಹೀಗಿರುವುದು:—

"ಜಯ ಜಯ ಭಗವ ಅಮರಚಯಚಕ್ರಚೂಡಾಮಣಿಶ್ರೇಣಿನೀರಾಜಿತೋ
ಪಾಂತಪಾದದ್ವಯಾಂಭೋಜ ರಾಜನ್ನಖದ್ಯೋತಖದ್ಯೋತಕಿರ್ಮಾರಿ
ತಸ್ವರ್ಣಪೀಠಸ್ಫುರದ್ಪೈತವಿಭ್ರಾಂತಿಸಂತಾನಸಂತಪ್ತವಂದಾರು ಸಂಸಾರ
ನಿದ್ರಾಪಹಾರೈಕದಕ್ಷ ಕ್ಷಮಾಮಂಡಲೋದ್ಧಾರಸಂಭಾರಸಂಘಟ್ಟದಂಷ್ಟ್ರಾ
ಗ್ರಕೋಟಿಸ್ಫುರಚ್ಛೈಲಚಕ್ರ ಕ್ರಮಾಕ್ರಾಂತಲೋಕತ್ರಯ ಪ್ರಬಲ
ಭುಜಬಲೋದ್ಧೃತಗೋವರ್ಧನಕ್ಷತ್ರ ನಿವಾರಿತಾಖಂಡಲೋದ್ಯೋಜಿತಾ
ಕಾಂಡಚಂಡಾಂಬುವಾಹಾತಿವರ್ಷತ್ರಸದ್ಗೋಕುಲತ್ರಾಣವಿಸ್ಮಾಪಿತಾಶೇಷ
ವಿಶ್ವ ಪ್ರಭೋ ವಿಬುಧರಿಪುವಧೂವರ್ಗಸೀಮಂತಸಿಂದೂರಸಂಧ್ಯಾಮ
ಯೂಖಚ್ಛಟೋನ್ಮಾರ್ಜನೋದ್ದಾಮಧಾಮಾಧಿಪ ತ್ರಸ್ತದೈತ್ಯೇಂದ್ರವಕ್ಷ
ಸ್ತಟೀಪಾಟನಾಕುಂಠಭಾಸ್ವನ್ನಖಶ್ರೇಣಿಪಾಣಿದ್ವಯಸ್ಥ ಸ್ತಸಿಸಾರಿರಕ್ತಾ
ರ್ಣವಾಮಗ್ನಲೋಕತ್ರಯ ತ್ರಿಭುವನರಿಪುಕೈಟಭೋದ್ದಂಡಕಂಠಾ
ಸ್ಥಿಕೂಟಸ್ಫುಟೋನ್ಮಾರ್ಜಿತೋದ್ದಾಮಚಕ್ರಸ್ಫುರಜ್ಜ್ಯೋತಿರುಲ್ಲಾಸಿತೋ
ದ್ದಾಮದೋರ್ದಂಡಖಂಡೇಂದುಚೂಡಾಪ್ರಿಯ ಪ್ರೌಢದೋರ್ದಂಡ
ವಿಭ್ರಾಂತಮಂಘ್ರಾಚಲಕ್ಷುಬ್ಧದುಗ್ಧಾಂಬುಧಿಪ್ರೋಚ್ಛಿತಶ್ರೀಭುಜವಲ್ಲೀಸಂ
ಶ್ಲೇಷಸಂಕ್ರಾಂತಪೀನಸ್ತ ನಾಭೋಗಪತ್ರಾವಳೀಲಾಂಛಿತೋರಸ್ಥ ಲಸೂಲ
ಮುಕ್ತಾಫಲೋದಾರ ಹಾರಪ್ರಭಾಮಂಡಲ ಸ್ಫುರತ್ಕಂಠವೈಕುಂಠ ಭಕ್ತಸ್ಯ
ಲೋಕಸ್ಯ ಸಂಸಾರಮೋಹಚ್ಛಿದಂ ದೇಹಿ ಬೋಧೋದಯಂ ದೇವ
ತುಭ್ಯಂ ನಮಃ ॥

ಯಾದವಪ್ರಕಾಶ

ಇವನು ಮೊದಲು ಅದ್ವೈತಸಂನ್ಯಾಸಿ, ಏಕದಂಡಿ, ರಾಮಾನುಜಾಚಾರ್ಯನ (೧೧೧೭-೧೧೩೭.) ಪೂರ್ವಾಶ್ರಮದ ವಿದ್ಯಾಗುರು. "ಸತ್ಯಂಜ್ಞಾನಮನಂತಂಬ್ರಹ್ಮ" "ಸರ್ವಂಖಲ್ವಿದಂ ಬ್ರಹ್ಮ" "ತಸ್ಯಯಥಾಕಾಪ್ಯಾಸಂ ಪುಂಡರೀಕಮೇವಮಕ್ಷಿಣೆ" ಎಂಬ ಶ್ರುತಿವಚನಗಳಿಗೆ ಅರ್ಥಮಾಡುವಲ್ಲಿ ಗುರುಶಿಷ್ಯರೊಳಗೆ ವಿವಾದವುಂಟಾಗಿ ಯಾದವಪ್ರಕಾಶನು ಶಿಷ್ಯನ ಶ್ರೇಯಸ್ಸನ್ನು ಕೋರುವನು.

ರಾಮಾನುಜಾಚಾರ್ಯನ ಚಿಕ್ಕಮ್ಮನ ಮಗನಾದ ಗೋವಿಂದಭಟ್ಟನೆಂಬವನು ಅಣ್ಣನ ಸಹಸಾಠಿಗಾಗಿ ಕಂಚಿಯಲ್ಲಿಯೇ ಯಾದವ ಪ್ರಕಾಶನಬಳಿ ವ್ಯಾಸಂಗಮಾಡುತ್ತಿದ್ದನು. ಒಂದಾನೊಂದು ಕಾಲದಲ್ಲಿ ಗುರುವು ತನ್ನ ಶಿಷ್ಯರೊಡನೆ ಗಂಗಾಯಾತ್ರೆಗೆಹೋಗಿ ಮಾಘಸ್ನಾನ ಮಾಡುತ್ತಿರುವಕಾಲದಲ್ಲಿ ತನ್ನದೊಂದು ಲಿಂಗವು ಗೋವಿಂದಭಟ್ಟನ ಕೈಗೆ ಬಂದು ಸೇರುವಂತೆ ಮಾಡಿ—"ಏನಾಶ್ಚರ್ಯವಿದು? ನಿಮ್ಮಲ್ಲಿ ಪರಿಪೂರ್ಣವಾದ ಶಿವಾನುಗ್ರಹವಿದೆ! ಇನ್ನು ಮುಂದೆ ಈ ಲಿಂಗವೇ ನಿಮಗೆ ಆರಾಧ್ಯದೇವತೆ!" ಎಂದು ಹೇಳಿ ಶಿವಾಧಿಕ್ಯವನ್ನು ಬೋಧಿಸಿ "ಉಳ್ಳಂಗೈಕ್ಯಣರ್ನ್ನೈನಾರ್" ಎಂದು ಗೋವಿಂದಭಟ್ಟನಿಗೆ ಹೆಸರಿಟ್ಟನು. ಮುಂದೆ ರಾಮಾನುಜಾಚಾರ್ಯನು ಯತ್ಯಾಶ್ರಮಸ್ವೀಕಾರಮಾಡಿದ ಬಳಿಕ ಯಾದವ ಪ್ರಕಾಶನು ತನ್ನ ತಾಯಿಯ ಅಭೀಷ್ಟದ ಮೇರೆಗೆ ರಾಮಾನುಜಾಚಾರ್ಯರಲ್ಲಿಗೆ ಹೋಗಿ ಪ್ರದಕ್ಷಿಣನಮಸ್ಕಾರಮಾಡಿ ಅವರಿಂದ ಪ್ರಾಯಶ್ಚಿತ್ತವನ್ನು ಹೊಂದಿ ಶಿಷ್ಯನಾಗಿ ತ್ರಿದಂಡಸಂನ್ಯಾಸಧಾರಣಮಾಡಿ "ಗೋವಿಂದಯೋಗಿ"ಎಂಬ ಹೆಸರಿನಿಂದ ಶ್ರೀವೈಷ್ಣವನಾದನು. ಸಂನ್ಯಾಸಿಯಾದವನು ಏಕದಂಡಿಯಾಗಿರಬೇಕೆ ತ್ರಿದಂಡಿಯಾಗಿರಬೇಕೇ ಎಂಬ ವಿಚಾರದಲ್ಲಿ ಇದೇ ಕಾಲದಲ್ಲಿ ವಾದ ವಿವಾದಗಳು ಹುಟ್ಟಿರಲು ಯಾದವ ಪ್ರಕಾಶನು ರಾಮಾನುಜಾಚಾರ್ಯರ ಅಪ್ಪಣೆಯಿಂದ "ಯತಿಧರ್ಮಸಮುಚ್ಚಯ" ಎಂಬ ಗ್ರಂಥವನ್ನು ಒರೆದು ಅವರಲ್ಲಿ ತ್ರಿದಂಡಸಂನ್ಯಾಸವನ್ನೇ ಸ್ವೀಕರಿಸಿದನು. ಇವನು ಕ್ರಿ. ಶ. ೧೧ ನೆಯ ಶತಮಾನದಲ್ಲಿ ಸೈಜಯಂತೀ ಎಂಬ ಕೋಶವನ್ನು ಬರೆದಿರುವನು.†ಎಂದು ತಿಳಿಯುವುದಾದರೂ ನಮ್ಮ ಮನೋದೇವತೆಯು ಗ್ರಂಥಕರ್ತೃತ್ವ ವಿಚಾರದಲ್ಲಿ ಇವನಲ್ಲವೆಂದೇಶಂಕಿಸುತ್ತದೆ. ಇತರ ಪ್ರಮಾಣಗಳು ದೊರೆತು ಗ್ರಂಥವು ಇವನದೆಂದು ಸಾಧಿಸುವುದಾದರೆ, ಆಗ ಕ್ರಮಪಡಿಸಿಕೊಳ್ಳುವೆವು.

ಸೋಡ್ಡಲ.

"ಜನ್ಮಾಸ್ಯ ಕವೇರ್ಗುರ್ಜರಸ್ಯ ದಕ್ಷಿಣಪಥಾಗೇಲಾತದೇಶೇ | ಯದಯಂ ಕವಿರಾರಂಭ ಏವಮಾಹ, "ತಸ್ಮಿನ್ನಶೇಷಭುವನ ವಿಖ್ಯಾತನಾಮನಿ ಮಹಾವಂಶೇ ದಲಿತಕಲಿಕಲಂಕಸಂಹತಿರಮೃತಮಯಾಕಾರಕವನಿರ್ಯೋ ನರ್ಮದಾಪ್ರವಾಹ ಇವ ಭೂತಿಲೋಕಮಧಿಷ್ಠಿತೋ ಲಾಟದೇಶಮಾಸೀದುಪೇಶವಂಶಾವತೀರ್ಣಸ್ಯ ಮಹಾತ್ಮನಶ್ಚಂಡಪತೇರಂಗಜನ್ಮಾ ಸೋಲ್ಲವೇಯೋ ನಾಮೇ" (ಪೃ ೨೬ ಪ ೬) ತಿ | ತತ್ರೈವಾಸು ಪದಮಿದಮುಪ್ಯಾಹ "ಪ್ರಥಮತಃ ಪುತ್ರೇಷು ಪಂಪಾವತೀಸೂನು

---

* Life of Ramanujacharya Tamil Edition

† History of Sanskrit Literature P 180

ಸ್ಸೋಡ್ಡಲೋ ನಾಮ, ಸ ಖಲು ಸ್ವಲ್ಪೋಕ ಶೋಭಾವಿಲುಂಠಿನಂ ಲಾಟ ದೇಶಮಧ್ಯಾಸೀತ್" (ಪೃ ೧೨ ಪ ೧೧) ಇತಿ। ಅಥ ಲಾಟದೇಶೇ ಕಸ್ಮಿನ್ನ ಗರೇ ಗ್ರಾಮೇ ವಾಸ್ಯ ಜನ್ಮ? ಇದಂ ತು ನ ನಿಶ್ಚೇತುಂ ಶಕ್ಯತೇ। ಜನ್ಮ ಚಾಸ್ಯ ಕಾಯಸ್ಥವಂಶೇ। ಕಾಯಸ್ಥವಂಶಶ್ಚಾಧುನಾಽಽಸ್ಯನೇಕಧಾ ತತ್ರ ತತ್ರ ಪ್ರರೂಢಃ ಪ್ರವರ್ತತೇ। ಕವಿರಯಮಾತ್ಮನೋಽನ್ವಯಸ್ಯ ಮೂಲ ಪುರುಷಂ ಭ್ರಾತರಂಶಿಲಾದಿತ್ಯಸ್ಯ ನಾಮ್ನಾ ಕಲಾದಿತ್ಯಂ ಶ್ರೀಕಂಠ ಪಾರ್ಶ್ವಪರಿಚರಸ್ಯ ಕಾಯಸ್ಥಸಂಜ್ಞಸ್ಯ ಗಣನಿಃಪಸ್ಯಾವತಾರಂ ನಿರೂಪ ಯನ್ನಾರಂಭೆ ಸ್ತೌತಿ। ವಿಶೇಷಯತಿ ಚ ನಿಜವಂಶಂ, "ವಾಲಭೋ ನಾಮ ಕಾಯಸ್ಥವಂಶ (ಪೃ ೧೧ ಪ ೬೮)" ಇತಿ ಯಸ್ಮಾತ್ ವಲಭೀನಗ ರ್ಯಾಮಾಸೀದಸ್ಯ ವಂಶಸ್ಯ ಕೂಟಸ್ಥಃ ಕಲಾದಿತ್ಯಸ್ತಸ್ಮಾದ್ವಾಲಭ ಇತಿ ವಿಶೇಷಃ। ನಿಬಂಧಾರಂಭೆ ವಂಶಮಾತ್ಮನಃ ಪ್ರಪಂಚಯಂಸ್ತಥಾ ಶಿಲಾ ದಿತ್ಯಕಲಾದಿತ್ಯಯೋಸ್ಸಂವಾದೆ "ದೇವ ಕ್ಷತ್ರಿಯಾದುತ್ಪನ್ನ (ಪೃ ೬ ಪ ೧೨)" ಇತ್ಯಾದಿ ಕಲಾದಿತ್ಯವಚನಮನುವರ್ತ ವ್ಯನತ್ತಯಾತ್ಮನ ಸ್ಸಂಭೂತಿಂ ಕ್ಷತ್ರಿಯಾನ್ವವಾಯೆ।

ಆಯಂ ಚ ಕವಿನೋದಾಹೃತಸ್ಯಾನ್ವಯಕ್ರಮಃ। ಕಂಟಸ್ಥಃ ಕಲಾದಿತ್ಯಃ। ತಸ್ಯಾನ್ವಯೇ ಸಮುದ್ಭೂತ್ ಚಂಡಪತಿಃ (೧) ತಸ್ಯಸೂನುಃ ಸೋಲ್ಲ ಪೇಯಃ (೨) ತಸ್ಯಸೂನುಸ್ಸೂರಃ (೩) ತಸ್ಯಸೂನುಃ ಕವಿರಸೌ **ಸೋಡ್ಡಲಃ** (೪).

ನರ್ಮದಾನದಿಯಿಂದ ಪರಿಪೂತವಾದ ಲಾಟದೇಶದವನು. ಇದು ಗುಜ ರಾತಿನ ದಕ್ಷಿಣದಿಕ್ಕಿನ ಹೆಸರು. ಕಾಯಸ್ಥವಂಶದವನು. ಕ್ಷತ್ರಿಯನು. ಕಾಯಸ್ಥ ವಂಶದಲ್ಲಿ ಅನೇಕಭಾಗಗಳಿರುವುವಾದರೂ ಇವನು ಕಾಯಸ್ಥಜಾತಿಯ "ವಾಲಭಿ" ಎಂಬ ಶಾಖೆಯವನು. ಶಿವನ ಬಳಿಯಲ್ಲಿರುವ ಪ್ರಮಥಗಣಗಳಲ್ಲೊಬ್ಬನಾದ "ಕಾಯಸ್ಥ" ಗಣ ಮೂರ್ತಿಯಾದ ಕಲಾದಿತ್ಯನೇ ಮೂಲಪುರುಷ. ಇವನು ಶಿಲಾ ದಿತ್ಯನ ಸೋದರನು. ಈ ಕಲಾದಿತ್ಯನ ವಂಶದಲ್ಲಿ ಚಂಡಪತಿಯೆಂಬವನು ಜನ್ಮ ಗ್ರಹಣಮಾಡಿದನು. ಇವನ ಮಗನ ಹೆಸರು ಸೋಲ್ಲಪೇಯನೆಂದು. ಇವನ ಮಗನ ಹೆಸರು ಸೂರನೆಂದು. ಇವನ ಮಗನೇ ಕವಿಸೋಡ್ಡಲ. ಇವನ ಜನ್ಮ ಭೂಮಿ ಯಾವುದೆಂಬುದು ಗ್ರಂಥದಲ್ಲಿ ತಿಳಿಯಬರುವಂತಿಲ್ಲವಾದರೂ ಇವನು ತನ್ನ ಜನ್ಮಭೂಮಿಯಲ್ಲಿಯೇ ಇದ್ದು ಪ್ರಸಿದ್ಧಿಗೆ ಬಂದುದಾಗಿ ಹೇಳಲಾಗು ವುದಿಲ್ಲ. ಚಿಕ್ಕತನದಲ್ಲಿಯೇ ಪಿತೃವಿಯೋಗವನ್ನು ಹೊಂದಿದ ಇವನನ್ನು ಗಂಗಾಧರನೆಂಬ ಇವನ ಸೋದರಮಾವನು ಬೆಳೆಸಿದನು. ಇವನಿಗೆ ಚಂದ್ರನೆಂಬ ಆಚಾರ್ಯನ ಬಳಿ ಶಿಕ್ಷೆಯಾದುದು. ಇವನು ವಿದ್ಯಾಭ್ಯಾಸವನ್ನು ಮುಗಿಸಿಕೊಂಡು

ತನ್ನ ದೇಶವನ್ನು ಬಿಟ್ಟು ಆಗ ಕೊಂಕಣಕ್ಕೆ ರಾಜಧಾನಿಯಾಗಿದ್ದ "ಸ್ಥಾನಕಪತ್ತನ" (ಈಗಣ ಠಾಣ)ಕ್ಕೆ ಬಂದು ಆಗ ಅಲ್ಲಿಕ್ರಮವಾಗಿ ಆಳಿದ ಚಿತ್ತರಾಜ, ನಾಗಾರ್ಜುನ, ಮತ್ತು ಮುಮ್ಮಣಿರಾಜರ ಆಶ್ರಯವನ್ನು ಹೊಂದಿದುದಲ್ಲದೆ ಲಾಟದೇಶದ ಚಾಲುಕ್ಯರಾಜನಾದ ವತ್ಸರಾಜನ ಗೌರವಕ್ಕೂ ಪಾತ್ರನಾಗಿದ್ದನು. ಮೇಲೆ ಹೇಳಿದ ಮೂವರು ರಾಜರೂ ಸೋದರರಂತಿದ್ದರಲ್ಲದೆ, ವತ್ಸರಾಜನ ಸಮಕಾಲೀನರೂ ಆಗಿದ್ದರು.

ಕಾಲ:—ಕೊಂಕಣದ ಸಿಂಹಾಸನಕ್ಕೆ ಮೊದಲುಬಂದ ಜ್ಯೇಷ್ಠಪುತ್ರನ ಹೆಸರು ಚಿತ್ತರಾಜನೆಂದು. ಇವನು ಬಂದುದು ಕ್ರಿ. ಶ. ೧೦೨೬ ಎಂದು ಬರೆಸಿದ ಲೋಹ ಶಾಸನವಿದೆ. ಕೊನೆಯವನಾದ ಮುಮ್ಮಣಿರಾಜನು ಕ್ರಿ. ಶ. ೧೦೬೦ರಲ್ಲಿ ಸಿಂಹಾಸನಕ್ಕೆ ಬಂದುದಾಗಿ ಹೇಳುವಶಿಲಾಶಾಸನವು ದೊರೆಯುತ್ತದೆ.† ಕವಿಯು ಈ ಮೂವರು ರಾಜರಬಳಿಯಲ್ಲಿಯೂ ಇದ್ದುದಾಗಿ ಹೇಳಿಕೊಂಡಿರುವುದರಿಂದ ಇವನು ಕ್ರಿ. ಶ. ೧೦೨೬—೧೦೬೦ರ ವರೆಗೆ ಇದ್ದುದಾಗಿಯೂ ಇವನು ಕ್ರಿ. ಶ. ೧೧೪೮ರ ಶತಮಾನದವನೆಂಬದೂ ಸ್ಪಷ್ಟವಾಗಿದೆ.

ಗ್ರಂಥ. -ಇವನು "ಉದಯ ಸುಂದರೀ ಕಥಾ" ಎಂಬ ಚಂಪೂ ಗ್ರಂಥವನ್ನು ಬರೆದಿರುವನು. ಶೈಲಿಯು ಕಾದಂಬರೀಕಾರನಾದ ಮಹಾಕವಿ ಬಾಣನನ್ನು ಹೋಲುವುದು. ಇವನನ್ನು ಗುರ್ಜರದೇಶದ ಬಾಣಕವಿಯೆಂದರೂ ಸಲ್ಲುವುದು. ಇದನ್ನು ಸೋಡ್ಡಲನು ಕ್ರಿ. ಶ. ೧೦೨೬—೧೦೫೦ ರ ಮಧ್ಯಕಾಲದಲ್ಲಿ ಬರೆದಿರಬೇಕಾಗಿ ತೋರುತ್ತದೆ. ಹೇಗೆಂದರೆ ಇವನು ತನ್ನ ಗ್ರಂಥದಲ್ಲಿ "ಶೂರ್ಪಾರಕಾತ್ ಸಮಾನತೇನ"‡ ಎಂದು ಹೇಳಿರುವುದರಿಂದ ಲಾಟದೇಶದ ವತ್ಸರಾಜನು ಇದ್ದಾಗಲೇ ಬರೆದಿರಬೇಕಾಗಿ ಊಹಿಸಲಾಗುತ್ತದೆ. ಹೇಗೆಂದರೆ ವತ್ಸರಾಜನ ಮಗ ತ್ರಿಲೋಚನಪಾಲನು ಕ್ರಿ. ಶ. ೧೦೫೦ರಲ್ಲಿ ಕೊಟ್ಟ ದಾನಶಾಸನವು ದೊರೆಯುತ್ತದೆ. ಆದುದರಿಂದ ತ್ರಿಲೋಚನಪಾಲನು ಸಿಂಹಾಸನಕ್ಕೆ ಬರುವ ಹೊತ್ತಿಗೆ ಎಂದರೆ ಕ್ರಿ. ಶ. ೧೦೫೦ರ ಮೇಳೆಗೆ ವತ್ಸರಾಜನು ಸ್ಮೃತಿಶೇಷನಾಗಿರಬೇಕಾಗಿ ತೋರುತ್ತದೆ.

ಇದಲ್ಲದೆ ಈ ಗ್ರಂಥವು ಮುಗಿದ ಕೆಲವುದಿವಸಗಳ ಅನಂತರ ಮುಮ್ಮಣಿ ರಾಜನು ಇದನ್ನು ಓದಿಸಿಕೇಳಿ ಬಹುಮಾನಿಸಿದುದಾಗಿ ತಿಳಿಯಬರುವುದರಿಂದ ಈ

† Indian antiquary Part 5 P 277.

‡ Journal of the B B. R. A S. Part 12 P. 329.

‡ ಉದಯ ಸುಂದರೀ ಕಥಾ ಪುಟ ೧೫೬ ೧-೨.

ಕಾವ್ಯವು ಕ್ರಿ. ಶ. ೧೦೩೬-೧೦೫೦ರ ಮಧ್ಯದಲ್ಲಿ ನಿರ್ಮಿಸಲ್ಪಟ್ಟುದಾಗಿ ಸಿದ್ಧವಾಗುತ್ತದೆ. ಇವರಲ್ಲಿ ಕಥಾಸಂವಿಧಾನ ಚತುರತೆಯು ಹೆಚ್ಚಾಗಿರುವಂತೆ ತೋರದಿದ್ದರೂ ಗದ್ಯಭಾಗಗಳಿಗಿಂತ ಪದ್ಯಭಾಗವೇ ರಮ್ಯವಾಗಿರುವಂತೆ ನಮಗೆ ತೋರುತ್ತದೆ. ಅಲ್ಲಲ್ಲಿ ಸಮಯಕ್ಕೆ ತಕ್ಕುವಾದ ಬೋಧಪರ ಶ್ಲೋಕಗಳು ಇವನ ರಚನೆಗೆ ಮೆರಗು ಕೊಟ್ಟಿಂತಾಗಿದೆ. ಕಾದಂಬರೀಕಾರನಾದ ಬಾಣನದು ಮನಮೋಹನ ಶೈಲಿ. ಇವನದೂ ಕೊಂಚ ಹಾಗೆ. ಹಲವೆಡೆ ಶಬ್ದಾರ್ಥಚಾತುರ್ಯವೂ, ಸರಸಪದ ಪ್ರಯೋಗಗಳೂ, ವರ್ಣನಾದಕ್ಷತೆಯೂ ಚೆಲುವಾಗಿವೆ. ಮಾದರಿಗಾಗಿ ಕೆಲವನ್ನು ಒರೆಹಿದೆ. ಇವರಲ್ಲಿ ಕವಿವಂಶನಿವೇದನ ಎಂಬುದು ಮೊದಲನೆಯ ಉಚ್ಛ್ವಾಸ. ಶುಕಲಾಭವೆಂಬುದು ಎರಡನೆಯದು. ಮೂರನೆಯದು ಚಿತ್ರಸಂದರ್ಶನ. ಕುಮಾರಕೇಸರಸನಾಗಮವೆಂಬುದು ನಾಲ್ಕನೆಯದು. ತಾಪಸೀರಕ್ಷಣವೆಂಬುದು ಐದನೆಯದು. ತಾರಾವಳೀದರ್ಶನವೆಂಬುದು ಆರನೇಯದು. ಉಭಯಮೇಳಕವೆಂಬುದು ಏಳನೆಯದು. ಸರ್ವಾನಂದನೆಂಬ ಎಂಟು ಉಚ್ಛ್ವಾಸಗಳಿರುವುವು.

ಇದರಲ್ಲಿ ಕಂಡುಬರುವ ದುರ್ಗಾಸ್ತುತಿ :—

ವಿಕ್ಷತ್ಪಾಂಜೋಗ್ರನೇತ್ರಂ ಪೃಥುಚಪಲಲಲಜ್ಜಿಹ್ವಮುದ್ವರ್ತಗಲ್ಲಂ
ಸ್ಫಕ್ಕಾಂತೋದಗ್ರದಂಷ್ಟ್ರಾಪ್ರಕಟಮಸರಲ ಸ್ಥೂಲಪಿಂಗೋರ್ಧ್ವಕೇಶಂ
ವಕ್ತ್ರಂಕಲ್ಪಾಂತಕಾಲಪ್ರಬಲ ಘನಘಟಾಘೋಷಘೋರಾಟ್ಟಹಾಸಂ
ಚಂಡಾ ಸ್ಯಾರಿವರ್ಗಗ್ರಸನರಸಕಷದ್ಧಾಂತದಂಡಂ ನಮಾಮಿ ॥
ಉದಯಸುಂದರೀ ಕಥಾ ಪುಟ ೯೨.

ಪ್ರೇತವನವರ್ಣನ.—

ಪ್ರೇತೀಭೂತ್ಯಮಾನೈರ್ಗಜಲಂ ಸಲೂರ್ಯಮಾನಾವಿಷಂ
ವೇತಾಲೀಭಿರುಪಾಸ್ಯಮಾನಮಭಿತಃ ಕಂಕಾಲರಂಕಾದಿಭಿಃ
ಅಂತಶ್ಚೀದಮುದಂಚಿತಾನಲಚಿತಾ ಚುಲ್ಲೀಭಿರುದ್ಭಾಸಿತಂ
ಪಶ್ಯ ಪ್ರೇತವನಂ ಮಹಾಸವಿವಾವಿವಾಮಸ್ಯಗ್ರೇಜಿನಾಂ ॥
ವ್ಯಾಲೀ ಬದ್ಧಾಂಡಕತ್ರರಜ್ಜುಃ ಪ್ರಜರದಜಗರಗ್ರಂಥಿಗಾಢೋಗ್ರನಾಗ
ತ್ಯಗ್ವಾಸಾಃ ಸ್ಕಂಧಪೀಠೇ ಕೃತಮಲಘುದಲಂ ಚಾಸ್ಥಿದಂಡಂ ದಧಾನಃ
ಫೇತ್ಕಾರೈರ್ದತ್ತಪಕ್ಷಃ ಸಕಲಮಪಿಕುಲಂ ಕಂಪಯ್ಯ ಕಾಣಪಾನಾಂ
ವೇತಾಲಸ್ತಾಲದೀಘೋ ಭ್ರಮತಿ ಪಿತೃವನೇ ಪತ್ತನೇ ದಂಡಪಾಣಿಃ
ದೋರ್ದಂಡೋತ್ಕ್ಷೇಪವೇಗಾಸಲನಬಿಡಭೃದಶ್ರೋತ್ರನಾಸಾಂಧರಂದ್ರ
ಧ್ವಾನೈರ್ಲೋಲಾಸ್ಥಿಯಂತ್ರಕ್ವಣಪಟುಖುಟಿತಾತ್ಕಾರಸೃಷ್ಟೈಶ್ಚ ಪಾಟ್ಯೈಃ(ವಾದ್ಯೈಃ)
ಕುರ್ವಾಣಃ ಸ್ವಾಂಗ ಏವ ಪ್ರಗುಣಯತಿ ಲಯಾಲಂಬಿನೀ ಗೀತವಾದ್ಯೇ
ನೃತ್ಯೈತ್ಯೇಷೋಽತ್ರ ಪಾತ್ರೀಕೃತರುಧಿರಸುರಾನಂದನಾಭಃ ಪಿಶಾಚಃ ॥
ಏಕಂ ಕಕ್ಷಾಂತರೇಽನ್ಯತ್ಪೃಥುನಿ ಕರತಲೇ ಪಶ್ಯ ಶೇಷಂ ಚ ಮಾಂಸಂ
ಭೃತ್ವಾ ವಕ್ತ್ರೋಽಪಸರ್ಪ ಹಟಹರಣಪರೈರಾವತೋ ಭೂತಡಿಂಭೈಃ

ಸಂಭ್ರಾಂತೋ ಯಾತ್ಯರುದ್ಧಶ್ಚಲತಿ ಕರಧೃತಃ ಕ್ರೋಧತೋ ಹುಂಕರೋತಿ
ಪ್ರಾಪ್ತೋಽಂಗೇ ಕೂರ್ಪರೇಣ ಪ್ರಹರತಿ ರಸತಿ ನ್ಯಂಚತಾ ಪ್ರೇತರಙ್ಗಃ
ಉದಯಸುಂದರೀ ಕಥಾ ಪುಟ ೯೦—೯೧ ॥

ಇದರ ಭೀಭತ್ಸರಸಗಂಭೀರವನ್ನು ಆರ್ಯಕ್ಷೇಮೀಶ್ವರನ ಚಂಡಕೌಶಿಕ ನಾಟಕದಲ್ಲಿ ಬರುವ ಭೀಭತ್ಸರಸಕಾತರತೆಯೊಡನೆ ಹೋಲಿಸಿನೋಡಿ.

ಸೂರ್ಯೋದಯವರ್ಣನ : —

ಕಾಲಕ್ರಮಾದುಪರತಿಂ ಸಮುಪೇತವತ್ಯಾ
ವ್ಯಸ್ತೀಭವತ್ಸಿತನಷ್ಟಕಲೇವರಾಯಾಃ
ರಾತ್ರೇಃ ಕಪಾಲಮಿವ ಪಾಂಡುರಮಸ್ತಶೈಲ
ಕೂಲೇ ಲುಲೋಟ ನಿರಭೀ (ಶು) ಹಿಮಾಂಶುಬಿಂಬಂ ॥
ನಾದ್ಯಾಪ್ಯುಪೈತಿ ಭೃಗುಭೂಮಿ ಗುರುಪ್ರಧಾನ
ಸ್ತಾರಾಗಣೋಽಯಮಿತಿ ಕೋಪಕಷಾಯಿತಸ್ಯ
ಅಹ್ನಃ ಕಟುಕ್ಕಲತಿಕೇವ ಹ್ಯತಿತ್ಯುದಸ್ಥಾ
ದಾಶೋಣರೋಚಿ ರುದಯಾಚಲಪೂರ್ವಸಂಧ್ಯಾ ॥
ಪ್ರಾತಃ ಶ್ರಿಯಾ ರಚಿ ತಮಚ್ಛರುಚೋಽ(ಂಬರ)ಸ್ಯ
ಲಜ್ಜಾ (ಪರ್ಯಾ?)ಯವಿದ್ರುಮದಲದ್ಯುತಿಸೋದರಾಭಂ
ಪೂರ್ವಾಚಲೇ ಸಮುದಭೂನ್ನ ವಪಟ್ಟಸೂತ್ರ
ಸತ್ಕುಂಚಿಕಾತಿಲಕ ಚಿಹ್ನ ಮಿವಾರ್ಕಬಿಂಬಂ ॥ (ಪುಟ ೧೧೫)

ವೀಧೀವರ್ಣನ:—

ಯತ್ಕುಕ್ಷಯಾಂತಿ ವಿಭೂತಿಮಿಂದ್ರನಗರನ್ಯಕ್ಕಾರಮಾತನ್ವತೀಂ
ದ್ರಷ್ಟುಂ ಮೇರುಗಿರೇಃ ಸ್ಥಲಾತ್ಸುಮನಸೋ ನಿತ್ಯಂ ತಥಾ ಹ್ಯಂಬರೇ
ದೃಶ್ಯಂತೇ ಸುರಸದ್ಮಹೇಮಕಲಶತ್ವಿಟ್ಪ್ರಕಾನಾಂ ಮಿಷಾತ್
ತೇಷಾಂ ಕಾಂಚಿ ನದೂಲಿಪಾಂಸುಲಪದ್ಮೈರಾಪಿಂಜರಾವೀಥಯಃ ॥ ಪುಟ ೨೫)

ಕ್ಷೇತ್ರಪಾಲವರ್ಣನ:—

ಧೃತ್ಯಾವೇಶಪ್ರಸಕ್ತೈರ್ಜ್ವಲದನಲಮುಖೋನ್ಮುಕ್ತಪೇತ್ಕಾರಘೋರೈಃ
ಕ್ರೋರೈರುತ್ತಾಲತಾಲವ್ಯತಿಕರ ರಮುಖರೀಭೂತಭೂಷಾಸ್ಥಿಮಾಲ್ಯೈಃ
ಕ್ರೀಡಂತಂ ಪ್ರೇತರಂಗೈಃ ಕುಣಪಭುವಿ ಮಹಾಜಂಗಲಗ್ರಾಮಲೋಭ
ಭ್ರಾಮ್ಯದ್ಭಲ್ಲೂಕಭೂ (ಘೂ?) ಕಪ್ರಕ ರಪರಿಗತಂ ಕ್ಷೇತ್ರಪಾಲಂನಮಾಮಿ
॥ (ಪುಟ ೬೧)

ವಸಂತಾಗಮವರ್ಣನ:—

ಭೂಮಿಃ ಕೋಮಲಸಾದ್ಯಕಂದಲವತೀ ಮೇಘಾವನದ್ಧಂನಭೋ
ನೃತ್ಯನ್ನತ್ತವಯೂರಮಂದ್ರಮಧುರಧ್ವಾನೋಪರುದ್ಧಾ ದಿಶಃ

ವಾತಾಶ್ಚ ಪ್ರಸರತ್ಕದಂಬಕುಸುಮಸ್ಪರ್ಶಪ್ರಸನ್ನಾವನೇ
ವಾಂತಿ ಸ್ಮೈರಮನಂಗರಾಗಜಲಧಿಂ ಕಲ್ಲೋಲಯಂತೋ ಹೃದಿ ॥
(ಪುಟ ೧೦೩)

ಮೃದುಸಮಿಾರಣ ವರ್ಣನೆ:—

ಭ್ರೂಭೂಮಿಂ ಕೇರಲೀನಾಂ ಮುರುಲಮೃಗದೃಶಾಂ ವಿಭ್ರಮೋತ್ತಂಸದೇಶಂ
ಚೋಲೀನಾಂ ಚಾರುಕಾಂಚೀವಿಷಯಮಪಿ ವಲೀಮಂಡಲಂ ಸಿಂಹಲೀನಾಂ
ಆಕ್ರಮ್ಯಾಂಭೋಧಿತೀರೇ ತರುಕುಸುಮರಜಸ್ತಂಭಮುತ್ತಂಭಯಂತೋ
ಯಾಮ್ಯಾಃ ಪುಷ್ಪಾಯುಧಸ್ಯ ವ್ಯದಧತ ಮರುತೋ ರಾಜ್ಯಮೇಕಾಂತಪತ್ರಂ॥
(ಪುಟ ೧೩೨)

ಶ್ಲೋಕಮಾಧುರ್ಯಕ್ಕೆ.

ಕಿಂ ವಕ್ತ್ರದ್ಯುತಿಮತ್ಸರೈಕರಿಪುಣಾ ಚಂದ್ರೇಣ ದೂರೀಕೃತಾ
ನಕ್ಷತ್ರೈಃ ಶರಮೋಕ್ಷನಿರ್ಮಲರದಜ್ಯೋತ್ಸ್ನಾರ್ಥಿಭಿಃ ಕಿಂ ಹೃತಾ
ಯಾಮಿನ್ಯಾ ಘನಕೇಶಪಾಶತಿಮಿರಂ ಸ್ರೋಮಾಣ ಸಮಾಲಿಂಗ್ಯ ಕಿಂ
ನೀತಾ ಶಂಕ ಬಹಿಃ ಸ್ಥಿತಾಽದ್ಯ ಸುಚಿ ರಾದಾಸಾದ್ಯ ತುಚ್ಛೋದರೀ॥
(ಪುಟ ೧೮೬)

ಅಥವಾ

ಸಾ ನೂನಮಿಂದುಕಿರಣಾಂಚಲಚೋದಿತೇನ
ಭಸ್ಮೀಕೃತಾ ಪ್ರಬಲಮಾರಮಹಾಬಲೇನ
ಉತ್ಕ್ಷಿಪ್ಯ ಚಾಥ ಕುಮುದಾಕರಮಾರುತೇನ
ನೀತಾ ಭವಿಷ್ಯತಿ ಸುದೂರವಿತೋಮೃಗಾಕ್ಷೀ (ಪುಟ ೧೮೬)

ಲಾಲಿತ್ಯಕ್ಕೆ.

ಮಾಭೈರ್ಭೀರು ಯದೇಷ ರಾಘುವವಟುರ್ದೇವೋ ಮುರಾರಿಃ ಸ್ವಯಂ
ಗೋಲಾಂಗೂಲಭಟೌ ಇಮೌ ಚ ಮರುತಸ್ತೇ ದುರ್ನಿವಾರಾಃ ಕಿಲ
ಸ್ವರ್ಬಂದೀಹಟನಿರ್ಗ್ರಹೋದ್ಯತಭುಜಾದಂಡೋ ಯದಾಽಹಂ ತದಾ
ಕಿಂ ನಾಸೌ ಮುರಜಿತ್ಸುರಾ ನ ಕಿಮಮೀ ಯೇನಾತಿಭೀತಾ ಪ್ರಿಯೇ ॥
(ಪುಟ ೧೧೦)

ಸೂಕ್ತಿಮಾಲೆ.

ಮುಕ್ತಕವೃತ್ತೈಃ ಕವಿನಾ ಕೈವ ಕಿಲಾಽಸೌ ವಿನಾ ಪ್ರಬಂಧೇನ
ತಾರಾಭಿರ್ನ ವಿರಾಜತಿ ಶೂನ್ಯಾ ಚಂದ್ರೇಣ ಗಗನಶ್ರೀಃ ॥ (ಪುಟ ೧೩)
ಆತ್ಮಾ ಶುಭಾಶುಭಮಯಂ ಧನಮೇಷ ಹೃತ್ವಾ
ಯೋಸ್ಯಂತರೇಷ್ವಪಿ ನಿವಿಶ್ಯ ತಿರೋದಧಾತು
ಅನ್ವಿಷ್ಯ ನೂನಮಚಿರಾದನುಮಾರ್ಗಲಗ್ನೈ

ರಾಬಧ್ಯತೇ೪ತ್ರ ಸುಖದುಃಖಶತೈಸ್ತಥಾಪಿ ॥ (ಪುಟ ೩೮)
ಗೃಧ್ನಾಂಧಕಾರನೀರಂಧ್ರೇ ರಣೇ ರಾಗಾಂಧಯೋಷಪ್ಯಸಿಃ
ಯಸ್ಯ ನೀಲಾಂಶುಕಚ್ಛನ್ನಶ್ಚಿತ್ರಂ ದೃಷ್ಟೋಜಯಶ್ರಿಯಾ ॥
ತ್ರೈಲೋಕ್ಯ ಶ್ರೀರಸೌ ದಾಸೀ ತಾವದುಚ್ಚೈಃಕಲಾಯತೇ
ಯಾವದ್ಧೀರಃ ಕೃತಾಸ್ಫಂದೋ ನ ದೋರ್ದಂಡಮುದಂಚತಿ ॥ (ಪುಟ ೫೫)

ಗದ್ಯದ ಮಾದರಿ:—

ಯಸ್ಯ ಚ ನಿಜಾವಸರವರ್ತಿನಂ ಸೀರಾಜನೋಪಹಾರ ಮಾತನ್ವತಸ್ತತ್ಕಾಲ ಮಿಲಿತಸಕಲ ಬಲಭರನಮಿತಮೇದಿನೀಪೀಠಪೃಷ್ಠಸ್ಯ ಕಮಠಪತೇರ್ವಲ್ಗದ ವಿರಲವಿಲೋಲವಾಜಿ ವಿನ್ಯಸ್ತಖುರನಿಷ್ಠುರ ಖಟತ್ಕಾರನಿಬಿಡಾರವಚ್ಛಲೇನ ಭಜ್ಯಮಾನ ಪೃಥುಕಟಾಹ ಕರ್ಪರಧ್ವನಿರಭೂತಪೂರ್ವೋ ಭಾರತಸಮರ ಸಂಘಟ್ಟೇಽಪಿ ವಿಸಂಕಟಾಭೋಗಮುಲ್ಲಲಾಸ । ಯಸ್ಯ ಚ ಸಮರಸಂಹ ತಾರತಿಕುಲಕುಟುಂಬಿನೀಭ್ಯಃ ಕುಂಕುಮಾಲೇಪಮಾದಾಯ ಶಕ್ತಿರ್ಮಾ ಪಾದಲೇಪಸಿದ್ಧ ಇವ ಮನುಷ್ಯಜನಾಗೋಚರೇಷು ಸಂಚಚಾರ ಪರಿತಃ ಪ್ರದೇಶೇಷು ಪ್ರತಾಪಃ ಯಸ್ಯ ಚ ನಿಕಾಮವೃದ್ಧಾ ವೃದ್ಧೋಚಿತಂ ಚರಿತ ಮಾದ್ದತ್ಯ ತ್ರಿಪಥಗಾಮಿನ್ಯಾ ಗಿರ್ವಾಣಸರಿತಃ ಸ್ರೋತಸಾಂ ತ್ರಯೇಽಪಿ ಸ್ನಾತುಮಭಿಲಷಂತೀವ ಬಭ್ರಾಮ ಭುವನತ್ರಯಂ ಕೀರ್ತಿಃ । ಯಸ್ಯ ಚ ಮಹಾಪಂಕಮಗ್ನಾಽಽದಿಕೂರ್ಮಪೃಷ್ಠಾವಸ್ಥಾನ ಲಗ್ನಮಂಭಸಾ ಧಾರಾ ಗತೇನ ಕ್ಷಾಲಯಿತುಮವಾತ್ಮನಃ ಪಂಕಮಾವಾಸಿತಾ ಕೃಪಾಣೇಕಾಶ್ಯಸಿಃ। ಯಸ್ಯ ಚ ಸ್ಪರ್ಧಾನುಭಯಸ್ಥಾನಂ ಚಂದ್ರಮಸೋ ಮಂಡಲಮುಪಹಾ ಯತದನುಕಾರಹಾರಿಣಿ ಹಾರಪ್ರಭಾವಯಮುಂಡಲಿತೇ ವಕ್ಷಸಿ ಬಭೂವ ಸುಸ್ಥಿತಾಲಕ್ಷ್ಮೀಃ। (ಪುಟ ೨೩)

೧೨ನೆಯ ಶತಮಾನ.

ರಾ ಜಾ ನ ಕ ರು ಯ್ಯ ಕ .

ಇವನು ಕಾಶ್ಮೀರದವನು. ರಾಜಾನಕತಿಲಕನ ಮಗನು. ಇವನಿಗೆ ರುಚಕನೆಂದೂ ಹೆಸರಿದ್ದಿತು.

ಕಾಲ:—ರುಯ್ಯಕನ ಶಿಷ್ಯನಾದ ಮಂಖ್ಖಕನು "**ಶ್ರೀಕಂಠಚರಿತ**" ಎಂಬ ಮಹಾಕಾವ್ಯವನ್ನು ಕ್ರಿ. ಶ. ೧೧೩೫-೧೧೪೫ ರಲ್ಲಿ ಬರೆದುದಾಗಿ ಡಾ. ಬುಹಲರವರ ಮತವಿರುವುದು.§ ಮಂಖ್ಖಕನ ಸೋದರನಾದ ಅಲಂಕಾರ (ಲಂಕಕ)ನು ಕಾಶ್ಮೀರದಲ್ಲಿ ಆಳಿದ ಸುಶ್ಮಲ ಮತ್ತು ಕ್ರಿ. ಶ. ೧೧೮೯-೧೨೦೧ರಲ್ಲಿ ಆಳಿದ ಜಯಸಿಂಹ ಇವರ ಬಳ ಪ್ರಧಾನನಾಗಿದ್ದನು. ಮಂಖ್ಖಕನು ರುಯ್ಯಕನ ಶಿಷ್ಯನೆಂದು ಹೇಳಿಕೊಂಡಿರುವುದರಿಂದ ರುಯ್ಯಕನೂ ಮಂಖ್ಖಕನೂ ಸಮಕಾಲೀನರೆಂದೂ ಅಥವಾ ಕ್ರಿ. ಶ. ೧೨ನೆಯ ಶತಮಾನದ ಪೂರ್ವಾರ್ಧದಲ್ಲಿದ್ದವರೆಂದೂ ನಿಶ್ಚಯವಾಗುತ್ತದೆ.

ಗ್ರಂಥಗಳು:—ಇವನು ಅನೇಕ ಗ್ರಂಥಗಳನ್ನು ಬರೆದಿರುವುದಾಗಿ ಕಂಡು ಬಂದರೂ ಪ್ರಕೃತ ನಾಲ್ಕು ಗ್ರಂಥಗಳು ಮಾತ್ರವೇ ಅಚ್ಚಾಗಿ ನಮಗೆ ದೊರೆತಿರುವುವು. (೧) ಅಲಂಕಾರ ಸೂತ್ರ (೨) ಕಾವ್ಯಪ್ರಕಾಶ ಸಂಕೇತ (ಬೃಹತ್ಸಂಕೇತ) (೩) ಅಲಂಕಾರಮಂಜರಿ (೪) ಸಾಹಿತ್ಯಮೀಮಾಂಸಾ.

ಇವನದೆಂದು ಹೇಳುವ ಇತರ ಗ್ರಂಥಗಳು:—(೧) ಅಲಂಕಾರಾನುಸಾರಿಣೀ (೨) ವ್ಯಕ್ತಿವಿವೇಕ (ವಿಚಾರ) ವ್ಯಾಖ್ಯಾನ (೩) ನಾಟಕಮೀಮಾಂಸಾ (೪) ಹರ್ಷಚರಿತವಾರ್ತ್ತಿಕಾ (೫) ಸಹೃದಯಲೀಲಾ (೬) ಅಲಂಕಾರವಾರ್ತ್ತಿಕಾ (೭) ಶ್ರೀಕಂಠಸ್ತವ. **ಅಲಂಕಾರಸೂತ್ರ**:—ಇದು ಲಕ್ಷಣಗ್ರಂಥ. ಇದರಲ್ಲಿ ೭೬ ಸೂತ್ರಗಳಿರುವುವು. ಈ ಸೂತ್ರಗಳಿಗೆ 'ಮಂಖ್ಖಕನು' ಅಲಂಕಾರ ಸರ್ವಸ್ವವೆಂಬ ವೃತ್ತಿಯನ್ನು ಬರೆದಿರುವನು. ಈ ವೃತ್ತಿಗೆ ಸಮುದ್ರಬಂಧನೆಂಬವನು ವ್ಯಾಖ್ಯಾನವನ್ನು ಬರೆದಿರುವನು. ಇದು 'ರಾಜಾನಕ ಶ್ರೀರುಯ್ಯಕ ಪ್ರಣೀತಂ ಅಲಂಕಾರಸೂತ್ರಂ, ಶ್ರೀಮಂಖಕ ಪ್ರಣೀತಯಾ ಅಲಂಕಾರ ಸರ್ವಸ್ವ ವ್ಯಾಖ್ಯಯಾವೃತ್ತ್ಯಾ ಸಮುದ್ರಬಂಧ ಕೃತ ವ್ಯಾಖ್ಯಾಸನಾಥಯಾ ಸಮೇತಂ" ಎಂಬುದರಿಂದ ಗೊತ್ತಾಗುತ್ತದೆ. ಆದರೆ ಕಾವ್ಯಮಾಲೆಯಲ್ಲಿ ಮುದ್ರಿತವಾಗಿರುವ ಇದರ ವೃತ್ತಿಯಲ್ಲಿ "ನಿಜಾಲಂಕಾರ ಸೂತ್ರಾಣಾಂ ವೃತ್ತ್ಯಾಂತಾತ್ಪರ್ಯಮುಚ್ಯತೇ" ಎಂದು ಹೇಳಲ್ಪಟ್ಟಿರುವುದರಿಂದ ಸೂತ್ರ ಮತ್ತು

§ Dr Buhler opcit P. 50 F.

ವೃತ್ತಿ ಈ ಎರಡನ್ನೂ ಒಬ್ಬನೇ ಬರೆದಿರುವುದಾಗಿ ಬೋಧೆಯಾಗುವುದಲ್ಲದೆ ಕೊನೆಯಲ್ಲಿ 'ಸಂಪೂರ್ಣಮಿದಮಲಂಕಾರ ಸರ್ವಸ್ವಂ' ಎಂದು ಹೇಳಲ್ಪಟ್ಟಿರುವುದರಿಂದ ಸೂತ್ರ ಮತ್ತು ವೃತ್ತಿಗಳೆರಡೂ ನೇರಿ ಅಲಂಕಾರ ಸರ್ವಸ್ವವೆಂದೆನಿಸಿಕೊಂಡಿರಬಹುದಾಗಿ ತೋರುತ್ತದೆ. ಇದಲ್ಲದೆ ಗ್ರಂಥಾಂತ್ಯದಲ್ಲಿ 'ಕೃತಿಸ್ತತ್ರಭವದ್ರಾಜಾನಕ ರುಯ್ಯಕಸ್ಯ' ಎಂದು ಗ್ರಂಥಕರ್ತೃತ್ವವು ರುಯ್ಯಕನ ಹೆಸರಿನಲ್ಲಿ ಹೇಳಲ್ಪಟ್ಟಿದೆ.

ತ್ರಿವೇಂದ್ರಂನಲ್ಲಿ ಮುದ್ರಿತವಾಗಿರುವ ಗ್ರಂಥಾಂತ್ಯದಲ್ಲಿ,

ಇತಿಮಂಖುಕೋವಿತೇನೇ ಕಾಶ್ಮೀರಕ್ಷ್ಮಾಪತಿಪಸಾಂಧಿವಿಗ್ರಹಿಕಃ
ಸುಕವಿಮುಖಾಲಂಕಾರಂ ತದಿದಮಲಂಕಾರಸರ್ವಸ್ವಂ ॥

ಎಂದು ಹೇಳಿ "ಸಮಾಪ್ತಂಚೇದಮಲಂಕಾರಸರ್ವಸ್ವಂ" ಎಂದು ಹೇಳಿದೆ. ವೃತ್ತಿವ್ಯಾಖ್ಯಾನಕಾರನಾದ ಸಮುದ್ರಬಂಧನು.

ಮಂಖುಕ ನಿಬಂಧವಿವೃತೌ ವಿಹಿತಾಯಾಮಿಹ ಸಮುದ್ರಬಂಧೇನ
ಗುಣಲೇಶಮಾತ್ರಮಿತ್ಯೈ ರ್ಧವಿಶೇಷ್ಟಾದೋಷದರ್ಶಿಭಿಸ್ತದ್ಗಿಃ ॥

ಎಂದೂ "ಇತ್ಯಲಂಕಾರ ಸರ್ವಸ್ವವ್ಯಾಖ್ಯಾನಂ ಸಂಪೂರ್ಣಂ" ಎಂದು ಸ್ಪಷ್ಟಪಡಿಸಿರುವುದರಿಂದ ಭಿನ್ನಭಿನ್ನ ಕರ್ತೃತ್ವವೆಂಬುದು ವಿಶದವಾಗುತ್ತದೆ.

'ಗುರ್ವಾಲಂಕಾರಸೂತ್ರಾಣಾಂ' ಎಂಬಲ್ಲಿನ ಗುರುಶಬ್ದ ಪ್ರಯೋಗದಿಂದ ಸೂತ್ರಕಾರನಾದ ರುಯ್ಯಕನ ವೃತ್ತಿಯನ್ನು ಮಂಖುಕನು ಬರೆದಿರಬೇಕಾಗಿ ಬೋಧೆಯಾಗುತ್ತದೆ. ಮಂಖುಕನು ತಾನು ಬರೆದಿರುವ ಶ್ರೀಕಂಠಚರಿತ ಮಹಾಕಾವ್ಯದಲ್ಲಿ.

ಂಶ್ರೀರುಯ್ಯಕಮಾಲೋಕ್ಯ ಸಪ್ರಿಯಂಗುರುಮಗ್ರಹೀತ್
ಸೌಹಾರ್ದಪ್ರಶ್ರಯರಸ ಸ್ರೋತಸ್ಸಂಭೇದಮಜ್ಞನಂ ॥

ಎಂದು ಹೇಳಿಕೊಂಡಿರುವುದರಿಂದ ರುಯ್ಯಕನು ಗುರುವೆಂಬುದು ಸ್ಪಷ್ಟಪಡುತ್ತದೆ. ಪಂಡಿತ ಸುಶೀಲಕುಮಾರಡೇಯರು (S. K. De.) ಸೂತ್ರ ಮತ್ತು ವೃತ್ತಿಕಾರನು ರುಯ್ಯಕನೆಂದೂ, ರುಯ್ಯಕನು ಮಂಖುಕನ ಅನಂತರದವನೆಂದೂ ಸುಮಾರು ಕ್ರಿ. ಶ. ೧೨ನೆಯ ಶತಮಾನದ ಮಧ್ಯ ಅಥವಾ ಉತ್ತರಾರ್ಧವು ರುಯ್ಯಕನ ಗ್ರಂಥಚಳುವಳಿಯ ಕಾಲವೆಂದೂ ಹೇಳುವರು. ಆದರೆ ಈ ಹೇಳಿಕೆಯು ಮೇಲಿನ ಆಧಾರಗಳಿಂದ ಭಿನ್ನವಿಸುವುದು. ರುಯ್ಯಕನು ಮಂಖ್ವಕನ ಶ್ರೀಕಂಠ ಚರಿತದಲ್ಲಿ ಐದು ಶ್ಲೋಕಗಳನ್ನು ಉದಾಹರಿಸಿಕೊಂಡ ಮಾತ್ರದಿಂದಲೇ ಮಂಖ್ವಕನ ಅನಂತರ ರುಯ್ಯಕನೆಂದು ಹೇಳುವುದಕ್ಕಿಂತಲೂ ಗುರುಶಿಷ್ಯರಿಗೆ ಸಮಕಾಲವನ್ನು ಹೇಳಿ ಆಚಾರ್ಯನಾದ ರುಯ್ಯಕನು ಶಿಷ್ಯನ ಘನಪಾಂಡಿತ್ಯಕ್ಕೆ ಮೆಚ್ಚಿ

ಮೆಚ್ಚಿ ಅವನ ಗ್ರಂಥದ ಶ್ಲೋಕಗಳನ್ನು ಉದಾಹರಿಸಿಕೊಂಡಿರಬಹುದಾಗಿ ಹೇಳುವುದಾದರೆ ತಪ್ಪಾಗದು. ರುಯ್ಯಕನ ಅಲಂಕಾರಸೂತ್ರಕ್ಕೆ ಮಂಖ್ಖಕನಲ್ಲದೆ ರಾಜಾನಕ ಅಲಕ ಮತ್ತು ಜಯರಥ ಇವರೂ ವ್ಯಾಖ್ಯಾನವನ್ನು ಬರೆದಿರುವರು.

ಹೇಮಚಂದ್ರ

ಹೇಮಚಂದ್ರನು ಸಂವತ್ ೧೧೪೫ (ಕ್ರಿ. ಶ. ೧೦೮೮) ರಲ್ಲಿ ಅಹಮ್ಮದಾಬಾದ ಡಿಸ್ಟ್ರಿಕ್ಟಿಗೆ ಸೇರಿದ 'ದಂಧುಕಾ' ಎಂಬ ಊರಿನಲ್ಲಿ ಮೋಢಬನಿಯಾಕುಟುಂಬದಲ್ಲಿ ಜನ್ಮಗ್ರಹಣಮಾಡಿದನು. ಇವನ ಹೆಸರು ಚಂಗದೇವ. ಪಾಹಿನೀ ಮತ್ತು ಚಚ್ಚಗರೆಂಬರೇ ಇವನ ತಾಯಿತಂದೆಗಳು. ಒಂದಾನೊಂದುದಿವಸ ಪೂರ್ಣತಲಗಚ್ಛದ ದೇವಚಂದ್ರಸೂರಿಯು ದಂಧುಕಕ್ಕೆ ಬಂದನು. ಚಂಗದೇವನು ತನ್ನ ಸೋದರಮಾವನಾದ ನೇಮಿಚಂದ್ರನೊಡನೆ ದೇವಚಂದ್ರಸೂರಿಯ ಉಪನ್ಯಾಸವನ್ನು ಕೇಳುವುದಕ್ಕೆ ಹೋಗಿ, ಚಂಗದೇವನು ತನ್ನನ್ನು ಜನಮತಕ್ಕೆ ಸೇರಿಸಿಕೊಂಡು ತತ್ಪೋಷಣೆಯ ದೇಶವನ್ನು ಮಾಡುವಂತೆ ದೇವಚಂದ್ರನನ್ನು ಪ್ರಾರ್ಥಿಸಿದನು. ದೇವಚಂದ್ರನು ಇವನ ವಿಲಕ್ಷಣ ಜಾಗ್ರತಬುದ್ಧಿಯನ್ನು ನೋಡಿ, ಇವನಾರೆಂಬದನ್ನು ನೇಮಿಚಂದ್ರಸೂರಿಯಿಂದ ತಿಳಿದು ನೈಜವಾಗಿಯೂ ಮತಸಂಬಂಧವಾದ ವಿಚಾರದಲ್ಲಿ ಆಸಕ್ತಿಯು ಹೆಚ್ಚಿರುವುದನ್ನು ನೋಡಿ ಈಹುಡುಗನು ತೀರ್ಥಂಕರರಂತೆ ಲೋಕಕಲ್ಯಾಣಕಾರನೆಂದೂ, ಜೈನಮತ ಪ್ರಕ್ರಿಯಾಬದ್ಧನಾಗಿ ಭವಬದ್ಧರನ್ನು ಮುಕ್ತರನ್ನಾಗಿ ಮಾಡುವನೆಂದೂ ತಿಳಿದು ತಂದೆಯ ಅಪ್ಪಣೆಯನ್ನು ಪಡೆದು ತನ್ನ ಸ್ಥಳಕ್ಕೆ ಬರುವಂತೆ ಹೇಳಿದನು. ಮಗನಿಗೆ ಆಶ್ರಮವನ್ನು ಕೊಡಿಸುವುದು ತಂದೆಯಾದ ಚಚ್ಚನಿಗೆ ಇಷ್ಟವಿರಲಿಲ್ಲವಾದರೂ ಹುಡುಗನು ಆಶ್ರಮಸ್ವೀಕಾರ ಮಾಡಬೇಕೆಂದು ಮುಷ್ಕರಹಿಡಿದು ದೇವಚಂದ್ರನೊಡನೆ ಕ್ಯಾಂಬೆಗೆಹೋಗಿ ಅಲ್ಲಿ ಆಶ್ರಮಗ್ರಹಣಮಾಡಿದನು. ಆಶ್ರಮಸ್ವೀಕಾರವು ಸಂವತ್ ೧೧೫೪ ಅಥವಾ ಕ್ರಿ. ಶ. ೧೦೯೭ರಲ್ಲಿ ನಡೆದು ಚಂಗದೇವನಿಗೆ ಸೋಮಾನಂದನೆಂದು ನಾಮಕರಣವಾದುದು. ಸ್ವಲ್ಪ ದಿವಸಗಳಲ್ಲಿ ಈ ಹುಡುಗನು ಜೈನಮತಗ್ರಂಥ, ಪುರಾಣೇತಿಹಾಸಾದಿಗಳನ್ನು ಕಲಿತು ಅದ್ವಿತೀಯ ಪಂಡಿತನಾದನು. ದೇವಚಂದ್ರಸೂರಿಯು ಇವನ ವಿದ್ವತ್ತಿಗೆ ತಲೆದೂಗಿ 'ನಾಗರಿ'ನಲ್ಲಿ ಸಂವತ್ ೧೧೬೬ (ಕ್ರಿ ಶ. ೧೧೧೦)ರಲ್ಲಿ ಇವನನ್ನು ಸೂರಿಯನ್ನಾಗಿ ಮಾಡಿ 'ಹೇಮಚಂದ್ರ' ಎಂದು ನಾಮಕರಣಮಾಡಿದನು. ಇವನ ಶರೀರವು ಸುವರ್ಣದಂತೆ ಇದ್ದುದರಿಂದಲೂ ಸಕಲಾಹ್ಲಾದಕರನಾದ ಚಂದ್ರನಂತೆ ತನ್ನ ಸವಿಮಾತಿನಿಂದ ಎಲ್ಲರನ್ನೂ ಸಂತೋಷಗೊಳಿಸುತ್ತಿದ್ದುದರಿಂದಲೂ ಇವನನ್ನು ಹೇಮಚಂದ್ರನೆಂದು ಕರೆದುದಾಗಿ ಹೇಳಿದೆ. ಇವನ ವಿದ್ಯಾಪ್ರೌಢಿಮೆಯನ್ನು ಕೇಳಿ ಜಯಸಿಂಹ ಸಿದ್ಧರಾಜನು

ಕ್ರಿ.ಶ.೧೧೯೪-೧೧೪೩ರಲ್ಲಿ ತನ್ನಾಸ್ಥಾನಕ್ಕೆ ಬರಮಾಡಿಕೊಂಡು ಮನ್ನಣೆಯನ್ನು ಮಾಡಿದನು. ಈ ಕಾಲದಲ್ಲಿ ಹೇಮಚಂದ್ರನು 'ಸಿದ್ಧಹೇಮ' ಎಂಬ ವ್ಯಾಕರಣವನ್ನು ರಚಿಸಿದನು. ಈತನ ಉಪದೇಶಬಲದಿಂದ ಸಿದ್ಧರಾಜನು ಜೈನಮತವನ್ನು ಮನ್ನಿಸಿ 'ರಾಜವಿಹಾರ' ಮತ್ತು 'ಸಿದ್ಧವಿಹಾರ' ಎಂಬೆರಡು ಜೈನಬಸದಿಗಳನ್ನು ತನ್ನ ರಾಜಧಾನಿಯಲ್ಲಿಯೂ ಮತ್ತು ಸಿದ್ಧಪುರದಲ್ಲಿಯೂ ಕಟ್ಟಿಸಿಕೊಟ್ಟನು. ಸಿದ್ಧರಾಜನು ಯಾವಾಗಲೂ ಹೇಮಚಂದ್ರನ ಬಳಿಯಲ್ಲಿಯೇ ಇರುತ್ತಿದ್ದನು. ಸಿದ್ಧರಾಜನ ಅನಂತರ ಗುಜರಾತಿನ ಕುಮಾರಪಾಲನು ಸಿಂಹಾಸನವನ್ನೇರಿದನು. ಸಿದ್ಧರಾಜನ ಕಾಲದಲ್ಲಿ ಮಾನ್ಯಮತವಾಗಿದ್ದ ಜೈನಮತವು ಕುಮಾರಪಾಲನ ಕಾಲದಲ್ಲಿ ಸಂಸ್ಥಾನದ ಪ್ರಬಲ ಮತವಾದುದು. ಕುಮಾರಪಾಲನಿಗೆ ಸಂವತ್ ೧೨೧೬ ಕ್ರಿ. ಶ. ೧೧೬೦ರಲ್ಲಿ, ಜೈನಮತ ದೀಕ್ಷೆಯು ಕೊಡಲ್ಪಟ್ಟಿತು. ಹೇಮಚಂದ್ರನ ಉಪದೇಶದಂತೆ ಇವನು ತನ್ನ ರಾಜ್ಯದಲ್ಲಿ ಪ್ರಾಣಿವಧೆಯನ್ನು ನಿಲ್ಲಿಸಿದನು. ದೊಡ್ಡದೊಡ್ಡ ಜೈನಬಸದಿಗಳನ್ನು ಕಟ್ಟಿಸಿದನು. ಮದ್ಯಪಾನ, ವ್ಯಭಿಚಾರ, ಚೌರ್ಯ, ದ್ಯೂತಗಳನ್ನು ನಿಲ್ಲಿಸಿದುದಲ್ಲದೆ ಅಪುತ್ರರಾಗಿ ಸತ್ತವರ ಆಸ್ತಿಗಳನ್ನು ಸರಕಾರಕ್ಕೆ ತೆಗೆದುಕೊಳ್ಳುವುದನ್ನು ನಿಲ್ಲಿಸಿದನು. ಹೇಮಚಂದ್ರನ ವ್ಯಾಕರಣಗ್ರಂಥದಲ್ಲಿ ೮ ಪರಿಚ್ಛೇದಗಳಿರುವುವು. ಇದಕ್ಕೆ ತಾನೇ ೪೪,೦೦೦ ಪರಿಮಿತಿಯುಳ್ಳ ಒಂದು ನ್ಯಾಸವನ್ನೂ "ಅಷ್ಟಾದಶಸಹಸ್ರೀ" ಎಂಬ ವ್ಯಾಖ್ಯಾನವನ್ನೂ ಬರೆದನು. ವ್ಯಾಕರಣಸೂತ್ರಗಳನ್ನು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸುವುದಕ್ಕೂ ಚಾಲುಕ್ಯರಾಜರ ಪರಾಕ್ರಮವೈಭವಗಳನ್ನು ತಿಳಿಯಹೇಳುವುದಕ್ಕೂ 'ದ್ವ್ಯಾಶ್ರಯ' ಎಂಬ ಕಾವ್ಯವನ್ನು ಬರೆದನು. ಕುಮಾರಪಾಲನ ವಿಚಾರವಾಗಿ ಹೇಳಿರುವ ಪ್ರಾಕೃತಭಾಗವು ಕುಮಾರಪಾಲನ ಕಾಲದಲ್ಲಿಯೇ ಇದಕ್ಕೆ ಸೇರಿಸಲ್ಪಟ್ಟಿರುವುದು. ಅನೇಕಾರ್ಥಸಂಗ್ರಹಯುಕ್ತವಾದ ಅಭಿಧಾನಚಿಂತಾಮಣಿ, ದೇಶೀಮಾಲಾ ಮತ್ತು ನಿಘಂಟುವಿವೇಕವೆಂಬ ವ್ಯಾಖ್ಯಾನದೊಡಗೂಡಿದ ಕಾವ್ಯಾನುಶಾಸನ, ಛಂದೋನುಶಾಸನ, ಪ್ರಮಾಣಮೀಮಾಂಸಾ ಇವುಗಳೆಲ್ಲವೂ ಸಿದ್ಧರಾಜನ ಕಾಲದಲ್ಲಿಯೇ ಬರೆಯಲ್ಪಟ್ಟಿದ್ದುವು. ಕುಮಾರಪಾಲನ ಕಾಲದಲ್ಲಿ ಬರೆದವುಗಳೆಲ್ಲವೂ ಕೇವಲ ಮತಗ್ರಂಥಗಳು. ಯೋಗಶಾಸ್ತ್ರ, ವೀತರಾಗಸ್ತುತಿ ಇವು ಕುಮಾರಪಾಲನಿಗೆ ಬೋಧಿಸುವುದಕ್ಕಾಗಿ ಬರೆಯಲ್ಪಟ್ಟುವು. 'ತ್ರಿಷಷ್ಟಿಶಲಾಕಾಪುರುಷಚರಿತ'ಎಂಬುದುಕುಮಾರಪಾಲನು ಕೇಳಿಕೊಂಡಂತೆ ಬರೆದುದಾಗಿದೆ. ಹೇಮಚಂದ್ರನು ಕಾವ್ಯಾನುಶಾಸನವೆಂಬ ಅಲಂಕಾರಗ್ರಂಥವನ್ನು ವೃತ್ತಿಸಮೇತವಾಗಿ ಬರೆದು ಅದಕ್ಕೆ "ಅಲಂಕಾರಚೂಡಾಮಣಿ" ಎಂಬ ವ್ಯಾಖ್ಯಾನವನ್ನು ಬರೆದಿರುವನು. ಕುಮಾರಪಾಲನು ಸಾಯುವ ಆರುತಿಂಗಳು ಮುಂಚೆ ಇವನು ತನ್ನ ಎಳನೆಯ ವಯಸ್ಸಿನಲ್ಲಿ ಸಂವತ್ ೧೨೨೯ ಅಥವಾ ಕ್ರಿ. ಶ. ೧೧೭೩ರಲ್ಲಿ ಕೀರ್ತಿಶೇಷನಾದನು.[1]

[1] Introduction to Moharaja Parajaya. Gaikwad Oriental Series 1'. 13 14.

ಸು ಭ ಟ

ಇವನಾರೆಂಬುದೂ ಎಲ್ಲಿಯವನೆಂಬುದೂ ತಿಳಿಯದು.

ಕಾಲ:—ಇವನು ಕುಮಾರಪಾಲದೇವನನ್ನು ಸ್ತುತಿಸಿರುವನು. ಕುಮಾರ ಪಾಲನು ಕ್ರಿ. ಶ. ೧೦೪೪-೧೧೭೨ರವರೆಗೆ ಗುರ್ಜರದೇಶ (ಗುಜರಾತ)ವನ್ನಾಳಿದನು. ಪಂಡಿತವರ ಹೇಮಚಂದ್ರನೂ ಇವನೂ ಸಮಕಾಲೀನರು x ಹೇಮಾಚಾರ್ಯಕೃತ ಕುಮಾರಪಾಲಚರಿತವು ಪ್ರಾಕೃತನಿಬದ್ಧ ಗ್ರಂಥವಾಗಿ ಹೆಸರುಗೊಂಡಿದೆ. ಸುಭಟನ ವಿಚಾರವಾಗಿ :—

ಸುಭಟೇನ ಪದನ್ಯಾಸಃ ಸ ಕೋಽಪಿ ಸವಿತೌಕೃತಃ
ಯೇನಾಧುನಾಪಿ ಧೀರಾಣಾಂರೋಮಾಂಚೋನಾಪಿಜೀಯತೇ ॥ ೦

ಎಂದು ಹೇಳಲ್ಪಟ್ಟಿರುವುದು. ಕ್ರಿ. ಶ. ೧೩ನೆಯ ಶತಮಾನಾರಂಭದಲ್ಲಿದ್ದ ಸೋಮೇಶ್ವರನು ಇವನನ್ನು ಹೇಳಿರುವುದರಿಂದ ಇವನು ಕ್ರಿ. ಶ. ೧೨ನೆಯ ಶತಮಾನದಲ್ಲಿದ್ದವನೆಂಬುದು ಸ್ಪಷ್ಟವಾಗುವುದು.

ಗ್ರಂಥ:—ಇವನು ದೂತಾಂಗದವೆಂಬ ನಾಟಕವನ್ನು ಬರೆದಿರುವುದಾಗಿ "ಭೋಭೋ ಸಾಮಾಜಿಕಾಃ ಶ್ರುಣುತ ಸಾವಧಾನಾಃ ಯದದ್ಯ ವಸಂತೋತ್ಸವೇ ದೇವಶ್ರೀಕುಮಾರಪಾಲದೇವಸ್ಯ ಯಾತ್ರಾಯಾಂ ಪದವಾಕ್ಯ ಪ್ರಮಾಣಪಾರಂಗತೇನ ಮಹಾಕವಿನಾ ಶ್ರೀಸುಭಟೇನ ವಿನಿರ್ಮಿತಂ ದೂತಾಂಗದನಾಮ ಚ್ಛಾಯಾನಾಟಕ ಮಭಿನೇತವ್ಯಂ " ಎಂಬ ಸೂತ್ರ ಧಾರನ ಹೇಳಿಕೆಯಿಂದ ಗೊತ್ತಾಗುತ್ತದೆ. ಇದು ರೂಪಕ ಭೇದವಾದ "ಛಾಯಾ"ನಾಟಕS ಜಾತಿಗೆ ಸೇರಿದುದು. ಈ ನಾಟಕವು ತನ್ನ ಸ್ವಂತ ಕವಿತೆಯಲ್ಲವೆಂದೂ ಪ್ರಾಚೀನ ಕವಿಗಳುಹೇಳಿರುವ ಶ್ಲೋಕಗಳನ್ನಾರಿಸಿ ಕೊಂಡು ರಸಪೋಷಣೆಯನ್ನು ಮಾಡಿರುವುದು ಹೊರ್ತು ಸ್ವನಿರ್ಮಿತ ವಲ್ಲವೆಂದು ತಾನೇ:—

ಸ್ವನಿರ್ಮಿತಂ ಕಿಂಚನ ಗದ್ಯಪದ್ಯ
ಬಂಧಂ ಕಿಯತ್ಪ್ರಾಕ್ತನಸತ್ಕವೀಂದ್ರೈಃ
ಪ್ರೋಕ್ತೆಂಗೃಹೀತ್ವಾ ಪ್ರವಿರಚ್ಯತೇಸ್ಮ
ರಸಾಢ್ಯಮೇತತ್ಸುಭಟೇನ ನಾಟ್ಯಂ ॥ ಪುಟ ೧೫ ಶ್ಲೋಕ ೫೬

ಎಂದು ಹೇಳಿಕೊಂಡಿರುವನು.

---

x ಸುಭಾಷಿತಾವಳಿಯ ಮುನ್ನುಡಿ ಪುಟ ೧೨೯

೦ ಕೀರ್ತಿಕೌಮುದೀ ೧೨೪

S ಛಾಯಾನಾಟಕ ಎಂದರೆ:—

ರಾಮನು ಅಂಗದನ ಮೂಲಕ ರಾವಣನಿಗೆ ಹೇಳಿಕಳುಹಿಸಿದ ಸಂದೇಶವು ಹೀಗಿರುವುದು.—

ಅಜ್ಞಾನಾದಥವಾಧಿಪತ್ಯರಭಸಾದಸ್ಮತ್ಪರೋಕ್ಷೇಹೃತಾ
ಸೀತೇಯಂ ಪ್ರವಿಮುಚ್ಯತಾಮಿತಿವಚೋ ಗತ್ವಾದಶಾಸ್ಯಂವದ
ನೋಚೇಲ್ಲಕ್ಷ್ಮಣಮುಕ್ತಮಾರ್ಗಣಗಣಚ್ಛೇದೋಚ್ಛಲಚ್ಛೋಣಿತ
ಚ್ಛತ್ರಚ್ಛನ್ನದಿಗಂತಮಂತಕಪುರಂಪುತ್ರ್ಯಾವ್ಯತೋಯಾಸ್ಯಸಿ ॥ ೯ ॥

ವತ್ಸ ! ಅಂಗದ ! ೪ ನೀನು ರಾವಣನ ಬಳಿಗೆಹೋಗಿ:—

ರಾವಣ! ಅಜ್ಞಾನದಿಂದಲೋ ಅಥವಾ ಅಧಿಕಾರಮತ್ತತೆಯಿಂದಲೋ ಹೇಗೋ ನಮ್ಮ ಪರೋಕ್ಷದಲ್ಲಿ ಅಪಹರಿಸಿಕೊಂಡು ಹೋಗಿರುವ ಸೀತೆಯನ್ನು ಬಿಟ್ಟುಕಳುಹೆಂದೂ ಹಾಗೆ ಅವನು ಕಳುಹಲೊಲ್ಲನಾದರೆ ಲಕ್ಷ್ಮಣನಿಂದ ಬಿಡಲ್ಪಡುವುದಾದ ಕ್ರೂರಬಾಣಗಳಿಂದ ಛಿನ್ನಾಭಿನ್ನವಾಗಿ ಕತ್ತರಿಸಲ್ಪಟ್ಟು ರಕ್ತಧಾರಾವೃತ ರಾಗಿರುವ ನಿನ್ನ ಮಕ್ಕಳೊಡನೆ ಯಮನ ಪತ್ತನವನ್ನು ಹೊಂದುವುದಾಗಿಯೂ ತಿಳಿಸುವನಾಗು.

ಅಂಗದನಿಗೂ ರಾವಣನಿಗೂ ನಡೆದುದಾದ ಸಂಭಾಷಣೆಯು ಎಷ್ಟು ಚೆಲುವಾಗಿಯೂ ಭಾವಾರ್ಥಗರ್ಭಿತವಾಗಿಯೂ ಇರುವುದು:—

ರಾವಣನು ಅಂಗದನನ್ನು ಕುರಿತು,

ರಾ: —ರಾಮ- ಕಿಂಕುರುತೇ-ರಾಮನು ಏನುಮಾಡುವನು ?

ಅಂ: —ನಕಿಂಚಿತ್-ಏನೂ ಇಲ್ಲ

ರಾ: —ಅಸಿ ಚ ಪ್ರಾಪ್ತ- ಪಯೋಧೇಸ್ತಟಂ ಕಸ್ಮಾತ್ತ್ವಾಂಪ್ರತಂ-ಹಾಗಾದರೆ ಈಗ ಸಮುದ್ರದ ತಟಕ್ಕೆ ಏಕೆ ಬಂದಿರುವನು ?

ಅಂ:—ಏವಮೇವ-ಏನೋ ಹಾಗೆಯೇ(ಕಾರಣಾಂತರದಿಂದಬಂದಿರುವನು)

ರಾ: —ತತೋಬದ್ಧಃ ಕಿಮಂಭೋನಿಧಿಃ-ಹಾಗಾದರೆ ಸಮುದ್ರಕ್ಕೆ ಏಕೆ ಸೇತುವೆಯನ್ನು ಕಟ್ಟಿದನು ?

ಅಂ: —ಕ್ರೀಡಾಭಿಃ-(ಇಚ್ಛಾಮಾತ್ರ) ಕ್ರೀಡೆಗಾಗಿ.

ರಾ:—ಕಿಮುಸೌನವೇತ್ತಿಪುರತೋಲಂಕೇಶ್ವರೋವರ್ತತೇ-ಏನು! ಅವನಿಗೆ ಈ ಲಂಕೇಶ್ವರನಿರುವನೆಂಬುದು ಗೊತ್ತಿಲ್ಲವೋ

೪ ವಾಲಿಯು ಮಹಾಪರಾಕ್ರಮಶಾಲಿ ಮತ್ತು ರಾವಣನ ಜೀವದಗೆಳೆಯನು. ಅಂಗದನು ತನ್ನ ತಂದೆಯಾದ ವಾಲಿಯನ್ನು ಕೊಂದ ರಾಮನಲ್ಲಿ ವಿರುದ್ಧಭಾವದಿಂದ ವರ್ತಿಸಬೇಕಾದುದು ಲೋಕರೂಢಿ. ಅಂತಹುದರಲ್ಲಿ ರಾಮನು ಅಂಗದನನ್ನು ದೂತಕಾರ್ಯಕ್ಕೆ ನಿಯಮಿಸಿದುದೂ, ಅದರಂತೆ ಅಂಗದನು ಕೈಗೊಂಡು ನಡೆಸಿದುದೂ ಹೆಚ್ಚು ವಿಶೇಷ— ರಾಜಶಿಕ್ಷಾನೈಪುಣ್ಯದರ್ಶನ,

ಅಂ:—ಜಾನಾತ್ಯೇವ ವಿಭೀಷಣೋಽಸ್ಯನಿಕಟೇಲಂಕಾಪದೇಸ್ಥಾಪಿತಃ॥ ೨೬—ಗೊತ್ತಿಲ್ಲದೆ ಏನು! ಲಂಕೇಶ್ವರನು ಸವಿಾಪಗತನಾದ ವಿಭೀಷಣನೆಂದು ತಿಳಿದು ಕೊಂಡಿರುವನು. (ಹೊರ್ತು ರಾವಣನೆಂದಲ್ಲ)

ಜ ಲ್ಹ ಣ*

ಇವನು ಕಾಶ್ಮೀರದವನು. ಕಾಶ್ಮೀರಕ್ಕೆ ಸೇರಿದ ರಾಜಪುರೀ† ರಾಜನಾದ ಸೋಮಪಾಲನಬಳಿ ಸಂಧಿವಿಗ್ರಹನಿಯೋಗಿ (ಮಂತ್ರಿ) ಯಾಗಿದ್ದುದಾಗಿ ರಾಜ ತರಂಗಿಣಿಯು ಹೇಳುತ್ತದೆ.‡ ಜಲ್ಹಣನ ವಿಷಯವಾಗಿ ಮಹಾಕವಿ ಮಂಖ್ಖನು ಶ್ರೀಕಂಠಚರಿತದಲ್ಲಿ ಈ ರೀತಿಯಾಗಿ ಒಕ್ಕಣಿಸಿರುವನು.

ಯಥಾಚರತಿವಕ್ರೇಣ ವಾಗ್ಯಸ್ಯಚತುರೈಃ ಪದೈಃ
ಸರಸ್ವತ್ಯೈವಿನಿರ್ಮಾತುಮುದ್ಯತೇವ ಪ್ರದಕ್ಷಿಣಂ—೨೫—೭೩
ವಕ್ರಮೈರ್ಹರವಕ್ರಸ್ಯೋ ಮುರಾರಿಮನುಧಾವಕಃ
ಶ್ರೀರಾಜಶೇಖರಗಿರೋ ನವೀಯಸ್ಯೋಕ್ತಿಸಂಪದಾಂ—೭೪
ಶ್ರೀಮದ್ರಾಜಪುರೀ ಸಂಧಿವಿಗ್ರಹಸ್ಯನಿಯೋಗಿನಂ
ಅರ್ಘ್ಯನರ್ಘ(ರ್ಚ)ವಚೋಭಿಸ್ತಂ ಜಲ್ಹಣಂವಿಸಯಾಂಚಿತೈಃ॥—೭೫

ಕಾಲ:—ಸೋಮಪಾಲನು ಸುಶ್ಲಲನಿಂದ ಕ್ರಿ. ಶ. ೧೧೨೭ರಲ್ಲಿ ವಿಜೇತ ನಾದನು. ಈ ಆಧಾರದಿಂದ ಸೋಮಪಾಲನ ಬಳಿಯಲ್ಲಿದ್ದ ಜಲ್ಹಣನು ೧೨ನೆಯ ಶತಮಾನಕ್ಕೆ ಸೇರಿದವನು.

ಗ್ರಂಥಗಳು:—ಇವನು 'ಸೋಮಪಾಲವಿಲಾಸ' ಎಂಬ ಕಾವ್ಯವನ್ನೂ 'ಮುಗ್ಧೋಪದೇಶ' ಎಂಬ ಗ್ರಂಥವನ್ನೂ ಬರೆದಿರುವನು. ಸೋಮಪಾಲವಿಲಾಸ ಕಾವ್ಯದಲ್ಲಿತನ್ನೊಡೆಯನಾದ ಸೋಮಪಾಲದೇವನ ಚರಿತವು ವರ್ಣಿತವಾಗಿರುವುದು. ಇದಕ್ಕೆ "ಅಲಂಕಾರಾನುಸಾರಿಣೀ" ಎಂಬ ಟೀಕೆಯು ಇರುವುದು. ಮುಗ್ಧೋಪದೇಶವು ಹೆಸರಿಗೆ ತಕ್ಕಂತೆ ಬೋಧಪ್ರದವಾಗಿಯೂ ರೂಪಾಜೀವೆಯರ ವರ್ತನವನ್ನು

---

* ಸೂಕ್ತಿಮುಕ್ತಾವಳೀಸಂಗ್ರಹ ಕಾರನಾದ ಆರೋಹಕಭಗದತ್ತಜಲ್ಹಣನು ಇವನಲ್ಲ.

† ರಾಜಪುರೀಕಾಶ್ಮೀರದೇಶಸಂಲಗ್ನೈವ 'ರಾಜವೇರೀ' 'ರಾಜೌರೀ' ಇತ್ಯಾದಿನಾಮಭಃ ಪ್ರಸಿದ್ಧಾವರ್ತತೇ. ತಕ್ರತಸ್ಮಿನ್‌ಕಾಲೇಸೋಮಪಾಲಮಹೀಪತಿರಾಸೀತ್ ಯಸ್ಯಾಯಂಜಲ್ಹಣಸಂಧಿವಿಗ್ರಹನಿಯೋಗೀ,

‡ ರಾಜಪುರ್ಯಾಮಾಕುಲತ್ವಂ ನೀತ್ವಾಯೋಮಾಸಮುದಿತತ್
ತದ್ಭರ್ತುಃ ಸೋಮಪಾಲಸ್ಯದೂರಸ್ಥಸ್ಯಾಂತಿಕಂಚಿತ್ತಾತ್ ॥
ರಾಜತರಂಗಿಣೀ ಲಂಬಕ ೪ ಪುಟ ೧೪೬೭.

ತಿಳಿಯು ಹೇಳುವುದಾಗಿಯೂ ಇರುವುದು. ಮಾದರಿಗಾಗಿ ಒಂದು ಶ್ಲೋಕವನ್ನು ಕೊಟ್ಟಿದೆ.

ಅಜೀವಃಕಪಟಾನುರಾಗಕಲಯಾ ದೋಷೋನದುಶ್ಶೀಲತಾ
ವೈಧವ್ಯಂಚನಬಾಧತೇ ಸದಸತೋಸ್ಪಂಭಾವನಾವ್ಯತ್ಯಯಾತ್
ಯತ್ಕಿಂಚಿತ್ಕರಣೇಪರಸ್ಯಹರಣೇ ವ್ರೀಡಾನಪೀಡಾಕರೀ
ನೋವಾರಾಜಭಯಂಚ ಹೇಬತಸುಖಂಜೀವಂತಿವಾರಸ್ತ್ರಿಯಃ ॥

ಅಹಹ! ಈ ಸೂಳೆಯರಿಗೆ ಆಜೀವವೂ ಕಳ್ಳಪ್ರೇಮದಿಂದಲೇ ದ್ರವ್ಯ ಸಂಪಾದನೆ. ದುಶ್ಶೀಲವೇ ಇವರ ಸ್ವಭಾವ. ವೈಧವ್ಯದಭಯವಿಲ್ಲ. ತುಂಬಿದ ಸಭೆಯಲ್ಲಿ ಗೌರವ. ಏನುಮಾಡಿದರೂ ನಾಚಿಕೆ ಇಲ್ಲ. ರಾಜಭಯವು ಮೊದಲೇ ಇಲ್ಲ. ಛಿ ಛಿ! ವಾರಾಂಗನೆಯರು ಹೇಗೂ ಸುಖದಿಂದ ಜೀವಿಸುವರಲ್ಲವೆ!

ಕಲ್ಹಣ

ಇವನು ಕಾಶ್ಮೀರದವನು. ಕಾಶ್ಮೀರದ ಸುಶ್ಯಲನ ಮಗ ಜಯಸಿಂಹನ ಕಾಲದವನೆಂದು ಇವನ ಗ್ರಂಥದ

ಸುತಸ್ಸುಶ್ಯಲಭೂಭರ್ತುಃ ಸಂಪ್ರತ್ಯಪ್ರತಿಮಕ್ಷ್ಮಾಃ
ನಂದರ್ಯಮೇದಿನೀಮಾಸ್ತೇ **ಜಯಸಿಂಹೋ** ಮಹೀಪತಿಃ ॥

ಎಂಬುದರಿಂದಲೂ, ಇವನು ಶಕ ಸಂ ೧೦೭೦ ಅಥವಾ ಕ್ರಿ. ಶ. ೧೧೩೮ರಲ್ಲಿದ್ದನೆಂಬುದು,

ಲೌಕಿಕಾಬ್ದೇಚತುರ್ವಿಂಶೇ ಶಕಕಾಲಸ್ಯ ಸಾಂಪ್ರತಂ
ಸಪ್ತತ್ಯಭ್ಯಧಿಕಂಯಾತಂ ಸಹಸ್ರಂಪರಿವತ್ಸರಾಃ

ಎಂಬ ಗ್ರಂಥಮುಖಸ್ಥ ಶ್ಲೋಕದಿಂದಲೂ ತಿಳಿಯಬರುತ್ತದೆ.

ಗ್ರಂಥ:—ಇವನು ಕಾಶ್ಮೀರದಲ್ಲಿ ಆಳಿಹೋದ ಪ್ರಾಚೀನರಾಜರ ಚರಿತ್ರೆಗಳೆಲ್ಲವನ್ನೂ ಬರೆದು ಅದನ್ನು "ರಾಜತರಂಗಿಣೀ" ಎಂದು ಕರೆದಿರುವನು. ಇದರಲ್ಲಿ ೮ ತರಂಗಗಳಿರುವವು. ಇದರಲ್ಲಿ ಕಾಶ್ಮೀರರಾಜರ ಚರಿತೆಯೇ ಅಲ್ಲದೆ ಇತರದೇಶದ ರಾಜರ ಮತ್ತು ಕವಿಗಳ ಚರಿತೆಯು ಅಲ್ಲಲ್ಲಿ ದೊರೆಯುವುವಾದುದರಿಂದ ಚಾರಿತ್ರ್ಯ ವಿಷಯಸಂಶೋಧಕರಿಗೆ ಇದು ಬಹು ಪ್ರಯೋಜನವೂ ಪ್ರಮಾಣಗ್ರಂಥವೂ ಆಗಿರುವುದು.

ಕಾಂಚನಾಚಾರ್ಯ

ಇವನು ಕಪ್ಪಿಮುನಿವಂಶೀಯನಾದ ನಾರಾಯಣನೆಂಬವನ ಮಗನು. ಬ್ರಾಹ್ಮಣನು. ಕ್ರಿ. ಶ. ೧೨ನೆಯ ಶತಮಾನದವನು. ಇವನು "ಧನಂಜಯ" ಎಂಬ ಒದಂಕನಾಟಕವನ್ನು ಒರೆದಿರುವನು. ಇದು ರೂಪಕಭೇದವಾದ ವ್ಯಾಯೋಗಜಾತಿಗೆ ಸೇರಿದುದು. ಕೌರವರಿಂದ ತೆಗೆದುಕೊಂಡು ಹೋಗಲ್ಪಟ್ಟ ವಿರಾಟನ ಹಸುಗಳನ್ನು ಅರ್ಜುನನು ಬಿಡಿಸಿಕೊಂಡು ಬಂದ ವಿಚಾರವು ವರ್ಣಿತವಾಗಿದೆ.§

ವಾಸುದೇವ

ಇವನು ಬ್ರಾಹ್ಮಣನು. ಭಾರತಗುರುವಿನ ಶಿಷ್ಯನು. ಇವನು ಕುಲಶೇಖರವರ್ಮನ ಸಮಕಾಲೀನನೆಂಬುದು: –

ತಸ್ಯ ಚವಸುಧಾಮವತಃ ಕಾಲೇ ಕುಲಶೇಖರಸ್ಯ ವಸುಧಾಮವತಃ
ವೇದಾನಾಮಧ್ಯಾಯಿಭಾರತ ಗುರುರಭವದಾದ್ಯನಾಮಧ್ಯಾಯೀ
ಸಮಜನಿಕಶ್ಚಿತ್ತಸ್ಯಸ್ರವಣಃ ಶಿಷ್ಯೋನುವರ್ತಿಕಶ್ಚಿತ್ತಸ್ಯ
ಕಾವ್ಯಾನಾಮಾಲೋಕೇಪಟು ರ್ವಾಸುದೇವನಾಮಾಲೋಕೇ ||*

ಎಂಬ ಶ್ಲೋಕದಿಂದ ತಿಳಿಯಲಾಗುತ್ತದೆ:—

ಕಾಲ:—ಕುಲಶೇಖರವರ್ಮನು ಕ್ರಿ. ಶ. ೧೨ನೆಯ ಶತಮಾನದವನಾದುದರಿಂದ ಇವನ ಸಮಕಾಲೀನನಾದ ವಾಸುದೇವನು ಕ್ರಿ. ಶ. ೧೨ನೆಯ ಶತಮಾನದವನು.

ಗ್ರಂಥ: –ಇವನು 'ಯುಧಿಷ್ಠಿರವಿಜಯ' ಎಂಬ ಮಹಾಕಾವ್ಯವನ್ನು ಬರೆದಿರುವುನು. ಇದರಲ್ಲಿ ೮ ಆಶ್ವಾಸಗಳಿರುವುವು. ಇದಕ್ಕೆ ರಾಜಾನಕ ರತ್ನಕಂಠನು "ಶಿಷ್ಯಸಹಿತ" ಎಂಬ ಟೀಕೆಯನ್ನು ಕ್ರಿ. ಶ ೧೬೬೧ರಲ್ಲಿ ಬರೆದಿರುವನು. ವಾಸುದೇವ 'ವಿಜಯ'ಎಂಬ ಕಾವ್ಯವನ್ನು ಬರೆದ ವಾಸುದೇವ† ಕವಿಯೊಬ್ಬನು ದೊರೆಯುವನು. ಇವರು ಭಿನ್ನ ಭಿನ್ನವ್ಯಕ್ತಿಗಳೇ ಹೇಗೆಂಬುದು ಹೇಳಲಾಗದಾಗಿದೆ.

§ History of classical Literature P.
* ಯುಧಿಷ್ಠಿರವಿಜಯ ಸ. ೧—೮.
† Kavyamala Series Book. No 9 P.

ಇವರ ಮಾದರಿಯ ಶ್ಲೋಕಗಳು: —

ಅಥ ರಭಸೇನಾನೀಕಂ ವ್ಯೂಹ್ಯಸರಿತ್ಸೂನುನಾ ಸಸೇನಾನೀಕಂ
ಕುವನಃ ಶೌರ್ಯಾಭರಣಾಸ್ತಸ್ಯೌರ್ಯುದ್ಧಾಯ ಶಕ್ರಶೌರ್ಯಾಭರಣಃ
ತಾನಭಿದುದ್ರಾವ ತತಃಸರೋಷವಾರ್ಷತಚಮೂಭ್ಯಮುದ್ರಾವತತ್ತಃ
ಸಕಟುಕಲಾನೀ ಕುಂತೀಪುತ್ರವಲೌಘಃ ಶಶೀಕಲಾವೀಕುಂತೀ

ಮಂಖ್ವಕ.

ಇವನನ್ನು ಮಂಖುಕನೆಂದೂ, ಕರ್ಣಿಕಾರಮಂಖ, ಪಂಡಿತಮಂಖನೆಂದೂ§ ಕರೆಯುವುದುಂಟು. ಇವನು ಕಾಶ್ಮೀರದವನು. ವಿಶ್ವವರ್ತನ ಮಗನು ಎಂಬುದು "ಶ್ರೀರಾಜಾನಕ ವಿಶ್ವವರ್ತಸೂನೋರ್ಮಹಾಕವಿರಾಜ ರಾಜಾನಕ ಶ್ರಮಂಖಸ್ಯ ಕೃತೌ ಶ್ರೀಕಂಠಚರಿತೇ ಮಹಾಕಾವ್ಯೇ" ಎಂದು ಪ್ರತಿಸರ್ಗಾಂತ್ಯದಲ್ಲಿ ಹೇಳಿಕೊಂಡಿರುವುದರಿಂದ ತಿಳಿಯಬಹುದಾಗಿದೆ.

ಕಾಲ:—ಇವನು ಕ್ರಿ. ಶ. ೧೧೫೯-೧೧೫೦ ರವರೆಗೆ ಆಳಿದ ಸುಶ್ಮಲನ ಮಗ ಜಯಸಿಂಹನ ಸಮಕಾಲೀನನು.

ಗ್ರಂಥಗಳು:—ಇವನು ಶ್ರೀಕಂಠಚರಿತವೆಂಬ ಮಹಾಕಾವ್ಯವನ್ನು ಬರೆದಿರುವನು. ಇದರಲ್ಲಿ ೨೫ ಸರ್ಗಗಳಿರುವುವು. ಈಶ್ವರನು ತ್ರಿಪುರಾಸುರನನ್ನು ಗೆದ್ದು ತ್ರಿಪುರವನ್ನು ಭಸ್ಮಮಾಡಿ ಹೇಗೆ ಲೋಕವನ್ನುದ್ಧರಿಸಿದನೆಂಬುದು ಇದರಲ್ಲಿ ಪ್ರತಿಪಾದಿಸಲ್ಪಟ್ಟಿರುವುದು. ಶೈಲಿಯು ಕಟುತರ. ಅನೇಕ ಶ್ಲೋಕಗಳು ಶ್ಲೇಷಯುಕ್ತವಾಗಿವೆ. ಇವನು ಈ ಕಾವ್ಯವಲ್ಲದೆ "ಮಂಖ್ವಕೋಶ" ಎಂಬದನ್ನು ಬರೆದಿರುವುದಾಗಿ ತಿಳಿಯಬರುತ್ತದೆ. ಗ್ರಂಥವು ಉಪಲಬ್ಧವಿಲ್ಲ.

ತನ್ನ ಕಾಲದಲ್ಲಿ ಮುಖ್ಯರಾದ ರವ್ಯದೇವ, ಲೋಷ್ಟದೇವ, ಪ್ರಭಾಕರ, ಶ್ರೀಗರ್ಭ, ಶ್ರೀಕಂಠ, ಶ್ರೀದೇವಧರ, ಗರ್ಗ, ತ್ರೈಲೋಕ್ಯ, ದಾಮೋದರ, ಭಟ್ಟಪ್ರಭಾಕರ, ಜಿಂದುಕ, ಅಲಕದತ್ತ, ಶ್ರೀವತ್ಸ, ಶ್ರಯಾನಂದ, ಪದ್ಮರಾಜ, ಗುನ್ನ, ಜನಕರಾಜ, ತೇಜಕಂಠನೇ ಮೊದಲಾದ ಕವಿಪುಂಗವರ ಹೆಸರುಗಳನ್ನು ತನ್ನ ಕಾವ್ಯದ ಕೊನೆಯಸರ್ಗದಲ್ಲಿ ಹೇಳಿಕೊಂಡಿರುವನು. ಇವನ ಕಾವ್ಯಕ್ಕೆ ಜೋನರಾಜನೆಂಬವನು ವ್ಯಾಖ್ಯಾನವನ್ನು ಬರೆದಿರುವನು. ಮಂಖ್ವಕನಿಗೆ ಲಂಕಕನೆಂಬ ಅಣ್ಣನೊಬ್ಬನಿದ್ದುದಾಗಿಯೂ ಅವನಿಗೆ ಅಲಂಕಾರನೆಂಬಾಪರನಾಮವಿದ್ದುದಾಗಿಯೂ ತಿಳಿಯಬರು

§ ಕವಿತಾಕೌಮುದೀ ಪುಟ ೨೨೫

ತ್ತದೆ. ರಾಜತರಂಗಿಣಿಯಲ್ಲಿ ಅಲಂಕಾರನೆಂಬ ವ್ಯವಹಾರವಿರುವದು ಹೊರ್ತು ಲಂಕ ನೆಂದಿರುವುದಿಲ್ಲ. ಶ್ರೀಕಂಠಚರಿತದಲ್ಲಿ ಅಲಂಕಾರನೆಂಬ ಹೆಸರಲ್ಲದೆ ಲಂಕಕ ನೆಂದೂ ಇರುವುದು. ಮಂಖ್ಯಕನಿಗೆ ಶೃಂಗಾರನೆಂಬ ಮತ್ತೊಬ್ಬ ಅಣ್ಣನಿದ್ದುದಾಗಿ ಸುಶೀಲಕುಮಾರಡೇ (S. K. De.) ಯವರು ಹೇಳಿರುವರು.

ಇವನ ಕೆಲವು ಶ್ಲೋಕಗಳನ್ನು ಮಾದರಿಗಾಗಿ ಹೇಳಿದೆ :—

ವಿತೀರ್ಣಶಕ್ತೇರಿವ ಹೃತ್ಕವೇರ್ದಸರಸ್ವತೀನಾಹಸರಾಜಹಂಸೈಃ
ಯೇ ಕ್ಷೀರನೀರಪ್ರವಿಭಾಗದಕ್ಷಾ ವಿವೇಕಿನಸ್ತೇ ಕವಯೋಜಯಂತಿ॥
ಶ್ರೀಕಂಠಚರಿತ ೨—೧

ಕೃತೋಪದೇಶದಂತೆ ಹಾಲನ್ನೂ ನೀರನ್ನೂ ಬೇರ್ಪಡಿಸಬಲ್ಲುವಾದ ಹೃತ್ಪದ್ಮ ಸ್ಥಳಾದಶಾರದೆಯ ವಾಹನವಾದ ರಾಜಹಂಸದಂತೆ, ಕಾವ್ಯದಲ್ಲಿಯೂ ಹಾಲು ನೀರಂ ತಿರುವ ಗುಣದೋಷಗಳನ್ನು ಸ್ವಾಭಾವಿಕವಾಗಿ ವಿಭಜನೆಮಾಡಬಲ್ಲ ಕವಿ ವಿವೇಕಿ ಗಳು ಮಾತ್ರವೇ ಜಯಶೀಲರಾಗುವರು.

ಅಜ್ಞಾತಪಾಂಡಿತ್ಯರಹಸ್ಯಮುದ್ರಾ ಯೇ ಕಾವ್ಯಮಾರ್ಗೇ ದಧತೇಽಭಿಮಾನಂ
ತೇಗಾರುಡೀಮಾಸನಧೀತ್ಯ ಮಂತ್ರಾನ್ಹಾಲಾಹಲಾಸ್ವಾದನ ಮಾರಭಂತೇ ೨—೫

ಪಾಂಡಿತ್ಯಹೀನನಾದವನು (ತಾನು ಕವಿಯೆನಿಸಿಕೊಳ್ಳಬೇಕೆಂಬಾಸೆಯಿಂದ) ಕಾವ್ಯರಚನೆಯಲ್ಲಿ ಅಭಿಮಾನಗೊಂಡು ಕವಿತೆಯನ್ನು ಮಾಡಲೆತ್ನಿಸುವುದಾದರೆ ಅಂತಹ ಕವಿತೆಯು ಗಾರುಡ ಮಂತ್ರವನ್ನರಿಯದವನು ಹಾಲಾಹಲ (ವಿಷ) ವನ್ನು ಪಾನಮಾಡಲೆಳಸಿದಂತಾಗುವುದು. ಎಂದರೆ ಪಾಂಡಿತ್ಯವಿಲ್ಲದೆ ಕವಿತೆಯನ್ನು ಮಾಡುವವನು ಕಾವ್ಯವ್ಯಸನಿಯಾಗುವನು. ಗಾರುಡ ಮಂತ್ರಬಲವಿಲ್ಲದೆ ವಿಷ ವನ್ನು ಕುಡಿಯುವವನು ಮೃತನಾಗುವನು.

ವಿನಾ ನ ಸಾಹಿತ್ಯವಿದಾ ಪರತ್ರ ಗುಣಃ ಕಥಂ ಚಿತ್ಪ್ರಥತೇ ಕವೀನಾಂ
ಆಲಂಬತೇ ತತ್ಕಥಮಂಭಸೀವ ವಿಸ್ತಾರಮನ್ಯತ್ರ ನ ತೈಲಬಿಂದುಃ ೨ ೧೨

ನೀರಿನಲ್ಲಿ ಬಿಟ್ಟ ತೈಲಬಿಂದುವು ನೀರಿನಲ್ಲಿ ಮಾತ್ರವೇ ಪ್ರಸರಿಸುವುದರ ಹೊರ್ತು ಇತರ ಕಡೆಗೆ ಹೇಗೆ ಪ್ರಸರಿಸಲರಿಯದೋ ಹಾಗೆ ಸಾಹಿತ್ಯಜ್ಞಾನವಿಲ್ಲದ ತಾನು ಇತರ ಸಾಹಿತಿಗಳ ಕಾವ್ಯಗುಣಗಳನ್ನು ತಿಳಿಯಲಾರದೇ ಹೋಗುವನು.

ಅಥೋಽಸ್ತಿ ಚೇನ್ನ ಪದಶುದ್ಧಿರಥಾಸ್ತಿ ಸಾಪಿ
ನೋ ರೀತಿರಸ್ತಿ ಯದಿ ಸಾ ಘಟನಾ ಕುತಸ್ತಾ
ಸಾಪ್ಯಸ್ತಿ ಚೇನ್ನ ನವವಕ್ರಗತಿಸ್ತದೇತ
ದ್ವ್ಯರ್ಥಂ ವಿನಾ ರಸಮಹೋ ಗಹನಂ ಕವಿತ್ವಂ ॥ ೨—೩೦

ಅರ್ಥವೇನೋ ಆಗುತ್ತದೆ. ಆದರೆ ಪದಶುದ್ಧಿಯು ಇರುವುದಿಲ್ಲ. ಪದ ಶುದ್ಧಿಯು ಇರುವುದಾದರೆ ರೀತಿಯಿರುವುದಿಲ್ಲ. ಒಂದುವೇಳೆ ರೀತಿಯೂ ಇರುವು ದಾಗಿದ್ದರೆ ಶಬ್ದವಿನ್ಯಾಸನೈಪುಣ್ಯವು ಇರುವುದಿಲ್ಲ. ಒಂದುವೇಳೆ ಶಬ್ದವಿನ್ಯಾಸ ನೈಪುಣ್ಯವೂ ಇರುವುದಾಗಿ, ಮೇಲೆಹೇಳಿದ ಗುಣಗಳೆಲ್ಲವೂ ಇರುವುವಾಗಿ ಭಾವಿಸಿ ದರೆ ಮುಖ್ಯವಾದ ಕಲ್ಪನಾಚಾತುರ್ಯವೇ ಇರದು. ಹೇಗೇ ಆಗಲಿ! ಸರಸ ರಸಹೀನ ವಾದ ಕಠಿನ ಕವಿತಾಮಾರ್ಗವು ವ್ಯರ್ಥವೇಸರಿ,

ವಿಯೋಗಿನೀಪ್ರಲಾಪದ ಒಂದೆರಡು ಶ್ಲೋಕಗಳು:—

ಕಾಲಕೂಟಮಿಹ ನಿಂದತಿ ಲೋಕೇ
ಯೇನಶಂಭುರಜರಾಮರಏವ
ಅಂತಕಂವಿರಹಿಣೀಷುಸುಧಾಂಶುಂ
ಸ್ತೌತ್ಯಹೋ ವಿತನುತೇವಿಮಲೋಽಪಿ ವಿವೇಕಃ ॥

ಅಹಹ! ಲೋಕದ ವಿವೇಕವನ್ನೇನೆಂದು ಹೇಳಲಿ! ಹಾಲಾಹಲ (ವಿಷ)ವನ್ನು ಕುಡಿದ ಶಿವನು ಅಜರಾಮರನಾಗಿರುವನೆಂಬುದನ್ನು ತಿಳಿದೂ ತಿಳಿದೂ ಶ್ಲಾಘಿಸುವು ದಕ್ಕೆ ಬದಲಾಗಿ ವಿಷವನ್ನು ನಿಂದಿಸುವರು. ವಿರಹಿಣಿಗಳಿಗೆ ಅಂತಕನಂತಿರುವ ಈ ಚಂದ್ರಮನನ್ನು (ದೂಷಿಸುವುದಕ್ಕೆ ಒದಲು) ಏಮಕಿರಣನೆಂದೂ ನಿರ್ಮ ಲನೆಂದೂ ಸಾರಿಸಾರಿಹೊಗಳುವರಲ್ಲ. ಇದೆಂತಹ ವಿವೇಕ!

ಅಂಬುಧೇರುಪಗಮಾದ್ವಿಘಟಂಗ್ಯಾ
ಸೂನವೇ ಪ್ರತಿವಿಭಾಸ್ಮನಪಿಂಡಃ
ಯತ್ಕಿಲಾಸ್ಯ ಘಟಕೇ ನಮೊ ತೃಪ್ತಿಃ
ಖಂಡಿತಾಜನದೃಗಂಬುಸರಿದ್ಭಿಃ ॥

ಖಂಡಿತಾಸ್ತ್ರೀಯರ ಕಣ್ಣುಗಳಿಂದ ಹರಿದುಬರುವ ಅಶ್ರುಧಾರಾನದಿಗಳಿಂದ ಶಾಂತವಾಗದೆ ನಿನ್ನ ಸಮುದ್ರದಲ್ಲಿ ಅಡಗಿಕೊಂಡು ಬಡಬಾನಲವೆನಿಸಿಕೊ ಳ್ಳುವ ಅಗ್ನಿಪಿಂಡವು ಈ ಚಂದ್ರಮನರೂಪನ್ನು ನಿಶ್ಚಯವಾಗಿ ತಾಳಬಂದಿರುವುದು.

ಗೋವರ್ಧನಾಚಾರ್ಯ.

ಇವನು ವಂಗೀಯ ಬ್ರಾಹ್ಮಣನು. ತಂದೆಯ ಹೆಸರು ನೀಲಾಂಬರಸೋಮ ಯಾಜಿ. ಬಲಭದ್ರನೆಂಬವನು ಇವನಿಗೆ ಸೋದರನು. ಉದಯನೆಂಬವನು ಇವನ ಶಿಷ್ಯನು. ಇವನೂ' ಜಯದೇವ, ಉಮಾಪತಿ, ಶರಣ, ಮೊದಲಾದವರು ಲಕ್ಷ್ಮಣ ದೇವನ ಆಸ್ಥಾನಪಂಡಿತರೆಂದು.—

ಗೋವರ್ಧನಶ್ಚ ಶರಣೋ ಜಯದೇವ ಉಮಾಪತಿಃ
ಕವಿರಾಜಶ್ಚ ರತ್ನಾನಿ ಸಮಿತೌಲಕ್ಷ್ಮಣಸ್ಯ ಚ ॥

ಎಂದು ಸನಾತನ ಗೋಸ್ವಾಮಿಯು ಹೇಳಿರುವುದರಿಂದಲೂ, ಮತ್ತು ಶಾಸನಾದಿಗಳಿಂದಲೂ ಸ್ಪಷ್ಟಪಡುವುದು.

ಕಾಲ:---ವಂಗರಾಜನಾದ ಲಕ್ಷ್ಮಣಸೇನನು ಕ್ರಿ. ಶ. ಹನ್ನೆರಡನೆಯ ಶತಮಾನದವನಾದುದರಿಂದ ಇವನ ಆಸ್ಥಾನಪಂಡಿತನಾದಗೋವರ್ಧನನೂ ಅದೇಕಾಲದವನು.

ಗ್ರಂಥ:---ಇವನು 'ಆರ್ಯಾಸಪ್ತಶತಿ' ಎಂಬ ಗ್ರಂಥವನ್ನು ಬರೆದಿರುವನು. ಇದರಲ್ಲಿ ಹೆಸರಿಗೆ ತಕ್ಕಂತೆ ಏಳುನೂರು ಆರ್ಯಾವೃತ್ತಶ್ಲೋಕಗಳಿರುವುವು. ಇವನು ಶೃಂಗಾರರಸವನ್ನು ಪ್ರಧಾನವಾಗಿ ತೆಗೆದುಕೊಂಡು ಕೇವಲ ಪರಿಶುದ್ಧರೀತಿಯಲ್ಲಿ ವರ್ಣಿಸಿ ಹೇಳಿರುವನಾದುದರಿಂದಲೇ ಜಯದೇವನು ಇವನನ್ನು ತನ್ನ ಗೀತಗೋವಿಂದಕಾವ್ಯದಲ್ಲಿ "ಶೃಂಗಾರೋತ್ತರಸತ್ಪದ್ಯರಚನೈರಾಚಾರ್ಯ ಗೋವರ್ಧನಃ" ಎಂದು ಕೊಂಡಾಡಿರುವನು. ಇದರಲ್ಲಿ ವಿವಿಧನಾಯಿಕಾನಾಯಕ ಲಕ್ಷಣಗಳು ಹೇಳಲ್ಪಟ್ಟು ಪರಸ್ಪರಭಾಷಣ ರೂಪವಾಗಿರುವುವು. ಕವಿತ್ವವು ಸರಳವಾದುದಾಗಿ ಸರಸೋಪಮಾಲಂಕೃತವಾಗಿರುವುದು. ಆರ್ಯಾಸಪ್ತಶತಿಗೆ ಅನಂತಪಂಡಿತಕೃತ "ವ್ಯಂಗ್ಯಾರ್ಥದೀಪನ" ಎಂಬ ಟೀಕೆ ಇರುವುದು. ಮಾದರಿಯ ಎರಡು ಶ್ಲೋಕಗಳು:---

ನಾಯಿಕಾದೃಷ್ಟಿವಿಶೇಷ ಸೌಂದರ್ಯವನ್ನು ಸೂಚಿಸುವುದಾಗಿತೋರುವ ಜಿನಸಿದ್ಧಾಂತ ಪರವಾದಶ್ಲೋಕವು ಹೀಗಿರುವುದು:—

ಅತಿಪೂಜಿತತಾರೇಯಂದೃಷ್ಟಿಶ್ಚುತಿಲಂಘನಕ್ಷಮಾಸುತನು
ಜಿನಸಿದ್ಧಾಂತಸ್ಥಿತಿದಿವಸ ವಾಸನಾಕಂನಮೋಹಯತಿ ॥

ಎಲೆ! ರಮಣಿ ಶ್ರುತಿಲಂಘನ ಸಮರ್ಥವಾದ ನಿನ್ನ ದೃಷ್ಟಿಯು ಜೈನಸಿದ್ಧಾಂತದ ಹಾಗೆ ಯಾರನ್ನೂ ಮೋಹಗೊಳಿಸದು.

ತನ್ನ ಸಖಿಯ ನಾಯಕನು ಅನ್ಯನಾಯಿಕಾನುರಕ್ತನಾಗಿರುವುದನ್ನು ತಿಳಿದು ಧರ್ಮಬೋಧನದಮೂಲಕ ವಿಗ್ರಹಾರಾಧನವಿಧಿಯನ್ನು ಬೋಧಿಸುವ ಸಖೀವಚನವು ಹೀಗಿರುವುದು.

ಅನ್ಯಾಸ್ವಪಿಗೃಹೀಣೇತಿಧ್ಯಾಯನ್ನಖಿಲಷಿತಮಾಪ್ನೋತಿ
ಪಶ್ಯೇಪಾಷಾಣಮಯೀಃ ಪ್ರತಿಮಾಇವದೇವತಾಶ್ಚೇನ ॥

ಕಲ್ಲುವಿಗ್ರಹವನ್ನು ಮೂಢತನದಿಂದ ಇಷ್ಟಾರ್ಥವನ್ನು ಕೊಡುವ ದೇವತೆಯೆಂದು ಭಾವಿಸುವಂತೆ ಅನ್ಯಸ್ತ್ರೀಯಲ್ಲಿ ವಿವೇಕಹೀನತೆಯಿಂದ ಸ್ವಸ್ತ್ರೀಯೆಂದು ರಮಿಸಿ ಅಭೀಷ್ಟವನ್ನು ಹೊಂದುವೆನೆಂಬುದು ಎಂತಹ ಹೆಡ್ಡತನ!

ಹೀಗೆ ಈ ಕಾವ್ಯವು ಲೋಕಧರ್ಮವನ್ನು ಹೇಳುವುದಾಗಿ ಸಕಲ ಲೋಕಾದರಣೀಯವಾಗಿರುವುದು.

ಶರಣ (ದೇವ)

ಇವನು ಅಲ್ಲಲ್ಲಿ ಬುದ್ಧಕಾವ್ಯಗಳವಿಚಾರವಾಗಿ ಹೇಳಿರುವುದರಿಂದಲೂ ಮಂಗಳಾಚರಣವು ಬುದ್ಧಪರವಾಗಿರುವುದರಿಂದಲೂ ಇವನು ಬೌದ್ಧನಾಗಿರಬೇಕೆಂದು ಊಹಿಸಲವಕಾಶವಿದೆ. ಇದು ಹೊರ್ತು ಇವನ ಮಾತಾಪಿತೃಗಳಾರೆಂಬುದಾಗಲಿ ಇವನು ಎಲ್ಲಿಯವನೆಂಬುದಾಗಲಿತಿಳಿಯದು.

ಕಾಲ:—ಇವನು ವಂಗರಾಜನಾದ ಲಕ್ಷ್ಮಣಸೇನನ ಆಸ್ಥಾನಪಂಡಿತರಲ್ಲಿ ಒಬ್ಬನೆಂದು ''ಗೋವರ್ಧನಶ್ಚರಣೋ ಜಯದೇವ ಉಮಾಪತಿಃ'' ಎಂದು ಹೇಳಿರುವುದರಿಂದ ಇವನು ಕ್ರಿ. ಶ. ೧೨ನೆಯ ಶತವಾನದವನು.

ಗ್ರಂಥ:—ಇವನು ''ದುರ್ಘಟವೃತ್ತಿ'' ಎಂಬ ವ್ಯಾಕರಣವನ್ನು ಬರೆದಿರುವನು.

ಸತ್ಸಾಶರಣದೇವೇನಸರ್ವಜ್ಞಂಜ್ಞಾನಹೇತವೆ
ಬೃಹದ್ಬೃಟ್ಪ್ರಜನಾಂಭೋಜಕೇಶವೀಕಾಸಭಾಸ್ಕತೇ ॥ ೧ ॥
ಶಾಕೆ ಮುಹೀಪತಿವತ್ಸರಮಾನೇ ಏಕನಭೋನವಪಂಚವಿತಾನೇ
'ದುರ್ಘಟವೃತ್ತಿ' ರಕಾರಿಮುದೇವಃ ಕಂರವಿಭೂಷಣಹಾರಲತೇವ ॥ ೨ ॥
ವಾಕ್ಯಾಚ್ಚರಣದೇವಸ್ಯಭಾತ್ಯುವಗ್ರಹವೀಡಯಾ
ಶ್ರೀಸರ್ವರಕ್ಷಿತಸೈವಾಸಂಕ್ಷಿಪ್ಯಪ್ರತಿಸಂಸ್ಕೃತಾ ॥ ೩ ॥

ಎಂಬ ಶ್ಲೋಕಗಳಿಂದ ದುರ್ಘಟವೃತ್ತಿಯು ಶಾಲಿವಾಹನಶಕ ೧೧೯೫ ಅಥವಾ ಕ್ರಿ. ಶ. ೧೨೭೩ರಲ್ಲಿ ಶರಣದೇವನಿಂದ ರಚಿತವಾದುದೆಂದೂ, ಸರ್ವರಕ್ಷಿತನೆಂಬವನಿಂದ ಸಂಕ್ಷೇಪಿಸಿ ಸಂಶೋಧಿಸಿ ಬರೆಯಲ್ಪಟ್ಟತೆಂದೂ ತಿಳಿಯಬರುತ್ತದೆ. ಈ ಕಾರಣದಿಂದಲೇ ಇವನು **ಸರ್ವರಕ್ಷಿತನ** ವಿಚಾರದಲ್ಲಿ ಆಚಾರ್ಯಾಭಿಮಾನವನ್ನು ವಹಿಸಿ ಶ್ರೀಕಾರವನ್ನು ಜೋಡಿಸಿದಂತೆ ಭಾಸವಾಗುತ್ತದೆ. ಇವನ ಗ್ರಂಥದ ವಿಚಾರವು ಶಬ್ದಕೌಸ್ತುಭಮೊದಲಾದ ವ್ಯಾಕರಣಗಳಲ್ಲಿ ಹೇರಳವಾಗಿ ದೊರೆಯುವುದು 'ಸದುಕ್ತಿಕರ್ಣಾಮೃತ'ದಲ್ಲಿ ಶರಣ, ಶರಣದೇವ, ಮತ್ತು ಚಿರಂತನಶರಣ ಈ ಹೆಸರುಗಳಲ್ಲಿ ಉದ್ಧೃತವಾಗಿರುವ ಶ್ಲೋಕಗಳು ಕಂಡುಬರುವುವು,

ಡಾ. ಆಫ್ರಿಷಿಟರವರ ಪುಸ್ತಕ ಪಟ್ಟಿಯಲ್ಲಿ (Catalogue Catalogorum) ಮಂತ್ರ ರಾಮಾಯಣವೆಂಬ ನಾಟಿಕೆಯನ್ನು ಶರಣ ಕವಿಯು ಬರೆದಿರುವುದಾಗಿಹೇಳಲ್ಪಟ್ಟಿದೆ ಮೆ|| S. C. ಚಕ್ರವರ್ತಿಯವರು ದುರ್ಘಟವೃತ್ತಿಕಾರನಾದ ಶರಣನನ್ನು ಶರಣದೇವನೆಂದು ಹೇಳಿರುವರು ಶರಣನೂ ಶರಣದೇವನೂ ಇಬ್ಬರೂ ಏಕವ್ಯಕ್ತಿಯಾಗುವದಾದರೆ ಚಿರಂತನ ಶರಣನಾರೆಂಬ ವಿಚಾರವು ಬರುವುದು. ಈಗ ನಮಗೆ ದೊರೆತಿರುವ ಅಲ್ಪಾಧಾರಗಳಿಂದ ಖಂಡಿತಮಾಡಿ ಹೇಳಲಾಗುವುದಿಲ್ಲ. ಪಾಣಿನಿಯಸೂತ್ರವೃತ್ತಿಗಳಲ್ಲಿ ಕಂಡುಬರುವ ದುರ್ಘಟಲಕ್ಷ್ಯಾದಿಗಳನ್ನು 'ದುರ್ಘಟವೃತ್ತಿ'ಯಲ್ಲಿ ವಿಸ್ತರಿಸಿ ಹೇಳಿರುವುದರಿಂದ ಇದನ್ನು ಈ ಹೆಸರಿನಿಂದಲೆ ಸಂಶೋಧಿಸಿರಬಹುದಾಗಿ ತೋರುತ್ತದೆ. ಇದರಲ್ಲಿ ವ್ಯಾಕರಣಮಾತ್ರವಲ್ಲದೆ ಇತರ ವಿಚಾರಗಳೂ ಅಲ್ಲಲ್ಲಿ ವರ್ಣಿತವಾಗಿರುವುವು. ಆದರೂ ಇದರ ವಿಚಾರಗಳು ಸರಸ ಸಂಭಾಷಣೆಗಳಿಂದ ದೂರವಾಗಿ ವಿಷಯಕಾಠಿಣ್ಯದಿಂದಕೂಡಿ 'ದುರ್ಘಟವೃತ್ತಿ' ಎಂಬದನ್ನು ಸಾರ್ಥಕಗೊಳಿಸಿಕೊಂಡಿರುವುದು. ಇದರಲ್ಲಿ ೮ ಅಧ್ಯಾಯಗಳಿದ್ದು ಪ್ರತಿಯೊಂದು ಅಧ್ಯಾಯವೂ ನಾಲ್ಕು ನಾಲ್ಕು ಭಾಗಗಳಾಗಿ ವಿಂಗಡಿಸಲ್ಪಟ್ಟು ಪ್ರಕರಣಗಳಿಂದು ಕರೆಯಲ್ಪಟ್ಟಿರುವುವು.

ಉ ಮಾ ಪ ತಿ ಧ ರ

ಇವನು ಎಲ್ಲಿಯವನೆಂಬದಾಗಲಿ ಮಾತಾಪಿತೃಗಳಾರೆಂಬುದಾಗಲಿ ತಿಳಿಯದು. ಇವನು ಲಕ್ಷ್ಮಣಸೇನನ ಆಸ್ಥಾನ ಪಂಡಿತನು. ಜಯದೇವನ ಸಮಕಾಲೀನನು. ಕ್ರಿ. ಶ. ೧೨ನೆಯ ಶತಮಾನದವನು. ಇವನು 'ಪಾರಿಜಾತಹರಣ'ಎಂಬ ನಾಟಕವನ್ನು ಬರೆದಿರುವನು. ಇದಲ್ಲದೆ ಲಕ್ಷ್ಮಣಸೇನನ ಸಾಮಂತನಾಗಿರಬಹುದಾದ ಚಾಣಕ್ಯಚಂದ್ರನ ಆಶ್ರಯದಲ್ಲಿ ಚಂದ್ರಚೂಡವೆಂಬ ಗ್ರಂಥವನ್ನು ಬರೆದುದಾಗಿ ತಿಳಿಯಬರುತ್ತದೆ.* ಈ ವಿಚಾರವು ಜಯಸೇನನ ದಿಯೋಪರ (Deopare) ಶಾಸನ § ದಿಂದಲೂ ವ್ಯಕ್ತವಾಗುತ್ತದೆ. ಉಮಾಪತಿಧರನದೆಂದು ಹೇಳುವ ಅನೇಕ ಶ್ಲೋಕಗಳು 'ಸದುಕ್ತಿಕರ್ಣಾಮೃತ'ದಲ್ಲಿ ದೊರೆಯುವುವು. ಹರಿಹರರಾಜದೇವನಾಶ್ರಯದಲ್ಲಿ ಉಮಾಪತಿ ಉಪಾಧ್ಯಾಯನೆಂಬವನು 'ಪಾರಿಜಾತಹರಣ'ವೆಂಬ ಗ್ರಂಥವನ್ನು ಬರೆದುದಾಗಿ ಹೇಳಲ್ಪಟ್ಟಿದೆ. ಪಂಡಿತರಾಜೇಂದ್ರ ಲಾಲಮಿತ್ರರವರು ಉಮಾಪತಿಧರನೂ, ಉಮಾಪತಿಉಪಾಧ್ಯಾಯನೂ ಒಂದೇವ್ಯಕ್ತಿಯೆಂದುಹೇಳಿ ಇವನು

---

* Introduction to ಭಾಷಾವೃತ್ತಿ ಪುಟ ೭

\$ Pischal of. Cit P. 7. Footnote

§ Epigraphica Indica Vol T. P. 305 FN

ಲಕ್ಷ್ಮಣಸೇನನ ಆಶ್ರಯದಲ್ಲಿದ್ದುದಾಗಿ ಹೇಳಿರುವರು. ಆದರೆ ಹೇಗೆಂಬುದನ್ನು ಸಮರ್ಥಿಸಿರುವುದಿಲ್ಲ. ಗ್ರಂಥಾಂತ್ಯದಲ್ಲಿ 'ಇತಿಮಹಾಮಹೋಪಾಧ್ಯಾಯ ಕವಿಪಂಡಿತ ಮುಖ್ಯ ಶ್ರೀಮದುಮಾಪತ್ಯುಪಾಧ್ಯಾಯ ವಿರಚಿತಂ ಪಾರಿಜಾತಾಪಹರಣ ನಾಟಕಂ' ಎಂದಿದೆ. ಸನಾತನಗೋಸ್ವಾಮಿಯ ಹೇಳಿಕೆಯಾದ "ಗೋವರ್ಧನಶ್ಚಶರಣೋಜಯದೇವ ಉಮಾಪತಿಃ" ಎಂಬದರಲ್ಲಿ ಉಮಾಪತಿ ಎಂದಿರುವುದೇ ಹೊರತು ಉಮಾಪತಿಧರನೆಂದಾಗಲಿ ಉಮಾಪತಿಉಪಾಧ್ಯಾಯನೆಂದಾಗಲಿ ಹೇಳಿರುವುದಿಲ್ಲ.

ನಾರದನು ಒಂದು ಪಾರಿಜಾತದ ಹೂವನ್ನು ತಂದು ಕೃಷ್ಣನಿಗೆಕೊಡಲು ಅವನು ಅದನ್ನು ರುಕ್ಮಿಣಿಗೆಕೊಡುವನು. ಇದನ್ನು ಕಂಡು ಸತ್ಯಭಾಮೆಯು ಕೋಪಗೊಳ್ಳಲು ಕೃಷ್ಣನು ಅವಳನ್ನು ಸಮಾಧಾನಪಡಿಸಿ ಮತ್ತಷ್ಟು ಹೂವುಗಳನ್ನು ಕಳುಹಿಸಿಕೊಡಬೇಕೆಂದು ಇಂದ್ರನಿಗೆ ಹೇಳಿಕಳುಹಿಸುವನು. ಇಂದ್ರನು ತಿರಸ್ಕರಿಸುವನು. ಕೊನೆಗೆ ಕೃಷ್ಣನಿಗೂ ಇಂದ್ರನಿಗೂ ಕದನವಾಗಿ ಇಂದ್ರನು ಪರಾಜಿತನಾಗುವನು. ಹೂವು ತರಿಸಲ್ಪಡುವುದು. ಸತ್ಯಭಾಮೆಯು ಸಂತೋಷಪಡುವಳು. ಇದರಲ್ಲಿ ವಿಷಯಕ್ಕೆ ತಕ್ಕಂತೆ ಪಾತ್ರಗಳು ಬಹುಜಾಣ್ಮೆಯಿಂದ ಜೋಡಿಸಲ್ಪಟ್ಟಿರುವುವು. ಕೃಷ್ಣನಿಗೆ ಸಹಾಯಕನಾಗಿ ಅರ್ಜುನನು ಮುಖ್ಯಭಾಗವನ್ನುವಹಿಸಿರುವನು. ವರ್ಣನೆಗಳು ಚೆಲುವಾಗಿದ್ದು ಕೃಷ್ಣ ಮತ್ತು ಸತ್ಯಭಾಮೆಯರ ಪ್ರಣಯಕಲಹವು ಬಹು ಸೊಗಸಾಗಿ ಹೇಳಲ್ಪಟ್ಟಿರುವುದು.



ಶ್ರೀವರಪಂಡಿತ

ಇವನು ಕಾಶ್ಮೀರದವನು. ಬ್ರಾಹ್ಮಣನು ಕ್ರಿ. ಶ. ೧೨ನೆಯ ಶತಮಾನದಲ್ಲಿದ್ದ ಜೋನರಾಜನ ಶಿಷ್ಯನು. ಜೋನರಾಜನು ಯಾವಾಗ ಗತಾಯುವಾದನೆಂಬುದಕ್ಕೆ ತನ್ನ ಗ್ರಂಥದಮೊದಲಿನಲ್ಲಿ:—

ಶ್ರೀಜೋನರಾಜವಿಬುಧಃ ಕುರ್ವಂ-ರಾಜತರಂಗಿಣೀಂ
ಸಾಯಕಾಗ್ನಿಮಿತೇವರ್ಷೇ ಶಿವಸಾಯುಜ್ಯಮಾಸದತ್ ॥ ೬
ಶಿಷ್ಯೋಸ್ಯ ಜೋನರಾಜಸ್ಯ ಸೋಹಂ **ಶ್ರೀವರಪಂಡಿತಃ**
ರಾಜಾವಳೀ ಗ್ರಂಥಶೇಷಾಪೂರಣಂಕರ್ತುಮುದ್ಯತಃ ॥ ೭
ತಥಾಪಿಸಕಲಂಚಿತ್ರಸಕಾಂತೇತ್ರಿಜಗದ್ಯಥಾ
ಶ್ರೀಜ್ಯೋಲ್ಲಾಬದೇನಸ್ಯನ್ಯಸ್ಯಾಮಿಗುಣವರ್ಣನಂ ॥ ೧೫

ಎಂದು ಹೇಳಿಕೊಂಡಿರುವನು. ಜೈನಲಾಬರ್ದೀರಾಜನ ಮೊದಲುಗೊಂಡು ೧ ಪತಿಹಷಾಹ ರಾಜನವರೆಗೂ ಆಳಿದರಾಜರ ಚರಿತ್ರೆಯನ್ನು ಬರೆದು ಅದನ್ನು

ಮೂರನೆಯ ರಾಜತರಂಗಿಣೀ (Rajatharangini Part III) ಎಂದು ಕರೆದಿರುವನು. ಇದನ್ನು ಜೋನರಾಜ ಪಂಡಿತನ ಅನಂತರ ಬರೆದಿರಬೇಕಾಗಿ ಬೋಧೆಯಾಗುತ್ತದೆ. ಇದರಲ್ಲಿ ನಾಲ್ಕುತರಂಗಗಳಿರುವುವು. ಕೊನೆಯಲ್ಲಿ 'ಇತಿ ಶ್ರೀಜೈನ ರಾಜತರಂಗಿಣ್ಯಾಂಪಂಡಿತ ಶ್ರೀವರವಿರಚಿತಾಯಾಂಘತಿಹಷಾಹರಾಜ್ಯ ಪ್ರಾಪ್ತಿ ರ್ನಾಮಚತುರ್ಥಸ್ತರಂಗಃ ಸಮಾಸ್ತೇಯಂ ಶ್ರೀವರರಾಜತರಂಗಿಣೀ' ಎಂದಿದೆ.

ಜ ಯ ದೇ ವ (೧)

ಶ್ರೀಕೃಷ್ಣಭಕ್ತಾಗ್ರೇಸರನಾದ ಈ ಜಯದೇವನು ಗಾನರೂಪಕೃತಿಯ ಸವಿಯನ್ನುಂಡು ಭಕ್ತಿಸಾರವಶ್ಯದಿಂದ ಮೈಮರೆದು ನಲಿಯುವ ಭಾರತೀಯರೆಷ್ಟೋ ಜನರಿರುವರು. ಇವನ ಕವಿತಾಧೋರಣೆ ಮತ್ತು ಪದಲಾಲಿತ್ಯವನ್ನು ವಿವೇಚನೆಮಾಡುವ ರಸಿಕಸಹೃದಯರ ಹೃದಯಾಂಬುಜದಲ್ಲಿ ನವರಸಗಳು ತುಂಬಿ ಹೊರಸೂಸುವುವು. ಸರಸಗೀತಪ್ರಬಂಧದ ರತ್ನಮಾಲಿಕೆಗಳನ್ನು ಸಮರ್ಪಿಸಿ ಸಂಸ್ಕೃತ ಭಾಷಾಯೋಷಾಮಣಿಯನ್ನು ಪೂಜಿಸಿರುವ ಮಹಾನುಭಾವರಲ್ಲಿ ಜಯದೇವನು ಮೊದಲನೆಯನವನೆಂದು ಹೇಳಬೇಕಾಗುವುದು. ಇವನು ಬ್ರಾಹ್ಮಣನು. ತಂದೆ ಭೋಜದೇವ, ತಾಯಿ ರಾಮಾಂಬಾ, ಪರಾಶರನೇ ಮೊದಲಾದವರು ಇವನ ಗೆಳೆಯರೆಂಬುದು:—

ಶ್ರೀಭೋಜದೇವ ಪ್ರಭವಸ್ಯ ರಾಮಾ
ದೇವೀಸುತ· ಶ್ರೀಜಯದೇವಕಸ್ಯ
ಪರಾಶರಾದಿಪ್ರಿಯವರ್ಗಕಂಠೇ
ಶ್ರೀಗೀತಗೋವಿಂದ ಕವಿತ್ವಮಸ್ತು॥

ಎಂಬ ಶ್ಲೋಕದಿಂದಲೂ ಇವನ ಹೆಂಡತಿಯ ಹೆಸರು ಪದ್ಮಾವತೀ ಎಂಬುದು "ಜಯತಿಪದ್ಮಾವತೀರಮಣಜಯದೇವತಾಕವಿಭಾರತೀಭಣಿತಮತಿಶಾತಂ"† ಎಂದೂ, " ಪದ್ಮಾವತೀಚರಣಚಾರಣ ಚಕ್ರವರ್ತೀ "‡ ಎಂದೂ ಹೇಳಿ ಕೊಂಡಿ

'ಪ್ರಸನ್ನರಾಘವ ನಾಟಕ' ಕಾರನಾದ ಜಯದೇವನೂ 'ಶೃಂಗಾರಮಾಧವೀ' ಯ ಚಂಪೂ ಕಾರನಾದ ಜಯದೇವನೂ "ಚಂದ್ರಾಲೋಕ" ಕಾರನಾದ ಜಯದೇವನೂ ಇವನಿಂದ ಭಿನ್ನರು.

† ಗೀತಗೋವಿಂದ ಸ. ೧೨ ಶ್ಲೋ. ೧೧

‡ Ibid ಸ. ೧೮ ಆಷ್ಟ ೧೯ ಚರಣ ೮

§ Ibid ಸ ೧ ಶ್ಲೋ ೨

ರುವುದರಿಂದಲೂ, ಇವನ ನಿವಾಸಗ್ರಾಮವು ಜಗನ್ನಾಥ ಪ್ರಾಂತ್ಯದಲ್ಲಿರುವ 'ಬಿಂದುಬಿಲ್ವ' ಎಂಬುದು 'ಬಿಂದುಬಿಲ್ವಸಮುದ್ರಸಂಭವರೋಹಿಣೀರಮಣೇನ' x ಎಂದು ಒಕ್ಕಣಿಸಿಕೊಂಡಿರುವುದರಿಂದ ಗೊತ್ತಾಗುತ್ತದೆ. ಕೆಲವು ಗ್ರಂಥಗಳಲ್ಲಿ ಕಿಂದುಬಿಲ್ವವೆಂದೂ, ಕೆಲವೆಡೆ ಕೆಂದುಬಿಲ್ವವೆಂದೂ, ಕೆಲವೆಡೆ ತಿಂದುಬಿಲ್ವವೆಂದೂ ಹೇಳಲ್ಪಟ್ಟಿದೆ. ಆದರೆ ಶ್ರೀಮಚ್ಚಂದ್ರದತ್ತಕೃತ "ಭಕ್ತಮಾಲಾ" ಎಂಬ ಗ್ರಂಥದಲ್ಲಿ 'ಬಿಂದುಬಿಲ್ವ' ಎಂದು ಹೇಳಿದೆ. ಇವನು ವಂಗದೇಶವನ್ನಾಳಿದ ಬಲ್ಲಾಳಸೇನನ ಕುಮಾರ ಲಕ್ಷ್ಮಣಸೇನನ ಆಸ್ಥಾನ ಪಂಡಿತನಾಗಿದ್ದನೆಂಬುದು,

ಗೋವರ್ಧನಶ್ಚ ಶರಣೋ ಜಯದೇವ ಉಮಾಪತಿಃ
ಕವಿರಾಜಶ್ಚ ರತ್ನಾನಿ ಸಮಿತೌ ಲಕ್ಷ್ಮಣಸ್ಯ ಚ ॥ §

ಎಂದು ಹೇಳಲ್ಪಟ್ಟಿರುವುದರಿಂದ ಜಯದೇವನೊಬ್ಬನೇ ಅಲ್ಲದೆ ಗೋವರ್ಧನಾದಿ ಕವಿಗಳೂ ಲಕ್ಷ್ಮಣಸೇನನ ಸಭಾಪಂಡಿತರಾಗಿದ್ದರೆಂಬುದು ಸ್ಪಷ್ಟಪಡುತ್ತದೆ. ಇದಲ್ಲದೆ ಜಯದೇವನು ತನ್ನ ಸಮಕಾಲೀನರಾದ ಕವಿಗಳನ್ನು ಕೊಂಡಾಡುವಾಗ ಹೀಗೆಂದಿರುವನು.:—

ವಾಚಃ ಪಲ್ಲವಯತ್ಯುಮಾಪತಿಧರಃ ಸಂದರ್ಭಶುದ್ಧಿಂ ಗಿರಾಂ
ಜಾನೀತೇ ಜಯದೇವ ಏವ ಶರಣಃ ಶ್ಲಾಘ್ಯೋ ದುರೂಹದ್ರುತೇಃ
ಶೃಂಗಾರೋತ್ತರಸತ್ಪ್ರಮೇಯರಚನೈರಾಚಾರ್ಯಗೋವರ್ಧನ
ಸ್ಪರ್ಧೀ ಕೋಽಪಿ ನ ವಿಶ್ರುತಃ ಶ್ರುತಿಧರೋ ಧೋಯೀ ಕವಿಃ ಕ್ಷ್ಮಾಪತಿಃ ॥ $

ಕಾಲ:—ಲಕ್ಷ್ಮಣಸೇನನು ಬಂಗಾಳದಲ್ಲಿ ಕ್ರಿ. ಶ. ೧೨ನೆಯ ಶತಮಾನಾರಂಭದಲ್ಲಿ ಆಳಿದುದಾಗಿ ಹೇಳಲ್ಪಟ್ಟಿದೆ. ರಾಜನಾದ ಲಕ್ಷ್ಮಣಸೇನನು ಕೊಟ್ಟಿರುವ ದಾನಪತ್ರದ ಕಾಲವು ಸಂ. ೧೨೨೨ ಅಥವಾ ಕ್ರಿ. ಶ. ೧೧೧೬ ಎಂದು ಬರೆಯಲ್ಪಟ್ಟಿದೆ. ಈ ಶಾಸನವು ಗಯೆಯ ಬಳಿ ಇದೆ.| ಆದುದರಿಂದ ಜಯದೇವನು ಇವನ ಆಸ್ಥಾನಪಂಡಿತನಾಗಿದ್ದುದರಿಂದ ಲಕ್ಷ್ಮಣಸೇನನ ಕಾಲವೇ ಜಯದೇವನ ಕಾಲವಾಗಿರಬೇಕು. ಎಂದರೆ ಕ್ರಿ. ಶ. ೧೨ನೆಯ ಶತಮಾನದವನೆಂಬುದು ಸ್ಥೂಲಮಾನದಿಂದ ಸಿದ್ಧವಾಗುತ್ತದೆ. ಇದೇ ವಿಚಾರವನ್ನೇ ವಂಗಭಾಷಾಸಾಹಿತ್ಯವು| ಸಮ

x ಗೀತಗೋವಿಂದ ಸ. ೩ ಅಷ್ಟ ೭ ಚರಣ ೮

' ಜಗನ್ನಾಥಪುರೀಪ್ರಾಂತೇ ದೇಶೇ ಚೈವೋತ್ಕಲಾಭಿಧೇ
'ಬಿಂದುಬಿಲ್ವ' ಇತಿಖ್ಯಾತೋ ಗ್ರಾಮೋಬ್ರಾಹ್ಮಣ ಸಂಕುಲಃ ಭಕ್ತಮಾಲಾ ಸ. ೨೯—೪೧

§ ಲಕ್ಷ್ಮಣಸೇನಸ ಸಭಾಮಂಟಪದ್ವಾರದ ತಿಲಾಶಾಸನ

$ ಗೀತಗೋವಿಂದ ಸ. ೧ ಶ್ಲೋ. ೪

† History of Classical Sanskrit Literature P. 121

‡ Bengali Language and Literature P. 540

ರ್ಥಿಸುತ್ತದೆ. ಅದು ಹೀಗಿರುವುದು:—Jayadeva, the Sanskrit Poet of the 12th Century writing ಇದರಲ್ಲಿಯೂ ಕ್ರಿ. ಶ. ೧೨ನೆಯ ಶತಮಾನದವನೆಂದಾದುದು. ಆದರೆ ಇದೇ ವಂಗಭಾಷಾಸಾಹಿತ್ಯದ ಬೇರೊಂದೆಡೆಯಲ್ಲಿ ಲಕ್ಷ್ಮಣಸೇನನ ತಂದೆ ಬಲ್ಲಾಳಸೇನನು ಕ್ರಿ. ಶ ೧೧೧೯-೧೧೬೯ ರ ವರೆಗೆ ಆಳಿದುದಾಗಿ ಹೇಳಲ್ಪಟ್ಟಿದೆ.§ ಲಕ್ಷ್ಮಣಸೇನನು ತಂದೆಯ ಅನಂತರ ರಾಜನಾಗಿದ್ದುದಾದರೆ ಲಕ್ಷ್ಮಣಸೇನನ ರಾಜ್ಯಕಾಲವು ಕ್ರಿ. ಶ, ೧೨ನೆಯ ಶತಮಾನದ ಉತ್ತರಾರ್ಧವಾಗುವುದು. ಇವನು ಯಾವಾಗ ಎಲ್ಲಿಂದ ಎಲ್ಲಿಯವರೆಗೆ ರಾಜನಾಗಿದ್ದನೆಂಬುದಾಗಲಿ, ಯುವರಾಜನಾಗಿ ಎಷ್ಟು ವರ್ಷಗಳಿದ್ದನೆಂಬುದಾಗಲಿ ಯಾವುದೂ ಖಂಡಿತವಾಗಿ ತಿಳಿಯುವಂತಿಲ್ಲ. ಮೇಲೆ ಹೇಳಿರುವ ದಾನಶಾಸನದ ಕಾಲವು ಲಕ್ಷ್ಮಣಸೇನನು ಯುವರಾಜನಾಗಿದ್ದ ಕಾಲವನ್ನು ಸೂಚಿಸುತ್ತದೆ.

ಗ್ರಂಥಗಳು:—ಇವನು ಬರೆದುವಾಗಿ ಹೇಳಲ್ಪಟ್ಟು ಪ್ರಕೃತ ದೊರೆತಿರುವ.

೧. ಗೀತ ಗೋವಿಂದಕಾವ್ಯ†
೨. ಕಾರಕವಾದ
೩. ರತಿಮಂಜರಿ
೪. ತತ್ವಚಿಂತಾಮಣಿ

ಎಂಬ ನಾಲ್ಕುಗ್ರಂಥಗಳು ಇರುವುವು. ಗೀತಗೋವಿಂದ ಕಾವ್ಯವು ಗೀತ ಮತ್ತು ಶ್ಲೋಕಯುಕ್ತವಾಗಿರುವುದು. ಇದರಲ್ಲಿ ಕೃಷ್ಣ (ಗೋವಿಂದ)ನ ವಿಚಾರವಾಗಿ ಗಾನ ಮಾಡಲ್ಪಟ್ಟಿರುವುದರಿಂದ ಗೀತಗೋವಿಂದವೆಂದೂ ಈ ಪ್ರಬಂಧದಲ್ಲಿ ಹನ್ನೆರಡು ಸರ್ಗಗಳಿದ್ದು ಸಂಗೀತ ಮತ್ತು ಸಾಹಿತ್ಯವನ್ನರಿತಿರುವ ರಸಿಕರಿಗಾಗಿ ೨೪ ಪಾದಗಳುಳ್ಳ ಎಂಟೆಂಟು ಹಾಡುಗಳನ್ನು ರಚಿಸಿ ಇದನ್ನು "ಅಷ್ಟಪದಿ" ಎಂದು ಕರೆಯುವ ರೂಢಿಯೂ ಇರುವುದು. ಇದರಲ್ಲಿ ಶ್ರೀಕೃಷ್ಣನ ಕ್ರೀಡಾವಿಚಾರವೇ ಕಥಾವಸ್ತು. ಪ್ರಧಾನರಸವು ಶೃಂಗಾರ. ಅದರಲ್ಲಿಯೂ ಶುದ್ಧಶೃಂಗಾರವಾಗಿರುವುದು. ಇದರ ರಸವಿವೇಚನಾಕ್ರಮವು ಸಾಧಾರಣೇತರರಿಗೆ ಕೇವಲ ಮಾನುಷವಿಷಯಕವಾಗಿರುವಂತೆ ತೋರಿಬರುತ್ತದೆಂದೆನ್ನಬಹುದಾದರೂ ಅಮಾನುಷರೂಪನಾದ ಪರಮಾತ್ಮನ ವಿಷಯವರ್ಣಿತವಾಗಿರುವುದರಿಂದ ಈ ಗ್ರಂಥವು ಕೇವಲ ಕಾವ್ಯರಸಿಕರಿಗೇ ಅಲ್ಲದೆ ಭಾಗವತಾಗ್ರೇಸರರಿಗೆ ಕೂಡ ಪರಮಾದರಣೀಯವಾಗಿರುವುದೆಂದು ಪುನಃ ಹೇಳಬೇಕಾದುದಿಲ್ಲ. ಇದರಲ್ಲಿ ಹತ್ತನೆಯ ಸರ್ಗದವರೆಗೆ ರಾಧಾ ಮಾಧವರ ವಿಪ್ರಲಂಭ ಶೃಂಗಾರವು ವರ್ಣಿತವಾಗಿ ಹನ್ನೊಂದು ಹನ್ನೆರಡರಲ್ಲಿ ಸಂಭೋಗ ಶೃಂಗಾರವನ್ನು

§ Bengali Language and Literature P. 80.
† ಗೀತಗೋವಿಂದ ಸ ೧ ಶ್ಲೋ ೧೧

ಸಾಂಗವಾಗಿ ಹೇಳಿ ಗ್ರಂಥವು ಮುಕ್ತಾಯವಾಗಿರುವುದು. ಇದೇ ವಿಚಾರವನ್ನು ಕವಿಯು ತನ್ನ ಗ್ರಂಥದ ಮಂಗಳಾಚರಣವಾದ,

ಮೇಘೈರ್ಮೇದುರಮಂಬರಂ ವನಭುವಃ ಶ್ಯಾಮಾಸ್ತಮಾಲದ್ರುಮೈಃ
ನಕ್ತಂ ಭೀರುರಯಂ ತ್ವಮೇವ ತದಿಮಂ ರಾಧೇ ಗೃಹಂ ಪ್ರಾಪಯ ॥

ಎಂಬವರೆಗೂ ವಿಪ್ರಲಂಭ ಶೃಂಗಾರವನ್ನು ಸೂಚಿಸಿ ಉತ್ತರಾರ್ಧವಾದ. —

'ಇತ್ಥಂ ನಂದನಿದೇಶತಶ್ಚಲಿತಯೋಃ ಪ್ರತ್ಯಧ್ವಕುಂಜದ್ರುಮಂ
ರಾಧಾಮಾಧವಯೋರ್ಜಯಂತಿ ಯಮುನಾ ಕೂಲೇ ರಹಃಕೇಳಯಃ ॥

ಎಂಬುದರಲ್ಲಿ ಸಂಭೋಗಶೃಂಗಾರವನ್ನು ಹೇಳಿ ಮುಗಿಸಿರುವನು.

ತಾನು ಗೀತವನ್ನು ಹಾಡಿ ಅದಕ್ಕನುಗುಣವಾಗಿ ತನ್ನ ಭಾರ್ಯೆಯಾದ ಪದ್ಮಾವತಿಯಿಂದ ಅಭಿನಯಯುಕ್ತವಾದ ನಾಟ್ಯವಾಡಿಸುವನಾಗಿ ಪುರುಷೋತ್ತಮನಾದ ಶ್ರೀಕೃಷ್ಣನ ಶೃಂಗಾರ ಕ್ರೀಡೆಯನ್ನು ವಿವರಿಸುವ ಈ ಗೀತಗೋವಿಂದವೆಂಬ ಪ್ರಬಂಧವನ್ನು ರಚಿಸುವುದಾಗಿ,

ವಾಗ್ದೇವತಾಚರಿತಚಿತ್ರಿತ ಚಿತ್ತಸದ್ಮಾ
ಪದ್ಮಾವತೀಚರಣಚಾರಣ ಚಕ್ರವರ್ತೀ
ಶ್ರೀವಾಸುದೇವರತಿಕೇಳಿ ಕಥಾಸಮೇತ
ಮೇತಂ ಕರೋತಿ ಜಯದೇವಕವಿಃ ಪ್ರಬಂಧಂ ॥

ಎಂದು ಪ್ರತಿಜ್ಞೆಯನ್ನು ಮಾಡಿರುವನು. ಇದರಲ್ಲಿ ಕವಿಯು "ಪದ್ಮಾವತೀ ಚರಣಚಾರಣ ಚಕ್ರವರ್ತೀ" ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿರುವನು. ಇಲ್ಲಿ

(೧) ಪದ್ಮಾವತೀ---ಅಷ್ಟಾಕ್ಷರೀ ಮಂತ್ರಕ್ಕೆ ಅಧಿದೇವತೆಯಾದ ಲಕ್ಷ್ಮಿಯು

ಚರಣಚಾರಣ---ಪಾದಪರಿಚರ್ಯೆಯಲ್ಲಿ,

---

(೧) "ಪ್ರಬಂಧಃಕಲ್ಪನಾಕಥಾ" ಇತ್ಯಮರಃ

(೨) "ತಾನಾದಿಸ್ವರಗೀತಾನಾಂ ಕ್ರಮಾದೂರ್ಧ್ವಮಧೋಗತಿಃ" ಎಂದರೆ ಕ್ರಮವಾಗಿ ಗಾನ, ಸ್ವರ, ಗೀತಗಳಿಂದ ಕೂಡಿ ಊರ್ಧ್ವಾಧೋಗತಿಯುಳ್ಳದಕ್ಕೆ ಪ್ರಬಂಧವೆಂದೂ (ಭರತಕಲ್ಪಲತಾಮಂಜರೀ)

(೩) ಚತುರ್ಭಿಃ ಪಂಚಭಿಃ ಷಡ್ಭಿಸ್ಸ್ವರೈರಾಗಸಿರೂಪಣಂ ॥ ಎಂದರೆ ನಾಲ್ಕು, ಐದು ಆರುಸ್ವರಂಗಳಿಂದ ಕೂಡಿ ರಾಗನಿರೂಪಣಮಾಡಿಕೊಂಡು ಹಾಡುವುದಕ್ಕೆ ಪ್ರಬಂಧವೆಂದೂ ಹೆಸರು. (ಭರತಶಾಸ್ತ್ರ.)

(೪) ಗೀತವೆಂದರಃ— ಅಷ್ಟಭಾಷಾಪದೈರ್ಯುಕ್ತಂ ಶಬ್ದಝಂಕಾರಸಂಯುತಂ
ಸ್ವರರಾಗೈಃಪ್ರಗಾಯಂತಿ ಗೀತಮಿತ್ಯಭಿಧೀಯತೇ ॥
ಅಷ್ಟಭಾಷಾಪದಯುಕ್ತವಾಗಿ ಶಬ್ದಝಂಕಾರಯುತವಾಗಿ ಸ್ವರ ಮತ್ತು ರಾಗಗಳಿಂದ ಕೂಡಿಹಾಡುವುದಕ್ಕೆ ಹೆಸರು.

ಚಕ್ರವರ್ತೀ—ಸಾರ್ವಭೌಮನೆಂಬ ಅರ್ಥವೂ (ಎಂದರೆ ಲಕ್ಷ್ಮೀಯ ಉಪಾಸಕನೆಂಬರ್ಥವೂ)

(೨) ಪದ್ಮಾವತೀ –ಪದ್ಮಾವತೀ ಎಂಬ ಶನ್ನ ಭಾರ್ಯೆಯ
ಚರಣಚಾರಣ—ಪಾದವಿನ್ಯಾಸಮಾಡಿಸೋಣದರಲ್ಲ ಎಂದರೆ ನಾಟ್ಯ ವಾಡಿಸುವುದರಲ್ಲಿ,

ಚಕ್ರವರ್ತೀ –ಸಾರ್ವಭೌಮನೆಂಬ ಧ್ವನಿಯೂ ಉಂಟಾಗುತ್ತದೆ. ಇದರಿಂದ ಇವನು ಭರತಶಾಸ್ತ್ರಕೋವಿದನೆಂಬುದೂ ಸ್ಪಷ್ಟಪಡುತ್ತದೆ.

ಇಲ್ಲಿ ಕವಿಯು ತನ್ನ ಹೆಂಡತಿಯ ಹೆಸರನ್ನು ಹೇಳಿರುವ ವಿಚಾರದಲ್ಲಿ :—

ಜ್ಯೇಷ್ಠ ಭಾರ್ಯೆಯ ಹೆಸರನ್ನೂ, ತಾಯಿತಂದೆ, ಗುರುಗಳ ಹೆಸರನ್ನೂ ಜ್ಯೇಷ್ಠ ಪತ್ನೀಪುತ್ರರ್ಯ ಹೆಸರನ್ನೂ ಕರ್ಮಕಾಲಗಳಲ್ಲಿ ಹೊರ್ತು ಯಾವಾಗಲೂ ಹೇಳಕೂಡ ದೆಂದೂ, ಹಾಗೆ ಕರೆಯಬಹುದಾದ ಸನ್ನಿವೇಶವು ಕೇವಲ ರಹಸ್ಯಕ್ರೀಡಾದಿಗಳ ಸಮಯವೆಂದೂ ಹೇಳಿರುವಲ್ಲಿ ಈ ಕವಿಯು ತನ್ನ ಗ್ರಂಥಾರಂಭದಲ್ಲಿಯೇ ತನ್ನ ಇಷ್ಟ ದೈವವನ್ನು ಪ್ರಾರ್ಥಿಸುವ ನೆಪದಲ್ಲಿ ಹೆಂಡತಿಯ ಹೆಸರನ್ನು ಹೇಳಿರುವುದಲ್ಲದೆ ಅವಳನ್ನು ನಾಟ್ಯಾಭಿನರಣದ ಮೂಲಕ ಹೇಳುವ ಪ್ರಣಯ ವರ್ಣನವು ಯುಕ್ತಿ ಯುಕ್ತವಾಗಿರದೆಂದೂ ಕೆಲವರಿಗೆ ತೋರಬಹುದು. ಆದರೆ ಇಂತಹುದಕ್ಕೆ ಸಮಾ ಧಾನವನ್ನು ಹೇಳಲು ಬಹುದೂರ ಹೋಗಬೇಕಾದುದಿಲ್ಲ. ಯಜ್ಞದಲ್ಲಿ ಯಜ ಮಾನನು ಹೆಂಡತಿಯನ್ನು ಹೆಸರಿನಿಂದಲೇ ಕರೆಯಬಹುದಾಗಿ ಹೇಳಿದೆ. ಯದುಕುಲ ತಿಲಕನಾದ ಶ್ರೀಕೃಷ್ಣನು ಸತ್ಯಭಾಮೆಯ ಕೈಯಲ್ಲಿ ನೃತ್ಯವನ್ನಾಡಿಸಿರುವನು· ದಿಗಂಬರನಾದ ಪರಶಿವನು ತಾನೂ ನಾಟ್ಯವಾಡಿ ಪಾರ್ವತಿಯಿಂದ ನಾಟ್ಯವಾಡಿಸಿ ಆನಂದದಿಂದ ಗಿರಿಜೆಯನ್ನು ತನ್ನ ಅರ್ಧಾಂಗದಲ್ಲಿ ನೆಲೆಗೊಳಿಸಿಕೊಂಡಿರುವನು. ಇದಲ್ಲದೆ ಭಾಗವತಗೋಷ್ಠೀಪೂರ್ಣತೆಯು ತಾನೊರ್ವನೇ ಎಲ್ಲಿಯೋ ಕುಳಿತು ಜಪಿಸಿಕೊಂಡಮಾತ್ರಕ್ಕೆ ದೊರೆಯದು. ತಾನು ಆಚರಿಸುವುದಾದ ಯಾವದ್ವಿಶಿಷ್ಟ ಕರ್ಮಗಳಲ್ಲಿಯೂ "ಆತ್ಮಾವಾಜಾಯತಇತಿಜಾಯಾ" ಎಂದು ಶ್ರುತಿಗಳಲ್ಲಿ ಭಾರ್ಯೆ ಯನ್ನುಕುರಿತು ನಿರ್ದೇಶಿಸಿ ಹೇಳಿರುವುದಲ್ಲದೆ ಪತ್ನೀವಿಯುಕ್ತತೆಯಿಂದ ಆಚರಿಸುವ ಸಕಲಕರ್ಮ ಫಲಗಳ ಬಾಹಿರನಾಗುವನೆಂದು ಧರ್ಮಶಾಸ್ತ್ರಾದಿ ಗ್ರಂಥಗಳು ಸಾರು ವುದರಿಂದಲೂ.—

ಸ ಅಸ್ಪೋತ್ತರಶತಾದ್ಯುಪಚಾರೇ ಅಲಂಕಾರ ಸನಭಾಗೇ —

(೨) ಅಷ್ಟೋತ್ತರಶತಾದ್ಯುಪಚಾರಗಳಲ್ಲಿ $ ನಾಟ್ಯವು ಒಂದಾಗಿರುವುದರಿಂದಲೂ, ಇಂತಹುದರ ನ್ಯೂನತೆಯಿಂದಕೂಡಿದ ಉಪಚಾರವು ಭಗವನ್ಮುಖೋಲ್ಲಾಸ ಹೇತುವಾಗದುದರಿಂದ ಭಗವತ್ಸನ್ನಿಧಿಯಲ್ಲಿ ನಾಟ್ಯಾದ್ಯುಪಚಾರಗಳ ಸಮರ್ಪಣೆಯು ಭಾಗವತಲಕ್ಷಣವಾದುದರಿಂದಲೂ.

(೩) ಈ ಕಾವ್ಯವನ್ನು ಶೃಂಗಾರರಸಪ್ರಧಾನವಾದುದನ್ನಾಗಿಮಾಡಿ ಆ ಶೃಂಗಾರರಸಕ್ಕೆ ಆಲಂಬನ ವಿಭಾವಾದಿಗಳುದಯಿಸುವಂತೆ ತನ್ನ ಭಾರ್ಯೆಯೊಡನೆ ಭಗವಲ್ಲೀಲಾನುಸಂಧಾನಮಾಡಿ ಹೇಳುವುದು ಸಮುಂಜಸವಾದುದೆಂದೂ.

(೪) ಇದಲ್ಲದೆ ಜಯದೇವನಿಗೆ ತನ್ನ ಹೆಂಡತಿಯೆಂಬ ಪ್ರತಿಪತ್ತಿ ಮಾತ್ರವೇ ಅಲ್ಲದೆ ಭಾಗವತ ಪ್ರತಿಪತ್ತಿಯೊಡಗೂಡಿರುವ ಪತ್ನಿಯೊಡನೆ ಆಚರಿಸುವ ಪ್ರತಿಯೊಂದೂ ಧರ್ಮವಿಹಿತವಾದುದರಿಂದ ಪರಮಪುರುಷನಾದ ಶ್ರೀಕೃಷ್ಣನ ಎದುರಿನಲ್ಲಿ ತನ್ನ ಹೆಂಡತಿಯನ್ನು ನಾಟ್ಯವಾಡಿಸಿದುದು ಜೆಲುವಾಗಿಯೇ ಇರುವುದು.

ಕೃಷ್ಣಲೀಲಾಪರವಾದ ಕಾವ್ಯಗಳೆಷ್ಟೋ ಇರುವುವಾದರೂ ಅವುಗಳೆಲ್ಲದಕ್ಕಿಂತಲೂ ತನ್ನ ಕಾವ್ಯವೆ ಶ್ರೇಷ್ಠವೆಂದು ಹೇಳುವುದರ ಮೂಲಕ ಅಧಿಕಾರಿ ಪ್ರಯೋಜನವನ್ನು ಹೇಳಿರುವನು. ಅದು ಹೀಗಿರುವುದು: —

ಯದಿ ಹರಿಸ್ಮರಣೇ ಸರಸಂ ಮನೋ
ಯದಿ ವಿಲಾಸಕಲಾಸು ಕುತೂಹಲಂ
ಮಧುರ ಕೋಮಲಕಾಂತ [x] ಪದಾವಲೀಂ
ಶೃಣುತದಾ ಜಯದೇವಸರಸ್ವತೀಂ ॥ ೩ ॥

ಎಲೈ ಜನರೆ ! ನಿಜವಾಗಿಯೂ ನಿಮ್ಮ ಚಿತ್ತವು ಶ್ರೀಕೃಷ್ಣನಲ್ಲಿ ಭಕ್ತಿಯಿಂದ ಕೂಡಿರುವುದಾಗಿದ್ದರೆ, ಶೃಂಗಾರವಿಲಾಸಕಲೆಗಳನ್ನು ಅರಿತುಕೊಳ್ಳುವುದರಲ್ಲಿ

$ ಆದರ್ಶನೃತ್ತಗೀತಾದಿ ಛತ್ರಚಾಮರಕೇತನಂ
ಮಂತ್ರಪ್ರಸೂನಮಾತ್ರಾಂಚ ಮುಖವಾಸಂಚವೀಟಿಕಾಂ ॥
ಪುನರ್ಮಂತ್ರಾಸನೇ: —
ನಾನಾವೃಪಫಲೇಸ್ತೋತ್ರಂ ಪ್ರದಕ್ಷಿಣನಮಸ್ಕ್ರಿಯಾ
ನೃತ್ತಂಗೀತಂವಾದ್ಯಮಿತಿ ಸಪ್ತ ಭಿರ್ವಿಭುಮರ್ಚಯೇತ್॥
ವೈಖಾನಸಾಗಮಪ್ರಕಾಶೇ

[x] ಮಾಧುರ್ಯದಲ್ಲಿ ಶಬ್ದಗತಮಾಧುರ್ಯವೆಂದೂ ಅರ್ಥಗತಮಾಧುರ್ಯವೆಂದೂ ಎರಡು ವಿಧಗಳು. ಶಬ್ದಗತಮಾಧುರ್ಯವೆಂದರೆ ದೀರ್ಘಸಮಾಸಗಳಿಲ್ಲದೆ ಶ. ಷ. ಳ ಫ ಮೊದಲಾದ ಪರುಷೋಚ್ಚಾರಣ ವರ್ಣಗಳಿಲ್ಲದೆ ಸರಳವಾಗಿರುವುದು. ಅರ್ಥಗತಮಾಧುರ್ಯವೆಂದರೆ ಸಹೃದಯ

ಕೌತೂಹಲಾವಿಷ್ಟರಾಗಿದ್ದರೆ (ಇಲ್ಲಿ ವಿಲಾಸವೆಂದರೆ ಯುವತಿಯರ ಹಾವವಿಶೇಷ) ಹೃದಯಂಗಮ ರಚನಾನೈಪುಣ್ಯದಿಂದಲೂ, ಕಾಠಿನ್ಯವಿಲ್ಲದ ರುಚಿರಪದ ಸಮೂಹಗಳಿಂದ ಕೂಡಿರುವ ಈ ಜಯದೇವನ ಸೂಕ್ತಿಯನ್ನು ಕೇಳುವರಾಗಿ.

ಈ ಗ್ರಂಥದಲ್ಲಿ ಮೊದಲು.—

ಪರಿತ್ರಾಣಾಯಸಾಧೂನಾಂ ವಿನಾಶಾಯ ಚ ದುಷ್ಕೃತಾಂ
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿಯುಗೇಯುಗೇ ॥

ಎಂದು ಹೇಳಿರುವ ಗೀತಾಚಾರ್ಯನ ಉಕ್ತಿಯಂತೆ ಅನೇಕವಾದ ಭಗವದವತಾರಗಳಲ್ಲಿ ಮುಖ್ಯವಾದ ದಶಾವತಾರ ಸ್ತುತಿಯನ್ನುಮಾಡಿ ಆ ದಶಾವತಾರ ವರ್ಣನವನ್ನು ಒಂದೇ ಶ್ಲೋಕದಲ್ಲಿ ಅಡಗಿಸಿರುವನು. ಅದು ಹೀಗಿರುವುದು:—

ವೇದಾನುದ್ಧರತೇ ಜಗನ್ನಿವಹತೇ ಭೂಗೋಳಮುದ್ಬಿಭ್ರತೇ
ದೈತ್ಯಾನ್ದಾರಯತೇ ಬಲಿಂ ಛಲಯತೇ ಕ್ಷತ್ರಕ್ಷಯಂಕುರ್ವತೇ
ಪೌಲಸ್ತ್ಯಂ ಜಯತೇ ಹಲಂಕಲಯತೇ ಕಾರುಣ್ಯಮಾತನ್ವತೇ
ಮ್ಲೇಚ್ಛಾನ್ಮೂರ್ಛಯತೇ ದಶಾಕೃತಿಕೃತೇ ಕೃಷ್ಣಾಯತುಭ್ಯಂನಮಃ‡

(೧) ವೇದವನ್ನುದ್ಧರಿಸಿ (೨) ಭೂಮಿಯನ್ನು ಹೊತ್ತು (೩) ಭೂಗೋಳವನೆತ್ತಿ (೪) ಹಿರಣ್ಯಕಶಿಪುವನ್ನು ಸಂಹರಿಸಿ (೫) ಬಲಿಯನ್ನೊಲಿಸಿ (೬) ಕ್ಷತ್ರಕುಲನಿರ್ಮೂಲನ ಮಾಡಿ (೭) ರಾವಣನ ತಲೆಯನ್ನು ತರಿದು (೮) ಹಲವಂಧರಿಸಿ (೯) ದಯಾಮೂರ್ತಿಯಾಗಿ (೧೦) ಮ್ಲೇಚ್ಛವಿನಾಶಕ್ಕಾಗಿ ಅವತಾರಗೊಂಡ ಎಲೈ ಕೃಷ್ಣನೆ! ನಿನಗೆ ನಮಸ್ಕಾರವು. ಎರಡನೆಯ ಸರ್ಗದಲ್ಲಿ ಶ್ರೀಕೃಷ್ಣಪರಮಾತ್ಮನ ಸ್ವರೂಪ ರೂಪಗುಣವಿಭೂತಿಗಳನ್ನೂ, ಮೂರನೆಯವರಲ್ಲಿ ವಿಲಾಸಯೋಗ್ಯವಾದ ವಸಂತಋತುವರ್ಣ

ಹೃದಯಾಹ್ಲಾದಕರವಾದ ವರ್ಣನೆಗಳಿರದ ಕೂಡಿರುವ ವೈಚಿತ್ರ್ಯಕ್ಕೆ ಹೆಸರು. ಈ ಎರಡು ವಿಧಗಳಿಂದ ಕೂಡಿದ್ದರೆಮಾತ್ರ ಮಧುರವೆನ್ನಲ್ಪಡುವುದು

| ಕೋಮಲ—ಇದರಲ್ಲಿಯೂ ಶಬ್ದಗತವೆಂದೂ ಅರ್ಥಗತವೆಂದೂ ಎರಡು ವಿಧಗಳಿರುವುವು. ಶಬ್ದಗತಕೋಮಲತ್ವವೆಂದರೆ ಚಕ್ಕಬಂಧ ಪದ್ಮಬಂಧಾದಿಗತ ಕಾಠಿನ್ಯದಿಂದ ದೂರವಾಗಿರುವುದು. ಅರ್ಥಗತಕೋಮಲತ್ವವೆಂದರೆ ಕಠಿನವೃತ್ತಾಂತವಾವುದೂ ಇಲ್ಲದೆ ಕೇಳುವುದಕ್ಕೆ ಇಂಪಾಗಿರುವುದು. ಈ ಎರಡುವಿಧ ಗುಣಗಳಿದ್ದರೆ ಕೋಮಲವೆನಿಸಿಕೊಳ್ಳುವುದು.

x ಕಾಂತ—ಇದರಲ್ಲಿಯೂ ಶಬ್ದಗತವೆಂದೂ ಅರ್ಥಗತವೆಂದೂ ಎರಡು ವಿಧಗಳಿರುವುವು. ಶಬ್ದಗತಕಾಂತವೆಂದರೆ ಹೃದಯಂಗಮ ಅಥವಾ ಮನಸ್ಸಿಗೆ ಪ್ರೀತಿಕರವಾದುದು. ಅರ್ಥಗತಕಾಂತವೆಂದರೆ ಶೃಂಗಾರಾದಿ ನವರಸಭೂಯಿಷ್ಠವಾಗಿ ರಸಿಕರಿಗೆ ಆನಂದವನ್ನುಂಟುಮಾಡುವದಾಗಿರುವದು. ಹೀಗೆ ಹೇಳುವುದರಿಂದ ಕಾವ್ಯಗುಣಂಗಳಾದ ಓಜಸ್ಸು, ಪ್ರಸಾದ, ಔಜ್ಜ್ವಲ್ಯಾದಿಗಳನ್ನು ಸೂಚಿಸಿದಂತಾಗುವುದು.

‡ ಗೀತಗೋವಿಂದ ಸ. ೧ ಶ್ಲೋ ೧೨.

ನವನ್ನೂ ಮಾಡಿ ಉಳಿದವುಗಳಲ್ಲಿ ರಾಧಾಕೃಷ್ಣರ ಪರಸ್ಪರವಿರಹವರ್ಣನ, ಸಖಿಯರ ವಾಕ್ಯಕೌತುಕ, ವಿರಹವೇದನಾರೂಪವಾದ ಆಲಾಪ, ಪ್ರಲಾಪ, ವಿಲಾಪಗಳನ್ನು ಆಡಿಸಾಡಿ ತೋರಿಸಿ ಕೊನೆಗೆ ರಾಧೆಯಸಲ್ಲಾಪದೊಡನೆ ಕಾವ್ಯವನ್ನು ಮುಗಿಸಿರುವನು.

ಶೃಂಗಾರಲೀಲೆಯನ್ನು ಸಖಿಯು ರಾಧೆಯೊಡನೆ ಹೇಳುವನೆಂದಲ್ಲಿ ಹೀಗೆಂದು ಪ್ರಾರಂಭಿಸಿರುವನು—

ವಿಶ್ಲೇಷಾಮನುರಂಜನೇನ ಜನಯನ್ನಾನಂದಮಿಂದೀವರ
ಶ್ರೇಣೀಶ್ಯಾಮಲಕೋಮಲೈರುಪನಯನ್ನಂಗೈರನಂಗೋತ್ಸವಂ
ಸ್ವಚ್ಛಂದಂ **ವ್ರಜಸುಂದರೀಭಿರಭಿತಃ ಪ್ರತ್ಯಂಗಮಾಲಿಂಗಿತಃ**
ಶೃಂಗಾರಃ ಸಖಿ ಮೂರ್ತಿಮಾನಿವ ಮಧೌ ಮುಗ್ಧೋಹರಿಃ ಕ್ರೀಡತಿ$

ಇದರಲ್ಲಿ, ಯಮುನೆಯನೀಲಿಮಾಮಯವಾದ ತರಂಗಪ್ರತಿತರಂಗಾಂದೋಳನಗಳು; ವಿಹರಿಸಲು ಯೋಗ್ಯವಾದ ತಮಾಲವೃಕ್ಷದಡಿಯ ತನುಪ್ರದೇಶಗಳು, ಮಲಯಸಮೀರಣನವೈಹಾಳಿ, ರಜನೀನಾಥನ ಲೋಕಾಮಯಶೋಭಾ, ಸೌಂದರ್ಯಸಾರವಿಶಿಷ್ಟನಾದ ಶ್ರೀಕೃಷ್ಣನ ನಲ್ನುಡಿ, ವಿರಹಿಣಿಯರ ಅಪಾಂಗವೀಕ್ಷಣಯುಕ್ತವಾದ ಸುಯ್ನುಡಿ, ಗೆಳತಿಯರಮೆಲ್ನುಡಿ, ಪ್ರಣಯಿಜನರ ಮನೋಭ್ರಾಮಕಗಳು, ಈರ್ಷೆಯ ತೀವ್ರವೇದನೆ, ವಿರಹಾತಿರೇಕದ ಅಸಹನೆ, ಪರಸ್ಪರಸೇರುವಿಕೆಯಿಂದುಂಟಾಗುವ, ಆನಂದಪರವಶತೆಯ ಅನುಭವ, ಇವುಗಳೆಲ್ಲದರ ಸೂತ್ರಧಾರನಾದ ಪೀತಾಂಬರನ ಭಕ್ತಪರಾಧೀನತೆಯ ವೈಖರಿ ಇವೇ ಮೊದಲಾದವು ಬಹು ಜಾಣ್ಮೆಯಿಂದ ವರ್ಣಿತವಾಗಿರುವುದಲ್ಲದೆ ಕವಿಯ ಗೀತಪ್ರಭೆಯೂ, ಅಭಿನವ ಪರಿಪಾಟವವೂ ಕಾವ್ಯಪ್ರಭೆಯಲ್ಲಿ ಲೀನವಾಗಿ ನೂತನ ಪ್ರತಿಭಾವಿಶೇಷದಿಂದ ಲೋಕದ ಮೆಚ್ಚುಗೆಯನ್ನು ಹೊಂದಿರುವುದಾಗಿದೆ.

ರತಿಕೇಳಿಕಥಾತ್ಮಕವಾದ ಇಂತಹ ಗ್ರಂಥವಿಚಾರದಿಂದ ಲೋಕಕ್ಕೆ ಭಕ್ತಿಸಾಧನದಬಗೆ ಹೇಗೆಂದೂ, ಸಾಧುಸಂತನಾದ ಜಯದೇವನು ಪರಮಾತ್ಮನಲ್ಲಿ ಇಂತಹ ಸುರತವಿಶೇಷಗಳನ್ನಾರೋಪಿಸುವದು ಸಾಧುವಲ್ಲವೆಂದೂ ಹಳಹಳಿಸುವವರಿಗೆ ಸುರತಶಬ್ದವು ಕೇವಲ ನಿಗೂಢಭಾವತತ್ವಾರ್ಥ ಸೂಚಕವೆಂದೂ ಅದು ನಾನಾರೂಪಗಳಲ್ಲಿ ಯೋಗಸಂಬಂಧದ ಐಕ್ಯತೆಯೆಂದು ಕರೆಯಲ್ಪಡುವುದೆಂದೂ, ಮಾನವದೃಷ್ಟಿಗೆ ಗೋಚರಿಸುವ, ಮಾನವಬುದ್ಧಿಗೆ ಸ್ಫೂರ್ತಿಸುವ, ಮಾನವಲೀಲೆಗೆ ಒಳಪಡುವ ಕೇವರ್ಣನದಿಂದಲೀಲಾಮಾನುಷವಿಗ್ರಹನಾದ ಅಪ್ರಮೇಯನ ಲೀಲಾವರ್ಣನಗಳಲ್ಲಿ ಮಾನವಚಿಂತನವುಲೀನವಾಗಿ ಪರವಶತೆಯನ್ನುಹೊಂದಿ ಸಂಯೋಗದಿಂದ ಏಕೀಭಾ

$ ಗೀತಗೋವಿಂದ ಸ. ೧ ಶ್ಲೋ ೧೮

ವನ್ನು ಹೊಂದುವುದಾದುದರಿಂದ ಇಂತಹವರ್ಣನವು ಸಾಧುವೆಂದೂ, ಅದೇಶೃಂಗಾರವೆಂದೂ, ಶೃಂಗಾರರಸಾಂತ್ಯದ ಪರಿಣಾಮವೇ ಭಕ್ತಿಯೆಂದೂ ಸಾಧುಸಂತರಮತವಿರುವುದು. ಇಂತಹ ಲೀಲಾವಿನೋದಗಳನ್ನು ಮಾನವಜಾಗೃತಿಗೊಸುಗ ಪ್ರಿಯವಸ್ತುವಾದ ಪರಮಾತ್ಮನಲ್ಲಿ ಕಲ್ಪಿಸಿವರ್ಣಿಸಿರುವುದರ ಹೊರ್ತು ನಿತ್ಯಕಾಮನೂ ಶೃಂಗಾರಮೂರ್ತಿಯೂದ ಆ ಅನಾದಿಪುರುಷನಿಗೆ ಇಂತಹ ಹೇಯದೇಹಸಂಬಂಧಂಗಳಾಗಲಿ, ರಾಗಾದಿಗಳಾಗಲಿ, ಯಾವುವೂ ಇರುವುದಿಲ್ಲ. ಪರಮಾತ್ಮನರೂಪವು ಶುದ್ಧ ಸತ್ವಮಯವೆಂದರಿತ ಭಾಗವತೋತ್ತಮನಾದ ಜಯದೇವನು ಶೃಂಗಾರರಸವು ಪ್ರಧಾನವಾದುದೆಂದೂ, ಅದುಪರಿಶುದ್ಧವಾದುದೆಂದೂ, ಭಕ್ತಿಯಮೂಲವೆಂದೂ, ಪರಿಚರ್ಯೆಯ ಸಾಧನವೆಂದೂ, ಭಾಗವತಸಂಪ್ರದಾಯಭಿತ್ತಿಯ ತಳಹದಿಯೆಂದೂ, ಅಜ್ಞಾನಸೂಚಕಗಳಾದ ದೇಹಸಂಬಂಧಂಗಳಿಲ್ಲದಿರುವಾಗ ರಾಗಾದಿಗಳಿಗೆ ಅವಕಾಶವೆ ಇಲ್ಲವೆಂದೂ, ಇಂತಹ ಕ್ಷುಲ್ಲಕ ವಿಷಯೋಪಭೋಗಗಳು ಲೌಕಿಕಗಳೆಂದೂ, ನಶ್ವರವೆಂದೂ, ತಿಳಿದವನಾಗಿ ವಿಷಯಿಜನರಿಗೆ 'ಕಂಟಕೆನ್ಯೆವಕಂಟಕಂ' ಎಂದರೆ ಮುಳ್ಳಿಸಿಂದಲೇ ಮುಳ್ಳನ್ನು ತೆಗೆವಂತೆ ಈ ರೀತಿವರ್ಣನವನ್ನುಮಾಡಿ ಭಕ್ತಿಸಾಧನವನ್ನು ಮಾಡಿಕೊಡಲು ಯೋಚಿಸಿ ತನ್ನ ಗ್ರಂಥದಲ್ಲಿ ಮೊದಲು ವಶಾತ್ತಾರಸ್ತುತಿಯಿಂದ ಪರಮಾತ್ಮನನ್ನು ಕೊಂಡಾಡಿರುವುದರಿಂದ ಇಂತಹ ಚರಿತವು ಪರಮಪಾವನವೆಂದೂ, ಮೋಕ್ಷಸಾಧನವೆಂದೂ, ಜನರಚಿತ್ತಾಕರ್ಷಣಮಾಡಿ ಭಕ್ತಿಯನ್ನು ಹುಟ್ಟಿಸುವ ಸಾಧನವಾಗುವುದೆಂದೆ ಈ ಬಗೆಯ ಗ್ರಂಥವನ್ನು ಬರೆದಿರುವನಾಗಿ ಹೇಳಬೇಕಾಗುವುದು. ಗೀತಗೋವಿಂದವು ಒಟ್ಟಿನಲ್ಲಿ ಜೀವಾತ್ಮಪರಮಾತ್ಮೈಕ್ಯತೆಯನ್ನು ನಿರೂಪಿಸುವಗ್ರಂಥ ರಾಧೆಯೇ ಜೀವಾತ್ಮನೆಂದೂ ಕೃಷ್ಣನೇ ಪರಮಾತ್ಮನೆಂದೂ ಹೇಳಿ ಭವಚಕ್ರವಲ್ಲಿ ಕರ್ಮಪರಿವಾಕಕಕ್ಕಾಗಿ ಓಲಾಡುವ ಜೀವನು ಭವಚಕ್ರದಲ್ಲಿ ಸುತ್ತಿ ಸುತ್ತಿ ಸಾಕಾಗಿ ಪರಮಾತ್ಮನೊಡನೆ ನೆರಲಾತಿಸಿ ವಿಧವಿಧರೂಪದಿಂದ ಅನುವರ್ತಿಸುವ ಬಗೆಯನ್ನುಹೇಳಿ ಕೊನೆಗಾಣಿಸಿರುವನು.

ವಿವಾಹ ಕರ್ಮಾಂಗವಾದ 'ಸಪ್ತಪದಿಯೆಂಬದು' ಗರ್ಭಾದಾನದವರೆಗಿನ ಎಲ್ಲೆಯೆಂದೂ, ಗೃಹಸ್ಥನಾದ ಅನಂತರವೇ ಬರುವುದಾದ ಪುಂಸ್ತ್ರೀಯೋಗಕ್ಕೆ ಅಷ್ಟಪದಿಯೆಂದೂ ಕರೆದಿರಬಹುದಾಗಿ ಊಹಿಸಲು ಅವಕಾಶವಿದೆ. ವಾನಪ್ರಸ್ಥಾಶ್ರಮವೆನವಪದಿಯೆಂದು ತೋರುವುದರಿಂದ ಗ್ರಂಥಕ್ಕೆ ಕುಂದುಬರುವುದೆಂದು ಯೋಚಿಸಿ ಅಷ್ಟಪದಿಗರ್ಭಿತವಾದ ರಾಧಾಸಮಾಗಮದೊಡನೆ ಪೂರ್ಣಗೊಳಿಸಿದುದಾಗಿ ನಮಗೆ ತೋರುತ್ತದೆ.

ಮಹಾಕವಿಜಯದೇವನು ತನ್ನ ಪಾರ್ಥಿವಶರೀರವನ್ನು ಬಿಟ್ಟು ಎಷ್ಟೋಶತಮಾನಗಳು ಕಳೆದುಹೋಗಿವೆ ! ಆದರೆ ಈ ಹೊತ್ತಿಗೂ ವರ್ಷಕ್ಕೆ ಒಂದಾವರ್ತಿ ಪೌಷ್ಣವರ

ಮೇಳನವು ಕೆಂದುಲಿಯಲ್ಲಿ ಸೇರುವುದು. ಜಯದೇವನ ಸಮಾಧಿಯ ಸುತ್ತಲೂ ೫೦-೬೦ ಸಹಸ್ರಸಂಖ್ಯಾತ ವೈಷ್ಣವರುಸೇರಿ ಪೂಜಿಸುವುದಲ್ಲದೆ ರಾಧಾಕೃಷ್ಣರ ಪ್ರಣಯಲೀಲೆಗಳನ್ನು ಹಾಡಿಹಾಡಿ ನಲಿಯುವರು.

ಜಯದೇವನ ಕಾಲದಲ್ಲಿ ಮಾತನಾಡುವುದು ವಂಗಭಾಷೆಯಾಗಿದ್ದರೂ ಆಗಣ ಪಂಡಿತರು ವಂಶಪಾರಂಪರ್ಯವಾಗಿ ಬಂದ ಸಂಸ್ಕೃತ ಭಾಷೆಯನ್ನು ದೂರ ಮಾಡಲೊಪ್ಪದೆ ಗ್ರಂಥಗಳನ್ನು ಸಂಸ್ಕೃತ ಭಾಷೆಯಲ್ಲಿಯೇ ಬರೆಯುವರಾದರು. ರಾಜಾಸ್ಥಾನಭಾಷೆ, ಗ್ರಂಥಗಳೂ, ಕಥಾನಕಗಳೇ ಮೊದಲಾದುವೆಲ್ಲವೂ ಸಂಸ್ಕೃತ ಭಾಷೆಯಲ್ಲಿಯೇ ಬರೆಯಲ್ಪಟ್ಟುವಾದುವು. ಡಾಂಟೆ (Dante) ಮತ್ತು ಬೊಕೋಷಿಯೋ ಕಾಲದಲ್ಲಿ ಇಟಾಲಿಯನ್ನರು ದೇಶಭಾಷೆಯನ್ನು ಬಿಟ್ಟು ರಾಜಭಾಷೆಯಾದ ಲ್ಯಾಟಿನ್ನಲ್ಲಿ ಗ್ರಂಥಗಳನ್ನು ಬರೆದಂತೆ, ಆಲಫ್ರೆಡಿನ ಕಾಲದಲ್ಲಿ ಆಂಗ್ಲೋ ಸ್ಯಾಕ್ಸೋನಿಯರು ರೋಮಭಾಷೆಯಲ್ಲಿ ಬರೆಯಲನುವಾದಂತೆ. ವಂಗೀಯರು ದೇಶಭಾಷೆಯಲ್ಲಿ ಬರೆಯುವುದನ್ನು ಬಿಟ್ಟು ಸಂಸ್ಕೃತ ಭಾಷೆಯಲ್ಲಿ ಬರೆಯಲನುವಾದರು. ಹೀಗೆ ಕ್ರಿ. ಶ. ೧೩ನೆಯ ಶತಮಾನದಲ್ಲಿ ಬರೆಯಲ್ಪಟ್ಟುವಾದ ಸಂಸ್ಕೃತಗ್ರಂಥಗಳನೇಕಗಳು ನಾಶವಾಗಿ ಹೋಗಿಯೋ, ಮರೆಯಲ್ಪಟ್ಟು ಹೋಗಿಯೋ ಹೇಗೋ ಇಲ್ಲದಂತಾಗಿ ಜಯದೇವನ ಗೀತಗೋವಿಂದವು ಮಾತ್ರ ಆದರ್ಶರೂಪದಿಂದುಳಿದುಕೊಂಡು ಲೋಕವನ್ನು ಅಚ್ಚರಿಗೊಳಿಸುತ್ತಿರುವುದು. ಇದರಂತೆಯೇ ಬರೆಯಲ್ಪಟ್ಟಿರುವ ಭಾನುದತ್ತವಿರಚಿತ 'ಗೀತಗೌರೀಪತಿ' ಕಾವ್ಯವೂ, ಕೃಷ್ಣದತ್ತವಿರಚಿತ 'ಗೀತ ಗೋಪೀಪತಿ ಕಾವ್ಯವೂ, ಪ್ರಕೃತ ದೊರೆತಿರುವುವು. ಇವೆರಡೂ ಜಯದೇವನಿಗಿಂತ ಈಚಿನವು. ಹೇಗಾದರೂ ಇರಲಿ! ಗೀತಗೋವಿಂದವು ಮಹಾ ಗ್ರಂಥವೆಂದೂ ಅದರಲ್ಲಿನ ವಿಷಯಗಳು ಕೇವಲ ಅರ್ಥಾಂತರಗಳಾಗಿ ದುರೂಹವಾದುವುಗಳೆಂದೂ ರಾಧೆಯನ್ನು Love-lorn Maid ಎಂಬುದಕ್ಕಿಂತ Love-born Maid ಎಂದು ಕರೆವುದು ಸಯುಕ್ತಿಕವೆಂದೂ ಹೇಳಬೇಕಾಗುವುದು.

ಪರ್ಷಿಯನ್ನರು ಕರೆಯುವ 'ಸುಫಿಯಿಸಂ' ಎಂಬುದನ್ನು ಭಾಗವತ ಸಂಪ್ರದಾಯಕ್ಕೆ ಕೆಲವುಮಟ್ಟಿಗೆ ಸ್ಥೂಲಮಾನದಿಂದ ಹೋಲಿಸಬಹುದಾಗಿದೆ. ಕೊಂಚ ಹೆಚ್ಚುಕಡಿಮೆ ಈ ಎರಡರ ತತ್ವಗಳೂ ಒಂದೇ ತೋರುವುದಾಗಿದೆ. ಪರ್ಷಿಯನ್ನರ ಮಹಾಕವಿಗಳಲ್ಲಿ ಪ್ರಸಿದ್ಧರಾದ ಜಲಾಲುದ್ದೀ ಜಾಮಿ, ಜಲಾಲುದ್ದೀ ರೂಮಿ, ಷೇಕಸಾದಿ ಮೊದಲಾದ ಕವಿತಿಲಕರನ್ನು 'ಪ್ರಕೃತಿ ನಿಗೂಢತತ್ವಜ್ಞ' (Mystic-Poets) ರೆಂದು ಕರೆಯುವಂತೆ‡ ಜಯದೇವ ಕವಿಯನ್ನು ವಂಗದೇಶದ ಪ್ರಕೃತಿ

‡ History of Persian Literature in Kannada by M. N. Srinivasa Iyengar Sanskrit Kavicharite Officie B. City.

ನಿಗೂಢತತ್ವಜ್ಞ (Mystic-Poet) ನೆಂದುಕರೆದರೆ ತಪ್ಪಾಗದು. ಸುಫಿಯಿಸಮಿನ ಮುಖ್ಯ ತತ್ವವನ್ನು ಹೀಗೆಂದು ಹೆಳಬಹುದು: —

1. The Key note of Suffisim is the union, the identification of God and Man.
2. The Tavern is the place of instruction or worship.
3. The Tavern Keeper—Teacher or Priest.
4. Wine—Divine Knowledge.
5. Idol (Eyedol, Ideal)—God.
6. Beauty—Divine perfection
7. Shining Locks—Expansion of His Glory.
8. Youth—The Mistress.
9. Down to the cheek—denotes the cloud of spirits.
10. Black mole—the point of indivisible unity.

ಈ ಕಾವ್ಯಕ್ಕೆ ಹಲವರು ವ್ಯಾಖ್ಯಾನಕಾರರಿರುವರಾದರೂ ಪ್ರಕೃತ 'ರಸಿಕ ಪ್ರಿಯಾ', 'ರಸಮಂಜರಿ' ಎಂಬ ವ್ಯಾಖ್ಯಾನಗಳೂ, ಕನ್ನಡಲಿಪಿಯ 'ರಸಿಕರಂಜಿನಿ' ಎಂಬ ವ್ಯಾಖ್ಯಾನವೂ ದೊರೆಯುವುದು. ಇದಲ್ಲದೆ ಆಂಧ್ರದೇಶದಲ್ಲಿ ಪ್ರಸಿದ್ಧನಾದ ತಿರುಮಲರಾಯನು 'ಶ್ರುತಿರಂಜನಿ' ಎಂಬೊಂದು ವ್ಯಾಖ್ಯಾನವನ್ನು ಬರೆದಿರುವನು.

ಕ್ರಿ. ಶ. ೧೪ನೆಯ ಶತಮಾನದಲ್ಲಿ ವಂಗದೇಶದಲ್ಲಿ ಪ್ರಸಿದ್ಧಪಂಡಿತನಾಗಿದ್ದ ವಿಶ್ವನಾಥ ಕವಿರಾಜನು ತಾನು ಬರೆದಿರುವ 'ಸಾಹಿತ್ಯದರ್ಪಣ' ಎಂಬ ಲಕ್ಷಣ

ಸುರಾಹರೇ ಗರ್ಹಣಪ್ರೋಕ್ತಾ
ತೇ ಸುರ್ಹಿಮಮಚಿಂತನಂ
ಸುರಾಪಾನಮಿತಿಪ್ರೋಕ್ತಂ
ತಸ್ಮಾತ್ತಂಪರಿವರ್ಜಯೇತ್ ॥

| ಪಾಶ್ಚಾತ್ಯರು ಕರೆಯುವ Idol ಎಂಬ ಪದಕ್ಕೆ ಬದಲು Eyedol or Ideal ಎಂಬ ಪ್ರತಿಸೃಷ್ಟಿಪದವು ಇರುವುದಾದರೆ ಯೋಗ್ಯವೆಂದು ನಮಗೆ ತೋರುವುದು.

ಗ್ರಂಥದಲ್ಲಿ ದಶಮಪರಿಚ್ಛೇದದಲ್ಲಿ ವ್ಯತ್ಯನುಪ್ರಾಸಾಲಂಕಾರಕ್ಕೆ ಈ ಗೀತಗೋವಿಂದಕಾವ್ಯದಲ್ಲಿನ "ಉನ್ಮೀಲನ್ಮಧುಗಂಧ ಲುಬ್ಧಮಧುಪವ್ಯಾಧೂತ ಚೂತಾಂಕುರ ....."$ ಎಂಬ ಶ್ಲೋಕವನ್ನು ದಾಹರಿಸಿಕೊಂಡಿರುವುದರಿಂದ ಆಗಣ್ಯ ಪಂಡಿತ ರಿಗೆ ಜಯದೇವನ ಕವಿತ್ವದಲ್ಲಿ ಎಂತಹ ಆದರವಿದ್ದಿತೆಂಬುದು ಸ್ಪಷ್ಟವಾಗುತ್ತದೆ.

ಜಯದೇವಕವಿಯದೆಂದು ಹೇಳುವ 'ಗಂಗಾಸ್ತವ' ಎಂಬ ಪ್ರಬಂಧವು ದೊರೆಯುತ್ತದೆ. ಇದರಲ್ಲಿ ಏಳು ಶ್ಲೋಕಗಳಿದ್ದು ಕೊನೆಯಲ್ಲಿ "ಇತಿ ರಾಮಲಕ್ಷ್ಮಣಾ ಕೌಶಿಕಾನುಜ್ಞಯಾಸುರ ಸರಿತ್ಕೃತನಮಸ್ಕಾರಂ ಭಣಂತಮಿಹಸಾದರಂ ಧೀರಜಯದೇವಕವಿಮುತ್ತಾರಯಸಿ ಭವಜಲಧಿಪಾರಂ" ಎಂದು ಹೇಳಿರುವುದರಿಂದ ಗೀತಗೋವಿಂದಕಾರನೂ ಇವನೂ ಭಿನ್ನರೆಂಬುದು ನಿಶ್ಚಯವಾಗುತ್ತದೆ. ಗೀತಗೋವಿಂದದ ಚತುರ್ಥಾಷ್ಟಪದಿಯು ಹೀಗಿರುವುದು.

ಚಂದನಚರ್ಚಿತನೀಲಕಲೇಬರಪೀತವಸನವನಮಾಲೀ
ಕೇಳಿಚಲನ್ಮಣಿಕುಂಡಲಮಂಡಿತಗಂಡಯುಗಸ್ಮಿತಶಾಲೀ॥
ಹರಿರಿಹ ಮುಗ್ಧವಧೂನಿಕರೇ ವಿಲಾಸಿನಿ ವಿಲಸತಿ ಕೇಲಿಪರೇ॥ ಧ್ರುವಂ ॥
ಪೀನಪಯೋಧರಭಾರಭರೇಣ ಹರಿಂ ಪರಿರಭ್ಯ ಸರಾಗಂ
ಗೋಪವಧೂರನುಗಾಯತಿ ಕಾಚಿದುದಂಚಿತ ಪಂಚಮರಾಗಂ ॥
ಕಾಪಿವಿಲಾಸವಿಲೋಲವಿಲೋಚನಖೇಲನಜನಿತಮನೋಜಂ
ಧ್ಯಾಯತಿ ಮುಗ್ಧವಧೂ ರಧಿಕಂ ಮಧುಸೂದನವದನಸರೋಜಂ ॥
ಕಾಪಿ ಕಪೋಲತಲೇ ವಿನಿವೇಶಿತ ನಿಜಮಪಿ ಕೃತಿಮೂಲೇ
ಕಾಮಪಿ ಚುಚುಂಬ ನಿತಂಬವತೀ ದಯಿತಂ ಪುಲಕೈರನುಕೂಲೇ ॥
ಕೇಳಿ ಕಲಾಕುತುಕೇನ ಚ ಕಾಚಿದಮುಂ ಯಮುನಾಜಲಕೂಲೇ
ಮಂಜುಲವಂಜುಲಕುಂಜಗತಂ ವಿಚಿಕರ್ಷ ಕರೇಣ ದುಕೂಲೇ ॥
ಶ್ಲಿಷ್ಯತಿ ಕಾಮಪಿ ಚುಂಬತಿ ಕಾಮಪಿ ಕಾಮಪಿ ರಮಯತಿ ರಾಮಾಂ
ಪಶ್ಯತಿ ಸಸ್ಮಿತ ಚಾರುತರಾಮಪರಾಮನುಗಚ್ಛತಿ ವಾಮಾಂ ॥
ಶ್ರೀ ಜಯದೇವ ಭಣಿತಮಿದ ಮದ್ಭುತಕೇಶವಕೇಳಿ ರಹಸ್ಯಂ
ವೃಂದಾವನವಿಪಿನೇ ಲಲಿತಂ ವಿತನೋತು ಶುಭಾನಿ ಯಶಸ್ಯಂ ॥

ಗೆಳತಿಯನ್ನು ಕುರಿತು ಹೇಳುವ ರಾಧೆಯ ಉಕ್ತಿಯು ಹೀಗಿರುವುದು : --

ಗಣಯತಿ ಗುಣಗ್ರಾಮಂ ಭ್ರಮಾದಪಿ ನಿಸ್ಪೃಹೇ
ವಸತಿ ಚ ಪುರೋಭಾಗೇ ದೋಷಂ ವಿಮುಂಚತಿ ಮೂರ್ಖತೇ
ಯುವತಿಷು ವಲತ್ಯಷ್ಟೇಕೃಷ್ಣೇವಿಹಾಯಿನಿ ಮಾಂ ವಿನಾ
ಪುನರಪಿಮುನೋನಾಮಂಕಾ ಮಂಕರೋತಿಕರೋಮಿಕಿಂ॥ ಸೀ ಸೋ ೨-೧೩

$ ಗೀತಗೋವಿಂದ ಸ. ೧ ಶ್ಲೋಕ ೧೧.

ಎಲೆ! ಕೆಳದಿ! ಆ.....ಗೋಪತರುಣಿಯರಲ್ಲಿ ಹೆಚ್ಚಾದ ಆಸೆಯನ್ನು ಇಟ್ಟುಕೊಂಡು ನನ್ನನ್ನು ತ್ಯಾಗಮಾಡಿ ಅವರಲ್ಲಿಯೇ ಅನುರಕ್ತನಾಗಿರುವ ನಾದರೂ ಈ ವಕ್ರ ಅಥವಾ ಚಪಲವಾದ ನನ್ನ ಮನಸ್ಸು ಆ ಪರಮಪುರುಷ ನಾದ ಶ್ರೀಕೃಷ್ಣನ ಸದ್ಗುಣ ಚಮುಖಿನಲ್ಲಿಯೇ ಎರಕಗೊಂಡಿರುವುದಾದುದರಿಂದ ಕೊಂಚಹೊತ್ತು ಭ್ರಾಂತಳಾಗಿಯಾದರೂ ಅವನನ್ನು ಬಿಟ್ಟಿರಲು ಒಪ್ಪುವು ದಿಲ್ಲ. ಕೋಪದಿಂದ ಅವನನ್ನು ದೂರಂಕರಿಸಲೆತ್ನಿಸಿದರೂ ಒಡಂಬಡದ ಹಾಯ್! ಈ ಚಿಂತನವು ಮತ್ತೂ ಮತ್ತೂ ಅವನನ್ನೇ ಆಲಿಸುತ್ತಿರುವದಲ್ಲಾ! ನಾನೇನು ತಾನೇಮಾಡಲಿ.

ದೂರಾಲೋಕಸ್ತೋಕ ಸ್ತಬಕನವಕಾಲೋಕಲತಿಕಾ
ವಿಕಾಸಃ ಕಾಸಾರೋಪವನಸವನೋಪಿ ವ್ಯಥಯತಿ
ಅಪಿ ಭ್ರಾಮ್ಯದ್ಭೃಂಗೀರವನಿಭರಮೀಯಾ ಸ ಮುಕುಲ
ಪ್ರಸೂತಿಶ್ಚೂತಾನಾಂ ಸಖಿ ಶಿಖಿರಣೀಯಂ ಸುಖಯತಿ ॥ ೨—೧೧

ಎಲೆ! ಕೆಳದಿ! ನೋಡಲಶಕ್ಯವಾದ ಘನಗೋಂಚಲುಗಳ ಭಾರದಿಂದ ಬಗ್ಗಿ ಸಲ್ಪಟ್ಟುದಾಗಿರುವ ಈ ಅಶೋಕವೃಕ್ಷಗಳ ಸೊಗ್ಗುಗಳ ಅರಳುವಿಕೆಯಾಗಲಿ, ಈ ಸರಸ್ಸಿನ ಉಪವನದ ತಂಗಾಳಿಯಾಗಲಿ, ಅಲ್ಲಲ್ಲಿ ಹಾರಾಡುತ್ತಿರುವ ಹೆಣ್ಣುದುಂಬಿ ಗಳ ಸೊರೆತ ಅಥವಾ ಝೇಂಕಾರದಿಂದ ಕೂಡಿದ ಮನೋಹರವಾದ ಶಿಖರವನ್ನುಳ್ಳ ಆಮಾಮರದ ಮೊಗ್ಗೆಗಳಾಗಲಿ ಶ್ರೀಕೃಷ್ಣನನ್ನಗಲಿರುವ ನನಗೆ ಯಾವುದೂ ಸಂತೋ ಷಕರವಾಗಿರುವುದಿಲ್ಲ.

ಶ್ರೀಕೃಷ್ಣನ ಆಗಮನವಿಳಂಬನವನ್ನು ಕುರಿತು ರಾಧೆಯು ತನ್ನೊಳುತಾನು ಆಲೋಚಿಸುವಿಕೆ.—

ತತ್ಕಿಂ ಕಾಮಪಿ ಕಾಮಿನೀಮಭಿಸೃತಃ ಕಿಂವಾ ಕಲಾಕೇಳಿಭಿ
ರ್ಬದ್ಧೋಬಂಧುಭಿರಂಧಕಾರಿಣಿ ವನಾಭ್ಯರ್ಣೇ ಕಿಮುದ್ಯಾಮ್ಯತಿ
ಕಾಂತಃ ಕ್ಲಾಂತಮನಾ ಮನಾಗಪಿ ಪಥಿ ಪ್ರಸ್ಥಾತುಮೇವಾಕ್ಷಮ
ಸ್ಸಂಕೇತೀಕೃತಮಂಜುವಂಜುಲಲತಾ ಕುಂಜೇಽಪಿ ಯನ್ನಾಗತಃ ॥

ಸಂಕೇತಸ್ಥಳವಾದ ಈ ಪಗಡೆಯಗಿಡದ ಲತಾಕುಂಜಕ್ಕೆ ಶ್ರೀಕೃಷ್ಣನು ಇನ್ನೂ ಏಕೆ ಬಂದಿರುವುದಿಲ್ಲ? ಬರುವಾಗ ದಾರಿಯಲ್ಲಿ ನನಗಿಂತಲೂ ಸೊಗಸುಗಾರ್ತಿ ಯಾಗಿ ಸಿಕ್ಕಿದ ಯಾರಾದರೂ ವಿಲಾಸಿನಿಯೊರ್ವಳನ್ನು ಓಂಬಾಲಿಸಿರುವನೇ! ಅಥವಾ ಬಂಧುವರ್ಗದವರಿಂದಾಗಲಿ ಅಥವಾ ಯಾವುದಾನರೊಂದು ವಿಲಾಸಗ ಳಿಂದ ಅಡ್ಡಿಪಡಿಸಲ್ಪಟ್ಟಿರುವನೇ! ಹೇಗೆ! ಅಥವಾ ಈ ಕತ್ತಲೆಯಲ್ಲಿ ಲತಾಕುಂ

ಜವು ದೊರೆಯದೆ ಈ ಅರಣ್ಯಸಮೀಪದಲ್ಲಿ ಎಲ್ಲಿಯಾದರೂ ತಿರುಗುತ್ತಿರುವನೇ! ಅಥವಾ ಕ್ಲಾಂತಮನಸ್ಕನಾದ ಶ್ರೀಕೃಷ್ಣನು ಈಗ ಅಲ್ಲಿಗೆ ಹೋಗುವವರಾರೆಂಬ ತಾತ್ಸಾರದಿಂದ ಹೊರಟಿರುವುದಿಲ್ಲವೋ ಏನೋ.
ರಾಧೆಯು ಪವನನನ್ನುದ್ದೇಶಿಸಿ, ಹೇಳುವುದು: —

ಮನೋಭವಾನಂದನ ಚಂದನಾನಿಲ
ಪ್ರಸೀದ ರೇದಕ್ಷಿಣ ಮುಂಚ ವಾಮತಾಂ
ಕ್ಷಣಂಜಗತ್ಪ್ರಾಣಸಧಾಯ ಮಾಧವಂ
ಪುರೋ ಮಮಪ್ರಾಣಹರೋಭವಿಷ್ಯಸಿ ॥ ೭—೭

ಮನೋಭವನ (ಮನ್ಮಥನ) ನ್ನು ಸಂತೋಷಗೊಳಿಸುವ ದಕ್ಷಿಣಜಾತನಾದ ಎಲೈ! ಮಲಯಮಾರುತನೇ! ನೀನು ವಿರಹದುಃಖಿಯಾದ ನನ್ನಲ್ಲಿ ಪ್ರಸಾದನಾಗು. ವಕ್ರತ್ವವನ್ನು ಬಿಡು. ಎಲೆ! ಜಗತ್ಪ್ರಾಣಸಮೀರಣ! ಶ್ರೀಕೃಷ್ಣನ ವಿರಹತಾಪದಿಂದ ಪ್ರಾಣಾವಸಾನವನ್ನೆಸುರು ನೋಡುತ್ತಿರುವ ನನ್ನಮುಂದೆ, ಕ್ಷಣಕಾಲ ಆ ಮಾಧವನನ್ನು ಕರೆದುಕೊಂಡು ಬಂದುಸಿಲ್ಲಿಸಿ ಅನಂತರ ಈ ನನ್ನ ಪ್ರಾಣಗಳನ್ನು ಅವಹರಿಸಿಕೊಂಡು ಹೋಗುವನಾಗುವೆ.

ಯೋಗ ಮತ್ತು ಭಕ್ತಿಯ ಪರಿಣಾಮ: -

ಕಂಸಾರಿರಪಿ ಸಂಸಾರವಾಸನಾಬದ್ಧಕೀಲಾಲ
ರಾಧಾಮಾದಾಯ ಹೃದಯೇ ತತ್ಯಾಜಜನ್ಯಸುಂದರೀಃ ॥

ಕಂಸಾರಾತಿಯಾದ ಶ್ರೀಕೃಷ್ಣನು ಗೋಪಸುಂದರಿಯರೆಲ್ಲರನ್ನಪಕ್ಷಿಸಿಕೊಂಡು ಸಂಸಾರವೆಂಬ ವಾಸನೆಯಿಂದ ಕಟ್ಟಲ್ಪಟ್ಟಿ ನವಪಣಿಯುಳ್ಳ ರಾಧೆಯನ್ನು ತನ್ನ ಹೃದಯದೊಳಿಟ್ಟುಕೊಂಡವನಾದನು

ಧೋಯೀ

ಇವನನ್ನು ಧೋಯೀ ಎಂದೂ ಪುಂಡರೀಕಾಕ್ಷಸೇನನಮಗ ದುಹಿಸೇನ† ಎಂದೂ ಧೂಯಿಸೇನನೆಂದೂ‡ ಕರೆಯುವರು. ಇದಲ್ಲದೆ ಹಸ್ತಲಿಖಿತ ಪ್ರತಿಗಳಲ್ಲೇ ಕಗಳಲ್ಲಿ 'ಧೂಯೀ'ಎಂದೂ ಧೋಯಿಕನೆಂದೂ ಹೇಳಲ್ಪಟ್ಟಿದೆ. ಇವನುಬ್ರಾಹ್ಮಣ

---

* 'ಧೋಯೀ' ಕವಿಕ್ಷ್ಮಾಪತಿಃ (ಗೀತಗೋವಿಂದ ಶ್ಲೋ)

| ಪುಂಡರೀಕಾಕ್ಷಸೇನಸ್ಯ ದುಹಿಸೇನಃ ಸುತೋಭವತ್. ಪವನದೂತ ಮುನ್ನುಡಿ ಪುಟ ೫)

† ಸುಧಾಂಶೋರತ್ಕೀರಿವ ಪುಂಡರೀಕ ಸೇನಾತ್ತಸೂಜೋಽಜನಿಧೂಯಿಸೇನಃ

‡ Pishel Die Hoflichiter Das Lakshmana Sena P. 33
ಸದುಕ್ತಿಕರ್ಣಾಮೃತ, ಪವನದೂತ ಶ್ಲೋ ೧೨೧.

ನೆಂದು ಕೆಲವರೂ, ವಂಗೀಯವೈದ್ಯಕುಲಸಂಜಾತನೆಂದು ಕೆಲವರೂ ಹೇಳುವರು. ಮಹಾಮಹೋಪಾಧ್ಯಾಯ ಪಂಡಿತ ಹರಪ್ರಸಾದಶಾಸ್ತ್ರಿಗಳು ಇವನನ್ನು ಕಾಶ್ಯಪ ಗೋತ್ರದ ಪಾಲಧಿಗಣಿಗೆ ಸೇರಿದರಾಢೀಯಬ್ರಾಹ್ಮಣನೆಂದು ಹೇಳುವರು. ಇವನು ವೈದ್ಯಕುಲಜಾತನೆನ್ನುವದಕ್ಕೆ ಬಂಗಾಳದ ವೈದ್ಯವಂಶಾವಳಿಯಲ್ಲಿ ಕಂಡುಬರುವ ದುಹಿಸೇನ ಅಥವಾ ಧೂಯಿಸೇನ ಎಂಬುದು ಕಾರಣವಾಗಿರಬಹುದಾಗಿ ತೋರುತ್ತದೆ. ಆದರೆ ವಂಗದೇಶದ ವೈದ್ಯರು ಕವಿರಾಜರೆಂದು ಈಗ ಪ್ರಸಿದ್ಧರಾಗಿರುವಂತೆ ಆಗಲೂ ಇದ್ದಿರಬಹುದಾಗಿ ಭಾವಿಸಿ 'ಕವಿರಾಜ' ಶಬ್ದಕ್ಕೆ ವೈದ್ಯನೆಂಬ ಅರ್ಥವನ್ನು ಕಲ್ಪಿಸಿ ಧೋಯೀಕವಿಯನ್ನು ವೈದ್ಯವಂಶೀಯನೆಂದು ಹೇಳುವುದು ಸಾಧುವಾಗಿ ತೋರುವುದಿಲ್ಲ. ಏಕೆಂದರೆ ಇವನ ಸಮಕಾಲೀನನಾದ ಜಯದೇವನು "ಧೋಯೀ ಕವಿಕ್ಷ್ಮಾಪತಿಃ" ಅಥವಾ ಧೋಯೀಕವಿರಾಜನೆಂದೇ ಅರ್ಥಮಾಡಿರುವನು. ಇವನ ದಾಗಿ ಪ್ರಕೃತದೊರೆತಿರುವ'ಪವನದೂತಕಾವ್ಯ'ದಲ್ಲಿ ದೊರೆಯದ ಅನೇಕಶ್ಲೋಕಗಳು ಇತರ ಸುಭಾಷಿತಾವಳಿಗಳಲ್ಲ (anthologies) ಕಂಡುಬರುವುದರಿಂದ ಮತ್ತಾವುದಾದರೂ ಹೆಚ್ಚಿನ ಗ್ರಂಥಗಳನ್ನು ಬರೆದಿರಬಹುದೋ ಏನೋ ಎಂಬಶಂಕೆಯುಂಟಾಗುತ್ತದೆ. ಗ್ರಂಥವಾವುದೆಂಬುದು ತಿಳಿಯದೆ ಗ್ರಂಥವು ಅನುಪಲಬ್ಧವಾಗಿರುವುದರಿಂದ ಇತ್ಯರ್ಥಮಾಡಿ ಹೇಳಲಾಗದಾಗಿದೆ. ಇವನದೆಂದುಹೇಳುವ ಸುಮಾರು ಇಪ್ಪತ್ತು ಶ್ಲೋಕಗಳು ಒಂದೇಕಡೆ ಜೋಡಣೆಯಾಗಿವೆ.

ಕಾಲ:—ಇವನು ಲಕ್ಷ್ಮಣಸೇನನ ಸಭಾಪಂಡಿತರಲ್ಲಿ ಒಬ್ಬನಾಗಿದ್ದುದರಿಂದಲೂ, ಲಕ್ಷ್ಮಣಸೇನನ ಕಾಲವು ಕ್ರಿ. ಶ. ೧೨ನೆಯ ಶತಮಾನವೆಂದು ಸ್ಪಷ್ಟವಾಗಿರುವುದರಿಂದ ಇವನೂ ಕ್ರಿ. ಶ. ೧೨ನೆಯ ಶತಮಾನದಲ್ಲಿದ್ದವನೆಂದು ಹೇಳಲೆಬೇಕಾಗಿದೆ.

ವಂಗರಾಜನಾದ ಲಕ್ಷ್ಮಣಸೇನನ ಆಸ್ಥಾನಪಂಡಿತರುಗಳಲ್ಲಿ ಪ್ರಕೃತವಿಷಯಕನಾದ ಧೋಯೀಕವಿಯೂಸೇರಿ ಐದುಜನರು ಹೇಳಲ್ಪಟ್ಟಿದ್ದಾರೆ. ಅವರೆ ಸನಾತನ ಗೋಸ್ವಾಮಿಯು (೧) ಗೋವರ್ಧನ (೨) ಶರಣ (೩) ಜಯದೇವ (೪) ಉಮಾಪತಿಧರ (೫) ಶ್ರುತಿಧರ ಎಂದೂ.

"ಗೋವರ್ಧನಶ್ಚ ಶರಣೋಜಯದೇವ ಉಮಾಪತಿಃ
ಕವಿರಾಜಶ್ಚ ರತ್ನಾನಿ ಸಮಿತಿ[1]ಲಕ್ಷ್ಮಣಸ್ಯಚ"

ಎಂದುಹೇಳಿರುವನು.

---

೪ ಬಭೂವವೀಚೀ ಸ ಚ ಶಕ್ತಿವಂಶೇ
ನವಿದ್ಯವಿದ್ಯಾಕುಲ ಸಂಪದಾಢ್ಯಃ॥ ಚಂದ್ರಪ್ರಭಾ, ಪುಟ ೨೧೩

೫ J. A S B. 1906 P P. 18 FF

೬ ಗೀತಗೋವಿಂದ ೧.೪

ಮೆ|| ಚಿಂತಾಹರಣ ಚಕ್ರವರ್ತಿಯವರು ಶ್ರುತಿಧರನೆಂಬವನು ಬೇರೆಕವಿಯಲ್ಲ ನೆಂದೂ ಅದು ಧೋಯಿಕವಿಯ ಹೆಸರಿನ ವಿಶೇಷಣವೆಂದೂ ಗೀತಗೋವಿಂದದ ವ್ಯಾಖ್ಯಾನದಲ್ಲಿ ರಸಮಂಜರೀಕಾರನು ಹಾಗೆ ಹೇಳಿರುವನೆಂದೂ, ಸದುಕ್ತಿಕರ್ಣಾಮೃತದಲ್ಲಿ:—

ಖ್ಯಾತೋ ಯಶ್ಚ ಶ್ರುತಿಧರತಯಾವಿಕ್ರಮಾದಿತ್ಯಗೋಷ್ಠೀ
ವಿದ್ಯಾಭರ್ತುಃ ಖಲು ವರರುಚೇರಾಸನಾದಪ್ರತಿಷ್ಠಾಂ ॥

ಎಂದು ಶ್ರುತಿಧರನ ಹೆಸರು ಧೋಯಿಕವಿಗೆ ವಿಶೇಷಿಸಿ ಹೇಳಲ್ಪಟ್ಟಿರುವುದೆಂದೂ ಈ ಕಾರಣಗಳಿಂದ ಶ್ರುತಿಧರನುಬೇರೊಬ್ಬ ಕವಿಯೆಂದು ಹೇಳುವುದು ಸಾಧುವಲ್ಲವೆಂದೂ ಹೇಳಿರುವರು. *

ಆದರೆ ಲಕ್ಷ್ಮಣಸೇನನ ಆಶ್ರಯದಲ್ಲಿ ಶ್ರುತಿಧರನೆಂಬ ಒಬ್ಬ ಕವಿಯು ಇದ್ದು ದಾಗಿಯೂ, ಶ್ರುತಿಧರನದೆನ್ನುವ ಕೆಲವು ಶ್ಲೋಕಗಳು ವಲ್ಲಭದೇವನ ಸುಭಾಷಿತಾವಳಿಯಲ್ಲಿಯೂ ಹೇಳಲ್ಪಟ್ಟಿದೆ.

ಈ ಕಾರಣಗಳಿಂದ ಶ್ರುತಿಧರನ ವಿಚಾರವು ಸಂದಿಗ್ಧವಾಗಿದೆ. ಲಕ್ಷ್ಮಣಸೇನನ ಸಭಾಪಂಡಿತರು ಮೊಲೆಹೇಳಿದ ೫ ಜನರಲ್ಲದೆ ಇನ್ನೂ ಅನೇಕ ಕವಿಗಳು ಇದ್ದರಾದರೂ ಅವರಲ್ಲಿ ಈಶಾನ, ಪಶುಪತಿ, ಹಲಾಯುಧರೆಂಬ ಮೂರುಜನ ಸೋದರರು ಮುಖ್ಯರು. ಇವರೆಲ್ಲರೂ ಶಾಸ್ತ್ರಗ್ರಂಥನಿರ್ಮಾಣಕರಾಗಿದ್ದರು †

ಕ್ರಿ. ಶ. ಹತ್ತನೆಯ ಶತಮಾನದಲ್ಲಿದ್ದ ಕವಿರಹಸ್ಯಕಾರ ಹಲಾಯುಧನೊಬ್ಬನಿರುವನು ಈ ಹಲಾಯುಧನು ಕೃಷ್ಣರಾಜನ ಕಾಲದವನೆಂದು ಹೇಳಿಕೊಂಡಿರುವುದರಿಂದ ಮೊಲೆಹೇಳಿದ ಸೋದರರಲ್ಲೊಬ್ಬನಾದ ಹಲಾಯುಧನಿಗೂ ಇವನಿಗೂ ಯಾವಸಂಬಂಧವೂ ಇರದು. ಕಾಲವೂ ಸರಿಹೊಂದದು.

ಗ್ರಂಥ:—ಇವನು "**ಪವನದೂತ**" ಎಂಬ ಕಾವ್ಯ ‡ವನ್ನು ಬರೆದಿರುವನು. ಇದು ಮೇಘದೂತದಂತೆ ಕಲ್ಪಿತವಾದುದು. ಇದರಲ್ಲಿ ೧೦೪ ಶ್ಲೋಕಗಳಿರುವವು.

ರಾಜನಾದ ಲಕ್ಷ್ಮಣಸೇನನು ದಿಗ್ವಿಜಯಾರ್ಥವಾಗಿ ದಕ್ಷಿಣದಿಕ್ಕಿಗೆ ಹೊರಟು ಮಲಯಪರ್ವತದ ಸಾನುಪ್ರದೇಶದಲ್ಲಿಳಿದುಕೊಂಡಿದ್ದನು. ಮಲಯವಾಸಿನಿಯಾದ

* Introduction to Pavana Duta P 6 7.
ವಲ್ಲಭದೇವನ ಸುಭಾಷಿತಾವಳಿ ಪುಟ.
† Introduction to Pavanaduta P. 7
‡ ವಾದಿಚಂದ್ರಕೃತ ಪವನದೂತಕಾವ್ಯವು ಬೇರೆ

'ಕುವಲಯವತಿ' ಎಂಬಗಂಧರ್ವಕನ್ಯೆಯೊರ್ವಳು ಇವನನ್ನುನೋಡಿ ಕಾಮುಸಂತಪ್ತಳಾಗಿ ತನ್ನವನದಳಲನ್ನು ಹೇಳಿಕಳುಹಿಸಲು ಮಾನವರೂ, ಗಂಧರ್ವರಾರೂ ದೊರೆಯದುದರಿಂದ ಆ ಮಾರ್ಗವಾಗಿ ಮಲಯಸನಿವಾರಣನು ಹೋಗುವುದಾಗಿಭಾವಿಸಿ ಅವನೊಡನೆ ಹೇಳಿಕಳುಹಿಸಿದುದಲ್ಲದೆ, ಲಕ್ಷ್ಮಣಸೇನನ ರಾಜಧಾನಿಯಾದ ವಿಜಯಪುರವರ್ಣನವನ್ನುಮಾಡಿ ಸಿಂಹಾಸನಾರೂಢನಾಗಿರುವ ಲಕ್ಷ್ಮಣಸೇನನಿಗೆ ತನ್ನ ಇಂಗಿತವನ್ನು ವಿಜ್ಞಾಪಿಸಿಕೊಂಡಳೆಂಬುದೇ ಕಥಾಸಾರ. ಮೇಘದೂತವನ್ನು ಪೂರ್ವಮೇಘ ಮತ್ತು ಉತ್ತರಮೇಘವೆಂದು ವಿಂಗಡಿಸಿಕೊಳ್ಳುವಂತೆ ಇದನ್ನೂ ಎರಡುಭಾಗವಾಗಿ ವಿಂಗಡಿಸಿ ಮಲಯಪರ್ವತದಿಂದ ವಂಗ (ಬಂಗಾಳ) ದೇಶದವರೆಗೆ ಪವನದೂತದ ಪೂರ್ವಭಾಗವೆಂದೂ, ಅನಂತರ ವಿಜಯಪುರಕ್ಕೆ ಹೋಗಿ ಲಕ್ಷ್ಮಣಸೇನನೊಡನೆ ವಿಜ್ಞಾಪಿಸಿದುದನ್ನು ಉತ್ತರಭಾಗವೆಂದೂ ಕರೆಯಬಹುದಾಗಿದೆ.

ಪವನದೂತಕಾವ್ಯದಲ್ಲಿ ರಾಜನಾದ ಲಕ್ಷ್ಮಣಸೇನನ ದಿಗ್ವಿಜಯ ವಿಚಾರವು ಹೇಳಲ್ಪಟ್ಟಿದೆ. ಇವನು ದಕ್ಷಿಣಕ್ಕೆ ದಂಡೆತ್ತಿ ಮಲಯಪರ್ವತದವರೆಗೂ ಹೋಗಿ, ದಾಕ್ಷಿಣಾತ್ಯ ರಾಜರನ್ನು ಜಯಿಸಿದುದಾಗಿ 'ದಾಕ್ಷಿಣಾತ್ಯಾ ಕ್ಷಿತೀಶಾಃ' ಎಂಬುದರಿಂದ ಗೊತ್ತಾಗುತ್ತದೆ. ಆದರೆ ಬಂಗಾಳದಲ್ಲಾಳಿದ ಸೇನರಾಜರ ಚರಿತಾವಳಿಯಲ್ಲಿ ಲಕ್ಷ್ಮಣಸೇನನ ದಿಗ್ವಿಜಯ ವಿಚಾರವು ಎಲ್ಲಿಯೂ ಹೇಳಿರುವಂತೆ ಕಂಡುಬರುವುದಿಲ್ಲ. ಆದರೂ ಅಲ್ಲಲ್ಲಿ ದೊರೆಯಬಹುದಾದ ತಾಮ್ರ ಶಾಸನಗಳಿಂದ ಲಕ್ಷ್ಮಣಸೇನನು ಎಲ್ಲಿಯವರೆಗೆ ದಂಡೆತ್ತಿಹೋಗಿರಬಹುದೆಂಬುದನ್ನು ಊಹಿಸಬಹುದಾಗಿದೆ.

ಮಾಧೈನಗರದ ತಾಮ್ರಶಾಸನದಲ್ಲಿ ಲಕ್ಷ್ಮಣಸೇನನ ವಿಚಾರವಾದ "ಯಸ್ಯ ಕೌಮಾರಕೇಳೀಃ ಕಲಿಂಗಾಂಗನಾಭಿಃ" ಎಂಬುದರಿಂದ ಇವನು ಕಳಿಂಗರಾಜ್ಯವನ್ನೂ ಮುತ್ತಿದ್ದುದಾಗಿ ತೋರುತ್ತದೆ. ಅದೇ ತಾಮ್ರಶಾಸನದಲ್ಲಿ ಹೇಳಲ್ಪಟ್ಟಿರುವ ಮತ್ತೊಂದು ವಾಕ್ಯವಾದ "ಯೇನಾಸೌಕಾಶಿ ರಾಜಃ ಸಮರಭವಿಜಿತಃ" ಎಂಬುದರಿಂದ ಕಾಶಿಯವರೆಗೂ ದಂಡೆತ್ತಿದುದಾಗಿ ತಿಳಿಯಬರುವುದಲ್ಲದೆ ಕಾಶೀರಾಜನನ್ನು ಗೆದ್ದಂತೆಯೂ ವರ್ಣಿತವಾಗಿದೆ. ಇದಲ್ಲದೆ ಲಕ್ಷ್ಮಣಸೇನನಮಗ ವಿಶ್ವರೂಪಸೇನನು ಕೊಟ್ಟಿರುವ ತಾಮ್ರಶಾಸನದಲ್ಲಿ ಕಂಡುಬರುವಃ—

§ I. A. S. B. N. S. Vol. V. P. 473

* R. D. Banarjis Bangalara Ithihasas P. 325 & Gowda Rajamala P. 66

ವೇಲಾಯಾಂ ದಕ್ಷಿಣಾಬ್ಧೇ ರ್ಮಸಲದರಗದಾ ಪಾಣಿಸಂವಾಸವೇದ್ಯಂ
ಕ್ಷೇತ್ರಂನಿಶ್ಶೇಷರಸ್ಯಸ್ಸುರದಸಿವರಣಾ ಶ್ಲೇಷಗಂಗೋವಿಭಾಜಿ
ತೀರೋತ್ಸಂಗೆ ತ್ರಿವೇಣ್ಯಾಃ ಕಮಲಭವಮುಖಾರಂಭನಿರ್ವ್ಯಾಜಪೂತೇ
ಯೇಸೊಚ್ಚೈರ್ಯಜ್ವಯೂಪೈಃ ಸಹ ಸಮರಜಯಸ್ತಂಭಮಾಲಾ ಧ್ಯಾನಯ॥

ಎಂಬ ಶ್ಲೋಕದಿಂದ ಇವನ ದಿಗ್ವಿಜಯವಿಚಾರವು ವಿಶದವಾಗಿ ತಿಳಿದಂತಾಗುವುದು. ಇದಲ್ಲದೆ ಮಾಧ್ಯೆನಗರದ ತಾಮ್ರಶಾಸನದಲ್ಲಿ ಹೇಳಿರುವ "ವಿಕ್ರಮ ವಶೀಕೃತ ಕಾಮರೂಪಃ" ಎಂಬುದರಿಂದ ಕಾಮರೂಪ ಅಥವಾ ಅಸ್ಸಾಂವರೆಗೆ ದಂಡೆತ್ತಿದುದಾಗಿ ಬೋಧೆಯಾಗುತ್ತದೆ. ಕವಿಯು ಹೇಳುವ ದೇಶ, ನದೀ, ಆರಾಮಾದಿಗಳು ಈಗಣ ಭೂವಿವರಣೆಯ ಸಂಪ್ರದಾಯದಿಂದ ಬೇರೆಯಾಗಿರುವುದಾದುದರಿಂದ ದೇಶವಿಭಾಗದ ರಚನಾಕ್ರಮವು ಹೀಗೆಯೇಸರಿಯೆಂದು ಹೇಳಲಾಗುವುದಿಲ್ಲ. ಧೋಯಿಕವಿಯು ಹೇಳುವ ವಿಜಯಪುರವು ರಾಜನಾದ ಲಕ್ಷ್ಮಣಸೇನನ ರಾಜಧಾನಿಯಾಗಿದ್ದಿತೆಂದು ಹೇಳುವ ಚರಿತ್ರಾಧಾರಗಳಾವುವೂ ಇರುವುದಿಲ್ಲ. ಆದರೂ ಆಗಣರಾಜರುಗಳಿಗೆ ಅನೇಕ ರಾಜಧಾನಿಗಳಿದ್ದಂತೆಯೇ ಇವನಿಗೂ ಅನೇಕ ರಾಜಧಾನಿಗಳಿದ್ದು ವಿಜಯಪುರವು ಅವುಗಳಲ್ಲಿ ಒಂದಾಗಿರಬಹುದಾಗಿ ಕೊಳಬಹುದಾಗಿದೆ. ಇವನ ಪವನದೂತದ ಅಭಿಪ್ರಾಯಗಳೂ ಶಬ್ದಗಳೂ, ಹಾಗೆಹಾಗೆಯೇ ಮೇಘದೂತದಲ್ಲಿ ಕಂಡುಬರುತ್ತದೆ ಮಾದರಿಗಾಗಿ ಎರಡುಮೂರು ಉದಾಹರಣೆಗಳನ್ನು ಕೊಡುವೆವು.

ಮೇಘದೂತ	ಪವನದೂತ
(೧) ಸ್ಥಿತ್ವಾತಸ್ಮಿನ್ನನಚರವಧೂಸುಕ್ತ ಕುಂಜೇವ ಮಹೂರ್ತಂ ೧—೧೯	ಹಿತ್ವಾಕಾಂಚೀಮವಿನಯವತೀಭುಕ್ತ ರೋಧೋನಿಕುಂಜಾಂ ೧೫
(೨) ಸಂಸರ್ಪಂತ್ಯಾಶ್ಚಲಿತ ಸುಭಗಂ ದರ್ಶಿತಾವರ್ತನಾಭೇಃ ೧—೨೯	ಸಂಸರ್ಪಂತೀಂ ಪ್ರಕೃತಿಕುಟಿಲಾಂದರ್ಶಿ ತಾವರ್ತ್ತನಾಭಿಂ ೩೪
(೩) ನಿತ್ಯಜ್ಯೋತ್ಸ್ನಾಃಪ್ರತಿಹತತಮೋ ವೃತ್ತಿರಮ್ಯಾಃ ಪ್ರದೋಷಾಃ ೨-೩	ನಿತ್ಯಜ್ಯೋತ್ಸ್ನಾಮುದಮರಿತಂ ಕುರ್ವತೇ ಯತ್ರ ಯೂನಾಂ॥

ಪ್ರಕೃತ ಇಷ್ಟು ಸಾಕೆಂದುತೋರುವುದು. ಹೆಚ್ಚಾಗಿ ನೋಡ ಬಯಸುವರು ಪವನದೂತಕಾವ್ಯವನ್ನು ನೋಡತಕ್ಕದು. ಧೋಯಿಕವಿಯು ಮೇಘದೂತವನ್ನೇ ಅಲ್ಲದೆ ಅಭಿಜ್ಞಾನ ಶಾಕುಂತಲವನ್ನೂ ಅನುಸರಿಸಿರುವುದಾಗಿ ತೋರುತ್ತದೆ.

(೧) ಪ್ರಚಾಗಾರಾನ್ಮಲೇಭೂತ ಸ್ತಸ್ಯಾಃಸ್ಪೃಷ್ಟೇಸಮಾಗಮಃ ೬—೨೨	ಕೆಷಾಂಚಿತ್ಪ್ರಪದಪಸರಿಡ ಮಹೋತ್ಪಪ್ಯ ಸಂಕೇತದೂತೀ| ಸದ್ರಾಪ್ಯಸ್ಯಾಃ ಕ್ಷಣಾ ಮಸಿನಯನ್ನೇತ್ರಸೀಮಾನಮೇತಿ ೫೪

ಈ ಕಾವ್ಯದಲ್ಲಿ—ಆಂಧ್ರ, ದಾಕ್ಷಿಣಾತ್ಯ, ಗೌಡ, ಪಾಂಡ್ಯ, ಸುಹ್ಮದೇಶಗಳ, ಕಳಿಂಗನಗರ, ಕಾಂಚೀ ಉರಗಪುರ, ಯಯಾತಿನಗರ ಎಂಬ ಪತ್ತನಗಳ, ಚಂದ ನಾದ್ರಿ, ಮಲಯವಾ, ಶ್ರೀಖಂಡಾದ್ರಿ, ವಿಂಧ್ಯಪರ್ವತಗಳ, ಗಂಗಾ, ಗೋದಾವರೀ, ಕಾವೇರೀ, ರೇವಾ, ನರ್ಮದಾ, ಸುಬಲಾ, ತಾಮ್ರಪರ್ಣೀ, ತಪನತನಯಾ ಅಥವಾ ಯಮುನಾ ನದಿಗಳ, ಬಲ್ಲಾಳ ಮತ್ತು ಲಕ್ಷ್ಮಣಸೇನರಾಜರ, ಛಲ್ಲರ, ಜೊಳರ, ಕೇರಳ ಮತ್ತು ಶಬರ ಸ್ತ್ರೀಯರ, ಪಂಚಾಪ್ಸರ, ಸರಸ್ಸಿನಲಂಕಾದ್ವೀಪದ, ಮತ್ತು ಸೇನಾನ್ಪಯದ ಹೆಸರುಗಳು ಕಂಡುಬರುತ್ತವೆ. ಇವುಗಳಲ್ಲಿ ಕೆಲವು ಚಾರಿತ್ರಿಕ ಸಂಬಂಧಗಳನ್ನೂ, ಹೀವು ಭೂಗೋಳ ವಿಷಯಗಳನ್ನೂ ತಿಳುಹುವುವಾಗಿವೆ. ಆಗಣ ಯಾವ್ಯಾವುದಕ್ಕೆ ಈಗಣ ಹೆಸರು ಸಲ್ಲುವುದೆಂಬದರ ವಿಚಾರವು ಆಗಣ ಭೂಗೋಳವನ್ನರಿಯದ ಈಗಣ ನಮಗೆ ತಿಳಿಯುವಂತಿಲ್ಲ.

ಇದರ ಮಾದರಿಯ ಶ್ಲೋಕಗಳು ಹೀಗಿರುವುವು:—

ಸ್ವೇಚ್ಛಾರಮ್ಯಂ ವಿಹರ ವಿಹಗನ್ಯಾಕುಲೋತ್ತುಂಗವೃಕ್ಷೇ
ವಿಂಧ್ಯೋತ್ಸಂಗಪ್ರಣಯಿನಿ ವನೇ ಮಾನವತ್ಯೋಽಪಿ ಯತ್ರ
ಸಂಜಾಯಂತೇ ರಹಸಿ ಕರಿಣಾಂ ಕ್ರೂರಮಾಕರ್ಣ್ಯ ಶಬ್ದಂ
ಭರ್ತೃಷ್ಕಂಠೇ ಪ್ರಣಯಿಭುಜವಲ್ಲ್ಯೋ ಛಲ್ಲಯೋಷಾಃ ॥ ೭೪

ಸ್ವೈರಕ್ರೀಡಾರಸಿಕ ಶಬರೀಸಿಕ್ತರೋಧೋಽಕುಂಜಾಂ
ಗಚ್ಛೀರೇವಾಮಭಿನವಮುಕ ಶ್ಯಾಮವಂಶೋವನೇನ
ಮನ್ಯಂತೇಯತ್ಪರಿಸರಭುವಿಪ್ರೌಢಸೀಮಂತಿನೀನಾಂ
ಲೀಲಾಮಾನಗ್ರಹಮಪಿ ಕರೀರತ್ನರಾಯಾ ಯುವಾನಃ ॥ ೭೫

ವಿನ್ಯಸ್ಯಂತೋ ಶಶಿನಿ ನಯನೇ ದುರ್ದಿನೈರಶ್ರುವಾರಾಂ
ಧಾರಾಶಾಸ್ತ್ರೈರ್ಬಕಕುಲಕುಸುಮಾಮೋದಮಾಘಾತುಕಾಮಾ
ಶಸ್ತ್ರಾಪುಷ್ಟೇ ಭ್ರಮರವಿರುತಂ ಮೂರ್ಛಯಾರಕ್ಷಿತಾಸೀ
ವೀಕ್ಷ್ಯೈವಸ್ಥಾಂ ಕ ಇವ ಕರುಣಾ ಕಾತರಃ ಸ್ಯಾನ್ನ ತಸ್ಯಾಃ ೭೬.

ಚೇತೋವೃತ್ತೀಃ ಸ್ಮರತಿ ಕರುಣಾ ನಿಸ್ಪ್ರಯೋಗೇ ವಿರಾಗೇ
ಕೋಪಾವೇಶೇ ಕುಸುಮನಿಶಿಖೇ ನಿತ್ಯಮಾತ್ಮನ್ಯವಜ್ಞಾ
ಇತ್ಥಂಸ್ಥಾಂಕೇಸ್ಥಿತಮಿವಸಮಾಲಂಬ್ಯಚಿತ್ರಾವರುಕೀ
ತ್ಪಯ್ಯೇಕಾಂತಸ್ಥಿರವಿರಚಿತಂ ಭಾವಮಾವಿಸ್ಕರೋತಿ ॥ ೭೯.

ಮಾನವತಿಯರಾದಾಗ್ಯೂ ವನದಲ್ಲಿ ಸ್ವೇಚ್ಛೆಯಿಂದ ವಿಹರಿಸುತ್ತಿರುವ ಮದ ಗಜಗಳ ಕೂಗನ್ನು ಕೇಳಿ ಭಯಗೊಂಡವರಾದ ಛಿಲ್ಲಸ್ತ್ರೀಯರು ತಮ್ಮ ತಮ್ಮ ಪತಿ ಗಳನ್ನು ಎಲ್ಲಿ ಆಶ್ಲೇಷಿಸುವರೋ ಅಂತಹ ವಿಂಧ್ಯಪರ್ವತದ ಮೂಲದಲ್ಲಿರುವ ವನದಲ್ಲಿ ಗಾಳಿಯಿಂದ ಅಲ್ಲಾಡುವುದಾದ ಅತ್ಯುನ್ನತ ವೃಕ್ಷಗಳಲ್ಲಿ ಎಲೈ ಪಕ್ಷಿಯೆ! ಸ್ವೇಚ್ಛೆಯಾಗಿ ವಿಹರಿಸು.

ಯುವಕರು, ಸ್ವೇಚ್ಛಾವಿಹಾರದಲ್ಲಿ ರಸಿಕರಾಗಿರುವ ಶಬರ ಸ್ತ್ರೀಯರಿಂದ ವ್ಯಾಪ್ತವಾಗಿರತಕ್ಕ ಪೊದೆಯನ್ನೂ, ನೂತನವಾಗಿಯೂ ಶುಕವರ್ಣದಂತೆ ಶ್ಯಾಮಲವಾಗಿರುವ ವಂಶ [ಬಿದಿರು] ಸಮೂಹದಿಂದ ಕೂಡಿರುವ ತೀರಪ್ರದೇಶವನ್ನುಳ್ಳ ನರ್ಮದಾನದಿಯನ್ನೂ ಮತ್ತು ತೀರಪ್ರದೇಶಗತರಾಗಿರುವ ಪ್ರೌಢರಾದ ಹೆಂಗಳೆಯರ ಕ್ರೀಡಾಕೋಪವನ್ನೂ ರತಿಗೆ [ಕೇಳಿಗೆ] ಪ್ರತಿಬಂಧಕಗಳನ್ನಾಗಿ ತಿಳಿಯುತ್ತಾರೆ.

ಎಲೈ ಪವನನೆ! ಅಶ್ರುಪೂರ್ಣವಾದ ನಯನಗಳಿಂದ ಚಂದ್ರಮನನ್ನು ನೋಡುವಳಾಗಿಯೂ, ನಿಟ್ಟುಸಿರಿನಿಂದ ವಕುಳಪುಷ್ಪಗಳ ಸುಗಂಧವನ್ನು ಆಘ್ರಾಣಿಸುವುದರಲ್ಲಿ ಅಪೇಕ್ಷೆಯುಳ್ಳವಳಾಗಿಯೂ, ಭ್ರಮರ ಝಂಕಾರವನ್ನು ಆಲೈಸಿ ಕೇಳಲಿಚ್ಛೆಯುಳ್ಳವಳಾಗಿಯೂ ಇರುವ ಇವಳ ದುರವಸ್ಥೆಯನ್ನು ನೋಡಿ ಮೂರ್ಚ್ಛೆಯಿಂದ ಎಚ್ಚರಗೊಳಿಸಲ್ಪಟ್ಟ ಇವಳ ವಿಚಾರದಲ್ಲಿ ಯಾವನುತಾನೆ ಕರುಣೆಯುಳ್ಳವನಾಗಲಾರನು?

ನಿನ್ನ ಸಂದರ್ಶನವಾದಾಗ, ಕರುಣೆಯೆಂಬ ಮನೋವೃತ್ತಿಯೂ, ವಿರಹದಲ್ಲಿ ನೈರಾಗ್ಯವೂ, ಮನಸಿಜನಲ್ಲಿ ಕೋಪವೂ, ಶರೀರದಲ್ಲಿ ತಿರಸ್ಕಾರವೂ ಚಿತ್ರದಲ್ಲಿ ಗುರ್ತಿಸಿದರೆ ಹೇಗೋ ಹಾಗೆ ತನ್ನ ಶರೀರದಲ್ಲಿರುವಂತೆ ತಿಳಿಯುವನಾಗಿ ಸ್ಥಿರವಾಗಿರುವ ತನ್ನ ಮನೋಭಾವವನ್ನು ನಿನ್ನಲ್ಲಿ ಏಕಾಂತದಲ್ಲಿ ವ್ಯಕ್ತಪಡಿಸುತ್ತಾಳೆಂಬದನ್ನು ತಿಳಿಯಹೇಳುವನಾಗು.

ಕುಲಶೇಖರವರ್ಮ

ಈತನ ಮಾತಾಪಿತೃಗಳಾರೆಂಬುದು ತಿಳಿಯದಿದ್ದರೂ ಇವನ ಗ್ರಂಥದ ಪ್ರಸ್ತಾವನೆಯಲ್ಲಿ:—

"ಕವಿಃ ಪುನರಸ್ಯ ನಾಟಕಸ್ಯ ಮಹೋದಯಪುರ ಪರಮೇಶ್ವರಃ ಪರಮ ಹಂಸಪಾದಪದ್ಮಾರಾಧಕಃ ಕೇರಳಕುಲಚೂಡಾಮಣಿಃ ಕುಲಶೇಖರವರ್ಮಾ ನಾಮ ಕಶ್ಚಿದ್ ರಾಜಾ" ಎಂದೂ —

ಭರತವಾಕ್ಯದಲ್ಲಿ:—"ಶ್ರೀಧರವಿಷಯಭಕ್ತಿಪರಿಪಾಕ ಪ್ರಾರ್ಥನಪರಾತ್ಪರ ಪಿಷ್ಣುಭಕ್ತತ್ವಂ ಗಮ್ಯತೆ" ಎಂದೂ.—

ವ್ಯಾಖ್ಯಾನಕಾರನೂ ಇವನನ್ನು "ಅಥಪರಮಭಾಗವತಃ ಶ್ರೀಕುಲಶೇಖರ ಇತಿವರ್ಣ ಪಿಷ್ಣುಭಕ್ತೋತ್ತಮಂ ಮನ್ಯತೇ" ಎಂದೂ —

[೧೯೪ನೆಯ ಪುಟದ ಮುಂದುವರಿದ ಭಾಗ]

ಸೂತ್ರಧಾರನ ಹೇಳಿಕೆಯಾದ "..... .ರಾಜ್ಞಃ ಕೇರಲಕುಲಚೂಡಾ ಮಣೇರ್ಮಹೋದಯಪುರಪರಮೇಶ್ವರಸ್ಯ ಶ್ರೀಕುಲಶೇಖರವರ್ಮಣಃ" ೬ ಎಂಬದ ರಿಂದ ಕುಲಶೇಖರವರ್ಮನು ಕೇರಳಕುಲಚೂಡಾಮಣಿಯೆಂದೂ, ಮಹೋದಯ ಪುರರಾಜನೆಂದೂ, ವಿಷ್ಣುಭಕ್ತನೆಂದೂ ಗೊತ್ತಾಗುತ್ತದೆ. ಇವನು ಆಳಿದ ಮಹೋ ದಯಪುರವು ಯಾವುದು? ಎಲ್ಲಿದ್ದುದೆಂಬುದರ ವಿಚಾರವಾಗಿ ಇದೇ ಕವಿಯಿಂದ ರಚಿತ ವಾಗಿರುವ 'ಸುಭದ್ರಾಧನಂಜಯ' ಎಂಬನಾಟಕಕ್ಕೆವ್ಯಂಗ್ಯಾರ್ಥ ಮಾತ್ರಪ್ರತಿಪಾದನ ರೂಪವಾಗಿರುವ ಒಂದಾನೊಂದು ವ್ಯಾಖ್ಯಾನದ ಮುನ್ನುಡಿಯಲ್ಲಿ "ಕಾಲೇऽಥೇತಿ ವರ್ತಮಾನೇ ಕಸ್ಮಿಂಶ್ಚಿದಹ್ನಿ ಪ್ರಾತರುತ್ಥಾಯ ಪುತ್ರಾಪಹೃತಗಾರ್ಹಸ್ಥ್ಯೇನೋ ತ್ಥಾಯ **ಚೂರ್ಣಿಕಾ**ಸರಿದ್ವಾರಿ ಅನುಷ್ಠಿತ ಪೂರ್ವಸಂಧ್ಯೇನ ದೃಷ್ಟ**ಪರಮೇಶ್ವರ ಮಂಗಲಸ್ಥ**ಪರಮಪುರುಷೇಣ ಪ್ರಾಪ್ತಾತ್ಮಮಂದಿರಾಲಿಂದ ದೇಶಪ್ರಕ್ಷಾಲಿತಕರ ಚರಣೇನ ಪ್ರಸಂತಿಕೋದ್ಯತ್ಕೃಪಾನುಶಯಿತಶೀತರುಗ್ಣೇನ ಜಪಧ್ಯಾನಪರೇಣ ಮಯಾ ಕೇರಲೇಶ್ವರವಚನಕಾರಿಂಕಶ್ಚಿದ್ ಬ್ರಹ್ಮಬಂಧುಃ ಸಮಲಕ್ಷ್ಯತ" ಎಂದೂ "ಅಥ ಮಯಾಮುನಾ ಸಹಾರೂಢ ಏಟ್ಟಾಶಯ್ಯಾ ಸಂಪಾದಿತಸ್ಪಾದುವಸ್ತು ಸೌಖ್ಯೇಯಾ ನಾವಾ ಚೂರ್ಣಿಕಾ ಸರಿದಾವಾಹ್ಯಮಾನಯಾ ಸತ್ವರಂ ಮಹೋದ ಯಾಖ್ಯಂ ಪುರಂ ಗಮ್ಯತೇಸ್ಮ" ಎಂದು ಹೇಳಲ್ಪಟ್ಟಿರುವುದರಿಂದ ಮಹೋದಯ ಪುರಕ್ಕೆ ಹೋಗಬೇಕಾದರೆ ಚೂರ್ಣಿ ನದಿಯನ್ನು ದಾಟಿ ಪರಮೇಶ್ವರಮಂಗಲದ ಮೂಲಕ ಹೋಗಬೇಕೆಂದು ಗೊತ್ತಾಗುತ್ತದೆ.

ಮಹೋದಯವೆಂಬುದು ಕೊಚ್ಚಿಸಂಸ್ಥಾನದ ಕ್ರೊಡಂಗಲ್ಲೂರು ಬಳಿಇರುವ ಈಗಣ "ತಿರುವಂಚಿಕ್ಕಳಂ" ಎಂಬಗ್ರಾಮವೆಂದೂ, ಚೂರ್ಣಿನದಿಗೆ "ಪರಿಯಾರ್" ಎಂದೂ ಹೇಳುವರಾಗಿ ಹೇಳಲ್ಪಟ್ಟಿದೆ.

ಮುನ್ನುಡಿಯಲ್ಲಿ ವರ್ಣಿತವಾಗಿರುವ ಪರಮೇಶ್ವರಮಂಗಲವೆಂಬುದು ವ್ಯಂಗ್ಯ ವ್ಯಾಖ್ಯಾನಕಾರನ ಸ್ಥಳವಾಗಿದ್ದಿರಬೇಕಾಗಿತೋರುತ್ತದೆ. ಹಾಗೆಂದರೆ ನಂಬೂದ್ರಿ ಬ್ರಾಹ್ಮಣರಸೇಕರ ವಾಸಸ್ಥಳವು ದೇವಮಂಗಲಂ, ನಾರಾಯಣ ಮಂಗಲಂ ಎಂದು ಕರೆಯಿಸಿಕೊಂಡಿರುವಂತೆ ಪರಮೇಶ್ವರ ಮಂಗಲವೆಂದು ಕರೆಯಿಸಿಕೊಂಡಿರಬಹು ದಾಗಿ ಭಾಸವಾಗುತ್ತದೆ. ಈಗ ಈ ಸ್ಥಳವಾವುದು ? ಕುಲಶೇಖರನವಂಶೀಕರಾ ರಾದರೂ ಈಗದೊರೆಯುವರೇ ? ಇಸೇ ಮೊದಲಾದವುಗಳಿಗೆ ಸರಿಯಾದ ಉತ್ತರವು ದೊರೆಯುವಂತಿಲ್ಲ. ಗ್ರಂಥಾಂತರಗಳಲ್ಲಿಯೂ ದೊರೆಯದಾಗಿದೆ.

ಶ್ರೀವೈಷ್ಣವ ಗ್ರಂಥಗಳಲ್ಲಿ ಕುಲಶೇಖರಾಳ್ವಾರೆಂದು ಪ್ರಸಿದ್ಧನಾದ ಕುಲ ಶೇಖರನೂ ಮೇಲೆಹೇಳಿದ ಕುಲಶೇಖರವರ್ಮನೂ ಇವರಿರ್ವರೂ, ಕೇರಳೀಯರೂ

೬ ತಪತೀಸಂವರಣದ ಶ್ಲೋ ೪.
ತಪತೀಸಂವರಣದ ಮುನ್ನುಡಿ ಪುಟ ೧.

ರಾಜರೂ, ವಿಷ್ಣುಭಕ್ತರೂ ಆಗಿರುವುದರಿಂದ ಈ ಇರ್ವರೂ ಏಕವ್ಯಕ್ತಿಯೆಂದೂ ಮೇಲೆಹೇಳಿದ "ವಂಚಿಕ್ಕುಳಂ" ಎಂಬುದು ಕುಲಶೇಖರಾಳ್ವಾರರ ಜನ್ಮಭೂಮಿಯಾಗಿದ್ದುದಾಗಿ ಶ್ರೀವೇದಾಂತದೇಶಿಕ ಕೃತದ್ರಾವಿಡಪ್ರಬಂಧಗಳಿಂದ ತಿಳಿಯಬರುತ್ತದೆಯೆಂದೂ ಈ ವಂಚಿಕ್ಕುಳಂ ಎಂಬುವಕ್ಕೆ ದ್ರಾವಿಡಭಾಷೆಯ ಶ್ರೇಷ್ಠಾರ್ಥಸೂಚಕವಾದ "ತಿರು" ಎಂಬ ವಿಶೇಷಣದಿಂದ 'ತಿರುವಂಚಿಕ್ಕುಳಂ' ಎಂದಾಗಿರುವುದೆಂದೂ ಅದೇ ಮಹೋದಯವೆಂಬುದಾಗಿಯೂ ಹೇಳುವರು. § ಯಾವುದು ಹೇಗಾದರೂಇರಲಿ, ತಿರುವಂಚಿಕ್ಕುಳಂ ಎಂಬುದು ಶ್ರೀಕುಲಶೇಖರಾಳ್ವಾರರ ಜನ್ಮಸ್ಥಳವಾದ ಮಾತ್ರದಿಂದಲೇ ಅವರನ್ನು ತಿರುವಂಚಿಕ್ಕುಳಂ (ಮಹೋದಯಪುರಿ)ಗೆ ರಾಜರಾಗಿದ್ದರೆಂಬುದು ಹೇಗೆ? ಕುಲಶೇಖರವರ್ಮನು ಕುಲಶೇಖರಾಳ್ವಾರರಲ್ಲವೆಂಬುದು ಗ್ರಂಥಾಂತರಪ್ರಮಾಣಗಳಿಂದ ಸಿದ್ಧವಾಗುತ್ತದೆಯಾಗಿ ಏಕವ್ಯಕ್ತಿತ್ವವು ಅಸಂಬದ್ಧವಾಗುವುದು. ಈ ಇರ್ವರೂ ವಿಷ್ಣುಭಕ್ತರೂ, ರಾಜರೂ, ಏಕ ದೇಶಿಯರಾಗಿದ್ದ ಮಾತ್ರದಿಂದಲೇ ಇವರಿರ್ವರೂ ಒಬ್ಬನೇ ಎಂದು ಬಗೆಯೂಡಿ ಹೇಳುವುದು ಸುಷ್ಠುವಾಗಿರದು ಈ ವ್ಯತ್ಯಾಸಗಳನ್ನು ಹೇಳುವಮೊದಲು ಕುಲಶೇಖರಾಳ್ವಾರರ ವಿಚಾರವಾಗಿ ಕೊಂಚ ಹೇಳುವುದು ಅಪ್ರಸಕ್ತವಾಗದು.

ಕುಲಶೇಖರಾಳ್ವಾರರನ್ನು ಕುಲಶೇಖರ ಪೆರುಮಾಳೆಂದೂ ಕರೆಯುವ ರೂಢಿಯು ಇರುವುದು. ಇವರು ಕೊಲ್ಲ ಕೂಡಲ (ಮಧುರಾ) ಕೋಳಿ ಉರೈಯೂರ್ ಮತ್ತು ಕೊಂಗುರಾಜ್ಯಗಳಿಗೆ ರಾಜರಾಗಿದ್ದುದಾಗಿ ಹೇಳಲ್ಪಟ್ಟಿದೆ. ಮೇಲೆ ಹೇಳಿದ ತಮಿಳುನಾಡುಗಳಾದ ಚೋರ, ಚೋಳ, ಪಾಂಡ್ಯ ಮತ್ತು ಕೊಂಗು ಈ ನಾಲ್ಕು ರಾಜ್ಯಗಳು ಯಾವ ಕಾಲದಲ್ಲಿ ಒಬ್ಬರಾಜನ ಆಳ್ವಿಕೆಯಲ್ಲಿದ್ದಿತೆಂಬುದು ಗೊತ್ತಾಗುವಂತಿಲ್ಲ.

ಕೊಂಗುದೇಶದ ಚರಿತ ಮತ್ತು ಶಾಸನಗಳಂತೆ ಕ್ರಿ. ಶ. ೮೦೦ರಲ್ಲಿ ಚೋಳರು ಪುನಃ ಪ್ರಬಲರಾಗಿದ್ದುದಾಗಿಯೂ ವಿಜಯಾಲಯ ಮತ್ತು ಮೊದಲನೆಯ ಆದಿತ್ಯ (aditya I) ಈ ಇಬ್ಬರೂ ತಮ್ಮ ಕೈಬಿಟ್ಟುಹೋಗಿದ್ದ ರಾಜ್ಯಗಳನ್ನು ಪುನಃ ಸಂಪಾದಿಸಿಕೊಂಡುದಲ್ಲದೆ ತಮ್ಮ ರಾಜ್ಯಕ್ಕೆ ಕೊಂಗುರಾಜ್ಯ (ಸೇಲಂ ಮತ್ತು ಕೋಯಂಬತ್ತೂರು ಡಿಸ್ಟ್ರಿಕ್ಟುಗಳು) ವನ್ನು ಸೇರಿಸಿಕೊಂಡುದಾಗಿ ತಿಳಿಯಬರುತ್ತದೆ.

ಕುಲಶೇಖರನು ಚಿದಂಬರದಲ್ಲಿ ವಿಷ್ಣುದೇವಾಲಯವನ್ನು ಕಟ್ಟಿಸಿದುದಾಗಿ ಗ್ರಂಥಾಂತರದಿಂದ ತಿಳಿಯಬರುತ್ತದೆ. ಚಿದಂಬರದ ವಿಷ್ಣುದೇವಾಲಯವು ಸುಮಾರು ಕ್ರಿ. ಶ. ೭ನೆಯ ಶತಮಾನದ ಉತ್ತರಾರ್ಧದಲ್ಲಿ ಕಟ್ಟಿಸಿದುದಾಗಿ

§ ವೆಪತಿಸಂವರಣ ಪುಟ ೪.

ಚರಿತ್ರೆಯು ಹೇಳುತ್ತದೆ. ಈ ಕಾರಣಗಳಿಂದ ತಿರುವಳಿ ಎಂಬಲ್ಲಿರುವ ವಿಷ್ಣುದೇವಾಲಯವು ತಿರುಮಂಗೈ ಆಳ್ವಾರರಿಂದ ಕಟ್ಟಲ್ಪಟ್ಟ ದೇವಾಲಯಗಳಲ್ಲಿ ಒಂದಾಗಿರಬೇಕೆಂದು ಬೋಧೆಯಾಗುತ್ತದೆ. ಕೇರಳೋತ್ಪತ್ತಿ ಎಂಬ ಸಾಧಾರಣತರದ ಅರ್ವಾಚೀನಗ್ರಂಥದಲ್ಲಿ ಕುಲಶೇಖರನು ಕ್ರಿ. ಶ. ೮೫೫ರಲ್ಲಿ ಮೃತನಾದ ಚೇರಮಾನ ಪೆರುಮಾಳನ ವಂಶೀಯನೆಂದು ಹೇಳಲ್ಪಟ್ಟಿದೆ. ಅಲ್ಲದೆ ಕುಲಶೇಖರ ಪೆರುಮಾಳ್ ಎಂಬುವನು ಆಗ ಪ್ರಬಲರಾಗಿದ್ದ ಮಾಪಿಳ್ಳೆಯವರ ಹಾವಳಿಯನ್ನು ತಡೆಯುವುದಕ್ಕಾಗಿ ಚಿಕ್ಕ ಚಿಕ್ಕ ರಾಜ್ಯಗಳನ್ನಾಗಿ ವಿಭಾಗಮಾಡಿ ಕೊಂಡಾಳಿದನೆಂದೂ ೧೮ ವರ್ಷಗಳು ರಾಜ್ಯವಾಳಿ ಅನಂತರ ಸಶರೀರನಾಗಿ ಸ್ವರ್ಗಾರೋಹಣಮಾಡಿದನೆಂದೂ ಹೇಳಲ್ಪಟ್ಟಿದೆ. ಈ ಕಾರಣಗಳಿಂದ ಕುಲಶೇಖರನು ಕ್ರಿ. ಶ. ೮೫೦-೮೫೫ರ ವರೆಗೆ ಆಳಿದುದಾಗಿಹೇಳಬೇಕಾಗುತ್ತದೆ. ಹೀಗೆ ಹೇಳುವುದಾದರೆ ಅಥವಾ ಈ ಕಾಲವನ್ನೇ ಒಪ್ಪುವುದಾದರೆ ಈ ಕುಲಶೇಖರನು ಹೇಳಿಕೊಂಡಿರುವ ಕೂಡಲನಾಯಕ ಅಥವಾ ಮಧುರೆಯ ಅರಸನೆಂಬುವಕ್ಕೆ ವ್ಯಾಘಾತವುಂಟಾಗುತ್ತದೆ. ಒಂದುವೇಳೆ ಇದನ್ನೂ ಸರಿಯೆಂದು ಹೇಳುವುದಾದರೆ ಈ ಕಾಲದಲ್ಲಿ ಪಾಂಡ್ಯರು ಬಹುಪ್ರಬಲರಾಗಿದ್ದುದಾಗಿ ಚಿನ್ನಮನೂರು ಶಾಸನಗಳಿಂದ ಗೊತ್ತಾಗುತ್ತದೆ ಇವೆಲ್ಲವನ್ನೂ ಸಮಂಜಸಮಾಡಿಕೊಂಡಬಹುದಾದರೆ ಕುಲಶೇಖರನು ಪಾಂಡ್ಯನಂತೀಯನೆಂದು ಹೇಳಿ ಕೇರಳದ "ಮರುಮಕ್ಕತ್ತಾಯಂ" ಪದ್ಧತಿಯನ್ನನುಸರಿಸಿ ಕೇರಳಸಿಂಹಾಸನಕ್ಕೆ ಒಡೆಯನಾಗಿದ್ದನೆಂದೂ, ಇವನನ್ನು ಚೇರವೆಶೀಯರು ಪಾಂಡ್ಯ ಕುಲಶೇಖರ ಪೆರುಮಾಳೆಂದೂ ಕರೆದಿರಬೇಕಾಗಿ ಬೋಧೆಯಾಗುತ್ತದೆ. ಇದು ವರೆಗೆ ಚಾರಿತ್ರಿಕ ವಿಷಯಗಳನ್ನು ಹೇಳಿದುದಾಯಿತು. ಇನ್ನುಮುಂದೆ ಕುಲಶೇಖರರ ವೈರಿಪವಿಚಾರವಾಗಿ ದ್ರಾವಿಡಗ್ರಂಥಗಳು ಏನು ಹೇಳುವುದೆಂಬುದನ್ನು ನೋಡುವುದು ಉಳಿದಿರುವುದು.

ಕುಂಭೇಪುನರ್ವಸೂಜಾತಂ ಕೇರಳೇಚೋಳಪಟ್ಟಕೇ
ಕೌಸ್ತುಭಾಂಶಂ ದದಾಧಿಶಂ ಕುಲಶೇಖರವಾಕ್ಪ್ರಯೋ॥

ಎಂದು ಹೇಳಿರುವುದರಿಂದ ಕುಲಶೇಖರರು ಕೇರಳದೇಶದಲ್ಲಿರುವ ಚೋಳಸತ್ತನದಲ್ಲಿ ಕಲಿಯುಗ ೩೮೫೬ನೆಯದಾದ ಪರಾಭವವರ್ಷ ಮಾತಿಮಾಸ ಶುಕ್ಲದ್ವಾದಶಿ ಶುಕ್ರವಾರದೊಡಗೂಡಿದ ಪುನರ್ವಸುನಕ್ಷತ್ರದಲ್ಲಿ ದೃಢವ್ರತರೆಂಬ ರಾಜನಿಗೆ ಪುತ್ರರಾಗಿ ಅವತರಿಸಿದುದಾಗಿ ಹೇಳಲ್ಪಟ್ಟಿದೆ. ಮತ್ತೊಂದು ಗ್ರಂಥದಲ್ಲಿ ಈಗ ನಡೆಯುತ್ತಿರುವ ಕಲಿ ೩೮ ಪರಾಭವವರ್ಷ ಪುನರ್ವಸುನಕ್ಷತ್ರದಲ್ಲಿ ಕೊಲ್ಲಿದೇಶದ ತಿರುವಂಚಿಕ್ಕ

Tamil studies P 39 by M. Srinivas Iyengar, M. A., 1st Series

† ದೊಡ್ಡಯಾಚಾರ್ಯಕೃತ ಗುರುಪರಂಪರಾಪ್ರಭಾವಂ ಪುಟ ೧೬

ಳಂ ಎಂಬ ಊರಿನಲ್ಲಿ ಚೇರವಂಶದಲ್ಲಿ\$ ಕೌಸ್ತುಭಾಂಶದಿಂದ ಜನ್ಮಿಸಿದುದಾಗಿ ಹೇಳಲ್ಪಟ್ಟಿದೆ. ಇವನು ಕ್ಷತ್ರಿಯನಾಗಿದ್ದು ಬಹು ಪರಾಕ್ರಮಿಯಾಗಿ ಚೇರರಾಜ್ಯಕ್ಕೆ ಮಾತ್ರವೇ ದೊರೆಯಾಗಿದ್ದುದಲ್ಲದೆ ಚೋಳ ಮತ್ತು ಪಾಂಡ್ಯದೇಶಗಳಿಗೂ ಒಡೆಯನಾಗಿದ್ದುದಾಗಿ ದೇಶೀಯ ಚರಿತ್ರೆಯು ಹೇಳುತ್ತದೆ. ನಮ್ಮ ಪ್ರಾಚೀನದ್ರಾವಿಡ ಚರಿತದಲ್ಲಿ ಕೊಲಿಕಾವರ್ಮ, ಕೂಡಲ್‌ನಾಯಕ್ಕ, (ಕೂಡಲ್-ಮದುರೆ) ಮತ್ತು ಕೋಲಿಕ್ಕ (ಕೋಲು ಉರೈಯೂರ್) ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿರುವುದು ಕಂಡುಬರುತ್ತದೆ. ಹೀಗೆ ಬಹುದಿನಪರ್ಯಂತ ರಾಜ್ಯವನ್ನಾಳಿ ತನ್ನ ೬೭ನೆಯ ವರ್ಷದಲ್ಲಿ ಮಾನವಲೀಲೆಯನ್ನು ಬಿಟ್ಟುದಾಗಿ ಕಂಡುಬರುತ್ತದೆ. §

ಈ ಕುಲಶೇಖರಾಳ್ವಾರರ ವಂಶೀಯರು ಈಗಣ ಅನಂತಶಯನ (ಟ್ರಾವಂಕೂರು) ದ ರಾಜರೆಂದೂ ಕೆಲವರ ಮತವಿರುವುದು. ಹೀಗೆ ಹೇಳುವುದಾದ ಚರಿತ್ರಾಧಾರಗಳು ನಮಗೆ ಉಪಲಬ್ಧವಿಲ್ಲವಾಗಿವೆ. ಅಲ್ಲದೆ ಟ್ರಾವಂಕೂರಿನ ರಾಜವಂಶಾವಳಿಯ ಕಾಲಕ್ಕೂ ಕುಲಶೇಖರಾಳ್ವಾರರ ಕಾಲಕ್ಕೂ ನೂರಾರು ವರ್ಷಗಳ ಕಾಲಭೇದವಿರುವುದರಿಂದ ಕುಲಶೇಖರಾಳ್ವಾರರೂ, ಕುಲಶೇಖರವರ್ಮನೂ ಇಬ್ಬರೂ ಬೇರೆಬೇರೆಯೆಂದೂ, ಭಿನ್ನಭಿನ್ನಕಾಲವೆಂದಾಡುವುದರಿಂದ ಪರಸ್ಪರ ಸಂಬಂಧವಿರದೆಂದೂ, ಕುಲಶೇಖರವರ್ಮನು ಯಾರ ಮಗನೆಂಬುದು ತಿಳಿಯದೆಂದೂ, ಈ ಇರ್ವರು ರಾಜರೂ ವಿಷ್ಣುಭಕ್ತರಾಗಿದ್ದ ಮಾತ್ರಕ್ಕೆ ನಾಮಸಾಮ್ಯದಿಂದ ಏಕವ್ಯಕ್ತಿಸ್ಥಾಪನವು ಸರಿಯಾದುದಲ್ಲವೆಂದೂ ಹಾಗೆ ಹೇಳಲೆಬೇಕೆಂಬಾಸೆ ಇರುವವರಿಗೆ ಕುಲಶೇಖರವರ್ಮನು ಕುಲಶೇಖರಾಳ್ವಾರರ ವಂಶೀಯನಾಗಿರಬಹುದೆಂದಾಗಿ ಹೇಳಿ ಮುಗಿಸಬೇಕಾಗುವುದು.

ಇವಲ್ಲದೆ ಮಧುರೆಯ ಸೋಮಸುಂದರೇಶ್ವರಸ್ವಾಮಿಯ ವೃತ್ತಾಂತ ಕಥಾನಕದಲ್ಲಿ ಮಧುರೆಯಲ್ಲಾಳಿದ ಪಾಂಡ್ಯರಾಜರ ಮೂಲಪುರುಷನನ್ನು ಸೋಮಸುಂದರೇಶ್ವರನು ಸಿದ್ಧರೂಪದಿಂದ ಬಂದು ಕುಲಶೇಖರನೆಂದು ನಾಮಕರಣವನ್ನು ಮಾಡಿದುದಾಗಿಯೂ ಪಾಂಡ್ಯರಾಜ್ಯಕ್ಕೆ ಪ್ರಾಚೀನರಾಜಧಾನಿಯಾಗಿದ್ದ ಮಣಲೂರೆಂಬುದನ್ನು ಬಿಟ್ಟು ಮಧುರೆಯನ್ನು ರಾಜಧಾನಿಯನ್ನಾಗಿ ಮಾಡಿಕೊಳ್ಳಲು ಅಪ್ಪಣೆ

\$ ತಸ್ಮಾದಭೂಚ್ಛ್ರೀರಕುಲಪ್ರದೀಪ
ಶ್ರೀಕೌಸ್ತುಭಾತ್ಮಾ ಕುಲಶೇಖರಾಖ್ಯಃ
ಮಹೀಪತಿರ್ಮಾಘಪುನರ್ವಸೂದ್ಯ
ದ್ದಿನೇ ಹರೇಃ ಪೂರ್ಣಕಟಾಕ್ಷಲಕ್ಷ್ಯಃ ॥ ದಿವ್ಯಸೂರಿಚರಿತೆ V. 6.

§ The holy Lives of Azhvars or the Dravida Saints by A. Govindacharya P. 116—118.

ಮಾಡಿದಂತೆಯೂ ಹೇಳಲ್ಪಟ್ಟಿದೆ.* ಇದಲ್ಲದೆ ಪಾಂಡ್ಯರಾಜರಲ್ಲಿ ಕುಲಶೇಖರನೆಂಬ ಹೆಸರಿನ ರಾಜರನೇಕರು ದೊರೆಯುವರು. ಅವರಲ್ಲಿ ಕೆಲವರ ಹೆಸರನ್ನು ಇಲ್ಲಿಕೊಟ್ಟಿದೆ.

ಹೆಸರು		ಆಳಿದಕಾಲ
ತ್ರಿಭುವನಕುಲಶೇಖರದೇವ	....	ಕ್ರಿ. ಶ. ೧೧೬೬†
ಜಟಾವರ್ಮಕುಲಶೇಖರ (೧)	....	.... ೧೧೯೦-೧೨೧೬
,, (೨)	....	... ೧೨೩೭-೧೨೫೯
ಮಾರವರ್ಮಕುಲಶೇಖರ (೧)	....	... ೧೩೬೮-೧೩೮೦
,, (೨)	....	.... ೧೩೮೪-೧೩೪೪§

ಮೇಲೆ ಹೇಳಿದ ತ್ರಿಭುವನಕುಲಶೇಖರದೇವನಿಗೂ, ಕುಲಶೇಖರನೆಂಬ ಹೆಸರಿನ ಇತರರಿಗೂ, ಕುಲಶೇಖರವರ್ಮನಿಗೂ, ಕುಲಶೇಖರಾಳ್ವಾರರಿಗೂ ಯಾವ ಸಂಬಂಧವೂ ಇರದು.

ಕಾಲ: —'ದಶರೂಪಕ'ಕಾರನಾದ ಧನಂಜಯನು ಕ್ರಿ. ಶ. ೧೦ನೆಯ ಶತಮಾನದ ಉತ್ತರಾರ್ಧದವನು. ಕುಲಶೇಖರವರ್ಮನ ಸಮಕಾಲೀನನಾದ ವ್ಯಂಗ್ಯವಾಖ್ಯಾಕಾರನು ತನ್ನ ಗ್ರಂಥದಲ್ಲಿ ದಶರೂಪಕಕಾರನನ್ನುಹೇಳಿಕೊಂಡಿರುವುದರಿಂದ ಧನಂಜಯನಿಗಿಂತಲೂ ಈಚಿನವನೆಂಬುದು ಸ್ಪಷ್ಟವು. ಅಮರಕೋಶಕ್ಕೆ "ಟೀಕಾಸರ್ವಸ್ವ" ಎಂಬ ವ್ಯಾಖ್ಯಾನವನ್ನು ಬರೆದಿರುವ ವಂದ್ಯಘಟೀಯಸರ್ವಾನಂದನು ಕುಲಶೇಖರವರ್ಮನು ಬರೆದುದಾಗಿ ಹೇಳಿರುವ 'ಆಶ್ಚರ್ಯಮಂಜರೀ' ಕಥೆಯಿಂದ 'ಕುರಂಗೈರವಕುತಲವಾದಿಭಿಃ' ಎಂಬುದನ್ನು ತೆಗೆದುಕೊಂಡು ಮೊದಲನೆಯ ಕಾಂಡದಲ್ಲಿ ಕುಶಲಶಬ್ದಕ್ಕೆ ವ್ಯಾಖ್ಯಾನವನ್ನು ಮಾಡಿರುವನು. ಟೀಕಾಸರ್ವಸ್ವ ವ್ಯಾಖ್ಯಾನದಲ್ಲಿ ಗ್ರಂಥದ ಶಕ, ಕಾಲ, ಮತ್ತು ಕಲಿವರ್ಷಗಳನ್ನು ಹೀಗೆಂದು ಹೇಳಿರುವನು.

ಇದಾನೀಂ ಚೈಕಾತೀತವರ್ಷಾಧಿಕೆ ಸಹಸ್ರೈಕ (೧೦೮೧) ಪರ್ಯಂತೇನ ಶಕಾಬ್ದಕಾಲೇನ ಷಷ್ಟಿವರ್ಷಾಧಿಕೆ ದ್ವಿಚತ್ವಾರಿಂಶಚ್ಛತಾನಿ (೪೨೬೦) ಕಲಿಸಂಧ್ಯಾಯಾಭೂತಾನಿ ||x

* The Indian antiquary march 1913 P. 67

† Ibid august P. 239

§ Ibid June P. 166 (on some new dates of Pandya Kings.)

x ತಪತೀಸಂವರಣ ಪ್ರಸ್ತಾವನೆ-ಪುಟ ೫

ಎಂಬುದು ಕ್ರಿ. ಶ. ೧೧೫೫ಕ್ಕೆ ಸರಿಹೋಗುವುದರಿಂದಲೂ ಕ್ರಿ. ಶ. ೧೨ನೆಯ ಶತಮಾನದ ಮುಖ್ಯಕವಿಗಳಾರೂ ಕುಲಶೇಖರನನ್ನು ಹೇಳದಿರುವುದರಿಂದಲೂ ಇವನು ಕ್ರಿ. ಶ. ೧೨ನೆಯ ಶತಮಾನದ ಪೂರ್ವಾರ್ಧದಲ್ಲಿರಬಹುದೆಂದರೆ ನ್ಯೂನತೆಯಾಗದು.

ಗ್ರಂಥಗಳು:—೧. ತಪತೀಸಂವರಣ
೨. ಸುಭದ್ರಾಧನಂಜಯ
೩. ಆಶ್ಚರ್ಯಮಂಜರೀಕಥಾ

ಎಂಬುವುಗಳನ್ನು ಬರೆದಿರುವುದಾಗಿ,

ಏಕಂ ಸಂವರಣಂ ನಾಮಧನಂಜಯಮಿತೀತರತ್
ಪ್ರಸಿಲಕ್ಷಣಯುಕ್ತಾಸಾ ರಚಿತಾನಾಟಕದ್ವಯಾ ॥ *

ಎಂಬುದರಿಂದಲೂ,

ಸೂತ್ರಧಾರ:- "ಆರ್ಯೆ! ಮಾನ್ಯೈವಂ ಯಸ್ಯ ಪರಮಹಂಸ ಸಾದಪಂಕೇರುಹ ಪಾಂಸುಪಟಲ ಪವಿತ್ರೀಕೃತ ಮುಕುಟತಟಸ್ಯ ವಸುಧಾವಿಬುಧ ಧನಾಯಾಂಧಕಾರ ಮಿಹಿರಾಯಮಾಣ ಕರಕಮಲಸ್ಯ ಮುಖ ಕಮಲಾದಗಲದ್ ಆಶ್ಚರ್ಯಮಂಜರೀ ಕಥಾಮಧುದ್ರವಃ"

ಎಂಬುದರಿಂದ ಈ ಕವಿಯು ಆಶ್ಚರ್ಯಮಂಜರೀಕಥಾ ಎಂಬುದನ್ನೂ ಬರೆದಿರುವದಾಗಿ ತಿಳಿಯಬರುತ್ತದೆ. ಈ ಗ್ರಂಥವಾವುದೆಂಬುದು ತಿಳಿಯದು.

ತಪತೀಸಂವರಣ —ಇದರಲ್ಲಿ ಆರು ಅಂಕಗಳಿರುವುವು. ಕಥಾಭಾಗವನ್ನು ಮಹಾಭಾರತದಿಂದಾರಿಸಿಕೊಂಡಿರುವನು. ಹಸ್ತಿನಾಪುರಾಧೀಶ್ವರನಾದ ಸಂವರಣನು ಮೃಗಯಾವಿಹಾರಕ್ಕಾಗಿ ತಪನವನಕ್ಕೆ ಹೊರಟು ಅಲ್ಲಿ ಸ್ಫಟಿಕಮಂಟಪದಲ್ಲಿದ್ದ ಭುವನಮೋಹಿನಿಯೂ ಸೂರ್ಯನ ಕುವರಿಯೂ ಆದ ತಪತಿಯನ್ನು ನೋಡಿ ಅವಳನ್ನು ಮೋಹಿಸಿ ಸೂರ್ಯನನ್ನು ಭಜಿಸಿ ಸೂರ್ಯಾನುಗ್ರಹಕ್ಕೆ ಪಾತ್ರನಾಗಿ ಅವಳನ್ನು ವರಿಸಿದ ಕಥೆಯು ಹೇಳಲ್ಪಟ್ಟಿದೆ. ಕವಿಯು ನಾಟಕಕ್ಕೆ ತಕ್ಕಂತೆ ಅಲ್ಲಲ್ಲಿ ಮೂಲ ಕಥೆಯನ್ನು ಮಾರ್ಪಡಿಸಿ ಹೇಳಿರುವನು.

ಸುಭದ್ರಾಧನಂಜಯ :—ಇದರಲ್ಲಿ ೫ ಅಂಕಗಳಿರುವುವು. ಕಥೆಯನ್ನು ಮಹಾಭಾರತದಿಂದಾರಿಸಿಕೊಂಡಿರುವನು. ಅರ್ಜುನನು ಸುಭದ್ರಾಹರಣಕ್ಕಾಗಿ ದ್ವಾರಾವತಿಯನ್ನು ಹೊಕ್ಕು ಸಂನ್ಯಾಸಿ ವೇಷದಿಂದ ಕೃಷ್ಣನ ಸತ್ಕಾರಸಂಧಾನಗಳ

* ತಪತೀಸಂವರಣ Sanskrit Introduction P. 5

ಮೂಲಕ ಮನೋಹಾರಿಣಿಯಾದ ಸುಭದ್ರೆಯ ಪರಿಚರ್ಯಕ್ಕೊಳಪಟ್ಟು ಪರಸ್ಪರಾನು ರಾಗಿಗಳಾಗಿ ಕಾಲಸಿರೀಕ್ಷಣೆಯನ್ನು ಮಾಡಿಕೊಂಡಿದ್ದು ಸುಭದ್ರೆಯೊಡನೆ ದ್ವಾರಾವತಿಯಿಂದ ಪರಾರಾದ ಕಥೆಯು ವರ್ಣಿತವಾಗಿದೆ. ಕವಿಯು ಇದನ್ನೂ ನಾಟಕ ಸಂದರ್ಭಕ್ಕೆ ತಕ್ಕಂತೆ ಮಾರ್ಪಡಿಸಿ ಬರೆದಿರುವನು. 'ಶಿವರಾಮನೆಂಬುವನು' ತ್ಕಪತೀಸಂವರಣಕ್ಕೆ 'ವಿವರಣ' ಎಂಬ ವ್ಯಾಖ್ಯಾನವನ್ನೂ ಸುಭದ್ರಾಧನಂಜಯಕ್ಕೆ 'ವಿಚಾರತಿಲಕ' ಎಂಬ ವಾಖ್ಯಾನವನ್ನೂ ಬರೆದಿರುವನು.

ಮಾದರಿಯ ಶ್ಲೋಕಗಳು. –

ಧನಂಜಯನು ಹೇಳುವ ಸುಭದ್ರೆಯ ಸೌಂದರ್ಯವರ್ಣನೆಯು ಹೀಗಿರುವುದು: —

ಸೌಂದರ್ಯಂ ಸುಕುಮಾರತಾ ಮಧುರತಾ ಕಾಂತಿರ್ಮನೋಹಾರಿತಾ
ಶ್ರೀಮತ್ತಾ ಮಹಿಮೇತಿ ಸರ್ಗವಿಭವಾ ನಿಶ್ಶೇಷನಾರೀಗುರ್ವಾ
ಏತಸ್ಯಾಮುಭಯಾಯುಜ್ಯ ದುರ್ವಿಧತಯಾ ದೀನಃ ಪರಾಮಾತ್ಮಭೂಃ
ಸೃಷ್ಟುಂ ವಾಂಛತಿ ಚೇತ್ ಕರೋತು ಪುನರಸ್ಯೈವ ಭಿಕ್ಷಾಟನಂ ॥
ಸುಭದ್ರಾ ಧನಂಜಯ ೧—೧೫

ವಿಶ್ವದ ಇತರ ಪದಾರ್ಥಗಳನ್ನು ಸುಂದರವಾಗಿ ಸೃಷ್ಟಿಸುವುದರಲ್ಲಿ ತನ್ನ ಅಪಾರ ಬುದ್ಧಿಕೌಶಲವೆಲ್ಲವನ್ನೂ ವೆಚ್ಚಮಾಡಿ ದೀನನಾಗಿ ಹೋಗಿರುವ ಬ್ರಹ್ಮನು ಸ್ವರ್ಗವಿಭವ ರುಚಿರರೂಪಿನ ಸುರಸುಂದರಿಯರ ಗುಣಗಳಾದ ಸೌಂದರ್ಯ, ಸೌಕುಮಾರ್ಯ, ಮಾಧುರ್ಯ, ಕಾಂತಿ, ಶ್ರೀಮತ್ತ್ವ, ಮಹಿಮಾ ಇವೇ ಮೊದಲಾದವುಗಳನ್ನು ಇವಳಲ್ಲಿ (ಸುಭದ್ರೆಯಲ್ಲಿ) ಉಪಯೋಗಿಸಿ ಇವಳನ್ನು ಏಕ್ವಮೋಹಿನಿಯನ್ನಾಗಿ ಅಥವಾ ಉತ್ಕೃಷ್ಟಗಳನ್ನಾಗಿ ಸೃಷ್ಟಿಸಲು ಆಸೆಕ್ಷೆಸಿದುದಾದರೆ ಪುನಃ ಇಲ್ಲಿಯೇ ಇವಳಲ್ಲಿಯೇ ಬಂದು ಭಿಕ್ಷಾಟನವನ್ನು ಮಾಡಲಿ (ಎಂದರೆ ದಮಯಂತಿಯು ವಿಶ್ವಸೌಂದರ್ಯಸಾರದಮಿನಿಯೆಂದು ಭಾವವು.)

'ಬಲರಾಮನನ್ನು ನೋಡಿದ ಸಭಾಸಾಲನ ಹೇಳಿಕೆ:—

ಅಂಘ್ರಿಕ್ಷೇಪೈರಜಸ್ರಂ ಧರಣಿಧರಭೃತಾಂ ಕಂಪಯನ್ ಭೂತಧಾತ್ರೀಂ
ನಿರ್ಯನ್ನೇತ್ರಾನಲಾರ್ಚಿಃ ಕಪಿತಭುವನಃ ಕಾಮಪಾಲಃ ಕ್ಷಣೇನ
ಆಧಾವತ್ಯೇಷ ಭೀಮಭ್ರುಕುಟಿವಿಷಮಿತಸ್ತಿನ್ನ ವಕ್ತ್ರಃ ಸಮಸ್ತಂ
ಕ್ರುದ್ಧಃ ಸಂಹರ್ತುಕಾಮಃ ಸ್ಫುಟ ಮಿವ ಭಗವಾ ಧೂರ್ಜಟೀರ್ಘೂತಸೀರಃ॥ ೪-೫

ಕೋಪದಿಂದ ನೆಲದಮೇಲೆ ಕಾಲುಗಳನ್ನಿಡುವುದರಿಂದ ಭೂಧರಗಳನ್ನುಳ್ಳ ಭೂಮಿಯನ್ನು ನಡುಗಿಸುವನಾಗಿ, ಕಣ್ಣುಗಳಿಂದ ಹೊರಡುತ್ತಿರುವ ಅಗ್ನಿಜ್ವಾಲೆಯಿಂದ ಭುವನಮಂ ಕರಾಳಮಯವನ್ನಾಗಿ ಎಂದರೆ (ಕಸ್ಮಾಗಿ ಮಾಡುವನಾಗಿ)

ಭಯಂಕರವಾದ ಹುಬ್ಬಗಳಿಂದ ವಕ್ರವಾಗಿಮಾಡಲ್ಪಟ್ಟ ಮುಖದಿಂದ ಸಮಸ್ತವನ್ನೂ ನಿಮಿಷಾರ್ಧದಲ್ಲಿ ನಾಶಮಾಡಲಿಚ್ಛಿಸುವ ಕೋಪಾವೇಶಯುಕ್ತನಾದ ಪರಶಿವನೋ ಪಾದಿಯಲ್ಲಿರುವ ಬಲರಾಮನು ಇಗೋ! ತನ್ನ ಆಯುಧವನ್ನು ಕಂಪಿಸುವನಾಗಿ ಇತ್ತಕಡೆ ಓಡಿಬರುತ್ತಿರುವನು.

ಸುಭದ್ರಾಹರಣವನ್ನು ಮಾಡಿಕೊಂಡು ಹೋದ ಅರ್ಜುನನ್ನು ನೋಡಿ ಕೃತವರ್ಮನ ಹೇಳಿಕೆ:—

ಪಾತಾರೌ ಬಲಭದ್ರಕಂಸಮಥನೌ ಸೇಯಂ ಪುರೀ ದ್ವಾರಕಾ
ಪ್ರೋತ್ಸಿಕ್ತಾಃ ಪೃಥುಬಾಹುನಿರ್ಜಿತಜಗಚ್ಚಕ್ರಾ ವಯಂ ವೃಷ್ಣಯಃ
ತಾಂ ಭದ್ರಾಮಪರತ್ಸಪಾಂಡುತನಯಃ ಕಷ್ಟಂ ಮೃಗಃ ಪ್ರಸ್ಥಿತೋ
ಭಿತ್ತ್ವಾ ದಿಗ್ಗಜಕುಂಭಮಂಡಲತಟೀಮಾಚ್ಛಿದ್ಯ ಮುಕ್ತಾವಳೀಂ ॥ ೪—೯

ಅಹಹ! ಏನಿದು ಸರ್ವನಾಶ!

ವಿಶ್ವಸಂರಕ್ಷಕರು ರಾಮಕೃಷ್ಣರು. ನಗರಿಯು ದ್ವಾರಕಿಂ ಸಕಲಲೋಕಗಳನ್ನು ಜಯಿಸಿ ಭುಜಗರ್ವದಿಂದ ಮತ್ತರಾದ ವೃಷ್ಣಿವಂಶಜರಾದ ನಾವೆಲ್ಲರೂ ಇದ್ದಾಗ್ಯೂ ಲಕ್ಷ್ಯಕ್ಕೆತಾರದೆ, ಅನೆಯ ಕುಂಭಸ್ಥಳವನ್ನು ಭೇದಿಸಿ ಅಲ್ಲಿರುವ ಮುಕ್ತಾಹಾರವನ್ನು ಬಲವಂತವಾಗಿ ಸೆಳೆದುಕೊಂಡು ಹೋಗುವ ಮೃಗೇಂದ್ರನಂತೆ ಪಾಂಡುತನಯನಾದ ಆ ಅರ್ಜುನನು ಸುಭದ್ರೆಯನ್ನು ಅಪಹರಿಸಿಕೊಂಡು ಹೋದನಲ್ಲ!

ಅಹಹ! ಕಷ್ಟ! ಕಷ್ಟ!

ಯಮಃ ಶರಣಮಸ್ತು ತೇ ತ್ವ ನೃಶಂಸ ದಿವ್ಯಾಸ್ತ್ರೈಃ
ಪುರತ್ರಯಮಿವ ಕ್ಷಣಾತ್ಪುರರಿಪುಃ ಸ್ಮರತ್ಸಾವಕೈಃ
ಪುರುಷ್ಯ ಭುಜಗೇಶ್ವರಪ್ರತಿಮಬಾಪಟಂಕಾರಿಭಿ
ಸ್ತ್ವಯಾ ಸಹ ನ ಕಿಂ ಯಮಂ ಯಮಪುರಂಚ ಮಾಮ್ಯಹಂ ೫—೭.

ಎಲೈ! ನೃಶಂಸನೆ! ನಿನಗೆ ಯಮನು ರಕ್ಷಕನಾಗಿರುವನೆಂದು ತಿಳಿದುಕೊಂಡಿರುವೆಯೊ! ಹಾಗೆ? ಕೇಳು ಮಿಂದೆ ಪರಶಿವನು ದೆಂದಿಸ್ಯಮಾನವಾದ ಅಗ್ನಿಯೊಡಗೂಡಿದ ಬಾಣಂಗಳಿಂದ ಕ್ಷಣಾರ್ಧದಲ್ಲಿ ತ್ರಿಪುರಾಸುರನನ್ನೂ ಪುರತ್ರಯಂಗಳನ್ನೂ ನಾಶಮಾಡಿದನೋ ಹಾಗೆ ಕರಾಳ ಸರ್ಪರಾಜನಂತಿರುವ ಈ ಬಾಣಂಗಳಿಂದ ನಿನ್ನೊಡನೆ ಯಮನನ್ನೆ ಅಲ್ಲ ಯಮಪುರವನ್ನೂ ಸಹ ನಾಶಮಾಡಿಬಿಡುತ್ತೇನೆ. ತಿಳಿಯಿತೋ!

ಪ್ರಿಯಾವಿಯೋಗೇ ಪುತ್ರಾಣಾಂ ಪೀಡಯತ್ತೇ
ವಿಗಣಯಿತುಮಿಯಾತ್ತಾಂ ಕಃ ಪುಮಾನುಳ್ಳಹೇತ

ಪ್ರಸವಗುಣವಿಯುಕ್ತೋ ಮನ್ಮಾನಸ್ಯ ದೇವೀ
ಮಪಿ ಮಮ ಹೃದಿ ತಾಪೋ ಜೃಂಭತೇದುರ್ನಿವಾರ ॥
ತಪತೀಸಂವರಣ ೧—೧೪.

ಅತ್ಯಂತ ಪ್ರೀತಿಪಾತ್ರರಾದ ಮಕ್ಕಳ ವಿರಹಕಾಲದಲ್ಲಿ ಉಂಟಾಗುವ ದುಃಖವನ್ನು ಇಷ್ಟೆಂದು ತಿಳಿಯಲು ಯಾರಿಗೂ ಸಾಧ್ಯವಿಲ್ಲ. ಅಂತಹುದರಲ್ಲಿ ಪತ್ನಿಯು ಸೌಜನ್ಯಾದಿಗುಣಂಗಳಿಂದ ಕೂಡಿದವಳಾಗಿದ್ದರೂ, ಪ್ರಸವಗುಣಗಳಿಂದ ಬಿಡಲ್ಪಟ್ಟಿಪಳಾದರೆಂದರೆ ವಂಧ್ಯೆಯಾದರೆ ಅದಕ್ಕಿಂತಲೂ ವಿಪರೀತದ ದುಃಖವು ಉಂಟಾಗುತ್ತದೆ.

ಇದರಲ್ಲಿ ವಾಮನಾವತಾರ ವರ್ಣನವು ಹೀಗಿರುವುದು:- -

ದೃತ ಷಾಢ ಶಶ್ಚಚ್ಚ ಶಬಲಕೃಷ್ಣಾಜಿನವರಂ
ತಿಷಾಬದ್ಧಗ್ರಂಥಿ ಕೃತುವರನುತಿವ್ಯಾಪ್ತಮುಪಿಂ
ದಪಬ್ರಾಹ್ಮಂ ಸೂತ್ರಂ ಕಟತಟಲುಠದ್ಮೌಂಜಿರಶನಾ
ಪ್ರಣೀತೋ ವಂದೇತಹಂ ವನಜನಯನಂ ವಾಮನವಪು ॥ ೨ ೬

ದಂಡವನ್ನು ಧರಿಸಿದವನಾಗಿಯೂ ವಿಚಿತ್ರಬಣ್ಣದಿಂದ ಕೂಡಿರುವ ಕೃಷ್ಣಾಜಿನವನ್ನು ಧರಿಸಿದವನಾಗಿಯೂ ಗಂಟುಹಾಕಿದ ಕೌಪವಾಶವುಳ್ಳವನಾಗಿಯೂ ಬಲಿಯಜ್ಞದ ಸಾಮಗಾನ ಸಮಯದಲ್ಲಿ ತಿರುಗಿಸಲ್ಪಟ್ಟ ಮುಖವುಳ್ಳವನಾಗಿಯೂ ಯಜ್ಞೋಪವೀತಧಾರಿಯಾಗಿಯೂ ಇರುವ ವಾಮನ ಮೂರ್ತಿಯನ್ನು ನಮಸ್ಕರಿಸುತ್ತೇನೆ.

ಯಂ ಪ್ರಾಯೇಣ ಪ್ರಥಯಿತುಮಲಂ ರಾಜ ಮಂತಃಪುರಾಣಾಂ
ಯಂ ಕುರ್ವಂತಿ ವ್ಯಸನಸುಹೃದೋ ರಾಜಪುತ್ರಾಪರಾಧಾಃ
ರಾಜ್ಞೋ ಯಶ್ಚ ಸ್ವಯಮಪನಯಾತ್ ಸಂಪ್ರವೃತ್ತ ಕಲಾಯಂ
ಸರ್ವೋ ದೋಷಃ ಸಚಿವಮನಸಾಂ ಘೂನಮಸ್ಮೀ ವಿನಾಕೃ

ಅಂತಃಪುರಸ್ತ್ರೀಯರ ಸ್ವಕಾರ್ಯಪರತೆಯು ಯಾವ ದೋಷವನ್ನು ಹೊಗಳುವುದೋ, ರಾಜಪುತ್ರರ ಸ್ವೇಚ್ಛಾವ್ಯಾಪಾರಗಳು ವ್ಯಸನ ಪೋಷಕಗಳಾಗುವುದೋ ಪ್ರಜಾರಕ್ಷಕನಾದ ರಾಜನ ದುರ್ನಯವಿಂದ ಅಥವಾ ಅಪನಯದಿಂದ ಯಾವ ದೋಷವು ಉಂಟಾಗುವುದೋ ಇವೆಲ್ಲವೂ ಮಂತ್ರಿಯಾದವನ ಅಬೋಧ ಪರಿಪಾಕವೆನ್ನಬೇಕಾಗುವುದು. ಎಂದರೆ ಈ ತಪ್ಪುಗಳೆಲ್ಲವೂ ಮಂತ್ರಿಯಮೇಲೆ ಆರೋಪಿತಗಳಾಗುವುವಾದುದರಿಂದ ಮಂತ್ರಿಯಾದವನು ಇಂತಹುವಕ್ಕೆ ಅವಕಾಶಕೊಡದೆ ಜಾಗರೂಕನಾಗಿರಬೇಕೆಂದು ಭಾವವು.

ಲಾಸ್ಯಾರಂಭಪ್ರವಿತತತಿಖಾನರ್ಪಯಂತೀಂ ಕಲಾಪಾ-
ಕೇಕಾಪೂರಪ್ರಚಿತಕುಶರಾಂ ಕಂದರಾಂ ದ್ರಾಘಯಂತಂ
ತ್ವಂ ಪ್ರೇಕ್ಷಸ್ವ ಪ್ರಣಯವಿನಯಃ ಪ್ರೇಮವಂತಂ ಮಯೂರಂ
ಮಾ ಭೂರ್ಮಾಘ ಕ್ಷಣಮಪಿ ರವೇರ್ಮಂಡಲಸ್ಯೋಪರೋಧೀಃ ॥ ೫—೧೧

ಎಲೈ ಮೇಘವೆ! ಕ್ಷಣಕಾಲವಾದರೂ ರವಿಮಂಡಲವನ್ನು ಮರೆಮಾಡದಿರು. ಏಕೆಂದರೆ ತಮ್ಮ ಗರಿಗಳ (ಪಿಂಛ)ನ್ನು ಕೆದರಿಕೊಂಡು ಅಥವಾ ಪಸರಿಸಿಕೊಂಡು ನರ್ತನವನ್ನು ಮಾಡುವುಗಳಾಗಿ, ಕೇಕಾರವ ಕಾಲದಲ್ಲಿ ಹ್ರಸ್ವವಾಗಿರುವ ತಮ್ಮ ಕುತ್ತಿಗೆಗಳನ್ನು ದೀರ್ಘವಾಗಿಸಿಕೊಂಡು ಧ್ವನಿಮಾಡುವವುಗಳಾಗಿರುವ ಮಯೂರಂಗಳನ್ನು ಪ್ರಣಯಪರವಶನಾಗಿ ನೋಡುತ್ತಿರು. ನಿನಗೆ ಅಭೀಷ್ಟದರ್ಶನೀಯ ವಸ್ತುವು ಎದುರಿನಲ್ಲಿರುವಾಗ ಇತರರನ್ನೇಕೆ ತಡೆಯಲು ಪ್ರಯತ್ನಿಸುವೆ! ಇದು ಸರ್ವಥಾ ಸರಿಯಲ್ಲ. ಆದುದರಿಂದ ರವಿಮಂಡಲೋಪರೋಧಿಯಾಗದಿರು.

ಶ್ರೀಹರ್ಷ

ಇವನ ತಂದೆಯು ಹೀರನೆಂದೂ, ತಾಯಿಯು ಮಾಮಲ್ಲದೇವಿಯೆಂದೂ ಇವನ ಗ್ರಂಥದ ಪ್ರತಿಸರ್ಗಾಂತ್ಯದಲ್ಲಿ ಹೇಳಿಕೊಂಡಿರುವನು:—

ಶ್ರೀಹರ್ಷಃ ಕವಿರಾಜರಾಜಿಮುಕುಟಾಲಂಕಾರಹೀರಸ್ಸುತಂ
ಶ್ರೀಮಾಮಲ್ಲದೇವಸೂಃ ಜಿತೇಂದ್ರಿಯಚಯಂ ಮಾಮಲ್ಲದೇವೀಚ ಯಂ
ತಚ್ಚಿಲ್ಪಾತಿಮಮಂತ್ರಚಿಂತನಫಲೈ ಶೃಂಗಾರಭಂಗ್ಯಾ ಮಹಾ
ಕಾವ್ಯೇ ಚಾರುಣಿ ನೈಷಧೀಯಚರಿತೇ .. ..॥

ಎಂಬ ಶ್ಲೋಕದಿಂದ ತಿಳಿಯಬರುತ್ತದೆ

ಕಾಲ:—ಇವನು ಕನೂಜಿನಲ್ಲಿ ಆದ ಜಯಚಂದನ ಆಸ್ಥಾನಪಂಡಿತನು. ಜಯಚಂದ್ರ ಅಥವಾ ಜಯಂತಚಂದ್ರನು ಕ್ರಿ. ಶ. ೧೧೭೭ರಲ್ಲಿ ರಾಜ್ಯಭಾರಮಾಡುತ್ತಿದ್ದುದಾಗಿ ಈ ಕೆಳಗಿನ ದಾನಪತ್ರದಿಂದ ತಿಳಿಯಬರುತ್ತದೆ.

"... ....ಮಹಾರಾಜಾಧಿರಾಜ ಪರಮೇಶ್ವರ ನಿಜಭುಜೋ
ಪಾರ್ಜಿತಕಾನ್ಯಕುಬ್ಜಾಧಿಪತ್ಯ ಶ್ರೀಚಂದ್ರದೇವ ಪಾದಾನುಧ್ಯಾತ ಪರ
ಮಭಟ್ಟಾರಕ ....ಶ್ರೀಮದನಪಾಲ ದೇವಪಾದಾನುಧ್ಯಾತ.....
ಶ್ರೀಗೋವಿಂದಚಂದ್ರದೇವಪಾದಾನುಧ್ಯಾತ.....ಶ್ರೀಮಜ್ಜಯಚಂದ್ರೋ
ವಿಜಯೀ.....ಯಥೋಪರಿಲಿಖಿತಗ್ರಾಮಸ್ಸಗಿರಿಹನವಿಧಾನಃ ತ್ರಿಚ
ತ್ವಾರಿಂಶದಧಿಕದ್ವಾದಶಶತಸಂವತ್ಸರೇ ಆಷಾಢೇಮಾಸಿ ಶುಕ್ಲಪಕ್ಷೇ ಸಪ್ತ

ಮ್ಯಾಂತಿಥೌ ರವಿದಿನೇ (ಸಂ. ೧೨೪೩ ಕ್ರಿ. ಶ. ೧೧೮೭) ಅಸ್ಮೈಹ ಪ್ರೀಮು ದ್ವಾರಾಣನ್ಯಾಂಗಂಗಾಯಾಂ ನ್ನಾತ್ವಾ ಓಪಧಿವತಿ ಶಕಲಶೌಪರಂ ಸಮು ಭ್ಯರ್ಚ್ಯ.....ಭಾರದ್ವಾಜಗೋತ್ರಾಯ ಡೋಡರಾಉತ ಪ್ರೀ ಅಣಂಗಾಯ ಚಂದ್ರಾರ್ಕಂ ಯಾವಚ್ಛಾಸನೀಕೃತ್ಯಪ್ರದತ್ತಇತಿ ಮತ್ವಾ .....ಸಮಸ್ತದಾಯದಾಜ್ಞಾವಿಧೇಯಾ ಭೂಯದಾಸ್ಯಥ ಇತಿ.....

ಯಾನೀಹದತ್ತಾನಿಪುರಾನರೇಂದ್ರೈರ್ದಾನಾನಿ ದರ್ಮಾರ್ಥಯಶಸ್ಕರಾಣಿ
ನಿರ್ಮಾಲ್ಯವಾಂತಪ್ರತಿಮಾನಿತಾನಿಕೋನಾಮಸಾಧುಃ ಪುನರಾದದೀತ ॥

ಎಂದಿರುವುದು.

ಜಯಚಂದ್ರನ ದಾನಪತ್ರದ ಕಾಲವು ಸಂ. ೧೨೪೩ ಅಥವಾ ಕ್ರಿ ಶ. ೧೧೮೭ ರಲ್ಲಿ ಎಂದಿರುವುದು. ಕನ್ಯಕುಬ್ಜಾಧೀಶ್ವರರಲ್ಲಿ ಬಹು ಸಮರ್ಥನಾದ ಈ ಜಯ ಚಂದ್ರನು ಕ್ರಿ. ಶ. ೧೧೯೫ರಲ್ಲಿ ಯವನರನ್ನು ತನ್ನ ರಾಜ್ಯದಿಂದ ಓಡಿಸಿದುದಾಗಿ ಹಿಂದೂ ಚರಿತ್ರೆಯು ಹೇಳುತ್ತದೆ. ಇದರಿಂದ ರಾಜನಾದ ಜಯಚಂದ್ರನು ಕ್ರಿ. ಶ. ೧೧೭೯-೧೧೯೫ರವರೆಗೆ ರಾಜ್ಯಭಾರಮಾಡಿದುದಾಗಿ ಗೊತ್ತುಮಾಡಬಹುದಾಗಿದೆ. ಈ ಕಾರಣಗಳಿಂದ ಪ್ರೌಹರ್ಷನು ಕ್ರಿ. ಶ. ೧೨ನೆಯ ಶತಮಾನದವನೆಂಬುದು ಸ್ಪಷ್ಟವಾಗಿದೆ.

ಗ್ರಂಥಗಳು:— (೧) ನೈಷಧೀಯಚರಿತ (೨) ಖಂಡನಖಾವ್ಯ (೩) ಅರ್ಣವವರ್ಣನ (೪) ಗೌಡೋರ್ವೀಕುಲಪ್ರಶಸ್ತಿ ಮತ್ತು ಚಂಡೀಪ್ರಶಸ್ತಿ (೫) ತಿಲಭಕ್ತಿ ಸಿದ್ಧಿ (೬) ಸಾಹಸಾಂಕಚರಿತಚಂಪೂ.

ನೈಷಧೀಯಚರಿತ:—ಇದು ಮಹಾಕಾವ್ಯ. ಇದರಲ್ಲಿ ೨೨ ಸರ್ಗಗಳಿರುವುವು. ಕೊನೆಯಲ್ಲಿ ಗ್ರಂಥಸಮಾಪ್ತವೆಂದು ಹೇಳದೆ ಇರುವುದರಿಂದ ಇನ್ನೂ ಇರಬಹುದೆಂಬ ಸಂಶಯವಾಗುತ್ತದೆ. ೬೦ ಸರ್ಗಗಳಿಂದ ೧೨೦ ಸರ್ಗಗಳಿರಬೇಕೆಂದು ಕೆಲವರ ತರ್ಕವಿರುವುದು. ಆದರೆ ಇದು ಶುಷ್ಕತರ್ಕವೆಂದುತೋರುತ್ತದೆ. " ನೈಷಧಂವಿದ್ವದೌಷಧಂ " ಎಂಬಂತೆ ಕಾವ್ಯವೂ ಕಠಿನವಾಗಿರುವುದು. ಇದರಲ್ಲಿ ನಿಷಧರಾಜನಾದ ನಳನಿಗೂ ವಿದರ್ಭನಗರದ ರಾಜಕನ್ಯೆಯಾದ ದಮಯಂತಿಗೂ ನಡೆದ ವಿವಾಹ ವಿಚಾರ, ಹಂಸನನ್ನು ದೂತನನ್ನಾಗಿ ಕಳುಹಿಸಿಕೊಡುವಿಕೆ ಪ್ರತಿಸಂದೇಶ, ತಾನಾಗಿನಳನನ್ನುವರಿಸುವಿಕೆ, ದಮಯಂತಿಯವಿರಹ ರಾಜಕುವರರ ವರ್ಣನ, ದಮಯಂತೀವರ್ಣನ, ದಮಯಂತೀ ಸ್ವಯಂವರ, ನಳನರಾಜ್ಯಪದ್ಧತಿ, ನಳನಕರ್ಮಠತ್ವ. ಇವೇ ಮೊದಲಾದವು ಬಹುಚತುರತೆಯಿಂದ ವರ್ಣಿತವಾಗಿದೆ. ಮಹಾಕಾವ್ಯಾನುಗುಣವಾದ ನದೀಕಾಸಾರೋಪವನಾದಿ ವರ್ಣನಗಳೂ, ಗಿರಿ

---

† The Indian Antiquary 15·11 ಪ್ರಾಚೀನಲೇಖಮಾಲಾ ೨೩

ವರ್ಣನ, ಪ್ರಾತಾದಾದಿವರ್ಣನಗಳೂ, ಚೆಲುವಾಗಿವೆ. ಈ ಕವಿಯ ವಿಚಾರವಾಗಿ ಜನಜನಿತಕಥೆಯೊಂದಿರುವುದು. ಇವನ ತಂದೆಯಾದ ಹೀರನು ಮತ್ತೊಬ್ಬ ಕವಿಯಿಂದ ವಾದದಲ್ಲಿ ಪರಾಜಿತನಾಗಿ ತಿರಸ್ಕರಿಸಲ್ಪಟ್ಟು ರಾಜಾಶ್ರಯತ್ಯಕ್ತನಾಗಿ ಕೆಲವುಕಾಲಾನಂತರ ಮುಗ್ಧಶಯ್ಯಾಗತನಾಗಿ ಉಳಿವು ಇಲ್ಲದುದನ್ನು ಕಂಡು ತನ್ನಮಗನಾದ ಹರ್ಷನನ್ನು ಸವಿಾಪಕ್ಕೆ ಕರೆದು ಮಗನೆ! ನೀನು ಹೇಗಾದರೂ ವಿದ್ಯೆಯನಾರ್ಜಿಸಿ ನನ್ನನ್ನು ಪರಾಜಿತನನ್ನಾಗಿಮಾಡಿದ ಆ ಕವಿಯನ್ನು ವಾದದಲ್ಲಿ ಗೆದ್ದುದಾದರೆ ನೀನು ಪಿತೃಋಣದಿಂದ ಮುಕ್ತನಾಗುವೆ ಎಂದು ಹೇಳಿ ಪ್ರೇತಪುರಿಯನ್ನು ಹೊಂದಿದನು. ಹರ್ಷನು ಕುಟುಂಬ ಭಾರವನ್ನು ತನ್ನ ಬಂಧುಗಳಲ್ಲಿ ಒಪ್ಪಿಸಿ ಪಿತೃವಿನ ಆಜ್ಞಾಪಾಲನಕ್ಕಾಗಿ ವಿದ್ಯಾರ್ಜನೆಯನ್ನುಮಾಡಲು ಹೊರಟು ದೇಶದೇಶಗಳನ್ನು ಸುತ್ತುತ್ತಾ ಗಂಗಾತೀರವಾಸಿಯಾದ ಯೋಗೀಶ್ವರನಬಳಿ ಸಾರ್ದು ಶಿಶ್ರೂಷೆಯಿಂದವನನ್ನು ಮೆಚ್ಚಿಸಿ ಅಪ್ರತಿಹತವಾದ ಕವಿತಾಘೋರಣೆಯನ್ನೂ ಚಿಂತಾಮಣಿ ಎಂಬ ಮಂತ್ರಸಿದ್ಧಿಯನ್ನೂಹೊಂದಿ ಪುನಃ ರಾಜಸಭೆಗೆಬಂದು ತನ್ನ ತಂದೆಯನ್ನು ಪರಾಜಿತನನ್ನಾಗಿಮಾಡಿದ ಕವಿಯನ್ನುವಾದದಲ್ಲಿಸೋಲಿಸಿ ಪ್ರಶಸ್ತಿಯನ್ನು ಹೊಂದಿ ಮಹಾರಾಜನಿಂದ ಬಹುಮಾನಿತನಾಗಿ ರಾಜನ ಕೋರಿಕೆಯಂತೆ ಇಂತಹ ಲೋಕೋತ್ತರವಾದ ಕಾವ್ಯವನ್ನು ಬರೆದನು. ಕಾಶ್ಮೀರದ ಸರಸ್ವತೀ ಪೀಠದವರು ಇವನಿಗೆ 'ನರಭಾರತಿ'ಎಂಬ ಪೆಚ್ಚುಗೆಯನಿತ್ತರು. 'ಕಲಾಭಾರತಿ'ಯೆಂದು ಹೆಸರುಗೊಂಡಿದ್ದರಾಜ್ಞ್ಯಯು ಅಸೂಯೆಯಿಂದ ಇವನನ್ನು ಅಪಮಾನಪಡಿಸಬೇಕೆಂದಿರುವಲ್ಲಿ ಇವನು ಸಂಸಾರವಿರಕ್ತನಾಗಿ ಆಶ್ರಮ ಸ್ವೀಕಾರಮಾಡಿ ಶೇಷಾಯುಷ್ಯವನ್ನು ಕಳೆಯುವುದಕ್ಕಾಗಿ ಗಂಗಾತಟವನಾಶ್ರಯಿಸಿದನು. ಈ ಕಾವ್ಯದಿಂದ ಶೃಂಗಾರರಸಕ್ಕೆರಡು ಶ್ಲೋಕಗಳನ್ನು ಬರೆಯುವೆವು.

ಅದರಂ ಕಿಲ ಬಿಂಬನಾಮಕಂ ಫಲಮಸ್ಮಾದಿತಿ ಭವ್ಯಮನ್ವಯಂ
ಲಭತೇಽಧರಬಿಂಬಮಿತ್ಯದಂ ಪದಮಸ್ಯಾ ರದನಚ್ಛದಂವದತಾ ॥ ೨– ೪೪
ತಿರೀಷಕೋಶಾದಪಿ ಕೋಮಲಾಯಾ
ವೇಧಾ ವಿಧಾಯಾಂಗಮಶೇಷಮಸ್ಯಾಃ
ಪ್ರಾಪ್ತಪ್ರಕರ್ಷಸ್ಮರಕುಮಾರಸಗರ್ಭೇ
ಸಮಾಪಯದ್ಭಾಚಿ ಮೃದುತ್ವಮುದ್ಭಾ ॥ ೭—೪೭

ಈ ಕಾವ್ಯವು ಶೃಂಗಾರರಸ ಪ್ರಧಾನವಾಗಿರುವುದು. ೧೭ನೆಯ ಸರ್ಗದಲ್ಲಿ ನೈಯಾಯಿಕ, ವಿಾಮಾಂಸಕ, ಪೌರಾಣಿಕಸ್ಮೃತಿ ಪ್ರಾಮಾಣಿಕಾದಿ ಸರ್ವಮತ ಖಂಡನವನ್ನು ಹೇಳಿ ಸರ್ವವೇದಶಾಸ್ತ್ರಮತವಿದ್ಯಾಪ್ರಾಮಾಣ್ಯವ ಹೇಳಲ್ಪಟ್ಟಿದೆ. ೧೦ನೆಯ ಸರ್ಗವನ್ನೋದುವುದರಿಂದ ಇವನ ತರ್ಕವಿದ್ಯಾಪ್ರವೀಣ್ಯವು ಕಂಡು ಬರುವುದು.

ಇದರ ಕೆಲವು ಶ್ಲೋಕಗಳು:—

ಶ್ವಃ ಶ್ವಃ ಪ್ರಾಣಪ್ರಯಾಣೇಽಪಿ ನ ಸ್ಮರಂತಿ ಸ್ಮರದ್ವಿಷಃ
ಮಗ್ನಾಃ ಕುಟುಂಬಜಂಬಾಲೇ ಬಾಲಿಶಾ ಯದುಪಾಸಿನಃ ॥ ೧೭—೩೦

ಮೋಹಕ್ಕೆ ಅಧೀನರಾಗಿರತಕ್ಕವರು [ಎಂದರೆ ಸದುಪದೇಶದೂರರೂ, ಸುಜ್ಞಾನರಹಿತರೂ, ಶಿಶುಸಾಮ್ಯದಂತಿರುವವರು] ಪುತ್ರಕಳತ್ರಾದಿ ರೂಪವಾದ ಈ ಸಂಸಾರಪಂಕದಲ್ಲಿ ಸಿಕ್ಕಿಕೊಂಡು ಕೋಟಲೆಯನ್ನನುಭವಿಸುತ್ತಿದ್ದರೂ ಹಾಗೆ ಅನುಭವಿಸಿಕೊಂಡಾದರೂ, ಮೃತ್ಯುಶಯ್ಯೆಯಲ್ಲಿದ್ದರೂ ದಾರಾಪುತ್ರಾದಿಗಳ ಕ್ಷೇಮ ಚಿಂತನದಲ್ಲಿರುವುದು ಹೊರತು ಸಂಸಾರತಾರಕನಾದ ಈಶ್ವರನನ್ನು ಮಾತ್ರ ಖಂಡಿತವಾಗಿಯೂ ಧ್ಯಾಸಿಸರು.

ಅಗ್ನಿಹೋತ್ರಂ ತ್ರಯೀತಂತ್ರಂ ತ್ರಿದಂಡಂ ಭಸ್ಮಪುಂಡ್ರಕಂ
ಪ್ರಜೀವಿಕಾ ಪುರುಷೈಃ ಸ್ವಾನಾಂ ಜೀವೋ ಜಲ್ಪತಿ ಜೀವಿಕಾ ॥ ೧೭—೩೯

ಸಾಯಂಪ್ರಾತರ್ಹೋಮ ರೂಪವಾದ ಅಗ್ನಿಹೋತ್ರ ವೇದಗಳೂ ಮತ್ತು ನಿರೂಪಾಂಸಾ ಶಾಸ್ತ್ರವೂ ಅಥವಾ ವೇದತ್ರಯಕ್ಕೆ ಸಂಬಂಧಿಸುವುದಾದ ವೇದವಿಹಿತ ಕರ್ಮನೆ ಮೊದಲಾದವುಗಳನ್ನು ಜ್ಞಾನಬಲದಿಂದಲೂ, ಸ್ವಸಾಮರ್ಥ್ಯದಿಂದಲೂ ಅರಿತುಕೊಳ್ಳದವರು ಹೂಡಿರುವವಾದ ಪಾಶುಪತವ್ರತ, ಭಸ್ಮ, ತ್ರಿಪುಂಡ್ರಧಾರಣ ಇವೆ ಮೊದಲಾದವು ಚೌರ್ಯದಿಂದಲೂ, ವಂಚನೆಯಿಂದಲೂ, ಬಲಾತ್ಕಾರದಿಂದಲೂ ಲೋಕವನ್ನು ವಂಚಿಸಿ ಅವರಿಂದ ಧನಾರ್ಜನೆಯನ್ನು ಮಾಡುವುದಕ್ಕೆ ಹೊರತು ಬೇರೆ ಅಲ್ಲ.

ಅಕ್ರೋಧಂ ನಿಷ್ಕ್ರಿಯಂತ್ಯಕ್ತ್ವಾ ಕ್ರೋಧನಾ ಯೇ ತಪೋಧನಾಃ
ನಿರ್ಧನಾಸ್ತೇ ಧನಾಯೈವ ಧಾತುವಾದೋಪದೇಶಿನಃ ॥ ೧೭—೪೦

ನಿಷ್ಕಾರಣವಾಗಿ ಕೋಪಮಾಡಿಕೊಂಡು ತಮ್ಮ ತಪಸ್ಸರ್ವಸ್ವವನ್ನು ಕಳೆದು ಕೊಳ್ಳುವ ಋಷಿಶ್ರೇಷ್ಠರು [ದುರ್ವಾಸ ಪ್ರಭೃತಿಗಳು] ಕೋಪಮಾಡಿಕೊಳ್ಳಬಾರದಾಗಿ ಇತರರಿಗೆ ಉಪದೇಶಮಾಡುವಂತೆ ಧನಹೀನರು ಧನಾರ್ಜನೆಯ ಸಲುವಾಗಿ ಇತರರಿಗೆ ಚಿನ್ನ ಬೆಳ್ಳಿ ಮುಂತಾದುವುಗಳನ್ನು ಮಾಡುವ ವಿಧಾನವನ್ನು ಕಲಿಸಿ ಧನಿಕರನ್ನಾಗಿ ಮಾಡುವುದಾಗಿ ಹೇಳಿ ಅವರನ್ನು ವಂಚಿಸಿ ಧನಾರ್ಜನೆಯನ್ನು ಮಾಡುವರಲ್ಲವೆ!

ವೇದೈಸ್ತದ್ದ್ವೇಷಿಭಿಸ್ತದ್ವಿಸ್ತರಂ ಮತಶತೈಃ ಕೃತಂ
ಪರಂ ಕಸ್ತೇ ಪರಂ ಮಾಚಾ ಲೋಕಂ ಲೋಕಾಯತ ತ್ಯಜೇತ್ ॥ ೧೭-೪೨

ಎಲವೋ! ಲೋಕಾಯತನೆ! [ಎಂದರೆ ನಾಸ್ತಿಕನೆ] ಋಗ್ವೇದಾದಿ ಚತುರ್ವೇದಗಳಿಂದ ಸ್ಥಿರೀಕೃತವಾದುದಾಗಿ ಸ್ಮೃತಿಪುರಾಣಾದಿಗಳಿಂದ, ನ್ಯಾಯಮೀಮಾಂಸಾದಿ ಶಾಸ್ತ್ರಂಗಳಿಂದ, ಚರ್ಚೆವಿಚರ್ಚೆಗಳಿಂದ ಸಿದ್ಧಾಂತಗೊಳಿಸಲ್ಪಟ್ಟುದಾಗಿ ಸ್ವರ್ಗಾದಿ ಲಕ್ಷಣಗಳನ್ನೂ, ಸದೀಶ್ವರತತ್ವವನ್ನರಿತ ಜನರು ನಿನ್ನ ನಿರ್ಯುಕ್ತಿಕನಾದ ವಚನಗಳಿಗೆ ಬೆಗುಗೊಂಡು ಎಲ್ಲವನ್ನೂ ಬಿಟ್ಟುಬಿಡುವರೆ! ಎಂದಿಗೂ ಇಲ್ಲ.

ನೈಷಧಕಾವ್ಯಕ್ಕೆ ಚಂದು ಎಂಬವನು "ನೈಷಧದೀಪಿಕಾ" ಎಂಬ ವ್ಯಾಖ್ಯಾನವನ್ನು ಬರೆದಿರುವನು.

(೨) '**ಖಂಡನಖಾದ್ಯ**' ಎಂಬುದು ಆಸ್ಥಾನಕವಿಯಾದ ಉದಯನನ ಕಾವ್ಯ ಖಂಡನರೂಪವಾಗಿರುವುದು. **ಗೌಡೋರ್ವೀಕುಲಪ್ರಶಸ್ತಿ** ಮತ್ತು **ಚಂಡೀಪ್ರಶಸ್ತಿ** ಇವೆರಡನ್ನೂ ತನ್ನ ಆಶ್ರಯದಾತರಾದ ರಾಜರವರ್ಣನಗಳಿಂದ ಕೂಡಿರುವುದು. **ಅರ್ಣವವರ್ಣನವು** ಹೆಸರಿಗೆತಕ್ಕಂತ ಸಮುದ್ರವರ್ಣನವಿರುವುದು. **ಶಿವಭಕ್ತಿಸಿದ್ಧಿ** ಯೆಂಬುದು ಶಿವಸ್ತುತಿಪರ ಮತಗ್ರಂಥ. ನಾಸಿಸಾಂಕಚರಿತವೆಂಬುದು ಇದೇ ಹೆಸರಿನ ಗೌಡರಾಜನ ಜೀವನಚರಿತವನ್ನು ಚಂಪೂಗ್ರಂಥವಾಗಿರುವುದು.

ವತ್ಸರಾಜ.*

ಇವನು ಕಲಿಂಜರದರಾಜನಾದ ಪರಮರ್ಡಿದೇವನ ಒಳ್ಳೆ ಅಮಾತ್ಯನಾಗಿದ್ದನು. ಈ ವಿಚಾರವು ಇವನು ಬರೆದಿರುವ ವ್ಯಾಪ್ತಿಯೋಗಾರಂಭದಲ್ಲಿ,

ಸ್ಥಾಪಕನು: —ಭಾವ! ಪರಮರ್ಡಿಕಮಾನಸಾವಾಸಿತ ಯುಂ ಕಾಲಿಂಜರಾಧಿಪತಿ ತ್ರೈಲೋಕ್ಯದೇವ **ಕವಿವತ್ಸರಾಜನಿರಚಿತ** ಎಂದು ಹೇಳಿಕೊಂಡಿರುವುದರಿಂದ ವ್ಯಕ್ತಪಡುತ್ತದೆ

ಕಾಲ: —ಪರಮರ್ಡಿದೇವನು ಕಲಿಂಜರವನ್ನು ಕ್ರಿ. ಶ. ೧೧೬೫ ರಿಂದ ೧೨೦೨ ರ ವರೆಗೆ ಆಳಿದನು. ಇವನ ಅನಂತರ ಇವನ ಮಗ ತ್ರೈಲೋಕ್ಯವರ್ಮದೇವನು ಕಲಿಂಜರದ ಗಾದಿಯನ್ನೇರಿದನು. ವತ್ಸರಾಜನು ಪರಮರ್ಡಿದೇವನ ಬಳಿ ಅಮಾತ್ಯನಾಗಿದ್ದುದರಿಂದ ಇವನು ೧೨ನೆಯ ಶತಮಾನದ ಉತ್ತರಾರ್ಧದಲ್ಲಿದ್ದವನೆಂದು ಸ್ಪಷ್ಟವಾಗುತ್ತದೆ

* ವಿ. ಸಂ ೧೧೫೪ ಅಥವಾ ೧೧೯೭ರಲ್ಲಿ ಕೀರ್ತಿವರ್ಮದೇವನ ಸಚಿವನೂ, ಮೋಹರನ ಮಗನೂ ಆದ ವತ್ಸರಾಜನೂ, ವಿ ಸಂ ೧೨೫೨ ಅಥವಾ ಕ್ರಿ. ಶ ೧೧೯೫ರಲ್ಲಿ ಆಳಿದ ಪರಮರ್ಡಿಯ ಸಚಿವನೂ ಸಲ್ಲಕ್ಷಣನ ಅಜ್ಜನೂ ಆದ ವತ್ಸರಾಜನೂ ಇವನಿಂದ ಭಿನ್ನರು. ೧೧೯೫ರಲ್ಲಿ ಆಳಿದ ಪರಮರ್ಡಿಯು ಯಾರೆಂಬುದು ತಿಳಿಯದು.

ಗ್ರಂಥಗಳು: –(೧) ಕಿರಾತಾರ್ಜುನೀಯ—ವ್ಯಾಯೋಗ
(೨) ಕರ್ಪೂರಚರಿತ—ಭಾಣ
(೩) ರುಕ್ಮಿಣೀಪರಿಣಯ— ಈಹಾಮೃಗ
(೪) ತ್ರಿಪುರದಾಹ—ಡಿಮ
(೫) ಹಾಸ್ಯಚೂಡಾಮಣಿ—ಪ್ರಹಸನ
(೬) ಸಮುದ್ರಮಥನ –ಸಮವಕಾರ

ಇವುಗಳಲ್ಲಿ ಮೊದಲನೆಯದು ಒಂದಂಕವುಳ್ಳದ್ದಾಗಿ ಕಿರಾತಾರ್ಜುನೀಯ ಕಾವ್ಯಕಥೆಯನ್ನು ಸ್ಪಷ್ಟಗೊಳಿಸುವುದಾಗಿರುವುದು. ಅರ್ಜುನನ ತಪಸ್ಸು, ಕಿರಾತ ವೇಷಧಾರಿಯಾದ ಶಿವನಿಗೂ ಅರ್ಜುನನಿಗೂ ನಡೆದ ಯುದ್ಧ, ಮಹಾಸ್ತ್ರಪ್ರಾಪ್ತಿ ಇವು ವರ್ಣಿತವಾಗಿರುವುವು.

ಎರಡನೆಯದು ವಿಧವಿಧವಾದ ಶೃಂಗಾರ, ಸರಸ, ಹಾಸ್ಯಗಳಿಂದ ಕೂಡಿ ಒಬ್ಬ ವೇಶ್ಯಾಂಗನೆಗೂ ದ್ಯೂತಕಾರನಿಗೂ ನಡೆದ ಪ್ರಣಯಕೇಳಿಯ ರೂಪವಾಗಿರುವುದು.

ಮೂರನೆಯದು ರುಕ್ಮಿಣೀಹರಣ, ಶಿಶುಪಾಲನ ಪರಾಭವ ವರ್ಣನೆ ಯುಳ್ಳದಾಗಿ ೪ ಅಂಕಗಳಿಂದ ಕೂಡಿರುವುದು.

ನಾಲ್ಕನೆಯದು ಶಿವನು ತ್ರಿಪುರಾಸುರನನ್ನು ಸಂಹರಿಸಿ ತ್ರಿಪುರವನ್ನು ದಹಿಸಿದ ಕಥೆಯು ೫ ಅಂಕಗಳಲ್ಲಿ ಹೇಳಲ್ಪಟ್ಟಿರುವುದು.

ಐದನೆಯದು ಭೂಮಿಯಲ್ಲಿ ಅದಕವಾಗಿರುವ ಸಿದ್ಧಿಸಿಕ್ಷೇಪಗಳನ್ನು ಕಂಡು ಹಿಡಿಯುವಿಕೆ. ಕಷ್ಟವಾಗಿಹೋದ ವಸ್ತುಗಳನ್ನು ತರಿಸಿಕೊಡುವಿಕೆ ಇವೇ ಮೊದಲಾದ ಕೇವಲೀ ವಿದೂಷಕನನ್ನು ಒಲ್ಲುದಾಗಿ ನಟಿಸುತ್ತಿರುವ ಭಾಗವತ ಸಂಪ್ರದಾಯದ ಆಚಾರ್ಯನೊಬ್ಬನ ಅವಹೇಳನವು ಸುರಸವಾಗಿ ಒಂದಂಕದಲ್ಲಿ ವರ್ಣಿತವಾಗಿರುವುದು.

ಆರನೇಯದರಲ್ಲಿ ಪುರಾಣಪ್ರಸಿದ್ಧವಾದ ಸಮುದ್ರಮಥನ ವಿಚಾರ ಕಥೆಯು ಹೇಳಲ್ಪಟ್ಟಿರುವುದು. ಸಂಸ್ಕೃತಭಾಷೆಯಲ್ಲಿ ವ್ಯಾಯೋಗ, ಭಾಣ, ಪ್ರಹಸನಗಳು ಅಪರೂಪವಲ್ಲ. ಆದರೆ ಡಿಮ, ಈಹಾಮೃಗ, ಸಮವಕಾರವೆಂಬ ರೂಪಕಭೇದಗಳ ಹೆಸರನ್ನು ಅನೇಕರು ಕೇಳಿ ತೃಪ್ತರಾಗಿರುವರಲ್ಲದೆ ಸಲಕ್ಷಣವಾಗಿ ತಿಳಿದಿರರು. ಗ್ರಂಥಕಾರನು ಪುರಾಣಕಥೆಗಳಿಂದಲೂ, ನಿಜವಾಗಿಯೂ ನಡೆದುದಾದ ವಿಷಯಗಳಿಂದಲೂ ಕಥಾವಸ್ತುವನ್ನಾರಿಸಿಕೊಂಡು ಲಕ್ಷಣವಿಚಾರದಂತೆ, ಕವಿಸಮಯಕ್ಕೆ ತಕ್ಕಂತೆ ಮಾರ್ಪಡಿಸಿಕೊಂಡು ಇವುಗಳನ್ನು ಬರೆದಿರುವನು. ವತ್ಸರಾಜನ ಒಂದೇ ಒಂದು ಶ್ಲೋಕವು ಜಲ್ಹಣನ ಸೂಕ್ತಿಮುಕ್ತಾವಳಿಯಲ್ಲಿ ಮಾತ್ರ ಕಂಡುಬರುವುದು.

ಇವನ ಶೈಲಿಯು ಸುಲಭವಾಗಿಯೂ ಗಂಭೀರವಾಗಿಯೂ ಪ್ರೌಢವಾಗಿಯೂ ಇರುವುದು. ಕಿರಾತಾರ್ಜುನೀಯ ವ್ಯಾಯೋಗವು ಮಾತ್ರ ತ್ರೈಲೋಕ್ಯವರ್ಮದೇವನ ಕಾಲದಲ್ಲಿ ಅಭಿನಯಿಸಲ್ಪಟ್ಟುದಾಗಿಯೂ ಉಳಿದವು ಇವನ ತಂದೆ ಪರಮಾರಡಿ ದೇವನ ಆಳ್ವಿಕೆಯಲ್ಲಿ ಅಭಿನಯಿಸಲ್ಪಟ್ಟುದಾಗಿಯೂ ಹೇಳಿದೆ.

ರಾ ಮ ಚ ಂ ದ್ರ ಸೂ ರಿ

ಇವನು ಜೈನಮತಾನುಯಾಯಿ. ಇವನ ತಾಯಿತಂದೆಗಳಾರೆಂಬುದಾಗಲಿ ಜನ್ಮಸ್ಥಳವಾವುದೆಂಬುದಾಗಲಿ ತಿಳಿಯಹೇಳುವ ಸಾಧನಗಳೊಂದೂ ದೊರೆಯವು.

"ದತ್ತಃ ಶ್ರೀಮದಾಚಾರ್ಯ ಹೇಮಚಂದ್ರಸ್ಯ ಶಿಷ್ಯೇಣ ರಾಮಚಂದ್ರೇಣ ವಿರಚಿತಂ" ಎಂದು ಹೇಳಿಕೊಂಡಿರುವುದರಿಂದ ಆಚಾರ್ಯ ಹೇಮಚಂದ್ರನ ಶಿಷ್ಯನೆಂದು ಮಾತ್ರ ಹೇಳಬಹುದಾಗಿದೆ.†

ಕಾಲ:—ಆಚಾರ್ಯ ಹೇಮಚಂದ್ರನಕಾಲವು ಕ್ರಿ. ಶ. ಹನ್ನೆರಡನೆಯ ಶತಮಾನವೆಂದು ನಿರ್ಧರಿಸಲ್ಪಟ್ಟಿರುವುದರಿಂದ ಇವನ ಶಿಷ್ಯನಾದ ರಾಮಚಂದ್ರಸೂರಿಯು ಕ್ರಿ. ಶ. ೧೨ನೆಯ ಶತಮಾನದವನೆಂಬುದು ಸ್ಪಷ್ಟವು.

ಗುರ್ಜರದೇಶದರಾಜನಾಗಿದ್ದ ಶ್ರೀ ಸಿದ್ಧರಾಜ ಜಯಸಿಂಹನು ಈ ಕವಿಗೆ "ಕವಿಕಠಾರಮಲ್ಲ" ಎಂಬ ಬಿರುದನ್ನು ಸರ್ವರ ಸಮಕ್ಷವು ಕೊಟ್ಟುದಾಗಿ "ರಾಮಚಂದ್ರಸ್ಯ ಬಾಲ್ಯೇಽಪಿ ಶ್ರೀಘ್ರಾಕವಿತ್ವಶಕ್ತಿಂ ಪರೀಕ್ಷ್ಯ ಪ್ರಸನ್ನೇನ ಗುರ್ಜರೇಶ್ವರಚೌಲುಕ್ಯ ಶ್ರೀಸಿದ್ಧರಾಜಜಯಸಿಂಹದೇವೇನಾಸೌ 'ಕವಿಕಠಾರಮಲ್ಲ' ಬಿರುದಂ ಸರ್ವಸಮಕ್ಷಮುಪದೀ ಕೃತ್ಯಮಿತ್ಯವಸೀಯತೇ" ಎಂಬುದರಿಂದ ಗೊತ್ತಾಗುತ್ತದೆ.‡

ಗ್ರಂಥಗಳು:—(೧) ನಲವಿಲಾಸ ನಾಟಕ, (೨) ಸತ್ಯಹರಿಶ್ಚಂದ್ರ ನಾಟಕ, (೩) ಕೌಮುದೀಮಿತ್ರಾನಂದ ಪ್ರಕರಣ, (೪) ರೋಹಿಣೀಮೃಗಾಂಕ ಪ್ರಕರಣ, (೫) ನಿರ್ಭಯಭೀಮವ್ಯಾಯೋಗ, (೬) ಕುಮಾರವಿಹಾರಶತಕ ಇಷ್ಟು ಪ್ರಕಟವಾಗಿರುವುವು.

ಅಚ್ಚಾಗದೆ ಇರುವ, ಈತನದೆಂದು ಹೇಳುವ ಗ್ರಂಥಗಳು:—

(೧) ಮಲ್ಲಿಕಾಮಕರಂದ ಪ್ರಕರಣಂ, (೨) ಯಾದವಾಭ್ಯುದಯಂ, (೩) ರಾಘವಾಭ್ಯುದಯಂ, (೪) ರಘುವಿಲಾಸಂ, (೫) ವನಮಾಲನಾಟಿಕಾ, (೬) ಸುಧಾ

† ನಲವಿಲಾಸಸ್ಯ ಆಮುಖೇ ಪುಟ ೧.

‡ Introduction P 27.

ಕಲಶ, (೭) ದ್ರವ್ಯಾಲಂಕಾರ, (೮) ನಾಟ್ಯದರ್ಪಣ, (೯) ಯದುವಿಲಾಸ ಉಳಿದವುಗಳು ಸ್ತೋತ್ರಗಂಥಗಳು ಒಟ್ಟು ೩೯ ಗ್ರಂಥಗಳು\$ ಇವುಗಳಲ್ಲಿ ನಮಗೆ ಪ್ರಕೃತ ಉಪಲಬ್ಧ ಗ್ರಂಥಗಳಿರಡುಮಾತ್ರ.

(೧) ನಲವಿಲಾಸನಾಟಕಂ, (೨) ಸತ್ಯಹರಿಶ್ಚಂದ್ರನಾಟಕಂ.

ನಲವಿಲಾಸೇ ವರ್ಣಿತಾನಿ ಸಂಧ್ಯಾ ಚಂದ್ರೋದಯಾವರ್ಣನಾನಾಯಕ ನಾಯಿಕಾದೀನಾಂ ವಕ್ರೋಕ್ತಿಗೂಢಘಣೆತಿ ವೈದಗ್ಧವಿಲಸಿತಾನಿಪ್ರಸಂಗೋ ಚಿತಾನಿ ವ್ಯವಹಾರೋಪಯೋಗೀನಿ ಶಿಕ್ಷಾಸೂತ್ರಾಣೀವಾರ್ಥಗಾಂ ಭೀರ್ಯಸ್ಮೃತಾನಿ ಸುಭಾಷಿತಾನಿ ಪದ್ಯಾನಿ ಚ ಗದ್ಯಾನಿ ವಿಚಾರಕಪಾಠ ಕಾನಾಮತೀವಪ್ರಮೋದಪ್ರದಾನಿ ವಿಜ್ಞಾನಕಲಾಕೌಶಲಪ್ರವರ್ಧಕಾನಿ ಚ ಪ್ರಭವೇಯುಃ ನಾಟ್ಯಾದಿವಿಷಯಕಾನಿಕಾನಿಚಿತ್ತಾತತಃ ಉದ್ಧೃತ್ಯ ವರ್ಣಿಕಾಮಾತ್ರಮತ್ರಾವಿಷ್ಕರಿಷ್ಯಂತೇ ॥

ಎಂದು ಹೇಳಿರುವುದು ಅಕ್ಷರಶಃ ನಿಜವಾಗಿ ನಲವಿಲಾಸದಲ್ಲಿಯೂ, ನಾಟ್ಯಾದಿ ಕೆಲವು ವಿಷಯಗಳ ಹೊರತು ಉಳಿದವು ಸತ್ಯಹರಿಶ್ಚಂದ್ರನಾಟಕದಲ್ಲಿಯೂ ಕಂಡು ಬರುವುವು. ಮಾನವನಸತ್ಯಸಂಧತೆ, ಹೆಂಗಳೆಯರ ಪಾತಿವ್ರತ್ಯವನ್ನು ಲೋಕಕ್ಕೆ ತಿಳಿಯ ಹೇಳಬೇಕೆಂದು ಈ ಎರಡು ನಾಟಕಗಳಿಗೂ ತಕ್ಕುವಾದ ಕಥಾವಸ್ತುವನ್ನು ಮಹಾಭಾರತದಿಂದಾರಿಸಿಕೊಂಡು ತಾನು ಹೇಳಬೇಕೆನ್ನುವ ವಿಷಯಸಮರ್ಥನಕ್ಕೆ ತಕ್ಕುವಾದ ಹೆಚ್ಚು ಪಾತ್ರಗಳನ್ನು ಕಲ್ಪಿಸಿ ಕವಿಸಮಯವು ಕೆಡದಂತೆ ಮೂಲ ಕಥಾ ವಸ್ತುವಿಗೆ ಲೋಪಬರದಂತೆ ಕಥೆಯನ್ನು ಮಾರ್ಪಡಿಸಿ ಪ್ರಸಂಗೋಚಿತವ್ಯವಹಾ ರೋಪಯೋಗಿಯಾದ ಸೂಕ್ತಿಮಾಲೆಗಳಿಂದ ಕೋದಿರುವನು. ನಲವಿಲಾಸನಾಟಕ ದಲ್ಲಿ ೭ಅಂಕಗಳೂ ಸತ್ಯಹರಿಶ್ಚಂದ್ರದಲ್ಲಿ ೬ ಅಂಕಗಳೂ ಇರುವುವು. ಇದು ಈಚೆಗೆ ಬರೆದಿರುವನಾಟಕವಾಗಿರುವುದಾದರೂ ಈಚಿನ ಗ್ರಂಥಗಳಲ್ಲಿ ಬಹುಮಟ್ಟಿಗೆ ಕಂಡು ಬರುವ ಕಟುಮತ್ತು ಕೃತ್ರಿಮ ಶೈಲಿಯು ಇವುಗಳಲ್ಲಿ ಕಂಡು ಬರುವುದಿಲ್ಲ. ಇವನು ಗ್ರಂಥ ಚೌರ್ಯಾನುರಕ್ತರಾದ ಕವಿಗಳನ್ನು ಬಹುವಾಗಿದೂಷಿಸಿ: -

ಸ್ವಪ್ರಾಂ ಲೋಕಃ ಕವ್ಯಂ ವಹತಿ ಜರಠ್ಯಂ ಕುಂಠಿತತಮ್
ವ್ರಜೋಭಿರ್ವಾಚ್ಯೇನ ಪ್ರಕೃತಿಕುಟಿಲೇನ ಸ್ವಪುಟತೇ
ವಯಂ ವೀಥೀಂ ಗಾಢುಂ ಕಥಮಪಿ ನ ಶಕ್ತಾಃ ಪುನರಿಮಾ
ಮಿಯಂ ಚಿಂತಾ ಚೇತಸ್ತರಲಯತಿ ನಿತ್ಯಂ ಕಿಮಪಿನಃ ॥ ೧—೪

ಎಂದು ಒಕ್ಕಣಿಸಿರುವನು.

\$ Introduction Nalavila·a Nataka P. 33.

ತನ್ನ ಗ್ರಂಥಗಳನ್ನು ಬರೆಯುವುದರಲ್ಲಿ ತಾನು ಯಾರನ್ನೂ ಅನುಸರಿಸಿ ಬರೆದಿಲ್ಲವೆಂದೂ.

ಜನಃ ಪ್ರಜ್ಞಾಪ್ರಾಪ್ತಂ ಪದಮಥ ಪದಾರ್ಥಂ ಘಟಯತಃ
ಪರಾಧ್ವಾಧ್ವನ್ಯಾ ನಃ ಕಥಯತು ಗಿರಾಂವೃತ್ತ್ಯನಿಯಮಂ ।
ಅಮಾವಾಸ್ಯಾಯಾಮಪ್ಯವಿಕಲವಿಕಾಸೀನಿ ಕುಮುದಾ
ನ್ಯಯಂ ಲೋಕಶ್ಚಂದ್ರವ್ಯತಿಕರವಿಕಾಸೀನಿ ವದತಿ ॥ ೧–೨

ಎಂದುಹೇಳಿಕೊಂಡಿರುವುದರಿಂದ ಪದಾರ್ಥ (Theme) ಪದ (Language). ಗಳಿಗೆ ತಾನು ಯಾರಿಗೂ ಋಣಿಯಾಗಿರುವದವಶ್ಯವಿಲ್ಲವೆಂದು ಹೊಗಳಿಕೊಂಡಿರುವನಾದರೂ ಈ ಕೆಳಗಣವಿಚಾರಗಳು ಭಾವ, ಶಬ್ದ, ಅರ್ಥ ಅಭಿಪ್ರಾಯರೂಪಗಳಲ್ಲಿ ಪೂರ್ಣವಾಗಿಯೋ ಅಥವಾ ಕೆಲಸ್ವರೂಪಗಳಿಗೋ ಹೇಗೋ ಇವನ ಗ್ರಂಥದಲ್ಲಿ ತಲೆದೋರಿವೆ.

(೧) **ಅಪೂರ್ವಕರ್ಮಚಂಡಾಲ** ಮಯಿ .....॥ ಉತ್ತರರಾಮಚರಿತೆ
ಹ. ಪ್ರ. ವಿ 'ವಿಷಕರ್ಮಚಂಡಾಲೋನಲಂ ಪ್ರಯಾತಃ ॥
ನೀಲಿಮಸ ನಾಟಕಲಂಕಾರ ಪುಟ ೬೪

(೨) ಯಾ ಜಾತಂ ಹಸ್ತಂ ಸಮಾಯಮಮಸಾಕ್ಷತೆ (ದಕ್ಷಿಣಹಸ್ತಂ ಪ್ರಸಾರ್ಯ ಸರೋಷಂ.)

ನ್ಯಯಾತಾವತ್ ಸಾಂ ಪ್ರಸಭಮುಪಗೂಢಂ ಪರಿಣಯೆ
ತನೆ ಸಾರ್ಧಂ ಶೈಸವ್ತನವಫಲಸಂಭೃತಸಜಿವ
ರತಕ್ರೀಡಾಶೈಲಂ ನಮ ಕ್ರಕಕ್ಷಪರಿಕ್ಷಿಪ್ತಪರಿಕರ
ಸ್ತವನ್ಮನೊರಥಾನಾಂ ಕಥಮಸಿಹ! ಸೋಢಾ ವಿಲಯನಂ ೫-೧೪

ಅಪಿಚ:—

ದೇವೀಸವಿಜ್ಞಾದಯೋಲ! ಸದರ್ಶಕ್ಷಣಂ ಪರಿರೋಷಸ್ಯ !
ಸಮಾಶ್ವಸಿಹಿ ನ ವಿನಿಂಚೋಪಿಪನ್ನ ! ಮಲ್ಲಂ ಪಕ್ಷಿಸಾ ಸೃಜ್ಯ ೫-೧೫

ಎಂಬುದರ ಅಭಿಪ್ರಾಯವು:—

ಸೀಹಸ್ತ ದಕ್ಷಿಣ ಮೃತಸ್ಯ ಶಿಶೋರ್ದ್ವಿಜಸ್ಯ
ಜೀವಾತವೇ ವಿಸೃಜ ಪೂರ್ವಮುಚಿ ಕ್ಷಣಾರ್ಧಂ
ರಾಮಸ್ಯಗಾತ್ರಮಸಿ ದುರ್ವಪಗರ್ಭಖಿನ್ನ
ಸೀತಾವಿವಾಸನ ಪಟೋ ಕರುಣಾಕುತಸ್ತೇ ಉ ರಾ ಚ ೨-೧೦

ಎಂಬ ಶ್ಲೋಕಾಭಿಪ್ರಾಯವನ್ನು ಕೊಂಚವಾದರೂ ಹೋಲುವುದಿಲ್ಲವೆ !

(೩) ಅತ್ಯಂತ ದುಃಖಿತಳಾದ ಸೀತೆಯು ತನ್ನನ್ನು ಇರಿಸಿಕೊಳ್ಳಲು ಭಾಗೀರಥಿಯನ್ನು ಪ್ರಾರ್ಥಿಸಿ ಅದರಂತೆ ಗಂಗೆಯಲ್ಲಿ ಒಡಲನ್ನಿಟ್ಟುದಾಗಿ "ಹಾ ! ಆರ್ಯ

ಪುತ್ರ ಕುಮಾರಲಕ್ಷ್ಮಣ! ಏಕಾಕಿನೀಮಶರಣಾಮಾಸನ್ನಪ್ರಸವವೇದನಾಮರಣ್ಯೇ ಹತಾಶಾಂ ಶ್ವಾಪದಾ ಅಭಿಲಷಂತಿ ಹಾ! ಇದಾನೀಂ ಮಂದಭಾಗ್ಯಾ ಭಾಗೀರಥ್ಯಾಮಾತ್ಮಾನಂ ನಿಕ್ಷಿಪಾಮಿ" ॥ ಎಂದು ಉತ್ತರ ರಾಮಚರಿತದಲ್ಲಿ ಹೇಳಿರುವಂತೆ ನಲವಿಲಾಸನಾಟಕದಲ್ಲಿ.

ಮಾತಃ ! ಪ್ರಸೀದ ವಸುಧೇ ! ವಿಮಿತೋಽಂಜಲಸ್ತೇ
ಪಾತಾಲಮೂಲಪಥಿಕಂ ವಿವರಂ ಪ್ರಯಚ್ಛ
ಆಶೀರ್ಲತಾಶತಫಲೇಷು ಫಲೇಂದ್ರವಕ್ತ್ರ
ಕೋಷ್ಣಾಶ್ರಮೇಷು ನಸು ಯೇನ ಭವಾಮಿ ಶಾಂತಃ ೬೦೫

ಎಂದು ಹೇಳಿಕೊಂಡಿರುವುದು ಕಂಡುಬರುತ್ತದೆ.

(೪) ವಕ್ತ್ರಂ ಚಂದ್ರವಿಲಾಸ ಮುಜಪರೀಹಾಸಕ್ಷಮೇಲೋಚನೇ
ವರ್ಣಃ ಸ್ವರ್ಣಮಪಾಕರಿಷ್ಣುರಲಿನೀ ಜಿತ್ವಾಽಽ ಕಚಾನಾಂಚಯಃ
ವಕ್ಷೋಜಾಬಿಭಿದುಂಭವಿಭ್ರಮಹತೌ ಗುರ್ವೀ ನಿತಂಬಸ್ಥಲೀ
ನಾಚಾಂ ಹಾರಿಚ ನಾರ್ದ್ರವಂ ಯುವತಿಷು ಸ್ವಾಭಾವಿಕಂ ಮಂಡನಂ

(ಸತ್ಕೃಹರ್ಷಚಂದ್ರ ೪–೯)

ಎಂಬ ಶ್ಲೋಕವು ಭರ್ತೃಹರಿಯ ಶೃಂಗಾರಶತಕದಲ್ಲಿ ಹೇಳಿರುವುದು ಕಂಡು ಬರುತ್ತದೆ ಪ್ರಕೃತ ಇಷ್ಟುಸಾಕು.

ನಲವಿಲಾಸ ನಾಟಕವನ್ನಾಗಲಿ ಅಥವಾ ಸತ್ಯಹರಿಶ್ಚಂದ್ರ ನಾಟಕವನ್ನಾಗಲಿ ಪೀಠಿಕಾಪೂರ್ವಕ ಓದುಗರಿಗೆ ಬೇಸರುತ್ತಿರಿಸಿ ಹೇಳಿಕೊಳ್ಳುವಂತಹ ಚತುರತೆಯು ಯಾವುದೂ ಕಂಡುಬರುವುದಿಲ್ಲವಾದರೂ ಓದುಗರಿಗೆ ಆಸಕ್ತಿಹುಟ್ಟಿಸುವಂತೆ ಬರೆದಿರುವನು. ಮಹಾಭಾರತದಲ್ಲಿ ಹೆಂಸವ್ಯ ನಳನಸೌಂದರ್ಯವನ್ನು ಕುರಿತು ಪ್ರಶಂಸಿಸುವುದರ ಮೂಲಕ ದಮಯಂತಿಯನ್ನು ನಳನಲ್ಲಿ ಅನುರಕ್ತನನ್ನಾಗಿಸಿದುದಾಗಿ ಹೇಳಿದೆ ಆದರೆ ನಲವಿಲಾಸನಾಟಕದಲ್ಲಿ ಕಲಹಂಸ ಮತ್ತು ಮಕರಿಕಾ ಎಂಬೆರಡು ಪಾತ್ರಗಳನ್ನು ಯೋಜಿಸಿ ಕಲಹಂಸನು ನಳನ ಮಿತ್ರನೆಂದೂ, ಮಕರಿಕೆಯು ರಾಣೀವಾಸದಚೇಟಿಯೆಂದೂ ಹೇಳಿ ಇವರಿಬ್ಬರಚಾತುರ್ಯದ ಮೂಲಕ ಪಿವಾಹ ಸಂಘಟನೆಯಾದಂತೆ ಹೇಳಿರುವನು ನಳದಮಯಂತಿಯರ ಪರಸ್ಪರ ಪ್ರಣಯನಿವೇದನದಲ್ಲಿ ದೇವತೆಗಳೂ ಲೋಕಪಾಲಾದಿಗಳೂ ತೊಂದರೆಗೊಳಿಸಲು ಎತ್ನಿಸಿದುದಾಗಿ ಮಹಾಭಾರತದಲ್ಲಹೇಳಿದೆ. ನಾಟಕದಲ್ಲಿ ಪೂತನವಪಾತ್ರವನ್ನು ಯೋಜಿಸಿದೆ. ಕಲಪುರುಷನು ನಳನಿಗೆ ತೊಂದರೆಕೊಟ್ಟುದಾಗಿ ಮಹಾಭಾರತದಲ್ಲಿದೆ. ನಾಟಕದಲ್ಲಿ ಹಾಗಿರದೆ ದಮಯಂತಿಯ ಸೌಂದರ್ಯಮುಗ್ಧನಾದ ಚಿತ್ರಸೇನನೆಂಬವನು ನಳನ ವಿಚಾರದಲ್ಲಿ ಅಸೂಯೆಗೊಂಡು ಕೋಟಲೆಗೊಳಿಸಿದುದಾಗಿ ಬರೆದಿದೆ. ಇವೇ ಮೊದಲಾದ

ಕೆಲವುಭಾಗಗಳಲ್ಲಿ ಈ ನಾಟಕವು ಪಿಂದಣ ಗ್ರಂಥಕಾರರ ಮಾರ್ಗಾನುಸರಣವನ್ನು ಬಿಟ್ಟು ನೂತನಮಾರ್ಗವನ್ನು ಅವಲಂಬಿಸಿರುವುದೆಂದು ಮಾತ್ರಹೇಳಬಹುದು.

"ವೈದರ್ಭೀ ರೀತಿಮಹಾ ಲಭೇಯ ಸೌಭಾಗ್ಯಸುರಭಿತಾವಯವಾಂ ॥

ಎಂದು ಮಂಗಳಾಚರಣದಲ್ಲಿ ಹೇಳಿರುವಂತೆ ಕವಿಯು, ನಾಟಕವನ್ನು ಸುರಚಿರವಾದ ವೈದರ್ಭೀರೀತಿಯಲ್ಲಿ ನೊಂಪಿಸುವಂತೆ ಬರೆದಿದಾನೆ ಹೆಚ್ಚಿಸಿಕೆ ! ಕವಿವರ್ಣನೆಯ ಪ್ರತಿಭಾಶಕ್ತಿಯು "ಕುಮಾರಪಾಲಪ್ರತಿಬೋಧ" ಕಾರನಾದ ಮಹಾಕವಿ ಸೋಮಪ್ರಭಾಚಾರ್ಯನೂ ಮನಸೋತು ಅನುಸರಿಸುವಂತೆ, ಅಷ್ಟುಸೊಗಸಾಗಿದಮಯಂತೀ ಸ್ವಯಂವರ ವರ್ಣನೆಯನ್ನು ಮಾಡಿರುವನು. ಇವನ ವರ್ಣನೆಗಳಲ್ಲಿ ದಮಯಂತೀ ಸ್ವಯಂವರ ವರ್ಣನೆಯು ಅತೀವ ಮನೋಜ್ಞವಾಗಿದೆ. ನಲವಿಲಾಸನಾಟಕದ ೫ ಮತ್ತು ೬ನೆಯ ಅಂಕಗಳು ಕರುಣರಸಯುಕ್ತವಾಗಿ ಸಾಷಾಣಸದೃಶಹೃದಯವನ್ನು ಕರಗಿಸುವುದಾಗಿ ಭವಭೂತಿಯ ಉತ್ತರರಾಮ ಚರಿತೆಯನ್ನು ಹಾಗೆ ಹಾಗೇ ಜ್ಞಾಪಕಕೆ ತರುವುದಾಗಿದೆ

ಕಲಹಂಸನು ನಳನೊಡನೆ ಹೇಳುವ ದಮಯಂತಿಯ ಸೌಂದರ್ಯ ವರ್ಣನೆ—

ಕಾವ್ಯಂ ಚೇತಾ ಸರಸಂ ಕಿಮರ್ಥಮಮ್ಲಶಂ ವಕ್ತ್ರಂ ಕುರಂಗೀದೃಶಾಂ
ಚೇತಾ ಕೆಂದರ್ಪವಿಷಾಂಡುಗಂಡಫಲಕಂ ರಾಕಾಶಶಾಂಕೇನ ಕಿಂ
ಸ್ವಾತಂತ್ರ್ಯಂ ಯದಿ ಜೀವಿತಾವಧಿ ಮುಧಾ ಸ್ವರ್ಭೂರ್ಭುವೋ ವೈಭವಂ
ವೈದರ್ಭೀ ಯದಿ ಬದ್ಧಯೌವನಭರಾ ಪ್ರೀತ್ಯಾ ಸಖ್ಯಾಕಪಿ ಕಿಂ
ನಲವಿಲಾಸ ೨—೨

ವಿಶ್ವಸ್ಯ ಶ್ರವಣೇಂದ್ರಿಯಂ ಸಫಲತಾಂ ನೇತುಂ ಪುರಾ ಭಾರತೀ
ವಾಚಾಂ ರೂಪಮುಪಾಸ್ಯ ನಿರ್ಮಿತವತೀ ವಾಸಂ ವಿದರ್ಭಕ್ಷಿತೌ
ವೈದ್ಧೇಷ್ಯೇವ ನರೇಂದ್ರಭೀಮತನಯಾವೇಷಂ ವಿಧೃತ್ಯಾಧುನಾ
ಸಾಫಲ್ಯಂ ನಯತೇ ವಿಧೇಯಂ ಗಮಯಿತುಂ ದೇವೀ ಸ್ಮರಸ್ಯ ಪ್ರಿಯಾ॥ ೩-೪

ದಮಯಂತಿಯ ಸ್ವರೂಪ ವರ್ಣನೆ: –

ಚಲಕಮಲವಿಲಾಸಾಭ್ಯಾಸಿನೀ ನೇತ್ರಪತ್ರೀ
ದಶನವಸನಭೂಮಿರ್ಬಂದುಜೀವಂ ದುನೋತಿ
ಸ್ಮರಭರಪರಿರೋಹತ್ಪಾಂಡಿಮಾಗೂಢರೂಢ
ದ್ಯುತಿವಿಜಿತಮೃಗಾಂಕಾ ಮೋದತೇ ಗಂಡಭಿತ್ತಿಃ ॥ ೩—೫

ಕಾರ್ಕಶ್ಯಭೂಃ ಸ್ತನತಟೀ ನ ಗಿರಾಂ ವಿಲಾಸಃ
ಕೇಶಾಃ ಪರಾಂಕುಟಿಲತಾಂ ದಧತೇ ನ ಚೇತಃ
ತಸ್ಯಾಃ ಕುರಂಗಕೆದೃಶೋ ನೃಪಚಕ್ರವರ್ತಿ
ಜಾಡ್ಯಂ ಗತೌ ನ ತು ಮತೌ ವಿಧೃತಾವಕಾಶಂ ॥ ೩—೬

ಮಧ್ಯಾಹ್ನ ವರ್ಣನೆ:—

ಅಬಿಲಾನಾಂ ಬಿಸಿನೀನಾಂ ಕಮಲಮುಖಾನ್ಯೇಕಹೇಲಯಾ ದ್ರಷ್ಟುಂ
ಗಗನಾಚಲಗರ್ಭಮನಾವಧಿರೋಹತಿ ಕಮಲಿನೀನಾಥಃ ॥ ೨—೨೪

ಸ್ವಯಂವರ ವಿಚಾರವಾಗಿ ರಾಜನ ಹೇಳಿಕೆ:—

ಆಮಂತ್ರಿತಾ ವಯಮಿತಃ ಪ್ರಮದಃ ಪರೇಽಪಿ
ಸಂತ್ಯಾಗತಾಃ ಕ್ಷಿತಿಭುಜೋಽಥ ವಿಷಾದತಾಪಃ
ಅಂಗಂ ವಿಧಾನಮಿವ ಸಂಧಿಷು ರೂಪಕಾಣಾಂ
ತುಲ್ಯಂ ಸ್ವಯಂವರವಿಧಿಃ ಸುಖಿದುಃಖಹೇತುಃ ॥ ೩—೪

ಗೀತಶಾಸ್ತ್ರಾನಭಿಜ್ಞರ ವಿಚಾರವಾಗಿ ಕಲಹಂಸನ ಹೇಳಿಕೆ:—

ನ ಗೀತಶಾಸ್ತ್ರಮರ್ಮಜ್ಞಾ ನ ತತ್ತ್ವಜ್ಞಾಶ್ಚ ಯೇ ಕಿಲ
ಅನೌರಪಶುದೇಶ್ಯೇಭ್ಯಸ್ತೇಭ್ಯಃ ಪುಂಭ್ಯೋ ನಮೋ ನಮಃ ॥ ೩—೧೦

ಆಸ್ತಾಂ ಮರ್ಮಪರಿಜ್ಞಾನಂ ಯೇಷಾಂ ಗೀತಸ್ಯ ಹಾ ಕಪಿ ನ
ಕುರಂಗೇಭ್ಯೋಽಪಿ ಹೀನೇಷು ಮರ್ತ್ಯತ್ವಂ ತೇಷು ವೈರಸಂ ॥ ೩-೧೧

ಅಜಲ್ಪ್ಯ ಜಲ್ಪಾಮಃ ಕಿಮಪಿ ಕಿಲ ವಾಷಾಣಸುಹೃದಾಂ
ಸದಾ ತೇಷಾಂ ಭೂಯಾಜ್ಜಗತಿ ಪುರುಷಾಣಾಮಜನಸಿಃ
ಅಸಾರಂ ಸಂಸಾರಂ ವಿದಧತಿ ನ ಸಾರಂ ಪ್ರತಿಮುಹುಃ
ಪಿಬಂತೋ ಯೇ ಸೂಕ್ತ್ಯರಥ ಚ ಕಲಗೀತೀರ್ಮಧುಮುಚಃ ॥ ೩—೯

ಸ್ತ್ರೀವಿಚಾರದಲ್ಲಿ ಕಪಿಂಜಲನಹೇಳಿಕೆ:—

ಅವಿದಿತಮರ್ಮಾ ಕರ್ಮಸು ನ ಶರ್ಮ ತಜ್ಜನ್ಮ ಚುಂಬತಿ ಪ್ರಾಯಃ
ಅಕಲಿತಹೃದಯಸ್ತ್ರೀಣಾಂ ಸ್ಮರೋಪನಿಷದೋ ಬಹಿಃ ಪ್ಲವತೇ ॥ ೩—೧೭

ನಳನು, ಮುಲಗಿರುವ ದಮಯಂತಿಯ ಮುಖವನ್ನು ನೋಡಿ ನೋಡಿ, ಭವತು, ಚರಮಂ, ದೇವೀವದನೆಂದು ವಿಲೋಕನಂ ಕೃತ್ವಾ ವ್ರಜಾಮಿ.

(ವಿಲೋಕ್ಯ ಸಾಸ್ರಂ)

ಸ್ಪೃಶತಿ ನ ಮಾಂ ಜ್ಯೋತ್ಸ್ನಾಚ್ಛನ್ನಂ ನಶಾಂತಜುಷಃ ಪುರಾ
ಸುಚಿರಮನಲೋಽಪ್ಯಂಗಂ ಯಸ್ಯಾ ನಲಾದಿವ ಶಂಕಿತಃ
ವಿಗತಶರಣಾಕ್ಷುತ್ಕ್ಷಾಮಾಂಗೀ ಪಟಚ್ಚರಧಾರಿಣೀ
ವನಭುವಿ ಹಹಾ। ಸೇಯಂ ಶೇತೇವಿದರ್ಭಪತಿಪ್ರಸೂಃ ॥ ೫-೧೮

ಭವತುವನದೇವತಾಃ ಶರಣಂ ಕೃತ್ವಾವ್ರಜಾಮಿ, (ಪ್ರತಿನಿವೃತ್ಯದಿಶೋಽವಲೋಕ್ಯ)

ಕಚ್ಚಿತ್ಕಾನನದೇವತಾಃ। ಶೃಣುತಮೇ ಯಸ್ಯಾ ವಪುಃ ಕಲ್ಪಯ್ಯ
ಜಾತಃ ಶಿಲ್ಪಿಗಣಾಗ್ರಣೀಃ ಕಮಲಭೂಃ ಸೇಯಂ ವಿದರ್ಭಾತ್ಮಜಾ

ಅಸ್ಯಾಃ ಕರ್ಕಶಕರ್ಮಣಾ ಪ್ರಿಯತಮಾಭಾಸೇನ ನಿಷ್ಕಾರಣಂ
ತ್ಯಕ್ತಾಯಾಃ ಶರಣಂ ಸ್ಥಮಾ ಸ್ಮ ಸಲವನ್ನಿಸ್ತ್ರಿಂಶತಾಂ ಗಚ್ಛತ ॥ ೫-೧೯

(ಪುನರಂಜಲಿಂ ಬಧ್ವಾ)

ನಿದ್ರಾಚ್ಛೇದೇಕ್ಷದಯಿತ ! ಗತೋಽಸೀತಿತಾರಂ ವದಂತೀ
ವಿನ್ಯಸ್ಯಂತೀ ದಿಶಿ ದಿಶಿ ದೃಶಂ ಬಾಷ್ಪಕಲ್ಲೋಲಲೋಲಾಂ
ದೇವ್ಯಃ ! ಸರ್ವಾವನವಸತಯೋ ಮಾತರಃ ಪ್ರಾರ್ಥಯೇ ವ
ಸ್ತತ್ಕರ್ತವ್ಯಂ ಕಲಯತಿ ತಥಾ ಕುಂಡಿನಾಧ್ವಾನಮೇಷಾ ॥ ೫-೨೦

(ದಮಯಂತೀಮನುಸ್ಮೃತ್ಯ ಸಾನುತಾಪಂ)

ರಾಜ್ಯಂ ಹಾರಿತವಾನಹಂ ನಹಿ ನಹಿವ್ಯಾಧತ್ತ ಸರ್ವಂ ವಿಧಿ
ರ್ದೇವೀಮಹಾರ್ತ್ಯ ಜಮಸ್ಮ ತತ್ರವಿಪಿನೇ ಯದ್ಬಾಸ್ತ್ರಿಯೋ ಬಂಧನಂ
ತಾಂ ಪಶ್ಯೇಯಮಹಂ ವನೇಽಧ ಗಹನೇ ತಸ್ಯಾಃ ಕುತಃ ಪ್ರಾಣಿತಂ
ಹೀರ್ಮೇನೋ ನಡಯಾ ದುರೋದರಕೃತಃ ಕಾವಾತ್ರಪಾ ಕಾ ಕೃವಾ?॥೬-೧

(ಸ್ಮೃತ್ವಾಸಚಿಂತಂ)

ಸ್ಫುರತಿಮಿರೇ ಘೂಕವ್ರಾತೇ ಪ್ರನೃತ್ಯತಿಭೈರವಂ
ಕಕುಭಿ ಕಕುಭಿ ವ್ಯಾಳೀಕೇ ವಿಸರ್ಪತಿ ಸದ್ಮನೌ
ಚರಮಮುಚಲಂ ಯಾತೇ ಪತ್ಯೌ ರುಚಾಂ ಚಕಿತೇಕ್ಷಣಾ
ಶರಣಮಧಿಕಂ ಧೀರುರ್ದೇವಿ ಕರಿಷ್ಯತಿ ಕಿಂವನೇ ? ॥ ೬-೪

(ಸದುಃಖಮಾತ್ಮಗತಂ)

ಶ್ರುತೇ ! ಬಾಧಿರ್ಯಂ ತ್ವಂ ಕಲಯ ಬಿಭೃತಾಂ ಕಿಂಚನಯನೇ
ಯುವಾಮುಂಧೀಭಾವಂ ದ್ರುತಮನಗದಂಕಾರವಿಷಯಂ
ಶ್ಮಕೋಮ್ಯಸ್ಯಾಸ್ತಾರಂ ನರುದಿತಮಹಂ ಯೇನತದಿದಂ

ನಳನು ಮಲಗಿದ್ದ ಸತಿಯನ್ನು ಬಿಟ್ಟು ಹೊರಟುಹೋಹ ಈ ಪ್ರಸಂಗವು ಎಷ್ಟು ತಾಪದಾಯಕವೆಂಬುದನ್ನು ನೋಡಿ.:—

(ಅಂಶುಕಂದ್ವಿಧಾಕೃತ್ಯ ಶನ್ಯೈರುತ್ಥಾಯ)

ಭ್ರಾತಶ್ಚೂತ ! ವಯಸ್ಯಕೇಸರ ! ಸಖೇಪುನ್ನಾಗ ! ಯಾಮೋವಯಂ
ಮಾಸ್ಮಾಸ್ಮಾಕಮನಾರ್ಯ ಕಾರ್ಯಪರತಾಂ ಜಾನೀತ ಯೂಯಂ ಹೃದಿ
ದ್ಯೂತೇಬ್ಜಾಕ್ಷಚ ಕೂಬರಸ್ಯ ನಿಷಧಾಭರ್ತುಃ ಕೃಚಾಕೈರ್ಜಯೋ
ನ ವಾ ಪಶ್ಯೇಯ್ಯೇತಾಂ ವಿರಹಹರಿಣೀಂ ಹಾರಿಲಲಿತಾಂ ॥ ೬—೧೧

ನಳನನ್ನು ಕುರಿತು ದಮಯಂತಿಯ ವಿಲಾಪ :—

ಎದುರಿನಲ್ಲಿ ಕಂಡುಬಂದ ಚಕ್ರವಾಕಗೃಹಿಣಿಯನ್ನು ನೋಡಿ:—

ಸಖಿ ಚಕ್ರವಾಕದಯಿತೇ! ದಯಿತಂ ಕಿಂ ಮಮ ನ ಕಥಯಸಿ ಸಹಸಾ ?
ಪ್ರಿಯವಿರಹಿತಾನಾಂ ದುಃಖಂ ಪ್ರತ್ಯಕ್ಷಂ ತವಾನುನಿತ್ಯಂ ॥ ೬-೬.

(ವಿಲೋಕ್ಯ ಸಂಸ್ಕೃತ ಮಾಶ್ರಿತ್ಯ ಚ.)

ಮಾತಃ ಕುಂಜರಪತ್ನಿ! ತಾತಹರಿಣ! ಭ್ರಾತಃ ಶಿಖಂಡಿನ್! ಕೃಪಾಂ
ಕೃತ್ವಾಬ್ರೂತ ಮನಾಕ್ಪ್ರಸೀದತಕೃತೋ ಯುಷ್ಮಾಕಮೇಷೋಂಽಜಲಿಃ
ದೃಷ್ಟಃ ಕಾಪಿ ಗವೇಷಯನ್ನಿಹವನೇ ಭೀಮಾತ್ಮಜಾಂ ನೈಷಧೋ
ಭೂಪಾಲಃ ಸರಭಸಂ ಸೃಜಂತವಿರಬೈರ್ಬಾಷ್ಪೋರ್ಮಿಭಿಃ ಪಂಕಿಲಾಂ ॥೬-೮

(ನಳನನ್ನುದ್ದಿಶಿಸಿ) ಮನದೆರೆಯ!

ಆತ್ಮಾ ಸಮರ್ಪಿತಃ ಪ್ರಥಮದರ್ಶನೇ ವನಮಿದಂ ಚ ಸಹ ಚಲಿತಾ
ಸ್ವಪ್ನೇಽಪಿ ಪತಿಮನ್ಯಂ ನ ಕಾಂಕ್ಷಾಮಿ ತಥಾಪಿ ಪರಿತ್ಯಕ್ತಾ ॥ ೬-೯
ಏಕಾಕಿನ್ಯಹಂ ಭೀರುಕಾಚ ನಿರ್ಮಾನುಷಂ ಚನನಮಿದಂ
ತದೇಹಿ ಸಹಿ ಪ್ರಿಯತಮ ' ಅಲಂ ಪರಿಹಾಸಕ್ರೀಡಯಾ ॥ ೬-೧೦

ನಳನು ದೊರೆಯನೆಂದು ಹತಾಶಳಾಗಿ ಅಗ್ನಿಪ್ರವೇಶ ಮಾಡಬೇಕೆಂದಿರುವ ದಮಯಂತಿಯನ್ನು ನೋಡಿ ವೇಷಾಂತರದಲ್ಲಿದ್ದ ನಳನು ಸಂಭ್ರಮದಿಂದ (ಸಸಂಭ್ರಮಂ ಬಾಹೌ ಗೃಹೀತ್ವಾ) ಅಯೇ! ಸುಂದರಿ!

ಯೇನಾಕಸ್ಮಾತ್ ಕಠಿನಮನಸಾ ಭೀಷಣಾಯಾಂ ಕರಾಲ
ವ್ಯಾಲಾನಾಂಽತ್ಯಂ ವನಭುವಿ ಹತೇನಾತಿಧೈಯೀಃ ಕೃತಾಸಿ।
ನಿರ್ಲಜ್ಜಾತ್ಮಾ ವಿಕಲಕರುಣೋವಿಶ್ವವಿಶ್ವಸ್ತಘಾತೀ
ಪತ್ಯುಭಾಸಃ ಸದಲಹೃದಯೇ! ದೇವಿ! ಸೋಽಯಂ ನಲೋಽಸ್ಮಿ ॥ ೭—೮

ಮಾದರಿಗಾಗಿ ಒಂದೆರಡು ಸೂಕ್ತಿಗಳು:—

ನ ಪ್ರೇಮ ನೌಷಧಂ ನಾಜ್ಞಾ ನ ಸೇವಾ ನ ಗುಣೋ ನ ಧೀಃ
ನ ಕುಲಂ ನ ಬಲಂ ನ ಶ್ರೀ ರ್ದುರ್ಜನಸ್ಯ ಪ್ರಶಾಂತಯೇ ॥ ೭—೧೦

ಛಿನ್ನೇಷು ರಾವಣೇ ತುಷ್ಟಃ ಶಂಭುರ್ದಶಸು ಮೂರ್ಧ್ವಸು
ಶತೇಽಪಿ ಶಿರಸಾಂ ಛಿನ್ನೇ ದುರ್ಜನಸ್ತು ನ ತುಷ್ಯತಿ ॥ ೭—೧೧

ಅನುಭೂತಂ ನ ಯದ್ ಯೇನ ರೂಪಂ ನಾಪ್ನೋತಿ ತಸ್ಯ ಸಃ
ನ ಸ್ವತಂತ್ರೋ ವ್ಯಥಾಂ ವೇತ್ತಿ ಪರತಂತ್ರಸ್ಯದೇಹಿನಃ ೬-೭.

ಸತ್ಯಹರಿಶ್ಚಂದ್ರನಾಟಕದ ಕೆಲವು ಶ್ಲೋಕಗಳು.—

ಪ್ರಭಾತವರ್ಣನೆ:—

ವಿಶ್ವಂಭರಾಭರವಿಯೋಗವತೋ- ಮಮೈವ
ಸತ್ತ್ವಂ ವಿಲೋಕಯಿತುಮುತ್ಸುಕಪಾದಚಾರಃ
ತಿಗ್ಮಂಶುವಂಶವಿನಿವೇಶನದಾನಮೇಷ
ಷೂಷಾಧಿರೋಹತಿ ಶಿಖಾಮುದಯಾಚಲಸ್ಯ ॥ ೩—೧. ಸ ಹ. ನಾ.

ವನವಾಸಿಗಳ ಮತ್ತು ರಾಜರ ನಿಯಮವರ್ಣನೆ:—

ಕೃಶಾನುಸೇವಾ ಫಲಕಂದವರ್ತನಂ
ಜಟಾಧರತ್ವಂ ವನವಾಸಿನಾಂವ್ರತಂ
ಮಹೀಪತೀನಾಮಿದಮೇವ ತು ವ್ರತಂ ಸ. ಹ. ನಾ
ಯದಾತ್ಮಸತ್ಯಾತ್ಪಲಯೇಽಪಿ ನ ಚ್ಯುತಿಃ ॥ ೨—೪.

ಸೂಕ್ತಿಗಳು.—

ಅಪಕೃತ್ಯಾಪಕಾರ್ಯೇಷು ಯೇ ಭವ್ಯಂತ್ಯರ್ಥಿನಃ- ಪುನಃ
ತೇಷು ಮನ್ಯೇ ಮನುಷ್ಯತ್ವಂ ವಿಧಿವಾರ್ದ್ಧಿತ ವಿಕ್ರಿಯಾ ॥ ೩—೧೫.

ಸ್ವಮೇಕಃ ಪರರಕ್ಷಾರ್ಥಂ ವಿನಿಹಂತಿವಿಪತ್ತಿಷು
ಸ್ವರಕ್ಷಾರ್ಥಂ ಪರಂ ತ್ವನ್ಯಶ್ಚಿತ್ರಂ ಚಿತ್ರಾ ಮನಃ ಸ್ಥಿತಿಃ ॥ ೫—೧೧.

ಅಹೋ! ದಾನಮಹೋ ಧೈರ್ಯಮಹೋ ವೀರ್ಯಮಖಂಡಿತಂ
ಉದಾರಧೀರವೀರಾಣಾಂ ಹರಿಶ್ಚಂದ್ರೋನದರ್ಶನಂ ॥ ೬—೧೧.

ಇವು ಓದುವರಿಗೆ ಸುಲಭವಾಗಿ ಅರ್ಥವಾಗುವುದರಿಂದ ಅರ್ಥವನ್ನು ಬೇರೆಯಾಗಿ ಬರೆಯುವ ಪ್ರಯೋಜನ ತೋರಲಿಲ್ಲ.

ಸೋಮೇಶ್ವರದೇವ

ಇವನು ಗುಜರಾತಿನವನು. ಇವನು ಬರೆದಿರುವ ಕಾವ್ಯದ ಪ್ರತಿಸರ್ಗಾಂತ್ಯದಲ್ಲಿ ಹೇಳಿಕೊಂಡಿರುವ:—

"ಇತಿಶ್ರೀಗುರ್ಜರೇಶ್ವರ ಪುರೋಹಿತ ಸೋಮೇಶ್ವರದೇವವಿರಚಿತೇ "..... ಎಂಬುದರಿಂದ ಇವನು ರಾಜಪುರೋಹಿತನಾಗಿದ್ದನಾಗಿ ವ್ಯಕ್ತವಾಗುತ್ತದೆ. †

ಕಾಲ:—ಇವನು ಭೀಮದೇವ ಮತ್ತು ವೀಸಲದೇವ ಇವರ ಆಶ್ರಯದಲ್ಲಿ ಎಂದರೆ ಭೀಮದೇವನ ರಾಜ್ಯಸಮಯವು ಕ್ರಿ. ಶ. ೧೦೬೪ ಮೊದಲು ವೀಸಲದೇವ ರಾಜ್ಯಸಮಯವಾದ ಕ್ರಿ. ಶ. ೧೨೪೨ ಪರ್ಯಂತವೆಂದೂ ಹೀಗೆ ಸೋಮೇಶ್ವರನ ಕಾಲವೆಂದೂ ಸ್ಪಷ್ಟಪಡುತ್ತದೆ. ‡

ಗ್ರಂಥಗಳು:—ಇವನು 'ಕೀರ್ತಿಕೌಮುದೀ' ಎಂಬ ಗ್ರಂಥವನ್ನೂ ಸುರಥೋತ್ಸವವೆಂಬ ೧೫ ಸರ್ಗಗಳ ಮಹಾಕಾವ್ಯವನ್ನೂ ಬರೆದಿರುವನು. ಇವುಗಳಲ್ಲದೆ

† ಸುರಥೋತ್ಸವ ಕಾವ್ಯವನ್ನು ನೋಡು.

‡ ಸುರಥೋತ್ಸವಕಾವ್ಯದ ಮುನ್ನುಡಿ ಪುಟ ೧೬

ರಾಮಶತಕವೆಂಬ ಮತ್ತೊಂದು ಗ್ರಂಥವನ್ನು ಬರೆದಿರುವುದಾಗಿ ಹೇಳಿದೆ. ಗ್ರಂಥವು ಉಪಲಬ್ಧವಿಲ್ಲ. ಕೀರ್ತಿಕೌಮುದಿಯಲ್ಲಿ ಚಾಳುಕ್ಯರಾಜರ ವರ್ಣನವೂ, ಸುರಥೋತ್ಸವ ಕಾವ್ಯದಲ್ಲಿ ಚೈತ್ರವಂಶೀಯನಾದ ಸುರಥನ ಚರಿತವೂ ಬರೆಯಲ್ಪಟ್ಟಿರುವುವು. ಇದರಲ್ಲಿ ಹಿಮಾಲಯದ ವರ್ಣನೆಯು ಕಡುಚೆಲುವಾದುದು. ಶುಂಭ ಮತ್ತು ಧೂಮ್ರಲೋಚನರ ವಧೆಯು ಬಹುಜಾಣ್ಮೆಯಿಂದ ವರ್ಣಿಸಲ್ಪಟ್ಟಿರುವುದು. ಶೈಲಿಯು ಬಿಲ್ಹಣನನ್ನು ಹೋಲುವುದು. § ಕೆಲವು ಶ್ಲೋಕಗಳನ್ನು ಬರೆಯುವೆವು.

ಹಿಮಾಲಯದ ವರ್ಣನೆ:—

ಶೈಲೇಽಸ್ಮಿನ್ ಫಲಪುಷ್ಪ ಪಲ್ಲವಸಮುಲ್ಲಾಸಃ ಸದಾ ಶಾಖಿನಾಂ
ಪದ್ಮಿನ್ಯಃ ಪ್ರತಿಪಲ್ವಲಂ ಚ ದಧತೇ ಹಾಸಂ ಹಿಮರ್ತಾವಪಿ
ಶೈತ್ಯಂ ಶಾಶ್ವತಮಂಭಸಾಂ ಭವತಿ ಚ ಸ್ವರ್ಗಾಂಗನಾನಾಂ ಗುಹಾ
ಗೇಹದ್ವಾರವಿಹಾರಿವಾರಿದಘಟಾಗರ್ಜಾಭರುರ್ಜಾಗರಃ ॥ ೪-೬೭

ಕ್ವಚಿದಿಹ ವಿಹರಂತರ್ವೀಕ್ಷ್ಯ ಮಾಣಸ್ಯ ರಾಮಾಃ
ಪ್ರಸರತಿ ರತಿರಂಭರ್ಮೋರ್ವೀಕ್ಷ್ಯ ಮಾಣಾಂಕ್ಷ ಕೋಽಪಿ
ಕ್ವಚನ ಮುನಿಭಿರಧ್ಯಾಂ ಪಶ್ಯತಸ್ತೀರ್ಥವೀಥೀಂ
ಭವತಿ ಭವವಿರಕ್ತಾ ಧೀರಧೀರಾತ್ಮನೋಽಪಿ ॥ ೪-೬೮

ಹಿಮಂತರ್ತುವರ್ಣನ:—

ಗರ್ಭಾಗಾರೇ ಶಯನಮನಲಃ ಸಂನಿಧೌ ಸನ್ನ ಧೂಮಃ
ಶಾಖಾಮಾಶ್ಲೇಷಃ ಸ್ಮರಪರವಶೋ ರಕ್ತವಸ್ತ್ರಾ ವೃತಿಶ್ಚ
ಕರ್ಪೂರ ಶ್ರೀರ್ವದನಕಮಲೇ ಕುಂಕುಮೈರಂಗರಾಗೋ
ಭಾಗ್ಯೈರೇತದ್ಭವತಿ ಭವಿನಾಂ ಹಂತ ಹೇಮಂತಕಾಲೇ ॥ ೫-೫೦

ಋತುರುಜ್ಜಗಾಮ ಜಡಿಮೈಕಭಾಜನಂ
ಕ್ವಮಮೇತದತ್ರ ಕಮಲೋನ್ನತಿರ್ನ ಯತ್
ಹೃದಯಾನಿ ಯಸ್ತನುಭೃತಾಂ ಪ್ರಕಂಪಯ
ನ್ಸುಮನಃಪದೇಷು ನಿದಧಾತಿ ಬಾಲಕಾರ್ ॥ ೫-೫೧ ॥

§ Histoty of the classical Sanskrit Literature P. 48.

೧೩ನೆಯ ಶತಮಾನ

ಶ್ರೀಧರದಾಸ

ಇವನು ಕ್ರಿ. ಶ. ೧೨೦೫ರಲ್ಲಿ "ಸದುಕ್ತಿಕರ್ಣಾಮೃತ" ಎಂಬ ಗ್ರಂಥವನ್ನು ಬರೆದಿರುವನು. ಇದರಲ್ಲಿ ಳಳಟ ಕವಿಗಳ ಶ್ಲೋಕಗಳು ಬರೆಯಲ್ಪಟ್ಟು ಹೆಚ್ಚಾಗಿ ವಂಗಕವಿಗಳ ಪೆಸರುಗಳೇ ಹೇಳಲ್ಪಟ್ಟಿವೆ. ಗ್ರಂಥಪರಿಶೀಲನದಿಂದ ಗ್ರಂಥಕಾರನ ತಂದೆಯು ರಾಜನಾದಲಕ್ಷ್ಮಣಸೇನನಲ್ಲಿದ್ದುದಾಗಿ ಬೋಧೆಯಾಗುತ್ತದೆ.'

ಮಹೇಶ್ವರ

ಇವನು ಕ್ರಿ. ಶ. ೧೨೧೧ರಲ್ಲಿ 'ವಿಶ್ವಪ್ರಕಾಶ'ವೆಂಬ ಕೋಶವನ್ನು ರಚಿಸಿದುದಾಗಿ "ಇತಿ ಸಕಲವೈದ್ಯರಾಜ ಚಕ್ರವರ್ತ್ತಿಶ್ರೀಖರಸ್ಯ ಗದ್ಯಪದ್ಯವಿದ್ಯಾನಿಧೇಃ ಮಹೇಶ್ವರಸ್ಯಕೃತೌ ವಿಶ್ವಪ್ರಕಾಶಾಭಿಧಾನೇ....." ಎಂಬುದರಿಂದ ಖಂಡಿತವಾಗುತ್ತದೆ. ಇದಕ್ಕೆ "ಶಬ್ದಭೇದಪ್ರಕಾಶ" ಎಂದೂ ಹೆಸರು. ಇದರಲ್ಲಿ ಮೂರುಪರಿಚ್ಛೇದಗಳಿರುವುವು.*

ಅರಿಸಿಂಪ

ಇವನು ಶ್ವೇತಾಂಬರ ಜೈನಪಂಗಡಕ್ಕೆ ಸೇರಿದವನು. ಲಾವಣ್ಯಸಿಂಹ ಅಥವಾ ಲವಣಸಿಂಹನ ಮಗನು. ಅಮರ ಚಂದ್ರನಮಿತ್ರನು. ಇವನು ವಿಸಂ. ೧೨೭೨ ೧೨೯೭ ಅಥವಾ ಕ್ರಿ. ಶ. ೧೨೧೫-೧೨೪೦ರಲ್ಲಿದ್ದವನು§ ಇವನು ತನಗೆ ಆಶ್ರಯದಾತನಾದ ವಸ್ತುಪಾಲನ ಹೆಸರಿನಲ್ಲಿ "ಸುಕೃತಸಂಕೀರ್ತನ" ಎಂಬ ಗ್ರಂಥವನ್ನು ಬರೆದಿರುವನು. ಇದು ಅಲಂಕಾರ ಗ್ರಂಥ. ಇದಕ್ಕೆ "ಕಾವ್ಯಕಲ್ಪಲತಾ"ಎಂಬಾ ಪರನಾಮವೂ ಇರುವುದು. ಇವನು ತನ ಗ್ರಂಥಕ್ಕೆ 'ಕಾವ್ಯಕಲ್ಪಲತಾಶಕ್ವಾವೃತ್ತಿ' ಎಂಬ ವ್ಯಾಖ್ಯಾನವನ್ನೂ ಬರೆದಿರುವನು.‡

' History of Classical Sanskrit Literature P. 122

$ Descriptive Catalogue of Sanskrit Manuscripts Tanjaore P. 3886.

§ Dictionary of Jain Biography P. 95

‡ S. K. De's Sanskrit Poetics P. 210

ಜೀವದತ್ತಸೂರಿ

ಇವನು ಕ್ರಿ.ಶ. ೧೩ನೆಯ ಶತಮಾನದ ಪೂರ್ವಾರ್ಧದವನು. ಅಮರಚಂದ್ರನ ಆಚಾರ್ಯನು. 'ವಿವೇಕವಿಲಾಸ'ವೆಂಬ ಗ್ರಂಥವನ್ನು ಬರೆದಿರುವನು.

ಪ್ರಹ್ಲಾದನದೇವ

ಇವನು ಪರಮಾರವಂಶದವನು. ಇವನಿಗೆ ಪರಮಾರ ಪ್ರಹ್ಲಾದನ ದೇವ ನೆಂದೂ ಹೆಸರಿದ್ದಿತು. ಇವನು ಯಶೋಧವಳನ ಮಗನು. ಚಂದ್ರಾವತಿಯರಾಜ* ನಾಗಿದ್ದ ಧಾರಾವರ್ಷನ ತಮ್ಮನು. ಧಾರಾವರ್ಷನು ಮಹಾ ಪರಾಕ್ರಮಶಾಲಿ ಯಾಗಿದ್ದುದರಿಂದ ವಸ್ತುಪಾಲನಂತಹ ಪ್ರಮುಖರು ಅನೇಕಸಲ ಇವನ ಸಹಾಯ ವನ್ನು ಕೋರುತ್ತಿದ್ದರು. ಇವನು ಬಹುಕಾಲದವರೆಗೆ ರಾಜ್ಯವನಾಳುತ್ತಿದ್ದುದ ರಿಂದ ಇವನ ತಮ್ಮನಾದ ಪ್ರಹ್ಲಾದನದೇವನಿಗೆ ರಾಜಪದವು ದೊರೆಯಲಿಲ್ಲವಾಗಿ ತೋರುತ್ತದೆ.†

ಕಾಲ:—ವಿ. ಸಂ ೧೨೨೦ ಅಥವಾ ಕ್ರಿ. ಶ. ೧೧೬೩ರ ವೇಳೆಗೆ ಪ್ರಹ್ಲಾದನ ದೇವನಿಗೆ ಯುವರಾಜ ಪದವಿಯುದೊರೆತಿದ್ದಿತಾಗಿ ಶಾಸನಗಳಿಂದತಿಳಿಯಬರುತ್ತದೆ. ಇವನು ಸಂ ೧೨೬೫ ಅಥವಾ ಕ್ರಿ. ಶ. ೧೨೦೯ರ ವರೆಗೆ ಜೀವಿಸಿದ್ದನು. ತನ್ನ ಅಣ್ಣ ನಂತೆ ಇವನೂ ಮಹಾಪರಾಕ್ರಮಿಯಾಗಿದ್ದುದಲ್ಲದೆ ಮಹಾಕವಿಯೂ ಆಗಿದ್ದನು.

ಶಾರ್ಙ್ಗಧರ'ಪದ್ಧತಿ'ಯಲ್ಲಿಯೂ ಜಲ್ಹಣನ ಸೂಕ್ತಿಮುಕ್ತಾವಳಿಯಲ್ಲಿಯೂ ಇವನ ಹೆಸರಿನ ಕೆಲವು ಶ್ಲೋಕಗಳು ದೊರೆಯುವುವು. ಇವನು ತನ್ನ ಅಣ್ಣನಮಗ ಸೋಮಸಿಂಹದೇವನಿಗೆ ಸಕಲಶಾಸ್ತ್ರವಿದ್ಯಾಭ್ಯಾಸವನ್ನು ಮಾಡಿಸಿದುದಾಗಿ 'ಆಬೂ ಪ್ರಶಸ್ತಿಯಿಂದತಿಳಿಯಬರುತ್ತದೆ.‡ ಇವನು ತನ್ನ ಹೆಸರಿನಲ್ಲಿ ಪ್ರಹ್ಲಾದನಪುರವೆಂಬು ದನ್ನು ಸ್ಥಾಪಿಸಿದುದಾಗಿಯೂ ಈಗ ಇದನ್ನು ಪಾಲನಪುರವೆಂದು ಕರೆಯವು

* ಚಂದ್ರಾವತಿಯು ಮಾರವಾರದೇಶಕ್ಕೆ ಸೇರಿದಸಂಸ್ಥಾನವಾಗಿದ್ದುದಾದರೂ ಗುಜರಾತಿನ ರಾಜರಿಗೆ ಮಂಡಲೇಶ್ವರರಾಗಿದ್ದುಕೊಂಡು ಸಂದರ್ಭಬಿದ್ದಾಗ ಸೈನ್ಯವನ್ನು ನಡೆಯಿಸಿ ಕೊಡುತ್ತಿದ್ದರು.

† ಪಾರ್ಥಪರಾಕ್ರಮದ ಮುನ್ನುಡಿ. ಪುಟ ೨.

‡ ಧಾರಾವರ್ಷಸುತೋಯಂ ಜಯತಿ ಶ್ರೀಸೋಮಸಿಂಹದೇವೋ ಯಃ
ಪಿತೃತಃ ಶೌರ್ಯಂ ವಿದ್ಯಾಂ ಪಿತೃವ್ಯತೋ ಜ್ಞಾನಮುಭಯತೋ ಜಗೃಹೇ ॥ ೪೯

ದಾಗಿಯೂ ಹೇಳಿದೆ. ಇದು 'ಆಬೂ' ಪರ್ವತಕ್ಕೆ * ದಕ್ಷಿಣದಲ್ಲಿ ೫೪ ಮೈಲಿಗಳ ದೂರದಲ್ಲಿದ್ದು ಪಾಲನಪುರಸಂಸ್ಥಾನದ ರಾಜಧಾನಿಯಾಗಿರುವುದು. ಪ್ರಕೃತ ಇದನ್ನು ಮುಸಲ್ಮಾನರಾಜನೊಬ್ಬನು ಬರೋಡದ ಮಹಾರಾಜರಿಗೆ ೩೮,೦೦೦ರೂ ಪಾಯಿಗಳ ಪೊಗದಿಯನ್ನು ಕೊಟ್ಟುಕೊಂಡು ಆಳುತ್ತಿರುವನು. ಇದರಲ್ಲಿ ಪ್ರಹ್ಲಾದ ದೇವನು ಕಟ್ಟಿಸಿದ ಪಾಲ್ತವಿಹಾರವೆಂಬ ಜೈನದೇವಾಲಯವಿರುವುದು. x

ಗ್ರಂಥ:—ಇವನು ಪಾರ್ಥಪರಾಕ್ರಮವೆಂಬ ರೂಪಕವನ್ನು ಬರೆದಿರುವನು. ಇದು ರೂಪಕ ಭೇದವಾದ ವ್ಯಾಯೋಗ ಜಾತಿಗೆ ಸೇರಿದುದು.

ಕಾಂಚನಾಚಾರ್ಯನ ಧನಂಜಯವಿಜಯ. ರಾಮಚಂದ್ರನ ನಿರ್ಭಯಭೀಮ ಮೋಕ್ಷಾದಿತ್ಯನ ಭೀಮಪರಾಕ್ರಮ. ವತ್ಸರಾಜನ ಕೆರಾತಾರ್ಜುನೀಯ. ಧರ್ಮ ಪಂಡಿತನ ನರಕಾಸುರವಿಜಯ. ಸದಾಶಿವನ ಪ್ರಚಂಡಭೈರವ. ಪ್ರಚಂಡಗರುಡ ವಿಶ್ವನಾಥನ ಸೌಗಂಧಿಕಾಹರಣ. ಗೋವಿಂದನ ವಿನತಾನಂದನ. ಇನ್ನೇಮೊದಲಾದವು ಈ ಜಾತಿಯವುಗಳು.

ಕವಿಯು ಕಥಾಭಾಗವನ್ನು, ಮಹಾ ಭಾರತ ವಿರಾಟಪರ್ವದಿಂದ ತೆಗೆದು ಕೊಂಡಿರುವನು. ಕೌರವರು ವಿರಾಟನ ಗೋವುಗಳನ್ನು ಅಪಹರಿಸಿಕೊಂಡು ಹೋದರೆಂಬುದನ್ನು ತಿಳಿದು ಅರ್ಜುನನು ಉತ್ತರ ಕುಮಾರನೊಡನೆ ಹೊರಟು ಯುದ್ಧದಲ್ಲಿ ದುರ್ಯೋಧನನ್ನು ಸೋಲಿಸಿ ಜಯಶೀಲನಾಗಿ ಗೋವುಗಳೊಡನೆ ಹಿಂತಿರುಗಿದನೆಂಬುದು ಕಥಾವಸ್ತು. ಇದರಲ್ಲಿ ವೀರರಸವು ಪ್ರಧಾನವಾಗಿರುವದು. ಇದರಲ್ಲಿ ಉತ್ತರನ ಪರಾಕ್ರಮದ ಒಣಜಬರೂ, ಅರ್ಜುನನ ಪರಾಕ್ರಮದ ಸೊಬಗೂ ಹೃದಯಂಗಮವಾಗಿ ವರ್ಣಿಸಲ್ಪಟ್ಟಿರುವುದು. ಮಾದರಿಯ ಕೆಲವು ಶ್ಲೋಕಗಳನ್ನು ಬರೆಯುವೆವು. ಪ್ರಹ್ಲಾದನ ದೇವನ ಕವಿತ್ವದಲ್ಲಿ ಸಮತಾ, ಸಮಾಧಿ, ಪ್ರಸಾದ, ಗುಣಗಳು ಪೂರ್ಣವಾಗಿವೆಯೆಂದು ಹೇಳಿದೆ.§

ಉತ್ತರ ಕುಮಾರನ ಪ್ರತಾಪವರ್ಣನ:—

ರಾಮೇಣ ಸ್ಮರ್ಧಮಾನೇನ ಧೃತಾ ಕೃತಂ ಯದಗ್ರೇ
ಮಾಹೇಯಾ ಹರಣಚಣಸ್ಯ ಹೈಹಯಸ್ಯ

---

* ಇದಕ್ಕೆ ನಂದಿವರ್ಧನವೆಂಬಾಪರನಾಮವೆಂದೂ, ಹಿಮಾದ್ರಿಜನೆಂದೂ, ಹೇಳಿದೆ.
ನಂದೀವರ್ಧನ ಇತ್ಯಾಸೀತ್ ಪ್ರಾಕ್ ಶೈಲೋಽಯಂ ಹಿಮಾದ್ರಿಜಃ
ಕಾಲೇನಾರ್ಬುದನಾಗಾಧಿಷ್ಠಾನಾತ್ತ್ವರ್ಬುದ ಇತ್ಯಭೂತ್ ॥
ತೀರ್ಥಕಲ್ಪ, ಆರ್ಬುದಕಲ್ಪ

x ಪಾರ್ಥಪರಾಕ್ರಮದ ಮುನ್ನುಡಿ ಪುಟ ೫.

§ ಸಂದರ್ಭಃ-ಸುಕವೇಃ-ಸಮಾಧಿಸಮತಾಗರ್ಭಃ-ಕುಮಾರಸ್ಯ-ಚ| ಪಾರ್ಥಪರಾಕ್ರಮ (೪)
ಪ್ರಹ್ಲಾದನಸ್ಯ ಕವಿತಾ ವಸತಿಃ-ಪ್ರಸತ್ತೇಃ (ಪಾರ್ಥಪರಾಕ್ರಮ) (೫)

ತತ್ರೋಽದ್ಯ ಪ್ರಸಭಮಪಂಕ್ಕೃತಸ್ಯ ಸೋಽಹಂ
ಕೌರವ್ಯಾಧಮ ! ಸಮರೇ ಕರೋಮಿ ರೋಷಾತ್ ॥ ೧೬ ॥

ಸೋದರಿಯಾದ ಉತ್ತರೆಯನ್ನು ಕುರಿತು:—

ತಮಪಿ ಸಮರಸೀಮನ್ಯೇಷ ಭಂಕ್ತ್ವಾಸ್ಮಿ ಭೀಷ್ಮಂ
ಭುವನವಿದಿತ ರಕ್ತೈರ್ಯತ್ರ ತಾಂತಃ-ಕೃತಾಂತಃ
ಧನುರನುದಿತದರ್ಪಪ್ರಾತಿಭಂ ಕುಂಭಕೇತು
ರ್ಭವತು ಚ ಭುಜಯೋರ್ಮೇ ಗೌರವಂ ಗಾಹಮಾನಃ ॥೧೭॥

ಅರ್ಜುನನು ಉತ್ತರನಿಗೆ ಭೀಷ್ಮನನ್ನು ತೋರಿಸಿಹೇಳಿದುದು:—

ಯಂ-ಕೃತ್ವಾಣಾಂ ಕೃತಜಸರಿತಿ ಸ್ಮಾತಿ ಜಾತೇ ಸ್ಮ ಪಿತ್ರೋಃ
ಶಾವಾಶೌಚೇ ತಮಪಿ ನಮಿತಿ ವ್ಯಸ್ತವಾರ್ತಾ ಜಾಮದಗ್ನ್ಯಂ
ಕಾಲೇನೋಚ್ಚೈಃ-ಕನಕತನುನಾ ಕೇತನಾಗ್ರಸ್ಥಿತೇನ
ಸ್ಥಾನಾಗಾರಂ ಸ್ಫುರತಿಪುರತಃ-ರಂತನೋಃ-ಪುತ್ರ ಏಷಃ—೧೮ ॥

ಅಪಿಚ

ಶರಧರಶಿರೋಮಾಲ್ಯಂ ಕುಲ್ಯಾ ಸ್ವಯಂ ಯಮಜೀಜನತ್
ತ್ರಿಭುವನ ಜಯಸ್ಮೇರೋ ಯಸ್ಯ ಸ್ಮರೋಽಪಿ-ಪರಾಙ್ಮುಖಃ
ನಿಯತವಯಸಾಂ ವೀರಾಣಾಂ ಯಸ್ತ್ರೈಣೇಕುರುತೇ ರಣೇ
ಕುರುಕುಲಗುರುಃ-ಸೋಽಯಂ ಭೀಷ್ಮಃ-ಸಮ್ಮೃಧ್ಯತಿ ಸೂಷ್ಮಣಾ ॥೧೯॥

ಯುದ್ಧ ಕುತೂಹಲಿಯಾದ ಅರ್ಜುನನು, ಪ್ರಣಾಮಪೂರ್ವಕ ಧನ್ವಸನ್ನು ತೆಗೆದುಕೊಂಡು: —

ಜಯತ್ಯಜಗವಂ ಧನುರ್ಜಯತಿ ಘೂರ್ಜಟೇರ್ಘನ್ನಿನಾ
ಧನುರ್ಧರಪುರಂಧರೋ ಜಯತಿ ತಾಂರ್ಜುಧನ್ವಾ ಹರಿಃ.
ಧನುಶ್ಚ ಋಜುರೋಽಹಂ ಜಯತಿ ಸಾ ಚ ಧಾನುಷ್ಕತಾ
ಸುರಾರಿಸಮರಾಜಿರ ಪ್ರಣಯಿನಸ್ತ್ರಿಲೋಕೀಪತೇಃ ॥ ೨೬ ॥

ಎಂದು ಹೇಳಿರುವುದನ್ನು ವಿವೇಚಿಸಿ ನೋಡಿದರೆ ಎಂತಹನಾದರೂ ವೀರರಸದಿಂದ ಪ್ರಮತ್ತನಾಗದಿರನು

ಮ ದ ನ

ಇವನು ಗಂಗಾಧರನ ವಂಶೀಯನು. ಅರ್ಜುನವರ್ಮನ ರಾಜಗುರು. ಗೌಡದೇಶದವನು. ಇವನಿಗೆ ಉಪಾಧ್ಯಾಯನೆಂದೂ, ಬಾಲಸರಸ್ವತಿಯೆಂದೂ ನಾಮಾಂತರವಿದ್ದಿತು. ಅರ್ಜುನವರ್ಮನು ಸುಭಟನ ಮಗನೆಂದು ಒಂದುಕಡೆ ಹೇಳಿದೆ.

ಕಾಲ:—ಅರ್ಜುನವರ್ಮನು ವಿ. ಸಂ. ೧೧೬೭-೧೨೭೨ರ ವರೆಗೆ ಎಂದರೆ ಕ್ರಿ. ಶ, ೧೨೧೦-೧೨೧೫ರ ವರೆಗೆ ಆಳಿದುದಾಗಿದೆ. ಕ್ರಿ. ಶ. ೧೨೧೧-೧೨೧೩ ಮತ್ತು ೧೨೧೫ರಲ್ಲಿ. ಅರ್ಜುನವರ್ಮನು ಕೊಟ್ಟ ಮೂರು ತಾಮ್ರಶಾಸನಗಳಿರುವುವು. ಮದನನು ಸುಮಾರು ಕ್ರಿ. ಶ. ೧೨೧೫ರ ಸುಮಾರಿನಲ್ಲಿ ಗ್ರಂಥರಚನೆ ಮಾಡಿರ ಬೇಕಾಗಿ ಭಾಸವಾಗುತ್ತದೆ. ಇದೇ ಕಾಲವನ್ನೇ ಡಾ|| ಹಲ್ವಜರವರು ಸಾಧಿ ಸಿರುವರು.*

ಗ್ರಂಥ:—ಇವನು 'ಪಾರಿಜಾತಮಂಜರಿ' ಎಂಬ ನಾಟಕೆಯನ್ನು ಬರೆ ದಿರುವನು. ಇದಕ್ಕೆ ವಿಜಯಶ್ರೀ ಎಂದೂ ಹೆಸರಿರುವುದು. ಇದರಲ್ಲಿ ಅರ್ಜುನ ವರ್ಮನಿಗೂ, ಗುರ್ಜರರಾಜನಾದ ಚಾಲುಕ್ಯವಂಶದ ಜಯಸಿಂಹನಿಗೂ ನಡೆದ ಯುದ್ಧವಿಚಾರವೂ, ಜಯಸಿಂಹನ ಪರಾಜಯವೂ ವರ್ಣಿತವಾಗಿರುವುದಲ್ಲದೆ ಅರ್ಜುನವರ್ಮನು ಪಾರಿಜಾತಮಂಜರಿ ಅಥವಾ ವಿಜಯಶ್ರೀಯನ್ನು ಮೋಹಿಸಿ ರಾಜ್ಞಿಯಾದ ಸರ್ವಕಲೆಯ ಇಷ್ಟದಂತೆ ವಿಜಯಶ್ರೀಯನ್ನು ಮದುವೆಯಾದುದು ಹೇಳಿದೆ. ಪ್ರಕೃತ ಅಚ್ಚಾಗಿ ದೊರೆತಿರುವುದು ಎರಡು ಅಂಕಗಳು ಮಾತ್ರ. ರಾಜನೂ ಮತ್ತು ಕುಸುಮಾಕರ ಈ ಇಬ್ಬರು ಮಾತ್ರ ಸಂಸ್ಕೃತದಲ್ಲಿಯೂ ಉಳಿದವರು ಪ್ರಾಕೃತದಲ್ಲಿಯೂ ಮಾತನಾಡುವರು. ಗದ್ಯಭಾಗವು ಶೂರಸೇನ ಶೈಲಿಯಲ್ಲಿಯೂ, ಪದ್ಯಭಾಗವು ಮಹಾರಾಷ್ಟ್ರ ಶೈಲಿಯಲ್ಲಿಯೂ ಹೇಳಲ್ಪಟ್ಟಿರುವುದು. ಅರ್ಜುನವರ್ಮನ ಪಟ್ಟದರಾಣಿಯಾದ ಸರ್ವಕಲೆಯು ಕುಂತಲರಾಜನ ಮಗಳೆಂಬುದು:—

ಸಮುಚ್ಚಯೇನ ಯಾ ಸೃಷ್ಟಾ ಕಲಾನಾಂ ಪರಮೇಷ್ಠಿನಾ
ಕುಂತಲೇಂದ್ರಸುತಾ ಸೇಯಂ ರಾಜ್ಞಾಃ **ಸರ್ವಕಲಾ** ಪ್ರಿಯಾ ॥ ೧-೧೧

ಎಂದು ಸೂತ್ರಧಾರನ ಹೇಳಿಕೆಯಿಂದ ಸ್ಪಷ್ಟಪಡುವುದು. ಇದರ ಶೈಲಿಯು ರತ್ನಾವಳಿಯನ್ನು ಹೋಲುವುದು. ಮಾದರಿಯ ಶ್ಲೋಕಗಳು—

ವಿರಹೇ ಸಾನಮೇಕಸ್ಯ ದುಃಖೇನ ಲಭ್ಯತೇ ಸುಖಂ
ಸುಖೇನ ಚೇತರೋ ದುಃಖಂ ಪ್ರೇಮ್ಣೋ ಹಿ ಕುಟಿಲಾ ಗತಿಃ ॥ ೨-೩೮

ರಾಜನ ಹೇಳಿಕೆ—

ಧನ್ಯೋಽಯಂ ಸಹಕಾರಸುಂದರಯುವಾ ಚೈತ್ರಾನಿಲಾಂದೋಲನೈ
ರುದ್ಯುಕ್ತಃ ಪರಿರಿಪ್ಸತೇ ಪ್ರಿಯತಮಾಂ ವಾಮಾಂಗ ವಿಶ್ರಂಭಿಣೀಂ
ವಿಷಾಪ್ಯರ್ಧಸುವಾಸಿನೀ ನವಲತಾ ನಮ್ರೀಭವಂತೀ ಭೃಶಂ
ಸಿರ್ಬಂಧೇನ ಪರಾಙ್ಮುಖೀ ನ ಸಹತೇ ವೈಯಾತ್ಯ ಮಾರ್ತ್ತಾಮಪಿ ॥ ೨-೪೪

* Introduction to Parijathamanjari by Dr E. Hultzschr P. 5

ವ ಸ್ತು ಪಾ ಲ

ಇವನು ಬಾಲಚಂದ್ರನ ಶಿಷ್ಯನು. ಗುಜರಾತಿಗೆ ಸೇರಿದ ಧೋಲ್ಕದರಾಜನಾದ ವೀರಧವಳನ ಮುಖ್ಯಾಮಾತ್ಯನಾಗಿದ್ದು ಸ್ವಸಾಮರ್ಥ್ಯದಿಂದ ತನ್ನ ಒಡೆಯನಿಗೆ ಅಪಾರವಾದ ರಾಜ್ಯವನ್ನೂ ಕೀರ್ತಿಯನ್ನೂ ಗಳಿಸಿಕೊಟ್ಟಿದ್ದನು. ವಸ್ತುಪಾಲನೆಂಬುದಕ್ಕೆ ಬದಲು ತನ್ನನ್ನು ವಸಂತಪಾಲನೆಂದು ಮಹಾಕವಿಗಳಾದ ಹರಿಹರ ಮತ್ತು ಸೋಮೇಶ್ವರನೇ ಮೊದಲಾದವರು ಕರೆಯುತ್ತಿದ್ದುದಾಗಿ ತನ್ನ ಕಾವ್ಯದಲ್ಲಿ ಹೇಳಿಕೊಂಡಿರುವುದಲ್ಲದೆ* ಪ್ರತಿಸರ್ಗಾಂತ್ಯದಲ್ಲಿ,

"ಇತಿ ಶ್ರೀಗೂರ್ಜರೇಶ್ವರ ಮಹಾಮಾತ್ಯ ಶ್ರೀವಸಂತಪಾಲವಿರಚಿತೇ.....
.....ಮಹಾಕಾವ್ಯೇ.....ಎಂದು ಹೇಳಿಕೊಂಡಿರುವುದರಿಂದ ಸ್ಪಷ್ಟಪಡುತ್ತದೆ. ಇವನಿಗೆ ಕವಿಕುಂಜರ, ಕವಿಚಕ್ರವರ್ತಿ† ಎಂಬ ಬಿರುದುಗಳೂ ಇದ್ದವು. ಇವನು ಬಹುದಾತಾರನೂ ಮಹಾಕವಿ, ಕಾವ್ಯಪ್ರಿಯನೂ ಆಗಿದ್ದುದರಿಂದ ಇವನನ್ನು ಸರಸ್ವತೀಕಂಠಾಭರಣನೆಂದೂ, ಲಘುಭೋಜರಾಜನೆಂದೂ ಕರೆಯಿಸಿಕೊಳ್ಳುತ್ತಿದ್ದುದಾಗಿ "ಅಥ ಸಂವತ್ ೧೨೭೭ ವರ್ಷೇ ಸರಸ್ವತೀಕಂಠಾಭರಣ ಲಘುಭೋಜರಾಜ ಮಹಾಕವಿ ಮಹಾಮಾತ್ಯ ಶ್ರೀವಸ್ತುಪಾಲೇನ ಮಹಾಯಾತ್ರಾ ಪ್ರಾರೇಭೇ" ಎಂದು ಮೇರುತುಂಗಾಚಾರ್ಯನು ಒಕ್ಕಣಿಸಿರುವನು.‡ ಇವನು ಸರಸ್ವತಿಯ ಧರ್ಮಪುತ್ರನೆಂದು ಶಾಸನಗಳಿಂದ ತಿಳಿಯಬರುವುದಲ್ಲದೆ§ ಗ್ರಂಥಕಾರನೂ ತನ್ನ ಕಾವ್ಯದಲ್ಲಿ ಹೇಳಿಕೊಂಡಿರುವನು.¶

ವಸ್ತುಪಾಲನು ಆಬೂ ಮತ್ತು ಗಿರನಾರ್ ಬೆಟ್ಟಗಳ ಮೇಲೆ ಅನೇಕ ದೇವಾಲಯಗಳನ್ನು ಕಟ್ಟಿಸಿದುದಲ್ಲದೆ ಜನೋಪಕಾರವಾದ ಅನೇಕ ಕೆಲಸಗಳನ್ನು ಮಾಡಿ

ಕೀರ್ತ್ಯಾ ನೌರಭಸಾರಸುಂದ್ರಸುಮನಃ ಸಂದೋಹಸಂದೋಹಕೃತ್
ಕಾಂತ್ಯಾ ಪಾತಿ ವಸಂತಮನ್ಯಹಮಸಾವಿತ್ಯರ್ಪಿತಾರ್ಧಕ್ರಮಂ
ಖ್ಯಾತಂ ಪ್ರಾಪ ವಸಂತಪಾಲ ಇತ ಯೋ ನಾಮಾದ್ಭುತೀಯಂ ಮುದಾ
ವಿದ್ವದ್ಭಿಃ ಪರಿಕಲ್ಪಿತಂ ಹರಿಹರ ಶ್ರೀಸೋಮಶರ್ಮಾದಿಭಿಃ
(ನರನಾರಾಯಣಾನಂದ ೧೬—೫೮)

† Introduction to ನರನಾರಾಯಣಾನಂದ P. 9

‡ ಪ್ರಬಂಧಚಿಂತಾಮಣಿ ಪುಟ ೨೫೪

§ ಧರ್ಮಸೂನು ಸರಸ್ವತ್ಯಾಃ ಶಾರದಾಪ್ರತಿಪನ್ನಪತ್ಯೇನ
(Girnar Inscriptions)

¶ ನರನಾರಾಯಣಾನಂದೋ ನಾಮ ಕಂದೋಮುದಾಭಿದಂ
ತೇನ ತೇನ ಮಹಾಕಾವ್ಯಂ ವಾಗ್ದೇವೀಧರ್ಮಸೂನುನಾ ॥
ನರನಾರಾಯಣಾನಂದ ೧೬—೪೦

ಸಿದನು. ಇವನಿಗೆ ಯಾವ ಮತದಲ್ಲಿಯೂ ಪಕ್ಷಪಾತವಿರಲಿಲ್ಲ. ಮುಸಲ್ಮಾನರನ್ನು ಮ್ಲೇಚ್ಛರೆಂದು ದೂಷಿಸುತ್ತಿದ್ದ ಆ ಕಾಲದಲ್ಲಿಯೂ, ಇವನು ಅವರನ್ನು ವಿಶ್ವಾಸದಿಂದ ಕಂಡು ಅವರಿಗಾಗಿ ಮಸೀದಿಗಳನ್ನು ಕಟ್ಟಿಸಿಕೊಟ್ಟನು. ಇವನು ಸರ್ವಮತಸಮನಾಗಿದ್ದು ಮಾಡಿರುವ ಜನೋಪಕಾರ ವಿಚಾರಗಳು ಅನೇಕ ಪ್ರಸಸ್ತಿಗಳಲ್ಲಿಯೂ, ಚತುರ್ವಿಂಶತಿಪ್ರಬಂಧಗಳಲ್ಲಿಯೂ, ಪ್ರಬಂಧಚಿಂತಾಮಣಿಯಲ್ಲಿಯೂ, ಶಾಸನಗಳನೇಕಗಳಲ್ಲಿಯೂ, ಸೋಮೇಶ್ವರನ ಕೀರ್ತಿಕೌಮುದಿಯಲ್ಲಿಯೂ, ಅರಿಸಿಂಹನ ಸುಕೃತಸಂಕೀರ್ತನದಲ್ಲಿಯೂ ವಸ್ತುಪಾಲನ ಮಗ ಜೈತ್ರಸಿಂಹನ ಪ್ರಾರ್ಥನೆಯಂತೆ ಬರೆದುದಾದ ವಸಂತವಿಲಾಸಮಹಾಕಾವ್ಯದಲ್ಲಿಯೂ ,ಇವನ ದಾನ ಸಾಹಸ ಪರಾಕ್ರಮಾದಿಗಳು ವರ್ಣಿತವಾಗಿರುವುದಲ್ಲದೆ, ಜಿನಹರ್ಷನು ಬರೆದಿರುವ ವಸ್ತುಪಾಲಚರಿತದಲ್ಲಿ ಇವನು ಮಾಡಿರುವ ಪ್ರತಿಯೊಂದು ಕಾರ್ಯವೂ ಅಗ್ಗಳಿಕೆಯಿಂದ ಹೇಳಲ್ಪಟ್ಟಿದೆ. ಜಿನಪ್ರಭಸೂರಿಯು ಬರೆದಿರುವ ತೀರ್ಥಕಲ್ಪದಲ್ಲಿನ ವಸ್ತುಪಾಲಚರಿತದಲ್ಲಿ:—

ಲಕ್ಷ್ಮೀಕಂ ಸಪಾದಂ ಜಿನಬಿಂಬಾನಾಂ ಕಾರಿತಂ | ಅಷ್ಟಾದಶ ಕೋಟಯಃ ಷಣ್ಣವತಿರ್ಲಕ್ಷಾಃ ಶ್ರೀಶತ್ರುಂಜಯತೀರ್ಥೇ ದ್ರವಿಣಂ ವ್ಯಯಿತಂ | ದ್ವಾದಶಕೋಟಯೋಽಶೀತಿಲಕ್ಷಾಃ ಶ್ರೀಉಜ್ಜಯಂತೇ | ದ್ವಾದಶಕೋಟ್ಯಸ್ತ್ರಿಪಂಚಾಶಲ್ಲಕ್ಷಾ ಅರ್ಬುದಶಿಖರೇ ಊಣಿಗವಸತ್ಯಾಂ | ನವಶತಾನಿ ಚತುರಶೀತಿಶ್ಚ ಪೌಷಧಶಾಲಾಃ ಕಾರಿತಾಃ | ಪಂಚಶತಾನಿ ದಂತಮಯ ಸಿಂಹಾಸನಾನಾಂ ಪಂಚಶತಾನಿ ಪಂಚೋತ್ತರಾಣಿ ಸಮವಸರಣಾನಾಂ ಜಾದರಮಯಾನಾಂ । ಬ್ರಹ್ಮಶಾಲಾಃ ಸಪ್ತಶತಾನಿ, ಸಪ್ತಶತಾನಿ ಸತ್ರಾಕಾರಾಣಾಂ, ಸಪ್ತಶತೀ ತಪಸ್ವಿಕಾಪಾಲಿಕಮಠಾನಾಂ | ಸರ್ವೇಷಾಂ ಭೋಜನನಿರ್ವಾಪಾದಿದಾನಂಕೃತಂ ತ್ರಿಂಶಚ್ಛತಾನಿ ದ್ಯೂದ್ವ್ಯುತ್ತರಾಣಿ ಮಾಹೇಶ್ವರಾಯತನಾನಾಂ, ತ್ರಯೋದಶಶತಾನಿ ಚತುರುತ್ತರಾಣಿ ಶಿಖರಬದ್ಧ ಜೈನಪ್ರಾಸಾದಾನಾಂ, ತ್ರಯೋವಿಂಶತಿಃ ಶತಾನಿ ಜೀರ್ಣಚೈತ್ಯೋದ್ಧಾರಾಣಾಂ | ಅಷ್ಟಾದಶಕೋಟಿಸುವರ್ಣವ್ಯಯೇನ ಸರಸ್ವತೀಭಾಂಡಾಗಾರಾಣಾಂ ಸ್ಥಾನತ್ರಯೇ ಭರಣಂ ಕೃತಂ ಪಂಚಶತೀಬ್ರಾಹ್ಮಣಾನಾಂ ವೇದಪಾಠಂ ಕರೋತ ಸ್ಮ ವರ್ಷಮಧ್ಯೇ ಸಂಘಸ್ಯ ಜಾತ್ರಿತಯಂ । ಪಂಚದಶಶತೀ ಶ್ರಮಣಾನಾಂ ಗೃಹೇ ನಿತ್ಯಂ ಪೆಹರತಿ ಸ್ಮ | ತಟಕಕಾರ್ಪಾಟಿಕಾನಾಂ ಸಹಸ್ರಂ ಸಾಧಿಕಂ ಪ್ರತ್ಯಹಮಭುಂಕ್ತ | ತ್ರಯೋದಶತೀರ್ಥಯಾತ್ರಾಃ ಸಂಘಪತೀಭೂಯಕೃತಾಃ | ತತ್ರ ಪ್ರಥಮಯಾತ್ರಾಯಾಂ ಚತ್ವಾರಿ ಸಹಸ್ರಾಣಿ ಪಂಚಶತಾನಿ ಶಕಟಾನಾಂ ಸಶಯ್ಯಾಪಾಲಕಾನಾಂ,

ಸಪ್ತಶತೀ ಸುಖಾಸನಾನಾಂ, ಅಷ್ಟಾದಶಶತೀ ವಾಹಿನೀನಾಂ, ಏಕಾನ್ನ ವಿಂಶತಿಃ ಶತಾನಿ ಶ್ರೀಕರೀಣಾಂ, ಏಕವಿಂಶತಿಃ ಶತಾನಿ ಶ್ವೇತಾಂಬರಾಣಾಂ ಏಕಾದಶಶೀತಿದಿಗಂಬರಣಾಂ, ಚತ್ವಾರಿ ಶತಾನಿಸಾರ್ದ್ಧಾನಿ ಜೈನ ಗಾಯನಾನಾಂ ತ್ರಯಸ್ತ್ರಿಂಶಚ್ಛತೀ ಬಂದಿಜನಾನಾಂ | ಚತುರಶೀತಿಸ್ತ ಡಾಗಾಃ ಸುಬದ್ಧಾಃ | ಚತುಃ ಶತೀ ಚತುಃಷಷ್ಟ್ಯಧಿಕಾ ವಾಪೀನಾಂ, ಪಾಷಾಣಮಯಾನಿ ದ್ವಾತ್ರಿಂಶದ್ದುರ್ಗಾಣಿ, ದಂತಮಯಜೈನರಥಾನಾಂ ಚತುರ್ವಿಂಶತೀಃ, ವಿಂಶಂಶತಂಶಾಕಘಟಿತಾನಾಂ | ಸರಸ್ವತೀಕಂಠಾಭರ ಣಾದೀನಿ ಚತುರ್ವಿಂಶತಿಬಿರುದಾನಿ ಶ್ರೀವಸ್ತುಪಾಲಸ್ಯ | ಚತುಃಷಷ್ಟಿ ರ್ಮಸೀತಯಃ ಕಾರಿತಾಃ | ದಕ್ಷಿಣಸ್ಯಾಂ ಶ್ರೀಪರ್ವತಂ ಯಾವತ್ ಪಶ್ಚಿ ಮಾಯಾಂ ಪ್ರಭಾಸಂ ಯಾವತ್ ಉತ್ತರಸ್ಯಾಂ ಕೇದಾರಂ ಯಾವತ್, ಪೂರ್ವಸ್ಯಾಂ ವಾರಾಣಸೀಂ ಯಾವತ್ ತಯೋಃ ಕೀರ್ತನಾನಿ | ಸರ್ವಾ ಗ್ರೇಣ ತ್ರೀಣಿ ಕೋಟಿಶತಾನಿ ಚತುರ್ದಶಲಕ್ಷ ಅಷ್ಟಾದಶಸಹಸ್ರಾಣಿ ಅಷ್ಟಶತಾನಿ ಲೋಷ್ಮಿಕಶ್ರಿತ ಯೋನಾನಿ ದ್ರವ್ಯವ್ಯಯಃ | ತ್ರಿಷಷ್ಟಿ ವಾರ್ತಾ ಸಂಪ್ಯಾಮೇ ಜೈತ್ರಪತ್ರಂ ಗೃಹೀತಂ || ಎಂದು ಹೇಳಿರುವುದು ಕಂಡುಬರುತ್ತದೆ.

ವಸ್ತುಪಾಲನು ಸ್ವತಃ ಕವಿಯಾಗಿದ್ದು ಇತರರ ಗ್ರಂಥಗಳಲ್ಲಿನ ಗುಣದೋಷ ಗಳನ್ನು ವಿಮರ್ಶಿಸಿ ಹೇಳುವ ಜಾಣ್ಮೆಯನ್ನುಂಟಾಗಿದ್ದನು. ಇವನು ಸೋಮೇ ಶ್ವರ, ಹರಿಹರ, ಅರಿಸಿಂಹನೇ ಮೊದಲಾದ ಮಹಾ ಕವಿಗಳಿಗೆ ಆಶ್ರಯವನ್ನು ಕೊಟ್ಟದ್ದು ದಲ್ಲದೆ ದಾಮೋದರ, ನಾನಾಕ, ಜಯದೇವ, ಮದನ, ಪಿಂಕಲ, ಕೃಷ್ಣ ಸಿಂಹ ಮತ್ತು ಶಂಕರಸ್ವಾಮಿ ಇವರಿಗೆ ಪೋಷಕನಾಗಿದ್ದನು. ಸೋಮೇಶ್ವರನು ತಾನು ಬರೆದುದಾದಕೀರ್ತಿಕೌಮುದಿಯಲ್ಲಿ ತನಗೆ ಆಶ್ರಯ ಕೊಟ್ಟವನನ್ನು ಬಹುವಾಗಿ ಕೊಂಡಾಡಿರುವನು. ಹರಿಹರನು ಬರೆದ ಗ್ರಂಥವಾವುದೆಂಬುದು ನಮಗೆ ತಿಳಿಯದು. ಅರಿಸಿಂಹನು 'ಸುಕೃತಸಂಕೀರ್ತನ'ದಲ್ಲಿ ವಸ್ತುಪಾಲನನ್ನು ಕೊಂಡಾಡಿ ಬಹುಮಾನವನ್ನು ಹೊಂದಿದನು. ಶಂಕರಸ್ವಾಮಿಯ ವಿಚಾರವಾಗಿ ಕೊಂಚವೂ ತಿಳಿಯದಾಗಿದೆ. ಈತನು ಆಗ ಇದ್ದ ದ್ವಾರಕೆಯ ಶಂಕರಾಚಾರ್ಯ ರಾಗಿರಬೇಕೆಂದೂ ಊಹಿಸಲಾಗುತ್ತದೆ. ಆದರೆ ಹೀಗೆಂದು ಹೇಳುವ ಪ್ರಮಾಣ ಗ್ರಂಥಗಳು ದೊರೆಯವು. ಇವನು ಕೇವಲ ಗುಣೈಕಪಕ್ಷಪಾತಿಯಾಗಿದ್ದುದರಿಂದ ಮಹಾಕವಿಯಾದ ಹರಿಹರನ ವಿಚಾರದಲ್ಲಿ ಸೋಮೇಶ್ವರನು ಅಸೂಯೆಯಿಂದ ವರ್ತಿಸುತ್ತಿದ್ದನಾದರೂ, ಧೋಲ್ಕದ ರಾಜಾಸ್ಥಾನದಲ್ಲಿ ಹರಿಹರನಿಗೆ ಹೆಚ್ಚಿದ ಗೌರ ವವು ದೊರೆತಿದ್ದಿತು.

ಕಾಲ:—ಸಂವತ್ ೧೨೭೭ ಅಥವಾ ಕ್ರಿ. ಶ ೧೨೨೦ವಸ್ತುಪಾಲನ ಗ್ರಂಥ ನಿರ್ಮಾಣಕಾಲವೆಂದು ಮೇರುತುಂಗನು ಹೇಳುವನು.

ಜಿನಹರ್ಷನುಬರೆದಿರುವ ವಸ್ತುಪಾಲಚರಿತದ ಕೊನೆಯ ಅಧ್ಯಾಯದಲ್ಲಿ ಸಂವತ್ ೧೨೭೭-೮೮ರಲ್ಲಿ ಆಬೂ ಮತ್ತು ಗಿರ್ನಾರ್ ಪರ್ವತಗಳಮೇಲೆ ದೇವಾಲಯಗಳನ್ನು ಕಟ್ಟಿಸಿರಲಿಲ್ಲವೆಂದು ಹೇಳುವುದರಿಂದ **ಈ** ಕಾವ್ಯನಿರ್ಮಾಣವು ಸಂ. ೧೨೭೭-೮೭ರ ಮಧ್ಯಕಾಲದಲ್ಲಾಗಿರಬೇಕೆಂದು ತೋರುತ್ತದೆ. ಹೇಗೂ ವಸ್ತುಪಾಲನು. ಕ್ರಿ. ಶ. ೧೩ನೆಯ ಶತಮಾನದ ಪೂರ್ವಾರ್ಧದವನೆಂಬುದು ಸ್ಪಷ್ಟವಾಗುತ್ತದೆ.

ಗ್ರಂಥ:—ಇವನು '**ನರನಾರಾಯಣಾನಂದ**' ಎಂಬ ಮಹಾಕಾವ್ಯವನ್ನುಬರೆದಿರುವನು. ಇವನು ಬರೆದಿರುವ ಇತರ ಗ್ರಂಥಗಳಾವುವೆಂಬುದುತಿಳಿಯದು.ಕಥಾಭಾಗವನ್ನು ಮಹಾಭಾರತದಿಂದ ಆರಿಸಿಕೊಂಡಿರುವನು. ಇದರಲ್ಲಿ ೧೬ ಸರ್ಗಗಳಿರುವುವು. ಕೃಷ್ಣಾರ್ಜುನರಿಬ್ಬರೂ ಸ್ನೇಹಗೊಂಡು ಗಿರ್ನಾರ್ ಪರ್ವತದಲ್ಲಿ ವಿಹರಿಸುತ್ತ ಪುಷ್ಪಾಪಚಯಕ್ಕಾಗಿಬಂದಿದ್ದ ಸುಭದ್ರೆಯ ರೂಪುರೇಖಾವಿಲಾಸಗಳನ್ನು ದೂತಿಯಮುಖದಿಂದ ಕೇಳಿ ತಾನೂ ನೋಡಿ ಮೋಹಪರವಶನಾಗಿ ಸುಭದ್ರಾಹರಣವನ್ನು ಮಾಡಿ ವಿವಾಹಗೊಂಡು ಸುಖದಿಂದಿದ್ದರೆಂಬುದೇ ಕಥಾವಸ್ತು. ಕಥಾಭಾಗವು ಅತ್ಯಲ್ಪ. ಇವನವರ್ಣನೆ ಮತ್ತು ಶೈಲಿಯನ್ನು ನೋಡಿದರೆ ಮಾಘಪಂಡಿತನ ಶಿಶುಪಾಲವಧೆಯನ್ನು ಎದುರಿಗೆ ಇಟ್ಟುಕೊಂಡುಬರೆದಿರಬೇಕಾಗಿತೋರುತ್ತದೆ. ಮಹಾಕವಿಜಲ್ಹಣನು ಇದರ ಮೊದಲನೆಯಸರ್ಗದ ಏಳನೆಯ ಶ್ಲೋಕವನ್ನು* ತನ್ನ ಸೂಕ್ತಿಮುಕ್ತಾವಳಿಯಲ್ಲಿಯೂ ಹದಿನಾಲ್ಕನೆಯಸರ್ಗದ ಹದಿನಾರನೆಯ ಶ್ಲೋಕವನ್ನು§ ಅಮರನು x ತನ್ನ ಕವಿಕಲ್ಪಲತೆಯಲ್ಲಿಯೂ ಹೇಳಿಕೊಂಡಿರುವನು. ಇವನ ಕಾವ್ಯದ ಕೆಲವು ಶ್ಲೋಕಗಳನ್ನು ಮಾದರಿಗಾಗಿ ಬರೆಯುವೆವು.
ಮಧುಪಾನಗೋಷ್ಠಿವಿಚಾರವಾಗಿಹೀಗೆ ಇರುವುದು:—

ಕ್ಷಣಮತಿಕುಪಿತಾಃ ಕ್ಷಣಂ ಪ್ರಸನ್ನಾ
ಹಸಿತಾಶ್ಚ ಕ್ಷಣಮಾಕುಲಾಃ ಕ್ಷಣಂ ಚ
ನವನವರಸಭಂಗಿಭಿಮ್ರಗಾಕ್ಷ್ಯಾಃ
ಹೃದಯಂ ನೂನಮನೀನೃತೈರಪಿಯಾಣಾಂ ॥ ೬—೧೬

ಅನಾಗತಂ ದಾಸರತೈರತೀವ ಯಸ್ಯಾಂ ವಿಕೀರ್ಣೇಷು ವಿವೇಕಿವರ್ಗೈಃ
ಜನಾ ನಜಾನಂತಿ ನಿಜೇಷು ಸಂಖ್ಯಾಂ ಧನೇಷು ತಾರಾಗಣವೇದಿನೋಽಪಿ ॥

§ ಶೂರಃ ಸ್ಥಿರತರಃ ಸ್ಫಾರಶರಭಾರಃ ಪುರಃ ಪುರಃ
ಆರ ವೈರಭರಸ್ಮೇರವೀರವಾರಹರಃ ಪರಃ ॥

x ಬಾಲಭಾರತಕರ್ತೃ

ಅವಿರತಮಧುಪಾನಧೌತರಾಗಸ್ಫುಟದಂತಾಂಕೆಧರೋಽಧರಸ್ತರುಣ್ಯಾಃ
ಅಪರವ್ಯಗದೃಶ್ಚಿಪ್ರಕೋಪನಾಯಾಮಿವ ಸಂಕೋಪಯಿತುಂ ಪವೇಶತೇಸ್ಮ॥ ೧೭

ಸಮಧುರಗುಣಾಯಾ ಹ್ರಿಯಂಹರಂತ್ಯಾ
ಪ್ರತಿಕಾಂತಂ ಸುರಯೈವ ಕಾಪಿ ಮುಗ್ಧಾ
ಚಟುವಚನಮಸ್ಫುಟಮಂದಮಂದಂ
ಸ್ವಯಮಂತರ್ಗತಯಾವಯಸ್ಯಯೇವ ॥ ೧೮

ಮದಪರವಶಚೇತಸಾಂ ವಧೂನಾಂ
ದ್ರುತಮುಕ್ತೋತ್ಥಿತಮಂದ್ರಮಧ್ಯತಾರೈಃ ॥ ೯
ಪ್ರತಿಪದಮನವಸ್ಥಿತಪ್ರಯೋಗೈ
ರಪಿಗೀತೈರ್ದಧಿರೇ ಮುದಂ ಯುವಾನಃ ॥ ೯

ಚಿರವಿರಚಿತಚುಂಬನಪ್ರಪಂಚಾ
ದಧರಾಚ್ಚಾರುದೃಶಾಮುದಸ್ಯ ರಾಗಂ
ಅಭಿಮುಖಪತಿತೇಷು ತನ್ವತೇ ಸ್ಮ
ವ್ರತಿಕಾಂತಾನಯನೇಷು ರಾಗಭಾಜಃ ॥

ಸೂರ್ಯೋದಯವರ್ಣನವು ಹೀಗಿರುವುದು—

ವ್ಯಾಸಾದವೇದಿಷು ನಿರಂತರಮಂತರಿಕ್ಷ
ಕುಕ್ಷಿಂ ಭರಿಃ ಸ್ಫುರಿತಮಾಪಮೃದಂಗನಾದಃ
ತೇಮಪ್ರಣುನ್ನ ಮಿವ ಶ್ರೀತಮರೀಚಿ ಬಿಂಬ
ಮಾಲಂಬತ ಸ್ಖಲಿತಡಂಬರಮಂಬರಾಂತೇ ॥ ೭ ೨

ಸಾರಸ್ವತಸ್ಮೃತಿಶುಚೌ ಕವಿಪುಂಗವಾನಾಂ
ಚಿತ್ತೇ ಸ್ಫುಟಸ್ಫುಟಿಕದರ್ಪಣದರ್ಪಚೌರೇ
ವಾಗ್ದೇವತಾ ಸ್ವಯಮಿಯಂ ಪ್ರತಿಬಿಂಬಿತೇವ
ಶುದ್ಧಾಮತಿಃ ಪ್ರಭವತಿ ಸ್ಮ ಕವಿತ್ವತತ್ತ್ವೇ ॥ ೭—೬

ಚಂದ್ರೋದಯವರ್ಣನ:—

ಏಕಾಕಿನ್ಯಪಿ ಕಾಮಭೂಪತಿಮಹಾಸಾಹಾಯ್ಯತೋಮಾನಿನಾ
ಮಾದೃಂಗ್ಮಾನಧನಗ್ರಹವ್ಯತಿಕರವ್ಯಗ್ರೇ ಸುಧಾದೀಧಿತೌ
ದಾಯಾದೀವ ಜವಾದಡೌಕತ ತದಾಹುಂಕಾರಹುಂಕಾರಿಣೇ
ಸೌರಭ್ಯಾಭಿಸರನ್ಮಧುವ್ರತವಧೂನಾದೇನ ಕಾದಂಬರೀ ೫— ೪೯

ವಿವಾಹವರ್ಣನ:—

ಹರಹುತವಹದಗ್ಧಂ ಜೀವಯತ್ಯೇವ ಕಾಮಂ
ಪರಿಣಯನಮಖಾಗ್ನೀ ದೀಪಿತೇ ದಂಪತೀ ತೌ
ವಿವಿಧವಿಧಿವಿಧಾಯಾ ವರ್ತ್ತಯಾಮಾಸ ಧೀರ್ಮಾ
ಗುರುರಥ ಪೃಥುವಿದ್ಯಾಮಂಡಲೋ ಮಂಡಲಾನಿ ೧೭— ೩೫

ಶಿಥಿಲಕರಸರೋಜಾ ಲಜ್ಜಮಾನಾ ವಿಕೀರ್ಯ
ಜ್ವಲಿತಹುತವಹಾಂತರ್ಜಾಮುಷ್ಟಿಂ ಸುಭದ್ರಾ
ಅಳುರುತಗುರುವಾಚಾ ಕಿಂಚಿದಾಚಾರದೂನಂ
ಗ್ರಹಣಮಥ ಮುಖಾಬ್ಜೋತ್ಸಂಗಭೃಂಗಾಯಮಾನಂ ॥ ೬ —೪೬

ಅ ಭ ಯ ದೇ ವ

ಇವನನ್ನು ಆಚಾರ್ಯ ಅಭಯದೇವನೆಂದು ಕರೆಯುವುದುಂಟು. ಇವನು ರುದ್ರ ಪಾಲೀಯ ಗಚ್ಛದವನು. ಶ್ವೇತಾಂಬರ ಜೈನಪಂಗಡದವನು. ವಿಜಯಚಂದ್ರ (ಜಯಚಂದ್ರ) ಸೂರಿಯಶಿಷ್ಯನು. ದೇವಚಂದ್ರಸೂರಿಯ ಆಚಾರ್ಯನು. ಇವನಿಗೆ ಕಾಶೀರಾಜನಿಂದ ವಾದಿಸಿಂಹನೆಂಬ ಬಿರುದುಕೊಡಲ್ಪಟ್ಟಿದ್ದಿತು. ಇವನ ಆಚಾರ್ಯವಂಶಾವಳಿಯು ಹೀಗಿರುವುದು.

ಅಭಯದೇವ (ನವಾಂಗವೃತ್ತಿಕರ್ತ್)
(ಬೃಹತ್ಪರತರ ಪಟ್ಟಾವಳಿ. ನಂ ೪೨.)

ವರ್ಧಮಾನ	ಜಿನವಲ್ಲಭ (ಬೃಹತ್ಪರತರ ಪಟ್ಟಾವಳಿ ನಂ. ೪೩)

ಜಿನದತ್ತ (ಬೃಹತ್ಪರತರ ಪಟ್ಟಾವಳಿ)	ಜಿನಶೇಖರ ರುದ್ರಪಾಳೀಯಗಚ್ಛದ ಮೂಲಪುರುಷ

ವಿ. ಸಂ. ೧೨೦೪
|
ಪದ್ಮಚಂದ್ರ
|
ವಿಜಯಚಂದ್ರ
|
ಅಭಯದೇವ

ಇವನು ವಿ. ಸಂ. ೧೨೭೪/ಅಥವಾ ಕ್ರಿ.ಶ ೧೨೧೭ ರಲ್ಲಿ **ವಿಜಯಂತವಿಜಯ** (ಜಯಂತ ವಿಜಯ) ಎಂಬ ಮಹಾ ಕಾವ್ಯವನ್ನು ಬರೆದುದಾಗಿ:—

*Dictionary of jain Biography P. 9

ವಿಶ್ವತ್ರಯಪ್ರಥಿತಕೀರ್ತಿಲತಸ್ಯತಸ್ಯ
ಶಿಷ್ಯಃ-ಪ್ರಶಸ್ಯಮಹಿಮಾಭಯದೇವಸೂರಿಃ
ಕಾವ್ಯಂ ಜಯಂತವಿಜಯಂ ರಚಯಾಂಚಕಾರ
ಸಾರಸ್ವತಪ್ರಸ್ಮರಪ್ರತಿಭಾವಿಲಾಸಃ ॥

ದಿಕ್ ರಿಕುಲಗಿರಿವಿನಿಕರ (೧೨೭೪) ಪರಿಮಿತವಿಕ್ರಮನರೇಶ್ವರಸಮಾಯಾಂ
ವಾ ವಿಂಶತಿಶತವರ್ಷಾನಂ ಶಾಸ್ತ್ರಮಿದಂ ನಿರ್ಮಿತಂ ಜಯತು ॥

ಎಂಬ ಶ್ಲೋಕಗಳಿಂದ ಸ್ಪಷ್ಟವಾಗುತ್ತದೆ. †

ಜಯಂತ ವಿಜಯವೆಲ್ಲ ೧೯ ಸರ್ಗಗಳಿರುವವು. ಈ ಕಾವ್ಯದ ಶೈಲಿಯನ್ನು ಹೇಳುವುದಕ್ಕೆ ಕೆಲವು ಶ್ಲೋಕಗಳನ್ನು ಮಾದರಿಗಾಗಿ ಬರೆಯುವೆವು.

ಅಂಧಕಾರ ವರ್ಣನೆ:—

ಕೆಲಕಬುವ ತವಾಲ್ಯೀ-ಕುಂತಲೀಕುಂತಲಾಲೀ
ರುಚಿಭಿರಿವ ತತಾಭಿಶ್ಚುಂಬಿತಂ ವಿಶ್ವವಿಶ್ವಂ
ಸ್ವಗಿತಬಿವ ಸಮಂತಾದಂಜನೈ ರಾಜಪಟ್ಟೈ
ಘಟಿತಮಿವ ಚಕಾನೇ ವ್ಯಾಪ್ತಮಿಭೈಸ್ತಮೋಭಿಃ ೪-೫೧

ಅಭಿನವಮೃಗನಾಭೀಪಂಕಕ್ಲಿನ್ನಾಂಗರಾಗಾ
ಭ್ರಮರರುಚಿದುಕೂಲೈರ್ವೇಷ್ಟಿತಮುದ್ಯಾಂ ದಧಾನಾಃ
ವಿರಚಿತಕೃತಭೂಷಾಃ ಪಕ್ಷ್ಮಲಾಕ್ಷ್ಯಃ ಸಲೀಲಂ
ರಮಣಮಭಿಸರಂತಿ ಸ್ಮ ರಮಿದ್ಧೇಂಽಧಕಾರೇ ॥ ೪-೫೨

ಅಪುತ್ರೋದ್ಧಾರ ವರ್ಣನೆ: —

ನ ವೇದಪೂರ್ವೋದಿತದುಃಖಮುದ್ಭಾವಿತಾಲಪೋಽಪಿ ಲಬ್ಧಾವಸರಸ್ತನೌ ಮಮ
ತವ ಪ್ರಸಾದೇನ ದಿಸೇಶ್ವರೋದಯೇ ನಭಸ್ತಲೇ ವಾ ಕ್ಷ ತಮಿಸ್ರಸಂಭವಃ ೨-೧೬

ಸುಜೈರಶೇಷ್ಟೀ ಸುಖಿನೀಷು ಮುಖ್ಯಿತಾ ಮಮೇಶ ಶಚ್ಯಾ ಅಪಿ ಚಿತ್ತಹಾರಿಣೇ
ಪ್ರಸಾದತಸ್ತೇ ಕಮಪೂರ್ಣಮಸ್ತು ಮೇ ಸುತಂ ವಿನಾ ತ್ವೇತದರುಂತುದಂ ಹೃದಃ ೨-೧೭

ಕೃತಿಃ ನಿರಾಕರ್ತುಮಿದಂ ಮ ಲಾಂಛನಂ ತ್ವಮೇವ ಮೇ ದುಃಸಹಸಾಹಸಪ್ರಿಯ
ಸವೇಷಮುಕ್ತಾಂ ಕುರುತೇ ಹಿ ಪದ್ಮಿನೀಂ ನ ಪದ್ಮಬಂಧೋರಪರಃ ಕದಾಚನ ೨-೧೮

ವಸುಂಧರೋದ್ಧರಧುರಂಧರೇಣ ಮಾಂ ವಿಧೇಹ್ಯಪಾಯೇನ ಸುತೇನ ಭೂಷಿತಾಂ
ಸ್ಪದೋಹದೇನೇವ ಲತಾಂ ಫಲಾಂಚಿತಾಮಿದಂ ಹಿ ಸಾರಂ ಕಿಲ ಸರ್ವಸಂಪದಾಂ ೨-೧೯

ವಿನಾ ವಿನೀತೇನ ಸುತೇನ ಗೇಹಿನಾಂ ಕುಲಂ ಗೃಪಂ ಶೂನ್ಯಮನೂನದುಃಖಿದಂ
ಕ್ರಮೇಣ ನಶ್ಯಂತಿ ಚ ಸರ್ವಸಂಪದಃ ಸ್ಥಿರಂ ನಿರಾಲಂಬಮಹೋ ನ ಕಿಂಚನ ೨-೨೧

† ಜಯಂತವಿಜಯಕಾವ್ಯದಮುನ್ನುಡಿಮತ್ತು ಗ್ರಂಥಕರ್ತೃಪ್ರಶಸ್ತಿ

ಅನನ್ಯಾಧಾರಾನ್ಯೈಬಹೂದ್ಧವೈಃ ಸುಖೈಃ ಸದಾ ದುರ್ಲಲಿತೋಽಪಿ ಮಾನವಃ
ಅಪುತ್ರಜನ್ಮಪ್ರಭವಾಭಿಬಾಧಿತೋ ನ ಕೋಟರಾಗ್ನಿರ್ವಿಟಪೀವ ನಂದತಿ ೨ ೨೨

ವರಂ ದರಿದ್ರೋಽಪಿ ಸನಂದನೋ ಜನಸ್ತದೀಕ್ಷಣಾನಂದತರಂಗಿಲೋಚನಃ
ನ ಶಕ್ತುತುಲ್ಯೋಽಪಿ ಸಮೃದ್ಧಿಭಿಃ ಪರಃ ಪರಾಙ್ಮುಖತ್ವೇನ ವಿಧೇರನಾತ್ಮಜಃ ೨ ೨೩

ಜನೋಽಪ್ಯಪುತ್ರಸ್ಯ ಗತಿರ್ನ ವಿದ್ಯತೇ ಕ್ಷಯಂ ಪ್ರಯಾತಿ ಕ್ರಮಶಶ್ಚ ಕೀರ್ತನಂ
ಇತಿ ಪ್ರವಾದಃ ಖಲು ದುಃಸಹಃ ಸತಾಮಪುತ್ರಿಣಾಂ ಭೂಪವಿಲೋಪ್ಯ ಸಂಪದಾಂ ೨-೨೪

ದೋಲಾವರ್ಣನ —

ಚರಣಕಮಲಮೇಕಂ ಪಾದವೂಲೇ ಸಹೇಲಂ
ಮೃದುಭುಜಯುಗಲಂ ಚ ಸ್ಕಂದದೇಶೇ ನಿವೇಶ್ಯ
ಸರಸಸುರತಕೇಳಿವ್ಯೋಕ್ತಮಾರ್ಗೇಣ ಕಾಚಿ
ತ್ಪ್ರಿಯವಿವ ತರುಮುಚ್ಚೈರಾರುರೋಹಾಯತಾಕ್ಷೀ ೮-೧೬

ಅಲಿಕುಲರವಮೀಯುರ್ಮಾರ್ಗಸಲಃ ಪುಷ್ಪಜಾತೈಃ
ಸರಚಿಸಮುದಿರೂಢಃ ಕೇನಚಿತ್ ಸುಂದರೀಭಿಃ
ತ್ರಿಭುವನಸುಭಗಾಭಿಃ ಪುಷ್ಪಬಾಣಸ್ಯ ಪುಣ್ಯೈಃ
ಪಲಿತ ಇಹ ನವೀನಃ ಕಲ್ಪಿತಾಖೇವರೇಜೇ ॥ ೮-೧೭

ವೃಷ್ಟಾವಚಯ ವರ್ಣನಃ —

ಕುಟಕಲಶನಿತಂಬಸ್ತಂಬಭಾರೇಣ ನಮ್ರಾ
ಸ್ಖಲತಗತಿವಧೂಬಾ ಬಾಲವೃಕ್ಷಾಪ್ಸರಂತೀ
ಧೃತಮುಧ ಭುಜಾಗ್ರೇ ಕಾಪಿ ಕಾಂತೇನ ದಧ್ನೇ
ಪರಿತ ಸುಭಗಕಾಂತ ಚಕ್ರವಾಲಸ್ಯ ಬಾಲಾ ೮-೨೩

ತರುಣತರ ರೂಚಾಮಾತ್ತಪುಷ್ಪಾಸ್ತರುಣ್ಯಃ
ಕರನಖಶಿಖಿರಾಣಾಂ ಶೋಣಕಾಂತಿಚ್ಛಟಾಭಿಃ
ವಿದಧುರಿವ ಕೃತಚ್ಛಾಸ್ತತ್ಪ್ರವಾಲದ್ರುಮಷಂ
ಫಲತಿ ಸಹೃದಯೇಷು ಕ್ವಾಪ್ಯಮೇವೋಪಕಾರಃ ॥ ೮ ೨೪

ಜಲಕೇಳಿವರ್ಣನಃ —

ಮದುಭರಿವ ವಿವೃದ್ಧೈಃ ಪೂರ್ಯಲಾವಣ್ಯ ಪೂರೈ
ರಲಿಭರಿವ ವಿಲೋಲೈರ್ಲೋಚನೈರಾಪ್ತ ಶೋಭೈಃ
ಪಯಸಿ ವಿದಧುರಾಸ್ಯೈಃ ಕಂರದಪ್ಲೇ ತದಾನೀ
ಮಪರಕಮಲಖಂಡಾಡಂಬರಂ ತಾಸ್ತರುಣ್ಯಃ ॥ ೮-೩೬

ಅಥ ಕರಜಲಯಂತ್ರೈರ್ವಾರಿಪೂರಂ ಕಿರಂತ್ಯಃ
ಸ್ಫುರತಿ ವಿಯತಿ ವರ್ಷಾಡಂಬರೇಽನ್ಯೋನ್ಯಮುಚ್ಚೈಃ
ಜಲಲಲಿತಿಷು ತಾಸಾಂ ಪ್ರೀತಿವಲ್ಲೀವಿಲಾಸಂ
ಕಲಯತಿ ಸ ಚ ಶೋಷಂ ಮಾನಮುದ್ರಾಜವಾಸಂ ೮-೩೮

ಯ ಶ ಃ ಪಾ ಲ

ಇವನ ತಂದೆಯ ಹೆಸರು ಧನದೇವ. ತಾಯಿಯ ಹೆಸರು ರುಕ್ಮಿಣಿ. ಇವನು ಮೋಢಬನಿಯಾ ಜಾತಿಯವನು. ಧನದೇವನು ಮಂತ್ರಿಯೆಂದು ಕರೆಯಿಸಿಕೊಳ್ಳುತ್ತಿದ್ದನು. ಕವಿಯು, ಚಕ್ರವರ್ತಿ ಅಜಯದೇವನ* ಚರಣಕಮಲದ ರಾಜಹಂಸನೆಂದು ಹೇಳಿಕೊಂಡಿರುವುದು ಈ ನಾಟಕದ ಸೂತ್ರಧಾರನ ಹೇಳಿಕೆಯಿಂದ ಸ್ಪಷ್ಟಪಡುತ್ತದೆ. ಅದು ಹೀಗಿರುವುದು: —

ಸೂತ್ರಧಾರಃ (ಸ್ಮೃತಿಮಭಿನೀಯ). —

ಆರ್ಯೇ! ಅಸ್ಯೈವ ಶ್ರೀಮೋಢವಂಶಾವತಂಸೇನ ಶ್ರೀಅಜಯದೇವಚಕ್ರವರ್ತಿ ಚರಣರಾಜೀವರಾಜಹಂಸೇನ ಮಂತ್ರಿಧನದೇವತನೂಜನ್ಮನಾ ರುಕ್ಮಿಣೀಕುಕ್ಷಿಲಾಲಿತೇನ ಸರ್ವತೋಮುಖಿನಿಸ್ತುಷಶೇಮುಷೀವಿಲಾಸವಾಸಭವನೇನ ನಿರ್ವ್ಯಾಜರಾಜನೀತಿನಿತಂಬಿನೀ ವದನವಿಭ್ರಮಮಣಿದರ್ಪಣೇನ ವ್ಯಾಪಾರಿಕಮಲಾಕುಚಕಲಶಮುಕ್ತಾಫಲಹಾರಯಷ್ಟಿನಾ ನಾರಸಾರಸ್ವತೋದಾರಸಾರಣೀಸೇಕಸುಕುಮಾರ ಸ್ಮೇರಕಾವ್ಯಕಂದಲ ಪ್ರರೋಹೇಣ ಪರಮಾಹ್ಲಾದಿತೇನ ಯಶಃಪಾಲಕವಿನಾ ವಿನಿರ್ಮಿತಂ...॥

ಕಾಲ:—ಕುಮಾರಪಾಲನ ಅನಂತರ ಅಜಯದೇವನು ಸಿಂಹಾಸನಕ್ಕೆ ಬಂದನು. ಇವನು ಕ್ರಿ. ಶ. ೧೨೩೯ ರಿಂದ ೧೨೪೨ ವರೆಗೆ ರಾಜ್ಯವಾಳಿದನು. ಯಶಃಪಾಲನು ಅಜಯದೇವನನ್ನು ಹೊಗಳಿರುವುದರಿಂದ ಕವಿಯನ್ನು ಅಜಯದೇವನ ಸಮಕಾಲೀನನೆನೆಬೇಕಾಗುವುದು. ಎಂದರೆ ಕ್ರಿ. ಶ. ೧೨೩೯ ರ ಶತಮಾನದ ಪೂರ್ವಾರ್ಧದವನೆಂಬದು ನಿರ್ಧಾರವಾಗುತ್ತದೆ.

ಗ್ರಂಥ:—ಇವನು "ಮೋಹರಾಜಪರಾಜಯ" ಎಂಬ ೫ ಅಂಕಗಳುಳ್ಳ ನಾಟಕವನ್ನು ಬರೆದಿರುವನು. ಗುಜರಾತಿನ ಚಾಲುಕ್ಯರಾಜನಾದ ಕುಮಾರಪಾಲನನ್ನು ಜೈನಮತಾವಲಂಬಿಯಾಗಿ ಮಾಡಿದುದೂ, ಪ್ರಾಣಿಹಿಂಸಾನಿಷೇಧವೂ, ಮಹಾತ್ಮನಾದ ಹೇಮಚಂದ್ರನ ಮತದಂತೆ ಸಂತಾನಹೀನರ ಆಸ್ತಿಯನ್ನು ರಾಜನಾದವನು ಬೊಕ್ಕಸಕ್ಕೆ ಸೇರಿಸಿಕೊಳ್ಳಕೂಡದೆಂಬುದೂ ಇದರ ಮುಖ್ಯಸಂಗತಿಗಳು. ಇವುಗಳನ್ನು ಕವಿಯು ಕೃಷ್ಣಮಿಶ್ರನ ಪ್ರಬೋಧಚಂದ್ರೋದಯದ § ಹಾಗೆ

* ಇವನಿಗೆ ಅಜಯಪಾಲನೆಂದೂ ಹೆಸರು.

§ ಅನಂತನಾರಾಯಣಸೂರಿಯ ಮಾಯಾವಿಜಯ, ವಾದಿಚಂದ್ರನ ಸೂರ್ಯೋದಯ, ಪದ್ಮಸುಂದರನ ಜ್ಞಾನಚಂದ್ರೋದಯ, ಕವಿಕರ್ಣಪೂರನ ಚೈತನ್ಯಚಂದ್ರೋದಯ ಇವೆ ಈಜಾತಿಯ ಗ್ರಂಥಗಳೆನ್ನಬಹುದು.

ಅನ್ಯಾಪದೇಶವಾಗಿ, ಹೇಳಿ ರಾಜ, ವಿದೂಷಕ ಮತ್ತು ಹೇಮಚಂದ್ರ ಈ ಮೂರು ಹೆಸರುಗಳನ್ನು ಬಿಟ್ಟು ಉಳಿದ ಪಾತ್ರಗಳಿಗೆ ಮನುಷ್ಯರನ್ನು ಹೇಳುವುದಕ್ಕೆ ಬದಲು ಗುಣಗಳನ್ನು ಪಾತ್ರವಾಗಿ ತೆಗೆದುಕೊಂಡಿರುವನು. ಈ ನಾಟಕವು ಮೊದಲು ತಾರಾಪದರದಲ್ಲಿ ಕುಮಾರಪಾಲ ನಿರ್ಮಿತ ಕುಮಾರವಿಹಾರದಲ್ಲಿನ ಮಹಾವೀರ ಪ್ರತಿಮೆಯ ಎದುರಿನಲ್ಲಿ ಅಭಿನಯಿಸಲ್ಪಟ್ಟುದಾಗಿ ತಿಳಿಯಬರುತ್ತದೆ. ಈಗಣ ಪಾಲನಪುರಕ್ಕೆ ಸೇರಿದ 'ತರಾಡ' ಎಂಬುದೇ ಆಗಣ ತಾರಾಪುರವಾಗಿರಬೇಕೆಂದು ಟೋಧೆಯಾಗುತ್ತದೆ. ಅಲ್ಲದೆ ಯಶಃಪಾಲನು ಈ ಸ್ಥಳದ ಮುಖ್ಯಾಧಿಕಾರಿಯಾಗಿರಬೇಕೆಂದೂ ಹೇಳಲಾಗುತ್ತದೆ. ಇವನು ೩೨ ಭವ್ಯವಿಹಾರಗಳನ್ನೂ, ತ್ರಿಭುವನವಿಹಾರವೆಂಬ ಚೈತ್ಯಾಲಯವನ್ನೂ ಕಟ್ಟಿಸಿದನು. ಆಗಣ ಕಾಲದಲ್ಲಿ ಹೇಮಚಂದ್ರಾಚಾರ್ಯನ ಸಿದ್ಧವ್ಯಾಕರಣವೂ, ವಿಂಶತಿವೀತರಾಗಸ್ತುತಿಯೂ, ಯೋಗಶಾಸ್ತ್ರಾಭ್ಯಾಸವೂ ಬಳಿಕೆಯಲ್ಲಿದ್ದವು. ಆಗಣಕಾಲದ ಗುರ್ಜರದೇಶದ ರಾಜಕೀಯ ಸಾಮಾಜಿಕ ಪರಿಸ್ಥಿತಿಯು ಹೀಗೆ ಇದ್ದಿತು.—

ಗುಜರಾತಿನ ಬನಿಯರು (ವೈಶ್ಯರು) ಲಕ್ಷ್ಮೀಕಟಾಕ್ಷಪಾತ್ರರಾಗಿ ಕೋಟ್ಯಧೀಶ್ವರರಾಗಿರುತ್ತಿದ್ದರು. ಇವರಲ್ಲಿ ಆಸೆಗಳೂ ಕುದುರೆಗಳೂ ಇರುತ್ತಿದ್ದವು. ಭಿಕ್ಷುಕರ ಸಲುವಾಗಿ ಅನ್ನಸತ್ರಗಳಿದ್ದವು. ಮನೆಯ ಪಾವಟಿಗೆಗಳೂ, ದೇವಾಲಯದ ಗೋಡೆಗಳೂ, ಅಮೃತಶಿಲೆಗಳಿಂದ ಜೋಡಣೆಯಾಗಿರುತ್ತಿದ್ದವು. ಮನೆಯ ಮತ್ತು ದೇವಾಲಯದಗೋಡೆಗಳು ಜೈನಕಥಾಚಿತ್ರಗಳಿಂದ ಅಲಂಕರಿಸಲ್ಪಡುತ್ತಿದ್ದವು. ಹಣವಂತರು ತಮಗೆ ಸಾಕಾದಷ್ಟು ಮಾತ್ರ ದ್ರವ್ಯವನ್ನುಳಿಸಿಕೊಂಡು ಗಳಿಸಿದ ಪೆಚ್ಚು ದ್ರವ್ಯವೆಲ್ಲವನ್ನೂ ಮತಸಂಬಂಧವಾದ ಕಾರ್ಯಗಳಿಗೆ ಉಪಯೋಗಿಸಬೇಕೆಂಬ ನಿಯಮವಿದ್ದಿತು. ಹಡಗುಗಳ ಮೂಲಕ ದೇಶವಿದೇಶಗಳನ್ನು ಸುತ್ತಿ ವ್ಯಾಪಾರದಿಂದ ಅತುಳೈಶ್ವರ್ಯವನ್ನು ಸಂಪಾದಿಸುತ್ತಿದ್ದರು. ಮಕ್ಕಳಿಲ್ಲದೆ ಸತ್ತವರ ಆಸ್ತಿಯನ್ನು ರಾಜಭಂಡಾರಕ್ಕೆ ಪಂಚಾಯತರ ಮೂಲಕ ವಶಪಡಿಸಿಕೊಟ್ಟ ಹೊರ್ತು ಮೃತನ ಕಳೇಬರವನ್ನು ಹೊರಕ್ಕೆ ಸಾಗಿಸಲು ಮಾಲೀಕರಿಗೆ ಸ್ವಾತಂತ್ರ್ಯವಿರಲಿಲ್ಲ. ವ್ಯಭಿಚಾರವು ಪಾಪಕೃತ್ಯವೆಂದೂ, ಹೇಯವೆಂದೂ, ಗಣಿಸಲ್ಪಟ್ಟಿರಲಿಲ್ಲ. ಎಲ್ಲೆಲ್ಲಿ ನೋಡಿದರೂ ಜೂಜಾಟವು ಹೆಚ್ಚಾಗಿದ್ದಿತು. ಪುರಪ್ರಮುಖರೂ ಇತರರೂ ಇದರಲ್ಲಿ ಭಾಗಿಗಳಾಗಿರುತ್ತಿದ್ದರು. ಹಬ್ಬದ ವಿಶೇಷದಿನಗಳಲ್ಲಿ ಸಂತೋಷದಿಂದ ಪೆಂಗಸರು ಗಂಡುಸರೆನ್ನದೆ ಸಾಮಾನ್ಯರಾದಿಯಾಗಿ ಎಲ್ಲರೂ ಜೂಜಾಡುತ್ತಿದ್ದರು. ಆಗಣ ಕಾಲದಲ್ಲಿ ಬಳಕೆಯಲ್ಲಿದ್ದ ದ್ಯೂತಗಳು ಐದು:—

೧. ಅಂಧಯದ್ಯೂತ.
೨. ನಾಲಯದ್ಯೂತ

೩. ಅಕ್ಷದ್ಯೂತ
೪. ಚತುರಂಗ
೫. ವರಾಟಮುಷ್ಟಿ. ಇವುಗಳು!

ರಾಜರಾದವರು ಅಂಧಯ ದ್ಯೂತವನ್ನೂ, ಸಾಹುಕಾರರು ನಾಲಯದ್ಯೂತವನ್ನೂ ಆಡುತ್ತಿದ್ದರು. ಹೆಂಗಸರು ಗಂಡಸರಾದಿಯಾಗಿ ಕವಡೆಯ ಆಟವನ್ನೂ ಪಗಡೆಯ ಆಟವನ್ನೂ ಆಡುತ್ತಿದ್ದರು. ದ್ಯೂತದ ಜೊತೆಗೆ ಮದ್ಯಪಾನ, ಮಾಂಸ ಭಕ್ಷಣವೂ ಇದ್ದಿತು. ಮೋಹರಾಜಪರಾಜಯದಲ್ಲಿ ದ್ಯೂತಕಾರರ ವರ್ಣನವಿರುವುದು. ವಿಶೇಷೋತ್ಸವ ದಿವಸಗಳಲ್ಲಿ ಧೂಳಾಗದಂತೆ ಪುರಜನರು ಬೀದಿಗಳಿಗೆ ನೀರನ್ನು ಚೆಲ್ಲಿ ಅಂಗಡಿಗಳನ್ನೂ ಮನೆಗಳನ್ನೂ ಮುತ್ತಿನ ಸರಗಳಿಂದ ಅಲಂಕರಿಸುತ್ತಿದ್ದರು. ಮದ್ಯಪಾನವೂ ಮಾಂಸಭಕ್ಷಣವೂ ಯೋಗ್ಯವೆಂದೂ, ಪಾಪವಲ್ಲವೆಂದೂ ಅಮುಷ್ಮಿಕ ಸಾಧನವೆಂದೂ ಗಳಹುವ ಕೌಲರೂ, ಕಾಪಾಲಿಕರೂ ರಹಮಾಣರೂ ಮತ್ತು ಘಟಚಟಕರೂ ಹೇರಳರಾಗಿದ್ದರು. ವನರಾಜನೂ, ಚಾಪೋತ್ಕಟರಾಜರೆಲ್ಲರೂ ಕೇವಲ ಮದ್ಯಪಾಯಿಗಳಾಗಿದ್ದರು. ಕುಮಾರಪಾಲನು ತನ್ನ ಚಿಕ್ಕತನದಲ್ಲಿ ಮಾಂಸಭಕ್ಷಕನಾಗಿದ್ದುದಾಗಿ ತಿಳಿಯಬರುತ್ತದೆ.§ ಕುಮಾರಪಾಲನು ಜೈನನಾದ ನಂತರ ಹಿಂದೆ ಮಾಡಿದ ಪಾಪಕೃತ್ಯಗಳಿಗಾಗಿ ಮನನೊಂದು ವಿಹಾರಗಳನ್ನು ಕಟ್ಟಿಸಿ ಕೊಟ್ಟುದಾಗಿ ಹೇಳಿದೆ.$ ಮೇವಾರದ ರಾಜಕುಮಾರ, ಸೋರಠರಾಜನ ಸೋದರ, ಚಂದ್ರಾವತಿಯರಾಜ, ನಾಡಲರಾಜನ ಅಳಿಯ, ಗೋದ್ರಹರಾಜನ ಅಣ್ಣನ ಮಗ, ಧಾರಾನಗರ ರಾಜನ ತಂಗಿಯಮಗ, ಶಾಕಂಭರೀ ರಾಜನ ಸೋದರಮಾವ ಕೊಂಕಣರಾಜನ ಬಲ ತಮ್ಮ. ಕಚ್ಚದರಾಜನ ಭಾವೈದುನ, ಮಾರ್ವಾರ ರಾಜನ

ಏತದಂಘ್ರಿಕಾನಾಮ ರೂಪಂ ವ್ಯಗಾಕ್ಷಿ! ಚತ್ಪರೇ ಪಶ್ಯ
ಯತ್ಸೇವ್ಯತೇ ನಿತ್ಯಂ ಕೃತಕೋಪೀನೈರ್ನೃಪತಿಭಿಃ ॥
ಅಪರಂ ವ್ಯಗಾಕ್ಷಿ! ಪಶ್ಯ ಮಮ ರೂಪಮತ್ರ ನಾಟಕಂ ನಾಮ।
ಉಪನೀತಕಸಕೋಟಿಭಿಃ ಸೇವಿತಂ ವಲ್ಕಲ್ಪತ್ರೈಃ ॥
ತೃತೀಯಂ ಪಶ್ಯ ನಿತಂಬಿನಿ ಇದಾನೀಂ! ಚತುರಂಗಕಮಿತಿ ಮೇ ರೂಪಂ
ಯತ್ತಾರಿಕೆರ್ಣಕಟುಕಾಃ ಖಿಟ್ಖಿಟಾ ಅಮ್ಯುತ್ಸದ್ಯೇಶಾಃ ॥
ಪಕ್ಷೀ ! ಇದಂ ಪಶ್ಯ ಚತುರ್ಥಮಕ್ಷಾಭಿಧಾನಕಂ ರೂಪಂ
ಕುರುತನಯಾ ಭೂಮಿಪತಯೋ ಯಸ್ಯ ಪ್ರಸಾದೇನ ಸಂಜಾತಾಃ ॥
ಪಂಚಮಕಂ ಮಮ ರೂಪಂ ವರಾಟನಾಮೇದಂ ನಿಭಾಲ್ಯ
ಸೇವಯಾ ಯಸ್ಯ ಡಿಂಭಾ ಗತಮಪಿ ಕಾಲಂ ನ ಜಾನಂತಿ ॥

§ Introduction to Moharajaparajaya. P. 13

$ Ibid. P.9

ಅಕ್ಕನಮಗ. ಚಾಳುಕ್ಯರಾಜನ ಚಿಕ್ಕಪ್ಪ. ಇವರು ದ್ಯೂತದಲ್ಲಿ ಮುಖ್ಯರಾದ ರಾಜ ಮನೆತನದವರು.

"(೧) ಏಷವೋದ ಪಾಟನ್ಯಪತಿಕುಮಾರಃ, (೨) ಏಷಸೌರಾಷ್ಟ್ರಾಧಿಪ ಸಹೋದರಃ, (೩) ಏಷಚಂದ್ರಾವತೀ ಪತಿಃ, (೪) ಏಷನಡ್ಪುಲನರೇಂದ್ರನಪ್ತ್ರಕಃ, (೫) ಏಷಗೋದ್ರಹರಾಜಭ್ರಾತೃನಂದನಃ, (೬) ಏಷಧಾರಾಧಿರಾಜಭಾಗಿನೇಯಃ, (೭) ಏಷಶಾಕಂಭರೀಭೂಪಾಲಮಾತುಲಕಃ, (೮) ಏಷಕೊಂಕಣಾಧಿಪವಿಮಾತೃಜಃ, (೯) ಏಷಕಚ್ಚಭೂವಿಭುಂಗಶ್ಯಾಲಕಃ, (೧೦) ಏಷಮರುಮಂಡಲಾಖಂಡಲ ದುಹಿತೃನಂದನಃ, (೧೧) ಏಷಪುನಶ್ಚೌಲುಕ್ಯನೃಪಜನಕ ಭ್ರಾತೃಕಃ ||

ಇವರಿಗೆ ಜೂಜಾಟವೇ ಅತ್ಯಂತ ಪರಾಪರವಸ್ತು. ಕುಟುಂಬದಲ್ಲಿ ತಾಯಿತಂದೆಗಳಾಗಲಿ, ದಯಿತೆಯಾಗಲಿ, ಮಗನಾಗಲಿ, ಯಾರೇ ಮೃತರಾಗಿ ಹೋದರೂ ಶೋಕ ವಿಚಾರಕ್ಕೆ ಮನಗೊಡದೆ ಜೂಜಾಡುವುದು ವಾಡಿಕೆ. ಶೂದ್ರಕನು ಜೂಜಿನಿಂದಲೇ ರಾಜ್ಯವನ್ನು ಗೆದ್ದುಕೊಂಡುದಾಗಿ ಹೇಳಿದೆ. ಆದರೆ ಈ ಶೂದ್ರಕನಾರೆಂಬುದು ತಿಳಿಯದು. ಇದೇ ವಿಚಾರವನ್ನು ನಾಟಕಕಾರನು ದ್ಯೂತಕುಮಾರನಿಂದ ಹೇಳಿಸಿರುವನು.

ದ್ಯೂತಕುಮಾರನು ಪತ್ನಿಯಾದ ಅಸತ್ಯಕಂದಲಿಯನ್ನು ಕುರಿತು ಅಯೇ! ಮೋಹಕುಲನಭಸ್ಥಲಚಂದ್ರಕಲೇ! ಕಿಮೇತೇಷಾಮೇತಂವರ್ತ್ಯತೇ ತಥಾಹಿ:—

ಯದಿ ಮ್ರಿಯತೇ ಗೃಹೇ ಜನನೀ ಜನಕೋ ವಾ ಪ್ರಣಯಿನೀ ವಾ ಪುತ್ರೋ ವಾ
ತದಾಪೀಮೇ ಮಮ ಸೇವಾಂ ನ ಮುಂಚಂತಿ ಕುರ್ವಂತಿ ಚ ನ ಶೋಕಂ ||

ಅಪರಂಚ ಚಂದ್ರಮುಖಿ! ನಿರುಪಮೈರ್ಯಷಾಂ ಸ್ವಾಮಿಭಕ್ತಿಃ ಯತಃ:—

ಮಮ ಸೇವಾವಿಷಯುಪರೋಷ್ಮಣೀ ದೇವೇದೇವರಾಜೋಽಪಿ
ಜಾಯತೇಽಹೋ! ಏಷಾಂ ನಿಷ್ಕಂಕಂ ರಂಕಸಂಕಲ್ಪ ||

ಅಸತ್ಯಕಂದಲೀ:—ಆರ್ಯಪುತ್ರ! ತವ ಮಿತ್ರವರ್ಗಂ ಜ್ಞಾತುಮಿಚ್ಛಾಮಿ.

ದ್ಯೂತಕುಮಾರ:—ಸುನಯನೇ! ಏಕಸ್ತಾವತ್ತಾತ ಮೋಹದಾಸ್ಯಾ ಹಿಂಸಾ ಯಾಸ್ತನಯೋಜಾಂಗಲಿಕೋನಾಮ | ಅಪರಶ್ಚ ತಾತ ಮೋಹದಾಂಡಪಾಶಿಕ ಪ್ರವಾದದಾರಕೋ ಮದ್ಯಶೌಖರಕೋನಾಮ ||

ಅಷ್ಟ(ಅಸ್ಥಿ) ದಲರಚಿತಹಾರೋ ವಿಲಿಪ್ತೋ ರುಧಿರಕಂಕುಮರಸೇನ
ಶೋಭತೇ ಸವಿಶೇಷಮಿವ ಜಾಂಗಲಿಕೋ ಲಬ್ಧಮಾಹಾತ್ಮ್ಯಃ ||

ಅಹೋ! ಮಮ ಮಹಧ್ಯತಾಲೋಕೇ|| ಯತಃ:—

ಮಮ ಕೃತೇ ನೃಪತಯಾ ದಿವಾನಿಶಂ ಗೃಹೀತಚಂಡಕೋದಂಡಾಃ
ದೂರೋದ್ಧೃತರಾಜ್ಯಶ್ರೀಭೋಗಾಃ ಖಿದ್ಯಂತ್ಯರಣ್ಯೇಷು ॥

ಅಪಿಚ,

ಹನ್ಯಂತೇ ಮತ್ತಕರಿಣೋ ಯತ್ಕಿಲ ಸುಭಟೈಃ ಸಮರಸಮ್ಮರ್ದೇ
ತನ್ಮಮ ಸೇವಾಸಂಭವಪ್ರಭಾವಲವಮಾತ್ಮಮಪ್ರ ಜಗತಿ ॥
ಭೋ ಭೋ ದೇವಾಃ ! ಮಮ ಪ್ರತಿಷಿದ್ಧಿಮಿಚ್ಛಂತೋ ನ ಕಿಂ ಕ್ಷೀಣಾಃ ?
ಯೋಽಹಂ ನಿಜಭುಕ್ತಾನಾಂ ತೋಲಯಿತ್ವಾತ್ಮಾನಂ ದದಾಮಿ ॥

ಅದ್ಯ ಮದ್ಯ ಶೇಖರದ್ವಿತೀಯೋಹಂ ಪ್ರಿಯವಯಸ್ಯದ್ಯೂತೇನ ಸಹ ಕಿಮಪಿ ಮಂತ್ರರಹಸ್ಯಂ ಕರ್ತುಕಾಮೋಸ್ಮಿ ಅಥಕಥಂ ಚಿರಯತಿ ಮದ್ಯ ಶೇಖರಃ ?

ಯಃ ಕರೋತಿ ಮಮ ಸೇವಾಂ ಮನುಜಃ ನ ನಾಮ ಸರ್ವಲೋಕೇ
ಕರೋತಿ ನ ರಾಧಿಪಲೀಲಾಂ ಹೀನಮಾತ್ಮನೋ ಗಣಯತಿ ಭೂಪಾಲಂ ॥

ಇವರಲ್ಲಿನ ದ್ಯೂತಕುಮಾರೋಕ್ತಿಯು ಹೀಗಿರುವುದು:—

ದೇವ ! ಮಮನಾಸ್ತಿ ದೋಷೋಽಣುರಪ್ಯಸ್ಯ ಭವೇತ್ಕಥಮಪಿ ಯದಿ ನಾಮ ?
ಕಿಂ ಪಾಂಡುಸುತೈರಹಮೇಕಮನೋಭಿಃ ಪ್ರತಿಚರಿತಃ ? ॥
ಯಃ ಕಿಲಾಸೀನ್ನರೇಂದ್ರೋರಿವನವಾಸಲೋ ನಾಮ।
ತೇನಾಪಿ ಮಮ ಪದಸೇವಾ ಕೃತಾ ಸದಾ ಕಿಂಚತರ್ಕೈಃ ?
ಮಮಪ್ರಸಾದೇನೈವ ರೂಪ್ಯಕದೇವೇನ ವೀರವ್ರವರೇಣ
ನಿರ್ಜಿತರಿಪುಚಕ್ರೇಣೈಕಚ್ಛತ್ರಂ ಕೃತಂ ರಾಜ್ಯಂ ॥

ಮದ್ಯಶೇಖರೋಕ್ತಿ:—

ಕೃಷ್ಣೇನ ಸಮಂ ಯಾದವಜನೇನ ನನು ಸೇವಿತೋಽಸ್ಮ್ಯವಿತೃಷ್ಣಾಂ
ರೈವತಗಿರಿಶಿಖರೇಷು ಕಾ ಗಣನಾ ಇತರಲೋಕಾನಾಂ ? ॥
ಪ್ರಣಯಿನೀಮುಖಾದಮಿವ ಮಾಂ ಪ್ರತೀಚ್ಛತಿ ಕಾಮಿನೋಲೋಕಾಃ
ಮಮ ಸೇವಾಸಕ್ತಾನಾಂ ನ ರೋಗಶೋಕಪ್ರಮುಖಮೇತಿ।
ಮಮ ಭಕ್ತಿಪರಾಣಾಮೇವ ತ್ರಿಪುರಾದಯೋ ದೇವತಾ ಸ್ತು ತುಷ್ಯಂತಿ
ಮಮ ಸೇವಯಾ ದೇವೋ ಮೃತೋಽಪಿ ಮದನಃ ಪುನರ್ಜೀವತಿ ॥
ಇಹ ಧವಳಗೃಹೇಷು ಚಿರಂ ಚಾಪೋತ್ಕಟರಾಜಲಾಲಿತ ಉಷಿತಃ ॥
ಏವಂ ಚ ಸ್ಥಿತೇ ಸ್ವಾಮಿ ಯಜ್ಞಾನಾಸಿ ತತ್ಕ್ರಿಯತಾಂ ।

ರಾಜನ ಹೇಳಿಕೆ:—

ಅವಿನಶ್ವರಂ ಶರೀರಂ ಯೇಷಾಂ ಭುವನೇ ಯಶೋಮಯಂ ಸ್ಫುರತಿ।
ತೇ ಜೀವಂತಿ ಮೃತಾ ಅಪಿ ಪುಣ್ಯಾತ್ಮನೋ ನ ಶೋಚ್ಯಾಶ್ಚ ॥ ೩-೪೬

ವೈತಾಲಿಕನು ರಾಜನಿಗೆ ಪ್ರದೋಷಸಮಯವನ್ನು ಸೂಚಿಸುವುದು:—

ಚಕ್ಪುರ್ಘರ್ಷಸ್ಮರಮೋಹಡಂಬರತಮಸ್ತೋಮದ್ರುಮೋಚ್ಛಿತ್ತಯೇ
ಯತ್ಕ್ರೋತ್ತೇಜಿತರುಕ್ಕುಠಾರಸಕರೇ ಜಾತಾ ಗ್ರಹಾ ನಿಷ್ಪ್ರಭಾಃ
ಲಕ್ಷ್ಮೀಂ ಪ್ರಾಪ ಪುನಸ್ತಮಿ ಕುಮುದಿನೀ ಸ್ಮೇರಾನನಾ ಚಾಭವ
ದ್ರಾಜಾ ಸೈಷ ಕಲಾನಿಧಿಃ ಪ್ರತಿಕಲಂ ಕುರ್ಯಾನ್ಮುದಂ ದೇಹಿನಾಂ॥ ೨-೫೩

ಅ ಮ ರ ಚ ಂ ದ್ರ

ಇವನು ವಾಯಟ (ದ) ಗಚ್ಛದ ಜಿನದತ್ತಸೂರಿಯ ಶಿಷ್ಯನು. ಇವನನ್ನು ಅಮರಕವಿಯೆಂದೂ ಅಮರಪಂಡಿತನೆಂದೂ ಕರೆಯುವುದುಂಟು

ಇವನು ಬಾಲಭಾರತದಲ್ಲಿ:—

ದಧಿಮಥನವಿಲೋಲಚ್ಛೋಲಪ್ಯಗ್ಗೋಪದಂಭಾ
ದಯಮುದಯಮನಂಗೋ ವಿಶ್ವವಿಶ್ವೈಕಜೇತಾ
ಭವಪರಿಭವಕೋಪತ್ಯಕ್ತಬಾಣಃ ಕೃಪಾಣ
ಶ್ಯಮಿವ ದಿವಸಾದೌ ವ್ಯಕ್ತಶಕ್ತಿರ್ವ್ಯನಕ್ತಿ (ಆದಿಪರ್ವ ಸಂ ೧೧೬

ಎಂದು ವರ್ಣಿಸಿರುವುದರಿಂದ ಇವನನ್ನು ಕವಿಮಂಡಲಿಯು "ವೇಣೋಃ ಕೃಪಾಣೋಽಮರಃ" ಎಂಬ ಬಿರುದನ್ನು ಕೊಟ್ಟುದಾಗಿ "ಇತ್ಯತ್ರವೇಣ್ಯಾಃ ಕೃಪಾಣತ್ವೇನ ವರ್ಣನಾತ್ ವೇಣೋಃ ಕೃಪಾಣೋಽಮರಃ ಇತಿ ಬಿರುದಂ ಕವಿನಾ ದತ್ತಮಿತ್ಯಲಂ" ಎಂದು ಹೇಳಿರುವುದರಿಂದ ಸ್ಪಷ್ಟಪಡುತ್ತದೆ. ಇದಲ್ಲದೆ ಹಮ್ಮೀರ ಮಹಾಕಾವ್ಯದಲ್ಲಿ ಇವನನ್ನು ವರ್ಣಿಸುವಾಗ

ವಾಣೀನಾಮಧಿದೇವತಾ ಸ್ವಯಮಸೌ ಖ್ಯಾತಾ **ಕುಮಾರೀ** ತತಃ
ಪ್ರಾಯೋಬ್ರಹ್ಮವತಾಂ ಸ್ಮರಂತಿ ಸರಸಾ ವಾಚಾಂ ವಿಲಾಸಾಧ್ರುವಂ
ಕುಕ್ಕೋಕಃ ಸುಕೃತೀ ಜಿತೇಂದ್ರಿಯಚಯೋ **ಹರ್ಷಃ** ಸ **ವಾತ್ಸ್ಯಾಯನೋ**
ಬ್ರಹ್ಮಜ್ಞಪ್ರವರೋ ಮಹಾವ್ರತಧರೋ ವೇಣೋಃ ಕೃಪಾಣೋಽಮರಃ" ಇತಿ

ಹೀಗೆಂದು ಹೇಳಿದೆ. ಇವನ ಮಾತಾಪಿತೃಗಳಾರೆಂಬುದು ತಿಳಿಯದು *

ಕಾಲ:—ಇವನು ವಿ. ಸಂ. ೧೨೨೬-೧೨೯೭ ಅಥವಾ ಕ್ರಿ. ಶ. ೧೧೭೦-೧೨೪೦ರಲ್ಲಿದ್ದ ಅರಿಸಿಂಹನ ಸಮಕಾಲೀನನು ಆದುದರಿಂದ ಇವನು ಕ್ರಿ. ಶ. ೧೩ನೆಯ ಶತಮಾನದ ಪೂರ್ವಾರ್ಧದವನೆಂಬುದು ನಿರ್ವಿವಾದವು §

* ಬಾಲಭಾರತದ ಭೂಮಿಕೆ. ಪುಟ. ೧

§ Dictionary of Jain Biography. P. 50.

ಗ್ರಂಥಗಳು:—೧) ಕಾವ್ಯಕಲ್ಪಲತಾ ನಾಮಕವಿಶಿಕ್ಷಾ.

‡ ೨) ಛಂದೋರತ್ನಾವಳೀ ಮುಕ್ತಾವಳೀಚ.
‡ ೩) ಕಲಾಕಲಾಪಾಖ್ಯಂಚ ಶಾಸ್ತ್ರಂ.
‡ ೪) ಬಾಲಭಾರತಂ.

† ೫) ಪದ್ಮಾನಂದಕಾವ್ಯ (ಇದು ವಿ. ಸಂ. ೧೨೯೭ ಅಥವಾ ಕ್ರಿ. ಶ. ೧೨೪೦ರಲ್ಲಿ ಬರೆಯಲ್ಪಟ್ಟಿತು.)
† ೬) ಸ್ಯಾದಿಶಬ್ದಸಮುಚ್ಚಯ $
† ೭) ಕಾವ್ಯಕಲ್ಪಲತಾವೃತ್ತಿ. (ಇದರಲ್ಲಿ ೩೩೫) ಶ್ಲೋಕಗಳಿರುವುವು. ಅರಿಸಿಂಹನ ಸಹಾಯದಿಂದ ಬರೆಯಲ್ಪಟ್ಟಿತು.

ಮೇಲೆ ಹೇಳಿದ ಗ್ರಂಥಗಳಲ್ಲದೆ ಅಮರಚಂದ್ರನು ಈ ಕೆಳಗಣ ಗ್ರಂಥಗಳನ್ನು ಬರೆದಿರುವುದಾಗಿ ಜೈನ ರಾಜಶೇಖರಸೂರಿಯು ಬರೆದಿರುವ ಪ್ರಬಂಧಕೋಶವೆಂಬ ಗ್ರಂಥದಲ್ಲಿ ಒಕ್ಕಣಿಸಿರುವನು. *

೮) ಸೂಕ್ತಾವಳಿ.
೯) ಕಾವ್ಯಕಲ್ಪಲತಾಪರಿಮಳ §
೧೦) ಅಲಂಕಾರಪ್ರಬೋಧ.

ಇವನ ಕವಿತೆಯ ಮಾದರಿಯನ್ನು ತೋರುವುದಕ್ಕಾಗಿ ಮೇಲಣ ಶ್ಲೋಕ ವೇಸಾಕು.

ಜ ಯ ಸಿ ಂ ಹ ಸೂ ರಿ x

ಇವನು ಬರೋಚಿನಲ್ಲಿದ್ದ ಮುನಿಸುವ್ರತದೇವಸ್ಥಾನದ ಮುಖ್ಯಾಚಾರ್ಯನು. ವೀರಸೂರಿಯಶಿಷ್ಯನು. ತೇಜಪಾಲನು ಯಾತ್ರಾರ್ಥಿಯಾಗಿ ಈ ದೇವಾಲಯಕ್ಕೆ

---

‡ ಭಾಲಭಾರತದ ಭೂಮಿಕೆ ಪುಟ. ೧
† Dictionary of Jain Biography. P. 50.
$ ಸ್ಯಾದ್ವಾದವೆಂಬ ಜೈನರ ಸಪ್ತಭಂಗಿವಿವರಣಗ್ರಂಥವು ಇದಲ್ಲ.
* ಪ್ರಬಂಧಕೋಶ. ಪು ೧೨೬
§ ಇದುಪ್ರಾಯಃ ಕಾವ್ಯಕಲ್ಪಲತಾವೃತ್ತಿಯ ಉತ್ತರಭಾಗವಾಗಿರಬಹುದು.
x ಕುಮಾರಪಾಲಚರಿತ್ರೆ ಮತ್ತು ನ್ಯಾಯತಾತ್ಪರ್ಯದೀಪಿಕಾಕಾರ ಮಹೇಂದ್ರನಶಿಷ್ಯ ಕೃಷ್ಣರ್ಷಿಗಚ್ಛದ ಜಯಸಿಂಹಸೂರಿಯು ಇವನಲ್ಲ.

ಹೋಗಿದ್ದಾಗ ಜಯಸಿಂಹಸೂರಿಯು ಕೆಲವು ಶ್ಲೋಕಗಳಿಂದ ತೇಜಪಾಲನನ್ನು ಹೊಗಳಿ ಆರಂಬಡದಲ್ಲಿರುವ ಶಕುನಿಕಾವಿಹಾರಕ್ಕಾಗಿ ಬಂಗಾರದ ಇಪ್ಪತ್ತೈದು ದೇವ ಕುಲಿಕೆಗಳನ್ನುವಾಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳಲು ತೇಜಪಾಲನು ಅಣ್ಣನಾದ ವಸ್ತುಪಾಲ(ನರನಾರಾಯಣಾನಂದಗ್ರಂಥಕಾರ)ನೊಳು ಆಲೋಚಿಸಿ ಮಾಡಿಸಿಕೊಟ್ಟನು. ಜಯಸಿಂಹಸೂರಿಯು ಈ ಸೋದರರ ಧಾರಾಳಬುದ್ಧಿಗೆ ಅಭಿನಂದಿಸಿ ಅವರ ಹೆಸರಿನಲ್ಲಿ ಒಂದು ಸುಂದರನಾದ ಪ್ರಶಸ್ತಿಯನ್ನು ಬರೆದನು. ಈ ಶಿಲಾಲೇಖನ ಪ್ರಶಸ್ತಿಯ ಶಕುನಿಕಾವಿಹಾರದ ಭಿತ್ತಿಯನ್ನು ಅಲಂಕರಿಸಿದ್ದು ಕಾಲಕ್ರಮದಲ್ಲಿ ಈ ವಿಹಾರವು ನಾನಾವಶೇಷವಾಗಿಹೋಗಿ ಪ್ರಕೃತಮುಸಲರ ಮಸೀತಿಯೊಂದು ಅಲ್ಲರುವುದು.

ಕಾಲ:—ಇವನು ವಸ್ತುಪಾಲ ಮತ್ತು ತೇಜಪಾಲರ ಸಮಕಾಲೀನನೆಂದು ಹೇಳಲ್ಪಟ್ಟಿರುವುದರಿಂದಲೂ, ಇವನ ಗ್ರಂಥಾಂತ್ಯದಲ್ಲಿ "ಸಂವತ್ ೧೨೭೨ವರ್ಷ ಆಷಾಢವದಿ ೯ (ನವಮಿ) ಶನೌ ಹಮ್ಮೀರಮದರ್ದನಂ ನಾಮನಾಟಕಂ ಎಂದು ಹೇಳಿರುವುದರಿಂದಲೂ ಜಯಸಿಂಹಸೂರಿಯು ಕ್ರಿ. ಶ. ೧೩ನೆಯ ಶತಮಾನದವನೆಂಬುದುಸ್ಪಷ್ಟವು.

ಗ್ರಂಥ:—ಇವನು "ಹಮ್ಮೀರಮದಮರ್ದನ"† ಎಂಬ ೫ ಅಂಕಗಳುಳ್ಳನಾಟಕವನ್ನು ಬರೆದಿರುವನು. ವೀರಧವಳನು ಮಂತ್ರಿಗಳಾದ ವಸ್ತುಪಾಲ ಮತ್ತು ತೇಜಪಾಲರಬಲದಿಂದ ಗುಜರಾತಿನಮೇಲೆ ಪದೇಪದೇದಾಳಿ ಎತ್ತುತ್ತಿದ್ದ ತುರುಷ್ಕ ಮುಖ್ಯನಾದ ಹಮ್ಮೀರನನ್ನು ಸೋಲಿಸಿ ಓಡಿಸಿದನೆಂಬುದೇ ಕಥೆಯ ಮುಖ್ಯತತ್ವವಾ ದುದರಿಂದ ತನ್ನ ನಾಟಕಕ್ಕೆ ಜಯಂತಸಿಂಹನ\$ ಇಷ್ಟದಂತೆ ಹಮ್ಮೀರಮದಮರ್ದನವೆಂದೇ ಹೆಸರಿಟ್ಟಿರುವನು. ಈ ನಾಟಕವು ಕ್ಯಾಂಬೆಯಲ್ಲಿರುವ ಭೀಮೇಶ್ವರನ ಉತ್ಸವಸಮಯದಲ್ಲಿ ಅಭಿನಯಿಸಿದುದಾಗಿ ಸೂತ್ರಧಾರನಹೇಳಿಕೆಯಿಂದ ಗೊತ್ತಾಗುತ್ತದೆ ಜಯಂತಸಿಂಹನು ಕ್ರಿ. ಶ. ೧೨೭೯ರಲ್ಲಿ ಕ್ಯಾಂಬೆಯಸರ್ವಾಧಿಕಾರಿಯಾಗಿದ್ದನು.

ಮಾದರಿಗಾಗಿ ಒಂದೆರಡು ಶ್ಲೋಕಗಳನ್ನು ಬರೆದು ತೋರುವೆವು.

ಪ್ರತಾಪಾಗ್ನಿಪ್ಲುಷ್ಟಂ ಮುಹುರರಿಮಹೀವಲ್ಲಭಮಹೀ
ರುಹಾಂ ವೃಂದಂ ಪ್ರಾದುರ್ಭವತಿ ಶತಶಾಖಂ ಸಮಯತೇಃ
ಇದಂ ಮೂಲಾದುನ್ಮೂಲಿತಮತಿಶಯೋತ್ತುಂಗಮುದಿತಃ
ಪ್ರರೋಹಾವಿರ್ಭಾವಂ ವಿದಧತಿ ಪುನರ್ಬುದ್ಧಿಸರಿತಾ ॥ ೧—೨೯

† ನಯಚಂದ್ರಸೂರಿಯುಬರೆದ ಹಮ್ಮೀರಮಹಾಕಾವ್ಯವು ಇದಲ್ಲ. ಹಮ್ಮೀರಮಹಾಕಾವ್ಯದಲ್ಲಿ ಮೇವಾಡದ ಚೌಹಣರಾಜನಾದ ಹಮ್ಮೀರನ ಚರಿತೆಯು ಹೇಳಲ್ಪಟ್ಟಿರುವುದು.

\$ ಇವನು ವಸ್ತುಪಾಲನಮಗ. ಇವನನ್ನು ಜೈತ್ರಸಿಂಹನೆಂದೂ ಕರೆಯುವುದುಂಟು.

ಪೌರುಷದವದಪನಃ ಕ್ಷಿದಮೇವನಂ ದಹತಿ ನನು ನ ಚ ಕ್ಷಚನ
ಅಭಿನೋಽಸ್ಯನನ್ಯಮುಮಾಮತಿಮಪಾಃ ಪುರರ್ದಹತಿ ॥ ೧—೩೦

ತ್ರಸ್ತೇಷು ತೇಷು ಸುಭಟೇಷು ವಿಭೌ ಚ ಭಗ್ನೇ
ಮಗ್ನಾಸು ಕೀರ್ತಿಷು ನಿರೀಕ್ಷ್ಯ ಜನಂ ಭಯಾರ್ತಂ
ಯೋ ಮಿತ್ರಬಾಂಧವವರೂಥನವಾರಿತೋಽಪಿ
ವಲ್ಗತ್ಯರೀಪ್ರತಿ ರಸೇನ ಸ ಏವ ವೀರಃ ॥ ಪುಟ ೩—೧೪

ಕಂಚುಕಿಯ ಹೇಳಿಕೆ. –

ಸೋಽಹಂ ಯುಷ್ಮಿಗತಿಸ್ತ್ರಿವಿಕ್ರಮ ಇತಿ ಖ್ಯಾತಃ ಕ್ಷಿತೀತಿ ಶ್ರುತಿ
ಸ್ತಾರಂ ವಕ್ತರಿ ಭಾಷುಕೇಽರ್ಪಿತಮಿಮಃ ನಾಮೇವ ದಾತುಂ ಶಿಶೋಃ
ಅಂಗುಷ್ಠಾಂಗುಲಿಭಿನ್ನಪಕ್ಷ್ಮಪುಟಕೇ ಕಿಂಚಿದ್ವ್ಯವೌ ಪಶ್ಯತಃ
ಸರ್ವಂ ಜೀರ್ಣಮಿದಂ ಸ್ಪೃಹೈವ ತರುಣೇ ನಾದ್ಯಾಪಿ ಮಾಂ ಮುಂಚತಿ॥೫-೧

ಅಪಿಚ:—

ಸರ್ವಾಂಗಂ ಪಲಿತಚ್ಛಲೇನ ಜರಯಾ ಮುಕ್ತಾಃ ಕಟುಕ್ಷಚ್ಛಟಾಃ
ಸ್ಮಾತ್ಮಾ ಕಂಪಯತೇ ಶಿರಶ್ಚ ವಿಷಯಾ ಭೋಗಾನ್ನಿಷೇಧನ್ನಿವ
ಆಲೋಕಾಯ ಮುಹುರ್ಜಲಂ ವಿತರತೋ ಬಾಷ್ಪಚ್ಛಲಾದ್ಭಕ್ಷುಷೀ
ದೇಹೋಽದ್ಯಾಪಿ ತಥಾಪಿ ಸಂಕ್ಷಿಪತಿ ನೋ ಮೃತ್ಯೋರ್ಭಯೇವಾಧಿಕಂ॥ ೫-೨

ಬಾಲಚಂದ್ರಸೂರಿ

'ಬಾಲಚಂದ್ರಸೂರಿ' ಎಂಬದು ತುರೀಯಾಶ್ರಮಸ್ವೀಕಾರದ ಅನಂತರ ಕೊಟ್ಟ ಹೆಸರು. ಇವನ ಮೊದಲಿನ ಹೆಸರು ಮುಂಚಾಲ. ಇವನು ಬ್ರಾಹ್ಮಣನು. ದೇವ ಮತ್ತು ವಿದ್ಯುತ್ ಎಂಬುವರೇ ಈತನ ತಂದೆತಾಯಿಗಳು. ಮೋಢವಂಕ ವೆಂಬದು ಈತನ ಜನ್ಮಭೂಮಿ. ಇವನು ಚಂದ್ರಗಚ್ಛದ ಹರಿಭದ್ರಸೂರಿಯ ಶಿಷ್ಯನು.*

ಕಾಲ:—ವಸ್ತುಪಾಲನಮಗ ಜೈತ್ರಸಿಂಹನ ಮನೋವಿನೋದಕ್ಕಾಗಿ ವಸಂತ ವಿಲಾಸಕಾವ್ಯವು ಬರೆಯಲ್ಪಟ್ಟುದಾಗಿಸ್ಸ ಹೇಳಿರುವುದರಿಂದಲೂ, ವಸ್ತುಪಾಲನು ಸಂ. ೧೨೧೬ ಅಥವಾ ಕ್ರಿ. ಶ. ೧೨೪೦ರಲ್ಲಿ ಮೃತನಪಟ್ಟಿರುವುದರಿಂದಲೂ ವಸ್ತು

ವಸಂತವಿಲಾಸಕಾವ್ಯ ೧ನೆಯ ಸರ್ಗ

* ಶ್ರೀವಸ್ತುಪಾಲುಂಗಭುವೋ ನವೋಕ್ತಿಪ್ರಿಯಸ್ಯ ವಿದ್ಯಜ್ಜನಮಜ್ಜನಸ್ಯ
ಶ್ರೀಬ್ಬಾಲಚಂದ್ರಸೂರಿಃ ಮನೋವಿನೋದಕೃತೇ ಮಹಾಕಾವ್ಯ ಮುದೀರ್ಯತೇಽಧ ॥
ವಸಂತವಿಲಾಸ ಸರ್ಗ ೧—೨೫

ಪಾಲನ ಅನಂತರವೇ ಈ ಗ್ರಂಥವು ಬರೆಯಲ್ಪಟ್ಟಿರುವುದರಿಂದ ಇವನು ಕ್ರಿ. ಶ. ೧೩ನೆಯ ಶತಮಾನದ ಉತ್ತರಾರ್ಧದವನೆಂಬದು ಸಿದ್ಧವಾಗುವುದು.

ಗ್ರಂಥಗಳು:—(೧) ವಸಂತವಿಲಾಸಮಹಾಕಾವ್ಯ (೨) ಕರುಣಾವಜ್ರಾಯುಧನಾಟಕ ‡

ವಸಂತವಿಲಾಸಮಹಾಕಾವ್ಯ:—ಇದರಲ್ಲಿ ೧೪ ಸರ್ಗಗಳಿರುವುವು. ೬-೭-೮ನೆಯ ಸರ್ಗಗಳಲ್ಲಿ ಋತುವರ್ಣನೆ, ಕ್ರೀಡಾವರ್ಣನೆ, ಸೂರ್ಯ ಚಂದ್ರರ ವರ್ಣನೆ, ಮೊದಲಾದುವು ಹೊರ್ತು ಉಳಿದ ಸರ್ಗಗಳಿಲ್ಲವೂ ವಸ್ತುಪಾಲನ ವಿಚಾರವೇ ಹೇಳಲ್ಪಟ್ಟಿರುವದು. ಹೀಗಿರುವಲ್ಲಿ ಕಾವ್ಯಕ್ಕೆ ವಸ್ತುಪಾಲವಿಲಾಸವೆಂದು ಕರೆಯುವುದಕ್ಕೆ ಬದಲು ವಸಂತವಿಲಾಸವೆಂದೇಕೆ ಕರೆದಿರುವನೆಂಬುದು ಸೋಜಿಗವಾಗಿದೆ. ಕವಿಯು ಈ ವಿಚಾರವಾಗಿ ಹೇಳಿರುವಂತೆ ಕಾವ್ಯದಲ್ಲಿ ಕಂಡುಬಾರದೆ ಇರುವುದರಿಂದ ವಸ್ತುಪಾಲನಿಗೆ ವಸಂತನೆಂಬಾಪರನಾಮವಿದ್ದಿರಬೇಕಾಗಿ ಊಹಿಸಲಾಗುತ್ತದೆ. ಕಾವ್ಯದ ಕಥಾವಸ್ತುವು ಹೀಗೆ ಹೇಳಿರುವುದು. ಛಪ್ಪನ್ನ (೫೬) ದೇಶಗಳಲ್ಲಿ ವಿಖ್ಯಾತವಾದ ಗುರ್ಜರದೇಶಕ್ಕೆ ತಿಲಕಪ್ರಾಯವಾಗಿ ಅರಿದುರ್ಗಮವಾದ ಕೋಟೆಕೊತ್ತಲಗಳಿಂದಲೂ, ದಾಟಲಸಾಧ್ಯವಾದ ಕಂದಕಗಳಿಂದಲೂ, ಮನೋಹರವಾದ ಹರ್ಮ್ಯಾಗ್ರಗಳಿಂದಲೂ ಸುಂದರವಾದ ಕಟ್ಟಡಗಳಿಂದಲೂ ಧಮಧಮಿಸುತ್ತಿರುವ ಪುಷ್ಪವಾಟಿಕೆಗಳುಳ್ಳ ಆರಾಮಗಳಿಂದಲೂ, ಸುವರ್ಣಕಲಶಗಳಿಂದೊಪ್ಪುವ ದೇವಾಲಯಗಳಿಂದಲೂ, ದುರ್ಲಭರಾಜನಿರ್ಮಿತವಾದ ಸರಸ್ಸಿನಿಂದಲೂ, ಕಂಗೊಳಿಸುತ್ತಿರುವ ಅನ್ಹಿಲಪುರಪತ್ತನವನ್ನು ರಾಜಧಾನಿಯನ್ನಾಗಿಮಾಡಿಕೊಂಡು ಗುರ್ಜರರಾಜ ಮೂಲರಾಜನ ಮೊದಲು ಎರಡನೆಯ ಭೀಮರಾಜನವರೆಗಿನ ವಂಶಕ್ರಮಾನುಗತ ಸಿಂಹಾಸನವನ್ನು ಹೆತ್ತಿ ಅಮಿತಭುಜಬಲಪರಾಕ್ರಮಿಯಾದ ವೀರಧವಳನೆಂಬ ರಾಜನು ಸಕಲಸಾಮಂತಪರಿವೃತನಾಗಿ ರಾಜ್ಯವಾಳುತ್ತಿರಲು ಒಂದಾನೊಂದು ರಾತ್ರೆ ಸ್ವಪ್ನದಲ್ಲಿ ನಗರ ರಕ್ಷಕಳಾದ ರಾಜ್ಯೇಶ್ವರಿಯು ಪ್ರಸನ್ನಳಾಗಿ ಎಲೆ ರಾಣ! ನಿನ್ನ ರಾಜ್ಯದ ಏಳಿಗೆಗೆ ಸಾಧನಭೂತರಾಗುವರಾಗಿ ನಿನ್ನೂರಿಗೆ ಕಾರಣಾಂತರದಿಂದ ಬಂದಿರುವ ವಸ್ತುಪಾಲ ತೇಜಪಾಲರೆಂಬ ಸೋದರರನ್ನು ಅಮಾತ್ಯ ಪದವಿಯಲ್ಲಿಟ್ಟುಕೊಂಡು ಸಂತಸದಿಂದ ಬಾಳೆಂದು ಹೇಳಿದಂತಾಗಲು ಅದರಂತೆ ಮಹಾಮೇಧಾವಿಗಳಾಗಿಯೂ ರಾಜತಂತ್ರಪಟುಗಳಾಗಿಯೂ ಅತ್ಯಂತ ತೇಜಸ್ವಿಗಳಾಗಿರುವ ವಸ್ತು

‡ ಈ ನಾಟಕವು ೫ ಅಂಕಗಳಿಂದಕೂಡಿ ವಸ್ತುಪಾಲನು ಶತ್ರುಂಜಯ ಪರ್ವತಕ್ಕೆ ಯಾತ್ರಾರ್ಥಿಯಾಗಿ ಹೋಗಿದ್ದಾಗ ಆದಿನಾಥನ ಎದುರಿನಲ್ಲಿ ವಸ್ತುಪಾಲನ ಅಪ್ಪಣೆಯ ಪ್ರಕಾರ ಈ ನಾಟಕವು ಅಭಿನಯಿಸಿದುದಾಗಿ ಹೇಳಿದೆ. ಆದುದರಿಂದ ಬಾಲಚಂದ್ರಸೂರಿಯು ವಸ್ತುಪಾಲನ ಕಾಲದಲ್ಲಿಯೇ ಗ್ರಂಥನಿರ್ಮಾಣ ಚತುರನಾಗಿದ್ದಿರಬೇಕಾಗಿ ಸ್ಪಷ್ಟಪಡುತ್ತದೆ. ಈ ನಾಟಕವಾವುದೆಂಬುದು ತಿಳಿಯದು.

ಪಾಲ ತೇಜಪಾಲರನ್ನು ಕರೆಕಳುಪಿ ಅಮಾತ್ಯಪದವಿಯನಿತ್ತು ವಸ್ತುಪಾಲನನ್ನು ಕ್ಯಾಂಬೆಗೆ ಸರ್ವಾಧಿಕಾರಿಯನ್ನಾಗಿ ನಿಯಮಿಸಿ ಬೀಳ್ಕೊಟ್ಟನು. ಅನಂತರ ವಸ್ತುಪಾಲನು ಸಸೈನ್ಯನಾಗಿ ಹೊರಟು ತೊಂದರೆಯನ್ನು ಕೊಡುತ್ತಿದ್ದ ಭೃಗುಕಚ್ಛದ ಶಂಖನೆಂಬವನನ್ನು ಪರಾಜಿತನನ್ನಾಗಿಮಾಡಿ ಸುಖಸಂಕಥಾವಿನೋದದಿಂದಿರುತ್ತಿರಲು ಒಂದಾನೊಂದು ರಾತ್ರಿ ಸ್ವಪ್ನದಲ್ಲಿ ಧರ್ಮದೇವತೆಯು ಬಂದು ಅಮಾತ್ಯ ಶೇಖರ! ಕೃತಯುಗದಲ್ಲಿ ಚತುಷ್ಪಾದರೂಪಿಯಾಗಿದ್ದ ನಾನು ಈ ಕುಟಿಲಕಲಿಯಲ್ಲಿ ಏಕಪಾದಮಾತ್ರವಾಗಿರುವೆನು. ಪ್ರಬಲಪರಾಕ್ರಮಶಾಲಿಗಳಾಗಿದ್ದು ಈಗ ಸ್ಮೃತಿಶೇಷರಾಗಿರುವ ಮೂಲರಾಜ ಮತ್ತು ಸಿದ್ಧರಾಜರು ಅತುಳ ವೈಭವದಿಂದ ರಾಜ್ಯವಾಳಿದರಾದರೂ ಧರ್ಮಕಾರ್ಯೋತ್ಸುಕರಾಗಿ ಸೋಮೇಶ್ವರ ಯಾತ್ರೆಯನ್ನು ಮಾಡಿ ಶತ್ರುಂಜಯಕ್ಕೆ ಹನ್ನೆರಡು ಗ್ರಾಮಗಳನ್ನು ಉಂಬಳಿಕೊಟ್ಟರುವುದೂ ಮೆಯ ನಲಾದೇವಿಯು ಬಾಹುಲೋದದಲ್ಲಿ ತೆಗೆದುಕೊಳ್ಳುತ್ತಿದ್ದ ಸೋಮೇಶ್ವರ ಯಾತ್ರಿಕರ ತಲಗಂದಾಯವನ್ನು ಮನ್ನಣೆಮಾಡಿಸಿದುದೂ, ಕಾಲಕ್ರಮದಲ್ಲಿ ಶಿಥಿಲವಾಗಿ ಹೋಗಿದ್ದ ದೇವಾಲಯಗಳನ್ನು ಜೀರ್ಣೋದ್ಧಾರಮಾಡಿ ಕುಮಾರಪಾಲನು ಅನೇಕ ನೂತನ ದೇವಾಲಯಗಳನ್ನುಸೋಮೇಶ್ವರ ಮತ್ತು ಕೇದಾರಗಳಲ್ಲಿ ಪ್ರತಿಷ್ಠಿಸಿದುದು ನೀನರಿತು ಹಾಗೆಯೇ ಆಚರಿಸಿ ಬಾಳುವನಾಗೆಂದು ಹೇಳಲು ಮರುದಿವಸ ಪ್ರಾತಃಕಾಲವೇ ಈ ಸದಾಚಾರಗಳನ್ನು ತನ್ನ ಆಚಾರ್ಯನಲ್ಲಿ ಬಿನ್ನವಿಸಿ ವೀರಧವಳನ ಅಪ್ಪಣೆಯನ್ನು ಹೊಂದಿ ರಾಜ್ಯಸೂತ್ರವನ್ನು ತಮ್ಮನಾದ ತೇಜಪಾಲನಿಗೆ ಒಪ್ಪಿಸಿ ಯಾತ್ರಾರ್ಥಿಯಾಗಿ ಹೊರಟನು. ಇವನ ಜತೆಯಲ್ಲಿ ನಾಲ್ಕು ಜನ ಸಾಮಂತ ರಾಜರು ಹೊರಟುದಲ್ಲದೆ ಲಾತ, ಗೌಡ, ಮರು, ಕಚ್ಛ, ದಾಹಲ, ಅವಂತಿ, ವಂಗದ ಸಂಘಪತಿಗಳೂ ಹೊರಟು ದಾರಿಯಲ್ಲಿ ದೊರೆತ ಜೀರ್ಣವಾಗಿರುವ ದೇವಾಲಯಗಳನ್ನು ಪುನಃ ಕಟ್ಟಿಸಿ ವಲಭಿ (ಈಗಣವಳಾ) ಪುರದ ಹತ್ತಿರ ಬಿಡಾರ ಮಾಡಿದರು. ವಿಜಯಸೇನಸೂರಿಯು ವಸ್ತುಪಾಲನಿಗೆ ಶತ್ರುಂಜಯ ಪರ್ವತಮಾರ್ಗವನ್ನು ತೋರಿಕೊಡಲು ವಲಭೀಪುರದಿಂದ ಪಾದಲಿಪ್ತಪುರ (ಈಗಣಪಾಲಿಟಾನ) ಕ್ಕೆ ಬಂದು ಪಾರ್ಶ್ವನಾಥನ ದರ್ಶನಲಾಭವನ್ನು ಹೊಂದಿ ಶತ್ರುಂಜಯಪರ್ವತವನ್ನೇರಿ ಕಪರ್ದಿಯಕ್ಷನನ್ನು ಸೇವಿಸಿ ಅಲ್ಲಿಂದ ಹೊರಟು ಆದಿನಾಥನನ್ನು ಅಷ್ಟವಿಧಾರ್ಚನೆಗಳಿಂದ ಪೂಜಿಸಿ ಸಾನಂದದಿಂದ ನರ್ತಿಸಿ ಅಲ್ಲಿಂದ ಪ್ರಭಾಸಪತ್ತನದ ಕಡೆ ಹೊರಟು ಕ್ರಿಯಮೇಳಾ ತೀರ್ಥದಲ್ಲಿ ಸ್ನಾತನಾಗಿ ಸೋಮೇಶ್ವರನನ್ನು ಪೂಜಿಸಿ ತುಲಾಭಾರದಿಂದ ಬ್ರಾಹ್ಮಣರನ್ನು ತುಷ್ಟಿಗೊಳಿಸಿ ಮುಂದೆ ಹೊರಟು ಗಿರ್ನಾರ್ ಪರ್ವತದ ತಪ್ಪಲಿನಲ್ಲಿ ತೇಜಪಾಲನಿಂದ ಕಟ್ಟಿಸಲ್ಪಟ್ಟುದಾದ ತೇಜಪಾಲಪುರವನ್ನೂ ಕುಮಾರಸರಸ್ಸನ್ನೂ ನೋದಿ ಹರ್ಷಿತನಾಗಿ ಆದಿನಾಥನನ್ನು ಅರ್ಚಿಸಿ ಪರ್ವತದ ಸಾನುಪ್ರದೇಶದಲ್ಲಿರುವ ನೇಮಿನಾಥನನ್ನಾರಾಧಿಸಿ ಅಲ್ಲಿರುವ

ಅಂಬಿಕಾ ಆಲೋಕನ ಮತ್ತು ಸಾಂಬಗಳೆಂಬ ಶಿಖರಗಳನ್ನು ನೋಡಿಕೊಂಡು ಹಿಂತಿರುಗಿ ಧೋಲಕಕ್ಕೆ ಬಂದು ಅಲ್ಲಿ ತನ್ನನ್ನು ಎದುರುಗೊಳ್ಳಲು ಸಸೈನ್ಯನಾಗಿ ಬಂದಿದ್ದ ವೀರಧವಳನನ್ನು ಸಂಧಿಸಿ ಸಕಲರೂ ಸುಖದಿಂದ ಊರನ್ನು ಸೇರಿ ವಿನೋದದಿಂದಿರುತಿರ್ದು ವಿ. ಸಂ ೧೨೯೬ ಅಥವಾ ಕ್ರಿ. ಶ. ೧೨೪೦ನೆಯ ಮಾಘ ಶುದ್ಧ ಪಂಚಮಿ ಸೋಮವಾರ ಪ್ರಾತಃಕಾಲ ಮಾನವಲೀಲೆಯನ್ನು ಮುಗಿಸಿದನು. ಕಾವ್ಯದಲ್ಲಿ ಕಥಾಭಾಗಕ್ಕಿಂತಲೂ ವರ್ಣನಾಭಾಗಗಳು ವಿಪುಳವಾಗಿವೆ. ಇಂತಹ ವರ್ಣನೆಯ ಮಾದರಿಗೆ ಈ ಕಾವ್ಯದ ೧೪ನೆಯ ಸರ್ಗವು ಸಾಕೆಂದು ತೋರುವುದು. ಅದರ ತಾತ್ಪರ್ಯವಿದು.—

ಒಂದಾನೊಂದು ದಿವಸ ಧರ್ಮನ ಅನುಚರನಾದ ಮುಪ್ಪು (Old age) ವಸ್ತುಪಾಲನ ಬಳಿಗೆ ಬಂದು ವಸ್ತುಪಾಲ! ನಿನ್ನ ಸುಗುಣ ಖ್ಯಾತಿ ದಾನಶೀಲತೆ ಪರಾಕ್ರಮಾತಿಶಯಾದಿಗಳು ಸ್ವರ್ಗಲೋಕದಲ್ಲಿಯೂ ಕೊಂಡಾಡಲ್ಪಡುತ್ತಿರುವ ದನ್ನುಕೇಳಿ ಧರ್ಮನಮಗಳಾದ ಸದ್ಗತಿಯು [Feicity] ನಿನ್ನಲ್ಲಿಯೇ ನೆಟ್ಟ ಮನ ಸ್ಕಳಾಗಿ ಅನುರಾಗಗೊಂಡಿರುವುದನ್ನರಿತು ಅವಳ ತಾಯಿತಂದೆಗಳು ನಿನಿಗೇ ಕೊಟ್ಟು ವಿವಾಹಮಾಡಬೇಕೆಂದಿರುವರೆಂಬುದನ್ನು ಕೇಳಿ ವಸ್ತುಪಾಲನು ವಿರಹಜ್ವರ ಪೀಡಿತನಾಗಿ ಕ್ಷಣಕಾಲವೂ ಸುಮ್ಮನಿರಲರಿಯದೆ ಅವಳ ಪಾಣಿಗ್ರಹಣಕ್ಕೆ ಸಿದ್ಧನಾದುದನ್ನು ತಿಳಿದು ಆಯುರ್ಬಂಧನು [Limit of life] ಅಥವಾ ಧರ್ಮನು ಸಂತೋಷದಿಂದ ಲಗ್ನವನ್ನು ನಿಷ್ಕರ್ಷಿಸಿ ಸುಮುಹೂರ್ತದಲ್ಲಿ ವಸ್ತು ಪಾಲನನ್ನು ಕರೆತರಲು ಸದ್ಬೋಧ [Good knowledge] ನೆಂಬ ಚಾರ ನನ್ನಿಟ್ಟಿಲು, ಅವನು ವಸ್ತುಪಾಲನ ಬಳಿಗೆ ಬಂದು ಮಂತ್ರೀಶ್ವರ! ನಿನ್ನೊಡನೆ ಸದ್ಗತಿಯ ವಿವಾಹವು ಸಂ. ೧೨೯೬ನೆಯ ಮಾಘಶುದ್ಧ ಪಂಚಮಿ ಸೋಮವಾರ ಪ್ರಾತಃಕಾಲ ನಡೆಸಲ್ಪಡುವುದಾಗಿ ಗೊತ್ತಾಗಿರುವುದರಿಂದ ಹೊರಡಬೇಕೆನ್ನಲು ವಸ್ತುಪಾಲನು ಹೆಂಡತಿಯಾದ ಲಲತಾದೇವಿಯನ್ನೂ ಮಗನಾದ ಜೈತ್ರಸಿಂಹನನ್ನೂ ತಮ್ಮನಾದ ತೇಜಪಾಲನನ್ನೂ ಸಮ್ಮುಖಕ್ಕೆ ಕರೆಯಿಸಿಕೊಂಡು ಅವರಿಗೆ ಹೇಳ ಬೇಕಾದುದೆಲ್ಲವನ್ನೂ ಹೇಳಿ ವೀರಧವಳರಾಜನ ಅಪ್ಪಣೆಯನ್ನು ಹೊಂದಿ ಸದ್ಬೋಧ ನೊಡನೆ ಶತ್ರುಂಜಯಪರ್ವತವನ್ನು ಸುಮುಹೂರ್ತಕ್ಕೆ ಸರಿಯಾಗಿ ಸೇರಿ ಆದಿ ನಾಥನ ಎದುರಿನಲ್ಲಿ ಸದ್ಗತಿಯೊಡನೆ ಪರಿಣಯಗೊಂಡನು.—

ವ ರ ದಾ ಚಾ ರ್ಯ

ಇವನು ಶ್ರೀವೈಷ್ಣವಬ್ರಾಹ್ಮಣನು. ಘಟಿಕಾಶತಸುದರ್ಶನನ ಮಗನು. ವಾತ್ಸ್ಯಾಯನಗೋತ್ರದವನು. ಕಾಂಚೀಪುರದವನೆಂಬುದು: —

ಕಾಂಚೀಪುರೇಕನಿರಭೂದ್ವರದಾರ್ಯನಾಮಾ
ಸೂನುಸ್ಸುದರ್ಶನಗುರೋರ್ಘಟಿಕಾಶತಸ್ಯ
ವೇದಾಂತತರ್ಕವಿವಿಧಾರ್ಥವಿಚಾರದಕ್ಷೋ
ವಾತ್ಸ್ಯೇವಸಂತತಿಲಕಂಸಭಾಣಭಾಣಂ ||

ಎಂಬ ಶ್ಲೋಕದಿಂದ ವ್ಯಕ್ತಪಡುತ್ತದೆ. ಇವನಿಗೆ ಅಮ್ಮಾಳಾಚಾರ್ಯನೆಂಬಾ ಪರನಾಮವಿದ್ದಿತು. ಇವನು ಕ್ರಿ. ಶ. ೧೩ನೆಯ ಶತಮಾನದ ಉತ್ತರಾರ್ಧದಲ್ಲಿದ್ದವನು. ಮಹಾಕವಿವೇಂಕಟನಾಥನ ಸೋದರಮಾವನಾದ ಅಪ್ಪುಳಾರ್ಯವರ ಆಚಾರ್ಯನು. ಇವನು **ವಸಂತತಿಲಕ**ವೆಂಬ ಗ್ರಂಥವನ್ನು ಬರೆದಿರುವನು. ಇದು ನಾಟಕ ಪ್ರಕರಣದಲ್ಲ "ಭಾಣ" ಜಾತಿಗೆಸೇರಿದುದು. ಮಾದರಿಗೆ ಕೆಲವು ಶ್ಲೋಕಗಳನ್ನು ಬರೆಯುವೆವು.

ವೇಶ್ಯಾಜನರ ಕಪಟಾನುರಾಗ ಕೌಶಲದ ವಿಚಾರವಾಗಿ:—

ಆಲಾಪೈರ್ಮಧುರೈಶ್ಚ ಕಾಂಶ್ಚಿದಪರಾನಾಲೋಕನೈಸ್ಸಸ್ಮಿತೈ
ರನ್ಯಾನ್ಕಿಂಚನ ವಿಭ್ರಮೋಭರಪರಾನಂಗೈರನಂಗೋಜ್ಜ್ವಲೈಃ
ಆಚಾರೈಶ್ಚಪುರೈಃ ಪರಾನಭಿನಯೈರನ್ಯಾನ್ಪುನಃ ಕೇವನೈ
ರಿತ್ಥಂ ಕಾಂಶ್ಚನರಂಜಯಂತಿ ಸುದೃಶೋಮನ್ಯೇಮನಸ್ತನ್ನ್ಯಥಾ || ೩೬

ಹಾಡುವ ವೀಣಾವತೀವರ್ಣನೆ:—

ವೇಣೀವೇಲ್ಲಿತಬಾಲಕೇ ಕದಳಶ್ರೋಣೀ ಮನೋಹಾರಿಣೀ
ವೀಣಾಪರ್ವಸು ಮಾಲಿತಾರ್ಥನಯನಂ ವ್ಯಾವಾರಯಂತೀನಖೈಃ
ಮುಕ್ತಾವೇಷ್ಟಿತಕರ್ಣಪತ್ರವಲಯಾ ಮುಗ್ಧಸ್ಮಿತಾಲಂಕೃತಾ
ಸಂಗೀತಂವಿತನೋತಿತತ್ಪರಿಸರೋತಾಳಾನುಕಾರನ್ತನೀ || ೪೩

ಯುವಕರಿಗೆ ವೇಶ್ಯಾಸಮಾಗಮದ ವಿಚಾರವಾಗಿ:—

ಯೂನಾಮನಂಗಂ ಜಯತಾಂ ವಿಶಾಲಾ
ಶಾಲಾ ಚ ಲೀಲಾಗ್ರಹಚಂದ್ರಶಾಲಾ
ಗಾತ್ರಾಣಿಪಾತ್ರಾಣಿ ವಿಲಾಸಿನೀನಾಂ
ಮಧ್ಯಂಚ ವೇದೀ ಮದತಾನಿ ಮಂತ್ರಾಃ || ೪೪

ಸಂಧ್ಯಾವರ್ಣನೆ:—

ತವನ್ಮತ್ತಮಹೋತ್ಸವಂವಿವಕ್ಷು
ರ್ವರುಣಾಂತಃ ಪುರವಾಮಲೋಚನಾನಾಂ

ಮಗೆದರ್ಪಣಮಂಡಲಾನುಕಾರೀ
ಭಜತೇಪಶ್ಚಿಮಶೈಲಮಂಶುಮಾಲೀ ॥ ೧೪೩

ಸಂಧ್ಯಾವರ್ಣನಗದ್ಯವು ಹೀಗಿರುವುದು:—ಪರಿಣತೋ ದಿವಸಶ್ಚ ಪಶ್ಯ:—
" ಸೋಯಮವಿಳಂಬ ಮಂಬಿಕಾರಮಣ ಪಟುತರನಟನಹಸ್ತವಿಸ್ಪ
ಷ್ಟಕನಕ ಡಮರುಕ ವಿಡಂಬೀಗಗಲತಲವಿಹರದ ಮರಪುರವಾರ
ಯುವತಿಕರಕಮಲಗಳಿತಮಣಿಕಂತುಕಕಾಂತಿಃ ಮಂದಾಕಿನೀನಿಕಟತಟೀಲ
ಸದುಟಜಗತವಿಬುಧಗುರುವಿತೀರ್ಣಸಾಯಂತನಸಮಯನಿಯಮಾಂಜಲಿ
ಸಲಿಲಸಹಪತಿತತಪನೀಯಾರವಿಂದಸಂದೇಹವಾಹಿ ನಿರವಧಿಕತರಂಗಿತ
ನಿಖಿಲಮಂಗಳಾಭಂಗುರತ್ವದೀಯರಂಗೋತ್ಸವ ದರ್ಶನಕುತೂಹಲಾಗಮು
ನವೇಗ ವಿಭ್ರಷ್ಟವಿದ್ಯಾಧರವರವರ್ಣಿನೀವರ್ಣನೀಯಸುವರ್ಣಾಣರ್ಕ
ಪತ್ರಾನುಕಾರೀ ಪರಿಸರಚರವರುಣ ಪುರವರತನುಚಟು ಲಚರಣ
ಮಣಿಕಟಿಕವಿಸೃಮರಕಿರಣಕದಂಬಚುಂಬಿತಇವಸಸಮುಮಾವತಿ ತಾಪರಿ
ಮಿತರಣಿನೀಚರ ಸುಭಟ ನಿತಿತಶರವಿದಳಿತ ನಿಜತನುಗಳಿತರುಧಿ ರನಿಕು
ರಂಬಕರಂಬಿತ ಇವ ಅರುಣಕಠೋರಕಶಾಭಿಘಾತಪರಿಕುಪಿತ ಜವ
ನನಿಜತುರಗಖುರಧುವಾಳನ ಸರಭಃಸಕನಕ ಘನರಥಚರಣ ಘಣ
ಘಣಾರವನಿಶಮನ ಸುಖ ನಿಷ್ಕಂಪ ಶಂಬರ ಕುಲಮುವ ತರತಿ ಚರಮಗಿರಿ
ವರನಿತಂಬ ಮಂಬರ ತಲಾ ದಂಶುಮಾಲೀ ॥

ವಸಂತ ವೀಧೀ ವರ್ಣನವುಹೀಗಿರುವುದು:—

ಸಂತತಚಲಿತ ಚಂದನಪವನ ವೇಪಮಾನ ಮದನಧ್ವಜಪಟಪಲ್ಲವ ಸಮುಲ್ಲ
ಸಿತ ವಿಟಂಕವಾಟೆ ಕಾವಿಶಂಕಟಮಣಿ ಗಣಖಚಿತವೇದಿಕಾ ವಿಹರ ಮಾಣ
ವಿವಿಧ ವಿಟನಿಚಯ ವಿಚಾರ್ಯಮಾಣ ಸಾಂಗಾಸಂಗತಂತ್ರ ವಿಸ್ತಾರಾ ಬಾಲ
ಜನ ಪರಿಚೀಯಮಾನ ಪರಿವಾರಿನೇ ಮೃದಂಗಡಮರು ಮುರಜರ್ಝರೀ
ಮುಖರ ಸುಧಾಧೌತವಿದಗ್ಧಮಂದಿರ ಶಿಖರ ನಿಕುರುಂಬನಿರ್ಜಿತ ನೀಹಾ
ರಹಾರ ಹಿಮಗಿರಿ ದಿಗಂಬರ ಸಿತರೋ ಚಿದಂಬರಸರಿದಂಬು ಶರದಂಬುದ
ಕಂಬುಕುಮುದಕುಂದಾವ ದಾತಾವಸಂತವೀಧೀ ॥

ಹ ಸ್ತಿ ಮ ಲ್ಲ

ಇವನು ವತ್ಸಗೋತ್ರದವನು. ದಾಕ್ಷಿಣಾತ್ಯ ಮಹಾವಿದ್ವಾಂಸನಾದ ಗೋ
ವಿಂದಭಟ್ಟನೆಂಬ ಬ್ರಾಹ್ಮಣನ ಮಗನು. ಕಾಲಕ್ರಮದಲ್ಲಿ ಸಮಂತಭದ್ರನ ದೇವಾ
ಗಮ ಸೂತ್ರಾಧ್ಯಯನವನ್ನು ಮಾಡಿ ಜೈನನಾದನು.

"……..ಹಸ್ತಿಮಲ್ಲಿಕಾನಾಮು ಪ್ರಥಿತಮಾಸೀತ್ | ಅಯಂ ಚ ಗೋವಿಂದ ಭಟ್ಟಾಖ್ಯವಿದುಷಃ ಸೂನುರ್ದಾಕ್ಷಿಣಾತ್ಯ ಆಸೀತ್ | ಗೋವಿಂದಭಟ್ಟೋ ವತ್ಸಗೋತ್ರೀಯೋ ಬ್ರಾಹ್ಮಣಃ ಪೂರ್ವಮಜ್ಞೈನ ಆಸೀತ್ | ಪಶ್ಚಾದ್ವತ್ಸ ವತ್ಸನುಂತಭದ್ರವಿರಚಿತದೇವಾಗಮಸೂತ್ರಾಧ್ಯಯನೇನ ಜೈನೋ ಜಾತಃ ……" ಎಂಬದರಿಂದ ಗೊತ್ತಾಗುತ್ತದೆ.

ಗೋವಿಂದಭಟ್ಟನು ಸ್ವರ್ಣಯಕ್ಷಿ ಎಂಬ ದೇವಿಯನ್ನು ಆರಾಧಿಸುತ್ತಿದ್ದಂತೆಯೂ. ದೇವೀ ಪ್ರಸಾದದಿಂದ (೧) ಶ್ರೀಕುಮಾರ (೨) ಸತ್ಯವಾಕ್ಯ (೩) ದೇವವಲ್ಲಭ (೪) ಉದಯಭೂಷಣ (೫) **ಹಸ್ತಿಮಲ್ಲ** (೬) ವರ್ಧಮಾನ* ರೆಂಬ ಆರುಜನ ಗಂಡು ಮಕ್ಕಳಾಗಿ ಎಲ್ಲರೂ ಮಹಾವಿದ್ವಾಂಸರೂ ಕವಿಗಳೂ ಆಗಿದ್ದುದಾಗಿ ತಿಳಿಯಬರುತ್ತದೆ. ಇವರಲ್ಲಿ ಸತ್ಯವಾಕ್ಯನು 'ಶ್ರೀಮತೀಕಲ್ಯಾಣ' ವನ್ನು ಬರೆದಿರುವುದಾಗಿ ಮೈಥಿಲೀಕಲ್ಯಾಣದ ಪ್ರಸ್ತಾವನೆಯಲ್ಲಿ ಹಸ್ತಿಮಲ್ಲನು ಹೇಳಿಕೊಂಡಿರುವನು.

ಕುಮಾರಕವಿ ನಿರ್ಮಿತ 'ಆತ್ಮಬೋಧ' ಎಂಬ ಸಣ್ಣ ಗ್ರಂಥವು ಈಡರ್ಪಾಪುರದ ಸರಸ್ವತೀ ಭಂಡಾರದಲ್ಲಿರುವುದು. ಅದು ಹಸ್ತಿಮಲ್ಲನ ಅಣ್ಣನಾದ ಶ್ರೀಕುಮಾರನು ಬರೆದುದೋ ಅಥವಾ ಬೇರೆಯೋ ತಿಳಿಯದಾಗಿದೆ.

ಶ್ರೀಮಾನ್ ಆರ್. ನರಸಿಂಹಾಚಾರ್ಯರು ಕರ್ಣಾಟಕ ಕವಿಚರಿತೆಯಲ್ಲಿ ಹಸ್ತಿಮಲ್ಲದ್ವಯವನ್ನು ಸಾಧಿಸಿರುವರು.

(೧) ಆದಿಪುರಾಣವನ್ನು ಬರೆದಿರುವ ಹಸ್ತಿಮಲ್ಲ. ಇವನ ಕಾಲವನ್ನು ಕ್ರಿ. ಶ. ೧೩೧೨ ಎಂದಿರುವರು.

(೨) ದೇವಚಂದ್ರನು ರಾಜಾವಳೀ ಕಥೆಯಲ್ಲಿ (೧೮೩೮) ಒಬ್ಬ ಹಸ್ತಿಮಲ್ಲಾಚಾರ್ಯನ ಹೆಸರನ್ನು ಹೇಳಿ ಆತನು ಗುಣಭದ್ರನ ಶಿಷ್ಯನಾದ ವೇದಾಗಮಸ್ತೋತ್ರ ವ್ಯಾಖ್ಯಾನಕರ್ತೃವಾದ ಗೋವಿಂದಭಟ್ಟನ ಮಗನೆಂದೂ, ಮದದ ಆನೆಯನ್ನು ಅಡಗಿಸಿದುದರಿಂದ ಅವನಿಗೆ ಹಸ್ತಿಮಲ್ಲನೆಂಬ ಹೆಸರು ಬಂದಿತೆಂದೂ, ಆತನಿಗೆ ಪಾರ್ಶ್ವ ಪಂಡಿತ ಮೊದಲಾದ ಮಕ್ಕಳು ಇದ್ದರೆಂದೂ, ಆತನು ಉಭಯಭಾಷಾ ಕವಿಚಕ್ರವರ್ತಿಯೆನಿಸಿದ್ದನೆಂದೂ, ಆತನ ಶಿಷ್ಯನು ಲೋಕಪಾಲಾರ್ಯನೆಂದೂ, ಹೇಳಿದ್ದಾನೆ ಎಂದೂ. ಇವನು ಮೇಲೆ ಹೇಳಿದ ಆದಿಪುರಾಣ ಕರ್ತೃವಾಗಿರಲಾರನೆಂದೂ ಒಕ್ಕಣಿಸಿರುವರು.‡

ಇಲ್ಲಿ ಹೇಳುವ ಹಸ್ತಿಮಲ್ಲನು ಉಭಯಭಾಷಾಕವಿಚಕ್ರವರ್ತಿ ಎಂದು ನಮಗೆ ದೊರೆತಿರುವ ಗ್ರಂಥಗಳಲ್ಲಿ ಹೇಳಿಕೊಂಡಿರುವನು. ಹಾಗಾದರೆ ಈ ಹಸ್ತಿ

* 'ಗಣರತ್ನಮಹೋದಧಿ' ಕಾರನು ಇವನಲ್ಲ.

‡ (ಕರ್ಣಾಟಕ ಕವಿಚರಿತೆ ತಿದ್ದಿದ ಪ್ರತಿ ಪುಟ. ೪೯೯.)

ಮಲ್ಲನೂ ರಾಜಾವಳೀ ಕಥೆಯ ಹಸ್ತಿಮಲ್ಲನೂ ಒಂದೇ ವ್ಯಕ್ತಿಯೇ ಹೇಗೆ? ಒಂದೇ ವ್ಯಕ್ತಿಯೆನ್ನುವುದಾದರೆ ಹಸ್ತಿಮಲ್ಲವಿರಚಿತ ಕರ್ಣಾಟಕ ಗ್ರಂಥಗಳಾವುವು? ಹಸ್ತಿಮಲ್ಲವಿರಚಿತವಾದ ವೈಧಿಲೀಕಲ್ಯಾಣ ಮತ್ತು ವಿಕ್ರಾಂತಕೌರವ ಎಂಬ ಸಂಸ್ಕೃತ ನಾಟಕಗಳಲ್ಲಿ ಹಸ್ತಿಮಲ್ಲವಿರಚಿತ ಕರ್ಣಾಟಕ ಗ್ರಂಥಗಳೆಲ್ಲಿಯೂ ಹೇಳಿರುವಂತೆ ಕಂಡುಬರುವುದಿಲ್ಲ. ಕರ್ಣಾಟಕ ಕವಿಚರಿತೆಕಾರರೂ ಹೇಳಿರುವದಿಲ್ಲ. ಉಭಯ ಭಾಷಾ ಕವಿಚಕ್ರವರ್ತಿ ಎಂಬುದರಿಂದ ಕನ್ನಡ ಮತ್ತು ಸಂಸ್ಕೃತಭಾಷೆಗಳೆನ್ನುವುದಾದರೆ ಸಂಸ್ಕೃತ ಪ್ರಾಕೃತಗಳೆಂದೇಕೆ ಹೇಳಕೂಡದು ?

ಹಸ್ತಿಮಲ್ಲನು ಪಾಂಡ್ಯದೇಶದರಾಜನ ಕೃಪಾಪಾತ್ರನಾಗಿ ಶ್ರೀರಾಜಧಾನಿಯಲ್ಲಿದ್ದು ದಾಗಿ:—

ಶ್ರೀಮತ್ಪಾಂಡ್ಯಮಹೀಶ್ವರೇ ನಿಜಭುಜಾದಂಡಾವಲಂಬೀಕೃತೇ
ಕರ್ಣಾಟೀವನಸಮಂಡಲಂ ಪದನತಾನೀಕಾವನೀಕೋಽವತಿ।
ತತ್ಪ್ರೀತ್ಯಾಸುಸರ್ವಸ್ವಬಂಧುವಿವಹ್ಯೈರ್ವಿದ್ವದ್ಭಿರಾಪ್ತ್ಯೈಸ್ವವಂ
ಜೈನಾವಾರಸಮೇತಸಂತರನಮೇ (?) **ಶ್ರೀಹಸ್ತಿಮಲ್ಲೋ**ಽವಸತ್ ॥

ಎಂಬ ಶ್ಲೋಕದಿಂದ ತಿಳಿಯಬರುತ್ತದೆ.

ಪಾಂಡ್ಯದೇಶವು ಯಾವುದೆಂಬುದರ ವಿಚಾರದಲ್ಲಿ:—

" ದ್ರವಿಡದೇಶಸನ್ನಿಹಿತಸ್ಯ ಮಧುರಾ (ದಕ್ಷಿಣಮಧುರಾ) ಯಾಃ ಸಮೀಪಸ್ಥ ಪ್ರದೇಶಾನಾಂ ಪಾಂಡ್ಯದೇಶ ಇತಿ ನಾಮ ಆಸೀತ್ " ಎಂದೂ, ಅದನ್ನು ಯಾರು ಆಳುತ್ತಿದ್ದರೆಂಬುದರ ವಿಚಾರದಲ್ಲಿ —

" ಕವಿಸ್ಥಿತಿಸಮಯೇ ತತ್ರತ್ಯಃ ಪಾಂಡ್ಯಮಹೇಶ್ವರೋ ನೃಪೋಬಭೂವ | ಅಯಂಸುಂದರಪಾಂಡ್ಯ [ಪ್ರಥಮ] ಸ್ಯೋತ್ತರಾಧಿಕಾರೀಸ್ಯಾತ್, ತಸ್ಯ ರಾಜ್ಯಕಾಲಃ ೧೩೦೭ ವಿ. ಸಂವತ್ಸರಪ್ರಾರಂಭೋಭವತಿ | ಅಯಂ ಕವೇರ್ಮಹದಾವರಚ್ಚಕಾರ "

ಎಂದು ತೋರಿಬರುವುದರಿಂದ ದ್ರಾವಿಡದೇಶದ ಸಮೀಪವರ್ತಿ ಮಧುರೆಯಬಳಿ ಇರುವ ಪ್ರದೇಶಕ್ಕೆ ಪಾಂಡ್ಯದೇಶವೆಂದೂ, ಅದನ್ನು ಮೊದಲನೆಯ ಸುಂದರಪಾಂಡ್ಯನ ಉತ್ತರಾಧಿಕಾರಿಯು ಆಳುತ್ತಿದ್ದನೆಂದೂ ಇವನು ರಾಜ್ಯವನ್ನಾಳಿದುದು ವಿ. ಸಂ. ೧೩೦೭ ಅಥವಾ ಕ್ರಿ. ಶ. ೧೨೫೦ ಎಂದೂ ತಿಳಿಯಬರುತ್ತದೆ.

ಕಾಲ :—ಕ್ರಿ. ಶ. ೧೨೧೬-೧೨೩೭ರ ವರೆಗೆ ಮಾರವರ್ಮ ಸುಂದರಪಾಂಡ್ಯ [ಪ್ರಥಮ] ನು ಆಳಿದುದಾಗಿದೆ. ಇವನ ಉತ್ತರಾಧಿಕಾರಿ ಜಟಾವರ್ಮ ಕುಲಶೇಖರ. [ಎರಡನೆಯವ] ಇವನು ಕ್ರಿ. ಶ. ೧೨೩೭-೧೨೬೦ರ ವರೆಗೆ ಆಳಿದನು.*

* Ancient Dekhan P. 175

ಇವನ ಕಾಲದಲ್ಲಿಯೇ ಹಸ್ತಿಮಲ್ಲನು ಇದ್ದುದಾಗಿ ಹೇಳಿರುವುದರಿಂದ ಕ್ರಿ. ಶ. ೧೩ನೆಯ ಶತಮಾನದ ಸಮಾರ್ಧದಲ್ಲಿದ್ದವನೆಂದು ಹೇಳುವುದು ತಪ್ಪಾಗದು.

ಗ್ರಂಥಗಳು:—**ಮೈಥಿಲೀಕಲ್ಯಾಣ** ವಿಕ್ರಾಂತಕೌರವ ಈ ಎರಡು ಗ್ರಂಥಗಳು ಮಾತ್ರ ಪ್ರಕೃತದೊರೆತಿರುವುವು. ಇವನದೆಂದು ಹೇಳುವ ಸುಭದ್ರಾಹರಣ ಮತ್ತು ಜನಾಪವನಂಜಯವೆಂಬ ಗ್ರಂಥಗಳು ಉಪಲಬ್ಧವಿಲ್ಲ.

ಮೈಥಿಲೀ ಕಲ್ಯಾಣ:—ಇದು ಐದು ಅಂಕಗಳ ನಾಟಕ. ಇದರಲ್ಲಿ ಶ್ರೀರಾಮನಿಗೂ ಸೀತೆಗೂ ಆದ ವಿವಾಹಸಂದರ್ಭದ ಕಥೆಯನ್ನು ತೆಗೆದುಕೊಂಡು ತನ್ನ ದಾದ ಕಲ್ಪನೆಗಳಿಂದ ನಾಟಕವನ್ನು ರೂಪಿಸಿರುವನು. ಸೀತೆಯ ರೂಪಲಾವಣ್ಯಾದಿಗಳನ್ನು ಕೇಳಿದ ಮಾತ್ರದಿಂದಲೇ ಉತ್ಕಂಠಿತನಾದ ರಾಮನು ಅಯೋಧ್ಯೆಯಿಂದ ವಿದೂಷಕನೊಡನೆ ಮಿಥಿಲೆಗೆ ಬಂದು ಅಕಸ್ಮಾತ್ತಾಗಿ ದೋಲಾಗೃಹದಲ್ಲಿ ಸೀತೆಯನ್ನು ನೋಡಿ ಅತ್ಯಂತವಿರಹ ಪೀಡಿತನಾಗುವನು. ಆಗ ಸೀತಾ ರಾಮರು ಸಂಧಿಸಿದ್ದರು. ಆಕೆಯ (ಸೀತೆಯ) ಸಖಿಯರು ಬಂದುದರಿಂದ ಇವರ ಪ್ರಣಯ ಸಂಚಿಗೆ ಅವಕಾಶದೊರೆಯದೆ ಇರಲು, ವಿರಹಸಂತಪ್ತನಾದ ರಾಮನನ್ನು ವಿನೋದಗೊಳಿಸುವಸಲುವಾಗಿ ವಿದೂಷಕನು ವಾಧವ ವನಕ್ಕೆ ಕರೆದುಕೊಂಡು ಹೋಗುವನು. ಅಲ್ಲಿ ಇಬ್ಬರೂ ಮಾತನಾಡುತ್ತಿರುವಷ್ಟರಲ್ಲಿ ಸೀತೆಯು ವಿರಹತಾಪಶಮನಾರ್ಥವಾಗಿ ಅಲ್ಲಿಗೆ ಬಂದು ರಾಮವಿದೂಷಕರ ಸಲ್ಲಾಪವನಾಲೈಸುತ್ತ ರಾಮನು ಹೇಳಿದ ಕೆಲವುಮಾತುಗಳನ್ನು ಅನ್ಯಥಾಭಾವಿಸಿಕೊಂಡು ಮೂರ್ಛಿತಳಾಗಲು ರಾಮನು ಹೋಗಿ ಆವಳನ್ನು ಸನೂಧಾನಗೊಳಿಸುವನು. ಅನಂತರ ಸೀತಾ ಸ್ವಯಂವರಕ್ಕಾಗಿ ಮಿಥಿಲಾಧಿಪನು ಧನುಸ್ಸನ್ನು ಪಣವಾಗಿಟ್ಟುದುದನ್ನರಿತು ರಾಮನು ಲಕ್ಷ್ಮಣನೊಡನೆ ಬಂದು ಧನುರ್ಭಂಗವನ್ನು ಮಾಡಿ ಸೀತೆಯನ್ನು ಪರಿಗ್ರಹಿಸಿಸುವನು. ಇದೇ ಈ ರೂಪಕದ ಕಥಾಸಂವಿಧಾನ.

ವಿಕ್ರಾಂತ ಕೌರವ:—ಇದಕ್ಕೆ 'ಸುಲೋಚನಾ' ಎಂಬ ಮತ್ತೊಂದು ಹೆಸರು.

ಇದರಲ್ಲಿ ಆರು ಅಂಕಗಳಿರುವುವು. ಕೇವಲಕಾಲ್ಪನಿಕ ಕಥೆಯೆಂದು ತೋರುತ್ತದೆ. ಹಸ್ತಿನಾಪುರದ ರಾಜಕುವರನಾದ ಜಯನೆಂಬುವನು (ಮೋಘೇಶ್ವರ) ಕಾಶಿಗೆ ಯಾತ್ರಾರ್ಥಿಯಾಗಿ ಹೋಗಿದ್ದು ಕಾಶೀರಾಜನ ಕುವರಿಯಾದ ಸುಲೋಚನಾ ಎಂಬವಳನ್ನು ನೋಡಿ ತನ್ಮಯಚಿತ್ತನಾಗಿ ವಿರಹಪೀಡಿತನಾಗಿರಲು ಸಧ್ಯದಲ್ಲೇ ಸಂಭವಿಸಿದ ಅವಳ ಸ್ವಯಂವರೋತ್ಸವದಲ್ಲಿ ಅವಳು ಇವನನ್ನು ವರಿಸುವಳು. ಇದೇ ಈ ನಾಟಕದ ಕಥೆ. ಈ ಎರಡು ನಾಟಕ ಕಥೆಗಳ ಪರಿಶೀಲನದಿಂದ

ಕವಿಯು ನಾಟಕ ರಚನೆಯಲ್ಲಿ ಚತುರನಲ್ಲವೆಂದೇ ಹೇಳಬೇಕಾಗುವುದು. ಮೈಥಿಲೀ ಕಲ್ಯಾಣದಲ್ಲಿ ರಾಮನು ಮಿಥಿಲೆಗೆ ಬಂದುದರಕಾರಣವನ್ನು ಹೇಳಿರುವುದಿಲ್ಲ. ರಾಮನನ್ನಾವಾಗಲೂ ಎಡೆಬಿಡದಿರುವ ಸೋದರ ಲಕ್ಷ್ಮಣನ ಹೆಸರೇ ಇಲ್ಲ. ನಾಟಕದಕೊನೆಯಲ್ಲಿ ಲಕ್ಷ್ಮಣನು ಬಂದಿರುವನು. ಇದಂತಿರಲಿ! ರಾಮನು ಮಿಥಿಲೆಗೆ ಬಂದು ಅಷ್ಟು ದಿವಸಗಳೂ ಅಲ್ಲಿಯೇ ಇದ್ದುದರಕಾರಣವೂ ನಿರೂಪಿತವಾಗಿಲ್ಲ. ಸೀತಾದರ್ಶನಲಾಲಸತೆಯು ಕಾರಣವೆನ್ನುವುದಾದರೆ ರಾಮನನ್ನು ಕೇವಲ ಅಧಃಕೃತರೀತಿಯಲ್ಲಿ ವರ್ಣಿಸಿದಂತಾಗುವುದು. ಮಾಧವವನಕ್ಕೆ ವಿಹಾರಕ್ಕಾಗಿ ಬಂದ ಸೀತೆಯು ಬೆಳಗಾಗುವವರೆಗೂ ಅಲ್ಲಿಯೇ ಇದ್ದಳೆಂಬುದು ಸಾಧುವಲ್ಲದುದೂ ಅಸಮಂಜಸವೂ ಆಗಿರುವುದು. ಶ್ರೀರಾಮನ ವಿವಾಹಕ್ಕೆ ರಾಮನ ತಾಯಿತಂದೆಗಳಿಗಾಗಲಿ ಇತರರಿಗಾಗಲಿ ಆಹ್ವಾನವು ಕಳುಹಿಸಲ್ಪಟ್ಟಿರುವುದಿಲ್ಲ. ಅವರಾರೂ ಬಂದಿರುವುದೂ ಇಲ್ಲ. ಲಕ್ಷ್ಮಣನು ಮಾತ್ರ ಅಸಮಯಕ್ಕೆ ಎಲ್ಲಿಂದಲೋ ಬಂದಿರುವನು. ವಿಕ್ರಾಂತ ಕೌರವ ನಾಟಕದಲ್ಲಿ ಕಲ್ಪನಾಚತುರತೆಯು ದೂರವಾಗಿ ನಾಟಕಕಲೆಯಲ್ಲಿ ಕವಿಯು ಎಂತಹ ಅಕುಶಲನೆಂಬದು ಈ ನಾಟಕದಲ್ಲಿ ಎದ್ದು ಕಾಣುತ್ತಿರುವುದು. ಇದರಲ್ಲಿ ಚಮತ್ಕಾರದ ಗಂಧವೇ ಇಲ್ಲದೆ ಕೇವಲ ಅಪ್ರಕೃತಗಳಾದ ವರ್ಣನೆಗಳಿಂದ ಇರುವ ಅಂದವೂ ಕಂದಿಹೋಗಿದೆ. ಕಥಾಸಂವಿಧಾನವು ಯಾವ ವಿಧದಲ್ಲಿಯೂ ಆಕರ್ಷಕವಾಗಿರುವುದಿಲ್ಲ. ವರ್ಣನಾಭಾಗಗಳು ಎರಡರಲ್ಲಿಯೂ ಸಾಮಾನ್ಯವಾಗಿರುವುವು. ಒಟ್ಟಿನಲ್ಲಿ ಕವಿಯನ್ನು ರೂಪಕ ಸವಿಯನ್ನರಿತ, ನುರಿತ ನಾಟಕಕಾರನೆಂದು ಹೇಳುವುದು ಕಷ್ಟಸಾಧ್ಯವಾಗಿರುವುದು. ಮಾದರಿಗಾಗಿ ಒಂದೆರಡು ಶ್ಲೋಕಗಳನ್ನು ಕೊಡುವೆವು.

ಕಥಮಪಿ ಪರಿಭ್ರಾಮ್ಯ ರಾತ್ರೌ ಮಯಾ ಪ್ರಯತ್ನತೋ ಮೃಗೀ
ಮಯಿ ಪುನರಧರೋಷ್ಠಂ ಪಾತುಕಾಮಾ ಪ್ರಸಹ್ಯ
ಸಕರುಣಮುಪಲಾಲ ಯಂ ಸದೈಯಂ ಚಾನು ಮೀಯಂ
ಪ್ರೌಢಯತಿ ಮುಖಮಂತರ್ಬಾಷ್ಪಜಿಹ್ಮಾಕುಲಾಕ್ಷಂ ॥ ಮೈಥಿಲೀಕಲ್ಯಾಣ ೪-೪೧

ಕಕ್ಷಾಕ್ಷಂ ವಿವಿಕ್ಷುಂ ರಭಸಿರುಮಸನೈರಾಪ್ಲುತಂ ವಿಪ್ಲವಾಕ್ಷಂ
ತಂ ದೃಷ್ಟ್ವಾ ಪುರಃ ಪುರಸ್ತಾ ಕಲುಷಯತಿ ಮುಧಾ ಮಾನಸಂ ರಾಜಸಿಂಹಃ
ಯಸ್ಯ ಕ್ರೋಧಾಂಧಗರ್ಭೇ ರಭಸರಭಸನ ದ್ರಾಜ ಕೆಂದ ರಂಭಾಲಿ
ಸ್ಖಾಲಿ ಸಮುದ್ಭೂತ್ಯಮುತ್ತ ಸಂಶಕಲುಲಂ ಧರ್ಮಿರಾ ದಂಪಸಕ್ತಿ ೫ ೪೧

ಚಂದ್ರಾತಪವರ್ಣನೆ ಹೀಗಿರುವುದು—

ಅಯಮಮರಾಲಮಣಿ ಲಿರುಚ್ಚಿದ
ಚ್ಛಾಯವಾಕುರುತೇ ಪರಿಕೋ ನಭಃ
ರಜನಿಕರಪ್ರಕರಃ ಪ್ರಸರ್ಪ ಜಗತ್
ಗವಲಕಂರಕಲಾಲಮಿದಂ ನಭಃ | ವಿಕ್ರಾಂತಕೌರವಂ ೫ ೪೬

ಮುಂದರೋಕ್ತಿ;—

ಇದಾನೀಮಸ್ಯಸ್ತಿ ತ್ವಯಿ ಭರತಸೂನೌ ಮಮ ಘೃಣಾ
ಕೃಮಾಪ್ಯೇದ್ಯತ್ತೇಷು ದ್ರವಿಣಮಿಹ ನಃ ಪೈತೃಕಮಿದಂ
ವ್ರಜ ಸ್ವೈರಂ ಯುದ್ಧಾತ್ ಸ್ವಗೃಹಮಥವಾ ಪ್ರೇತಭವನಂ
ಗತಿಸ್ತಾತೀಯಾಕೀ ನ ಪುನರಿಹ ಕಾರ್ಯಸ್ತಿ ಭವತಃ ೪—೯೧.

ಎಲೈ! ನೀನು ಭಾರತಭೂಮಿಯವನಾಗಿರುವೆಯೆಂದು ನಿನ್ನ ಮೇಲೆ ನನಗೆ ಅಭಿಮಾನವಿರುವುದರಿಂದಲೇ ನಿನಗೆ ಹಿತವನ್ನು ಹೇಳುವೆನು ಕೇಳು. ನಿಮ್ಮಂಥವರಲ್ಲಿ ಕೃಪೆಯನ್ನು ತೋರಿಸುವುದು ನಮ್ಮಕುಲಕ್ರಮಾಗತ ಆಚರಣೆಯಾಗಿರುವುದು ಈಗ ಯುದ್ಧವನ್ನು ಬಿಟ್ಟು ಸುಮ್ಮನೆ ಹೊರಡು. ಇಲ್ಲವಾದರೆ ನಿನಗೆ ಯಮಲೋಕವೇ ಗತಿ ಈ ಎರಡನ್ನೂ ಬಿಟ್ಟು ಮೂರನೆಯದಾರಿಯು ಯಾವುದೂ ತೋರುವುದಿಲ್ಲ.

ರವಿವರ್ಮಭೂಪ

ಇವನು ಕೇರಳದೇಶದವನು. ಚಂದ್ರಕುಲದ ಯಾದವಜಯಸಿಂಹನ ಮಗನು. ಕ್ರಿ. ಶ. ೧೩೬೫ರಲ್ಲಿ ಹುಟ್ಟಿದನು. ಇವನಿಗೆ ಮಹಾರಾಜಪರಮೇಶ್ವರ, ದಕ್ಷಿಣಭೋಜರಾಜ, ಸಂಗ್ರಾಮಧೀರನೆಂಬ ಅಪರ ನಾಮಗಳಿದ್ದುವಾಗಿ "ಅಸ್ತಿ ಕಿಲ ಸಂಗೀತಶಾಸ್ತ್ರಪಾರದೃಶ್ವನಾ ನಿಖಿಲಗುಣರತ್ನರೋಹಣಗಿರಿಣಾ ಕವಿಜನಮಯೂರಕಾಲಮೇಘೇನ ಸಾಹಿತ್ಯವಿದ್ಯಾವಿಚಕ್ಷಣೇನ ದಕ್ಷಿಣಭೋಜರಾಜೇನ ಮಹಾರಾಜಪರಮೇಶ್ವರೇಣ ಸಂಗ್ರಾಮಧೀರವೀರನಾಮಧೇಯೇನ **ಶ್ರೀರವಿವರ್ಮದೇವೇನ**" ..... ಎಂಬುದರಿಂದಲೂ.—

ಸಂಗ್ರಾಮಭೂವಿಷು ಸಭಾಸು ಚ ಧೀರ ಏಷ
ಶಸ್ತ್ರೇಣ ಬುದ್ಧಿವಿಭವೇನ ಚ ತೈಕ್ಷ್ಣ್ಯಭಾಜಾ
ದರ್ಪಾಂಧಕಾರತತಧಿಯೋ ನೃಪತೀನ್ ಬುಧಾಂಶ್ಚ
ಜಿತ್ವಾಕ್ಷಿತೌ ವಿಹರತೇ ಜಯಸಿಂಹಸೂನುಃ ॥ ೧ ೪

ಎಂಬ ಸೂತ್ರಧಾರನ ಹೇಳಿಕೆಯಿಂದ ಸ್ಪಷ್ಟಪಡುವುದು.

'ಅಲಂಕಾರಸರ್ವಸ್ವ' ಎಂಬ ಗ್ರಂಥದ ವ್ಯಾಖ್ಯಾತೃವಾದ ಸಮುದ್ರಬಂಧನು ಇವನನ್ನು "ಕೂಪಕಭೂಪತಿಃ" ಎಂದು ಹೇಳಿಕೊಂಡಿರುವುದರಿಂದ ಇವನು ಕೂಪಕದೇಶಕ್ಕೆ ರಾಜಧಾನಿಯಾದ ಕೊಲಂಬೋ ನಗರದ ರಾಜನಾಗಿದ್ದನೆಂದೂ ಆಗಣ ಕೊಲಂಬೊನಗರವು ಈಗಣ ಕೊಲ್ಲಂ ಅಥವಾ ಕ್ವಿಲಾ ಎಂದೂ ತಿಳಿಯ

ಬರುತ್ತದೆ. ಈ ಕೊಲಂಬೋ ನಗರವು ಈಗಣ ತಿರುವಾಂಕೂರಿನ [Trivendrum] ಉತ್ತರಕ್ಕೂ, ಶ್ರೀವಲ್ಲಭ ಅಥವಾ ತಿರುವನಂತಪುರದ ದಕ್ಷಿಣಕ್ಕೂ ಇದ್ದುದಾಗಿ ವರ್ಣಿತವಾಗಿದೆ. ಈ ವಿಚಾರವು " ಆರ್ಯೇ! ಸಮಾದಿಷ್ಟೋಽಸ್ಮಿ ಸಕಲಕಲಾಕುಶಲಸ್ಯ ಚಂದ್ರಕುಲ ಮಂಗಲಪ್ರದೀಪಸ್ಯ ಸಮಸ್ತ ಸಾಮಂತ ಶೇಖರೀ ಕ್ರಿಯಮಾಣ ಶಾಸನಸ್ಯ ವಿವಿಧ ಶಾಖಾವಲಂಬನ ಧರ್ಮತರುಮೂಲಕಂದಸ್ಯ ಪ್ರಣಯಿಜನ ಚಿಂತಾಮಣೇಃ ಕೋಲಂಬಪುರಪರಿಷ್ಕಾರಸ್ಯ ದೇವಸ್ಯ ರವಿವರ್ಮಣಃ "

ಎಂಬ ಸೂತ್ರಧಾರನ ಹೇಳಿಕೆಯಿಂದ ವ್ಯಕ್ತವಾಗುತ್ತದೆ.

ಇವನು ಪದ್ಮನಾಭನ ಆರಾಧಕನಾಗಿದ್ದು ರಾಜಕಾರ್ಯನಿಪುಣನೂ, ಕವಿಪುಂಗವನೂ, ರಣಧೀರನೂ ಆಗಿದ್ದುದಾಗಿ ತಿಳಿಯಬರುವುದರಿಂದ ಇವನು ಈಗಣ ತಿರುವಾಂಕೋರು [Travancore] ರಾಜರ ಪೂರ್ವಿಕನಾಗಿದ್ದಿರಬಹುದಾಗಿ ತೋರುತ್ತದೆ. ಇವನು ಪಾಂಡ್ಯರಾಜರನ್ನು ಜಯಿಸಿ ತನ್ನ ರಾಜ್ಯವನ್ನು ಕಂಚಿಯವರೆಗೂ ವಿಸ್ತರಿಸಿದ್ದುದಾಗಿ ಹೇಳಲ್ಪಟ್ಟಿದೆ.

ಗ್ರಂಥ—ಇವನು "ಪ್ರದ್ಯುಮ್ನಾಭ್ಯುದಯ"ಎಂಬ ಐದು ಅಂಕಗಳುಳ್ಳ ನಾಟಕವನ್ನು ಬರೆದಿರುವನು. ಇವನ ಕವಿತಾ ಧಾಟಿಯನ್ನು ಪರಿಶೀಲಿಸಿದರೆ ಶ್ರೀಹರ್ಷನ ನಾಗಾನಂದ ಮೊದಲಾದ ರೂಪಕಗಳಿಗಿಂತ ಯಾವವಿಧದಲ್ಲಿಯೂ ಕಡಿಮೆಯಾಗಿರುವಂತೆ ತೋರುವುದಿಲ್ಲ.

ಲೋಕಹಿತೈಷಿಯಾದ ನಾರದ ಮತ್ತು ಕೃಷ್ಣರಸಂಚಿಗೆ ಒಳಪಟ್ಟ ಸಕಲಕಲಾಭಿಜ್ಞನಾದ ಭದ್ರನಟನೆಂಬ ಗಾಯಕನೋರ್ವನು ಪ್ರದ್ಯುಮ್ನ, ಗದ, ಸಾಂಬರೊಡನೆ ವೇಷಾಂತರದಿಂದ ವಜ್ರಪುರಕ್ಕೆ ಬಂದು ರಾಜನಮಗಳಾದ ಪ್ರಭಾವತಿಗೆ ಸಂಗೀತರಾಸ್ವವನ್ನು ಕಲಿಸುತ್ತ, ಒಂದಾನೊಂದುದಿವಸ ಅನುಪಮಸುಂದರನಾದ ಪ್ರದ್ಯುಮ್ನನ ಚಿತ್ರಪಟವನ್ನು ಪ್ರಭಾವತಿಗೆ ತೋರಿ, ಅವಳನ್ನು ಸೌಂದರ್ಯಮುಗ್ಧಳನ್ನಾಗಿಮಾಡಿ, ಪ್ರದ್ಯುಮ್ನನು ಪ್ರಭಾವತಿಯನ್ನು ನೋಡಲು ರಂಭಾಭಿಸರಣವೆಂಬ ರೂಪಕವನ್ನು ಕಲ್ಪಿಸಿ, ಇವರಿಬ್ಬರಿಗೂ ಗಾಂಧರ್ವವಿವಾಹವಾದನಂತರ ಪ್ರಭಾವತಿಯಕೋರಿಕೆಯಂತೆ ತನ್ನೊಡನೆ ಕರೆತಂದಿದ್ದ ಗದ ಮತ್ತು ಸಾಂಬರಿಗೆ ಚಂದ್ರಾವತಿ ಮತ್ತು ಗುಣವತಿಯರ ಪಾಣಿಗ್ರಹಣವನ್ನು ಮಾಡಿಸಿದನಂತರ ಸಂಧಿಸಿದ ಕೊಳಗುಳದಲ್ಲಿ ದಾನವೇಂದ್ರನಾದ ವಜ್ರನಾಭನು ಪ್ರದ್ಯುಮ್ನನಿಂದ ಹತನಾಗಲು ನಾರದ ಕೃಷ್ಣರೆಲ್ಲರೂ ಸೇರಿ ಪ್ರದ್ಯುಮ್ನನಿಗೆ ಪಟ್ಟಾಭಿಷೇಕವನ್ನುಮಾಡಿ ಸಂತಸಗೊಂಡರೆಂಬುದೇ ಕಥಾವಸ್ತು. ಇದನ್ನು ಹರಿವಂಶದಿಂದ ಆರಿಸಿಕೊಂಡಿರುವನು. ಮಾದರಿಗಾಗಿ ಕೆಲವನ್ನು ಬರೆಯುವೆವು.

ಈ ನಾಟಕದ ಕಥಾನಾಯಕನಾರೆಂಬವಿಚಾರದಲ್ಲಿ ಚರ್ಚೆಗೆ ಅವಕಾಶವಿಲ್ಲ ದಂತೆ:—

ಭರತಜಲಧಿಕರ್ಣಧಾರಃ ಪ್ರಬಂಧಾ ಯದುಕ್ಷ್ಮಾಪತಿ
ಸ್ತ್ರಿಭುವನವಿಜಯಾ ಮುರಾರೇಃ ಕುಮಾರಃ ಸ್ಮರೋ ನಾಯಕಃ ೧—೫

ಎಂದು ಸೂತ್ರಧಾರನೇಹೇಳಿಕೊಂಡಿರುವನು.

ವಸಂತಸಮಯವರ್ಣನ:—

ಚೂತೇಚೂತೇ ಪರಭೃತರವೈಃ ಕಲ್ಪ್ಯತೇ ಕಾತರಶ್ರೀಃ
ಸನ್ನಹ್ಯಂತೇ ವಿಜಯಕರಿಣಶ್ಚಂದನಾದ್ರೇಃ ಸಮೀರಾಃ
ಆವಿರ್ಗಂಧಂ ದಧತಿ ತರವೋಽಪ್ಯಸ್ತ್ರಜಾಲಂ ಸಮಂತಾ
ದುದ್ಯುಂಗ್ತೇ ತನ್ಮಧುಸಹಚರೋ ಜೇತುಮುರ್ವೀಂ ಮನೋಭೂಃ॥ ೧—೬

ಭದ್ರನಟನು ಪ್ರಭಾವತಿಗೆ ಪ್ರದ್ಯುಮ್ನನಂವರ್ಣಿಸುವುದು.

ಅಸ್ತ್ರ ತ್ರಿಲೋಕ ಮಹಿತಾನ್ಪಯಲಬ್ಧಜನ್ಮಾ
ಕಶ್ಚಿದ್ಯುವಾ ಭುಜಕದರ್ಧಿತವೈರಿಲೋಕಃ
ಶಂಸಂತಿ ಯಂ ಯುವತಯಃ ಸಮವೇಕ್ಷ್ಯ ಸಾಕ್ಷಾತ್
ಸೌಂದರ್ಯಸಾರನದನಾಂಗಮನಂಗಮೇವ ॥ ೨—೭

ಸೌಂದರ್ಯರಾಶಿರಖಿಲೋಽಪಿ ಚರಾಚರೇಷು
ಪಲ್ಯಯೋ ಬಭೂವ ಪರಮಾಣುರಮುಷ್ಯ ಸೃಷ್ಟ್ಯೌ
ನೋ ಚೇದಸಾವಿವ ಜಗತ್ರಯಮೋಹನ ಶ್ರೀಃ
ಸೃಜ್ಯೇತ ಕಶ್ಚಿದಪರೋಽಪಿ ಚ ತೇನ ಧಾತ್ರಾ ॥ ೨—೧೨

ವಿರಹಿಯವರ್ಣನ:—

ಹುತಾಶನಸ್ತಿ ಮೇ ಪರ್ತ ವಪುಷಿ ಹಂತ ಚಂದ್ರಾತಪ'
ಶನ್ಯೈಃ ಕ್ರಕಚತಿ ಸ್ಪರ್ಧ ಕಮಲಿನೀತರಂಗಾನಿಲಂ
ವಿಹಾರಶುಕಮಂಡಲಃ ಶ್ರವಣಶೂಲತಿ ವ್ಯಾಹರಂ
ಸ್ತಥಾ ವಿಷಸಮರ್ಪಣತ್ಯಹಹ' ಚಂದನಾಲೇಪನಂ ॥ ೪—೧೧

ಅಹಹ! ನನ್ನ ಶರೀರದಮೇಲೆಬೀಳುವ ಹಿಮಕಿರಣಗಳು ಅಗ್ನಿಯಂತೆಯೂ, ಪದ್ಮಕಾಸಾರದಮೇಲೆ ಮೆಲ್ಲಗೆ ಬೀಸುತ್ತ ಬರುವ ತಂಗಾಳಿಯು ತಗುಲಿದರೆ ಗರಗಸದಂತೆಯೂ, ವಿಹರಿಸುತ್ತಿರುವ ಗಿಳಿವಿಂಡುಗಳ ಕಲಕಲರವವು ಕಿವಿಗಳಿಗೆ ಭರ್ಜಿಯಿಂದ ಇರಿಯಲ್ಪಟ್ಟಂತೆಯೂ, ಶರೀರಕ್ಕೆ ಹಚ್ಚಿದ ಶ್ರೀಗ್ರಂಧಲೇಪನವು ವಿಷಮಯವಾಗಿಯೂ ತೋರುವುದು.

ಮದನೋ ಮನ್ಮಥೋ ಮಾರಃ ಪ್ರದ್ಯುಮ್ನೋ ಮಾನಕೇತನಃ ॥ ಇತ್ಯಮರಃ

ಹೋಪದೇವ

ಇವನು ಕ್ರಿ. ಶ. ೧೩ನೆಯ ಶತಮಾನದಲ್ಲಿ ದೌಲತಾಬಾದಿನಲ್ಲಿ ಆಳಿದ ಹೇಮಾದ್ರಿಯ ಸಭಾಪಂಡಿತನಾಗಿದ್ದನು. ಇವನು 'ಮುಗ್ಧಬೋಧ' ಎಂಬ ಕಾವ್ಯವನ್ನೂ, ಕವಿಕಲ್ಪದ್ರುಮವೆಂಬ ಮತ್ತೊಂದು ಗ್ರಂಥವನ್ನೂ ಬರೆದಿರುವನು. ಇದರಲ್ಲಿ ಸರ್ವಧಾತುಗಣಗಳೂ ಶ್ಲೋಕರೂಪದಲ್ಲಿ ಬರೆಯಲ್ಪಟ್ಟಿರುವುವು.

ಪ್ರಾಣಕರಸೂನು

ಇವನು ಪ್ರಾಣಕರನ ಮಗನೆಂಬುದು ಹೊರ್ತು ಮತ್ತಾವುದೂ ತಿಳಿಯುವಂತಿಲ್ಲ. ಇವನ ನಿಜವಾದ ಹೆಸರಾವುದೆಂಬುದು ತಿಳಿಯದು. ಇವನು ಮೇದಿನೀ ಎಂಬ ಕೋಶವನ್ನು ಬರೆದಿರುವನು. ಇವನ ಕಾಲದ ವಿಚಾರವಾಗಿ ಡಾ|| ಭಂಡಾರಕರವರು ಸಾಯಣಾಚಾರ್ಯರ ಅನಂತರದವನೆಂದೂ ಕ್ರಿ. ಶ. ೧೫ನೆಯ ಶತಮಾನದವನೆಂದೂ ಹೇಳುವರು. ಕೆಲವರು ಮಲ್ಲಿನಾಥನಿಗಿಂತಲೂ ಹಿಂದಲವನಾಗಿರಬೇಕೆಂದು ಅಭಿಪ್ರಾಯಪಡುವರು. ಮಲ್ಲಿನಾಥನ ವ್ಯಾಖ್ಯಾನಗಳಲ್ಲಿ ಮೇದಿನೀ ಕೋಶದ ಶಬ್ದಗಳು ದೊರೆಯುವುವಾದುದರಿಂದ ಇವನು ಕ್ರಿ. ಶ. ೧೩ನೆಯ ಶತಮಾನದವನೆಂದರೆ ತಪ್ಪಾಗದು.*

ಕೃಷ್ಣನಂದ

ಇವನು ಕಾಯಸ್ಥ ಬ್ರಾಹ್ಮಣನು. ಸಂಧಿವಿಗ್ರಹಕನು. ಇವನು ಕ್ರಿ. ಶ. ೧೩ನೆಯ ಶತಮಾನದವನು. ಸಾಹಿತ್ಯದರ್ಪಣಕಾರನು ಇವನ ಶ್ಲೋಕಗಳನ್ನು ಉದಾಹರಿಸಿಕೊಂಡಿರುವುದಲ್ಲದೆ ನೈಷಧಕಾವ್ಯಕ್ಕೆ ವ್ಯಾಖ್ಯಾನವನ್ನು ಬರೆದಿರುವುದಾಗಿ ಹೇಳಿಕೊಂಡಿರುವನು. ಇವನು ಸಹೃದಯಾನಂದವೆಂಬ ಕಾವ್ಯವನ್ನು ಒರೆದಿರುವನು. ಇದರಲ್ಲಿ ಪುರಾಣಪ್ರಸಿದ್ಧನಾದ ನಳಮಹಾರಾಜನ ಕಥೆಯು ವರ್ಣಿತವಾಗಿರುವುದು.§ ಪ್ರಕೃತ ಅಚ್ಚಾಗಿ ದೊರೆತಿರುವದು ಐರು ಸರ್ಗಗಳುಮಾತ್ರ. ದಮಯಂತೀ ಪರಿಣಯ ಪೂರ್ತಿಯಾಗಿ ಹೇಳಿದೆ. ಇದಕ್ಕೆ ಶತಕೋಪಾಚಾರ್ಯರ ವ್ಯಾಖ್ಯಾನವು ಇರುವುದು ಇದರ ಕೆಲವು ಶ್ಲೋಕಗಳನ್ನು ಬರೆಯುವೆವು.

---

* Descriptive Catalogue of Sanskrit manuscripts Tanjore Library P. 3876 Vol. IX

§ History of classical Sanskrit Literature P. 48

ಹಂಸವು ಹೇಳಿದ ದಮಯಂತಿಯ ಸೌಂದರ್ಯಮುಗ್ಧನಾದ ನಲೋನ್ಮಾದ ವರ್ಣನೆ:—

ತವ ನಿಪೀಯ ಸಖೇ ವಚನಾಮೃತಂ
ಶ್ರವಣಯುಗ್ಮಮಭೂನ್ಮಮ ಶೀತಲಂ
ದಹನಧಿ ಪ್ರಸಭಂ ದಹತೀವ ಮೇ
ಹೃದಯಮರ್ಮ ಕಥಂ ಸ್ಮರಮುರ್ಮುರಃ ॥ ೪-೧೪

ದಹತು ನಾಮ ಸಖೇ ಮಲಯಾನಿಲಃ
ಕಬಲನಾತ್ಪಣಿನಾಂ ವಿಷದೂಷಿತಃ
ಅಮೃತದೀಧಿತಿರೇಷ ಸುಧಾಮಯೈ
ರಪಿ ಕರೈರ್ದಹತೀತಿ ಮಹಾದ್ಭುತಂ ॥ ೪-೧೫

ಧ್ರುವಮಿಯಂ ಮಲಯಾನಿಲಚಾರಿಣಾಂ
ಫಣಭೃತಾಂ ಶ್ವಸಿತೋರ್ಮಿಪರಂಪರಾ
ನಪುನರೇಷ ಸ ದಕ್ಷಿಣಮಾರುತ
ಸ್ತನುಭೃತಾಂ ವಿತನೋತಿ ಸುಖಾನಿ ಯಃ ೪-೧೬

ದಹತಿಮೇ ಹೃದಯಂ ಹಿಮದೀಧಿತಿ
ಸ್ತುದತಿಚಂದನಶೈಲಸಮಿಾರಣಃ
ದಲಯತಿ ಪ್ರಸಭಂ ಪಿಕಪಂಚಮಃ
ಕಿಮನಲಂಬ್ಯ ಸಖೀಽಸ್ತು ಸಖೋದಯಃ ॥೪-೧೭

ಸ್ಮೃತಿಭುವೋ ಯದಿ ಪಂಚ ಶಿಲೀಮುಖಾ
ಯದಿ ಚ ಕೇ ಕುಸುಮೈರುಪಪಾದಿತಾಃ
ಅವಿರತಂ ನಿಪತಂತಿ ಸಹಸ್ರಶಃ
ಕಥಮಮಿಾ ಹೃದಯಂ ದಲಯಂತಿ ಚ ॥ ೪-೧೮

ಶಶಿನಮಂಸತಟೇ ವಿನಿವೇಶ್ಯ ವಾ
ನಯ ಸಖೇ ಚರಮಾಚಲಕಂದರಂ
ಕವ ವಿರಂಚಿವಿಮಾನಕಥುರ್ಯತಾ
ಮುಪಗತಸ್ಯ ಭವಿಷ್ಯತಿ ಕಃ ಶ್ರಮಃ ॥ ೪-೧೯

ಸ್ವಯಂವರಾವಸರೇ:—

ಅಭ್ಯಾಶಭಾಜೋಽಪಿ ನೃಪಾನಪಾಸ್ಯ
ಸಾ ನೈಷಧೇ ಕೇವಲಮುತ್ಸುಕಾಸೀತ್
ಗ್ರಹೇಷು ಸತ್ಸ್ವಪ್ಯಪರೇಷು ನೂನಂ
ವಿಲೋಕತೇ ಚಂದ್ರಮಸಂ ಚಕೋರೀ ॥ ೫-೫೨

ತಾವಂತಿಕಾದ್ದೂರತರಂ ಪ್ರಯಾಂತೀಂ
ನ ಕೇವಲಂ ದೃಷ್ಟಿರನು ಪ್ರಯಾತಾ
ಶ್ಚಾಸೋಷ್ಮಣಾ ಮ್ಲಾನಮುಖಪ್ರಭಾಣಾಂ
ನೈಸರ್ಗಿಕೀ ಶ್ರೀರಪಿ ಸಾರ್ಥಿನಾನಾಂ ॥ ೫-೫೩

ಕೇಶವ †

ಇವನು ಚೋಳದೇಶದವನು. ಬ್ರಾಹ್ಮಣನು. ಚೋಳರಾಜನಾದ ಕುಲೋತ್ತುಂಗನ ಮಗ ರಾಜರಾಜನ ಆಶ್ರಯದಲ್ಲಿದ್ದವನು. ಕುಲೋತ್ತುಂಗನ ಮಗ ರಾಜರಾಜನೆಂದು ಕ್ರಿ. ಶ. ೧೨ ಮತ್ತು ೧೩ನೆಯ ಶತಮಾನಗಳೆರಡರಲ್ಲಿಯೂ ಒಬ್ಬೊಬ್ಬರು ದೊರೆಯುವರು.§ ವ್ಯಾಖ್ಯಾನಕಾರರಾದ ಮಲ್ಲಿನಾಥನೂ, ಇವನ ಹಿಂದಲವನಾದ ಅರುಣಾಚಲನಾಥನೂ, ಮಹಾಕಾವ್ಯಗಳಿಗೆ ವ್ಯಾಖ್ಯಾನವನ್ನು ಬರೆದಿರುವುದರಲ್ಲಿ ಮಲ್ಲಿನಾಥನು, ರಘುವಂಶದ ಮೊದಲನೆಯ ಸರ್ಗದ ನಾಲ್ಕನೆಯ ಶ್ಲೋಕಕ್ಕೆ ವ್ಯಾಖ್ಯಾನವನ್ನು ಬರೆಯುವಾಗ "ವಜ್ರಾಂತ್ಯಸ್ತ್ರೀಕುಲಿಶಶಸ್ತ್ರಯೋಃ ॥ ಮಣಿಭೇದೇ ರತ್ನಭೇದೇ ಇತಿಕೇಶವಃ ಎಂದೂ, ಅರುಣಾಚಲನಾಥನು ಕುಮಾರ ಸಂಭವಕ್ಕೆ ಬರೆದಿರುವ 'ಪ್ರಕಾಶಿಕಾ'ಎಂಬ ವ್ಯಾಖ್ಯಾನದಲ್ಲಿ 'ತ್ರಿಷ್ವತ್ರೋಪಯುಕ್ತತಃ ಇತಿಕೇಶವ ಸ್ವಾಮಿವಚನಾದುಪಯುಕ್ತಾದನ್ಯ ದಘಿದಾನಸ್ಯಶೇಷಶಬ್ದಸ್ಯ ವಿಶೇಷಲಿಂಗತ್ವಮಮು ಸೇಯಂ ಎಂದು ಹೇಳಿರುವರು. ಇವರು ಕ್ರಿಸ್ತಶಕ. ಹದಿಮೂರನೆಯ ಶತಮಾನಾನಂತರದಲ್ಲಿದ್ದವರು. ಇವರಿಗಿಂತ ಕೇಶವನು ಪ್ರಾಚೀನನಾಗಿರಬೇಕು ಎಂದರೆ ಕೇಶವನು ಕ್ರಿ. ಶ. ೧೩ನೆಯ ಶತಮಾನಕ್ಕೆ ಸೇರಿದವನೆಂದು ಊಹಿಸಬಹುದಾಗಿದೆ. ಇವನು "ನಾನಾರ್ಥಾರ್ಣವಸಂಕ್ಷೇಪ" ಎಂಬ ಕೋಶಗ್ರಂಥವನ್ನು ಬರೆದಿರುವನು. ಗ್ರಂಥಾಂತ್ಯದಲ್ಲಿ "ರಾಜರಾಜೀಯಾಭಿಧಾನಾಮಾ ನಾನಾರ್ಥಾರ್ಣವ ಸಂಕ್ಷೇಪಃ" ಎಂದು ಹೇಳಿರುವುದರಿಂದ ನಾನಾರ್ಥಾರ್ಣವಸಂಕ್ಷೇಪಗ್ರಂಥಕ್ಕೆ ರಾಜರಾಜೀಯವೆಂಬ ಬೇರೊಂದು ಹೆಸರೆಂದೂ ರಾಜರಾಜನ ಆಶ್ರಯದಲ್ಲಿದ್ದು ಬರೆದುದರಿಂದ ಅದಕ್ಕೆ ರಾಜರಾಜೀಯವೆಂದು ಕರೆದಿರಬಹುದಾಗಿ ಭಾಸವಾಗುತ್ತದೆ. ಇದು ಆರು ಖಂಡಗಳಾಗಿ ವಿಭಾಗಿಸಲ್ಪಟ್ಟು ಶಬ್ದಗಳ ಲಿಂಗ ವಿವೇಚನೆಯು ಮಾಡಲ್ಪಟ್ಟಿರುವುದು. ಗ್ರಂಥವು ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಕಾಂಡಗಳೆಂದು ವಿಭಾಗಿಸಲ್ಪಟ್ಟಿರುವುದಲ್ಲದೆ ಪ್ರತಿಯೊಂದುಕಾಂಡವೂ ಪುಂ ಸ್ತ್ರೀ ನಪುಂಸಕ ವಾಚ್ಯ ನಾನಾಲಿಂಗಾಧ್ಯಾ

† "ಕಲ್ಪದ್ರುಃ" ಎಂಬ ಕೋಶವನ್ನು ಬರೆದ ಕೇಶವನು ಇವನಲ್ಲ.

§ History of Cholas written in tamil by Mr. T. A. Gopinatha Rao Superintendent of Archaeology Travancore.

ಯಗಳೆಂದು ಐದು ಅಧ್ಯಾಯಗಳಾಗಿ ಪ್ರತ್ಯೇಕಿಸಲ್ಪಟ್ಟಿರುವುವು. ಅಮರಕೋಶವೇ ಮೊದಲಾದ ಇತರಕೋಶಗಳಲ್ಲಿ ದೊರೆಯದ ಶಬ್ದಗಳು ಅನೇಕಾರ್ಥಗಳೊಡನೆ ಇದರಲ್ಲಿ ವಿವರಿಸಲ್ಪಟ್ಟಿವೆ. ಪ್ರಕೃತದೊರೆತಿರುವುದು ದ್ವ್ಯಕ್ಷರಕಾಂಡ ಪೂರ್ತಿಯಾಗಿ. ಉಳಿದ ಮೂರುಕಾಂಡಗಳು ಕಾಲಕ್ರಮದಲ್ಲಿ ಮುದ್ರಿಸಲ್ಪಡುವುವಾಗಿ ತ್ರಿವೇಂದ್ರಂ ಮ|| ರಾ|| ಶ್ರೀಗಣಪತಿಶಾಸ್ತ್ರಿಗಳು ಹೇಳಿರುವರು.

ವೆಂಕಟನಾಥ

ಈತನು ಅನಂತಸೂರಿಯ ಮಗನು. ಪುಂಡರೀಕ ಸೋಮಯಾಜಿಯ ಮುಮ್ಮಗನು. ಇವನ ತಾಯಿಯ ಹೆಸರು ತೋತಾರಂಬಾ. ಕಾಂಚೀ ಪುರದ ಬಳಿಯಲ್ಲಿರುವ ತೂಪ್ಪಲ್ ಎಂಬ ಅಗ್ರಹಾರವು ಇವನ ಜನ್ಮಭೂಮಿ.*

ಕಾಲ:—ಈತನು ಶಾಲಿವಾಹನ ಶಕ ೧೫೯೦ ಅಥವಾ ಕ್ರಿಶ ೧೩೬೮ ಕಲಿ ೪೩೭೧ ಕ್ಕೆ ಸಲ್ಲುವ ವಿಭವ ಸಂವತ್ಸರದ ಪುರಟಾಶಿಮಾಸ (ಸೆಪ್ಟಂಬರು) ಬುಧವಾರ ಶ್ರವಣ ನಕ್ಷತ್ರದಲ್ಲಿ ಜನ್ಮಗ್ರಹಣಮಾಡಿದನು § ಇವನು ತನ್ನ ಇಪ್ಪತ್ತನೆಯ ವರ್ಷದ ವೇಳೆಗೆ ಈತನ ಸೋದರಮಾವಂದಿರಾದ ಆತ್ರೇಯ ರಾಮಾನುಜರ ಬಳಿ ವೇದ ವೇದಾಂಗ ತರ್ಕವಿಾವಾಂಸಾದಿ ಸಕಲಶಾಸ್ತ್ರಗಳನ್ನೂ ‡ ಕಲಿತು ಸಕಲ

ಗುರು ಪರಾಂಪರಾ ಪ್ರಭಾವ. ಪು ೧೧೭—೧೧೮

§ B B. R. A S. vol P 277. ದೇಶಿಕರ ಜನ್ಮಸಂವತ್ಸರವು ವಿಭವವೆಂದು ಕೆಲವರೂ, ಕೆಲವರು ಶುಕ್ಲಸಂವತ್ಸರವೆಂದೂ ಹೇಳುವರು ಈಚೆಗೆ ಹೊಸದಾಗಿ ಆಚ್ಯುಗಿರುವ ವಡಗಲೆ ಸಂಪ್ರದಾಯದ ಗುರುಪರಂಪರಾಪ್ರಭಾವದಲ್ಲಿಯೂ, ಶುಕ್ಲಸಂವತ್ಸರವೆಂದಿದೆ ಆದರೆ ಮಣಿಪ್ರವಾಳದಲ್ಲಿಯೂ, ವೈಭವಪ್ರಕಾಶಿಕೆಯಲ್ಲಿಯೂ, ಶ್ರೀನಿವಾಸ ಸೂರಿಯವ್ಯಾಖ್ಯಾನದಲ್ಲಿಯೂ, ‖(ಪುಟ ೨೧) ವಿಭವವೆಂದೆ ಹೇಳಿದೆ. ಅಲ್ಲದೆ ಆಚಾರ್ಯದಶಕ, ಆಚಾರ್ಯ ದ್ಯಾತ್ರಿಂಶತ್, ಆಚಾರ್ಯ ಶತಕದಲ್ಲಿಯೂ ವಿಭವವೆಂದೇ ಹೇಳಿದೆ ದೇಶಿಕರ ಅಷ್ಟೋತ್ತರ ಶತನಾಮಾವಳಿಯಲ್ಲಿಯೂ "ವಿಭವಾಬ್ದ ಸಮುತ್ಪನ್ನಃ" ಎಂದಿದೆ. ಹೇಗೂ ವಿಭವ ಸಂವತ್ಸರವೆಂದೇ ಸಿದ್ಧಾಂತವಾಗುತ್ತದೆ.

‡ "ವಿಂಶತ್ಯಬ್ದೇವಿಶ್ರುತನಾನಾ ವಿಧವಿದ್ಯಃ" ಸಂಕಲ್ಪಸೂರ್ಯೋದಯ ಶ್ಲೋ ೧೧೫
ಜ್ಯೋತಿಷ್ಟೋಮಂದಃ ಶಬ್ದಶಾಸ್ತ್ರಪ್ರವೀಣಃ ಕಾವ್ಯೇ ಶ್ರೀಮದ್ರೂಪಕಾಲಂಕೃತಿಜ್ಞಃ
ಮಾನಾಂಸಾಯಾಃ ಬ್ರಹ್ಮಕರ್ಮಾನುಗಾಯಾಃ ಸೃಷ್ಟ್ವಾ ಸಾಕ್ಷಾತ್ಸರ್ವತಂತ್ರಸ್ವತಂತ್ರಃ
ಸಾಂಖ್ಯೇಯೋಗೇಃ ಭಾಟ್ಟತಂತ್ರೇಗುರೂಕ್ತೌ ಶೈವೇಜ್ಞೇಸಿ ಶಂಕರೇಭಾಸ್ಕರೇಚ
ಶಾಸ್ತ್ರೇ ಬೌದ್ಧೇಯಾದವೇ ಗರ್ವಿತಾನಾಂ ಪ್ರತ್ಯಖ್ಯಾತಾ ಸರ್ವತಂತ್ರ ಸ್ವತಂತ್ರಃ
ಭರದ್ವಾಜ ಶಾಂಡಿಲ್ಯ ಹಾರೀತಮುಖ್ಯ ಸ್ಮೃತಿಸ್ತೋಮ ಸೂಕ್ಷ್ಮಾರ್ಥನಿರ್ಣೀತವಿದಕ್ಷಃ

ವಿದ್ಯಾಧೀತ ಸಂಪನ್ನನಾಗಿ ತಿರುಮಂಗೈ ಎಂಬ ಕನ್ಯೆಯನ್ನುವರಿಸಿ ಗೃಹಸ್ಥಾಶ್ರಮಿಯಾಗಿ ಕಂಚಿಯಲ್ಲಿವಸಿಸುತ್ತಿದ್ದು, ಅನಂತರ ಯಾತ್ರಾರ್ಥಿಯಾಗಿ ದಿವ್ಯದೇಶ ಕ್ಷೇತ್ರಗಳನ್ನು ಸುತ್ತಲಾರಂಭಿಸಿಮೊದಲು ತಿರುವಹೀಂದ್ರಪುರಕ್ಕೆ ಹೋಗಿ ‡ ಅಲ್ಲಿ ಗರುತ್ಮಂತನನ್ನೂ ಸಕಲ ವಿದ್ಯಾಪ್ರದಾತನಾದ ಹಯಗ್ರೀವನನ್ನೂ ಸ್ತುತಿಸಿ ವರಪ್ರಸಾದಲಬ್ಧನಾಗಿ ಹೊರಟು ಹಾಗೆಯೇ ಸುತ್ತುತ್ತ ಕ್ರಿ. ಶ ೧೯೧೧—೧೩ ರಲ್ಲಿ ಹಯಗ್ರೀವಸ್ತೋತ್ರ ಗರುಡಪಂಚಾಶತ್ ಎಂಬ ಸ್ತೋತ್ರಗಳನ್ನು ತಮ್ಮ ಅಭಿಮಾನ ದೇವತೆಗಳಮೇಲೆ ಬರೆದುದಲ್ಲದೆ ಪ್ರಾಕೃತದಲ್ಲಿ ಅಚ್ಯುತಶತಕವನ್ನೂ ಅನಂತರ ದೇವನಾಯಕ ಪಂಚಾಶತ್, ರಘುವೀರಗದ್ಯ, ಗೋಪಾಲವಿಂಶತಿ ಮೊದಲಾದವುಗಳನ್ನು ಬರೆದು ಉತ್ತರಕ್ಕೆ ಹೊರಟು ತಿರುಪತಿಯನ್ನು ಸಾರ್ದು ಅಲ್ಲಿ ದಯಾಶತಕವೇ ಮೊದಲಾದ ಗ್ರಂಥಗಳನ್ನು ಬರೆದನು. ಇವುಗಳಲ್ಲದೆ ಭೂಸ್ತುತಿ. ಶ್ರೀಸ್ತುತಿ. ದಶಾವತಾರಸ್ತೋತ್ರ, ತತ್ವಮುಕ್ತಾಕಲಾಪ, ನ್ಯಾಯಸಿದ್ಧಾಂಜನ, ಸೇಶ್ವರಮೀಮಾಂಸಾ, ಸಚ್ಚರಿತ್ರರಕ್ಷಾದಿ ಗ್ರಂಥಗಳನ್ನೂ, ಪ್ರಬೋಧಚಂದ್ರೋದಯವನ್ನು ನೋಡಿ. ವಿಶಿಷ್ಟಾದ್ವೈತ ಮತ ತತ್ವಬೋಧಕವಾದ ಸಂಕಲ್ಪಸೂರ್ಯೋದಯವೆಂಬ ನಾಟಕವನ್ನೂ, ಡಿಂಡಿಮಕವಿಕೃತ ರಾಘವಾಭ್ಯುದಯ ಕಾವ್ಯವನ್ನುನೋಡಿ ಯಾದವಾಭ್ಯುದಯ ಕಾವ್ಯವನ್ನೂ, ಮೇಘ ಸಂದೇಶವನ್ನುನೋಡಿ ಹಂಸಸಂದೇಶವನ್ನೂ ಬರೆದುದಲ್ಲದೆ ಪಾದುಕಾ ಸಹಸ್ರ, ಗರುಡದಂಡಕ, ಶಾರೀರಕಭಾಷ್ಯ, ದ್ರಮಿಡೋಪನಿಷತ್ಸಾರ, ಗೀತಾರ್ಥಸಂಗ್ರಹರಕ್ಷಾ, ರಹಸ್ಯತ್ರಯಸಾರ, ಅಧಿಕರಣಸಾರಾವಳಿ· ತಾತ್ಪರ್ಯಚಂದ್ರಿಕಾ, ತತ್ವಟೀಕಾಮೊದಲಾದ ಎಷ್ಟೋ ಗ್ರಂಥಗಳನ್ನು ಬರೆದುದಲ್ಲದೆ ತಮಿಳಿನಲ್ಲಿಯೂ ಅನೇಕ ಗ್ರಂಥಗಳನ್ನುಬರೆದಿರುವನು. ಮಣಿಪ್ರವಾಳ ಮತ್ತು ಪರಮತಭಂಗ, ಶತದೂಷಿಣೀ ಮೊದಲಾದ ಗ್ರಂಥಗಳು ತಮಿಳಿನಲ್ಲಿ ಬರೆಯಲ್ಪಟ್ಟಿರುವುವು. ಈ ಸಮಯದಲ್ಲಿಯೇ ಬರೆದುದಾಗಿಹೇಳುವ ಸಮಸ್ಯಾಸಹಸ್ರ ವೆಂಬುದು ಈಗ ಉಪಲಬ್ಧವಿಲ್ಲ. ಈ ಸಮಯದಲ್ಲಿ ಓರುಗಲ್ಲಿನಲ್ಲಿ ಆಳುತ್ತಿದ್ದ ಪಾಳ್ಯಗಾರ ಸರ್ವಜ್ಞಸಿಂಹನಾಯಕನು ವೆಂಕಟನಾಥನ ವಿದ್ವತ್ಪ್ರಭೆಯನ್ನು ಕೇಳಿ ಶ್ರೀ ವೈಷ್ಣವಮತ ತತ್ವ ನಿರ್ಧಾರಣವನ್ನುಂಟು ಮಾಡಿಕೊಡಬೇಕೆಂದು ಕೇಳಿಕೊಂಡುದಕ್ಕೆ ಆಚಾರ್ಯ

ಪುರಾಣಾ ಣಮಾದಿಷ್ಟ ಸಾಧಾರಣ ಶ್ರೀ ಸುತೋಭಾತಿ ಲೋಕೇಷ ನಂತಾರ್ಯಸೂರೇಃ ॥
ಚಟುರ್ವರ್ಗಚರ್ಚಾ ದ್ಯನೇಕ ಪ್ರಕಾರ ತ್ರಯೀಲಕ್ಷಣೋಚ್ಚಾರಣೇ ವ್ಯಾಸಕಲ್ಪಃ
ತದಾಕಲ್ಪಸೂತ್ರ ಪ್ರಯೋಗಾದ್ಯಭಿಜ್ಞೋ ಜಯತ್ಯನ್ನ ಶಂಸರ್ಷತಂತ್ರಸ್ವತಂತ್ರಃ ॥
ಸಪ್ತತಿರತ್ನಮಾಲಿಕೆ)

ಆತ್ರೇಯರಾಮಾನುಜರಿಗೆ. " ಅಪ್ಪುಳ್ಳಾರ್ " ಎಂದೂ ಹೆಸರು

‡ ತಿರುವಹೀಂದ್ರಪುರದಲ್ಲಿ ಸುಮಾರು ೧೭ ವರ್ಷಗಳು ಇದ್ದು ದಾಗಿ ಹೇಳಿನೆ.

(Arcot Gazetteer P. 321)

ದೇಶಿಕನು ಸಂತುಷ್ಟನಾಗಿ ಸುಭಾಷಿತನೀವೀ ತತ್ವಸಂದೇಶ, ರಹಸ್ಯಸಂದೇಶವೆಂಬ ಗ್ರಂಥಗಳನ್ನು ವ್ಯಾಖ್ಯಾನದೊಡನೆ ಬರೆದುಕಳುಹಿಸಿದನು. ಈತನು ಬರೆದಿರುವ ಸಣ್ಣ ಸಣ್ಣಸ್ತುತಿಗಳಲ್ಲಿ ಗೋಪಾಲವಿಂಶತಿ ಭೂಸ್ತುತಿ. ವರದಪಂಚಾಶತಿ, ಪ್ರಾರ್ಥನಾಷ್ಟಕ, ಹಯಗ್ರೀವಸ್ತುತಿ ಇವೇಮೊದಲಾದವು ಮುಖ್ಯವಾದವುಗಳು. ಈತನಿಗೆ ಕ್ರಿ ಶ. ೧೩೧೭ ರಲ್ಲಿ ಪುತ್ರೋತ್ಸವವಾಯಿತು. ಶಿಶುವಿಗೆ 'ವರದಾಚಾರ್ಯ'ಎಂದು ನಾಮಕರಣವಾದುದು. ಈತನು ವಿಶಿಷ್ಟಾದ್ವೈತಮತ ಪ್ರಸಾರಕ್ಕಾಗಿಯೇ ತನ್ನ ಜೀವಮಾನವೆಲ್ಲವನ್ನೂ ಕಳೆದು ಕ್ರಿ ಶ. ೧೩೬೯ ರಲ್ಲಿ ತನ್ನಂತಿರುವ ಶಿಲಾಪ್ರತಿಮೆಯೊಂದನ್ನು ಮಾಡಿ ಶಿಲ್ಪಾರ್ಥಸಾರ ಸಂಗ್ರಹವೆಂಬ ಗ್ರಂಥವನ್ನುಬರೆದು ಕ್ರಿ. ಶ. ೧೩೭೯ ರಲ್ಲಿ ಕೀರ್ತಿಶೇಷನಾದನು:—

ವೆಂಕಟನಾಥನ ಚರಮ ಶ್ಲೋಕವು ಹೀಗಿರುವುದು.

ಅಚ್ಛೇನ್ ಮೇಚಮಾರೇಗತವತಿತರಣೌವೃಷ್ಟಿಕಂಕೃತ್ತಿಕಕ್ಷೇ
ರಾಕಾಯಾಂವೆಂಕಟೇಶೋಯತಿನೃಪತಿಮತಂನರ್ವತಃಸ್ಥಾಪಯತ್ಸಾ.
ವೇದಾಂತಾಚಾರ್ಯ ನಾಮಾವಿರಚಿತವಿವಿಧಾನೇಕ ದಿವ್ಯಪ್ರಬಂಧಃ
ಶ್ರೀಶೈಲಾಧೀಶಘಂಟಾಕೃತಿವಪುರಭವದ್ವೇದಿಕೇಂದ್ರೋದಯಾಯಃ ॥

ಈತನಿಗೆ ತೂಪ್ಪಿಲ್ ಪಿಳ್ಳೈ, ವೆಂಕಟೇಶ, ಘಂಟಾವತಾರ, ಕವಿತಾರ್ಕಿಕಸಿಂಹ, ಸರ್ವತಂತ್ರಸ್ವತಂತ್ರ, ವೇದಾಂತಾಚಾರ್ಯ ನಿಗಮಾಂತಮಹಾದೇಶಿಕ, ವೇದಾಂತದೇಶಿಕ, ದೇಶಿಕರೆಂಬ ಉಪನಾಮಗಳು. ವೇದಾಂತದೇಶಿಕನೆಂಬ ರೂಢಿವಾಚಕದಲ್ಲಿ ವೆಂಕಟನಾಥನೆಂಬ ನಿಜವಾದ ಹೆಸರು ಅಂತರ್ಗತವಾಗಿ ಹೋಗಿದೆ.

ಆಚಾರ್ಯದೇಶಿಕನ ವೈಭವಚರಿತೆಯನ್ನು ಹೇಳುವ ಸಮಾರಂಭದಲ್ಲಿ ಚರ್ಚಾಸ್ಪದವಾದ ಚಾರಿತ್ರಿಕ ವಿಚಾರಗಳನೇಕಗಳು ಸಮಾವೇಶಗೊಂಡಿವೆ. ಅವುಗಳ ಸಾರಾಸಾರ ವಿವೇಚನೆಯ ಹೊರ್ತು ವೆಂಕಟನಾಥನ ಚರಿತೆಯು ಪೂರ್ಣವಾಗದು.

(೧) ವಿದ್ಯಾರಣ್ಯರ ಸಂಬಂಧ
(೨) ಕೃಷ್ಣಮಿಶ್ರರ ದರ್ಶನ
(೩) ಅಪ್ಪಯೋಭ್ಯತೀರ್ಥರವಾದ

(೧) ವಿದ್ಯಾರಣ್ಯರ ಸಂಬಂಧ:—

(ಅ) ಒಂದಾನೊಂದು ದಿವಸ ವೇದಾಂತದೇಶಿಕನು ಮಾರ್ಗವಶಾತ್ ತುಂಗಭದ್ರಾತೀರದಲ್ಲಿ ಒಂದು ನಗರ ಸಮೀಪದಲ್ಲಿರುವ ಭಗವತ್ಸನ್ನಿಧಿಯಲ್ಲಿರಲು ಆಗ ಬಾಲ್ಯದಿಂದಲೂ ಸಹಪಾಠಿಗಳಾದ ವಿದ್ಯಾರಣ್ಯರು ವೈರಾಗ್ಯದಿಂದ ಸಂನ್ಯಾಸಮಂ

ಕೊಂಡು ಗಂಗಾಯಾತ್ರೆಯನ್ನು ಮಾಡಬೇಕೆಂದು ಬಂದು ತೂಪ್ಪಿಲ್ಪಿಳ್ಳೆಯನ್ನು ಕಂಡು ಸಲ್ಲಾಪಾದಿಗಳನ್ನು ಮಾಡಿಕೊಂಡಿರಲು, ಸವಿಾಪನಗರದ ¡ರಾಜನು ತನ್ನ ಮಗಳಿಗೆ ಬ್ರಹ್ಮರಾಕ್ಷಸನು ಹಿಡಿದಿರುವನೆಂದೂ, ಯಾರಿಂದಲೂ ಬಿಡಿಸಲು ಸಾಧ್ಯವಾಗದೆ ಚಿಂತಾಕ್ರಾಂತನಾಗಿರುತ್ತಿದ್ದು ಯಾರೋ ಮಹಾತ್ಮರಿರ್ವರು ಬಂದಿರುವುದಾಗಿ ಕೇಳಿ ಅಲ್ಲಿಗೆ ಬಂದು ನಮಸ್ಕರಿಸಿ ಸ್ವಾವಿರ್! ತಾವು ಹೇಗಾದರೂ ಮಾಡಿ ನನ್ನ ಮಗಳಿಗೆ ಹಿಡಿದಿರುವ ಬ್ರಹ್ಮರಕ್ಷಸ್ಸನ್ನೋಡಿಸಿ ಕಾಪಾಡಿಕೊಡಬೇಕೆಂದು ಪ್ರಾರ್ಥಿಸುತ್ತಿರುವುದನ್ನು ಕೇಳಿ ವಿದ್ಯಾರಣ್ಯರು ರಾಜನ ಕೋರಿಕೆಯನ್ನು ನಡೆಯಿಸಿಕೊಡಬೇಕೆಂದು ತೂಪ್ಪಿಲ್ಪಿಳ್ಳೆಯನ್ನು ಪ್ರಾರ್ಥಿಸಿಕೊಂಡುದಕ್ಕೆ ತೂಪ್ಪಿಲ್ಪಿಳ್ಳೆಯು ಅನಭಿಮುಖರಾಗಿರುತಿರ್ದು ಬೃಂದಾವನವೇ ಮೊದಲಾದ ದಿವ್ಯದೇಶಗಳನ್ನು ಕುರಿತು ಪ್ರಯಾಣಮಾಡಿದರು. (ಗುರುಪರಂಪರಾಪ್ರಭಾವ ಪುಟ. ೧೩೧)

(ಆ) ಅನಂತರ ವಿದ್ಯಾರಣ್ಯರು ಆ ರಾಜಪುತ್ರಿಗೆ ಹಿಡಿದಿದ್ದ ಬ್ರಹ್ಮರಾಕ್ಷಸನನ್ನೋಡಿಸಿ, ವಿಜಯನಗರವನ್ನುಂಟುಮಾಡಿ, ತಾವು ರಾಜವಲ್ಲಭರಾಗಿರುತಿರ್ದು ತಮ್ಮ ಮಿತ್ರರಾದ ತೂಪ್ಪಿಲ್ಪಿಳ್ಳೆಯು ಉಂಛವೃತ್ತಿಯಲ್ಲಿರುವರೆಂಬುದನ್ನು ತಿಳಿದು ಕಡುನೊಂದು ತೂಪ್ಪಿಲ್ಪಿಳ್ಳೆಗೆ ಅಯ್ಯಾ! ನೀವು ಇಷ್ಟಪಟ್ಟರೆ ರಾಜನ ಬಳಿಗೆ ಕರೆಯಿಸಿಕೊಂಡು ತನ್ನ ನಿಚಾರದಲ್ಲಿ ರಾಜನು ತನ್ನ ಇಷ್ಟಾನುವರ್ತಿಯಾಗಿರುವಂತೆ ಮಾಡುವೆನು. ಈ ರೀತಿ ಶ್ರಮಪಡುವುದು ಅವಶ್ಯಕವಿಲ್ಲವೆಂದು ಕಾಗದವನ್ನು ಬರೆದುಕಳುಹಿದುದಕ್ಕೆ ದೇಶಿಕರು ಅದನ್ನೋದಿನೋಡಿ ಅದಕ್ಕೆ ಪ್ರತ್ಯುತ್ತರವಾಗಿ:—

" ಶಿಲಂಕಿಮನಲಾಭವೇದನಲಮಾದರಂಬಾಧಿತುಂ
ಪಯಃಪ್ರಸೃತಿಪೂರಕಂ ಕಿಮುನಧಾರಕೆಂಸಾರಸಂ
ಅಯತ್ನಮಲಮುಲ್ಲಕಂ ಪಥಿಪಟಚ್ಚರಂಕಚ್ಚರಂ
ಭಜಂತಿವಿಬುಧಾಮುಧಾಹ್ಯ ಪಹ! ಕುಕ್ಪಿಶಂಕುಕ್ಪಿವಿ: ॥

ಎಂಬ ಶ್ಲೋಕವನ್ನು ಬರೆದು ಕಳುಹಿದಂತೆಯೂ ಅದನ್ನು ನೋಡಿ ವಿದ್ಯಾರಣ್ಯರು ದೇಶಿಕರ ವೈರಾಗ್ಯಸಂಪತ್ತಿಗೆ ತಲೆದೂಗಿ ಕೆಲವು ಕಾಲವನ್ನು ಕಳೆದು ಅನಂತರ ಹಿಂದೆ ಬರೆದಂತೆ ಮತ್ತೊಂದು ಪತ್ರಿಕೆಯನ್ನು ಬರೆದು ಕಳುಹಿಸಲು ದೇಶಿಕರು ಅದಕ್ಕೆ ಪ್ರತ್ಯುತ್ತರವಾಗಿ ಕೆಲವು ಶ್ಲೋಕಗಳನ್ನು ಬರೆದು ಕಳುಹಿಸಿದಂತೆಯೂ ಅವುಗಳೇ ವೈರಾಗ್ಯಪಂಚಕಗಳೆಂದೂ ಗುರುಪರಂಪರಾಪ್ರಭಾವವು ಹೇಳುತ್ತದೆ. (ಪುಟ ೧೩೩)

ಮೊದಲನೆಯಹೇಳಿಕೆಯಲ್ಲಿ:—ಇರ್ವರೂ ಬಾಲಸ್ನೇಹಿತರಾಗಿದ್ದು ಕಾಲಕ್ರಮದಲ್ಲಿ ಇರ್ವರೂ ಪರಸ್ಪರ ಅಗಲಿದ್ದು ಒಬ್ಬರೊಬ್ಬರ ವಿಚಾರವು ಪರಸ್ಪರ ತಿಳಿ

ಎಲ್ಲಿಯೋ ಹಠಾತ್ತಾಗಿ ತುಂಗಭದ್ರಾತೀರಕ್ಕೆ ಇವರ್ಬರೂ ಬಂದು ಕಾಕತಾಳೀಯ ದಿಂದ ಪರಸ್ಪರ ಸಲ್ಲಾಪ ಮಾಡುತ್ತಿದ್ದ ಹಾಗೂ, ಅಲ್ಲಿಯ ರಾಜನಿಗೆ ಇವರಿರ್ವರೂ ನೂತನರೆಂದೂ ಹಿಂದೆ ಯಾವಾಗಲೂ ನೋಡಿರಲಿಲ್ಲವೆಂದೂ ಸಂನ್ಯಾಸವುಂ ಕೊಂಡಿರುವ ಮತ್ತು ಗಂಗಾಯಾತ್ರಾಭಿಲಾಷಿಯಾಗಿರುವ ವಿದ್ಯಾರಣ್ಯರಿಗೆ ವೆಂಕಟ ನಾಥನ ದರ್ಶನವು ಹಠಾತ್ತಾದುದಾಗಿ ಬೋಧೆಯಾಗುತ್ತದೆ.

ಎರಡನೆಯದರಲ್ಲಿ.—ಸಂನ್ಯಾಸಿಗಳಾದ ವಿದ್ಯಾರಣ್ಯರು ರಾಜ್ಯಸೂತ್ರವನ್ನು ಕೈಗೊಂಡುದು ಆಶ್ರಮಧರ್ಮಕ್ಕೆ ಗೌಣವೆಂದೂ, ಕೇವಲ ವಿರಕ್ತರಾಗಿದ್ದ ವೇದಾಂತ ದೇಶಿಕನಿಗೆ "ತಮ್ಮ ರಾಜನ ಮೂಲಕ ಉಂಛವೃತ್ತಿಯ ಕಾರ್ಪಣ್ಯ ವನ್ನು ನೀಗಿಸುವುದಾಗಿ ಬರೆದ ವಿಚಾರವು ಅಲೌಕಿಕವೆಂದೂ ಹೇಳಲಾಗು ತ್ತದೆ. ಇವೆರಡರ ಸಮ್ಯಕ್ಪರಿಶೀಲನದಿಂದಲೂ ಈ ಕೆಳಗೆ ಹೇಳುವ ವಿಚಾರ ಗಳಿಂದಲೂ ವೆಂಕಟನಾಥನಿಗೂ ವಿದ್ಯಾರಣ್ಯರಿಗೂ ಪರಸ್ಪರ ಯಾವಸಂಬಂಧವೂ ಇಲ್ಲವೆಂಬುದು ಸ್ಪಷ್ಟಪಡುತ್ತದೆ. ವಿದ್ಯಾರಣ್ಯರ ಗುರುಗಳ ಹೆಸರು ಸರ್ವಜ್ಞ ವಿಷ್ಣು ಯೆಂದು ಹೇಳಿದೆ. ವೆಂಕಟನಾಥನ ವಿದ್ಯಾಗುರುಗಳು ಅವನ ಸೋದರ ಮಾವಂದಿರಾದ ಆತ್ರೇಯ ರಾಮಾನುಜರೆಂದಿದೆ. ಪರಸ್ಪರ ಮೈತ್ರಿಯುಂಟಾಗ ಬೇಕಾದರೆ ಬಾಲ್ಯಾರಭ್ಯ ಇಬ್ಬರೂ ಒಂದೇಸ್ಥಳ, ಶಾಲೆ, ಗುರು ಅಥವಾ ಮತ್ತಾವು ದಾದರೂ ಕಾರಣಾಂತರಗಳಿಂದ ಕಲೆತುದಾಗಿರಬೇಕು. ಹಾಗೆ ಇವರಿರ್ವರೂ ಸೇರಿದುದಾದ ವಿಚಾರವೆಲ್ಲಿಯೂ ಹೇಳಿರುವಂತೆ ಕಂಡುಬರುವುದಿಲ್ಲ. ವಿದ್ಯಾರಣ್ಯರು ತಮ್ಮ ಬಾಲ್ಯದಲ್ಲಿ ಒಂದುವೇಳೆ ಕಂಚಿಗೆ ಬಂದು ಆತ್ರೇಯ ರಾಮಾನುಜರ ಬಳಿ ವಿದ್ಯಾಭ್ಯಾಸವನ್ನು ಮುಗಿಸಿಕ್ಕೊಂಡು ವಿಶೇಷ ವಿದ್ಯಾಭ್ಯಾಸಕ್ಕಾಗಿ ಸರ್ವಜ್ಞವಿಷ್ಣು ವಿನ ಬಳಿಗೆ ಹೋಗಿರಬಹುದೆನ್ನುವುದಾದರೆ ಹಾಗೆ ಹೇಳುವ ಪ್ರಮಾಣ ಗ್ರಂಥ ಗಳಾವುವು? ಹಾಗೆ ಹೋಗಿದ್ದರೆ ತಮ್ಮ ಗ್ರಂಥಗಳಲ್ಲಿ ಎಲ್ಲಿಯಾದರೂ ತಮ್ಮ ತಮ್ಮ ವಿದ್ಯಾಬೋಧಕರ ಹೆಸರನ್ನು ಹೇಳುತ್ತಿದ್ದರೆಂದೂ ಅಥವಾ ವೇದಾಂತ ದೇಶಿಕನು ತಮ್ಮ ಆಚಾರ್ಯರಾದ ಆತ್ರೇಯ ರಾಮಾನುಜರನ್ನು ಹೇಳುವಾವಸರದಲ್ಲಿ ವಿದ್ಯಾರಣ್ಯರ ಸಹಪಾಠಿತ್ವವನ್ನು ಕುರಿತು ಹೇಳದೆ ಇರುತ್ತಿರಲಿಲ್ಲವೆಂದೂ ನಮು ಗೆನಿಸುತ್ತದೆ. ಇದಲ್ಲದೆ ವಿದ್ಯಾರಣ್ಯರ ಭಾಷ್ಯಾದಿ ಗ್ರಂಥಗಳಲ್ಲಿ ದೇಶಿಕನ ಹೆಸರಾಗಲೀ ದೇಶಿಕ ಕೃತಗ್ರಂಥಗಳಲ್ಲಿ ವಿದ್ಯಾರಣ್ಯರ ಹೆಸರಾಗಲೀ ಹೇಳಿರುವಂತೆ ಎಲ್ಲಿಯೂ ಕಾಣಬರುವುದಿಲ್ಲ. ವಿದ್ಯಾರಣ್ಯರು ವಿಜಯನಗರದ ಅರಸರಲ್ಲಿ ಮಂತ್ರಿ ಪದವಿಯನ್ನು ವಹಿಸಿದ್ದುದಾಗಿ ಹೇಳುವ ಚಾರಿತ್ರಿಕ ಗ್ರಂಥಗಳು ಹೇರಳವಾಗಿ ದೊರೆ ಯುತ್ತವೆ. ಇವರ ಭಾಷ್ಯಾದಿ ಗ್ರಂಥಗಳಲ್ಲಿ:—

"ಇತಿ ಶ್ರೀವಿದ್ಯಾತೀರ್ಥ ಮಹೇಶ್ವರಾಪರಾವತಾರ ಶ್ರೀಮದ್ರಾಜಾಧಿರಾಜ ಪರಮೇಶ್ವರ ಶ್ರೀವೀರಬುಕ್ಕಮಹಾರಾಜಾಜ್ಞಾಪರಿಪಾಲಕ ಶ್ರೀಮಾಧವಾಚಾರ್ಯ

ವಿರಚಿತೇ....." ಎಂದು ಹೇಳಿಕೊಂಡಿರುವದು ಕಂಡುಬರುತ್ತದೆ.| ಹೀಗೆ ಹೇಳಿರುವುದರಿಂದ ಮಹಾತ್ಮರಾದ ವಿದ್ಯಾರಣ್ಯರು ಬುಕ್ಕರಾಜನ ಬಳಿ ಕೆಲವುಕಾಲ ಮಂತ್ರಿಪದವಿಯಲ್ಲಿದ್ದು ಭಾಷ್ಯಾದಿಗ್ರಂಥಗಳನೇಕಗಳನ್ನು ರಚಿಸಿ ಕೊನೆಗೆ ತುರೀಯಾಶ್ರಮವನ್ನು ಸ್ವೀಕರಿಸಿರಬಹುದಾಗಿ ವ್ಯಕ್ತವಾಗುತ್ತದೆ. ಮೇಲಣ ಗದ್ಯಾವ ಲೋಕನದಿಂದ ವಿದ್ಯಾರಣ್ಯರು ತುರೀಯಾಶ್ರಮವನ್ನು ಕೈಗೊಳ್ಳುವದಕ್ಕೆ ಮೊದಲು ಮಾಧವಾಚಾರ್ಯರೆಂಬ ಅಂಕಿತದಲ್ಲಿ ಬುಕ್ಕನೇ ಮೊದಲಾದವರಾಶ್ರಯದಲ್ಲಿ ಮಂತ್ರಿ ಪದವಿಯಲ್ಲಿದ್ದು ಮಹಾವಿದ್ವಾಂಸರಾಗಿ ಅನೇಕ ಗ್ರಂಥಗಳನ್ನು ಬರೆದು ತಾವು ವಿದ್ಯಾಪಕ್ಷಪಾತಿಯಾಗಿದ್ದುದರಿಂದ ತಮ್ಮಂತೆಯೇ ವಿದ್ಯಾವೈದುಷ್ಯವನುಳ್ಳ ವೆಂಕಟ ನಾಥನು ಉಂಛವೃತ್ತಿಯಿಂದ ಜೀವನವನ್ನು ನಾಗಿಸುತ್ತಿರುವುದನ್ನು ಜನರಿಂದ ಕೇಳಿ ದಾರಿದ್ರ್ಯಾನುಭವದಲ್ಲಿ ತಾವೂ ನುರಿತವರಾಗಿದ್ದುದರಿಂದ ಸ್ವಾಭಾವಿಕವಾಗಿ ನೊಂದು ರಾಜನಬಳಿಗೆ ಬರಲು ಕೇಳಿಕೊಂಡಿರಬಹುದಾಗಿಯೂ, ಅದಕ್ಕೆ ಪ್ರತ್ಯುತ್ತರ ವಾಗಿ ಬರೆದುಬಂದ ಶ್ಲೋಕಗಳನ್ನು ನೋಡಿ ರಾಜಕೀಯ ವಿಚಾರವಾಗಿ ಬೇಸತ್ತು ತುರೀಯಾಶ್ರಮವನ್ನೇಕೆ ಕೈಗೊಂಡಿರಬಾರದೆಂದು ನಮ್ಮ ಮನೋದೇವತೆಯು ತರ್ಕಿಸುತ್ತದೆ. ಇದಕ್ಕೆ ಅನುಗುಣವಾಗಿ ಆಗಣ ಕಾಲಧರ್ಮವು ಕೇವಲ ವಿಪರ್ಯಾಸ ದಲ್ಲಿದ್ದು ಪರಮತಸಹಿಷ್ಣುತೆಯು ಮಾಯವಾಗಿ ಸ್ವಮತಧರ್ಮಪ್ರಸರಣದಲ್ಲಿ ಪ್ರತಿ ಯೊಬ್ಬರೂ ದೀಕ್ಷಾಬದ್ಧರಾಗಿದ್ದರೇ ಹೊರ್ತು ಹೀಗೆ ಮಾಡುವುದರಿಂದ ರಾಗದ್ವೇಷ ಗಳಿಗೆ ಅವಕಾಶವುಂಟಾಗಿ ಸಮಾಜ ನೈತಿಕಹ್ರಾಸವೂ ಪರಸ್ಪರ ಸುಹೃದತ್ವವೂ ಮಣ್ಣುಪಾಲಾಗುವುದೆಂಬದನ್ನು ಅವರು ಅರಿಯದಾದರು. ಹೆಚ್ಚೇಕೆ ! ಕ್ರಿ. ಶ ೧೨-೧೩ನೆಯ ಶತಮಾನಗಳಲ್ಲಿ ಒಂದುಕಡೆ ಮಧ್ವದರ್ಶನ ಮತ್ತೊಂದುಕಡೆ ರಾಮಾನುಜದರ್ಶನ ಈದರ್ಶನಗಳ ಸ್ಪರ್ಧೆಯಲ್ಲಿ ದಕ್ಷಿಣ ಇಂಡಿಯಾದೇಶವು ಜರ್ಜರಿತವಾಗುತ್ತಿದ್ದಿತೆಂದೂ ನಾಲದುದಕ್ಕೆ ಮುಸಲ್ಮಾನರ ಹಾವಳಿಯಿಂದ ಚೂರ್ಣೀಕೃತವಾಗಿದ್ದಿತೆಂದು ಚರಿತ್ರೆಯು ಸಾರಿಸಾರಿ ಹೇಳುತ್ತದೆ.*

ಇವೇ ಮೊದಲಾದ ಕಾರಣಗಳಿಂದ ಇವರಿರ್ವರೂ ಪರಸ್ಪರ ಒಂದೇಸ್ಥಳದವ ರೆಂದಾಗಲಿ, ಮೈತ್ರಿಯುಳ್ಳವರೆಂದಾಗಲಿ, ಅಥವಾ ಸಹಪಾಠಿಗಳೆಂದಾಗಲಿ ಸರಿಯಾದ ಚರಿತ್ರಾಧಾರಗಳಿಲ್ಲದೆ ಹೇಳುವುದು, ಸರ್ವಸಮ್ಮತವಾಗದೆಂದೂ ಹಾಗೆ ಹೇಳುವ ದಾದರೆ ಅವು ಮರಳಿನಲ್ಲಿನ ಗೋಡೆಯಂತಾಗುವುದೆಂದೂ ಹೇಳಿ ವೆಂಕಟನಾಥನಿಗೂ ವಿದ್ಯಾರಣ್ಯರಿಗೂ ಯಾವ ಸಂಬಂಧವೂ ಇಲ್ಲವೆಂದೂ ಸಮಕಾಲೀನರೆಂದು ಮಾತ್ರ ಹೇಳಬಹುದೆಂದೂ ಮತ್ತೊಂದುಸಲ ಹೇಳಬೇಕಾಗಿದೆ.

---

† ತೈತ್ತಿರೀಯ ಸಂಹಿತೆಯಭಾಷ್ಯವನ್ನು ನೋಡಿ

South India and her Mahomedan Invaders

ತುಂಗಭದ್ರಾ ಸಮೀಪದಲ್ಲಿದ್ದ ರಾಜ್ಯದ ಒಡೆಯನ ಮಗಳಿಗೆ ಬ್ರಹ್ಮರಕ್ಷಸ್ಸು ಹಿಡಿದಿದ್ದು ದಾಗಿ ಗುರುಪರಂಪರಾಪ್ರಭಾವವು ಹೇಳುವುದುಹೊರ್ತು ರಾಜನ ಹೆಸರಾಗಲಿ ಅಥವಾರಾಜ್ಯದ ಹೆಸರಾಗಲಿ ಚಾರಿತ್ರಕದೃಷ್ಟಿಯಿಂದ ನಿರ್ದಿಷ್ಟವಾಗಿ ಹೇಳಿರುವುದಿಲ್ಲ. ಆದರೆ ವೈಭವ ಪ್ರಕಾಶಿಕೆಯಲ್ಲಿ ಮಾತ್ರ ವಿಜಯನಗರದ ಬುಕ್ಕರಾಯನೆಂದು ಹೇಳಿದೆ. ಇದುಸರಿಯಾದುದೆಂದು ಹೇಳಲಾಗುವದಿಲ್ಲ. ಏಕೆಂದರೆ ಕ್ರಿ. ಶ. ೧೩೫೬ರಲ್ಲಿ ಇನ್ನೂ ಸರಿಯಾಗಿ ವಿಜಯನಗರವು* ಸ್ಥಾಪಿತವಾಗಿರಲಿಲ್ಲ. ಆದುದರಿಂದ ಗುರುಪರಂಪರಾಪ್ರಭಾವದಲ್ಲಿ ಹೇಳಿರುವ ರಾಜನು ಯಾವನೋ ಆನೆಗೊಂದಿ ಸಂಸ್ಥಾನದವನಾಗಿರಬೇಕು. ಚರಿತ್ರೆಯು ಈ ವಿಚಾರದಲ್ಲಿ ಯಾವುದನ್ನೂ ಸ್ಪಷ್ಟಪಡಿಸಿಹೇಳಿರುವುದಿಲ್ಲ. ಆದುದರಿಂದ ಆನೆಗೊಂದಿಯ ಅಥವಾ ಹೊಯ್ಸಳರಾಜ್ಯದ ಯಾವನೋ ಆಶ್ರಿತ ರಾಜನೊಬ್ಬನಾಗಿರಬೇಕೆಂದೂ ಅವನ ಹೆಸರು ತಿಳಿಯದೆಂದೂ ಪ್ರಕೃತ ಹೇಳಿ ಮುಗಿಸಬೇಕಾಗಿದೆ.

ಇದಲ್ಲದೆ ವಿದ್ಯಾರಣ್ಯರ ನೇತೃತ್ವದಲ್ಲಿ ಆನೆಗೊಂದಿ ರಾಜ್ಯವು ವಿಜಯನಗರವೆಂಬ ಹೆಸರಿನಿಂದ ಕ್ರಿ. ಶ. ೧೩೪೦ರಲ್ಲಿ ಸ್ಥಾಪಿಸಲ್ಪಟ್ಟುದುದಾಗಿ ರೆ. ಹೀರಾಸರು ಒಕ್ಕಣಿಸಿರುವರು.‡ ಇದರಿಂದ ಕ್ರಿ. ಶ. ೧೩೫೬ರಲ್ಲಿ ವಿಜಯನಗರಸ್ಥಾಪನವಾಗಲಿಲ್ಲವೆಂಬದು ನಿರ್ಧಾರವಾಗುತ್ತದೆ. ಹೀಗೆ ವೆಂಕಟನಾಥನ ಮತ್ತು ವಿದ್ಯಾರಣ್ಯರ ಸಂಬಂಧವು ಕೊನೆಗೊಂಡುದು.

(೨) ಕೃಷ್ಣಮಿಶ್ರರದರ್ಶನ:—

ಕೃಷ್ಣಮಿಶ್ರರೆಂಬ ಮಹಾಮೇಧಾವಿಯೊಬ್ಬರು ಬಂದು ವೇದಾಂತ ದೇಶಿಕರೊಡನೆ ಮೂರುದಿವಸಗಳುವಾದಮಾಡಿ ಪರಾಜಿತರಾಗಿ ತಾವುಬರೆದ ಪ್ರಬೋಧಚಂದ್ರೋದಯ ನಾಟಕವನ್ನು ನೋಡಬೇಕೆಂದು ಪ್ರಾರ್ಥಿಸಿದಂತೆಯೂ, ಅವರು ಅದನ್ನುನೋಡಿ ಮನ ಒಪ್ಪದೆ ಸಂಕಲ್ಪಸೂರ್ಯೋದಯವೆಂಬನಾಟಕವನ್ನು ಬರೆದು ಕೃಷ್ಣಮಿಶ್ರರಿಗೆ ತೋರಿದಂತೆ ಗುರುಪರಂಪರಾಪ್ರಭಾವವು ಹೇಳುತ್ತದೆ. ಪ್ರಬೋಧಚಂದ್ರೋದಯನಾಟಕದಲ್ಲಿ ಕೀರ್ತಿವರ್ಮರಾಜನ ಹೆಸರನ್ನು ಸೂತ್ರಧಾರನು ಕೊಂಡಾಡಿರುವನು. ಕೀರ್ತಿವರ್ಮನು ಕ್ರಿ ಶ. ೧೧ನೆಯ ಶತಮಾನಾಂತ್ಯವನೆಂದು ಸ್ಪಷ್ಟಪಡುತ್ತದೆ. ಈ ವಿಚಾರವಸ್ತು[illegible]ರಿತ್ರೆಯು ಸ್ಥಾಪಿಸುತ್ತಿದೆ. ಇದರಿಂದ ಪ್ರಬೋಧಚಂದ್ರೋದಯಕಾರರೂ ಕೀರ್ತಿವರ್ಮನೂ ಇಬ್ಬರೂ ಸಮ

* ವಿಜಯನಗರದ ಕಟ್ಟಿಣವು ಕ್ರಿ ಶ. ೧೩೫೭-೧೩೪೦ರಲ್ಲಿ
See South India and her Mahameden invaders by S. Krishnawamy Iyenger P. 154

‡ The Aravidu Dynasty of Vijayanagara P. 10.

ಕಾಲೀನರು. ಎಂದರೆ ಕ್ರಿ. ಶ. ೧೧ನೆಯ ಶತಮಾನಾಂತ್ಯದವರು. ವೇದಾಂತದೇಶಿಕನು ೧೩ನೆಯ ಶತಮಾನ ಮತ್ತು ೧೪ನೆಯ ಶತಮಾನಾಂತ್ಯದಲ್ಲಿದ್ದವನಾದುದರಿಂದ ಪರಸ್ಪರ ಸಂಬಂಧವಿರದು.

(೩) ಅಕ್ಷೋಭ್ಯತೀರ್ಥರವಾದ:—

ವಿಜಯನಗರದಲ್ಲಿ ತತ್ವವಾದಿಗಳಾದ ಅಕ್ಷೋಭ್ಯತೀರ್ಥರಿಗೂ ಮಾಯಾವಾದಿಗಳಾದ ವಿದ್ಯಾರಣ್ಯರಿಗೂ ವೇದಾಂತವಿಚಾರದಲ್ಲಿ ಚರ್ಚೆಹುಟ್ಟಿ ಇವರಿರ್ವರ ಅಭಿಪ್ರಾಯಗಳನ್ನು ರಾಜಪತ್ರಿಕೆಯಮೂಲಕ ವಿಮರ್ಶೆಗಾಗಿ ವೇದಾಂತದೇಶಿಕರಬಳಿಗೆ ಕಳುಹಿಸಿಕೊಡಲು ಅವರು ಪ್ರತ್ಯುತ್ತರವಾಗಿ:—

"ಅಸಿನಾತತ್ಪ್ರಮಸಿನು ಪರಜೀವಪ್ರಭೇದಿನಾ
ವಿದ್ಯಾರಣ್ಯಮಹಾರಣ್ಯಮಕ್ಷೋಭ್ಯಮುನಿರಚ್ಛಿನತ್" ॥

ಎಂದು ಬರೆದುಕಳುಹಿಸಿದುದಾಗಿಯೂ, ಇದನ್ನುನೋಡಿ ವಿದ್ಯಾರಣ್ಯರು ಖತಿಗೊಂಡು ವೆಂಕಟನಾಥನು ಬರೆದುದಾದ "ಶತದೂಷಣೀ" ಎಂಬಗ್ರಂಥವನ್ನು ನಿರಸನಮಾಡುವುದಾಗಿ ಹೇಳಿಕಳುಹಿಸಲು, ಅದರಂತೆ ಕಳುಹಿಸಿ ಕೊಟ್ಟ ಶತದೂಷಣೀ ಗ್ರಂಥವನ್ನು ಆಮೂಲಾಗ್ರವಾಗಿನೋಡಿ ದೋಷಗಳಾವುವೂ ದೊರೆಯದೆ ಅಲ್ಲಿದೊರೆತ "ಚ" ಕಾರವಿಚಾರವಾಗಿ ಖಂಡನೆಯನ್ನುಮಾಡಲು, ವೆಂಕಟನಾಥನು ಅದನ್ನುನೋಡಿ "ಚಕಾರಸಮರ್ಥನ"ಎಂಬ ಗ್ರಂಥವನ್ನು ಬರೆದುಕಳುಹಿಸಿದುದನ್ನು ನೋಡಿ, ವಿದ್ಯಾರಣ್ಯರು ಪರಾಜಯವನೊಪ್ಪಿಕೊಂಡುದಾಗಿ ಗುರುಪರಂಪರಾಪ್ರಭಾವವು ಹೇಳುತ್ತದೆ. ಇದು ನಮಗೆಸಮಂಜಸವೆನಿಸುವುದಿಲ್ಲ. ವಿಜಯನಗರದ ರಾಜನಾರೆಂಬುದಾಗಲಿ, ರಾಜಸಮ್ಮುಖದಲ್ಲಿ ಇವರಿರ್ವರೂಕಲೆತು ವಾದ ಮಾಡಿದ ವಿಚಾರವೇನೆಂಬುದಾಗಲಿ, ಕರೆಯಿಸಿಕೊಂಡಕಾರಣವಾಗಲಿ ಯಾವುದೂ ತಿಳಿಯಬರುವಂತಿಲ್ಲ. ಮೇಲಣ ಶ್ಲೋಕವನ್ನು ಅಕ್ಷೋಭ್ಯತೀರ್ಥರ ಅನುಯಾಯಿಗಳು ಹೇಳುವರು. ವಿದ್ಯಾರಣ್ಯರ ಅನುಯಾಯಿಗಳು:—

ಅಕ್ಷೋಭ್ಯಂಕ್ಷೋಭಯಾಮಾಸ ವಿದ್ಯಾರಣ್ಯೋ ಮಹಾಗುರುಃ॥

ಎಂದು ಹೇಳುವರು. ಇದರಲ್ಲಿ ನಿಜವಾವುದೆಂಬುದು ತಿಳಿಯುವುದಿಲ್ಲ. ವೆಂಕಟನಾಥಕೃತ ಗ್ರಂಥಗಳಲ್ಲಿ ಹೇಳಿರುವಂತೆ ಎಲ್ಲಿಯೂ ಕಂಡುಬರುವುದಿಲ್ಲ. ಈ ವಿಚಾರವಾಗಿ ನಿಜಾಂಶವನ್ನು ಸೂಚಿಸುವ ಚರಿತ್ರಾಧಾರಗಳು ದೊರೆಯವು. ಇನ್ನು ಅಕ್ಷೋಭ್ಯತೀರ್ಥರ ಕಾಲವಾವುದೆಂಬುದನ್ನು ಹೇಳಬೇಕಾಗಿರುವುದು.

ಶ್ರೀಮಧ್ವಾಚಾರ್ಯರಿಗೆ ಪದ್ಮನಾಭತೀರ್ಥ, ನರಹರಿತೀರ್ಥ, ಮಾಧವತೀರ್ಥ, ಅಕ್ಷೋಭ್ಯತೀರ್ಥರೆಂಬ ನಾಲ್ಕುಜನಶಿಷ್ಯರಿದ್ದರೆಂದೂ ಇವರೆಲ್ಲರೂ ಆಚಾರ್ಯರಿಂದಲೇ

ಶಿಕ್ಷಿತರಾಗಿ ಆಚಾರ್ಯನಂತರ ಕ್ರಮವಾಗಿ ತುರೀಯಾಶ್ರಮವನ್ನು ವಹಿಸಿದುದಾಗಿ ಮಧ್ವವಿಜಯವು ಹೇಳುತ್ತದೆ. ಮಧ್ವಾಚಾರ್ಯರ ಕಾಲವ್ಯವಸ್ಥೆಯು ಅವ್ಯವಸ್ಥಿತವಾಗಿಯೇ ಇದೆ. ಪ್ರಕೃತಮಧ್ವಾಚಾರ್ಯರ ಕಾಲವಿಚಾರವಾಗಿ ಹೇಳಿರುವವಾದ,

(೧) ಮಹಾಭಾರತ ತಾತ್ಪರ್ಯನಿರ್ಣಯ.

(೨) ಕ್ರಮವಾಗಿ ಬರೆಯಲ್ಪಟ್ಟು ಕಾಣಿಡಲ್ಪಟ್ಟಿರುವ ಆಯಾಮಠೀಯುರಲ್ಲಿರುವ ಆಚಾರ್ಯಕ್ರಮಾನುಸರಣ.

(೩) ನರಹರಿತೀರ್ಥರಶ್ಲೋಕಗಳನ್ನೊಳಕೊಂಡಿರುವ ಶಾಸನಗಳು,

(೪) ದಕ್ಷಿಣಕನ್ನಡಜಿಲ್ಲೆಯ ಕೈಪಿಡಿ (ಮ್ಯಾನ್ಯೂಯಲ್)

ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಆಚಾರ್ಯರ ಕಾಲವು ಕಲಿ ೪೩೦೦ ಎಂದು ಹೇಳಿದೆ. § ಎಂದರೆ ಇದು ದಕ್ಷಿಣಕನಡಾ ಜಿಲ್ಲೆಯ ಕೈಪಿಡಿಯಲ್ಲಿ ಹೇಳಿರುವ ಕ್ರಿ. ಶ. ೧೧೯೯ಕ್ಕೆ ಸರಿಹೋಗುತ್ತದೆ. ಉತ್ತರಾದಿ ಮಠಗಳಲ್ಲಿ ಆಯಾ ಮಠದ ಸ್ವಾಮಿಗಳು ತುರೀಯಾಶ್ರಮವನ್ನು ಸಾಧಿಸಿದಕಾಲ, ಜನ್ಮತಿಥಿ, ಪುಣ್ಯತಿಥಿ ಮೊದಲಾದವುಗಳೆಲ್ಲವೂ ಸಾಂಗೋಪಾಂಗವಾಗಿ ಸಂಶಯಕ್ಕಾಸ್ಪದವಿಲ್ಲದಂತೆ ಕ್ರಮವರಿತು ಬರೆಯಲ್ಪಟ್ಟಿವೆ, ಈ ಬರವಣಿಗೆಗಳ ಸಥ್ಯಾಂಶವನ್ನು ನೋಡಿ ಸಮರ್ಪಕವೆಂದು ನಂಬಿ, ಡಾ. ಆಫ್ರಿಷಿಟ್ (Aufrecht) ರವರೂ, ಡಾ. ರಾವ್ ಕೃಷ್ಣಭಂಡಾರಕರವರೂ ಆ ಕಾಲವನ್ನೇ ಹೇಳಿಕೊಂಡಿರುವರು. ನರಹರಿತೀರ್ಥರವರ ಶ್ಲೋಕಗಳಸೊಳಗೊಂಡಿರುವ ಶಾಸನಗಳಲ್ಲಿ ಹೇಳಿರುವ ಕಾಲವು ವಿಚಾರಗ್ರಸ್ತವಾಗಿದೆ. ಮಧ್ವಾಚಾರ್ಯರ ಜನ್ಮಸಂವತ್ಸರವು ವಿಳಂಬಿಯೆಂದೂ, ಗತಿಸಿದ ಸಂವತ್ಸರವು ಪಿಂಗಳವೆಂದು ಮಾತ್ರ ಹೇಳಿದೆ. ಆದರೆ ಯಾವವಿಳಂಬಿ, ಯಾವ ಪಿಂಗಳ ಎಂಬುದನ್ನು ನಿಷ್ಕರ್ಷಿಸಿ ಹೇಳಿರುವುದಿಲ್ಲ.

ವಿಳಂಬಿಯು ಶಕ. ೧೦೪೦ .... ಕ್ರಿ. ಶ. ೧೧೧೮
.... ೧೧೦೦ .... ,, ೧೧೭೮
... ... ೧೧೬೦ ... ,, ೧೨೩೮ ರಲ್ಲಿ ಆಗಿದೆ.
ಪಿಂಗಳಸಂವತ್ಸರವು ಶಕ. ೧೧೧೯ .... ,, ೧೧೯೭
.... ೧೧೭೯ .... ,, ೧೨೫೭
.... ೧೨೩೯ .... ,, ೧೩೧೭ಕ್ಕೆ ಬೀಳುತ್ತದೆ.

ಮೆ|| ಸುಬ್ಬರಾಯರ ಮತ್ತು ಮಠದಲ್ಲಿರುವ ಪೀಳಿಗೆಯ ಕ್ರಮದ ಹೇಳಿಕೆಯನ್ನು ನೋಡಿದರೆ ವೆಂಕಟನಾಥನೂ ವಿದ್ಯಾರಣ್ಯರೂ ಹುಟ್ಟುವ ಎಷ್ಟೋ

§ See Chapter XXXII. Verse 131 and Chap. IX Verse 100

ವರ್ಷಗಳ ಹಿಂದೆ ಎಂದರೆ ಅಕ್ಷೋಭ್ಯತೀರ್ಥರು ಶಕ. ೧೧೯೯ ಅಥವಾ ಕ್ರಿ. ಶ. ೧೨೪೭ರಲ್ಲಿ ಸಮಾಧಿಸ್ಥರಾದರೆಂದು ಹೇಳಬೇಕಾಗುತ್ತದೆ. $

ವೆಂಕಟನಾಥನೂ ವಿದ್ಯಾರಣ್ಯರೂ, ಅಕ್ಷೋಭ್ಯತೀರ್ಥರೂ ಸಮಕಾಲೀನ ರೆನ್ನುವ ಗುರುಪರಂಪರಾಪ್ರಭಾವದ ಹೇಳಿಕೆಯನ್ನು ಮನ್ನಿಸುವುದಾದರೆ ಮಧ್ವಾಚಾರ್ಯರು ಗತಿಸಿದುದು ಕ್ರಿ. ಶ. ೧೩೧೭ನೆಯ ಪಿಂಗಳವೆಂದು ಹೇಳಿ ೧೨೦ ವರ್ಷಗಳು ಮುಂದರಿಸಬೇಕಾಗುತ್ತದೆ. *

ಮತ್ತೊಂದು ಗ್ರಂಥ ‡ ದಲ್ಲಿ ಅಕ್ಷೋಭ್ಯತೀರ್ಥರ ಪುಣ್ಯತಿಥಿಯು ಶಾ. ಶಕ. ೧೫೭೭—೭೮ ವಿಶ್ವಾವಸು ಸಂ. ಮಾರ್ಗಶಿರ ಪಂಚಮಿಯಾ ಕೃತ್ತಿಕವೆಂದಿದೆ. ಎಂದರೆ ಕ್ರಿ. ಶ ೧೬೫೫—೫೬ ನೆಯ ಸಂವತ್ಸರವೆಂದು ಹೇಳಿದಂತಾಗುತ್ತದೆ. ಈ ಕಾಲವೇ ನಿಜವೆಂದು ಒಪ್ಪುವದಾದರೆ ಮೇಲೆಹೇಳಿದ ಮೂವರ ಸಮಕಾಲೀನತೆಯನ್ನೂ ಸಾಧಿಸಬಹುದಾಗಿದೆ. ದಕ್ಷಿಣಕನಡಾ ಜಿಲ್ಲೆಯ ಪುಸ್ತಕದಲ್ಲಿ ಹೇಳಿರುವಂತೆ ಮಧ್ವಾಚಾರ್ಯರಕಾಲವು ಕ್ರಿ. ಶ ೧೨೯೯ ಅಥವಾ ಕ್ರಿ. ಶ ೧೩ ನೆಯ ಶತಮಾನವೆಂದೂ ಅವರ ನಾಲ್ವರುಶಿಷ್ಯರೂ ಸಮಕಾಲೀನರೆನ್ನುವುದಾದರೆ ಅವರನ್ನೂ ಕ್ರಿ. ಶ. ೧೩ನೆಯ ಶತಮಾನಕ್ಕೆ ತೀರಿದವರೆಂದು ಹೇಳಿ ವೆಂಕಟನಾಥನ ಮತ್ತು ವಿದ್ಯಾರಣ್ಯರ ಕಾಲಕ್ಕೆ ಅಕ್ಷೋಭ್ಯರು ಸ್ಮೃತಿಶೇಷರಾಗಿದ್ದರೆಂಬುದು ವಿಶದವಾಗುತ್ತದೆ. ಮೇಲೆ ಹೇಳಿದ ವಿಚಾರಗಳಿಲ್ಲದರ ಪರಿಶೀಲನೆಯಿಂದ ಎಂದುಮೊಳೆ ಈ ಮೂವರೂ ಸಮಕಾಲೀನರಾದರು ಸಾಂಶಿಕತೆಯರಾಗಿ ಬೇರೆಯವರಾದರು, ಮತ್ತಾವುದಾದರೂ ಚಾರಿತ್ರಿಕ ಸ್ಪಬಲಪ್ರಮಾಣಗಳು ದೊರೆಯುವವರೆಗೆ ಈ ವಿಚಾರಗಳೆಲ್ಲವೂ ವಿಚಾರಾತ್ಮಕವೆಂದು ಹೇಳಿ ಕೈ ಬಿಡಬೇಕಾಗುತ್ತದೆ. ವೆಂಕಟನಾಥನ ಕಾಲದ ರಾಜಕೀಯ ಪರಿಸ್ಥಿತಿಯ ವಿಚಾರವಾಗಿ ಈ ಕೆಳಗೆ ಹೇಳುವಂತೆ ಸಂಕ್ಷೇಪವಾಗಿ ಬರೆದು ಮುಗಿಸಿದರೆ ಸಾಕೆಂದು ತೋರುವುದು:—

(೧) ಸುಲಿಗೆ, ದರೋಡೆ, ಕೊಲೆ, ವಿಗ್ರಹನಾಶನ ಮತ್ತು ಹಿಂದೂಮತ ತತ್ವ ನಿರೋಧವನ್ನು ಮೂಲಮಂತ್ರವಾಗಿ ಇಟ್ಟುಕೊಂಡಿದ್ದ ತುರುಷ್ಕರ ಹಾವಳಿಯಿಂದ ರಾಜ್ಯಸತ್ತೆಯಾಗಲಿ ಪ್ರಜಾನೆಮ್ಮದಿಯಾಗಲಿ ಯಾವುದೂ ಇರದೆ ಕ್ಷೋಭೆಗೆ ಕಾರಣ ವಾಗಿದ್ದಿತು. (೨) ಅಲ್ಲಲ್ಲಿ ಕಳೆದು ಉಳಿದುಕೊಂಡಿದ್ದ ರಾಜರಲ್ಲಿ ಅಂತಃ ಕಲಹವು ಎಲ್ಲೆಯನ್ನು ಮೀರಿದ್ದಿತು. (೩) ಪರಮತಸಹಿಷ್ಣುತೆಯು ಇರಲಿಲ್ಲ (೪)

$ The Life and teachings of Sri Madhava charya P. 30

The Life and teachings of Sri Madhva charya P. 31.

‡ ಕಲ್ಪತರು ಪುಟ ೪.

ಪರಸ್ಪರ ಸೌಹಾರ್ದ್ರವು ಅಕ್ಷರದಲ್ಲಿದ್ದಿತು. (೫) ಜನರ. ಆಸ್ತಿ, ಪ್ರಾಣ, ಮತ್ತು ಧರ್ಮಗಳು ಅರಕ್ಷಕವಾಗಿದ್ದವು.

ಗ್ರಂಥಗಳು:—ಶ್ರೀ ವೆಂಕಟನಾಥಕೃತ ಗ್ರಂಥಗಳು ೧೨೧ ಎಂದು ಹೇಳಲ್ಪಟ್ಟಿದೆ. ಅವುಗಳನ್ನು ಹೀಗೆ ವಿಭಜಿಸಬಹುದು.

ಸ್ತೋತ್ರಗಳು	೩೨
ಕಾವ್ಯಾದಿಗಳು	೮
ಅನುಷ್ಠಾನಾದಿ ಶಾಸ್ತ್ರಗಳು	೨೪
ರಹಸ್ಯಗಳು	೩೨
ಪ್ರಬಂಧಗಳು	೨೪
ಭಗವದ್ವಿಷಯ	೧
ಒಟ್ಟು.	೧೨೧

ಇವುಗಳನ್ನು

(೧) ಸ್ತೋತ್ರಗಂಥಗಳು
(೨) ಮತಗ್ರಂಥಗಳು
(೩) ಮಿಶ್ರಗ್ರಂಥಗಳು

ಎಂದು ಮೂರುಭಾಗವಾಡಿ ಹೇಳಬಹುದು.

ಸ್ತೋತ್ರಗ್ರಂಥಗಳು:—ಗದ್ಯಪದ್ಯಗಳೆರಡರಲ್ಲಿಯೂ ಹೇಳಲ್ಪಟ್ಟಿವೆ. ಮತ ಗ್ರಂಥಗಳನೇಕಗಳು ದ್ರಾವಿಡದಲ್ಲಿಯೂ ಸಂಸ್ಕೃತದಲ್ಲಿಯೂ ಬರೆಯಲ್ಪಟ್ಟಿರುವುವು. ಮಿಶ್ರ ಗ್ರಂಥಗಳಲ್ಲಿ ಸಂಸ್ಕೃತಭಾಷೆಯಲ್ಲಿರುವುವಾದ ಮತ್ತು ಮುಖ್ಯವಾದ ಕೆಲವನ್ನು ಮಾತ್ರವೇ ಇಲ್ಲಿ ಹೇಳಿದೆ.

೧. ಕಾವ್ಯ (Poetry) ಯಾದವಾಭ್ಯುದಯ ಮತ್ತು ಹಂಸಸಂದೇಶ
೨. ನಾಟಕ (Drama) ಸಂಕಲ್ಪಸೂರ್ಯೋದಯ
೩. ನೀತಿಕಾವ್ಯ (Didactic Poems) ಸುಭಾಷಿತನೀವೀ
೪. ಭೂವಿವರಣೆ (Geography) ಭೂಗೋಳನಿರ್ಣಯ
೫. ಶಿಲ್ಪ (Silpa) ಶಿಲ್ಪಾರ್ಥಸಾರ
೬. ಧರ್ಮಶಾಸ್ತ್ರ (Dharma Sastra) ಹರಿದಿನತಿಲಕ
೭. ಪ್ರಯೋಗ (Prayoga) ಯಜ್ಞೋಪವೀತಪ್ರತಿಷ್ಠಾ
೮. ಮಿಮಾಂಸಾ (Mimamsa) ಸೇಶ್ವರಮಿಮಾಂಸಾ, ಪಾದುಕಾ ಮಿಮಾಂಸಾ
೯. ಪ್ರಾಕೃತ (Prakrit) ಅಚ್ಯುತಶತಕ

ಇವುಗಳಲ್ಲಿ ಸಂಸ್ಕೃತಕವಿಚರಿತೆಗೆ ಸಂಬಂಧಿಸುವುವಾದ ಕಾವ್ಯ, ನಾಟಕ, ನೀತಿಗ್ರಂಥಗಳನ್ನು ಮಾತ್ರವೇ ಬರೆಯಲು ಆರಿಸಿಕೊಂಡಿದೆ. ಮೇಲೆ ಕಾವ್ಯಗಳು ೮ ಎಂದು ಹೇಳಿ—(೧) ರಘುವೀರಗದ್ಯ, (೨) ಭೂಗೋಳನಿರ್ಣಯ, (೩) ಇದರ ವ್ಯಾಖ್ಯಾನ ಮತ್ತು (೪) ವೈರಾಗ್ಯಪಂಚಕ ಇವುಗಳು ಕಾವ್ಯಗಳೆಂದೂ ಹೇಳಿದೆ. ಕಾವ್ಯವಿಚಾರದಲ್ಲಿ ಇವುಗಳ ಅನುಸಂಧಾನವು ಹೇಗೆಂಬುದು ತಿಳಿಯದಾಗಿದೆ. ಶ್ರೀ ವೆಂಕಟನಾಥನ ಗ್ರಂಥಗಳನ್ನು ಹೇಳಿ ಮುಗಿಸುವ ಸಂಭವದಲ್ಲಿ ಈ ಕೆಳಗಣ ಶ್ಲೋಕಗಳು ಅಪ್ರಸಕ್ತವಾಗದು.

(೧) ಪರಕೃತಂವಾಪಿಪರಸ್ಸಹಸ್ರಂ ಶ್ರೀವೇಂಕಟಾಚಾರ್ಯಕೃತಾಃ ಪ್ರಬಂಧಾಃ
ತತ್ರಾಲಮೇಕಃ ಖಲುಭುಕ್ತಿಮುಕ್ತ್ಯೋಃ ಕಾತ್ಸ್ನ್ಯೇನಕಸ್ಯಾರ್ಥಗಣಯೇತ್
ಸಮಸ್ತಾ ॥ ೨೦

(೨) ಅಪಿಚ ಭವಾಹಿದಷ್ಟಪರಿಮೂರ್ಛಿತಸ್ಯಭವಿತುಃ ಪ್ರಬೋಧನಕರೀ
ಶಮದಮದೋಷಭೀತ ಭಗವತ್ತದೀಯಚರಣಭುಕ್ತಿಮುಕ್ತ್ಯೇಜನನೀ
ವಿಷಯಸರತ್ಕಕೋಪಮದಮೋಹಲೋಭ ಶರತಾಪದೋಷಶಮನೀ
ಭುವಿಸದ್ಭಿಶೇತರಾಸ್ತನಹಿಸೂಕ್ತಿರದ್ಯನಿಗಮಾಂತದೇಶಿಕಗಿರಃ ॥ ೫೬

(೩) ಯದುಕ್ತಯೋಯತಿಪತಿತಂತ್ರದೀಪಿಕಾಃ
ಸಲಕ್ಷಣಾಸ್ಸರಸತಮಾಸ್ತಮಂವತಾಃ
ಸಮತ್ಸರೈರಪಿಸತತಂಪಠೋಕ್ಷತಃ
ಪ್ರಶಂಸಿತಾಃ ಪರಿಕಲಯೇತ್ಸಸಂಶ್ರಿಯಂ ॥ ೫೮

(೪) ವಾಗ್ದೇಯಸ್ಯದ್ರಾವಿಡೀಸಾಂಸ್ಕೃತೀಚ
ಪ್ರಾಯಃಪ್ರಾಚಾಮಾಶಯಾನನ್ವವಾದೀತ್
ಅರ್ವಾಚಾ ಮಪ್ಯಾಸ್ಯವೈಯಾತ್ಯಮೂಲಂ
ಜೀಯ್ಯಾತ್ತೋಯಂ ಸರ್ವತಂತ್ರಸ್ವತಂತ್ರಃ ೫೯.

(೫) ವೇಂಕಟೇಶವಿದುಷಾರಚಿತಾನಾಂ
ಜ್ಞಾಯತೇಗಣನಾಪಿಕೃತೀನಾಂ ॥ (ಸಪ್ತತಿರತ್ನಮಾಲಿಕಾ ೪೨)

(೬) ಶ್ರೀವೇಂಕಟಾರ್ಯೇಣಕೃತಾಃ ಪ್ರಬಂಧಾಃ
ಸಂಖ್ಯಾತುಮುರ್ವ್ಯಾಂ ವಿಬುಧೈರ್ನಶಕ್ಯಾಃ
ತತ್ರೈಕಮೇಳಂಪರಿಶೀಲಯಂತೋ
ಧನ್ಯಾನರಾಸ್ತೇಧರಣೇಂಪುನಂತಿ ॥ (ವೈಭವಪ್ರಕಾಶಿಕೆ ಪುಟ ೧೫೨)

ಎಂದು ಗ್ರಂಥೋತ್ಕರ್ಷತೆಯು ಹೇಳಿರುವುದು. ವೆಂಕಟನಾಥನ ಕೃತಿಯೊಂದೂ ಅಧ್ಯಾತ್ಮವಿಚಾರವೆಂದರೆ ಅತ್ಯುಕ್ತಿಯಲ್ಲ.

(೧) ಯಾದವಾಭ್ಯುದಯಃ—

ಇದು ೨೪ ಸರ್ಗಗಳುಳ್ಳ ಮಹಾಕಾವ್ಯವೆಂದು ಹೇಳಲ್ಪಟ್ಟಿರುವುದಾದರೂ ನಮಗೆ ದೊರೆತಿರುವ ೧೨ ಸರ್ಗಗಳು ಮಾತ್ರ. ಡಿಂಡಿಮ ಕವಿಕೃತ ರಾಘವಾಭ್ಯುದಯವನ್ನು ನೋಡಿ ಯಾದವಾಭ್ಯುದಯವನ್ನು ಬರೆದಿರುವುದಾಗಿ ಕೆಲವರು ಹೇಳುವರು. ಡಿಂಡಿಮಕವಿಯ ವಿಚಾರವಾಗಲಿ ರಾಘವಾಭ್ಯುದಯ ಕಾವ್ಯದ ವಿಚಾರವಾಗಲಿ ಪ್ರಕೃತ ನಮಗೆ ತಿಳಿಯದಾಗಿದೆ. ಆದರೆ ಯಾದವಾಭ್ಯುದಯದ ಶ್ರೀಕೃಷ್ಣಚರಿತೆಯನ್ನು ನೋಡಿ ರಾಘವಾಭ್ಯುದಯವು ಶ್ರೀರಾಮಚರಿತೆಯಾಗಿರಬಹುದೆಂದೂಹಿಸಲು ಅವಕಾಶವಿದೆ. ಯಾದವಾಭ್ಯುದಯದ ೧೨ ಸರ್ಗಗಳಲ್ಲಿ ಶ್ರೀಕೃಷ್ಣನ ಜನ್ಮಾರಭ್ಯ ರುಕ್ಮಿಣೀಕಲ್ಯಾಣದವರೆಗೆ ವರ್ಣಿತವಾಗಿದೆ. ಇದಕ್ಕೆ ಸುಪ್ರಸಿದ್ಧನಾದ ಅಪ್ಪಯ್ಯದೀಕ್ಷಿತನು ವ್ಯಾಖ್ಯಾನವನ್ನು ಬರೆದಿರುವನು. ಕಾವ್ಯದಲ್ಲಿ ಅಲ್ಲಲ್ಲಿ ಕಂಡುಬರುವ ಬಂಧಗಳೂ, ಶ್ಲೇಷೆ, ಯಮಕ ಭಾಗಗಳನ್ನು ಬಿಟ್ಟರೆ ಉಳಿದ ಭಾಗಗಳೆಲ್ಲವೂ ಲಲಿತಪದ ಬಂಧಬಂಧುರವಾಗಿ ರಮ್ಯವಾಗಿಯೇ ಇದೆ. ಶೈಲಿಯು ಸರಳವಾಗಿದೆ. ಒಂದೇವಸ್ತುವನ್ನು ವಿಧವಿಧವಾಗಿ ಬಣ್ಣಿಸಿ ಮನರಂಜನಮಾಡುವ ದರಲ್ಲಿ ವೆಂಕಟನಾಥನು ತನ್ನ ಅಸೀಮಶಬ್ದ ಭಾಂಡಾಗಾರವೆಲ್ಲವನ್ನೂ ತೋರಿಸಿರುವನು. ಚಂದ್ರ ಮತ್ತು ಸಂಧ್ಯಾವರ್ಣನೆ, ದೇವಕಿಯ ಗರ್ಭವರ್ಣನೆ ಇವೇ ಮೊದಲಾದವು ನಿದರ್ಶನವಾಗಿರುವುವು. ಮಾದರಿಗಾಗಿ ಕೆಲವನ್ನು ಬರೆದು ಹೇಳುವೆವು.

ಸ್ಫುರತ್ಪ್ರಭಾಕೇ ಸರಮರ್ಕಬಿಂಬಂ ಮಮಜ್ಜ ಸಿಂಧೌ ಮಕರಂದತಾಮ್ರಂ
ಸಂಧ್ಯಾಕುಮಾರ್ಯಾಗಗನಾಂಬುರಾಶೇಃ ಕ್ರೀಡಾಹೃತಂ ಕ್ಷಿಪ್ತಮಿವಾರವಿಂದಂ ॥ ೨-೪೧.

ಫಣಾಮಣಿಪ್ರೇಕ್ಷ್ಯ ಖರಾಂಶುಬಿಂಬ ಸ್ಸಂಧ್ಯಾಸುವರ್ಣೇಮವಲೋಕ್ಯ ಭೀತಃ
ತಾಪಾಧಿಕೋವಾಸರಪನ್ನಗೇಂದ್ರಃ ಪ್ರಾಯೇಣಪಾತಾಳಬಲಂವಿವೇಶ॥ ೨-೪೨.

ಪ್ರದೋಷರಾಗಾರುಣ ಸೂರ್ಯಲಕ್ಷ್ಮಾದ್ವಿಶಾಗಜೋದ್ಭೃತ ಇವಾತಿಘೋರಃ
ಕಾಲೋಪನೀತಂಮಧುನಾಸಮೇತಂ ಮನ್ಯೇಪಯೋಧಿಃ ಕಬಳಂನ್ಯಭುಂಕ್ತ॥೨-೪೩.

ತಮಾಂಸಿದುರ್ವಾರಬಲಸ್ಸಕಾಲಃ ಪ್ರಾಯೋವಿಲೋಪ್ತುಂಗಹಸಾದಿಶಾಂಚ
ಮನಾಂಸಿಕಾಮಶ್ಚ ಮನಸ್ವಿನೀನಾಂ ಪ್ರಾಯುಂಕ್ತ ಶೈತ್ಯಾಧಿಕಮರ್ಧಚಂದ್ರಂ॥೨೫-೨.

ಈ ಕಾವ್ಯದಲ್ಲಿ ಉಪಮಾಲಂಕಾರ ವಾಕ್ಯಾಲಂಕಾರಗಳ ಬಾಹುಳ್ಯದಲ್ಲಿ ನೈಸರ್ಗಿಕವರ್ಣನೆಗಳು ಅಷ್ಟೊಂದು ಹೆಚ್ಚಾಗಿ ದೊರೆಯದಿದ್ದರೂ ಸಾಧಾರಣವಾಗಿ ಅಲ್ಲಲ್ಲಿ ಒಂದೊಂದು ದೊರೆಯುತ್ತದೆ. ಮಾದರಿಗಾಗಿ ಬರೆಯುವೆವು.

ರೋಮಂಥಫೇನಾಂಚಿತನೈಕ್ಷಭಾಗೈ
ರಸ್ಪಂದನೈರರ್ಧನಿಮೀಲಿತಾಕ್ಷೈಃ
ಅನಾದೃತಸ್ತನ್ಯರಸೈರ್ಮುಕುಂದಃ
ಕಂಡೂಯಿತೈರ್ನಿರ್ವೃತಿಮಾಪವತ್ಸೈಃ ॥ ೪-೪೪

ಶ್ರೀ ಕೃಷ್ಣನು ಕಾಳೀಯನ ದರ್ಪವನ್ನಡಗಿಸಿ. ಅವನ ಹೆಡೆಯಮೇಲೆ ಕಾಲೂರಿ ಕುಣಿಯುವುದಾದ ಈ ಶ್ಲೋಕವರ್ಣನವೂ, ಆ ಕುಣಿತಕ್ಕೆ ಸರಿಯಾದ ಆರೋಹಣ ಅವರೋಹಣಗಳಿಂದ ಕೂಡಿದ ಧ್ವನಿಯತಾನ ವಿತಾನಗಳು. ಎಷ್ಟು ಮನೋಹರವಾಗಿರುವುದೆಂಬದನ್ನು ನೋಡಿ :—

ಲೋಲಾಪತಚ್ಚರಣಲೀಲಾಹತಿಕ್ಷ್ವರಿತ ಹಾಲಾಹಲೀನಿಜಫಣೇ
ನೃತ್ಯಂತಮಪ್ರತಿಫಣಕೃತ್ಯಂತಮಪ್ರತಿಮಮತ್ಯಂತ ಚಾರುವಪುಷಂ
ದೇವಾದಿಭಿಸ್ಸಮಯಸೇವಾದರತ್ವರಿತಹೇವಾಕ ಘೋಷಮುಖಿರೈಃ
ದೃಷ್ಟಾವಧಾನಮಧತುಷ್ಟಾವಶೌರಿ ಮಹಿರಿಷ್ಟಾವರೋಧಸಹಿತಃ॥ ೧-೧೨

ವೆಂಕಟನಾಥನ ಕಾವ್ಯವಿಚಾರವಾಗಿ ಪ್ರಸಿದ್ಧಾಲಂಕಾರಿಕನಾದ ಅಪ್ಪಯ್ಯ ದೀಕ್ಷಿತನ ಹೇಳಿಕೆಯು ಹೀಗಿರುವುದು:—

ಇತ್ಥಂವಿಚಿಂತ್ಯಾಃ ಸರ್ವತ್ರ ಭಾವಾಃ ಸಂತಿ ಪದೇಪದೇ
ಕವಿತಾರ್ಕಿಕ ಸಿಂಹಸ್ಯ ಕಾವ್ಯೇಷು ಲಲಿತೇಷ್ವ ಪಿ॥

ಕಾವ್ಯೇಷು—ಲಲಿತೇಷ್ವಪಿ—ಎಂದು ಹೇಳಿ ಮುಗಿಸಿರುವುದು ಅಕ್ಷರಶಃ ನಿಜವಾದುದಾಗಿದೆ. ಮಾದರಿಗೆ ಮೇಲಣಶ್ಲೋಕಗಳೇ ಸಾಕೆಂದು ತೋರುವುದು.

(೧) ತದಾತ್ವೇ ನೂತನಂಸರ್ವ ಮಾಯತ್ಯಾಂಚಪುರಾತನಂ
ನದೋಷಾಯೈತದುಭಯಂ ನಗುಣಾಯಚಕಲ್ಪತೇ ॥ ಯಾ ಅ॥ ೧—೬.

ಎಂಬದು, ಅಪ್ಪಯ ದೀಕ್ಷಿತನು ಕುವಲಯಾನಂದದಲ್ಲಿ ಉದಾಹರಿಸಿಕೊಂಡಿರುವ ಕಾಳಿದಾಸನ ಮಾಳವಿಕಾಗ್ನಿ ಮಿತ್ರದ:—

ಪುರಾಣ ಮಿತ್ಯೇವ ನಸಾಧುಸರ್ವಂ

ಎಂಬುದನ್ನು ಹೇಗೆ ಹೋಲುವುದೆಂಬುದನ್ನು ನೋಡಿ.

ದುರ್ಗಣವನ್ನು ಮಾರ್ಪಡಿಸಿ ಸದಾಚಾರವಂತನನ್ನಾಗಿ ಮಾಡದ ಬಹು ವಿದ್ಯದಿಂದ ಏನುಪ್ರಯೋಜನ ಎಂಬ ಅರ್ಥವುಳ್ಳ:—

(೨) "ಸಚವೃತ್ತ ವಿಹೀನಸ್ಯನವಿದ್ಯಾಂಬಹ್ವಮನ್ಯತ " ೧—೨೨

ಎಂಬದು ಭರ್ತೃಹರಿ ಮೊದಲಾದ ನೀತಿಶಾಸ್ತ್ರಕಾರರು ಹೇಳಿರುವ ನೀತಿಸಾರವನ್ನು ಒಂದೇ ಪಾದದಲ್ಲಿ ಹೇಳಲ್ಪಟ್ಟಿರುವುದು.

(೩) ಅಪ್ಸಿತನಸಾಂರಾಜ್ಯಂ ಸೋದ್ಧಕಾಮಪರಾಙ್ಮುಖಂ
ಯದೃಚ್ಛಾಗತಮೈಶ್ವರ್ಯ ಮಾನೃಣ್ಯಾರುಚಿರನ್ಪಭೂಃ॥ ೧—೩೪.

ಕ್ಷಣ ಭಂಗುರವಾದ ಐಹಿಕ ವೃತ್ತಿಗೂ ಕರ್ತವ್ಯಕ್ಕಾಗಿ ಕರ್ತವ್ಯದ ಉಚ್ಚಧ್ಯೇಯಕ್ಕೂ ಜೀವದ ಅಂತ್ಯವನ್ನು ಕುರಿತು ಹೇಳುವುದಾದ ಈ ಶ್ಲೋಕವು ಎಷ್ಟು ಸಗುಣವಾಗಿದೆ.

ಇವುಗಳಲ್ಲದೆ ೪೩--೬೩ ರವರೆಗಿನ ವೈಕುಂಠವರ್ಣನವೂ. (ಒಂದನೆಯಸರ್ಗ) ಎರಡನೆಯಸರ್ಗದಲ್ಲಿ ದೇವಕಿಯ ಗರ್ಭವರ್ಣನವೂ, ತಕ್ಕುವಾದ ಉಪಮಾನೋಪಮೇಯಗಳಿಂದ ಬಹುಸುಗಮವಾಗಿ ಸಾಧಿಸಲ್ಪಟ್ಟಿದೆ.

ಶ್ರೀಕೃಷ್ಣನು ಅವತರಿಸಿದ ರಾತ್ರಿಯಲ್ಲಿನ ಚಂದ್ರೋದಯವರ್ಣನವು ಎಷ್ಟು ರಮ್ಯವಾಗಿರುವುದೆಂಬುದನ್ನು ನೋಡಿ ! ಇದನ್ನು ಅಪ್ಪಯ್ಯದೀಕ್ಷಿತನು ಕುವಲಯಾನಂದದಲ್ಲಿ (ರೂಪಕಸಂಕೀರ್ಣೋತ್ಪ್ರೇಕ್ಷಾ ಅಂಗಾಂಗೀ ಭಾವಸಂಕರಃ) ಎಂಬುದಕ್ಕೆ ಉದಾಹರಿಸಿಕೊಂಡಿರುವನು. *

ತಲೇಷ್ವವೇಪಂತಮಹೀರುಹಾಣಾಂ
ಛಾಯಾಸ್ತದಾಮಾರುತಕಂಪಿತಾನಾಂ
ಶಶಾಂಕಸಿಂಹೇನತಮೋಗಜಾನಾಂ
ಲೂನಾಕೃತೀನಾಮಿವಗಾತ್ರಖಂಡಾಃ ॥ ೨—೮೧

ಸಂಸಾರದಲ್ಲಿನ ಮಾನವನ ವಿಧಿಯವರ್ಣನವು ಎಂತಹ ಭಾವಾರ್ಥದಿಂದ ಕೂಡಿರುವುದು. ಎಂಬುದಕ್ಕೆ ಈ ಶ್ಲೋಕವನ್ನು ನೋಡಿ:—

ಘನಪವಃ ಪರಿಪಾಕಮಲೀಮಸೈ
ರ್ಮುರುಭಿರೂರ್ಮಿಭಿರನುಪದ್ರುತಃ
ಅತಿತತಾರದಿನಾಧಿಪತೇಸ್ಸುತಾ
ಮನಘಯೋಗಮನಾಇವಸಂಸೃತಿಂ ॥ ೩—೪೧

ಕೃಷ್ಣನು ಹಣ್ಣುತೆಗೆದುಕೊಳ್ಳಲುಬಂದ ಕೃಷ್ಣನ ಕೈಗಳನ್ನುನೋಡಿ ಹಣ್ಣು ಮಾರುವವಳ ಸುಮನೋಭಾವವರ್ಣನವು:—

ಸುಜಾತರೇಖಾತ್ಮಕಶಂಖಚಕ್ರಂ
ತಾಮ್ರೋದರಂತಸ್ಯಕರಾರವಿಂದಂ
ವಿಲೋಕಯಂತ್ಯಾಃ ಫಲವಿಕ್ರಯಿಣ್ಯಾ
ವಿಕ್ರೇತುಮಾತ್ಮಾನ ಮಭೂದ್ವಿಮರ್ಶಃ ॥ ೪—೩೧

(೧) **ಹಂಸಸಂದೇಶ:**—ಮಹಾಕವಿ ಕಾಳಿದಾಸನು ಆದಿಕವಿಯಾದ ವಾಲ್ಮೀಕಿಯು ಬರೆದಿರುವ ರಾಮಾಯಣದಲ್ಲಿ ಶ್ರೀರಾಮನು ಅಶೋಕವನದಲ್ಲಿರುವ ವಿರಹಿಣಿಯಾದಸೀತೆಗೆ ಹನುಮಂತನಮೂಲಕ ಹೇಳಿಕಳುಹಿಸಿರುವ ಸಂದೇಶವನ್ನು ನೋಡಿ ಅದಕ್ಕೆ ಅನುಗುಣವಾದ ವಿಷಯ, ಶೈಲಿ, ಮತ್ತು ವೃತ್ತಗಳೇ ಮೊದಲಾದವುಗಳ ಜೋಡಣೆಗಳಿಂದ ಬರೆದುದಾಗಿರುವ ಮೇಘಸಂದೇಶಕಾವ್ಯವನ್ನುನೋಡಿ ಅದ

* ಕುವಲಯಾನಂದ ಅಂಗಾಂಗೀಭಾವ ಸಂಕರೋಯಥಾ:—ಪುಟ ೧೭೯ ಅಲಂಕಾರ ಸಂಖ್ಯಾ ೧೨೦.

ರಂತೆಯೇ ಅಥವಾ ಅದಕ್ಕಿಂತ ಮಿಗಿಲೆನಿಸುವಂತಹ ಸಂದೇಶಕಾವ್ಯವನ್ನು ಬರೆಯಬೇಕೆಂಬ ಸ್ಪರ್ಧೆಯಿಂದ ವೆಂಕಟನಾಥನು ಹಂಸಸಂದೇಶವನ್ನು ಬರೆದಿರಬೇಕಾಗಿ ತೋರುತ್ತದೆ. ಮೇಘಸಂದೇಶದಲ್ಲಿ ವಿರಹಿಯಾದ ಯಕ್ಷನು ಪುಷ್ಕರಾವರ್ತನೆಂಬ ಮೇಘನನ್ನು ದೌತ್ಯಕ್ಕಾಗಿ ಬೇಡುವಿಕೆ, ಬಹುದೂರದಲ್ಲಿರುವ ತನ್ನ ಪ್ರಿಯತಮೆಯನ್ನು ಜ್ಞಾಪಿಸಿಕೊಂಡು ತಾನು ಬಿಟ್ಟುಬಂದುದರ ದೆಸೆಯಿಂದ ಪರಸ್ಪರ ಉಂಟಾಗಿರುವ ವಿರಹವೇದನೆ, ಶಾಪಾವಧಿಯುತೀರಿ ತಾನುಬರುವವರೆಗೂ ಉಳಿದುಕೊಳ್ಳಬೇಕೆಂಬ ಆಶಾಪೂರ್ವಕವಾದಕೋರಿಕೆ, ದೂತನವಿಚಾರದಲ್ಲಿ ಕಾವ್ಯನಿರ್ವಹಣಮಾಡಬಲ್ಲನೆಂಬ ಭರವಸೆ, ಶಕುನಗಳನಂಬುಗೆ, ಮಾರ್ಗಕ್ರಮಾಣವಿವರಣೆ, ವಿರಹಿಣಿಯ ಅವಸ್ಥಾಂತರಗಳು, ನಿರುಪದ್ರವವಾಗಿ ಮಾರ್ಗಕ್ರಮಣಮಾಡಿ ಪತ್ನಿಯೊಡನೆ ತನ್ನ ಕ್ಷೇಮವಾರ್ತೆಯನ್ನು ತಿಳುಹುವುದು, ಮಾರ್ಗದಲ್ಲಿ ದೊರಕುವುವಾದ ತೀರ್ಥಕ್ಷೇತ್ರಾದಿಗಳ ಮಹಾತ್ಮ್ಯವರ್ಣನೆ, ದೌತ್ಯವನ್ನು ಕೈಗೊಂಡಮೇಘರಾಜನಿಗೆ ಮಂಗಳಾಶಾಸನ ಇವೇ ಮೊದಲಾದವುಗಳನ್ನು ಸಮ್ಯಕ್ಪರಿಶೀಲಿಸಿ ಮೇಘಸಂದೇಶಕ್ಕಿಂತಲೂ ಇನಿದಾಗಿ ಬರೆಯಬೇಕೆಂದಾಶಿಸಿ ಬಹುತರ ಹಂಸಸಂದೇಶವನ್ನು ಬರೆದಿರಬೇಕಾಗಿ ಬೋಧೆಯಾಗುತ್ತದೆ. ಹಂಸಸಂದೇಶವು ಮೇಘಸಂದೇಶದ ಪಡಿನೆಳಲು. ಮೇಘ ಮತ್ತು ಹಂಸ ಸಂದೇಶಗಳಲ್ಲಿ ರಾಮಗಿರಿ ಮತ್ತು ಮಲಯಪರ್ವತಗಳ ಮಧ್ಯದಲ್ಲಿ ಎಲ್ಲಿಯೋ ಕೆಲವು ಪ್ರದೇಶಗಳನ್ನು ಹೊರ್ತು ಹಿಮಾಚಲದಿಂದ ಕನ್ಯಾಕುಮಾರಿಯವರೆಗಿನ ಇಂಡಿಯಾದೇಶದ ಮುಖ್ಯಭಾಗಗಳೆಲ್ಲವನ್ನೂ ಹೇಳಿದೆ. ಇವೆರಡು ಸಂದೇಶಕಾವ್ಯಗಳಲ್ಲಿಯೂ ಸಮಾನಾರ್ಥದ್ಯೋತಕವಾದ ಶಬ್ದಗಳೂ ಶ್ಲೋಕಗಳೂ ವರ್ಣನೆಗಳೂ ಇರುವುವು. ಮಾದರಿಗಾಗಿ ಕೆಲವನ್ನು ಇಲ್ಲಿಬರೆದಿದೆ.

ಪ್ರಯಾಣಮಾಡುವ ದೂತನಿಗೆ ಹಾಗೆಹೊರಡುವ ಮೊದಲು ಮುಖ್ಯ ಪ್ರೀತಿಪಾತ್ರರ ಅನುಜ್ಞೆಯನ್ನುಹೊಂದಿ ಅವರಸಹಾಯವನ್ನು ಕೋರಿಪ್ರಯಾಣಮಾಡಲು ನಾಯಕನು ಹೇಳುವಿಕೆ:—

(೧) ಆಪೃಚ್ಛಸ್ವ ಪ್ರಿಯಸಖಮಮುಂ ತುಂಗಮಾಲಿಂಗ್ಯ ಶೈಲಂ
ವಂದ್ಯೈಃ ಪುಂಸಾಂ ರಘುಪತಿಪದೈರಂಕಿತಂ ಮೇಖಲಾಸು
ಕಾಲೇ ಕಾಲೇ ಭವತಿ ಭವತೋ ಯಸ್ಯ ಸಂಯೋಗಮೇತ್ಯ
ಸ್ನೇಹವ್ಯಕ್ತಿಶ್ಚಿರವಿರಹಜಂ ಮುಂಚತೋ ಬಾಷ್ಪಮುಷ್ಣಂ ॥
ಮೇಘ ಸಂ ॥ ೧೨ ॥

ಪ್ರಕ್ಷೀಣಾಂ ತ್ವದ್ವಿರಹಸಮಯೇ ಜಾತಹರ್ಷಾಮಿದಾನೀಂ
ಪ್ರತ್ಯಾಯಾಸ್ಯ ನ್ನನುನಯ ಶನೈಃ ಪದ್ಮಿನೀಂ ಸ್ವಾದುವಾಚಾ
ಸಾ ತೇ ತಂತ್ರೀಸ್ವನಸುಭಗಯಾ ಸ್ಯಾದಿತೀಹಾಭ್ಯನುಜ್ಞಾಂ
ಮನ್ಯೇ ಕುರ್ಯಾನ್ಮಧುಕರಗಿರಾ ಮೈಥಿಲೀಸೌಹೃದೇನ ॥
ಹಂಸ ಸಂದೇಶ ॥

(೨) ಗ್ರಾಮ್ಯಮು ಸ್ತ್ರೀಯರ ಗೀತವರ್ಣನೆ ;—

ಪಾದನ್ಯಾಸೈಃ ಕ್ವಣಿತರಶನಾಸ್ತತ್ರ ಲೀಲಾವಧೂತೈಃ
ರತ್ನಚ್ಛಾಯಾಖಚಿತವಲಭೀಃ ಚಾಮರೈಃ ಕಾಂಚನಸ್ತ್ಂಭಾಃ
ವೇಶ್ಯಾಸ್ತತ್ರೋತ್ತರಪದಸಮಾರ್ದ್ರಾ ಪ್ರಯೋಗೈರ್ವಸಂತೇ
ಆಮೋಕಾಖ್ಯಂ ತವ ಮಧುಕರಶ್ರೇಣಿದೀಕ್ಷಾಗುರುತ್ವಂ ಕಟಾಕ್ಷೈಃ ॥
ಪೂರ್ವಮೇಘ ಸಂ ॥ ೨೯ ॥

ಸ್ರಸ್ತಾಪೀಡಪ್ರಚಲದಲಕಂ ವ್ಯಕ್ತತಾಟಂಕರತ್ನಂ
ಮುಕ್ತಾಚೂರ್ಣಸ್ಫುರಿತತಿಲಕಂ ವಕ್ತ್ರಮುತ್ತಾನಯಂತ್ಯಃ
ದೇಶೋ ತಸ್ಮಿನ್ ಕುವಲಯದೃಶೋ ಜಾತಕೌತೂಹಲಸ್ತ್ರೀಂ
ಮೂಲಾದೀಕ್ಷ್ಯೈರ್ಮಧುರವಿರುತಂ ಮಾನಯಿಷ್ಯತ್ಯಪಾಂಗೈಃ ॥
ಹಂಸ. ಸಂ. ॥

(೩) ನದಿಯಲ್ಲಿ ಸ್ನಾನಮಾಡಿ ಪಾಪಗಳನ್ನು ಕಳೆದುಕೊಳ್ಳೆಂದು ದೂತನಿಗೆ ಹೇಳುವಿಕೆ :—

ವಕ್ಷ್ಯಸ್ಯಂತರ್ಬಹಿರಪಿ ಪರಾಂ ಶುದ್ಧಿಮಕ್ಲೇಶಯೀಯಾಂ ॥
ಹಂಸ. ಸಂ ॥

ಅಂತಃಶುದ್ಧಸ್ತ್ವಮಪಿ ಭವಿತಾ ವರ್ಣಮಾತ್ರೇಣ ಕೃಷ್ಣಃ ॥
ಮೇಘ ಸಂ ॥ ೫೩ ॥

(೪) ಸಮಾನಾಭಿಪ್ರಾಯಕ್ಕೆ:—

ವಿದ್ಯುತ್ಪುಂಜಂ ಲಲಿತವನಿತಾಃ ಸೇಂದ್ರಚಾಪಂ ಸಚಿತ್ರಾಃ
ಸಂಗೀತಾಯ ಪ್ರಹತಮುರಜಾಃ ಸ್ನಿಗ್ಧಗಂಭೀರಘೋಷಂ
ಅಂತಸ್ತೋಯಂ ಮಣಿಮಯಭುವ ಸ್ತುಂಗ ಮಭ್ರಂಲಿಹಾಗ್ರಾಃ
ಪ್ರಾಸಾದಾಸ್ತ್ವಾಂ ತುಲಯಿತುಮಲಂ ಯತ್ರ ತೈಸ್ತೈರ್ವಿಶೇಷೈಃ ॥
ಉ. ಮೇಘಸಂ ॥೧॥

ಲೀಲಾಖೇಲಾಂ ಲಲಿತಗಮನಾ ಶ್ಚಾರುನಾದಂ ಸತಂಜಾಃ
ಭಲ್ಲಾಕ್ಷಂ ತ್ವಾಂ ಸ್ಮರಶರದೃಶೋ ಗೌರಮಾಪಾಂಡುರಾಂಗ್ಯಃ
ಮುಗ್ಧಾಲಾಪಂ ಮಧುರವಚಸೋ ಮಾನಸಾರ್ಹಂ ವನೋದ್ದೇಶಾಃ
ಯತ್ರಾನೀತಾಃ ಸುರಯುವತಯೋ ರಂಜಿಯೇಯುಃ ಸಮಗ್ರಂ ॥
ಹಂಸಸಂ ॥

(೫) ನಾಯಕಿಯಬಳಿಗೆ ದೂತನುಹೋಗಿ ಸಂಬಂಧವನ್ನು ಸೂಚಿಸುವಿಕೆ:—

ಭರ್ತುರ್ಮಿತ್ರಂ ಪ್ರಿಯಮವಿಧವೇ ವಿದ್ಧಿ ಮಾಮಂಬುವಾಹಂ
ತತ್ಸಂದೇಶೈರ್ಹೃದಯನಿಹಿತೈರಾಗತಂ ತ್ವತ್ಸಮೀಪಂ
ಯೋ ಬ್ಯಂದಾನಿ ತ್ವರಯತಿ ಪಥಿ ಶ್ರಾಮ್ಯತಾಂ ಪ್ರೋಷಿತಾನಾಂ
ಮನ್ಯೇ ಶಶ್ವದ್ಗುರುಷು ಗಣನಾಗ್ರೇಸರೋ ಗರ್ಜಿತೇನ ॥
ಉ. ಮೇ. ೧೦೨.

ಪತ್ಯುರ್ದೇವಿ ಪ್ರಣಯಸಚಿವಂ ವಿದ್ಧಿ ದಿಷ್ಟಾಯುಷೋ ಮಾಂ
ಜೀವಾತುಂ ತೇ ದಧತಮನಘಂ ತಸ್ಯ ಸಂದೇಶಮಂತಃ
ಶೂರಾಣಾಂ ಯಃ ಶರದುಪಗಮೇ ವೀರಪತ್ನೀವರಾಣಾಂ
ಸಂಮಾನಾರ್ಹಂ ಸಮಯಮುಚಿತಂ ಸೂಚಯೇಕ್ಕೂಜಿತೈ ಸ್ಸ್ವೈಃ ॥
ಹಂಸ. ಸಂ ॥

ಪಾತ್ರವಿವೇಚನೆ. ಮಹಾ ಕವಿಕಾಳಿದಾಸನು ತನ್ನ ಮೇಘ ಸಂದೇಶಕಾವ್ಯಕ್ಕೆ:—

ಕಶ್ಚಿತ್ (೧) ಕಾಂತಾವಿರಹಗುರುಣಾ (೨) ಸ್ವಾಧಿಕಾರಾತ್ಪ್ರಮತ್ತಃ
(೩) ಶಾಪೇನಾಸ್ತಂಗಮಿತಮಹಿಮಾ..... ....''

ಕಶ್ಚಿತ್:—ಯಾವನೋ ಹೆಸರು ಕುಲ ಶೀಲ ಗೋತ್ರ ವಯೋರೂಪ ಪದವಿ ವಿಹೀನನಾದ ಅನಾಮಧೇಯನಾದ ಒಬ್ಬ ಯಕ್ಷ.

ಕಾಂತಾವಿರಹಗುರುಣಾ:—(ಅವನಾದರೋ ಪ್ರಿಯತಮೆಯ ಅಗಲುವಿಕೆಯಿಂದ ಅನುಭವಿಸಲಶಕ್ಯವಾದ ವಿರಹದುಃಖದಿಂದ ಮ್ಲಾನನಾಗಿರುವನು.

ಸ್ವಾಧಿಕಾರಾತ್ಪ್ರಮತ್ತಃ-ತನ್ನ ಕೆಲಸದಲ್ಲಿ ಅಜಾಗರೂಕತೆಯಿಂದ ಮೈಮರೆತಿರುವವನು.

ಶಾಪೇನಾಸ್ತಂಗಮಿತಮಹಿಮಾ:—ಕುಬೇರನಶಾಪದಿಂದ ಹೋಗಲಾಡಿಸಲ್ಪಟ್ಟ ಮಹಿಮೆಯುಳ್ಳವನು. ಇಂತಹನಾಯಕನನ್ನು ಆರಿಸಿಕೊಂಡಿರುವನು.

ಹಂಸಸಂದೇಶಕಾರನು:—

ವಂಶೇಜಾತಸ್ಸವಿತುರನಘೇ(೧)ಮಾನರ್ಯ್ಯಮಾನುಷತ್ವಂ
ದೇವ(೨)ಶ್ಶ್ರೀರ್ಮಾ(೩)ಜನಕತನಯಾನ್ವೇಷಣೇಜಾಗರೂಕಃ (೪) ॥

ವಂಶೇಜಾತಸ್ಸವಿತುರನಘೇ :—ಅತ್ಯಂತಪರಿಶುದ್ಧವಾದ ಸೂರ್ಯಕುಲದಲ್ಲಿ ಹುಟ್ಟಿದವನು.

ದೇವಃ:—ಪರಮಪುರುಷನಾವ ಶ್ರೀರಾಮನು. ಮಾನರ್ಯಮಾನುಷತ್ವಂ:---ಲೋಕೋದ್ಧಾರಕ್ಕಾಗಿ ಮಾನವಲೀಲೆಯನ್ನು ಕೈಗೊಂಡವನು. ಶ್ರೀರ್ಮಾ:-ಸಕಲಗುಣಸಂಪದಸಮನ್ವಿತನು.

ಜನಕತನಯಾನ್ವೇಷಣೇಜಾಗರೂಕಃ:--ಸೀತೆಯನ್ನು ಹುಡುಕುವುದರಲ್ಲಿ ಕೊಂಚವೂ ಅಲಸಿಕೆಯಿಲ್ಲದೆ ಯಾವಾಗಲೂ ಜಾಗರೂಕನಾಗಿರುವವನು. ಇಂತಹನಾಯಕನನ್ನು ತನ್ನ ಕಾವ್ಯಕ್ಕೆ ಆರಿಸಿಕೊಂಡಿರುವನು. ಮೇಘಸಂದೇಶಕಾರನ ನಾಯಕನು ಲಕ್ಷಣಶಾಸ್ತ್ರಾನುಸಾರ "ಧೀರಲಲಿತ"ನೆನಿಸಿಕೊಳ್ಳುವನು. ಹಂಸ

ಸಂದೇಶಕಾರನು ತನ್ನ ಕಾವ್ಯಕ್ಕೆ ತಕ್ಕಂತೆ ಧೀರೋದಾತ್ತನಾಯಕನನ್ನಾರಿಸಿಕೊಂಡಿರುವನು. ಇವರಿರ್ವರೂ ಕಾವ್ಯಕ್ಕೆ ತಕ್ಕಂತೆನಾಯಕರಿಗೆ ತಕ್ಕುದಾದದೂತರನ್ನು ಆರಿಸಿಕೊಂಡು ಹೇಳಿರುವರು. ಮೇಘಸಂದೇಶಕಾರನು ದೌತ್ಯಕ್ಕೆ ಅಚೇತನವಾದ ಮೇಘವನ್ನು ಹೇಳಿರುವನು. ಏಕೆಂದರೆ ಕಾವಮಾರ್ತ್ತರಿಗೆ ಇದು ಚೇತನವಸ್ತು ಇದು ಅಚೇತನವಸ್ತು ಇಂತಹ ಅಚೇತನವಸ್ತುಗಳ ಮೂಲಕ ಕ್ಷೇಮಸಮಾಚಾರಗಳನ್ನು ಹೇಳಿಕಳುಹಿಸುವುದಾದರೆ ಅವು ಚೇತನವಸ್ತುಗಳಬಳಿಗೆ ಹೋಗಿಹೇಳಬಲ್ಲುವೆ ? ಹೇಗೆ? ಎಂಬ ಯುಕ್ತಾ ಯುಕ್ತ ಪರಿಜ್ಞಾನವಿಲ್ಲದೆ ಹೋಗುವುದರಿಂದಲೇ ನಾಯಕನಾದ ಯಕ್ಷನು ಕೇವಲ ಅಚೇತನವಾದ ಮೇಘವನ್ನು ಕುರಿತು ತನ್ನ ಕ್ಷೇಮಸಮಾಚಾರವನ್ನು ಪ್ರಿಯಳಸಮೀಪಕ್ಕೆ ತೆಗೆದುಕೊಂಡುಹೋಗಲು ಯಾಚಿಸಿರುವುದಾಗಿವರ್ಣಿಸಿರುವನು. ಅದು ಹೀಗಿರುವುದು:—

ಧೂಮಜ್ಯೋತಿಃಸಲಿಲಮರುತಾಂ ಸನ್ನಿಪಾತಃ ಕ್ವ ಮೇಘಃ
ಸಂದೇಶಾರ್ಥಾಃ ಕ್ವ ಪಟುಕರಣೈಃ ಪ್ರಾಣಿಭಿಃ ಪ್ರಾಪಣೀಯಾಃ
ಇತ್ಯೌತ್ಸುಕ್ಯಾದಪರಿಗಣಯ್ಯ ಗುಹ್ಯಕಸ್ತಂ ಯಯಾಚೇ
ಕಾಮಾರ್ತಾ ಹಿ ಪ್ರಕೃತಿಕೃಪಣಾಶ್ಚೇತನಾಚೇತನೇಷು॥ ಮೇ. ಸಂ ೫

ಹಂಸಸಂದೇಶಕಾರನು ತನ್ನ ಕಾವ್ಯಕ್ಕೆ ಧೀರೋದಾತ್ತನಾಯಕನನ್ನು ಆರಿಸಿಕೊಂಡು ವಿಷಯಕ್ಕೆ ತಕ್ಕುದಾದ, ಸಚೇತನವೂ ರಾಜಯೋಗ್ಯವೂ ಆದ ರಾಜಹಂಸನನ್ನು ಹೇಳಿರುವನು.

ಮಹಾಕವಿಕಾಳಿದಾಸನು ಪ್ರಣಿಯಿಜನರ ಮನೋವ್ಯತ್ತಿಗಳನ್ನು ವಿಧವಿಧವಾಗಿ ಚಿತ್ರಿಸಿ ಮನರಂಜನಮಾಡುವುದರಲ್ಲಿ ಅದ್ವಿತೀಯನೆಂಬುದು ಲೋಕವಿದಿತವಿಚಾರ. ಅದಕ್ಕೆ ಬೇಕಾದರಸಿಕರ ಪ್ರಣಯವಾರ್ತ್ತಾಂದೋಳನದಲ್ಲಿ ನೀತಿಹಾಸವಾಗದಂತೆ ಅವರ ಮನಸ್ಸನ್ನು ಲೀನಮಾಡಿ ತದುಚಿತ ರಸಪೋಷಣೆಯಿಂದ ಆಹ್ಲಾದಸಂದಾಯಿಯಾದ:—

ಮಧ್ಯೇ ಶಾಮಃಸ್ತನ ಇವಭುವಃ ಶೇಷವಿಸ್ತಾರಪಾಂಡುಃ

ಅಥವಾ,

ಸಭ್ರೂಭಂಗಂ ಮುಖಮಿವ ಪಯೋ ವೇತ್ರವತ್ಯಾಶ್ಚಲೋರ್ಮಿ

ಅಥವಾ,

ಲೋಲಾಪಾಂಗೈರ್ಯದಿ ನ ರಮಸೇ ಲೋಚನೈರ್ವಂಚಿತೋಸಿ

ಅಥವಾ

ಸಂಸರ್ಪಂತ್ಯಾಃ ಸ್ಖಲಿತಸುಭಗಂ ದರ್ಶಿತಾವರ್ತನಾಭಿಃ

ಅಥವಾ

ಜ್ಞಾತಾಸ್ವಾದಃ ಪುಲಿನಜಘನಾಂ ಕೋವಿಹಾತುಂ ಸಮರ್ಥಃ

ಎಂಬಿವೇ ಮೊದಲಾದವುಗಳನ್ನು ಹೇಳುವುದರಿಂದ ವಿಷಯೋದ್ದೀಪನ ಮಾಡಿರುವನಾದರೂ ನಾಯಿಕಾ ನಾಯಕರ ಪ್ರಣಯ ಸಂಭಾವ್ಯರೀತಿಯನ್ನನುಸರಿಸಿ ವಿಷಯ ಚಾಂಚಲ್ಯಕ್ಕೆಡೆಗೊಡದೆ ಅಸೀಮಚತುರತೆಯಿಂದ ಶೃಂಗಾರರಸಪೋಷಣೆಯನ್ನುಮಾಡಿ ಇಂತಹ ಅಮೋಘ ಕಾವ್ಯವನ್ನು ರಚಿಸಿರುವನಾದುದರಿಂದಲೇ ಅವನ ಕಾವ್ಯವು ಲೋಕಾದರ್ಶಕವಾಗಿ ಈಹೊತ್ತಿಗೂ ರಸಿಕರುತಲೆದೂಗುವಂತೆ ಬೆಳಗುತ್ತಿದೆ. ಹಾಗಲ್ಲದಿದ್ದರೆ ವಿಷಯ ಸುಖ ಅಥವಾ ಪಶುವೃತ್ತಿಯೇ ಪ್ರಧಾನವಾಗಿ ಹೇಳುವುವಾದ ಇತರ ಕ್ಷುಲ್ಲಕಗ್ರಂಥಗಳಂತೆ ಕಾಲಧರ್ಮದಲ್ಲಿ ಲಯವಾಗಿಹೋಗುತ್ತಿದ್ದಿತು. ಅಲ್ಲದೆ ಮೇಘಸಂದೇಶಕಾರನ ಕಾಲಕ್ಕೆ ಸಮಾಜವು ವಿಷಯ ಲೋಲುಪತೆಯಲ್ಲಿದ್ದುದಾಗಿಯೂ, ಇಂತಹಸರಳವಿಚಾರಗಳೇ ಜೀವಿತದಧ್ಯೇಯವಾಗಿದ್ದಿತಾಗಿ ಭಾಸವಾಗುತ್ತದೆ. ಹಂಸಸಂದೇಶದಲ್ಲಿ ಸ್ತ್ರೀವರ್ಣನಾದಿಗಳು ಇಲ್ಲದೆ ಇಲ್ಲ. ಎಲ್ಲಿಯೋಸಮಯಕ್ಕೆ ತಕ್ಕಂತೆ, ಚಂಚಲ ಮನಸ್ಸು ಉದ್ವಿಗ್ನವಾಗದಂತೆ, ಕೆಲವು ಮಾತ್ರವೇ "ಸ್ತೋಕೋನ್ಮಗ್ನ ಸ್ಫುರಿತಪುಳಿನಾಂತ್ವನ್ನಿವಾಸೇಚ್ಛಯೇವ" ಎಂಬ ಇಂತಹವುಗಳು ಅಲ್ಲಲ್ಲಿ ದೊರಕಬಹುದು. ಇವುಗಳಿಂದ ಕಾವ್ಯಸೌಂದರ್ಯಕ್ಕೆ ಮೆರಗುಕೊಟ್ಟಂತಾಗಿರುವುದಲ್ಲದೆ ಚೇತನವನ್ನು ವಿಷಯಾವಾಸನೆಗೆ ಎಳೆಯುವುವಾಗಿಲ್ಲ. ಹೀಗಾಗಿ ವೆಂಕಟನಾಥನು ಹೇಳುವುದಕ್ಕೆ ಬೇಕಾದವಿಷಯಗಳನ್ನು ರಾಮಾಯಣದಿಂದ ತೆಗೆದುಕೊಂಡು ಮಾದರಿಗಾಗಿ ಮೇಘ ದೂತವನ್ನಿಟ್ಟುಕೊಂಡು ಬರೆದಿರುವುದು ನೈಜವಾಗಿದೆ. ಮೇಘ ಸಂದೇಶಕಾರನು ತನ್ನ ಕಾವ್ಯಕ್ಕೆ ಸೊಗಯಿಸುವ ವರ್ಷರ್ತುವನ್ನು ಕುರಿತುಹೇಳಿರುವನು. ವೆಂಕಟನಾಥನು ತನ್ನ ಕಾವ್ಯಕ್ಕೆ ಅನುಗುಣನಾದ ಶರದೃತುವನ್ನು ಕೊಂಡಾಡಿರುವನು. ಶ್ರೀರಾಮನು ಶರದೃತುವು ಪ್ರಾರಂಭವಾದುದನ್ನು ನೋಡಿ ಯುದ್ಧಕ್ಕೋಸ್ಕರ ಸೈನ್ಯದೊಡನೆ ಹೊರಟುದಾಗಿಹೇಳಿದೆ. ಏಕೆಂದರೆ ದಂಡಯಾತ್ರೆಗೆ ಶರದೃತುವು ಅನುಕೂಲಸಮಯ. ಅಲ್ಲದೆ ಈ ಋತುವಿನಲ್ಲಯೇ ಹಂಸಗಳು ಹಿಮಾಲಯದೊಳಗಿರುವ ಮಾನಸರೋವರದಿಂದಹೊರಟು ದಕ್ಷಿಣಕ್ಕೆ ಬರುವುದಾಗಿಯೂ ಹೇಳಿದೆ.

ಆಂಜನೇಯನು ಅಶೋಕವನದಲ್ಲಿರುವ ವಿರಹಕ್ಲಾಂತಳಾದ ಸೀತೆಗೆ ರಾಮ ಸಂದೇಶವನ್ನು ತಿಳಿಸಿ ಅವಳಿಂದ ಕೊಡಲ್ಪಟ್ಟ ಚೂಡಾಮಣಿಯನ್ನು ತೆಗೆದುಕೊಂಡು ಬಂದು ಮಲಯಪರ್ವತಕ್ಕೆ ಹಿಂತಿರುಗಿ ಶ್ರೀರಾಮನಿಗೆ ಚೂಡಾಮಣಿಯನ್ನು ಕೊಟ್ಟು ಈ ಹೊತ್ತಿನಿಂದ ಒಂದು ತಿಂಗಳೊಳಗಾಗಿ ಬಂದು ತನ್ನನ್ನು ಕರೆದುಕೊಂಡು ಹೋಗದಿದ್ದರೆ, ಉಳಿಯೆನೆಂಬರ್ಥವುಳ್ಳ,

ಧಾರಯಿಷ್ಯಾಮಿಮಾಸಂತು ಜೀವಿತಂಶತ್ರುಸೂದನ
ಮಾಸಾದೂರ್ಧ್ವಂನಜೀವಿಷ್ಯೇ ತ್ವಯಾಹೀನಾನ್ಯಪಾತ್ಮಜ ॥

ಎಂಬ ಸಂದೇಶವನ್ನು ಶ್ರೀರಾಮನಿಗೆ ಹೇಳುವನು. ಇನ್ನು ರಾಮನಿಗೆ ಸಾವ ಕಾಶವಿಲ್ಲ. ಸೀತೆಯು ಹೇಳಿಕಳುಹಿಸಿದಂತೆ ಒಂದುತಿಂಗಳೊಳಗಾಗಿ ಸೈನ್ಯದೊಡನೆ ಲಂಕೆಗೆಹೋಗಿ ಸೀತೆಯನ್ನು ಬಿಡಿಸಿಕೊಂಡೇ ಬರಬೇಕು. ಒಂದು ದಿವಸದ ಸಾವಕಾಶವೆಂದರೂ ವಿಚಾರವು ವಿಪರ್ಯಾಸದಲ್ಲಿ ಪರಿಣಮಿಸಬಹುದಾದ ಸಂಭವ, ಇತ್ಯಾದಿ ಯೋಚನೆಗಳಲ್ಲಿ ಶ್ರೀರಾಮನು ಮಗ್ನನಾಗಿದ್ದಾಗ ಅನತಿದೂರದಲ್ಲಿರುವ ಪದ್ಮಕಾಸಾರದಲ್ಲಿ ವಿಹರಿಸುತ್ತಿರುವ ಹಂಸದಮೇಲೆ ದೃಷ್ಟಿಯುಬಿದ್ದು, ಸೀತೆಯ ನಡಿಗೆಯನ್ನು ಅನುಕರಿಸುವ ಅದರ ಗಂಭೀರ ಗಮನವನ್ನೂ, ಸೀತೆಯ ಶುಭ್ರವಾದ ಉಡಿಗೆಗಳನ್ನು ಹೋಲುವ ಅಥವಾ ಶುಭ್ರದುಕೂಲಗಳಂತಿರುವ ಪಕ್ಷಧಾವಳ್ಯ ವನ್ನೂ, ಸೀತೆಯ ಕಾಲಂದಿಗೆಯ ಝಣತ್ಕಾರವನ್ನು ಹೋಲುವಂತಿರುವ ಧ್ವನಿ ಯನ್ನೂ ಕೇಳಿ, ನೋಡಿ ಸೀತೆಯನ್ನು ಜ್ಞಾಪಿಸಿಕೊಂಡು:—

ತಸ್ಮಿನ್ ಸೀತಾಗತಿಮನುಗತೇ ತದ್ದುಕೂಲಾಂಕಮೂರ್ತೌ
ತನ್ಮಂಜೀರಪ್ರತಿಮನಿನದೇನ್ಯಸ್ತನಿಷ್ಪಂದದೃಷ್ಟಿಃ
ಧೀರಶ್ಚೇತೋವಿಲಯಮಗಮತ್ತನ್ಮಯತ್ವಾಮುಹೂರ್ತಂ
ಶಂಕೇತೀವ್ರಂಭವತಿಸಮಯೇಶಾಸನಂ ಮಾನಕೇತೋಃ ॥

ಎಂಬಂತೆ ಮುಹೂರ್ತಕಾಲ ವಿರಹಸ್ತಬ್ಧನಾಗಿದ್ದರೂ, ಧೀರಚೇತನನಾದ ಶ್ರೀರಾಮನು ಅಂತಹ ಚಿತ್ತವಿಭ್ರಮಕ್ಕೆ ಅವಕಾಶಕೊಡದೆ ಇರುವನು. ಮೇಘ ಸಂದೇಶದ ಯಕ್ಷನು ವರ್ಷಾಕಾಲದ ಮೇಘವನ್ನು ನೋಡಿದ ಕೂಡಲೇ ತನ್ನ ಪ್ರಿಯತಮೆಯನ್ನು ನೆನಿಸಿಕೊಂಡು ವಿರಹಾತಿರೇಕದಿಂದ ಮೈಮರೆತು ಅಧೀರನಾಗಿ ಹೋಗಿರುವನು. ಶ್ರೀರಾಮನು ಹನುಮನೊಡನೆ ಸಸೈನ್ಯನಾಗಿ ಸಮುದ್ರವನ್ನು ದಾಟಿ ಲಂಕೆಯನ್ನು ಮುತ್ತಿ ರಾಕ್ಷಸರನ್ನು ನಿರ್ಮೂಲಮಾಡಿ ಸೀತೆಯನ್ನು ಬಿಡಿಸಿ ಕೊಂಡು ಹೋಗುವುದಾಗಿ ಹೇಳಿಕಳುಹಿಸಿದ ಶ್ರೀರಾಮ ಸಂದೇಶವನ್ನೂ ಹೇಳಿ ಬಂದ ಆಂಜನೇಯನಿಗಿಂತಲೂ ಅನೇಕ ವಿಚಾರಗಳಲ್ಲಿ ಸೀತೆಯನ್ನು ಹೋಲುವು ದಾದ ಹಂಸವನ್ನು ಪ್ರೀತಿಸುವುದು ಸ್ವಾಭಾವಿಕವಾದುದಾಗಿಯೇ ಇದೆ. ಅಲ್ಲದೆ ಈ ಹಂಸವು ತನ್ನ ಸಂದೇಶವನ್ನು ಸೀತೆಯಬಳಿಗೆ ಹೋಗಿ ಹೇಳಬಲ್ಲುದೇ ಹೇಗೆಂಬ ವಿಚಾರದಲ್ಲಿ ಸಂಶಯಗೊಂಡವನಾಗದಿದ್ದು ದರಿಂದಲೇ:—

ವಿಶ್ಲೇಷೇಣಕ್ಷುಭಿತಮನಸಾಂ ಮೇಘಶೈಲದ್ರುಮಾದೌ
ಯಾಚ್ಞಾದೈನ್ಯಂಭವತಿಕಿಮುತಕ್ಷ್ವೇಡಿಸಂವೇದನಾರ್ಹೇ ॥

ಎಂದು ಹೇಳಿಕೊಂಡಿರುವನು. ಕಾಳಿದಾಸನು ನಿರ್ಜೀವವಸ್ತುವಾದ ಮೇಘ ನನ್ನು ದೌತ್ಯಕ್ಕೆ ಪ್ರಾರ್ಥಿಸಿಕೊಂಡಿರುವಂತೆ ವಿರಹಸಂತಪ್ತನಾದ ಶ್ರೀರಾಮನು ರಾಮಾಯಣದಲ್ಲಿ ಪರ್ವತಗಳನ್ನೂ ಮರಗಳನ್ನೂ ಕುರಿತು ಪ್ರಾರ್ಥಿಸಿರುವಂತೆ ಕಂಡುಬರುವುದು.

ಕಚ್ಚಿತ್ಕ್ಷಿತಿಭೃತಾಂನಾಥ ದೃಷ್ಟ್ವಾಸರ್ವಾಂಗಸುಂದರೀ
ರಾಮಾರಮ್ಯೇವನೋದ್ದೇಶೇ ಮಯಾವಿರಹಿತಾತ್ವಯಾ ॥

ಎಂದು ಪರ್ವತಗಳನ್ನೂ,

ಕದಂಬಯದಿಜಾನೀಷೇ ಹಂಸಸೀತಾಂಶುಭಾನನಾಂ
ಯದಿಕಾಲತ್ವಯಾದೃಷ್ಟಾ ಪಕ್ವತಾಲಫಲಸ್ತನೀ ॥

ಎಂದು ಮರಗಳನ್ನೂ ಕೇಳಿಕೊಂಡಿರುವದು ವರ್ಣಿತವಾಗಿರುವುದು. ಆದರೆ ಹಂಸಸಂದೇಶದಲ್ಲಿ ಹೀಗಿರುವುದಿಲ್ಲ. ಇಲ್ಲಿ ಹಂಸವು ಜೀವಸಹಿತವಾಗಿರುವದು. ಆ ಪ್ರಾಣಿಗೆ ಸಂವೇದನಾರ್ಹತೆಯು ಇದ್ದೇ ಇರುವುದು. ಹೇಗೆಂದರೆ ರಾಮಾಯಣದಲ್ಲಿ ಶ್ರೀರಾಮನು ವನ್ಯಮೃಗಪಕ್ಷಿಗಳನ್ನೂ ನೋಡಿ ತನ್ನ ಪ್ರಿಯತಮೆಯಾದ ಸೀತೆಯನ್ನು ಎಲ್ಲಿಯಾದರೂ ನೋಡಿದಿರಾ ನೋಡಿದಿರಾ ಎಂದು ಬಗೆ ಬಗೆಯಾಗಿ ಹಂಬಲಿಸಿ ಕೇಳಿದುದಕ್ಕೆ ಅವು ಸೀತೆಯನ್ನು ನೋಡದಿದ್ದರೂ ಸೀತಾನ್ವೇಷಣ ತತ್ಪರನಾದ ರಾಮನಿಗೆ ಶರೀರದ ಚಲನದಿಂದ ಸೀತೆಯನ್ನು ನೋಡಿದು ದಾಗಿ ತೋರ್ಪಡಿಸಿಕೊಂಡು ವಿರಹದುಃಖಿಯಾದ ಶ್ರೀರಾಮನಿಗೆ ಸಹಾಯವನ್ನು ಮಾಡಲಿಲ್ಲವೇ!

ಏವಮುಕ್ತಾನರೇಂದ್ರೇಣ ತೇಮೃಗಾಸ್ಸಹಸೋತ್ಥಿತಾಃ
ದಕ್ಷಿಣಾಭಿಮುಖಾಸರ್ವೇ ದರ್ಶಯಂತೋನಭಸ್ಥಲಂ
ಮೈಥಿಲೀಪ್ರಿಯಮಾಣಾಸು ದಿಶಂಯಾಮನ್ವಪದ್ಯತ ॥

ಹಂಸಸಂದೇಶಕಾರನು ಎಂದು ಹೇಳಿರುವುದರಿಂದ, ರಾಮನು ಹಂಸದಲ್ಲಿ ಒಂದು ವಿಧವಾದ ಅವ್ಯಾಜಬಂಧುತ್ವವನ್ನಾರೋಪಿಸಿ ಹಂಸವನ್ನು ಪ್ರಾರ್ಥಿಸಿರುವನೆಂಬುದು ಸಯುಕ್ತಿಕವೆಂದೂ ಶ್ರೀರಾಮನು ಹಂಸವನ್ನು ಕುರಿತು ಲಂಕೆಗೆ ಹೋಗಬೇಕಾದ ಗುರುತರಕಾರ್ಯವು ಇರುವುದೆಂದೂ ಇನ್ನೂ ದಕ್ಷಿಣಾಭಿಮುಖವಾಗಿ ಪದ್ಮಕಾಸಾರಗಳನ್ನರಸುತ್ತಾ ಹೋಗಲು ಎಲ್ಲಿಯಾದರೂ ಅತ್ಯಂತ ದಕ್ಷಿಣಭಾಗವು ರಾಕ್ಷಸರಿಂದ ಆವೃತವಾಗಿರುವುದೆಂದೂ, ಅಲ್ಲಿಗೆ ಹೋಗಬಾರದೆಂದೂ, ಹಾಗೆ ಒಂದು ವೇಳೆ ಹೋಗುವದಾದರೆ ತನ್ನ ಕಾರ್ಯವು ಕೆಡುವುದಲ್ಲದೆ ಹಂಸದ ಬುದ್ಧಿಯು ಮಾರ್ಪಟವಾಗಬಹುದಾಗಿ ಶಂಕಿಸಿ:—

ಸ್ಥಾನೈರ್ದಿವ್ಯೈರುಪಚಿತಗುಣಾಂ ಚಂದನಾರಣ್ಯರಮ್ಯಾಂ
ಮುಕ್ತಾಸೂತಿಂಮಲಯಮರುತಾಂ ಮಾತರಂದಕ್ಷಿಣಾಶಾಂ
ಅಸ್ಮತ್ಪ್ರೀತ್ಯೈಜನಕತನಯಾ ಜೀವಿತಾರ್ಥಂಚಗಚ್ಛ
ಏಕಂರಕ್ಷಃ ಪದವಿತಸಖೇ ದೋಷಲೇಃಶಂಸಹೇಧಾಃ ॥ ಹಂ. ಸಂ ೯.

ಎಂದು ಹಂಸವನ್ನು ಕುರಿತು ಪ್ರಾರ್ಥಿಸಿ ಹೇಳಿಕಳುಹಿಸುವುದು "ಜನಕತನಯಳ ಜೀವಿತಾರ್ಥ"ಕ್ಕಾಗಿ ಹೋಗುವುದು ಪುನೀತವಾದುದಾದುದರಿಂದ ಇದರ

ಲ್ಲಾವುದಾದರೂ ದೋಷವಿರುವುದಾಗಿದ್ದರೂ "ಏಕೋಹಿದೋಷೋಗುಣಸನ್ನಿಪಾತೇ ನಿಮಜ್ಜತಿ" ಕ್ಷಮಾರ್ಹವಾದುದುದಾಗಿಯೇ ಇರುವುದು. ಎಂದುಹೇಳಿರುವಂತೆ. ಎಲೌ! ಹಂಸ!

ಪ್ರಕ್ಷೀಣಾಂತ್ಪದ್ವಿರಹಸಮಯೇ ಜಾತಹರ್ಷಾಮಿದಾನೀಂ
ಪ್ರತ್ಯಾಯಾಸ್ಯನ್ನನುನಯಶತೈಃ ಪದ್ಮಿನೀಂ ಸ್ವಾದುವಾಚಾ ॥

ಎಂಬಂತೆ ನೀನು ಹೊರಡುವ ಮೊದಲು ನಿನ್ನ ದಯಿತೆಯಾದ ಪದ್ಮಿನಿಯ ಅನುಜ್ಞೆಯನ್ನು ಪಡೆದು ಹೊರಡಬೇಕು. ಏಕೆಂದರೆ ನಿನ್ನವಿರಹದಿಂದ ಬಹು ಕಾಲ ಪರಿತಪಿಸುತ್ತಿದ್ದು ಈಗತಾನೇ ಬಂದಿರುವ ಹಂಸರಾಜನಿಂದ ವಿಯೋಗವನ್ನನುಭವಿಸಬೇಕಾದುದಲ್ಲಾ ಎಂದು ದುಃಖಿಸುವ ಪದ್ಮಿನಿಗೆ ಉಪಾಯಾಂತರದಿಂದ ಸಾಧ್ಯವಾದಷ್ಟು ಜಾಗ್ರತೆಯಾಗಿ ಬಂದು ಪುನಃ ನಿನ್ನನ್ನು ಸೇರುವೆನೆಂದು ಮೆಲ್ಲನೆ ಹೇಳುವನಾಗು. ಹೀಗೆಹೇಳುವುದಾದರೆ ಪದ್ಮಿನಿಯು ಬಹುಕಾಲಕ್ಕೆ ಬಂದುಸೇರಿದ ಸ್ವಾಮಿಯನ್ನು ಇಷ್ಟು ಜಾಗ್ರತೆಯಾಗಿ ಬಿಟ್ಟುಕೊಡುವಳೇ ಹೇಗೆ ? ಎಂದು ಅನುಮಾನ ಬಂದರೆ ಶ್ರೀರಾಮನಿಗೆ ಈ ವಿಚಾರದಲ್ಲಿ ಸಂದೇಹವೇ ಇಲ್ಲ. ಏಕೆಂದರೆ.—

ಸಾತೇತಂತ್ರೀಸ್ವನಸುಭಗಯಾ ಸ್ಯಾದಿತೀಹ್ಯಾಪ್ಯನುಜ್ಞಾಂ
ಮನ್ಯೇಕುರ್ಯಾನ್ನಧುಕರಗಿರಾಮೈಥಿಲೀಸೌಹೃದೇನ ॥

ಎಂಬಂತೆ ಹಂಸದಪ್ರಣಯಿನಿಯುಪದ್ಮಿನಿ. ಸೀತೆಯೂ ಪದ್ಮಿನಿ, ಪದ್ಮಜೆ, ಮತ್ತು ಪದ್ಮಾಲಯೆ. ಆದುದರಿಂದ ಇವರಿರ್ವರಿಗೂ ಪರಸ್ಪರ ಮೈತ್ರಿಯು ಹುಟ್ಟಿರಲೇಬೇಕು. ಪ್ರಾಯಕವಾಗಿ ಹೆಂಗಸರ ಕಷ್ಟವನ್ನು ಹೆಂಗಸರು ಅರಿತು ಮರುಕಗೊಳ್ಳುವಂತೆ ಗಂಡಸರು ಅರಿತುಕೊಳ್ಳಲಾರರು. ಸ್ತ್ರೀಹೃದಯವನ್ನು ಸ್ತ್ರೀಯೇಕಂಡು ಹಿಡಿದು ಮೆಚ್ಚುವಳು. ಆದುದರಿಂದಲೇ ಯಕ್ಷನು ಮೇಘನನ್ನುಕುರಿತು ಉಜ್ಜಯಿನಿಯಲ್ಲಿ ತಮ್ಮ ತಮ್ಮ ವಿಟರನ್ನು ಬೆರೆಯಲು ಸಂಕೇತಸ್ಥಳವನ್ನುಕುರಿತು ಸಾರುತ್ತಿರುವ ಅಭಿಸಾರಿಕೆಯರನ್ನು ಎಲೈ! ಮೇಘವೆ! ನಿನ್ನ ಗುಡುಗಿನ ಗರ್ಜನೆಯಿಂದ ಹೆದರಿಸಕೂಡದೆಂದೂ, ಗಾಡಾಂಧಕಾರದಲ್ಲಿ ಮಾರ್ಗಕ್ರಮಣಮಾಡಲು ಮಾರ್ಗದೊರಕದೇ ಹೋಗುವುದರಿಂದ ಅಂತಹರ ಬಳಿಗೆ ನಿನ್ನಭಾರ್ಯೆಯಾದ ವಿಂಜೆನ್ನು ಸಹಾಯಕ್ಕೆ ಕಳುಹಿಸಿಕೊಡಬೇಕೆಂತ ಪ್ರಾರ್ಥಿಸಿಕೊಂಡಿರುವನು. ಹೀಗೆ ಅಪರಿಚಯ ಪಾಂಥಸ್ತ್ರಿಯರ ವಿಚಾರದಲ್ಲಿ ಇಷ್ಟು ಪ್ರೀತಿಯು ಇರುವಾಗ ಕೇವಲ ರಕ್ತಸಂಬಂಧಿಗಳನ್ನು ಪ್ರೀತಿಸುವುದು ಸ್ವಾಭಾವಿಕವಾದುದಾಗಿಯೇ ಇರುವುದು. ಇದಲ್ಲದೆ ಲೋಕದಲ್ಲಿ ತಮ್ಮ ಪ್ರೀತಿಪಾತ್ರರಾದ ಮಕ್ಕಳನ್ನು ಬಹುದೂರದೇಶಕ್ಕೆ ಅಥವಾ ಅಪರಿಚಯಸ್ಥಳಕ್ಕೆ ಕಳುಹಿಸಿಕೊಡಬೇಕಾದ ಸಂದರ್ಭದಲ್ಲಿ ತಾಯಿತಂದೆಗಳು ಆ

ಮುಕ್ಕಲಿಗೆ ದುರ್ಮಾರ್ಗಕ್ಕೆ ಹೋಗಕೂಡದೆಂದೂ, ಹಾಗೆ ಹೋದರೆ ಹಾನಿತಟ್ಟದೆ ಇರದೆಂದೂ ಬುದ್ಧಿವಾದವನ್ನು ಹೇಳುವಂತೆ ಶ್ರೀರಾಮನು ಹಂಸವನ್ನು ಕುರಿತು :—

ಉಚ್ಚೀಯೇಥಾಸ್ಸರಸಿಜವನಾದ್ಭಕ್ಷಿಣಾಶಾನುಸಾರೀ
ಪಶ್ಯೇದೂರಾತ್ ಪ್ರಬಲಗರುತಾಂ ಪಕ್ಷಿಣಾಂದಕ್ಷವರ್ತ್ಮಾ ॥

ಎಂದು ಹೇಳಿಕಳುಹಿಸಿರುವನು. (ಇಲ್ಲಿ ಶ್ರೀರಾಮನಿಗೆ ತನ್ನ ಕಾರ್ಯವು ಕೆಡುವುದೆಂಬ ಭಯ. ಅಲ್ಲದೆ, ಅರಿಯದಸ್ಥಳಕ್ಕೆ ಕಳುಹಿಸಿದನೆಂಬ ಅಪವಾದ ಭಯ.)

ಎಲೈ ! ಹಂಸವೆ ! ನೀನು ಮಲಯ ಪರ್ವತದಿಂದ ಹಾರಿಹೋಗುವಾಗ ಮಾರ್ಗದಲ್ಲಿ ಕಂಡುಬರುವ ವಿನೋದಗಳನ್ನು ನೋಡುತ್ತಾ ಹೆಳ್ಳಿಯಪಾಮರಿಯರು " ಸಭ್ರೂ ಭಂಗೇಷ್ವಧಿಕ ಸುಭಗೈರ್ನಿಶ್ಚಿತಾಂಗಃ ಕಟಾಕ್ಷೈಃ " " ಭ್ರೂವಿಲಾಸಾನ ಭಿಜ್ಞೈಃ " "ಪ್ರೀತಿಸ್ನಿಗ್ಧೈರ್ಜನಪದವಧೂಲೋಚನೈಃ ಪೀಯಮಾನಃ" ಎಂಬಂತೆ ರೆಪ್ಪೆ ಮುಚ್ಚದೆ ನಿನ್ನನ್ನೇ ನೋಡುವರಾಗಿರಲು ಒಂದು ಕಡೆ ಆಂಧ್ರದೇಶ ಮತ್ತೊಂದುಕಡೆ ಕರ್ಣಾಟದೇಶ ಈ ಮಧ್ಯೆಹಾರಿಹೋಗುತ್ತಿರುವನಾಗಿ, ಪೈರುಪಚ್ಚೆಗಳನ್ನು ಕೆಡಿಸುವುವಾದಪಕ್ಷಿಗಳನ್ನೂ, ಕೀಟಗಳನ್ನೂ ಓಡಿಸುವುದಕ್ಕಾಗಿ ಗದ್ದೆಗಳನ್ನು ಕಾಯುತ್ತ ಮಾವುರಗಳಡಿಯಲ್ಲಿ ಮಲಗಿ ಸುಖಪಾರವಶ್ಯದಿಂದ ಹಾಡುತ್ತಿರುವ ಹಳ್ಳಿಯ ಹುಡುಗಿಯರ ಗಾನವನ್ನು ಕೇಳುತ್ತ ಅಲ್ಲ ಕಾಣಬರುವ ತಿರುಪತಿಯನ್ನು ಸಾರ್ವಭೌಮಾದ್ರೀಶನಾದ ವೆಂಕಟೇಶ್ವರನನ್ನು ನಮಿಸಿ ಸ್ತುತಿಸಿ (ಹೊರಡುವಾಗ ಕುಲದೈವವನ್ನು ಸ್ತುತಿಸಿ ಕೈಗೊಂಡಕಾರ್ಯವು ಜಯಪ್ರದವಾಗಲೆಂದು ಪ್ರಾರ್ಥಿಸಿ ಪ್ರಯಾಣಮಾಡುವುದು ವಾಡಿಕೆ. ಹಾಗಲ್ಲದಿದ್ದರೆ ಕಾರ್ಯಸಿದ್ಧಿಯಾಗದಾಗಿ ಅವರ ನಂಬುಗೆ) ದಕ್ಷಿಣಕ್ಕಿರುವ ಕಾಳಹಸ್ತೀಶ್ವರನ ಅರ್ಚನೆಗಾಗಿ ದಡದಲ್ಲಿ ಬೆಳೆದಿರುವ ಪರಿಮಳ ಪೂಗಳನ್ನೆತ್ತಿಕೊಂಡು ಹೋಗುವಂತೆ ಮಂದಗಮನದಿಂದ ಪ್ರವಹಿಸುತ್ತಿರುವ ಸುವರ್ಣಮುಖೀನದಿಯ ಸಾಂದ್ರಪುಳಿನ ಪ್ರದೇಶಗಳನ್ನು ನೋಡಿ ಆನಂದಿಸುತ್ತ ಆ ಸುಸೋಹರಸೋಟದಲ್ಲಿಯೇ ಹೆಚ್ಚು ಹೊತ್ತನ್ನು ಕಳೆಯದೆ (ಹಾಗೆ ಹೆಚ್ಚಾಗಿ ಹೊತ್ತು ಕಳೆಯುವುದಾದರೆ ತನ್ನ ಉದ್ದಿಶ್ಯಕಾರ್ಯಕ್ಕೆ ಭಂಗ ಬರಬಹುದು. ಅಥವಾ ಆ ಸುಂದರನೋಟವನ್ನು ನೋಡುತ್ತ ಜಾಗ್ರತೆಯಾಗಿ ಹೊರಡಲನುವಾಗದಿರುವ ಅವನಿಗೆ ಕಾರ್ಯ ಗೌರವವನ್ನು ಜ್ಞಾಪಿಸಿ) ಕೆಲವು ಕಾಲ ಅಥವಾ ಕೊಂಚಹೊತ್ತು ವಿಹರಿಸಿ ಅಲ್ಲಲ್ಲಿತಿರುಗಾಡುತ್ತಿರುವ ಕಿರಾತರಿಗೆಸಿಕ್ಕದೆ ಶೀಘ್ರವಾಗಿ ಮುಂದಕ್ಕೆ ಪ್ರಯಾಣಮಾಡುವನಾಗು. (ಹಾಗೆ ಅಲ್ಲಿಯೇ ಹೆಚ್ಚು ಹೊತ್ತು ವಿಹರಿಸುತ್ತಿರುವೆಯಾದರೆ ಕಿರಾತರಕೈಗೆ ಸಿಕ್ಕಿ ಪ್ರಾಣಾಪಾಯವು ಒದಗುವುದಲ್ಲದೆ ತನ್ನ ಕೆಲಸವೂ ಕೈಗೂಡದೆ ಹೋಗುವುದಾದುದರಿಂದ ಎಚ್ಚರಿಕೆಯಾಗಿರು) ಈ ವಿಚಾರದಲ್ಲಿ ಕವಿಯು ಹೇಳಿರುವುದಾದ:—

"ಬಂದೀಕುರ್ಯುಸ್ತವಸಹಯೋ ಮಾಭವಂತಂ ಕಿರಾತಾಃ"

ಎಂಬುದು ಎಷ್ಟು ಸೊಗಸಾಗಿರುವುದು! ಮೇಘಸಂದೇಶದಲ್ಲಿ ಹೀಗೆಹೇಳದೆ ಕವಿಯು ಮೇಘನಿಗೆ ಅನೇಕಾನೇಕ ಸುಂದರನೋಟಗಳನ್ನು ಹೇಳಿರುವನಾದರೂ ಅದನ್ನನುಭವಿಸುವುದರಿಂದುಂಟಾಗುವ ಕಾಲವಿಳಂಬವನ್ನು ಸೂಚಿಸದೆ:—

"ಮಂದಾಯಂತೇನಖಲುಸುಹೃದಾ ಮಭ್ಯುಪೇತಾರ್ಥಕೃತ್ಯಾಃ"

ಎಂದು ಸಾಧಾರಣವಾಗಿ ಹೇಳಿ ಜಾಗ್ರತೆಯಾಗಿ ಹೊರಡಬೇಕಾದ ಅಥವಾ ವಿಹರಿಸಬೇಕಾದ ವಿವೇಚನೆಯನ್ನು ಮೇಘನಿಗೇ ಬಿಟ್ಟಿರುವನು. ಅನಂತರ ಎಲೈ! ಹಂಸವೇ! ಅಲ್ಲಿಂದ ಹೊರಟು ತುಂಡೀರಮಂಡಲದ ಎಲ್ಲೆಯನ್ನು ಹೊಕ್ಕು ಭೂವಲಯದಂತಿರುವ ಕಾಂಚೀನಗರವನ್ನು ನೋಡಿ ಆನಂದಿಸಿ ಅಲ್ಲಿ ಪ್ರವಹಿಸುತ್ತಿರುವ ಸರಸ್ವತೀ ನದಿಯಲ್ಲಿ ಮಿಂದು ಶುದ್ಧಾಂತಃಕರಣನಾಗಿ ಪರಾಪರವಸ್ತುವಾದ ವರದರಾಜನನ್ನು ಸೇವಿಸುವನಾಗು. ಅಲ್ಲಿಂದ ಚೋಳ ಮತ್ತು ಪಾಂಡ್ಯದೇಶದ ಮಧ್ಯದಲ್ಲಿರುವ ಮಹಾ ಅಡವಿಯನ್ನು ನಿಶ್ಶಬ್ದವಾಗಿ ದಾಟಿ ಚೋಳದೇಶವನ್ನು ಹೊಕ್ಕು

ಕುರ್ವನ್ನಾನಾಕುಸುಮರಜಸಾಯತ್ರಚಿತ್ರಂವಿತಾನಂ
ಪೂಗಾರಣ್ಯೇ ಮೃದುವಿಚಲಯರ್ ಪಾಳಿಕಾಚಾಮರಾಣಿ
ಪಾದನ್ಯಾಸಕ್ಷಮಮವಕಿರ್ದಕ್ಷ್ಮಾತಲಂಪುಷ್ಪಜಾಲೈಃ
ಪ್ರಾಯೋವಾಯುಃ ಅಪರಿಜನವಿಧಿಂಪಂಚಬಾಣಸ್ಯ ಧತ್ತೇ ॥

ಎಂಬಂತೆ ಮದನನ ಮಿತ್ರನಾದ ದಕ್ಷಿಣಾಪಥಸಮೀರಣನು ರಸ್ತೆಯಲ್ಲಿ ಹೂಗಳನ್ನು ಎರಚುವುದರಿಂದಲೂ ಬೀಸಣಿಗೆಗಳಿಂದಲೂ ಛತ್ರಿಗಳೊಡನೆ ನಿನಾಗಮನವನ್ನು ನಿರೀಕ್ಷಿಸುತ್ತಿರುವನು. ಇಂತಹನಿಂದ ನೀನು ಸತ್ಕರಿಸಲ್ಪಡುವನಾಗು, ಅಲ್ಲದೆ ಮಹಾವೈಭವದಿಂದ ಹರಿಯುತ್ತಿರುವ ಕಾವೇರೀ, ದೊಡ್ಡದೊಡ್ಡ ಅಡಿಕೆಮರಗಳಿಂದ ಕೂಡಿದ ತೋಪುಗಳು ಇವುಗಳೆಲ್ಲವೂ ನಿನ್ನ ಕಣ್ಣಿಗೆ ಹಬ್ಬವನ್ನುಂಟುಮಾಡುವುವಾಗಿರುವುವು.

ಆದುದರಿಂದ ಎಲೆ! ಹಂಸ!

ಸಹ್ಯೋತ್ಸಂಗಾತ್ಸಪರಿಮರುತಾಸಾಗರಂನೀಯಮಾನಾಂ
ಛದ್ಮಾಲಾಪೈರ್ವಿಹಿತಕುಶಲಾಂ ತಾದೃಶಾನಾಂದ್ವಿಜಾನಾಂ
ಯಾಮಸ್ಕನ್ನಾಸರಸಕುಹಳೀ ಪತ್ರಪಾತೈರ್ನಿಶಾಂತೇ
ಮಂದಸ್ಮೇರಾಂ ಮಧುಪರಿಮಲೈರ್ವಾಸಯಂತೀವಪೂಗಾಃ ॥

ಎಂಬಂತೆ ಮೃದುಧಾಟಿಯಿಂದ ಪ್ರವಹಿಸುತ್ತಿರುವ ಸಹ್ಯಾದ್ರಿಜಾತಳಾದ ಕಾವೇರಿಯು ವಯೋವೃದ್ಧನೊಬ್ಬನ ಜತೆಯಲ್ಲಿ, ಹುಟ್ಟಿದ ಮನೆಯಿಂದ ಗಂಡನ ಮನೆಗೆ ಹೋಗುವ ವಧೂಟಿಯಂತೆ, ಅಥವಾ ಬ್ರಾಹ್ಮಣಾಶೀರ್ವಾದಮಂ ಕೊಂಡು

ಗೆಳತಿಯರಿಂದಲಂಕರಿಸಲ್ಪಟ್ಟ ಪರಿಮಳ ಪೂಗಳಿಂದಲಂಕೃತಳಾಗಿ ಹೋಗುತ್ತಿರುವ ರಮಣಿಯಂತೆ ಪ್ರವಹಿಸುತ್ತಿರುವ ಕಾವೇರಿಯನ್ನು ಸಂದರ್ಶಿಸಿ ಶ್ರೀರಂಗಕ್ಕೆ ಬಂದು ರಂಗನಾಥನ ದರ್ಶನವನ್ನು ಪಡೆದುಅಲ್ಲಿಂದ ಪಾಂಡ್ಯದೇಶಕ್ಕೆ ಹೋದರೆ ಅಲ್ಲಿ ಕಾಣುವ ತಾಮ್ರಪರ್ಣಿಯಲ್ಲಿ ಸ್ನಾನಮಾಡಿ ಆದರ ಮಳಲೊಡ್ಡುಗಳಲ್ಲಿ ಕೊಂಚ ವಿಶ್ರಾಂತಿಯನ್ನು ಹೊಂದುವನಾಗು.

ಕಾಳಿದಾಸನು ಹೇಳುವ ಯಕ್ಷನಿಗೆ, ತಾನು ಹೇಳುವ ಸ್ಥಳಗಳ ವಿಚಾರವು ಸಂಪೂರ್ಣವಾಗಿ ಗೊತ್ತಿದ್ದುದರಿಂದ ಅಲಕಾವತೀ ಪತ್ತನದ ಸೊಬಗು, ನಗರ ಸಾಗರ, ಹರ್ಮ್ಯೋದ್ಯಾನ, ತಟಾಕ, ವಾಪೀಕೂಪಾದಿಗಳನ್ನು ಬೇಕಾದುದಕ್ಕಿಂತಲೂ ಹೆಚ್ಚಾಗಿ ವರ್ಣಿಸಿರುವನು. ಆದರೆ ಶ್ರೀರಾಮನಿಗೆ ಲಂಕೆಯೆಂಬುದೊಂದು ಇರುವುದೆಂದೂ ಅದು ರಾಕ್ಷಸರಿಂದಾವೃತವಾಗಿರುವುದೆಂದೂ ಹನುಮನಿಂದ ತಿಳಿಯಬಂದುದು ಹೊರ್ತು ಆ ವಿಚಾರವಾಗಿ ಹೆಚ್ಚಾಗಿ ತಿಳಿಯದು. ಲಂಕೆಯೆಂಬುದೊಂದು ಪತ್ತನವಿರುವುದೆಂದೂ ಅಲ್ಲಿ ರಾವಣನೆಂಬ ರಾಕ್ಷಸನು ಆಳುತ್ತಿರುವನೆಂದೂ ಅವನು ಅಪ್ಸರೆಯರನ್ನೂ ಲೋಕಪಾಲಕರ ಹೆಂಗಳೆಯರಿಗೆ ತೊಂದರೆ ಕೊಡುತ್ತಿರುವನೆಂಬುದನ್ನು ಮಾತ್ರ ಇತರರಿಂದ ಕೇಳಿದ್ದನು. ಇದಂತಿರಲಿ, ಶಿಂಶುಪಾವೃಕ್ಷದಡಿಯಲ್ಲಿ ಕುಳಿತಿರುವ ಸೀತೆಯನ್ನು:—

ಸಾಮೀದೃಷ್ಟಿಶ್ಶಫರನಯನಾ ಸನ್ನಿಭೋಷ್ಣಸ್ಸಕೇಶೀ
ತನ್ವೀಪಂಗಸ್ತನಭರನತಾತಪತ್ರಜಾಂಬೂನದಾಭಾ ॥

ಎಂದು ವರ್ಣಿಸಿ.

ಇತ್ಯಾದಿ ಇದೇ ಸಮಾನಾರ್ಥಪದಯೋಜನದ ಶ್ಲೋಕವು ಮೇಘಸಂದೇಶದಲ್ಲಿ ಕಂಡುಬರುವುದು. ಅದು ಹೀಗಿರುವುದು.

ತನ್ವೀಶ್ಯಾಮಾಶಿಖರಿದಶನಾಪಕ್ವಬಿಂಬಾಧರೋಷ್ಠೀ
ಮಧ್ಯೇಕ್ಷಾಮಾಚಕಿತಹರಿಣೀಪ್ರೇಕ್ಷಣಾನಿಮ್ನನಾಭಿಃ ॥
ಶ್ರೋಣೀಭಾರಾದಲಸಗಮನಾಸ್ತೋಕ ನಮ್ರಾಸ್ತನಾಭ್ಯಾಂ
ಯಾತ್ಯಾಸ್ತೇಯುವತಿವಿಷಯೇಸೃಷ್ಟಿರಾದ್ಯೇವಧಾತುಃ ॥

ಎಲೆ! ಹಂಸ! ನೀನುಹೋಗಿ ಶಿಂಶುಪಾವೃಕ್ಷದಡಿಯಲ್ಲಿ ಕುಳಿತಿರುವ ಸೀತೆಯನ್ನು ನೋಡುವಾಗ ಅವಳು ಯಾವುದಾದರೊಂದು ಕಾರ್ಯವನ್ನು ಮಾಡುತ್ತಿರಬಹುದು. ಅಥವಾ ಕಾಳಿದಾಸನು ಹೇಳುವಂತೆ:—

"ಪ್ರಾಯೇಣೈತೇರಮಣವಿರಹೇಷ್ವಂಗನಾನಾಂವಿನೋದಾಃ"

ಎಂಬಂತೆ ಆಚರಿಸುತ್ತಿರಬಹುದು. ಅಥವಾ ಎಲ್ಲಿಯೋ ದೂರದೇಶಕ್ಕೆ ಹೋಗಿ ಬಂದ ಪಕ್ಷಿಗಳನ್ನು ಕುರಿತು ಎಲೈ! ವಿಹಂಗಗಳೇ! ನೀವು ಸಂಚರಿಸಿದ ಸ್ಥಳಗಳಲ್ಲಿ ನನ್ನ ರಾಮನನ್ನು ಕಾಣಿರಾ! ಕಾಣಿರಾ! ಎಂದು ಅಂಗಲಾಚಿ ಕೇಳುತ್ತಿರಬಹುದು.

ಅಥವಾ ಆಂಜನೇಯನು ಹೇಳಿಬಂದಂತೆ ಶ್ರೀರಾಮನು ಸಸೈನ್ಯನಾಗಿ ಬರುತ್ತಿರಬಹುದಾಗಿ ಭಾವಿಸಿ ಉತ್ತರದಿಕ್ಕಿನಕಡೆಗೆ ನೋಡುತ್ತಿರಬಹುದು. ಅಥವಾ ಅವಳ ವೈಮೇಲಣ ಆಭರಣಗಳನ್ನು ನೋಡಿ ರಾಮನ ಸ್ಪರ್ಶಸುಖವಿಚಾರವಾಗಿ ಕೇಳುತ್ತಿರಬಹುದು ಅಥವಾ ಹಿಂದೆ ತಾನುಅನುಭವಿಸಿದ ಸುಖಸಂಕಥಾವಿನೋದಗಳನ್ನು ಜ್ಞಾಪಿಸಿಕೊಳ್ಳುತ್ತಿರಬಹುದು ಅಥವಾ

ಶುಭ್ರಮಿಂದೋಃಶ್ವಪಚಭವನೇ ಕೌಮುದೀವಿಸ್ಫುರಂತೀ
ಮಾನೀತಾಂವಾವಿಷದವನೇ ಸಾರಿಜಾತಸ್ಯ ಶಾಖಾಂ ॥

ಅಥವಾ

ಸೂಕ್ತಿಂರಮ್ಯಾಂಖಿಲಪರಿಸರೇ ಸಕ್ಯವೇಃ ಕೀರ್ತ್ಯಮಾನಾಂ
ವರ್ಷಾಕೇಣುರ್ವಿನಕೆಮಲಿನೀವ್ಯಹತಾರ್ಧಾಮಿವೋಕ್ತಿಂ
ಪಂಕಾಶ್ಲಿಷ್ಟಾವಿವಬಿಸಲತಾಂ ಪಕ್ಯವೇತಾವಿವೇಭಂ
ಮೇಘಶ್ಲಿಷ್ಟಾನ್ನಾಮಿವ ಶಶಿಕಲಾಂವಿಷ್ಣುರುದ್ಭಾವಾಸಾಂ

ಅಥವಾ

ವ್ಯಾಘ್ರೋವೇತಾವಿವಶಶವಧೂಂಭೂತಲೇಜ್ಯಾಮಿವಾಸ್ತಾಂ ॥

ಎಂಬತೆ ಕಣ್ಣುಮುಚ್ಚಿಕೊಂಡು ತನ್ನ ಆತ್ಮಾರಾಮನನ್ನು ಮನದಲ್ಲಿ ಚಿತ್ರಿಸುತ್ತಿರಬಹುದು ಅಥವಾ ಹಾಗೆ ಚಿತ್ರಿಸಿ ನೋಡಿನೋಡಿ ಕೊಂಚ ಕೊಂಚವಾಗಿ ಸುಯ್‌ಗರೆಯಬಹುದು. ಈ ಸಂದರ್ಭದಲ್ಲಿ ಮಹಾಕವಿಕಾಳಿದಾಸನ ಯಕ್ಷನು ದೂತನಾವ ಮೇಘನನ್ನು ಕುರಿತು ಇಂತಹ ಸಂದರ್ಭದಲ್ಲಿ "ಯಾಮಮಾತ್ರಂಸಹಸ್ವ" (ಕೆಲವುಕಾಲದವರೆಗೆ ಕಾದಿರಬೇಕಾಗಿ) ಎಂದು ಪ್ರಾರ್ಥಿಸಿರುವನು. ಹಾಗಿಲ್ಲದಿದ್ದರೆ ಅವಳ ಸ್ವಪ್ನಾನುಭವದ ಸೌಖ್ಯಕ್ಕೂ ವಿಚ್ಛೇದನ ಉಂಟಾಗಬಹುದು ಎಂದು ಹೀಗೆ ಹೇಳಿರುವನು. ಹಂಸಸಂದೇಶಕಾರನಾದರೊ:—

ಮಾಭೂದಸ್ಯಾಃ ಪುಣ್ಯನಿಮಯಃ ಸ್ವಪ್ನೆಲಬ್ಧೇಕಥಂಚಿತ್
ಸದ್ಯಃಕಂರಚ್ಯುತಭುಜಲತಾಗ್ರಂಥಿಗಾಢೋಪಗೂಢಂ ॥

ಎಂದು ಹೇಳಿ.

ಎಲೈ! ಹಂಸ! ಹೀಗೆ ಇರುವ ಸೀತೆಯನ್ನು ನೋಡಿ "ನಿದ್ರಾಸಮಯಮು ಚಿತಂ ವೀಕ್ಷ್ಯನಕ್ತಂಚರೀಣಾಂ" ಎಂಬಂತೆ ರಾಕ್ಷಸರು ಹಗಲೆಲ್ಲವೂ ಮಲಗಿ ರಾತ್ರಿಯೆಲ್ಲವೂ ಎದ್ದಿರುವರಾದುದರಿಂದಲೂ, ನೀನು ಹೋಗುವ ವೇಳೆಗೆ ಸಂಧ್ಯಾಕಾಲವಾಗುವುದಾದುದರಿಂದಲೂ, ನೀನು ರಾಕ್ಷಸರಿಗೆ ಕಾಣಿಸಿಕೊಳ್ಳದಹಾಗೆ ಎಲ್ಲಿಯಾದರೂ ಅಕ್ಕಪಕ್ಕದ ಕಾಸಾರದಲ್ಲಿ ಆ ರಾತ್ರಿಯನ್ನು ಕಳೆದು, ಪ್ರಾತಃಕಾಲದಲ್ಲಿ ಎದ್ದು ಯಾರಿಗೂ ಕಾಣಿಸಿಕೊಳ್ಳದಂತೆ ನೀನು ಬಂದುದನ್ನು ಸೀತೆಗೆ ತಿಳಿಸುವುದಕ್ಕಾಗಿ ದಶರಥ ಮತ್ತು ಜನಕರಾಜನ ವಂಶಾವಳಿಯನ್ನು ಗಾನಮಾಡು. (ಹನುಮನೂ ಹಿಂದೆ ಹಾಗೆ ಮಾಡಿದ್ದನು) ಅವಳು ನಿನ್ನ ಗಾನವನ್ನು ಕೇಳಿ ನಿನ್ನನ್ನು

ನೋಡುವಳು. ಅನಂತರ ನಿಧಾನವಾಗಿ ನೀನು ಬಂದಕಾರ್ಯವನ್ನು ಅವಳೊಡನೆ ಹೇಳಿ ಶ್ರೀರಾಮನು ಸಸೈನ್ಯನಾಗಿ ಈಗಲೇ ಹೊರಟುಬಂದು ರಾಕ್ಷಸರನ್ನು ಕೊಂದು ನಿನ್ನನ್ನು ಖಂಡಿತವಾಗಿಯೂ ಕರೆದುಕೊಂಡು ಹೋಗುವವನಾಗಿದಾನೆಂದು ತಿಳಿಸುವವನಾಗು. ಹಾಗೆ ನೀನು ಎಲ್ಲಾ ವಿಚಾರಗಳನ್ನೂ ತಿಳಿಸುವಮೊದಲು ಹನುಮನು:-

ವೈದೇಹಿ! ಕುಶಲೀ ರಾಮಸ್ತ್ವಾಂಚ ಕೌಶಲಮಬ್ರವೀತ್

ಎಂದು ಹೇಳಿದಂತೆ.

ಭವತೀಭಾಗಧೇಯೇನಜೀವ-
ಕಲ್ಯಾಣೀತ್ವಾಂ ಕುಶಲಮನಘಃ ಕೋಶಲೇಂದ್ರೋನುಯುಂಕ್ತೆ॥

ಎಂಬಂತೆ ಈಗಲೂ ಶ್ರೀರಾಮನು ಕುಶಲನಾಗಿರುವನೆಂಬುದನ್ನು ಮರೆಯದೆ ಹೇಳು. ಆಗ ಅವಳಿಗೆ ಇತರ ವಿಷಯಗಳನ್ನು ತಿಳಿದುಕೊಳ್ಳುವ ಕುತೂಹಲವು ಹುಟ್ಟುವುದು. ಆದುದರಿಂದ ನೀನೂ ಹಾಗೆ ಮಾಡುವನಾಗು. ಎಂದು ಹೇಳಿ ದೌತ್ಯಸಂಭಾವನಾರೂಪವಾದ:—

ಸ್ಮೈರಂಲೋಕಾನ್ಪಿಚರನಿಖಿಲಾ೯ಸೌಮ್ಯಲಕ್ಷ್ಮೈವಿಷ್ಣುಃ
ಸ್ಸೇವಾಕಾರೈಸ್ತ್ವದನುಗುಣಯಾಸೇವಿತೋ ರಾಜಹಂಸ್ಯಾಃ ॥

ಎಲೈ ಹಂಸವೇ! ನೀನು ಹೀಗೆ ಸಮಸ್ತಲೋಕಗಳನ್ನು ಸಂಚರಿಸುವನಾಗಿ ವಿಷ್ಣುವು ಹೇಗೆ ಲಕ್ಷ್ಮಿಯಿಂದ ಯಾವಾಗಲೂ ಸೇವಿಸಲ್ಪಡುತ್ತಿರುವನೋ ಹಾಗೆ ನೀನೂ ಯಾವಾಗಲೂ ರಾಜಹಂಸಿಯಿಂದ ಸೇವಿಸಲ್ಪಡುವನಾಗುತ್ತಿರು. ಎಂದು ಮಂಗಳಾಶಾಸನ ಮಾಡಿ ಕಾವ್ಯವನ್ನು ಮುಗಿಸಿರುವನು. ಯಕ್ಷನಹೇಳಿಕೆಯಲ್ಲಿ ಇಷ್ಟು ಖಂಡಿತವಿಲ್ಲ. ಅದು ನಿಷೇಧಾರ್ಥದಲ್ಲಿ ಹೇಳಿದೆ. ನಾಯಕನು ವಿರಹದುಃಖದಿಂದ ಬಳಲಿದವನಾದುದರಿಂದ:—

ಮಾಭೂದೇವಂ ಕ್ಷಣಮಪಿಚತೇ ವಿದ್ಯುತಾವಿಪ್ರಯೋಗಃ ॥

ಎಂದು ಹೇಳಿ ಕಾವ್ಯವನ್ನು ಮುಗಿಸಿರುವನು.

ಸಂಕಲ್ಪಸೂರ್ಯೋದಯ:—ಇದರಲ್ಲಿ ಹತ್ತು ಅಂಕಗಳಿರುವುವು. ವೆಂಕಟನಾಥನು ಕೃಷ್ಣಮಿಶ್ರನ ಪ್ರಬೋಧಚಂದ್ರೋದಯ ನಾಟಕವನ್ನು ನೋಡಿ ಭಿನ್ನ ಭಿನ್ನ ಮನೋವೃತ್ತಿಯ ಜನರನ್ನು ಭಿನ್ನಭಿನ್ನರಸೋತ್ಪಾದನದಿಂದ ಏಕಕಾಲದಲ್ಲಿ ಸಂತೋಷಗೊಳಿಸುವುದು ನಾಟಕವೆಂದೂ

" ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಽಪ್ಯೇಕೆಂಸಮಾರಾಧನಂ ೧

ಎಂಬ ಕಾಳಿದಾಸೋಕ್ತಿಯನ್ನು ನೆನೆದು ಅಂತಹುದಾದ ಒಂದು ನಾಟಕವನ್ನು ಬರೆಯುವುದರ ಮೂಲಕ ವಿಶಿಷ್ಟಾದ್ವೈತಪ್ರಕ್ರಿಯೆಗಳನ್ನು ಸಕಲರ ಅವಗಾಹನೆಗೆ ತರಲುಜ್ಜುಗಿಸಿ ಹಾಗೆಯೇ ನಾಟಕವನ್ನು ಬರೆದು ಅದನ್ನು ಸಂಕಲ್ಪ

ಸೂರ್ಯೋದಯವೆಂದು ಕರೆದಿರುವನು. † ಈ ಹೆಸರಿನ ಕಲ್ಪನೆಗೆ "ತದೋ ಕೋಽಗ್ರಜ್ವಲನಂ ತತ್ಪ್ರಕಾಶಿತದ್ವಾರೋ ವಿದ್ಯಾಸಾಮರ್ಥ್ಯತಶ್ಚೇಷಗತ್ಯನು ಸ್ಮೃತಿ ಯೋಗಾಚ್ಚ ಹಾರ್ದಾನು ಗೃಹೀತಃ ಶತಾಧಿಕಯಾ" ಎಂಬ ಬಾದರಾಯಣಸೂ ತ್ರವು ಮೂಲವಾಗಿರಬೇಕಾಗಿತೋರುತ್ತದೆ. ಅಲ್ಲದೆ ಪ್ರಾಚೀನಗ್ರಂಥಗಳಲ್ಲಿ ಈ ಸಂಸಾರವು ರಾತ್ರಿಯೆಂದೂ ತಮಸ್ಸೆಂದೂ ವರ್ಣಿತವಾಗಿದೆ. ಸಂಪೂರ್ಣಚಂ ದ್ರೋದಯವು ತಮೋಕರವನ್ನೋಡಿಸಬಲ್ಲುದಾದರೂ ರಾತ್ರಿಯನ್ನು ನಿರ್ಮೂಲ ಮಾಡುವ ಶಕ್ತಿಯು ಸೂರ್ಯನಿಗೆ ಹೊರ್ತು ಮತ್ತಾರಿಗೂ ಶಕ್ಯವಲ್ಲವಾದುದರಿಂದ ಸಂಸಾರವೆಂಬ ರಾತ್ರಿಯು ಈಶ್ವರಾನುಗ್ರಹವೆಂಬ ಸಂಕಲ್ಪಸೂರ್ಯೋದಯದಿಂದ ನಾಶಮಾಡಲ್ಪಡುವುದೆಂಬುದನ್ನು ತನ್ನ ನಾಟಕದ ಮಂಗಳಾಚರಣದಲ್ಲಿ:—

"ಯದ್ಭಕ್ತಿಪ್ರಚಯಾತ್ಮಕೇದಿನಮುಖೇದೃಷ್ಟ್ವಾಕ್ಷಮಃಕ್ಷೇತ್ರಿಣಃ
ಕ್ಷಿಪ್ರಂಸಂಸೃತಿಶರ್ವರೀಂ ಕ್ಷಿಪತಿಯತ್ಸಂಕಲ್ಪಸೂರ್ಯೋದಯಃ
ಪತ್ತ್ಯುಃಪರಸ್ತವಿಭೂಷಣೈರಧಿಗತಸ್ಯಾಧೀನ ನಿತ್ಯೇನ್ನತಿಃ
ಶ್ರೀಮಾನಸ್ತು ಸಮೇಸಮಸ್ತವಿಪದುತ್ತಾರಾಯನಾರಾಯಣಃ" ॥

ಎಂದು ಹೇಳಿಕೊಂಡಿರುವನು. ವ್ಯಾಖ್ಯಾನಕಾರರು.—

ಸಂಸಾರಾಖ್ಯನಿಶೀಥಸುಪ್ತಜನುಭೃತ್ಸಂಬೋಧನಾಯಾಗ್ರಣೀ
ಸ್ಸೂರೀಣಾಂನಿಬಬಂದದೇಶಿಕವರಸ್ಸಂಕಲ್ಪಸೂರ್ಯೋದಯಂ
ಯತ್ಪ್ರೇತತ್ಪರಿಚಿನ್ವತಾಂ ಸಭಗವತ್ಸಂಕಲ್ಪಸೂರ್ಯೋನಶಾಂ
ಮಾಯಾಂಭೋಗವತೀಂ ವಿಮೋಕ್ಷ್ಯ ವಿಮಲಾಂಧತ್ತೇ ದೃಶಂಶಾಶ್ವತೀಂ" ॥

ಎಂದು ಸಮರ್ಥಿಸಿರುವುದು ಕಂಡು ಬರುತ್ತದೆ.—

"ಇಹಸಂಕಲ್ಪಸೂರ್ಯೋದಯೇ ಮಹಾನಾಟಕೇ ಸಕಲಶಾರೀರಕ ಶಾಸ್ತ್ರಾರ್ಥ ಸಂಗ್ರಹೀತಃ. ಶಾರೀರಕಶಾಸ್ತ್ರಾರ್ಥಶ್ಚಪಂಚವಿಧಃ. ಸ್ವಸಿದ್ಧಾಂತಸ್ಥಾಪನಂ ಪ್ರಥಮಂ, ತತಸ್ತತ್ಪ್ರತಿಪಕ್ಷನಿರಾಸಃ, ತತಸ್ತದುಕ್ತೋಪಾಯನಿಶ್ಚಯಃ, ತತಸ್ತದ್ವಿರೋಧಿವಿಲಯಪೂರ್ವಕಮುಪಾಯಪರಿಗ್ರಹಃ, ತತೋಮೋಕ್ಷ ಪ್ರಾಪ್ತಿರಿತಿ, ಇಮೇಪಂಚಾರ್ಥಾಃ ಪಂಚಾಂಕೇಷುವಕ್ತವ್ಯಾಃ, ಅತ್ರದ್ವೈಗುಣ್ಯೇನದಶಾಂಕಾಃಪ್ರಯುಕ್ತಾಃ, ತತ್ರಪ್ರಥಮೇಂಕೇ ಸ್ವಸಿದ್ಧಾಂತಸ್ಥಾಪನಂ ದ್ವಿತೀಯೇಂಕೇಸ್ವಸಿದ್ಧಾಂತವಿರೋಧಿನಃ ಪರಸಿದ್ಧಾಂತಾಃಪ್ರತಿಕ್ಷಿಪ್ತಾಃ ತೃತೀಯೇಂಕೇತುಸ್ವಸಿದ್ಧಾಂತೋಪಾಯನಿಶ್ಚಯಃ,ಚತುರ್ಥಾದಿಷು ಅಷ್ಟ ಮಾಂತೇಷೂಪಾಯವಿರೋಧಿನೋ ನಿರಸ್ತಾಃ, ಉಪಾಯಪರಿಕರಾ

† ಸುಂದರದೇವನ ಮುಕ್ತಿಪರಿಣಯ, ಆನಂದರಾಯ ಮಖಿಯ ವಿದ್ಯಾಪರಿಣಯ, ರತ್ನ ಖೇಟ ಶ್ರೀನಿವಾಸದೀಕ್ಷಿತನ ಭಾವನಾಪುರುಷೋತ್ತಮ ಘನಶ್ಯಾಮನ ಪ್ರಚಂಡ ರಾಹೂದಯ ಇವು. ಈ ಜಾತಿಗೆಸೇರಿದುದು.

ಶ್ಲೋಕಾಃ, ಉಪಾಯವಿರೋಧಿನಃ ಕಾಮಕ್ರೋಧಾದಯಃ ತತ್ರಚತು ರ್ಥೇಂಕೇ, ಕಾಮಾದೀನಾಂ ಆಪಾತತಃ ಪ್ರಾಬಲ್ಯಕಥನಪೂರ್ವಕಂ ದೌರ್ಬಲ್ಯ ಪ್ರತಿಪಾದನಂ, ಪಂಚಮೇಂಕೇ ಡಂಭಾದೀನಾಂನಿರಸನೀಯ ತ್ವಖ್ಯಾಪನಂ, ಉಪಾಯಪರಿಕರಸ್ತ್ವದ್ವಿವಿಧಃ ಸ್ಥಾನಮಾಲಂಬನಂಚೇತಿ. ತತ್ರಸಮಾಧಿ ಸ್ಥಾನಂನಿರೂಪಿತಂ ಷಷ್ಠೇಂಕೇ, ಸಪ್ತಮೇತು ಆಲಂಬನರೂ ಪಶ್ಯಭಾಶ್ರಯೋನಿರ್ದೇತಃ, ಅಷ್ಟಮೇಂಕೇ ಕಾಮಕ್ರೋಧಲೋಭಾದಿ ವಿಜಯಉಕ್ತಃ ನವಮೇಂಕೇವಿಜಿತವಿರೋಧನಃ ಪರಿಗೃಹೀತಸ್ಥಾನಶು ಭಾಶ್ರಯಸ್ಯ ಸಮಾಧಿರೂಪೋಪಾಯಲಾಭಉಕ್ತಃ, ದಶಮೇಂಕೇನಿಶ್ರೇ ಯಸಲಾಭಉಕ್ತಃ,ಅಯಮೇವ ಮುಮುಕ್ಷೂಣಾಮನುಷ್ಠಾನಕ್ರಮಶ್ಚ”

ಎಂಬಂತೆ ಮೇಲೆ ಹೇಳಿದವುಗಳೆಲ್ಲವೂ ಕ್ರಮವರಿತು ಪ್ರತಿಪಾದಿಸಲ್ಪಟ್ಟಿರು ವುವು. ಮೊದಲನೆಯ ಅಂಕವು ಬ್ರಹ್ಮಸೂತ್ರಭಾಷ್ಯದ ಸಮನ್ವಯಾಧ್ಯಾಯವನ್ನು ಹೋಲುತ್ತದೆ. ಇದರಲ್ಲಿ ವೇದಾಂತದ ಮುಖ್ಯತತ್ವಗಳೆಲ್ಲವೂ ಪ್ರತಿಪಾದಿಸಲ್ಪಟ್ಟವೆ. ಎರಡನೆಯದು ಅವಿರೋದೋಧ್ಯಾಯವನ್ನು ಹೋಲುತ್ತದೆ. ಇದರಲ್ಲಿ ಭಿನ್ನಭಿನ್ನ ಮತಗಳ ನಿರೂಪಣವಿರುವುದು. ಮೂರರಿಂದ ಒಂಭತ್ತನೆಯ ಅಂಕಗಳಲ್ಲಿ ವೈರಾಗ್ಯ ತಪಸ್ಸು ಮೊದಲಾದ ಸಾಧನಸಾಮಗ್ರಿಯಗಳು ಹೇಳಲ್ಪಟ್ಟವೆ. ಹತ್ತನೆಯ ಅಂಕ ದಲ್ಲಿ ಸಾಧನ ಮತ್ತು ಫಲಶ್ರುತಿಯು ಇರುವುದು. ಇದರ ಮುಖ್ಯರಸವು ಶಾಂತಿ ರಸ. ಎಲ್ಲಾ ರಸಗಳಿಗಿಂತಲೂ ಶ್ರೇಷ್ಠವಾದ ರಸವು ಶಾಂತಿರಸವೆಂದೂ ಅದು ಮನಸ್ಸಿನ ದುಃಖಪರಂಪರೆಯನ್ನು ಹೋಗಲಾಡಿಸಿ ಇತರ ರಸಗಳ ಉದ್ವೇಗಕ್ಕೆ ಅವಕಾಶಕೊಡದೆ ಸಮಾಹಿತಚಿತ್ತತೆಯನ್ನುಂಟುಮಾಡುವುದಾದುದರಿಂದ:— “ಶಮಸ್ತ್ವಪರಿಶಿಷ್ಯತೇಶಮಿತಚಿತ್ತಖೇದೋರಸಃ” ಎಂದು ಹೇಳಿ ಶ್ರೀರಂಗ ಕ್ಷೇತ್ರವೇ ತಮ್ಮ ನಾಟಕಕ್ಕೆ (ರಂಗ) ವೇದಿಕೆಯೆಂದೂ ಶ್ರೀ (ರಂಗ) ನಾಥನೇ ಅಭಿ ನಯಕಾರನೆಂದೂ ಒಕ್ಕಣಿಸಿ ಮುಗಿಸಿರುವನು.

ಪ್ರಬೋಧಚಂದ್ರೋದಯದಲ್ಲಿ ದರ್ಪನವಾಕ್ಯವು:—

ಗೌಡಂರಾಷ್ಟ್ರಮನುತ್ತಮಂ ನಿರುಪಮಾತತ್ರಾಪಿರಾಢಾಪುರೇ
ಭೂರಿಶ್ರೇಷ್ಠಿಕನಾಮ ಧಾಮಪರಮಂತತ್ರೋದ್ಭವೋಸಃಪಿತಾ ॥

ಎಂದು ಹೇಳಿರುವುದು:—

ಸಂಕಲ್ಪಸೂರ್ಯೋದಯದಲ್ಲಿ ದರ್ಪನವಾಕ್ಯವು,

ತುಂಡೀರಂಮಂಡಲಂಮೇಕುಲಪತಿರಪಿ **ಚಸ್ಕಂದಭೂಪಾಲವಂದ್ಯಃ**
ಕ್ಷೇತ್ರಂಸತ್ಯವ್ರತಾಖ್ಯಂಕ್ಷಿತಿ ತಿಲಕನಿಭಂಕ್ಷುದ್ರಕಾಂಚ್ಯಗ್ರಹಾರಃ ॥

ಎಂದಿರುವುದು. ಪ್ರಬೋಧಚಂದ್ರೋದಯದಲ್ಲಿ 'ಭೂರಿಶ್ರೇಷ್ಠಕನಾಮು' ಎಂಬುದನ್ನು ಹೇಳಿರುವುದರಿಂದ ಧನಮದವೇ ಅಹಂಕಾರಕ್ಕೆ ಮುಖ್ಯವೆಂದು ಹೇಳಿದೆ. ಸಂಕಲ್ಪಸೂರ್ಯೋದಯದಲ್ಲಿ 'ಸ್ಕಂದಭೂಪಾಲವಂದ್ಯಃ' ಎಂಬುದನ್ನೂ ಹೇಳಿ ಉತ್ತಮಕುಲದಲ್ಲಿ ಹುಟ್ಟೋಣವು ಅಹಂಕಾರಕ್ಕೆ ಮುಖ್ಯವೆಂದು ತೋರಿಸಲ್ಪಟ್ಟಿದೆ. ದುರ್ಯೋಗದಿಂದ ಧನನಷ್ಟವಾದರೆ ಆ ಮದವೂ ಅದರೊಂದಿಗೆ ನಾಶವಾಗಿ ಹೋಗುತ್ತದೆ. ಶ್ರೇಷ್ಠಕುಲಸಂಜಾತನೆಂಬ ಮದವಾದರೋ ಆ ಮರಣಾಂತವಿರುವುದಾದುದರಿಂದ ಇದೇ ಹೆಚ್ಚಿನದೆಂದು ಹೇಳಿದೆ. ಹೀಗೆ ಪ್ರಬೋಧಚಂದ್ರೋದಯದಲ್ಲಿ ಡಂಭನವಾಕ್ಯವು:—

ಸದನಮುಪಗತೋಹಂ ಪೂರ್ವಮಂಭೋಜಯೋನೇ
ಸ್ಸಪದಿ ಮುನಿಭಿರುಚ್ಚೈರಾಸನೇಷೂಜ್ಝಿತೇಷು
ಸಶಪಥಮನುನೀಯ ಬ್ರಹ್ಮಣಾಗೋಮಯಾಂಭಃ
ಪರಿಮೃಜತನಿಜೋರಾ ನಾಶು ಸಂವೇಶಿತೋಸ್ಮಿ ॥

ಎಂದಿರುವುದು.

ಸಂಕಲ್ಪಸೂರ್ಯೋದಯದಲ್ಲಿ ಡಂಭನ ವಾಕ್ಯವು:—

ಮಯಿಚರತಿಕದಾಚಿತ್ಸತ್ಯಲೋಕೋಪಕಂಠೇ
ಸಪದಿಸನಕ ಮುಖ್ಯೈಸ್ಸಾಕ ಮಭ್ಯುಜ್ಜಿಹಾನಃ
ಸವಿನಯಮನಿಭೃತಾಂಗಸ್ಸಪ್ತಶಃಕ್ಷಾಲಿತೇನ
ಸ್ವಯಮುದವಹದರ್ಘ್ಯಂಪಾಣಿನಾಪದ್ಮಯೋನಿಃ ॥

ಎಂದಿರುವುದು.

ಬ್ರಹ್ಮನಮನೆಗೆ ಹೋಗಿದ್ದಾಗ ಋಷಿಗಳೆಲ್ಲರೂ ತಮ್ಮತಮ್ಮಾಸನವನ್ನು ಬಿಟ್ಟು ಎದ್ದುದಾಗಿಯೂ, ಬ್ರಹ್ಮನು ಆಣೆ ಭಾಷೆಗಳಿಂದ ಸಂತೈಸಿ ಗೋಮಯದಿಂದ ಸಾರಿಸಿದ ತನ್ನತೊಡೆಯಮೇಲೆ ಬ್ರಹ್ಮನು ತನ್ನನ್ನು ಕೂರಿಸಿಕೊಂಡುದಾಗಿಯೂ ಹೇಳಿದೆ. ಸಂಕಲ್ಪಸೂರ್ಯೋದಯದಲ್ಲಿ ತಾನೊಂದಾವರ್ತಿ ಸತ್ಯಲೋಕದ ಸಮೀಪಕ್ಕೆ ಹೋಗಿರುವುದನ್ನು ತಿಳಿದ ಕೂಡಲೇ ಬ್ರಹ್ಮನು ನನ್ನೆಡೆಗೆ ಜ್ಞಾನನಿಷ್ಠರಾದ ಸನಕಾದಿಗಳೊಡನೆ ಬಂದು ನನ್ನನ್ನು ಎದಿರುಗೊಂಡು ನಿವೃತ್ತಿಧರ್ಮವನ್ನಾಶ್ರಯಿಸಿ ಎಳುಸಲ ತೊಳೆದುಕೊಂಡ ಕೈಯಿಂದ ತನಗೆ ಅರ್ಘ್ಯವಿತ್ತುದಾಗಿ ಹೇಳಿರುವುದು. ಇದರಲ್ಲಿ ಬರಬೇಕೆಂಬ ಸಂಕಲ್ಪವಿಲ್ಲದೇ ಹಠಾತ್ತಾಗಿ ಎಲ್ಲಿಯೋ ಬಂದಿರುವುದನ್ನು ಕೇಳಿದ ಕೂಡಲೇ ಸನಕಾದಿಗಳೊಡನೆ ಬಂದು ಒಂದುಸಲ ತೊಳೆದಮಾತ್ರದಿಂದಲೇ ಪರಿಶುದ್ಧವಾಗಬಹುದಾದ ಕೈಯ್ಯನ್ನು ಏಳಾವರ್ತಿ ತೊಳೆದುಕೊಂಡು ಅರ್ಘ್ಯವನ್ನು ತಂದುದಾಗಿ ಹೇಳುವುದು ಡಂಭನಪರಾಕಾಷ್ಠತೆಯನ್ನು ತೋರಿಸುವು

ದಾದ ಕಾರಣ ಪ್ರಬೋಧಚಂದ್ರೋದಯದ ಹೇಳಿಕೆಗಿಂತಲೂ ಸಂಕಲ್ಪಸೂರ್ಯೋದಯದ ಹೇಳಿಕೆಯು ಚಮತ್ಕಾರವೆಂದರೆ ಹೆಚ್ಚಾಗದು. ಹೀಗೆಯೇ ಅನೇಕ ಭಾಗಗಳು ವಿಮರ್ಶಾತ್ಮಕರಿಗೂ ವಿಚಾರಪರರಿಗೂ ದೊರೆಯುವುವು. ಸಂಕಲ್ಪ ಸೂರ್ಯೋದಯದಲ್ಲಿ ಕಾಮನನ್ನು:—

" ಅರ್ಧಾವಶೇಷಿತಮಹೇಶ್ವರಪೌರುಷೋಯಂ " ಎಂದು ವಿಶೇಷಿಸಿ ಹೇಳಿರುವುದು ಎಷ್ಟು ಚೆಲುವಾಗಿರುವುದು!

ವಸಂತೋತ್ಸವವರ್ಣನಾಪರವಾದ:—

ಚೂಡಾವೇಲ್ಲಿತ ಚಾರುಹಲ್ಲಕಭರವ್ಯಾಲಂಬಿಲೋಲಂಬಕಾಃ
ಕ್ರೀಡಂತ್ಯತ್ಪಹಿರಣ್ಮಯಾನದಧತಃ ಶೃಂಗಾರ ಶೃಂಗಾರಿಣಃ
ತನ್ವಂಗೀಕರಯಂತ್ರಯಂತ್ರಣಕಲಾತಂತ್ರಕ್ಪೆರದ್ಧಸ್ತ್ರಿಕಾ
ಕಸ್ತೂರೀಪರಿವಾಹಮೇದುರಮಿಲಜ್ಜಂಬಾಲಲಂಬಾಲಕಾಃ ॥ ೧-೩೨

ಎಂಬ ಶ್ಲೋಕವು ರತ್ನಾವಳೀ ನಾಟಿಕೆಯ—

ಸ್ರಸ್ತಾಸ್ಪ್ರಗ್ವಾಮಶೋಭಾಂತ್ಯಜತಿವಿರಚಿತಾಮಾಕುಲಃ ಕೇರಪಾಶಃ
ಕ್ಪೇಬಾಯಾನೂಪುರೌಚದ್ಪಿಗುಣತರಮಿಮೌಕ್ರಂದತಃ ಪಾದಲಗ್ನಾ।
ವ್ಯಸ್ತಃ ಕೆಂಪಾನುಬಂಧಾದನವರತಮುರೋಹಂತಿ ಹಾರೋಕಯಮನ್ಯಃ
ಕ್ರೀಡಂತ್ಯಃ ಪೀಡಯೇವಸ್ತನಭರವಿನಮನ್ಮಧ್ಯ ಭಾಗಾನಪೇಕ್ಪಂ ॥

ಎಂಬ ಶ್ಲೋಕವನ್ನು—

ಶೈಲೀಂ ವಿಲೋಪಯತಿ ಶಾಂತಿಮುಧಃಕರೋತಿ
ವ್ರೀಡಾಂಪ್ಯುದಸ್ಯತಿವಿರಕ್ತಿಮಪಹ್ನುತೇಚ. ॥ ೧-೪೯

ಎಂಬುದು ಚಂಡಕೌಶಿಕಕಾರನ—

ಚಿತ್ತಂಪ್ರಸಾದಯತಿಲಾಘವಮಾದದಾತಿ
ಪ್ರತ್ಯಂಗಮುಜ್ಜ್ವಲಯತಿ ಪ್ರತಿಭಾವಿಶೇಷಂ
ದೋಷಾನುದಸ್ಯತಿ ಕರೋತಿಚಧಾತುಸಾಮ್ಯಂ
ಆನಂದಮರ್ಪಯತಿಯೋಗವಿಶೇಷಗಮ್ಯಂ ॥ ೨—೮

ಎಂಬುದನ್ನೂ—

ತ್ವಯಾಜುಷ್ಟಃ ಪತ್ನ್ಯಾವಿಧಿವದಿಹಯಸ್ಯಾಸ್ಯಯಮಹಂ
ವಿಧತ್ತೇಚಾತ್ಮಿಜ್ಯಂಶಮದಮಮುಷೇಯಂಗುಣಗಣಃ
ಅಕಸ್ಮಾದುದ್ರೇಕೋಭವತಿಭಗವಾನಾತ್ಮಹವಿಷಃ
ಪಶುರ್ಬದ್ಧೋಮುಕ್ತಂ ಭಜತಿವಿಗಲಶ್ಯರ್ಮನಿಗಳಃ ॥ ೧-೮೦

ಎಂಬುದು ವೇಣೀಸಂಹಾರಕಾರನ—

ಚತ್ವಾರೋವಯವೃತ್ತಿಜಃ ಸಭಗರ್ವಾಕರ್ಮೀಪಸೇಷ್ಯಾಪರಃ
ಸಂಗ್ರಾಮಾಧ್ವರದೀಕ್ಪಿತೋ ನರಪತಿಃ ಪತ್ನೀಗೃಹೀತವ್ರತಾ

ಕೌರವ್ಯಾಃ ಪಶವಃ ಪ್ರಿಯಾಪರಿಭವಕ್ಲೇಶೋಪಶಾಂತಿಃ ಫಲಂ
ರಾಜಸ್ಯೋಪನಿಮಂತ್ರಣಾಯರಸತಿ ಸ್ಫೀತಂ ಯಶೋದುಂದುಭಃ ॥

ಎಂಬುದನ್ನು ಜ್ಞಾಪಕಕ್ಕೆ ತರುವುದಾಗಿದೆ.—

ಇದರಲ್ಲಿನ ವಿಶೇಷವೇನೆಂದರೆ, ಯಜ್ಞವನ್ನು ಮಾಡುವುದು ಕರ್ಮಶ್ರದ್ಧೆಯಿಂದ ಹೊರತು ಕ್ರೋಧದಿಂದಲ್ಲ. ಹಾಗೆ ಯಜ್ಞದಲ್ಲಿ ವಧೆಯಾದ ಪಶುಗಳು ಸ್ವರ್ಗಕ್ಕೆ ಹೋಗುವುದಾಗಿ ಕರ್ಮಠರ ನಂಬುಗೆ. ಭೀಮನ ಆಗ್ರಹಕ್ಕೆ ಪಾತ್ರರಾದ ಕೌರವರು ಕ್ರೋಧದಿಂದ ಕೊಲ್ಲಲ್ಪಟ್ಟಿರುವರೇ ಹೊರತು ಸ್ವರ್ಗಸುಖಾಕಾಂಕ್ಷೆಯಿಂದಲ್ಲವೆಂಬುದು ಸ್ಪಷ್ಟಪಡುವುದು.

ಏತೇನಿರ್ಭರನಿರ್ಯತ್ಸೌರಭಸುಧಾಪ್ರಾಗ್ಭಾರವಿಭ್ರಾಜಕಂ
ಮಾನೋಲ್ಲುಂಛನಮಾನಲುಂಛನ ಮಹಾಧಾನುಷ್ಕಬಾಣೋತ್ಕರಂ
ಛಾಯಾಲೀನಮಹೇಂದ್ರವಾರವನಿತಾಧಮ್ಮಿಲ್ಲ ಮಾಲೋಚಿತಂ
ಶಾಖಾಗ್ರೈರ್ಮುಂಚಂತಿ ಪುಷ್ಪನಿಕರಂ ವೈಕ್ಷಾವರುತ್ಪ್ರೇಕ್ಷಿತಾಃ ॥ ೨-೩

ಎಂಬ ಶ್ಲೋಕವು ಭವಭೂತಿಯ ಉತ್ತರರಾಮಚರಿತದ:—

ಕಂಡೂಲದ್ವಿಪಗಂಡಪಿಂಡಕಷಣಾಕಂಪೇನ ಸಂಪಾತಿಭಿ
ರ್ಧರ್ಮಸ್ರಂಸಿತ ಬಂಧನೈಶ್ಚ ಕುಸುಮೈರರ್ಚಂತಿ ಗೋದಾವರೀಂ
ಛಾಯಾಪಸ್ಕರಮಾಣವಸ್ಕರ ಮುಖವ್ಯಾಕೃಷ್ಟಕೀಟತ್ವಚಃ
ಕೂಜತ್ಕುಂತಕಪೋತಕುಕ್ಕುಟಕುಲಾಃ ಕೂಲೇ ಕುಲಾಯದ್ರುಮಾಃ ॥

ಎಂಬ ಈ ಶ್ಲೋಕವನ್ನು ನೆನಪಿಗೆ ತರುತ್ತದೆ.

ಇದರ ಕೆಲವು ಶ್ಲೋಕಗಳು:—

ಮಾಯೆಯ ಬಲೆಗೆ ಸಿಲುಕಿ ದಿಕ್ಕುತೋರದೆ ವಿಲಪಿಸುತ್ತಿರುವ ಜೀವನ ವರ್ಣನೆಯು ಎಷ್ಟು ಮನೋಹರವಾಗಿದೆ.

ಪತ್ಯೌದೂರಂಗತವತಿರವೌ ಪದ್ಮಿನೀವಪ್ರಸುಪ್ತಾ
ಮ್ಲಾನಾಕಾರಾಸುಮುಖಿನಿಭೃತಾವ ರ್ತತೇ ಬುದ್ಧಿರಂಬಾ
ಮಾಯಾಯೋಗಾನ್ಮಲಿನತರುಚೌವಲ್ಲಭೇತಿಲ್ಯಶೀಲಾ
ರಾಹುಗ್ರಸ್ತೇತುಹಿನಕಿರಣೇನಿಷ್ಪಭಾಯಾಮಿನೇವ ॥ ೧-೭೫

ತನ್ನ ವಲ್ಲಭನಾದ ಸೂರ್ಯನು ಕಾಣದೇ (ಬಹುದೂರ) ಹೋದಾಗ ಪ್ರಣಯಿನಿಯಾದ ಕಮಲಿನಿಯು ಸಂಕುಚಿತಳಾಗುವಂತೆ, ಬುದ್ಧಿಯು ತನ್ನ ವಲ್ಲಭನಾದ ಜೀವಾತ್ಮನು ಮಾಯಾಸಂಬಂಧವನ್ನುವಹಿಸಿ ಸ್ಥಾವರತ್ವವನ್ನು ಹೊಂದಿದಾಗ, ಪತಿವ್ರತೆಯಂತೆ ಸಕಲಕಾರ್ಯವಿರಹಿತಳಾಗಿ ಸಂಕುಚಿತಳಾಗುವಳು. ಅದೇ ಜೀವಾತ್ಮನು

ಜಂಗಮತ್ವವನ್ನು ವಹಿಸಿ ಕಳಾಹೀನನಾಗಿರುವದಂಕಂಡು ಬುದ್ಧಿಯೂ ಕೂಡಾ ರಾಹುಗ್ರಸ್ತನಾದ ತುಹಿನಕಿರಣನ (ಚಂದ್ರಮನ) ರಾತ್ರಿಯಂತೆ ಕಳಾಹೀನಳಾಗಿರುವಳು.

ಕಾವೇರೀವರ್ಣನವು ಹೀಗಿರುವುದು:—

ಉನ್ನದ್ರಾಂಬುಜವಾಟಿಕಾ ಮುಭಯತೋರೋಧೋನಿರೋಧೋಲ್ಲಲ
ತ್ಪ್ರೋತಸ್ಸಂಭೃತಸಾರಿಣೀಶತಕೃತಸ್ಪಚ್ಛಂದಕೇಚ್ಛಾಪ್ಲವಾಂ
ಖೇಲಚ್ಛೋಲವಧೂವಿಧೂತಕಬರೀ ಶೈವಾಲಿತಾಮನ್ಪಹಂ
ಪಶ್ಯೇಮಪ್ಲವಮಾನಹಂಸಮಿಥುನಸ್ಮೇರಾಂಕವೇರಾತ್ಮಜಾಂ ॥ ೧-೩೪

ಎಲೆ! ವಸಂತ! ಈ ಕವೇರಕನ್ಯೆಯ (ಕಾವೇರಿಯ) ಇರ್ಕಡೆಗಳಲ್ಲಿಯೂ ಜಲ ಸಮೃದ್ಧಿಯಿಂದ ತುಂಬಿ ಹರಿಯುವ ಕಾಲುವೆಗಳು ನೋಡುವುದಕ್ಕೆ ರಮಣೀಯವಾಗಿರುವುವು. ತಾವರೆಯ ಬಳ್ಳಿಗಳು ಕಾಡುಗಳಂತೆ ಬೆಳೆದು ಅರಳಿದ ಹೂಗಳಿಂದ ತುಂಬಿರುವುವು. ಇಲ್ಲಿ ಚೋಳಾಂಗನೆಯರು ಸ್ನಾನಮಾಡುವಾಗ ಬಿಚ್ಚಿಹೋದ ಕೇಶಪಾಶಗಳು ನೀರಿನಲ್ಲಿ ಹರಡಲ್ಪಟ್ಟು ಪಾಚಿಗಳಂತೆ ಕಾಣುವುವು. ಅಲ್ಲಲ್ಲಿ ಸಂಚರಿಸುವ ಹಂಸಗಳನ್ನು ನೋಡಿದರೆ ಅವು ಕಾವೇರಿಯ ಮಂದಸ್ಮಿತದಂತೆ ಕಾಣಬರುವುದು.

ಮಂದಾಕಿನೀ ವರ್ಣನವು ಹೀಗೆ:—

ಕಚ್ಚೋತ್ತಂಸಿತಕಲ್ಪವೃಕ್ಷಶಿಖರೋದ್ಭಾಸಮಾನವಾಸಂತಿಕಾ
ಗಂಧೋದ್ಗಾರಸ್ಪುರತ್ಸೌಮ್ಯ ಲಹರೀಶೋಭಮಾನರೋಧೋಂತರಾ
ಅಂಹೋದುಸ್ಸಹಜನ್ಮಸಂಚರ ಶ್ರಮಾಸಿದ್ಧಾನಿ ಶುದ್ಧಾಕೃತಿಃ
ದುಃಖಾನಿಕದಾಸುಕರಿಷ್ಯತಿಸ್ಪಯಂಮಂದಾನಿಮಂದಾಕಿನೀ ॥ ೨-೨

ಅಯೆ! ವಿಚಾರಣಾ! ಇಗೋ ಗಂಗಾ! ಈ ಮಂದಾಕಿನಿಯು ನೀರಿನಿಂದ ವ್ಯಾಪ್ತವಾದ ಸ್ಥಳದಲ್ಲಿರುವ ಕಲ್ಪತರುವಿನ ಶಿಖರಕ್ಕೆ ಈ ಮಾಧವೀಲತೆಯು ಹಬ್ಬಿ ಅದರ ಪರಿಮಳದಿಂದ ಕೂಡಿದ ಅಲೆಗಳು ದಡವನ್ನಲಂಕರಿಸುವಂತೆ ಹರಿಯುತ್ತಲಿದೆಯಾದರೂ ಈ ಮಂದಾಕಿನಿಯು ಸಂಸಾರಚಕ್ರಕ್ಕೆ ಭ್ರಮೆಗೊಂಡು ತಿಲ್ಲಿಸುತ್ತಿಸುತ್ತಿ ಬಳಲಿಬೆಂಡಾಗಿ ದುಃಖಿಸುತ್ತಿರುವ ಜೀವರ ಖೇದಗಳನ್ನು ಯಾವಾಗ ಪರಿಹರಿಸುವಳೋ ತಿಳಿಯಲಿಲ್ಲ.

ಅಬಲಾರಾಮಣೀಯಕತೆಯ ವಿಚಾರವಾಗಿ:—

ಸ್ಮೇರೇಣಸ್ತನಕುಟ್ಮಲೇನ ಭುಜಯೋ ರ್ಮಧ್ಯಂತರೋಧಿತ್ಸಿತಂ
ನೇತ್ರೇಣಶ್ರವಣಂ ಲಿಲಂಘಿಯಿಷತಂ ನೀಲೋತ್ಪಲ ಶ್ರೀಮುಷಾ
ಅಂಗಂಪರ್ವಮಲಂಚಿಕೀರ್ಷಿತಮಹೋಭಾವೈಸ್ಮರಾಚಾರ್ಯಕೈಃ
ಕಸ್ಯೇನಾಂವಿಜಗೀಷತಂಚವಯಸಾಧನ್ಯೇನ ಮನ್ಯೇಜಗತ್ ॥ ೩-೫

ಅಹಹ! ಇದೋ! ಸುಂದರಿಯರ ಕಣ್ಣುಗಳು ಆದೀರ್ಘವಾಗಿ ಕಿವಿಯ ವರೆಗೆ ವ್ಯಾಪಿಸಿ ಕಾಂತಿಯಲ್ಲಿ ನೈದಿಲೆಯನ್ನು ವಿಾರಿಸಿದೆ. ಅವರ ಅವಯವಗ ಳಾದರೋ ವಿಾನಕೇತನನಿಂದ ಉಪದೇಶಿತವಾದ ಭಾವಗಳಿಂದ ಕೂಡಿ ರಮ್ಯವಾ ಗಿವೆ ಅವರ ಯೌವನವು ಪ್ರಶಂಸಾಯೋಗ್ಯವಾದವುಗಳಾಗಿ ಲೋಕವನ್ನು ಜೈಸಲು ಆತುರಗೊಳ್ಳುವದಾಗಿದೆ. ಅವರ ವಯೋಧರ್ಮವದಂತಿರಲಿ! ಅವರ ವಿಲಾಸಗ ಳನ್ನು ನೋಡು! ಪುರುಷಾರ್ಥ ಮುಖ್ಯಸೂಚಿತವಾದ ಹುಬ್ಬುಗಳು, ಅರ್ಚಿರಾದಿ ಗತಿಯನ್ನು ಕೂಡಾ ಜರೆಯುವ ವೈಯ್ಯಾರದ ನಡಿಗೆಗಳು, ಮದ ಮದಿಸಿದ ಚಂಚಲತಾರಕೆಗಳುಳ್ಳ ಕಣ್ಣುಗಳು ಮನ್ಮಥಾದ್ವೈತೋಪನಿಷತ್ತು ಅಥವಾ ಕಾಮಾ ಗಮ ರಹಸ್ಯವನ್ನು ವಿಶದೀಕರಿಸುವುವಾಗಿವೆ.

ಕಾಷಾಯ ದಂಡಶರಣರಾದ ಕಲಿಯುಗದ ಸನ್ಯಾಸಿಗಳ ವಿಚಾರವಾಗಿ:—

ಭಿಕ್ಷೇತಿಶಿಷ್ಯಜನರಕ್ಷಣ ದಕ್ಷಿಣೇತಿ
ಶಾಟೀತಿ ಶಾಶ್ವತಮಠೋಪಧಿಕಲ್ಪನೇತಿ
ಗ್ರಂಥೋಪಸಂಗ್ರಹಣವೂಲ್ಯಮಿತಿಬ್ರುವಾಣಾಃ
ಸನ್ಯಾಸಿನೋಪಿದಧತೇ ಸತತಂಧನಾಯಾಂ ॥ ೫-೨೭

ಎಂದು ಹೇಳಿರುವುದರಿಂದ ಆ ಕಾಲದಲ್ಲಿಯೂ ಶಿಷ್ಯಜನರಕ್ಷಣೆಗೆಂದೂ, ಮಠ ಗಳನ್ನು ಕಟ್ಟಿಸುವೆನೆಂದೂ, ಗ್ರಂಥೋಪಸಂಗ್ರಹಕ್ಕಾಗಿ ಧನಸಹಾಯವನ್ನೂ ಮಾಡಿ ರೆಂದೂ, ಧನಕ್ಕಾಗಿ ಬಾಯಿ ಬಾಯಿ ಬಿಡುವ ಸನ್ಯಾಸಿಗಳು ಇದ್ದುರಾಗಿ ಬೋಧೆ ಯಾಗುತ್ತದೆ.

ಡಂಭನ ಹೇಳಿಕೆಯು ಹೀಗಿರುವುದು:—

ನಿರ್ಜಿತ್ಯ ಕ್ಷಿತಿಮಂಡಲಂ ಭೃಗುಪತಿರ್ಮಹ್ಯಂ ಪ್ರದಾತುಂ ಪುನಃ
ಪ್ರಹ್ವಃಪ್ರಾರ್ಥಯತನ್ಯಷೇಧಿ ಚ ಮಯಾ ವಿಶ್ವಂ ತೃಣೇಕುರ್ವತಾ
ಅಸ್ಮಾದ್ವೈಭವದರ್ಶಿಸಂಭೃತಚಮತ್ಕಾರೈ ರಮರ್ತ್ಯೈಶ್ಚರೈಃ
ದತ್ತಾ ಧಿಕ್ಕೃತವಾನಹಂ ಶಮಧನಃ ಸ್ವರ್ಗಾಪವರ್ಗಾವಪಿ ॥ ೫-೨

ಎಲೆ! ಕುಹನೆ! ನಾನು ಎಂತಹ ನಿಸ್ಪೃಹನೆಂಬುದನ್ನು ನೀನು ಬಲ್ಲೆಯಾ ನೋಡು! ಮಹಾಪರಾಕ್ರಮಿಯಾದ ಪರಶುರಾಮನು ಭೂಮಂಡಲವೆಲ್ಲವನ್ನೂ ಜಯಿಸಿ ನನಗೆ ಕೊಡುವುದಕ್ಕೆ ಎಷ್ಟೋ ವಿಧದಿಂದ ತಲೆವಾಗಿ ಪ್ರಾರ್ಥಿಸಿದರೂ ವಿಶ್ವವನ್ನೇ ತೃಣವಾಗೆಣಿಸಿರುವ ನಾನು ನಿರಾಕರಿಸಿಯೇ ಬಿಟ್ಟೆನು. ತಿಳಿಯಿತೆ! ಇದಲ್ಲದೆ ನನ್ನ ವೈಭವಾತಿಶಯಗಳನ್ನು ನೋಡಿ ಅಚ್ಚರಿಗೊಂಡ ದೇವತೆಗಳು ಸ್ವರ್ಗಾಪವರ್ಗಗಳನ್ನು ಕೂಡಾ ಕೊಡಲು ಬಂದರಾದರೂ ಶಮಧನನಾದ ನಾನು ಅದನ್ನು ನಿರಾಕರಿಸಿದೆನು.

ಮನ್ಮಥನ ಹೇಳಿಕೆ.—

ಇಕ್ಷುಃ ಪೇಶಲಮಾದ್ಯಶಂ ಮಮಧನುಃ ಪುಷ್ಪಾಣ್ಯಮಾ ಸಾಯಕಾಃ
ತಂತ್ರೀ ಮಂಜುಲನಿಸ್ವನಾ ಮಧುಕರಶ್ರೇಣೀ ಶುಭಾ ಶಿಂಜಿನೀ
ಭೀರುಃ ಸನ್ನಬಲಾಜನೋ ಮಮ ಬಲಂ ತತ್ಕಂ ಪರಂ ಕಥ್ಯತೇ
ಸೋಽಹಂ ನಿರ್ಜಿತಶೂಲಭೃತ್ಪ್ರಭೃತಿಕಃ ಸಂಕಲ್ಪಸಿದ್ಧೋದಯಃ ೪-೧

ಎಲೆ! ವಸಂತ! ಕೇಳು ನನ್ನ ಬಿಲ್ಲಾದರೋ ಸರಸರಸವಾದ ಮೃದುವಾದ ಇಕ್ಷುದಂಡವು. ನನ್ನ ಬಾಣಗಳೋ ಅತಿಕೋಮಲವಾವ ಪುಷ್ಪಂಗಳು. ಶಿಂಜಿನಿಯಾದರೋ ತಂತ್ರಿಯಂತೆ ಝೇಂಕರಿಸುವ ಭ್ರಮರಗಳು. ನನ್ನ ಸೈನ್ಯವಾದರೋ ಭೀರುಗಳಾದ ಅಬಲೆಯರು. ಹೀಗೆ ಇದ್ದರೂ ಶೂಲಪಾಣಿಯೇ ಮೊದಲಾದವರನ್ನು ಜಯಿಸಿ ಸಂಕಲ್ಪಮಾತ್ರದಿಂದಲೇ ಸಿದ್ಧವಾದ ವಿಭವವುಳ್ಳವನಾಗಿರುವೆನು.

ಇತರ ಶ್ಲೋಕಗಳು:—

ತರತುವಿವಿತ್ಸಯಾಬ್ಧಿಮಧಿರೋಹತುಶೈಲಕಟೀಂ
ಧಮತುಚಧಾತುವರ್ಗಮಭಿಗಚ್ಛತುಶಸ್ತ್ರಮುಖಂ
ತದಿದಮುಮುಂತುದಂಯದುಪ ಬಪ್ಪವಧಾಯಭಿಯಾ
ಧನಮದಮೇದುರಕ್ಷ್ಮಿತಿ ಭೃದಜ್ಯಾಚಂಕ್ರಮಣಂ ॥ ೬-೩

ಹೆಚ್ಚಾಗಿ ಲಾಭದೊರಕುವುದೆಂದು ಸಮುದ್ರವನ್ನಾದರೂ ದಾಟಬಹುದು. ಧಾತುಗಳೆಲ್ಲವನ್ನೂ ಕರಗಿಸಿ ನೀರಾಗಿಸಬಹುದು. ಅತಿದುರ್ಗಮವಾದ ಬೆಟ್ಟವನ್ನಾದರೂ ಹತ್ತಬಹುದು. ಹಾಗಲ್ಲದಿದ್ದರೆ ರಣರಂಗದಲ್ಲಿ ಹೊಡೆದಾಡಬಹುದು. ಆದರೆ ಧನಮದಾಂಧತೆಯಿಂದ ಕೂಡಿ ಕೊಬ್ಬಿದ ರಾಜನಮನೆಯಲ್ಲಿ ಯಾವಕಾಲಕ್ಕೇನುಬರುವುದೋ ಎಂದು ಪದೇಪದೇ ಚಿಂತಿಸುತ್ತಾ ಭೀತಿಯಿಂದಿರುವಿಕೆಯು ಮಾತ್ರ ಇವುಗಳೆಲ್ಲದಕ್ಕಿಂತಲೂ ಅತ್ಯಂತ ದುಃಖಕರವಾದುದು. ಅಯ್ಯೋ!

ಪ್ರತ್ಯಂಗಕಂಪ ಪರಿಣತಿತ ಕಂಚುಕೇಸ್ಮಿ
ಪರ್ಯಾಪ್ತರೂಢಪಲಿತೇ ಪರತಂತ್ರಪಿಂಡೇ
ಅಕ್ಷೀಣರಾಗಮಜರಾಮರಜೀವಿತಾಶಂ
ಮಾಮೇವಹಂತ! ಹಸತೀವಮಮಾಂತರಾತ್ಮಾ ॥ ೬-೪

ಇಗೋ! ಜರಾಪೀಡಿತನಾದ ನನಗೆ ವಯೋಧಿಕ್ಯದಿಂದ ಮೈಎಲ್ಲವೂ ನಡುಗುತ್ತಿರುವುದು. ನಾನು ತೊಟ್ಟಿರುವ ಕವಚವಾದರೋ ನಡುಗುತ್ತಿರುವ ಶರೀರದೊಂದಿಗೆ ತಾನೂ ನಡುಗುತ್ತಿರುವುದು. ಶರೀರದಲ್ಲಿರುವ ಕೂದಲುಗಳೆಲ್ಲವೂ ಬಿಳುಪಾಗಿ ಹೋಗಿರುವುವು. ಇಷ್ಟು ವಿಪನ್ನಾವಸ್ಥೆಯಲ್ಲಿರುವುದಾದರೂ ಪರ

ತಂತ್ರವಾದ ಈ ಶರೀರದಲ್ಲಿ ಇನ್ನೂ ಬದುಕಿರಬೇಕೆಂಬ ಆಶೆಯು ಹೆಚ್ಚುತ್ತಿರುವ ದನ್ನು ನೋಡಿ ನನ್ನ ಅಂತರಾತ್ಮವೇ ನನ್ನನ್ನು ಹಾಸ್ಯಮಾಡುವಂತಿದೆ.

ತಿಲಂ ಕಿಮನಲಂ ಭವೇದನಲ ಮೌದರಂ ಬಾಧಿ ತುಂ
ಪಯಃ ಪ್ರಸೃತಿಪೂರಕಂ ಕಿಮುನಧಾರಕಂಸಾರಸಂ
ಅಯತ್ನಮಲಮಲ್ಲಕಂ ಪಥಿಪಟಚ್ಚರಂ ಕಚ್ಚರಂ
ಭಜಂತಿವಿಭುಧಾ ಮುಧಾಹ್ಯ ಹಹ ! ಕುಕ್ಷಿತಃ ಕುಕ್ಷಿತಃ ॥

ಕಣದಲ್ಲಿಬಿದ್ದಿರುವ ಅಥವಾ ಉದರಿರುವ ಕಾಳುಗಳನ್ನು ಆರಿಸಿಕೊಳ್ಳುವುದ ರಿಂದ ಕ್ಷುಧೆಯು ಅಡಗದೆ ? ಕೊಳದಲ್ಲಿನ ಒಂದು ಬೊಗಸೆನೀರನ್ನುಕುಡಿದು ಪ್ರಾಣ ಧಾರಣಮಾಡಿಕೊಳ್ಳಲು ಆಗದೆ. ? ಅಯತ್ನದಿಂದ ಮಾರ್ಗದಲ್ಲಿ ದೊರೆಯುವುದಾದ ಯಾವುದಾದರೊಂದು ಚಿಂದಿಯಿಂದ ಮಾನವು ಮುಚ್ಚದೆ? ಅಯ್ಯೋ! ವಿದ್ವಾ ಂತರಾದವರು ಈ ಹಾಳುಉದರ ಪೂರಣಕ್ಕಾಗಿ ಈ ನೀಚರಾಜಾಶ್ರಯವನ್ನು ಮಾಡುವರಲ್ಲವೆ? ಅಹಹ!

ಸುಭಾಷಿತನೀವೀ:—ಇದು ನೀತಿಭೋಧಕಗ್ರಂಥ. ಇದರಲ್ಲಿ ೧೪೪ಶ್ಲೋಕಗ ಳಿದ್ದು ೧೨ ಪದ್ಧತಿಗಳಾಗಿ ವಿಂಗಡಿಸಲ್ಪಟ್ಟಿದೆ. ಇದಲ್ಲದೆ ಪ್ರತಿಹನ್ನೆರಡು ಶ್ಲೋಕ ಗಳಿಗೂ ಒಂದು ಶ್ಲೋಕವು ಹೆಚ್ಚಾಗಿಕೊಟ್ಟಿರುತ್ತದೆ. ಹನ್ನೆರಡು ಶ್ಲೋಕಗಳನ್ನು 'ಭಾವುಕ'ವೆಂದೂ ಕೊನೆಯದಾದ ಒಂದು ಶ್ಲೋಕವನ್ನು 'ಪ್ರಿಯ'ವೆಂದೂ ಹೇಳಲ್ಪ ಟ್ಟಿದೆ. ಮೇಲೆ ಹೇಳಿದ ಹನ್ನೆರಡು ಪದ್ಧತಿಗಳಲ್ಲಿ ಐದು ದುರ್ಜನ ಪದ್ಧತಿಯನ್ನೂ, ಮತ್ತೈದು ಸಜ್ಜನರ ಕಾರ್ಯಗಳನ್ನೂ, ಹನ್ನೊಂದನೆಯದು ಸತ್ಕವಿಗಳ ವಿಚಾರ ವನ್ನೂ ಕೊನೆಯದು ವಿವೇಚನಾಜ್ಞಾನವನ್ನೂ ಹೇಳುತ್ತದೆ. ಇದನ್ನು ಸರ್ವಜ್ಞ (?) ಸಿಂಗಪ್ಪನಾಯಕನಿಗಾಗಿ ಅವನು ಕೇಳಿಕೊಂಡಮೇರೆ ಬರೆದುದಾಗಿಯೂ ಇಂತಹು ದಾದ ಇನ್ನುಮೂರು ಗ್ರಂಥಗಳನ್ನು ಬರೆದುದಾಗಿಯೂ ಅವು ತತ್ತ್ವಸಂದೇಶ, ರಹ ಸ್ಯಸಂದೇಶ, ರಹಸ್ಯಸಂದೇಶವಿವರಣವೆಂದು ಕರೆಯಲ್ಪಟ್ಟಿರುವುದಾಗಿಯೂ ತಮ್ಮ ಮತತತ್ವದ ಅಭಿಪ್ರಾಯವೆಲ್ಲವನ್ನು:—

ಸತ್ತ್ವಸ್ಥಾಭೃತಂ ಪ್ರಸಾದಯ ಸತಾಂ ವೃತ್ತಿಂ ವ್ಯವಸ್ಥಾಪಯ
ತ್ರಸ್ಯಬ್ರಹ್ಮವಿದಾಗಸಸ್ತೃಣಮಿವ ತ್ರೈವರ್ಗಿಕಾ ಭಾವಯ
ಸಿಕ್ಯೇ ಶೇಷಿಣಿ ನಿಕ್ಷಪನ್ನಿಜಭರಂ ಸರ್ವಂಸಹೇ ಶ್ರೀಪತೇ
ಧರ್ಮಂಧಾರಯ ಚಾತಕಸ್ಯ ಕುಶಲಿ ಧಾರಾಧರೈಕಾಂತಿನಃ ॥

ಎಂಬ ಒಂದು ಶ್ಲೋಕದಲ್ಲಿ ಬರೆದು ಮೇಲೆ ಹೇಳಿದ ಅರಸುಮಗನಿಗೆ ಕಳುಹಿಸಿದುದಾಗಿ ಕಥೆಯು ಇದೆ. ಪ್ರಕೃತ ಈ ಸಿಂಗಪ್ಪನಾಯಕನಾರೆಂಬುದನ್ನು ತಿಳಿಯಬೇಕಾಗಿದೆ.

ಪ್ರೊ|| ಶೇಷಗಿರಿಶಾಸ್ತ್ರಿಗಳು ಮೇಲೆ ಹೇಳಿದ ಅರಸುಮಗ ಸಿಂಗಪ್ಪನಾಯಕನು ಸರ್ವಜ್ಞಸಿಂಗಮನಾಯುಡು ಅಥವಾ 'ರಸಾರ್ಣವಸುಧಾಕರ' ವನ್ನು ಬರೆದ ಸಿಂಹಭೂಪಾಲನಾಗಿರಬೇಕೆಂದೂ, ಅವನು ಈಗಣ ವೆಂಕಟಗಿರಿರಾಜರ ಮೂಲ ಪುರುಷನೆಂದೂ, ಕ್ರಿ. ಶ. ೧೩೩೦ರಲ್ಲಿದ್ದನೆಂದೂ, ವೇದಾಂತದೇಶಿಕರ ಮಕ್ಕಳಾದ ನಯಿನಾರಾಚಾರ್ಯರವರು ವಾದಕ್ಕಾಗಿ ಈತನ ಸಭೆಗೆ ಹೋಗಿದ್ದರೆಂದೂ ಒಕ್ಕಣಿಸಿರುವರು.

ರಾವಬಹದ್ದೂರ ವೀರೇಶಲಿಂಗಂಪಂತಲುಯವರು ಆಂಧ್ರಕವಿ ಶ್ರೀನಾಥನ ಕಾಲವನ್ನು ನಿರ್ಣಯಿಸುವುದರಲ್ಲಿ ಈ ಸರ್ವಜ್ಞಸಿಂಗಮನಾಯುಡುವಿನ ಕಾಲವನ್ನು ವಿಮರ್ಶಿಸಿ ಕ್ರಿ. ಶ. ೧೪೨೨-೧೪೪೭ರವರೆಗೆ ವಿಜಯನಗರದಲ್ಲಾಳಿದ ಪ್ರೌಢದೇವರಾಯನ ಸಮಕಾಲೀನನೆಂದಿರುವರು. ಅಲ್ಲದೆ ಇವನು ಭೇತಾಲನಾಯುಡುವಿನ ಅಥವಾ ಜೀವರಡ್ಡಿಯ ಹತ್ತನೆಯ ತಲೆಯವನೆಂದೂ, ವೆಂಕಟಗಿರಿಯ ಅರಸುಗಳ ಮೂಲಪುರುಷನೆಂದೂ, ಅವನು 'ಚಮತ್ಕಾರಚಂದ್ರಿಕಾ' ಎಂಬ ಲಕ್ಷಣಶಾಸ್ತ್ರವನ್ನು ಬರೆದಿರುವುದಾಗಿಯೂ ಆದನ್ನೇ ಸಿಂಗಭೂಪಾಲೀಯವೆಂದು ಕರೆಯುವುದಾಗಿಯೂ ಹೇಳಿರುವರು. ಇವರ ಹೇಳಿಕೆಯಂತೆ ಶ್ರೀನಾಥನು ರಾಜಮಹೇಂದ್ರದಲ್ಲಿ ಆಳಿದ ವೇಮಾರೆಡ್ಡಿಯ ಆಸ್ಥಾನ ಪಂಡಿತನೆಂದೂ, ಭೀಮವರದಲ್ಲಿನ ವೇಮಾರಡ್ಡಿಯ ಶಾಸನವು ಕ್ರಿ. ಶ. ೧೪೩೪ ಎಂದು ಕಾಲವು ಹೇಳಿರುವುದಾಗಿ ಗೊತ್ತಾಗುತ್ತದೆ. ಈ ಶ್ರೀನಾಥನೇ ಸರ್ವಜ್ಞಸಿಂಗಮ ನಾಯುಡುವಿನ ಆಸ್ಥಾನಕ್ಕೆ ಹೋಗಿ ಅಲ್ಲಿ ಕವಿಸಾರ್ವಭೌಮನೆಂಬ ಬಿರುದನ್ನು ಗಳಿಸಿಕೊಂಡು ಬಂದಂತೆಯೂ ಹೇಳಬೇಕಾಗುತ್ತದೆ. ಆಂಧ್ರಭಾಗವತಕಾರನಾದ ಬಮ್ಮೆರ ಪೋತರಾಜು ಸರ್ವಜ್ಞಸಿಂಗಮನಾಯುಡುವಿನ ಆಸ್ಥಾನಪಂಡಿತನು. ಮತ್ತು ಶ್ರೀನಾಥನ ಮೈದುನನು.

ಮಹಾವಾಖ್ಯಾತವಾದ ಮಲ್ಲಿನಾಥನು ಸರ್ವಜ್ಞಸಿಂಗಮನಾಯುಡುವಿನ ಆಸ್ಥಾನಕ್ಕೆ ಹೋಗಿದ್ದುದಾಗಿಯೂ, ಮಲ್ಲಿನಾಥನು ಕ್ರಿ. ಶ. ೧೫೯ನೆಯ ಶತಮಾನದವನೆಂದು ಡಾ|| ಭಂಡಾರಕರ ಮತವಿರುವುದು.

ಮೇಲೆ ಹೇಳಿದ ಕಾರಣಗಳಿಂದ 'ರಸಾರ್ಣವಸುಧಾಕರ'ಕಾರ ಅಥವಾ ಸಿಂಗಭೂಪಾಲೀಯನು ಕ್ರಿ. ಶ. ೧೩೮೮ರವರೆಗೆ ಇದ್ದ ಶ್ರೀವೇದಾಂತಾಚಾರ್ಯರವರ ಸಮಕಾಲೀನನಾಗಿರನೆಂದೂ ಪ್ರೊ|| ಶೇಷಗಿರಿಶಾಸ್ತ್ರಿಗಳ ಹೇಳಿಕೆಯು ಸಮಂಜಸವಾಗದೆಂದೂ ಹೇಳಬೇಕಾಗುತ್ತದೆ. ಹಾಗಾದರೆ ಕಥೆಯಲ್ಲಿ ಹೇಳಲ್ಪಡುವ ಸಿಂಗಪ್ಪನಾಯಕನಾರೆಂಬುದನ್ನು ಕಂಡುಹಿಡಿಯಬೇಕಾಗಿದೆ. ರಸಾರ್ಣವಸುಧಾಕರದ ಮೊದಲನೆಯ ಭಾಗದಲ್ಲಿ ಹೇಳಿರುವ ಸಿಂಹಭೂಪಾಲನ ವಂಶಾವಳಿಯನ್ನು ಪರಿಕ್ಷಿಸಿ ಹೇಳುವುದು ಅಪ್ರಾಸಂಗಿಕವಾಗದು.



ಮೇಲೆ ಹೇಳಿದ ವಂಶಾವಳಿಯಲ್ಲಿ ರಸಾರ್ಣವಸುಧಾಕರಕಾರನ ಅಜ್ಜನ ಹೆಸರು ಸಿಂಗಪ್ರಭುವೆಂದು ಹೇಳಿದೆ. ಈ ವಂಶಾವಳಿಯನ್ನೂ, ರಾಜಮಹೇಂದ್ರವರದ ರಡ್ಡಿರಾಜರ ವಂಶಾವಳಿಯನ್ನೂ ಹೋಲಿಸಿ ನೋಡಿದರೆ ಸಿಂಗಪ್ರಭುವು ಶ್ರೀವೇದಾಂತಾಚಾರ್ಯರ ಸಮಕಾಲೀನನೆಂದು ಸ್ಪಷ್ಟವಾಗುತ್ತದೆ.

ಕೊಂಡವೀಡು (ಕೃಷ್ಣಾಜಿಲ್ಲಾ) ಮತ್ತು ರಾಜಮಹೇಂದ್ರದಲ್ಲಾಳಿದ ರಡ್ಡಿ ಅರಸುಗಳನ್ನು ವೀರೇಶಲಿಂಗಂಪಂತಲು ಯವರ ಗ್ರಂಥದಿಂದ ಸಂಗ್ರಹಿಸಬಹುದಾಗಿದೆ.

೧. **ಪೋಲಯ ವೇಮರಡ್ಡಿ** :—ಕ್ರಿ. ಶ. ೧೩೨೮-೧೩೫೯ರ ವರೆಗೆ. ಇವನು ಓರಂಗಲ್ಲಿನ ಎರಡನೇ ಪ್ರತಾಪರುದ್ರನ ಸೇನಾಪತಿಯಾಗಿದ್ದು ೧೩೨೮ರಲ್ಲಿ ಸ್ವತಂತ್ರನಾಗಿ 'ಪೆನುಕೊಂಡ' ಎಂಬುದನ್ನು ಸ್ವಾಧೀನಪಡಿಸಿಕೊಂಡು ಆಳಿದನು.

೨. **ಅನವೇಮರಡ್ಡಿ** :—ಇವನು ಪೋಲಯ ವೇಮರಡ್ಡಿಯ ಮಗನು. ಕ್ರಿ. ಶ. ೧೩೪೦-೧೩೬೯ರ ವರೆಗೆ. ಇವನ ರಾಜಧಾನಿಯು ನೆಲ್ಲೂರುಬಳಿಯಣ ಅಡ್ಡಂಕಿ. ಇವನು ಪಾತಾಳಗಂಗೆಯ ಹತ್ತಿರ

ವಿರುವ ಶ್ರೀಶೈಲಕ್ಕೆ ಸೋಪಾನ ವೀಥಿಯನ್ನು ಕಟ್ಟಿಸಿದನು. ಸಂಸ್ಕೃತ ಅಮರುಕಕಾವ್ಯಕ್ಕೆ ವ್ಯಾಖ್ಯಾನವನ್ನು ಬರೆದಿರುವನು.

೩. **ಅಲ್ಲಯವೇಮರಡ್ಡಿ** :—ಇವನು ಅನವೇಮರಡ್ಡಿಯ ಸೋದರನು. ಕ್ರಿ. ಶ. ೧೩೭೦-೧೩೮೧ರ ವರೆಗೆ ಆಳಿದನು.

೪. **ಅನ್ನಪೋತರಡ್ಡಿ**:—ಇವನು ಅನವೇಮರಡ್ಡಿಯಮಗನು. ಇವನು ವೆಂಕಟಗಿರಿಯ ಮಾದನಾಯಕನೊಡನೆ ಕಾಳಗವಾಡಿ ತಂದೆಯು ಜೀವಿಸಿದ್ದಾಗಲೇ ಕ್ರಿ. ಶ. ೧೩೬೯ ಕ್ಕೆ ಮುಂಚಿತವಾಗಿಯೇ ಮೃತನಾಗಿ ಹೋಗಿದ್ದನು.

೫. **ಕುಮಾರಗಿರಿವೇಮಾರಡ್ಡಿ** :—ಇವನು ವೆಂಕರಡ್ಡಿಯ ಮಗನು. ಕ್ರಿ. ಶ. ೧೩೮೨—೧೪೦೫ ರವರೆಗೆ ಆಳಿದನು. ಇವನು ತನ್ನ ಸೋದರಿಯ ಗಂಡನಾದ ಅಲ್ಲಾದ ಭೂಪತಿಗೆ ರಾಜಮಹೇಂದ್ರವನ್ನು ಬಳುವಳಿಯಾಗಿ ಕೊಟ್ಟನು.

೬. **ಅಲ್ಲಾದ ಭೂಪತಿ** :—ಇವನು ಕುಮಾರಗಿರಿವೇಮಾರಡ್ಡಿಯ ಸೈದುನನು. ಇವನು ರಾಜಮಹೇಂದ್ರದಿಂದ ಸಿಂಹಾದ್ರಿಯವರೆಗೆ ರಾಜ್ಯವನ್ನು ವಿಸ್ತರಿಸಿ ಕ್ರಿ. ಶ. ೧೪೧೫ ವರೆಗೆ ಆಳಿದನು.

ವೇಮಾರಡ್ಡಿ ಮತ್ತು ವೀರಭದ್ರರಡ್ಡಿ:—ಇವರಿರ್ವರೂ ಅಲ್ಲಾದ ಭೂಪತಿಯ ಮಕ್ಕಳು. ಇವರಿರ್ವರೂ ರಾಜಮಹೇಂದ್ರದಲ್ಲಿ ಒಟ್ಟಿಗೆ ಆಳಿದರು. ವೇಮಾರಡ್ಡಿಯು ಚಿಲ್ಕಸರೋವರದವರೆಗೆ ರಾಜ್ಯವನ್ನು ವಿಸ್ತರಿಸಿದ್ದನಲ್ಲದೆ ಆಂಧ್ರಕವಿ ಶ್ರೀನಾಥನಿಗೆ, ಆಶ್ರಯದಾತನಾಗಿದ್ದನು. ಭೀಮವರ್ಮದಲ್ಲಿರುವ ಶಾಸನದಲ್ಲಿ ಕ್ರಿ. ಶ. ೧೪೨೫ ಎಂದು ಶಾಸನಕಾಲವು ಕಂಡುಬರುತ್ತದೆ.

ಈ ಮೇಲ್ಕಂಡ ವಿಷಯಗಳ ವಿಮರ್ಶನದಿಂದ ವೆಂಕಟಗಿರಿಯ ಮಾಧವನಾಯಕ ಅಥವಾ ಮಾದನಾಯಕನೆಂಬುವನು ಸುಮಾರು ಕ್ರಿ. ಶ. ೧೩೬೯ರಲ್ಲಿ ಜೀವಿಸಿದ್ದು ಅನ್ನಪೋತರಡ್ಡಿಯನ್ನು ಕಾಳಗದಲ್ಲಿ ಕೊಂದಿರಬೇಕೆಂದು ಸ್ಪಷ್ಟವಾಗುತ್ತದೆ. ಈ ಮಾಧವ ಅಥವಾ ಮಾದನಾಯಕನ ತಂದೆಯೇ ಮೇಲಣ ವೆಂಕಟಗಿರಿರಾಜವಂಶಾವಳಿಯಲ್ಲಿ ಕೇಳಿರುವ ಸಿಂಗಪ್ರಭು. ಇವನೇ ಶ್ರೀವೇದಾಂತಾಚಾರ್ಯರ ಸಮಕಾಲೀನನೆಂಬುದು ಸಿದ್ಧಾಂತವಾಗುತ್ತದೆ ಕಥೆಯಲ್ಲಿ ಕಂಡುಬರುವು

ದಾದ " ಮಾಧವಾತ್ಮಜ " ಎಂಬುದು ತಪ್ಪಾಗಿ ಹೇಳಿರುವಂತೆ ಕಂಡುಬರುತ್ತದೆ. ಅದಕ್ಕೆ ಬದಲು ಯಾಚವಾತ್ಮಜ ಎಂದಿರಬೇಕು. ಈ ಸಿಂಗಪ್ರಭುವೇ ಮೇಲೆ ಹೇಳಿದ ಸರ್ವಜ್ಞ (?) ಸಿಂಗಪ್ಪನಾಯಕ. ಈ 'ಸರ್ವಜ್ಞ'ನೆಂಬ ಬಿರುದು ಇವನಿಗೆ ಹೇಗೆ ಬಂದಿತೆಂಬುದು ತಿಳಿಯದಾಗಿದೆ. " ರತ್ನಪೇಟಿಕಾ " ಎಂಬ ವ್ಯಾಖ್ಯಾನದಲ್ಲಿ ಎಲ್ಲಿಯೂ ಹೇಳಿರುವಂತೆ ಕಂಡುಬರುವುದಿಲ್ಲ.

'ಸುಭಾಷಿತನೀವಿ' ಎಂಬುದಕ್ಕೆ ರತ್ನಪೇಟಿಕಾ ಎಂಬವ್ಯಾಖ್ಯಾನವನ್ನು ಶ್ರೀನಿವಾಸ ಸೂರಿಯು ಬರೆದಿರುವನು. ಮಾದರಿಗಾಗಿ ಕೆಲವು ಶ್ಲೋಕಗಳನ್ನು ಬರೆಯುವೆವು. ಶ್ಲೋಕಗಳು ಅನ್ಯಾಪದೇಶ ಮತ್ತು ಶ್ಲೇಷೆಯಿಂದಕೂಡಿದೆ. ಗ್ರಂಥಕಾರರಿಗೆ: ಪಾಂಚಾಲೀಶೈಲಿಯಲ್ಲಿ ಬಹುಪಕ್ಷ ಪಾತವೆಂದರೆ ಹೆಚ್ಚಲ್ಲ. ಕೆಲವು ಸಂದರ್ಭಗಳಲ್ಲಿ ಗೌಡೀಶೈಲಿಯನ್ನನುಕರಿಸುವಂತೆ ತೋರುತ್ತದೆ.

ಮಾದರಿಗಾಗಿ ಕೆಲವು ಶ್ಲೋಕಗಳು: --

ನಿಮಿಲಯತು ಲೋಚನೇ ನ ಪಿ ತಿರಸ್ಕೃತೋ ಭಾಸ್ಕರಃ
ಶ್ರವಃ ಸ್ಥಗಯತಃ ಸ್ಥಿರಂ ಪರಭೃತಃ ಕಿಮು ಧ್ವಾಂಕ್ಷತಿ
ಸ್ವಯಂ ಭ್ರಮತು ಬಾಲಿಶೋ ನ ಖಲು ಬಂಭ್ರಮೀತಿ ಕ್ಷಿತಿಃ
ಕದರ್ಥಯತು ಮುಷ್ಟಿಭಿಃ ಕಥಯು ಕಿಂ ನಭಃ ಕುಭ್ಯತೇ
ದೃಪ್ತಪದ್ಧತಿಃ ॥ ೧೨ ॥

ಮದಾಂಧನು ಪರಶ್ರೇಯಸ್ಸನ್ನುನೋಡಿ ಸಹಿಸದವನಾಗಿ ತನ್ನ ಸರ್ವಜ್ಞತ್ವವನ್ನು ವ್ಯಕ್ತಪಡಿಸುವನಾದರೂ ತಾನು ಅವಿವೇಕಿ ಎಂಬುದೇ ವ್ಯಕ್ತವಾಗುತ್ತದೆ. ಹೇಗೆಂದರೆ ಅವಿವೇಕಿಯು ತಾನು ಕಣ್ಣನ್ನುಮುಚ್ಚಿಕೊಂಡರೆ ಸೂರ್ಯನನ್ನು ತಿರಸ್ಕರಿಸಿದಂತೆಯೂ, ಕಿವಿಗಳನ್ನು ಮುಚ್ಚಿಕೊಂಡರೆ ಪರಭೃತಾಲಾಪ (ಕೋಗಿಲೆಯ ಕೂಗನ್ನು) ವನ್ನು ಕಾಗೆಯ ಕರ್ಕಶ ಧ್ವನಿಗೆ ಸಮವಾಗಿ ಮಾಡಿದಂತೆಯೂ, ಮೂರ್ಖ ಅಥವಾ ಬಾಲಕನಂತೆ ತಾನು ಚಕ್ರಾಕಾರವಾಗಿ (ಗಿರ್ರನೆ) ಸುತ್ತಿದರೆ ಭೂಮಿಯು ತಿರುಗುವಂತೆಯೂ, ತನ್ನ ಕೈಯಿಂದ ಗುದ್ದಿದರೆ ಆಕಾಶವನ್ನೇ ಕ್ಷೋಭಿಸಿದಂತೆಯೂ ಭಾವಿಸುತ್ತಾನೆ. ಹೀಗೆ ಮಾಡುವುದರಿಂದ ತನ್ನ ಅವಿವೇಕವು ಲೋಕಕ್ಕೆ ವ್ಯಕ್ತವಾಗುವುದೇ ಹೊರತು ಅವನ ಸರ್ವಜ್ಞತ್ವವು ಎಂದಿಗೂ ವ್ಯಕ್ತಪಡುವುದಿಲ್ಲ.

ಜನಿತ್ವಾऽಪಿ ಮಹಾಗೋತ್ರೇ ನಿನ್ನಗಾವಕ್ರಚೇಷ್ಟಿತಾಃ
ವ್ಯಸರೀತ್ಯಂ ವಿತನ್ವಂತಿ ಸಮೇಷು ವಿಷಯೇಷು ಚ ॥ ಖಲಪದ್ಧತಿಃ॥ ೪

ಕೆಲವರು ಕೇವಲ ಉತ್ತಮವಂಶದಲ್ಲಿ ಹುಟ್ಟಿದರೂ ದುರ್ಮಾರ್ಗಪ್ರವರ್ತಕರಾಗಿಯೇ ಇರುವರು. ಹೇಗೆಂದರೆ ನದಿಯು ದೊಡ್ಡ ಬೆಟ್ಟದಲ್ಲಿ ಹುಟ್ಟಿದರೂ ಇದು ಸಮಪ್ರದೇಶ ಇದು ವಿಷಮ ಪ್ರದೇಶವೆಂದು ಲಕ್ಷಿಸದೆ ಎಲ್ಲಾ ಕಡೆಗಳಲ್ಲಿಯೂ ಹೇಗೆ ವಿಪರೀತವಾಗಿಹರಿಯುವುದೋ ಹಾಗೆ ಕೆಲವರು ಉತ್ತಮ ಕುಲಜಾತರಾದಾಗ್ಯೂ (ಪೂರ್ವಕರ್ಮಾನುಸಾರವಾಗಿ) ಇವರು ಕೆಟ್ಟವರು ಇವರು ಒಳ್ಳೆಯವರೆಂಬ ಗುಣಾಗುಣಗಳನ್ನು ವಿವೇಚಿಸದೆ ಎಲ್ಲರಲ್ಲಿಯೂ ವಿಪರೀತಾಚರಣೆಯನ್ನೇ ಮಾಡುತ್ತಾರೆ.

ಮುಂಡೂಕರಾವಿಣಂ ಸರ್ಪಂ ಗೋಮುಖಂ ಚ ವ್ಯಾಘ್ರಾದಿನಂ
ನ ಸುಹೃತ್ವೇನ ಮನ್ಯೇತ ಮಾನಯಂತಂ ಚ ವೈರಿಣಂ ॥
ಅಸೇವ್ಯಪದ್ಧತಿಃ ॥ ೮ ॥

ಕಪ್ಪೆಯಂತೆಕೂಗುವ ಸರ್ಪವನ್ನೂ (ಸರ್ಪಜಾತಿಯಲ್ಲಿ ಇಂತಹ ಸರ್ಪವೂ ಇದೆ) ಮೃಗಗಳನ್ನು ಭಕ್ಷಿಸುವ ಗೋಮುಖದಂತಿರುವ ವ್ಯಾಘ್ರವನ್ನೂ (ವ್ಯಾಘ್ರ ಜಾತಿಯಲ್ಲಿ ಗೋಮುಖದಂತಿರುವ ವ್ಯಾಘ್ರವೂಇದೆ.) ಬಹುವಾಗಿ ಮರ್ಯಾದೆಯನ್ನು ಮಾಡುವ ಹಗೆಯನ್ನೂ ಸ್ನೇಹಿತನೆಂಬದಾಗಿ ತಿಳಿಯಬೇಡ.

೧೪ನೆಯ ಶತಮಾನ.

ಪ್ರತಾಪರುದ್ರ (೨)

ಇವನು 'ಕಾಕತೀಯ' ಅರಸನೆಂದೂ ಮುಮ್ಮಡಾಂಬೆಯ ಮಗನೆಂದೂ ತಂದೆಯ ಹೆಸರು ಮಹಾದೇವನೆಂದೂ;—

ಕೌಸಲ್ಯಾಸೀತ್ಪ್ರಥಮಜನನೀ ದೇವ ಕೇಚ ದ್ವಿತೀಯಾ
ವಿಷ್ಣೋರ್ಮಾತಾ ಕದನುಮಹಿತಾ ಮುಮ್ಮಡಾಂಬಾತೃತೀಯಾ
ಯಸ್ಯೇತಾಯಾಂ ರಘುಪತಿರಭೂದ್ವಾಪರೇ ಶೌರಿರಾಸೀತ್
ತ್ರಾತುಂಕ್ಷ್ಮೋ[illegible]ಂ ಸ ಜಯತಿ ಕಲೌ ವೀರರುದ್ರಾವತಾರಃ ॥ *

ಎಂಬುದರಿಂದಲೂ:—

ಪುರಾಕೇಲಕಾಕತಿ ಕುಲಸಂಭೂತೇ ಗಣಪತಿನಾಮ್ನಿ ಮಹಾರಾಜೇ ದುಹಿತೃಮಾತ್ರಸಂತಾನೇ ಕದಾಚಿದ್ದೈವ ಯೋಗೇನ ಕಾಲಪರಿಪಾಕ ಮುಪೇಯುಷಿ ತನ್ಮಹಿಷೀ ರುದ್ರದೇವೀನಾಮರಾಜ್ಞೀ ಬಹೂನಿವರ್ಷಾಣಿ ತದ್ರಾಜ್ಯಮಕಂಟಕಂ ಪರಿ

* ಪ್ರತಾಪರುದ್ರೀಯ. ಪುಟ. ೧೨ ಶ್ಲೋಕ ೨೦

ಸಾಲ್ಯ ಪರಿಣತಾಸತಿ ದೌಹಿತ್ರೇಪ್ರತಾಪರುದ್ರೇರಾಜ್ಯಧುರಾನಿದಧೇ" ‡ ಎಂಬು ದರಿಂದ ಸ್ಪಷ್ಟಪಡುತ್ತದೆ. ಕಾಕತಿಯ ಅರಸರವಂಶಾವಳಿಯು ಹೀಗಿರುವುದು:—



ಇವನು ಕ್ರಿ. ಶ. ೧೨೯೧ರಲ್ಲಿ ಸಿಂಹಾಸನವನ್ನು ಹತ್ತಿದನು. ಇವನಿಗೆ ಕುವಾರ ರುದ್ರದೇವ ಮಹಾರಾಜ ಎಂಬ ಹೆಸರುಗಳಿದ್ದವು.*

‡ ಪ್ರತಾಪ ರುದ್ರೀಯ ಪುಟ. ೧೨೩.

§ ರುದ್ರಾಂಬಾಯಾಃ ಪಿತಶ್ಚಾಸೋಮಾಂಬಾ ಗಣಪತಿದೇವೌ (ಪ್ರತಾಪ ರುದ್ರೀಯ. Foot Note 105)

$ Historical Sketches of ancient Dekhan P. 275

* Ancient Dekhan P. 296

ಇವನು ಎರಡನೆಯ ಪ್ರತಾಪರುದ್ರನೆಂದೂ ಕಾಕತೀಯರಾಣಿಯಾದ ರುದ್ರಾಂಬೆಯು ತನ್ನ ಮುಮ್ಮಗ ಎರಡನೆಯ ಪ್ರತಾಪರುದ್ರನಿಗೆ ಸಿಂಹಾಸನವನ್ನು ಕೊಟ್ಟಂತೆಯೂ ಇವನು ಕ್ರಿ. ಶ. ೧೨೯೧ರಲ್ಲಿ ಸಿಂಹಾಸನವನ್ನು ಹತ್ತಿದಂತೆಯೂ ಇವನ ಕಾಲದಲ್ಲಿಯೇ ತೆಲಂಗಾಣರಾಜ್ಯವು ಮಹಮ್ಮದೀಯರ ಪಾಲಾದುದಾಗಿಯೂ ತಿಳಿಯಬರುತ್ತದೆ.§

ಹಿಂದೆ ಹೇಳಿದ ಕಾಕತೀಯರ ವಂಶಾವಳಿಯಲ್ಲಿ ಪ್ರತಾಪರುದ್ರನೆಂಬ ಅರಸನು ಒಬ್ಬನೇ ಇದ್ದುದಾಗಿ ಖಂಡಿತವಾಗುತ್ತದೆ. ಮೇಲಣ ಹೇಳಿಕೆಯಲ್ಲಿ ಇವನನ್ನು ಎರಡನೆಯ ಪ್ರತಾಪರುದ್ರನೆಂದು ಕರೆದಿದೆ. ಹೀಗೆ ಹೇಳಿರುವುದರಿಂದ ಕಾಕತೀಯರಾಜರಲ್ಲಿ ಮೊದಲನೆಯ ಪ್ರತಾಪರುದ್ರನಾರೆಂಬ ಶಂಕೆಯು ಉಂಟಾಗುವುದು ಸಹಜವಾಗಿದೆ. ಆದರೆ ಓರಗಲ್ಲಿನಲ್ಲಿ ಆಳಿದ ಗಣಪತಿ ಅರಸರ ವಂಶಾವಳಿಯಲ್ಲಿ:—

ತ್ರಿಭುವನಮಲ್ಲ

|

ಪ್ರೋಲರಾಜ + ಕುಪ್ಪಮ್ಮ

|

(ಇವನ ಹಿಂದೆ ಹತ್ತುಜನ ರಾಜಪುತ್ರರು ಆಳಿದುದಾಗಿ ತೋರುತ್ತದೆ.

|

ಪ್ರತಾಪರುದ್ರ (೧)

|

ಗಣಪತಿದೇವ

(ಇವನು ಸತ್ತನಂತರ ಇವನ ಮಗಳು ರುದ್ರಾಂಬೆಯು ಕ್ರಿ. ಶ. ೧೨೫೭ ೧೨೯೫ರವರೆಗೆ ಆಳಿದಳು.)

ರುದ್ರಾಂಬೆಯಮಗಳು ÷ ಮಹಾದೇವ

|

ಪ್ರತಾಪರುದ್ರ (೨) ೧೨೯೫-೧೩೨೩

(ಇವನು ದೆಹಲಿಗೆ ಸೆರೆಯೊಯ್ಯಲ್ಪಟ್ಟನು) ಎಂದು ಹೇಳಲ್ಪಟ್ಟಿದೆ.$ ಇದರಿಂದ ಪ್ರೋಲರಾಜನ ಅನಂತರಬಂದ ಮೊದಲನೆಯ ಪ್ರತಾಪರುದ್ರನು ಹಿಂದೆ ಹೇಳಿದ ಕಾಕತೀಯವಂಶಾವಳಿಯಲ್ಲಿ ಎರಡನೆಯ ಪ್ರೋಲನ ಅನಂತರ ಹೇಳಿರುವ ರುದ್ರದೇವನಾಗಿರಬೇಕೆಂದು ಸ್ಪಷ್ಟವಾಗುತ್ತದೆ. ಈ ಕಾರಣಗಳಿಂದ ಮುಮ್ಮಡಾಂಬೆಯಮಗ ಪ್ರತಾಪರುದ್ರನನ್ನು ಎರಡನೆಯ ಪ್ರತಾಪರುದ್ರನೆಂದು ಕರೆಯಬೇಕಾಗುವುದು.

§ South India & her mahamedan Invaders P. 66.

$ The never to be Forgottn Empire Geneology P. 9

ಪ್ರತಾಪ ರುದ್ರನ ನಿಜವಾದ ಹೆಸರು "ನಂದ"ನೆಂದೂ, ಪ್ರತಾಪರುದ್ರನೆಂಬ ಹೆಸರು ನಾಮಾಂತರನೆಂದೂ ಇವನು ಶೈವಮತಾವಲಂಬಿಯಾಗಿ ಜೈನರನೇಕರನ್ನು ಕೊಲ್ಲಿಸಿದನಾದುದರಿಂದ ರುದ್ರನೆಂಬುದು ನಾಶಸೂಚಕಾರ್ಥವಾದುದರಿಂದ ಇವನನ್ನು ಪ್ರತಾಪರುದ್ರನೆಂದು ಕರೆದಿರುವುದಾಗಿಯೂ ಮೆ|| ಸ್ಟರ್ಲಿಂಗರವರು ಒಕ್ಕಣಿಸಿರುವರು* ಇದೊಂದು ಸೋಜಿಗ! ವೇದದಲ್ಲಿ ರುದ್ರನೆಂಬ ಶಬ್ದಕ್ಕೆ ಅನೇಕಾರ್ಥಗಳಿರುವುವು. ಮೆ|| ಸ್ಟರ್ಲಿಂಗರವರ ಹೇಳಿಕೆಯು ಬದಲು ಇವನು ರಣಧೀರನಾಗಿದ್ದು ಶತ್ರು ನಿಗ್ರಹವನ್ನು ಮಾಡುತ್ತಿದ್ದನಾದುದರಿಂದ ಮಹಾಪ್ರತಾಪಶಾಲಿಯೆಂದೂ ಪ್ರತಾಪರುದ್ರನೆಂದೂ ಏಕೆಕರೆಯಿಸಿ ಕೊಂಡಿರಬಾರದು? ಶಬ್ದಗಳ ಭಿನ್ನಾರ್ಥ ಕಲ್ಪನೆಯಿಂದ ಹೆಸರಿನ ನಿಜತ್ವವನ್ನು ಸಾಧಿಸುವುದು ಬಹು ಸಾಹಸದ ಕೆಲಸವೆಂದು ತೋರುತ್ತದೆ. ಪ್ರತಾಪ ರುದ್ರನ ಆಸ್ಥಾನ ಪಂಡಿತನಾದ ವಿದ್ಯಾನಾಥನು ತನ್ನ ಆಶ್ರಯದಾತನ ಚರಿತವನ್ನು ಬರೆದು ಆತನ ಕಲ್ಯಾಣಗುಣವರ್ಣನೆಯನ್ನುಮಾಡಿ ಅವುಗಳನ್ನು ಬೇಕಾದ ಉದಾಹರಣೆಗಳಿಂದ ಸಮರ್ಥಿಸಿರುವ ಪ್ರತಾಪರುದ್ರೀಯ ವೆಂಬ ಅಲಂಕಾರಗ್ರಂಥದಲ್ಲಿ ಪ್ರತಾಪ ರುದ್ರನ ಹೆಸರನ್ನು ಹೇಳುವಾಗ ನಂದನೆಂಬ ಹೆಸರೂ ಪ್ರತಾಪ ರುದ್ರನಿಗೆ ಇದ್ದಿತಾಗಿ ಹೇಳಬಹುದಾಗಿದ್ದಿತು. ಹಾಗೆ ಎಲ್ಲಿಯೂ ಹೇಳಿರುವುದಿಲ್ಲವಾದುದರಿಂದ ಬಹುಜನ ಸಮ್ಮತವಾದ ಪ್ರತಾಪರುದ್ರನೆಂಬ ಹೆಸರಿನಿಂದಲೇ ಕರೆಯಬೇಕಾಗಿರುವುದು.

ಯಂ. ಕೃಷ್ಣಮಾಚಾರ್ಯರವರು. ಕ್ರಿ. ಶ. ೧೫೯೪-೧೩೨೫ರವರೆಗೆ ಓರಂಗಲ್ಲಿನಲ್ಲಿ ಆಳಿದವನು ರುದ್ರದೇವನೆಂದು ಮಾತ್ರ ಹೇಳಿರುವುದು ಹೊರ್ತು ಅವನು ಕಾಕತೀಯ ಅರಸನೆಂದಾಗಲಿ ಅವನಿಗೆ ಪ್ರತಾಪರುದ್ರನೆಂಬ ಹೆಸರಿದ್ದಿತೆಂದಾಗಲಿ ಹೇಳಿರುವುದಿಲ್ಲ.†

ಪ್ರತಾಪರುದ್ರನು ರಣಧೀರನಾಗಿದ್ದಂತೆ ಕಲಾಭಿಜ್ಞನಾಗಿದ್ದು ದಾಗಿ:—

ವಾಣೇಂಮುಖೇನಗೋತ್ರಾಭ್ಯಾಂಶ್ರಿಯಂದೋಷ್ಣಾಚ ಮೇದಿನೀಂ
ಮಾನಯಂಸ್ತುಲ್ಯತಾಂಧತ್ತೇ ತಾಸುರುದ್ರನರೇಶ್ವರಃ ॥

ಚಾತುರ್ಯಂಕಿಮುವರ್ಣ್ಯತೇ ಗುಣನಿಧೇಃ ಶ್ರೀವೀರರುದ್ರಪ್ರಭೋ
ರ್ಯತ್ಪ್ರಸ್ಯೇನ್ಯವಿರುದ್ಧಯೋರಪಿಮಹದ್ವಾಣೇಶ್ರಿಯೋರಾರ್ಜವಂ
ಕಿಂಚಾಭ್ಯಾಂಸದ್ಮಶೋಪಚಾರಲಲಿತಾಂತತ್ತಾದೃಶೈರುತ್ಸವೈ
ರ್ನಿಸ್ಸಾಪತ್ಯಮಿಮಾಂಭುವಂಸಸೃಪತಿರ್ಧತ್ತೇದಿಶಾಂಜಿತ್ವರಃ ॥

ಎಂಬ ಶ್ಲೋಕಗಳಿಂದ ತಿಳಿಯಬರುತ್ತದೆ. §

---

* Asiatic Researches Vol. XV act. and Rev. Taylors Hand Book of Hindu Mythology and Philosophy P. 77-79.

† Classical Sanskrit Literature P. 103.

§ ಪ್ರತಾಪ ರುದ್ರೀಯ ಪುಟ ೧೧-೧೪ ಶ್ಲೋ. ೧೯-೩೭.

ಕಾಕತೀಯರೆಂದರೆ "ಕಾಕತಿರ್ನಾಮದುರ್ಗಾಶಕ್ತಿ ಕೀಕಶಿಲಾನಗರೇಶ್ವರಾ ಣಾಂಕುಲದೇವತಾಸಾಶಕ್ತಿರ್ಭಜನೀಯಾಸ್ಯೇತಿ ಕಾಕತೀಯಃ" † ಕಾಕತಿ ಎಂಬ ದುರ್ಗಿಯನ್ನೇ ಕುಲದೇವತೆಯನ್ನಾಗಿ ಪೂಜಿಸುವವರೇ ಕಾಕತೀಯರು ಇವರಧ್ವಜ ದಲ್ಲಿ ವರಾಹದ ಗುರುತಿರುವುದಾಗಿ:—

ಮಾಥಾನಾಚಲಮೂಲಮೇಚಕ ಶಿಲಾಸಂಘಟ್ಟನಶ್ಯಾಮಿತಾ
ಕಾರಂಯತ್ತುಹಿನದ್ಯುತೌಸ್ಫುರತಿತತ್ಸ್ವರ್ಗಾರಂಗಮಾಚಕ್ಷ್ವಹೇ
ಮನ್ಯೇನಸ್ಸಹವೀರ ರುದ್ರನೃಪತೇಃ ಕೀರ್ತಿಶ್ರಿಯಾನರ್ಜಿತ
ಸ್ತನ್ಮುದ್ರಾಂಕ ವರಾಹವಿಂದುಮುರಸಾಬಿಭೃತ್ಸಮುಜ್ಜೃಂಭತೇ* ॥

ಎಂಬುದರಿಂದ ಗೊತ್ತಾಗುತ್ತದೆ.:—

ಇವನು ಯಯಾತಿ ಚರಿತವೆಂಬ ಏಳು ಅಂಕಗಳುಳ್ಳನಾಟಕವನ್ನು ಬರೆದಿರು ವದಾಗಿಯೂ ಯಯಾತಿಶರ್ಮಿಷ್ಠೆಯರ ಪರಿಣಯ ವಿಚಾರವು ಹೇಳಿರುವುದಾಗಿ ಯಂ. ಕೃಷ್ಣಮಾಚಾರ್ಯರವರ ಒಕ್ಕಣಿಕೆಯು ಇರುವುದು.$ ಆದರೆ ಗ್ರಂಥವು ಅನು ಪಲಬ್ಧವು.

ವಿದ್ಯಾನಾಥ

ಇವನು ಬ್ರಾಹ್ಮಣನು. ಓರಂಗಲ್ಲಿ (warrangal) ನಲ್ಲಿ ಆಳಿದ ಪ್ರತಾಪ ರುದ್ರನ ಆಸ್ಥಾನಪಂಡಿತನು. ಇವನು ತನ್ನ ಆಶ್ರಯದಾತನ ಹೆಸರಿನಲ್ಲಿ ಅಲಂಕಾರ ಗ್ರಂಥವನ್ನುಬರೆದು ಅದನ್ನು ಪ್ರತಾಪರುದ್ರೀಯವೆಂದೇ ಕರೆದಿರುವನು.

ಈ ವಿಚಾರವು:—

ಪ್ರತಾಪರುದ್ರದೇವಸ್ಯ ಗುಣಾನಾಶ್ರಿತ್ಯನಿರ್ಮಿತಃ
ಅಲಂಕಾರಪ್ರಬಂಧೋಽಯಂ ಸಂತಃ ಕರ್ಣೋತ್ಸವೋಽಸ್ತುನಃ ॥೯
ಕಾಕತೀಯನರೇಂದ್ರಸ್ಯ ಯಶೋಭೂಷಯಿತುಂಕೃತಾ
ವಿದ್ಯಾನಾಥಕೃತಶ್ಚೇಯಂ ಸ್ವಯಂಕೇನವಿಭೂಷ್ಯತೇ ॥ ೧೦ ॥

ಎಂದು ಹೇಳಿರುವ ಪ್ರತಾಪರುದ್ರೀಯ ಶ್ಲೋಕಗಳಿಂದ ವ್ಯಕ್ತವಾಗುತ್ತದೆ. ಇದಕ್ಕೆ ಪ್ರಸಿದ್ಧವ್ಯಾಖ್ಯಾನಕಾರನಾದ ಮಲ್ಲಿನಾಥನ ಮಗ ಕುಮಾರಸ್ವಾಮಿ ಕೃತ ರತ್ನಾಪಣವೆಂಬ ವ್ಯಾಖ್ಯಾನವಿರುವುದು. ಈ ಅಲಂಕಾರಗ್ರಂಥಕ್ಕೆ ಪ್ರತಾಪರುದ್ರ ಯಶೋಭೂಷಣವೆಂಬ ನಾಮಾಂತರವಿರುವುದಾಗಿ ಆಯಾ ಪ್ರಕರಣಾಂತ್ಯದಲ್ಲಿ

† ಪ್ರತಾಪ ರುದ್ರೀಯ ಪುಟ ೭. F. N.
* ಪ್ರತಾಪರುದ್ರೀಯ P. 37
$ Classical Sanskrit Lateratura P. 103.

'ಇತಿಶ್ರೀವಿದ್ಯಾನಾಥಕೃತೌಪ್ರತಾಪರುದ್ರಯಶೋಭೂಷಣಾಲಂಕಾರಶಾಸ್ತ್ರೇ' ಎಂದು ಹೇಳಿರುವುದರಿಂದ ಗೊತ್ತಾಗುತ್ತದೆ. ವಿದ್ಯಾನಾಥನವಿಚಾರವಾದ ಈ ಕಥೆಯೊಂದಿರುವುದು.

ವಿದ್ಯಾನಾಥನು ಗರ್ಭಾಷ್ಟಮದಲ್ಲಿ ಉಪನೀತನಾಗಿ ಚಿಕ್ಕತನದಲ್ಲಿಯೇ ವೇದ ವಿದ್ಯೆಯನ್ನೋದಿ, ದುರ್ಯೋಗದಿಂದ ಕೊಂಚವಾಗಿದ್ದ ಪಿತರಾರ್ಜಿತವಿತ್ತಾಪಾರವೆಲ್ಲವೂ ದಾಯಾದಿಗಳಿಂದ ಅಪಹೃತವಾಗಲು ಬಹುಕಷ್ಟದಿಂದ ಜೀವನವನ್ನು ಸಾಗಿಸುತ್ತ ತನ್ನ ಹದಿನಾರನೆಯ ವಯಸ್ಸಿನಲ್ಲಿ ರಾಮಾಯಣಾದಿ ಸಂಸ್ಕೃತಗ್ರಂಥಗಳನ್ನೋದಿ, ಅದರಲ್ಲಿ ಹೇಳಿರುವ ಪ್ರಾಚೀನರಾಜರ ಜೀವನಚರಿತೆಯನ್ನು ಮನನ ಮಾಡುತ್ತ ತನ್ನ ನಾಲ್ವತ್ತನೆಯ ವಯಸ್ಸಿನಲ್ಲಿ ಸೃಷ್ಟಿಕ್ರಮವನ್ನು ಕುರಿತು ಉತ್ತಮ ಗ್ರಂಥವನ್ನು ಬರೆದು ಅದರಿಂದ ಕೊಂಚಮಟ್ಟಿಗೆ ದ್ರವ್ಯಸಹಾಯವಾದುದಾದರೂ ಮದುವೆಗೆ ನೆರದಿರುವ ತನ್ನೊಬ್ಬಳೇ ಮಗಳಿಗೆ ವಿವಾಹವನೆಸಗಲು ಉಪಪತ್ತಿ ಇಲ್ಲದುದಕ್ಕೆ ಪರಿತಪಿಸುತ್ತ, "ನಿರಾಶ್ರಯಾನಶೋಭಂತೇಪಂಡಿತಾವನಿತಾಲತಾ" ಎಂಬುದನ್ನು ಜ್ಞಾಪಿಸಿಕೊಂಡು ಎಂತಾದರೂ ಯಾವುದಾದರೊಂದು ಕಾರಣದಿಂದ ರಾಜಾಶ್ರಯವನ್ನು ಸಂಪಾದಿಸಲುಜ್ಜುಗಿಸಿ ಒಂದಾನೊಂದು ದಿವಸ ಮಂತ್ರಿಯಬಳಿ ರಾಜಸಭೆಯಲ್ಲಿ ಕುಳಿತುಕೊಂಡಿರಲು ಏಲೇಶ್ವರಾಗ್ರಹಾರದಶಿವಯ್ಯನೆಂಬ ಕವಿಯೊಬ್ಬನು ರಾಜಸಮ್ಮುಖಕ್ಕೆ ಬಂದು ರಾಜವರ ! ಅಗ್ರಹಾರದವರ ದುಸ್ಥಿತಿಯನ್ನೇನೆಂದು ಹೇಳಲಿ:—

ನವಲಕ್ಷ್ಮಧನುರ್ಧರಾಧಿನಾಥೇ
ಪೃಥಿವೀಂಶಾಸತಿವೀರಭದ್ರಭೂಪೇ
ಅಭವತ್ಪರಮಾಗ್ರಹಾರಪೀಡಾ

ಎಂದು ಹೇಳಿದುದನ್ನು ಕೇಳಿ. ಅಹಹ ! ಎಂತಹ ಅಸಂಗತ ! ಹಾಗಾಗಲು ಕಾರಣವೇನು ? ಒಡನೆ ಬ್ರಾಹ್ಮಣರ ಭೂಮಿಕಾಣಿಗಳನ್ನು ಬಿಟ್ಟುಕೊಡತಕ್ಕುದೆಂದು ಆಜ್ಞಾಪಿಸಿ ಕೋಪದಿಂದ ವಿದ್ಯಾನಾಥನಕಡೆ ನೋಡಲು ವಿದ್ಯಾನಾಥನು:-

,, ಕುಚಕುಂಭೇಷು ಕುರಂಗಲೋಚನಾನಾಂ ''

ಎಂದು ಶ್ಲೋಕಪೂರ್ತಿಯನ್ನು ಮಾಡಲು ರಾಜನು ಪಂಡಿತೋತ್ತಮ ! ಕವಿ ಶಿವಯ್ಯನು ಹೇಳಿದುದೇನೆಂದು ಪುನಃ ಕೇಳಿದುದಕ್ಕೆ ವಿದ್ಯಾನಾಥನು:—

ನವಲಕ್ಷ್ಮಧನುರ್ಧರಾಧಿನಾಥೇ
ಪೃಥಿವೀಂಶಾಸತಿವೀರಭದ್ರಭೂಪೇ
ಅಭವತ್ಪರಮಾಗ್ರಹಾರಪೀಡಾ
ಕುಚಕುಂಭೇಷುಕುರಂಗಲೋಚನಾನಾಂ ॥

ಎಂದು ತಿರುಗಿಸಿ ಹೇಳಿದುದನ್ನು ಕೇಳಿ ರಾಜನು ಸಂತುಷ್ಟನಾಗರಲು. ಕಾಲ ಕ್ರಮದಲ್ಲಿ ದೆಹಲಿಯ ಚಕ್ರವರ್ತಿಗೂ ಇವನಿಗೂ ಕೊಳಗುಳ ಒದಗಿ ಪ್ರತಾಪ ರುದ್ರನು ಸೋತು ಸೆರೆಗೊಯ್ಯಲ್ಪಟ್ಟು ಮೂರು ವರ್ಷಗಳು ಕಾರಾಗೃಹವನ್ನನುಭ ವಿಸಿ ಅನಂತರ ಮುಕ್ತನಾಗಿ ತನ್ನ ರಾಜ್ಯಕ್ಕೆ ಬಂದು ತನ್ನ ವಿಚಾರವಾಗಿ ಬರೆದಿರುವ **ಪ್ರತಾಪರುದ್ರೀಯ**ವೆಂಬ ಗ್ರಂಥವನ್ನು ನೋಡಿ, ಕದುಸಂತಸಗೊಂಡು ವಿದ್ಯಾನಾಥ ನಿಗೆ ಬೇಕಾದಷ್ಟು ಧನಕನಕ ವಸ್ತ್ರಾದಿಗಳನಿತ್ತು ರಾಜ್ಯಭಾರವನ್ನು ತನ್ನ ತಮ್ಮ ನಾದ ಅನಮದೇವನಿಗೆ ವಹಿಸಿ ತಾನು ವಿರಕ್ತನಾದನು. ವಿದ್ಯಾನಾಥನು ಈರೀತಿ ದೊರೆತ ದ್ರವ್ಯದಿಂದ ಮಗಳ ವಿವಾಹವನ್ನು ಸಾಂಗವಾಗಿ ನೆರವೇರಿಸಿ ಸುಖದಿಂದಿರು ತಿರ್ದು ಕಾಲಕ್ರಮದಲ್ಲಿ ಅನಮದೇವನ ರಾಜ್ಯಸಮಯದಲ್ಲಿ ತನ್ನ ೫೫ನೆಯ ವಯಸ್ಸಿನಲ್ಲಿ ಮೃತನಾದನು.* ಇವನು ಕ್ರಿ. ಶ. ೧೪ನೆಯ ಶತಮಾನದವನು.

ಇವನು ಪ್ರತಾಪರುದ್ರೀಯವೆಂಬ ಅಲಂಕಾರಗ್ರಂಥವಲ್ಲದೆ ಪ್ರತಾಪರುದ್ರ ಕಲ್ಯಾಣವೆಂಬ ನಾಟಕವನ್ನೂ ಬರೆದಿರುವನು ಇದರಲ್ಲಿ ೫ ಅಂಕಗಳಿರುವವು ಕಥಾ ನಾಯಕನ ವಿಚಾರವಾಗಿ ಸೂತ್ರಧಾರನು:—

ತಂ ಸುಜಾತಂ ಸಮುದ್ವೀಕ್ಷ್ಯ ಕ್ಷ್ಮೋಣ್ಯಾಂ ರವಿಮಿವೋದಿತಂ
ಪ್ರತಾಪರುದ್ರ ಇತ್ಯಾಖ್ಯಾಮಕರೋತ್ಕಾಕತೀಶ್ವರಃ ॥ ೧—೧೧.
ವಿಷ್ಣೋರ್ವಿಶ್ವಮಕೆ ವೀರಸ್ಯ ಕಾಕತೀಯಕುಲೇ ಸ್ಥಿತಂ
ಅವತಾರಮಮುಂ ಜ್ಞಾತ್ವಾ **ವೀರರುದ್ರಂ** ಪ್ರಚಕ್ಷತೇ ॥ ೧—೧೨.

ಎಂದೂ, ಕವಿಯ ವಿಚಾರವಾಗಿ:—

ತೇಜಃ ಪರ್ಯಾಪಹಾರಯೋಃ
ಕಿಂಕಿಂ ಸಂಬೋಧನಂ ಮತಂ
ಕಿಮಾಶೀರ್ವಾದವಿಷಯೋ
ವಿದ್ಯಾನಾಥಕೃತಿಶ್ಚ ಕಾ ॥ ೧—೧೦.

ಎಂದೂ ಹೇಳಿಕೊಂಡಿರುವನು.

ಈ ನಾಟಕದಲ್ಲಿ ಪಾರ್ವತೀ ಪರಮೇಶ್ವರರ ವಿವಾಹಸಂಬಂಧವನ್ನು ಸೂಚಿಸು ವುದಾದ ಮಂಗಳಾಚರಣೆಯ ಮೂಲಕ ನಾಟಕಾರಂಭವನ್ನು ಮಾಡಿ, ಪ್ರತಾಪ ರುದ್ರನ ದಿಗ್ವಿಜಯ ಮತ್ತು ರಾಜ್ಯ ಪ್ರಾಪ್ತಿಯನ್ನು ಹೇಳಿ ಮುಗಿಸಿರುವನು ಪ್ರತಾಪರುದ್ರ ಕಲ್ಯಾಣ—ಎಂಬದು ಪ್ರತಾಪರುದ್ರನು ರಾಜ್ಯಲಕ್ಷ್ಮಿಯನ್ನು ವರಿಸಿ ಪಟ್ಟಾಭಿಷಿಕ್ತನಾದನೆಂಬುದು ಈ ನಾಟಕದ ಕಥಾವಸ್ತು. ಇದನ್ನು ಪ್ರತಾಪ ರುದ್ರೀಯದಲ್ಲಿ ನಾಟಕೋದಾಹರಣ ಪ್ರಕರಣದಲ್ಲಿ:—

Dekkan Poets P. 44-48

ಭದ್ರಾಂ ಕೌತುಕವೇದಿಮಾಗತವತೋರನ್ಯೋನ್ಯಮಾಸೇದುಷೋಃ
ಶೈಲ್ಯೈರ್ಮೇರುಹಿಮಾಚಲಪ್ರಭೃತಿಭಿರ್ನೇತ್ರೈರ್ಹರೀಂದ್ರಾದಿಭಿಃ
ವ್ಯಾಪ್ತಂ ಪಾರ್ಶ್ವಯುಗೇ ಪುರೋಂಬುಜಭುವಾ ಪಶ್ಚಾಚ್ಚ ಮೇನಾದಿಭಿಃ
ಸಾಧ್ವೀಭಿಃ ಶಿವಯೋರಪಾಂಗಸರಣಿರ್ವೋವಾಹಿಕೀ ಪಾತುವಃ ॥ ‡

ಎಂಬ ಪ್ರತಾಪರುದ್ರಕಲ್ಯಾಣದ ನಾಟಕದ ಮಂಗಳಾಚರಣವನ್ನು ಹಾಗೆ ಹಾಗೇ ಉದಾಹರಿಸಿಕೊಂಡಿರುವನು.

ಈ ನಾಟಕದಲ್ಲಿ ಯಾವುದಾದರೊಂದು ಹೇಳಿಸಿಕೊಳ್ಳುವಂತಹ ವಿಚಾರಗಳೊಂದೂ ಕಂಡುಬರುವುದಿಲ್ಲವಾದುದರಿಂದ ಈ ನಾಟಕವನ್ನು ಸಹೃದಯರಿಂದ ವಿವೇಚಿಸುವರಿಗೆ ಪ್ರತಾಪರುದ್ರೀಯವೆಂಬ ಲೋಕೋತ್ತರ ಅಲಂಕಾರ ಗ್ರಂಥವನ್ನು ಬರೆದು ಕೀರ್ತಿಶೇಷನಾಗಿರುವ ವಿದ್ಯಾನಾಥನೂ, ಪ್ರತಾಪರುದ್ರಕಲ್ಯಾಣನಾಟಕವನ್ನು ಬರೆದಿರುವ ವಿದ್ಯಾನಾಥನೂ ಭಿನ್ನವ್ಯಕ್ತಿಗಳೇ ಅಥವಾ ಏಕವ್ಯಕ್ತಿಯೇ ಹೇಗೆಂಬ ಸಂದೇಹಕ್ಕೆಡೆಗೊಡುತ್ತದೆ. ಏಕವ್ಯಕ್ತಿಯೆನ್ನುವುದಾದರೆ ವಿದ್ಯಾನಾಥನು ಕೇವಲ ಬಾಲ್ಯದಲ್ಲಿ ಪ್ರತಾಪರುದ್ರ ಕಲ್ಯಾಣ ನಾಟಕವನ್ನು ಬರೆದು ಕಾಲಕ್ರಮದಲ್ಲಿ ಪ್ರತಾಪರುದ್ರನ ಆಶ್ರಯಯೋಗವನ್ನು ಹೊಂದಿ "ಪ್ರತಾಪರುದ್ರೀಯ" ಎಂಬ ಅಲಂಕಾರ ಗ್ರಂಥವನ್ನು ಬರೆದು ಉದಾಹರಣಕ್ಕೆ ತಾನು ಬರೆದಿರುವ ನಾಟಕವನ್ನೇ ಹೇಳಿಕೊಂಡಿರಬೇಕಾಗಿ ಯೋಚಿಸಲಾಗುತ್ತದೆ. ಆದರೆ ಈ ಎರಡು ಗ್ರಂಥಗಳ ಸಮ್ಯಕ್ಪರಿಶೀಲನದಿಂದಲೂ, ತೃನಾತ್ಮಕ ದೃಷ್ಟಿಯಿಂದ ವಿವೇಚಿಸುವರಿಗೆ ಪರಸ್ಪರ ಭಿನ್ನವ್ಯಕ್ತಿಗಳಾಗಿರಬೇಕೆಂದು ತೋರುತ್ತದೆ. ಇದು ಸರಿಯೆಂದು ನಮಗೆನಿಸುತ್ತದೆ. ನಾಟಕರಚನೆಯೂ ಸಾಧಾರಣ, ವರ್ಣನೆಯೂ ಸಾಧಾರಣ, ವಿಷಯವೂ ಸಾಧಾರಣ, ಶೈಲಿಯೂ ಸಾಧಾರಣವಾಗಿರುವುದರಿಂದ ಯಾವನೋ ವಿದ್ಯಾನಾಥ ನಾಮಸಾಮ್ಯದ ಸಾಧಾರಣ ಕವಿಯೊಬ್ಬನು ಬರೆದಿರಬಹುದಾಗಿ ತೋರುತ್ತದೆ. ಹೇಗೂ ಚರ್ಚಾಸ್ಪದವಾದ ವಿಚಾರ.

ಸಿಂಗಭೂಪಾಲ

ಇವನು "ರೇಚಿಲ್ಲ"ವಂಶದವನು. ಇವನರಾಜ್ಯವು ವಿಂಧ್ಯಾದ್ರಿಗೂ ಶ್ರೀಶೈಲಕ್ಕೂ ಮಧ್ಯದಲ್ಲಿ ಇದ್ದಿತೆಂದೂ, ಇದಕ್ಕೆ " ರಾಜಾಚಲಂ " ಎಂಬದು ವಂಶಪಾರಂಪರ್ಯವಾಗಿ ರಾಜಧಾನಿಯಾಗಿತ್ತೆಂತಲೂ ತಿಳಿಯಬರುತ್ತದೆ. ಇವನ ತಂದೆಯ. ಹೆಸರು ಅನಂತ. ತಾಯಿಯ ಹೆಸರು ಅನ್ನಮಾಂಬಾ. ಈ ಅನಂತನಿಗೆ ಅನ್ನಪೋತನೆಂದೂ

‡ (ಪ್ರತಾಪರುದ್ರೀಯೇ ನಾಟಕಪ್ರಕರಣಂ ಪುಟ ೯೩.

ಹೆಸರು. ಇವನ ಅಜ್ಜನು ಸಿಂಗಪ್ರಭು. ಮುತ್ತಜ್ಜನು ದಾಚಯನಾಯಕ. ಸಿಂಗ ಭೂಪಾಲನನ್ನು ಸಿಂಗಮನಾಯಕನೆಂದೂ ಕರೆಯುವುದುಂಟು. ಇವನ ವಂಶಾವಳಿ:-



ಸಿಂಗ ಭೂಪಾಲನ ವಿಚಾರವಾಗಿ:—

ತತ್ರರೇಚಿಲ್ಲವಂಶಾಬ್ಧಿ ಶರದ್ರಾಕಾಸುಧಾಕರಃ
ಕಲಾನಾಧಿರುದಾರ ಶ್ರೀರಾಸೀದಾಚಯನಾಯಕಃ ॥ ೫

ತಸ್ಯಭಾರ್ಯಾಮಹಾಭಾಗ್ಯಾ ವಿಷ್ಣೋಃಶ್ರೀರಿವ ವಿಶ್ರುತಾ
ವೋಚಮಾಂಬಾಗುಣೋದಾರಾ ಜಾತಾತಾಮರಸಾನ್ವಯಾತ್ ॥ ೮

ತಯೋರಭೂರ್ವಕ್ಷಿತಿಕಲ್ಪವೃಕ್ಷಾಃ
ಪುತ್ರಾಸ್ತ್ರಯಸ್ತ್ರಾಸಿತ ವೈರಿವೀರಾಃ
ಸಿಂಗಪ್ರಭುರ್ವೇನ್ನಮನಾಯಕಶ್ಚ
ವೀರಾಗ್ರಣೀ ರೇಚಮಹೀಪತಿಶ್ಚ ॥ ೯

ಸೋಯಂರಂಗಮಹೀಪಾಲೋ ವಸುದೇವಇತಿಸ್ಫುಟಂ
ಅನಂತಮಾಧ ವೌಯಸ್ಯ ತನೂಜೌಲೋಕರಕ್ಷಕೌ ॥ ೧೫

ಅನ್ನಮಾಂಬೇತಿವಿಖ್ಯಾತಾ ತಸ್ಯಾಸೀದ್ಧರಣೀಪತೇಃ
ದೇವೀಶಿವಾಶಿವಸ್ಯೇವ ರಾಜಮೌಲೀರ್ಮಹೋಜ್ವಲಾ ॥ ೨೪

ತಯೋರಭೂತಾಂ ಪುತ್ರೌದ್ವೌ ವಾದ್ಯೋದೇವಗಿರೀಶ್ವರಃ
ದ್ವಿತೀಯಸ್ತ್ವದ್ವಿತೀಯೋಸೌ ಯಶಸಾಸಿಂಗಭೂಪತಿಃ ॥ ೨೬

ಮಂದಾರಪಾರಿಜಾತಕ ಚಂದನಸಂತಾನ ಕಲ್ಪಮಣಿಸದೃಶೈಃ
ಅನಪೋತದಾಚವಲ್ಲಭನೇದಗಿರಿಸ್ವಾಮಿಮಾಂಚಯಾ ಸ್ಪಪನ್ನಯ
ಸಂಜ್ಞೈಃ ॥ ೩೫

ಎಂಬಿವೇ ಮೊದಲಾಗಿ ಹೇಳಲ್ಪಟ್ಟಿದೆ.

ಕಾಲ:—ಇವನು ಕ್ರಿ ಶ ೧೩೩೦ ರಲ್ಲಿದ್ದುದಾಗಿ ವೆಂಕಟರಾಜರ ವಂಶಾವಳಿ ಚರಿತದಿಂದ ಗೊತ್ತಾಗುತ್ತದೆ. ಆದುದರಿಂದ ಇವನನ್ನು ಕ್ರಿ. ಶ. ೧೪ನೆಯ ಶತಮಾನದ ಪೂರ್ವಾರ್ಧದವನೆನಿಬೇಕಾಗುವುದು.

ಗ್ರಂಥ:—'ಇವನು ರಸಾರ್ಣವಸುಧಾಕರ' ಎಂಬ ಅಲಂಕಾರ ಗ್ರಂಥವನ್ನು ಬರೆದಿರುವನು. ಇದರಲ್ಲಿ ನಾಟ್ಯಾಲಂಕಾರದಲ್ಲಿನ ರಂಜಿಕೋಲ್ಲಾಸವೆಂದೂ, ರಸಿಕೋಲ್ಲಾಸವೆಂದೂ, ಭಾವೋಲ್ಲಾಸವೆಂದೂ, ಮೂರುತೆರನಾಗಿರುವುವು. ಪ್ರತಿ ಉಲ್ಲಾಸದಕೊನೆಯಲ್ಲಿ " ಇತಿ ಶ್ರೀಮದಾಂಧ್ರಮಂಡಲಾಧೀಶ್ವರ ಪ್ರತಿಗಂಡ ಭೈರವ ಶ್ರೀಯನ್ನಪೋತನರೇಂದ್ರನಂದನ ಭುಜಬಲಭೀಮ ಶ್ರೀಸಿಂಗಭೂಪಾಲರ ಚಿತೇರಸಾರ್ಣವಸುಧಾಕರನಾಮ್ನಿ ನಾಟ್ಯಾಲಂಕಾರೇ .....ಎಂದಿದೆ. ಇದರಲ್ಲಿ ನಾಯಕ ನಾಯಿಕಾ ಲಕ್ಷಣಗಳನ್ನು ಹೇಳಿ ಅವರವರ ಭಾವನಿರೂಪಣೆಯನ್ನು ಮನಮುಟ್ಟುವಂತೆ ತೋರಿಸಿರುವನು. ಇದರಲ್ಲಿ ಹೇಳಿರುವ ಅನೇಕಶ್ಲೋಕಗಳು ದಶರೂಪಕ ಶ್ಲೋಕಗಳನ್ನು ಹೋಲುವುವು. ಇವನ ಶ್ಲೋಕಗಳನ್ನು ಮಹಾ ವ್ಯಾಖ್ಯಾನಕಾರನಾದ ಮಲ್ಲಿನಾಥನು ತನ್ನ ವ್ಯಾಖ್ಯಾನದಲ್ಲಿ ಉದಾಹರಿಸಿ ಕೊಂಡಿರುವನು. ಇದಲ್ಲದೆ ' ಸಂಗೀತ ರತ್ನಾಕರ ವ್ಯಾಖ್ಯಾ ' ಎಂಬ ಬೇರೊಂದು ಗ್ರಂಥವನ್ನು ಇವನು ಬರೆದಿರುವುದಾಗಿ ತಿಳಿಯಬರುತ್ತದೆ. ಗ್ರಂಥವು ಉಪಲಬ್ಧವಿಲ್ಲ.

ವಿ ಶ್ವ ನಾ ಥ (೧)

ಇವನು ಬ್ರಾಹ್ಮಣನು. ಎರಡನೆಯ ಪ್ರತಾಪರುದ್ರನ ಸಮಕಾಲೀನನು. ಇವನು 'ಸೌಗಂಧಿಕಾಹರಣ' ಎಂಬ ನಾಟಕವನ್ನು ಬರೆದಿರುವನು. ಇದು ಪ್ರೇಕ್ಷಣಿಕ ಜಾತಿಗೆ ಸೇರಿದುದು. ಈ ವಿಚಾರವು:—

ಅದ್ಯಖಲುನಿಖಿಲರಾಜಲೋಕ ಮೌಳಿಮಾಣಿಕ್ಯಮಂಜರೀಪುಂಜಕಿಂಜಲ್ಕಿತ
ಚರಣಾರವಿಂದೇನವೃಂದಾರಕನಗರಕಾಮಿನೀಮುಖಾದಿವಾಸಚತುರಯಶಃ
ಕರ್ಪೂರಜಾಲೇನವೇಲಾವನಾವಲೀ ವಿಶ್ರಾಂತನಿಜಬಲತುರಂಗನಿರ್ಘೋ
ಷಣದುರವಲಿಪ್ತದಮನವೀರಭದ್ರೇಣ ರಾಜ್ಞಾಪ್ರತಾಪರುದ್ರೇಣ ಸಂಭಾ
ವಿತೈರಶೇಷವಿದ್ಯಾವಿಶೇಷಸಾರಸರ್ವಜ್ಞ ಧೌರೇಯಮತಿಭಿಃ ಸಭಾಸದ್ಭಿ
ರಾಹೂಯಸಬಹುಮಾನಮಾದಿಷ್ಟೋಸ್ಮೀತಿ ||

ಎಂಬ ಸೂತ್ರಧಾರನ ಹೇಳಿಕೆಯಿಂದಲೂ, ಕವಿಯು ತನ್ನ ಸೋದರ ಮಾವನಾದ ಅಗಸ್ತ್ಯನೆಂಬವನ ಬಳಿಯಲ್ಲಿದ್ದು ವಿದ್ಯಾಭ್ಯಾಸವನ್ನು ಮಾಡಿದ ಹಾಗೆ:—

ವಾಚಸ್ತಸ್ಯ ಕವೇರುದಾರಮಧುರಾ ಇತ್ಯತ್ರ ಚಿತ್ರಂ ಕಿಮು
ಪ್ರಖ್ಯಾತಃ ಸಕಲಾಸುದಿಕ್ಷ್ವಗುಣಪು ಶ್ರೀಯಾನಗಸ್ತ್ಯಸ್ಸುಧೀಃ
ವೇಧಶ್ಚಂದ್ರಮುಖೀಕರಾಂಗುಲಿದಲಾಸಂಗಕ್ಷಣದ್ಬಲ್ಲ ಕೀ
ವಾಚೋಯುಕ್ತಿಸಹೋಕ್ತಿದರ್ಶಿತಸುಧಾಜನ್ಮಾ ಸ ಯನ್ಮಾತುಲಃ ॥

ಎಂಬ ಶ್ಲೋಕದಿಂದ ತಿಳಿಯಲಾಗುತ್ತದೆ.

ಪಾಂಡವರು ಅಜ್ಞಾತವಾಸಿಗಳಾಗಿರುವಾಗ ಒಬ್ಬಾನೊಬ್ಬ ಗಂಧರ್ವನು ತಂದುಕೊಟ್ಟ ಸೌಗಂಧಿಕವೆಂಬ ಹೂವನ್ನು ನೋಡಿ, ದ್ರೌಪದಿಯು ಅಂತಹ ಹೂಗಳನ್ನು ತರಿಸಿಕೊಡಬೇಕೆಂದು ಭೀಮನನ್ನು ಪ್ರಾರ್ಥಿಸುವಳು. ಭೀಮನು ಅಂತೆಯೇ ಆಗಲೆಂದು ಹೂವನ್ನರಸುತ್ತಾ ಶೈಲಾಂತರಾಳವನ್ನು ಹೊಕ್ಕು ನೋಡುತ್ತ ಗಂಧಮಾದನ ಪರ್ವತದ ಬಳಿಗೈದಿ, ಅಲ್ಲಿದ್ದ ಗಂಧಮಾದನಾದಿ ಕಪಿಸೈನ್ಯವನ್ನು ನೋಡಿ ಅತೀತಭುಜಬಲವುಳ್ಳ ಅಂಜನಾನಂದನನಿಗಾನಂದವಾಗುವ ಹಾಗೆ ಶ್ರೀರಾಮ ಕಥೆಯನ್ನು ಹೇಳಲು, ಮಾರುತಿಯು ಆನಂದಗೊಂಡು ಭೀಮನಬಳಿ ಸಾರ್ದು ಬಂದ ಹದನಮಂ ವಿಚಾರಿಸಿ ಹೂವಿರುವ ಸ್ಥಳವನ್ನು ಹೇಳಲು ಭೀಮನು ಹೊರಟು ಅಲ್ಲಿರ್ದ ಕುಬೇರನಕಡೆಯವರಾದ ತೋಟಗಾರರನ್ನು ಮರ್ದಿಸಿ, ಸಮಾಧಾನ ಮಾಡಲು ಬಂದ ಕುಬೇರನೊಡನೆ ಮಾತನಾಡುತ್ತಿರುವಷ್ಟರಲ್ಲಿ ಭೀಮನನ್ನು ಹುಡುಕುತ್ತ ಬರುತಲಿದ್ದ ದ್ರೌಪದಿ ಮತ್ತು ಯುಧಿಷ್ಠಿರಾದಿಗಳನ್ನು ಘಟೋತ್ಕಚನು ಇಲ್ಲಿಗೆ ಕರೆತರಲು ಅವರೆಲ್ಲರೂ ಭೀಮನೊಡಗೊಂಡು ಹರ್ಷಚಿತ್ತನಾದ ಕುಬೇರನಿಂದ ಬೇಕಾದಷ್ಟು ಹೂಗಳನ್ನು ಸ್ವೀಕರಿಸಿ ನಡೆತಂದರೆಂಬುದೇ ಕಥೆಯ ಸಾರಾಂಶ. ಈ ನಾಟಕದ ಶೈಲಿಯು ಪಾಂಚಾಲೀರೀತಿಯಲ್ಲಿರುವುದು. ಇದರಲ್ಲಿ ಭೀಮನಿಗೂ ಹನುಮನಿಗೂ ನಡೆದ ವಿಚಾರಗಳು ಚೆಲುವಾಗಿರುವುವು. ಭಾಷಣವು ವೀರರಸೋತ್ಸಾಹದಿಂದ ಕೂಡಿಕೊಂಡಿರುವುದು.

ಮಾದರಿಗಾಗಿ ಕೆಲವು ಶ್ಲೋಕಗಳನ್ನು ಬರೆಯುವೆವು. ಹನುಮ ಮತ್ತು ಭೀಮನ ಸಂವಾದವನ್ನು ಕೇಳಿ ಸಾಶಂಕರಾಗಿ ಹನುಮನು ರಾಮಾಯಣ ಕಾಲದವನೆಂದೂ, ಭೀಮನು ಮಹಾಭಾರತದ ಕಾಲದವನೆಂದೂ, ಇವೆರಡರ ಕಾಲಕ್ಕೆ ಬಹಳ ಅಂತರವಿರುವುದೆಂದೂ ತರ್ಕಿಸುವ ಪಾಠಕರು ಹನುಮನು ಚಿರಜೀವಿ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವರಾಗಬೇಕು.

ಸರೋವರ ವರ್ಣನೆ:—

ಏತಾಸ್ತಾಃ ಕದಲೀವನಾಂತರಭುವೋ ನೀರಂಧ್ರನದ್ಧದ್ರುಮ
ಚ್ಛಾಯಾಂತಃ ಶಿಶಿರೀಭವತ್ತಲಗುಹಾನದ್ಯಾಣಸಿದ್ಧಾಧ್ವಗಾಃ
ಯತ್ರ ಕ್ರೀಡತಿ ಪಾಕಜರ್ಜರಪತತ್ಕಾಶ್ಮೀರಗುಚ್ಛಾವಲೀ
ಪೀಡಾಮ್ರೇಡನಪಿಂಜರೀಕೃತನಿಜಕ್ರೋಡಂ ಕುರಂಗೀಕುಲಂ ॥ ೯೯

ಸೋಪಾನೋಪಲಮೂಲಘಟ್ಟಿತಮುಕುರಪ್ರೋಂಖತ್ತರಂಗಾಕುಲಂ
ದೃಷ್ಟ್ವೇರ್ದರ್ಶಿತದೃಷ್ಟಿವೃದ್ಧಿ ತದಿದಂ ದಿವ್ಯಂ ಸರೋ ದೃಶ್ಯತೇ
ಯಕ್ಷಸ್ತ್ರೀಕುಚಕುಟ್ಟನಾದ್ಪಿಲುಲಿತಂ ಯಸ್ಯ ಪ್ರಸಾದಂ ಶನೈ
ರಾಬಧ್ನಾತಿ ತಲಪ್ರದೇಶನಿಪತತ್ಯಾಶ್ಮೀರಪಂಕಂ ಪಯಃ ॥ ೧೦೦

ಸರಸ್ಸಿನ ರಾಮಣೀಯಕತೆಯ ವಿಚಾರವಾಗಿ:—

ಉದ್ದಾಮಪ್ರಚಲಪದೋಪಮರ್ದನೇ
ಷ್ಪಕ್ಲಿಷ್ಟಾನಿ ಪ್ರತಿನವಕಾಂತಕೇಸರಾಣಿ
ಏತಸ್ಮಿನ್ನಕನಕಮಯಾನಿ ವಸ್ತುಶಕ್ತ್ಯಾ
ಪದ್ಮಾನಿ ಭ್ರಮರಕದರ್ಥನಾಂ ಸಹಂತೇ ॥ ೧೦೧

ಅಶ್ರಾಂತಮಸ್ಯ ಸರಸೋ ಲಹರೀವಿಮರ್ದಾ
ದುದ್ದಾಮಬದ್ಧಜಲಶೀಕರದುರ್ದಿನಾರ್ದ್ರಾಃ
ಸೌಗಂಧಿಕಪ್ರಸೃತಸೌರಭಸಾರ್ಥವಾಹಾಃ
ಶ್ರಾಂತಿವ್ಯಯಂ ವಿದಧತೇ ಮಮ ಗಂಧವಾಹಾಃ ॥ ೧೦೨

ತೋಟವು ಅಪರಿಮಿತ ಯಕ್ಷರಕ್ಷಿತವಾಗಿರುವುದನ್ನು ನೋಡಿ ಭೀಮನು:—

ಅಸ್ಯ ರಕ್ಷಾಕರೈರ್ಯಕ್ಷೈರ್ಯಸ್ಯ ನ್ಯಾನ್ಮಮ ಸಂಗರಃ
ಶ್ಲಾಘ್ಯಮೇತದ್ಭವೇತ್ಕರ್ಮ ಧನ್ಯಂ ಭುಜಬಲಂ ಚ ಮೇ ॥ ೧೦೩

ಚೌರೇಣೇವ ಮಯಾಪ್ಯತೇಷು ರಭಸಾದೇತೈಷ್ಪವೀರೋಚಿತಂ
ಕಿಂ ದೋಷ್ಣಾ ಮಮ ಶೂರಸಿಂಹಮೃಗಯಾವ್ಯೆತಂಸಿಕೇನಾಮುನಾ
ಕಿಂ ಬ್ರೂಯುರ್ಭುವನತ್ರಯೇ ಭುಜಭೃತಃ ಸರ್ವೇಽಪಿ ಮಾಮಿದ್ಧಶಂ
ಯದ್ವಾ ವೀರವಧೂತ್ಪಗರ್ವಮಹತೀ ಮುಸ್ಯೇತ ಕಿಂ ದ್ರೌಪದೀ ॥ ೧೦೪

ಕೋಪವರ್ಣನವು:—

ಪ್ರಸರತಿ ದರಸ್ಪಷ್ಟಾಂಗಪ್ರಭಂ ದೃಶಿ ರಕ್ತತಾ
ಸ್ಫುರಣಮಧರಂ ಲೀಢೇ ಸ್ವೇದೋಽಪ್ಯುದೇತಿ ಕಪೋಲಯೋಃ
ಭ್ರುಕುಟಿರಪಿ ಚ ಸ್ಪಷ್ಟಂ ಭಾಲೇ ಪದಂ ತನುತೇ ತತೋ
ವಿಕೃತಯ ಇಮಾಃ ಕೋಪಾರಂಭಮುಖಸ್ಯ ವಿವೃಣ್ವತೇ ॥ ೭೨

ಭೀಮಸೇನನು ಅಂಜನಾಸುತನನ್ನು ಕುರಿತು:—

ಲೋಕಾನಾಮುಪಕರ್ತುಮೇವ ಭವತೋ ಜಾತಾಭಿಜಾತಾ ಜನಿ
ಸ್ತದ್ರಕ್ಷಾಂಸಿ ವಿಮರ್ದಿತಾನಿ ಬಹುಶೋ ದುಷ್ಟಾನಿ ಧೀರ ತ್ವಯಾ
ಈದೃಕ್ಪೌರುಷಸಾಹಸೈಕರಸಿಕಂ ಸೂತ್ವಾ ಸುತಂ ತ್ವಾಮಭೂ
ದ್ವೇವೋ ಗಂದವಹಃ ಸ ಏಷ ಭುವನೇಷ್ವಗ್ರೇಸರಃ ಪುತ್ರಿಣಾಂ

ಎಲೈ! ಹನುಮನೆ! ಲೋಕದಲ್ಲಿ ಜನರಿಗೆ ಉಂಟಾಗುವ ಕಷ್ಟಗಳನ್ನು ಪರಿಹರಿಸಿ ಅವರಿಗೆ ಉಪಕಾರಮಾಡಬೇಕೆಂಬ ಉದ್ದೇಶದಿಂದ ನೀನು ಜನ್ಮವನ್ನೆತ್ತಿರುವೆ. ಎಲೈ! ವೀರ! ನಿನ್ನಿಂದ ಆ ನೀಚ ರಾಕ್ಷಸರನೇಕರು ಹತಗೊಳಿಸಲ್ಪಟ್ಟರು. ಇಂತಹ ಅತುಲ ಭುಜಬಲ ಪರಾಕ್ರಮಿಯಾದ ನಿನ್ನನ್ನು ಪಡೆದ ತಂದೆಯಾದ ವಾಯುವನ್ನು ಸುಪುತ್ರವಂತರಲ್ಲಿ ಅಗ್ರಗಣ್ಯನೆಂದೆನಬೇಕಾಗುವುದು.

ಭೀಮನು ಯಕ್ಷಭಟರನ್ನು ಕುರಿತು: —

ಸಾಕಂ ಸ್ತ್ರೀಭಿರರಣ್ಯಸೀಮ್ನಿ ಮದಿರಾಂ ಪೀತ್ವಾ ಮದಾಂಧಸ್ಥಿತೈ
ರ್ಯುಷ್ಮಾಭಿಃ ಕ್ವವಿಲೋಕಿತಾ ರಣಭುವೋ ಧೀರೈಕಗವ್ಯಕ್ರಮಃ
ಶೂರಾಶ್ಚೇದಪಿ ಯೂಯಮಿದ್ಧಶ ಇಮೇ ಶಸ್ತ್ರೈರಲಂ ದೋಷ್ಮತಾಂ
ನಿಷ್ಪಾಣಾಯ ಭವತ್ಸ್ವಪಿ ಸ್ಥಿತವತೇ ಶೌರ್ಯಾಯದತ್ತೋಂಜಲಿಃ ॥ ೧೧೫

ಅರಣ್ಯದಲ್ಲಿ ಸ್ತ್ರೀಯರೊಡನೆ ಕೂಡಿ ವಿಹರಿಸುತ್ತ ಸ್ವಚ್ಛಂದವೃತ್ತಿಯಿಂದ ಮದ್ಯಪಾನ ಮಾಡುತ್ತಿರುವ ನಿಮಿಗೆ ಯುದ್ಧರಂಗದಲ್ಲಿ ಪರಾಕ್ರಮಿಗಳ ಸಾಮರ್ಥ್ಯವು ಹೇಗೆತಾನೇ ತಿಳಿದೀತು! ನೀವು ಪರಾಕ್ರಮಿಗಳೇ ಆಗಿ ಭುಜಬಲವುಳ್ಳವರಾಗಿದ್ದರೆ ಈ ಶಸ್ತ್ರಂಗಳಿಂದೇನುಪ್ರಯೋಜನ! ವೃಥಾಜೀವಿಸುತ್ತಿರುವ ನಿಮ್ಮ ಶೌರ್ಯಕ್ಕೆ ಜಲಾಂಜಲಿ ಛೆ! ತಿಳಿಯೆತೆ!

ಭಾ ಸ್ಕ ರ

ಇವನು ಬ್ರಾಹ್ಮಣನು. ಶ್ರೀವಿದ್ಯಾರಣ್ಯರ ಗೌರವಾರ್ಥ (homage)ವಾಗಿ ನೆರೆದ ವಿದ್ವನ್ಮಂಡಲಿಯ ಸಂತೋಷಾರ್ಥವಾಗಿ ಬರೆದುದಾಗಿ ಸೂತ್ರಧಾರನ ಹೇಳಿಕೆಯಿಂದ "ಅದ್ಯಖಲ್ವಾದಿಷ್ಟೋಸ್ಮಿವಿಮಲತರನಿಜಕೀರ್ತಿಕರ್ಪೂರಕರಂಡೀಕೃತ ನಿಖಿಲ ಬ್ರಹ್ಮಾಂಡೇನ ದಿಗಂತದಂತಾವಳ ಕುಂಭಮಂಡಲ ಮಂಡನಾಯಮಾನ ಪ್ರತಾಪಸಿಂಧೂರೇಣ ಸಕಲಕಲಾಕಲಾಪಕೋವಿದೇನ ವಿದ್ಯಾರಣ್ಯ ಶ್ರೀಚರಣಾರವಿಂದ ವಂದನನಮಹೋತ್ಸವಮಿಳಿತೇನಾಮುನಾಸಾಮಾಜಿಕೇನ.....ಎಂದು ಹೇಳಿರುವುದರಿಂದ ಇವನು ಕ್ರಿ. ಶ. ೧೪ನೆಯ ಶತಮಾನಕ್ಕೆ ಸೇರಿದವನೆಂದು ಹೇಳಬೇಕಾಗುವುದು.

ಇವನು 'ಉನ್ಮತ್ತರಾಘವ' ಎಂಬನಾಟಕವನ್ನು ಬರೆದಿರುವನು. ಇದು ರೂಪಕಭೇದವಾದ 'ಪ್ರೇಕ್ಷಣಿಕ' ಜಾತಿಗೆಸೇರಿದುದು. ಸೀತಾವಿಯೋಗಸಂತಪ್ತನಾದ ರಾಮನು. ಸೀತೆಯನ್ನುನೆನೆಸಿ ಮನಬಂದಂತೆ ಹಂಬಲಿಸಿ ಹುಡುಕಿಕೊಂಡು ತಿರುಗುತ್ತಿದ್ದನಾದುದರಿಂದ ಈ ಪ್ರೇಕ್ಷಣಿಕವನ್ನು 'ಉನ್ಮತ್ತರಾಘವ' ಎಂದೇ ಕರೆದಿರುವನು.

ವನಾಂತರದಲ್ಲಿ ಪುಷ್ಪಾವಚಯವನ್ನು ಮಾಡುತ್ತ ಅನೇಕಾಶ್ರಮ ನದೀನದಂ ಗಳನ್ನು ಕಳೆದು, ಪುಷ್ಪಾವಚಯಕ್ಕಾಗಿ ಅಗಸ್ತ್ಯಾಶ್ರಮವನ್ನು ಹೊಂದಿ ಅದೃಶ್ಯಳಾಗಿ ಹರಿಣಿಯರೂಪವನ್ನು ಧರಿಸಿದ ಜಾನಕಿಯನ್ನು ಜ್ಞಾನದೃಷ್ಟಿಯಿಂದ ಅರಿತವನಾದಾ ಕುಂಭಸಂಭವನು ಶಾಪವಿಮುಕ್ತಳನ್ನಾಗಿಮಾಡಿ ಸೀತೆಯನ್ನು ಹುಡುಕಿಕೊಂಡು ತಿರುಗುತ್ತಿರುವ ಶ್ರೀರಾಮನಿಗೆ ತಂದೊಪ್ಪಿಸಿದನೆಂಬುದೇ ಕಥಾವಸ್ತು. ಶೈಲಿಯು ಸುಲಭವಾಗಿದ್ದು ಲಕ್ಷ್ಮಣನೊಡನೆ ಸೀತೆಯನ್ನು ಹುಡುಕುತ್ತಿರುವ ರಾಮನ ದುಃಖೋದ್ಗಾರವು ವಾಚಕರನ್ನು ಕಣ್ಣೀರಿಡುವಂತೆ ಮಾಡುತ್ತದೆ. ಇದರಲ್ಲಿ ಕರುಣರಸವು ಮೂರ್ತಿಮತ್ತಾಗಿ ತೋರಿಸಲ್ಪಟ್ಟಿದೆ. ಗ್ರಂಥವು ಬಲು ಚಿಕ್ಕದಾದರೂ ಗಂಭೀರಭಾವದಿಂದಕೂಡಿ ರಸಪೋಷಣೆಯು ಚೆಲುವಾಗಿದೆ. ಮಾದರಿಗಾಗಿ ಕೆಲವನ್ನು ಬರೆಯುವೆವು.

ವಸಂತಸಮಯವರ್ಣನ:—

ಮಾಕಂದಾಳಿಮಲಯಪವನಾಮಂದಮಾಂದೋಳಯಂತೇ
ಮಜ್ಜತ್ಯಸಾಮ್ಯಮಧುಕರಯುವಾಮಂಜರೀಣಾಂಮರಂದೇ
ಆಸೇವಂತೇಮುಕುಳನಿಕರಾನಾಸಮಂತಾದಶೋಕಾ
ವಕ್ತ್ರೆಂಮತ್ತಾಃ ಪಿಕಯುವತಯಃ ಪಂಚಮಂಪ್ರಾರಭಂತೇ ॥

ರಾಮನ ದುಃಖೋದ್ಗಾರವು ಹೀಗಿರುವುದು:—

ಜ್ವಲತ್ತುಷಾರಾಗ್ನಿಕಣೋಪಮಾನಿ
ಸೀತಾನದೃಷ್ಟೇತಿದುರಕ್ಷರಾಣಿ
ಕರ್ಣಂಪ್ರವಿಷ್ಟಾನಿಹಠಾದಮೂನಿ
ಸರ್ವಾಂಗತಾಪಂಜನಯಂತಿಹಂತ ॥

ವಿರಹಂಮಮಸೋಢುಮಕ್ಷಮಾತ್ಮಂ
ವನವೀಥೀಷ್ವಪಿಮಾಮನುದ್ರುತಾಸಿ
ಅಕೃತಾಗಸಮೇನಮದ್ಯಮುಕ್ತಾ
ವದಕೃತಾಸಿಕುರಂಗಶಾಬಸೇತ್ರೇ ॥

ಪ್ರಾಣಪ್ರಿಯಾಪ್ರಾಪ್ತವತೀಂಕಥೋರಾಮಕೀರ್ತಿತವ್ಯಾಂಪದವೀಮಕಾಂಡೇ
ತ್ರೈಲೋಕ್ಯಲಾವಣ್ಯಲಲಾಮಭೂತಾಂಹಾ! ಜಾನಕೀಂಕುತ್ರವಿಲೋಕಯಾಮಿ॥

ಎಂಬ ಈ ದುಃಖೋದ್ಗಾರಮೇಳನವು ಭವಭೂತಿಯ ಉತ್ತರರಾಮಚರಿತವನ್ನು ಸ್ಮರಣೆಗೆ ತರುವುದಿಲ್ಲವೆ ?

ಜೈನರಾಜಶೇಖರ

ಇವನು ಪಾಟ್ಣಾಬಳಿಯವನು. ಪ್ರಬಂಧಕೋಶವೆಂಬ ಗ್ರಂಥವನ್ನು ರಚಿಸಿರುವನು. ಇದು ಗದ್ಯಗ್ರಂಥ. ಪಂಚತಂತ್ರದಶೈಲಿಯನ್ನು ಹೋಲುವುದು. ಕಥೆಗೆ ಬೇಕಾದ ವಿಷಯಗಳನ್ನು ಇವನ ಉಪಾಧ್ಯಾಯ ತಿಲಕ ಸೂರಿಯಿಂದ ಸಂಗ್ರಹಿಸಿ ದೆಹಲಿಯಲ್ಲಿ ವಿ. ಸ. ೧೪೦೫ ಅಥವಾ ಕ್ರಿ. ಶ. ೧೩೪೯ರಲ್ಲಿ ಮಹಮ್ಮದ್ ಬಿನ್ ತೊಗಲಖನ ಅತ್ಯಂತ ನಂಬಿಕೆಯವನಾದ ಜಯಸಿಂಹನ ಮಗ ಮದನಸಿಂಹನ ಆಶ್ರಯದಲ್ಲಿ ಬರೆದು ಮುಗಿಸಿದನು *

ಇರುಗಪದಂಡಾಧಿನಾಥ

ಇವನಿಗೆ ಭಾಸ್ಕರನೆಂದೂ ಹೆಸರು. ವೇದಭಾಷ್ಯವನ್ನು ಬರೆದ ಸುಪ್ರಸಿದ್ಧ ಸಾಯಣನ ಸೋದರ. ಮಾಯಣನಮಗ. ಇವನು ಕ್ರಿ. ಶ. ೧೪ನೆಯ ಶತಮಾನದಲ್ಲಿ ವಿಜಯನಗರದಲ್ಲಾಳಿದ ಎರಡನೆಯ ಹರಿಹರರಾಜನ ಬಳಿ ಸೈನ್ಯಾಧಿಕಾರಿಯಾಗಿದ್ದನು. ಹರಿಹರರಾಜನು ಕ್ರಿ. ಶ. ೧೩೭೮—೧೪೦೩ರ ವರೆಗೆ ಆಳಿದನು. ಅವನ ಆಶ್ರಯದಲ್ಲಿ 'ನಾನಾರ್ಥರತ್ನಮಾಲಾ'ಎಂಬ ಕೋಶವನ್ನು ಬರೆದುಮುಗಿಸಿದನು. ಈ ವಿಚಾರವು: —

ಸೋಯಂಗ್ರಥ್ನಾತಿನಾನಾರ್ಥರತ್ನ ಮಾಲಾಂಗುಣೋಜ್ಜ್ವಲಾಂ
ಶ್ರೀಮಾನಿರುಗಪದಂಡೇಶೋನಾತ್ಯಲ್ಪಂನಾತಿವಿಸ್ತರಂ ॥

ಎಂಬುದರಿಂದ ವ್ಯಕ್ತವಾಗುತ್ತದೆ.$

ಕಾಂಡೈಶ್ಚತುರ್ಭಿರೇಕದ್ವಿತ್ರಿಚತುರ್ವರ್ಣವರ್ಜಿತೈಃ
ಸಂಕೀರ್ಣಾವ್ಯಯಕಾಂಡಾಭ್ಯಾಮಿತಿಷಡ್ಭಿರನುಕ್ರಮಾತ್ ॥

ಎಂಬಂತೆ ಏಕಾಕ್ಷರ ದ್ವ್ಯಕ್ಷರ ತ್ರ್ಯಕ್ಷರ ಚತುರಕ್ಷರವೆಂಬ ೪ ಕಾಂಡಗಳೂ ಸಂಕೀರ್ಣಕಾಂಡ ಅವ್ಯಯ ಕಾಂಡವೆಂಬ ಎರಡು ಕಾಂಡಗಳೂ ಒಟ್ಟು ಆರುಕಾಂಡಗಳಾಗಿ ಭಾಗಿಸಲ್ಪಟ್ಟಿರುವುವು.

ಮಾಧವ§

ಇವನು ಕ್ರಿ. ಶ. ೧೪ನೆಯ ಶತಮಾನದಲ್ಲಿ ಧಾತುಪಾಠಕ್ಕೆ ವೃತ್ತಿಯನ್ನು ಬರೆದಿರುವನು.

---

* History of Classical Sanskrit Literature P. 123.

$ ನಾನಾರ್ಥರತ್ನಮಾಲಾ ೨

§ ಉದ್ಧವದೂತಕಾರನಾದಮಾಧವನು ಇವನಲ್ಲ

ವಿ ಶ್ವ ನಾ ಥ (೨)

ಇವನು ಬ್ರಾಹ್ಮಣನು. ಚಂದ್ರಶೇಖರನ ಮಗನು. ಇವನಿಗೆ ಕವಿರಾಜನೆಂಬ ಹೆಸರೂ ಇದ್ದಿತು. ಇವನು ತನ್ನ ಗ್ರಂಥಗಳಲ್ಲಿ ಜಯಂತ ಮತ್ತು ಅಲ್ಲಾವುದ್ದೀನನ ವಿಚಾರವಾಗಿ ಹೇಳಿಕೊಂಡಿರುವನು. ಪ್ರಖ್ಯಾತವಿಲ್ಹಣವಂಶದವನಾದ ಅಲ್ಲಾವುದ್ದೀನನು. ಕ್ರಿ ಶ. ೧೩೧೬ರಲ್ಲಿ ಸತ್ತುಹೋದನು. ಇದಲ್ಲದೆ ಗೋವಿಂದ ಠಾಕೂರನೆಂಬವನು ಕ್ರಿ. ಶ. ೧೫ನೆಯ ಶತಮಾನದ ಪೂರ್ವಾರ್ಧದಲ್ಲಿ ಬರೆದಿರಬಹುದಾದ "ಕಾವ್ಯಪ್ರದೀಪ" ಎಂಬ ಗ್ರಂಥದಲ್ಲಿ ಇವನ ವಿಚಾರವಾಗಿ ಬರೆದಿರುವನಾದುದರಿಂದ ವಿಶ್ವನಾಥನ ಕವಿತಾಕಾಲವು ಕ್ರಿ. ಶ. ೧೩೫೭ ಅಥವಾ ಕ್ರಿ. ಶ ೧೩೬೫ ರಲ್ಲಿ ಆಗಿರಬೇಕೆಂದು ತೋರುವುದು.

ಗ್ರಂಥಗಳು: - (೧) ಸಾಹಿತ್ಯದರ್ಪಣ
(೨) ರಾಘವವಿಲಾಸ
(೩) ಚಂದ್ರಕಲಾನಾಟಿಕಾ
(೪) ಕುವಲಯಾಶ್ವಚರಿತ
(೫) ಪ್ರಶಸ್ತಿರತ್ನಾವಳಿ
(೬) ನೃಸಿಂಹವಿಜಯ

ಸಾಹಿತ್ಯದರ್ಪಣವು ಸರ್ವಾಲಂಕಾರಗ್ರಂಥಗಳೆಲ್ಲಾ ಉತ್ತಮ ಪ್ರಮಾಣ ಗ್ರಂಥವಾಗಿದ್ದು ಸಾಹಿತ್ಯ ಜಿಜ್ಞಾಸುಗಳಿಗೆ ಅಂತ್ಯಂತೋಪಯುಕ್ತವಾಗಿದೆ. ಇದಕ್ಕೆ ಶ್ರೀರಾಮಚರಣತರ್ಕವಾಗೀಶಭಟ್ಟಾಚಾರ್ಯಕೃತ "ವಿವೃತಿ"ಯು ಇರುವುದು. ರಾಘವವಿಲಾಸವು ಹೆಸರಿಗೆ ತಕ್ಕಂತೆ ರಾಮಚರಿತೆಯನ್ನು ಹೇಳುವುದು. ಕುವಲಯಾಶ್ವಚರಿತವೆಂಬುದು ಪ್ರಾಕೃತದಲ್ಲಿ ಬರೆಯಲ್ಪಟ್ಟಿದೆ. ಪ್ರಶಸ್ತಿರತ್ನಾವಳಿಯಲ್ಲಿಗಟಪ್ರಶಸ್ತಿಗಳೆದ್ದು (l'anegyrics) ಬೇರೆಬೇರೆ ಭಾಷೆಯಲ್ಲಿ ಬರೆಯಲ್ಪಟ್ಟಿರುವುದು.

ನೃಸಿಂಹ ವಿಜಯದಲ್ಲಿ ಹಿರಣ್ಯಕಶಿಪುವಿನ ವಧೆಯು ವರ್ಣಿತವಾಗಿರುವದು. ಶೈಲಿಯು ಸರಳವಾಗಿಯೂ ಮೃಧುಮಧುರವಾಗಿ ನವರಸಂಗಳಿಂದ ಕೂಡಿ ಹೇಳುವುದಕ್ಕೆ ಸೊಂಪಾಗಿಯೂ ಕೇಳುವುದಕ್ಕೆ ಇಂಪಾಗಿಯೂ ಇರುವುದು. ರಾಘವವಿಲಾಸದಲ್ಲಿನ ಕರುಣರಸೋದಾಹರಣೆಗಾಗಿ ಹೇಳಲ್ಪಟ್ಟಿರುವ ಅನೇಕ ಶ್ಲೋಕಗಳಲ್ಲಿ ಒಂದನ್ನು ಇಲ್ಲಿ ಕೊಟ್ಟಿದೆ.

ವಿಪಿನೇಕ್ಷ ಜಟಾನಬಂಧನಂ ರವಚೀದಂಕ್ಷ ಮಸೋಹರಂವಪುಃ
ಅನಯೋರ್ಘಟನಾವಿಧೇಸ್ಫುಟಂ ನನುಪಶ್ಚೀನಶಿರೀಷಕರ್ತನಂ ॥

ಚಂದ್ರಕಲಾನಾಟಕದಲ್ಲಿನ ಸ್ತ್ರೀವಿಚಾರದ ಹೇಳಿಕೆಯು ಹೀಗಿರುವುದು:—

ತಾರುಣ್ಯಸ್ಯ ವಿಲಾಸಸ್ಯಮಧಿಕೆ ಲಾವಣ್ಯಸಂಪದೋಹಾಸಃ
ಧರಣೀತಲಸ್ಯಾಭರಣಂ ಯುವಜನಮನಸೋವಶೀಕರಣಂ

ಸ್ವೀಯಾನಾಂ ಮುದಿತಾಮ್ಯತೇನ ಹೃದಯಂ ಸಂಕರ್ಷಯಂತಂಸದಾ
ರಾಧಾಕೇಳಿಕಥಾಸುಸಂತತರತಂ ಧ್ಯಾಯಾಮಿಕೃಷ್ಣಾಭಿದಂ ॥ ೧-೪

ಎಂಬ ಶ್ಲೋಕದಲ್ಲಿ ಕೃಷ್ಣದಾಸನೆಂಬ ಗುರುವನ್ನು ಶ್ಲೇಷಿಸಿಹೇಳಿಕೊಂಡಿರುವನು.

ಇದರ ಕೆಲವು ಶ್ಲೋಕಗಳು:—

ಕೃಷ್ಣನು ಮುಂದೆನೋಡಿ, ಹರ್ಷದಿಂದ ಪ್ರಿಯಾಲಾಪನನ್ನು ಕುರಿತು.

ಇಮಂ ಮಧುರನೀತಿಭಿರ್ಮಧುಕರಾಂಗನಾನಾಂ ಸಖೇ
ಕಲಾಪಿಕುಲನರ್ತಿತೈಃ ಪಿಕಕದಂಬಕೋಲಾಹಲೈಃ
ಲತಾನವವಧೂಲಸನ್ಮಲಯಾನುರಾಗೋದ್ಗಮೈ
ಮನೋಗಮನಮಂಗಳಂ ಪರಿಕರೋತಿ ಮನ್ಯೇ ವನಂ॥ ೧-೧೬

ಎಲೈ! ಗೆಳೆಯಪ್ರಿಯಾಲಾಪ! ಈ ವೃಂದಾರಣ್ಯವು ಹೆಣ್ಣುದುಂಬಿಗಳ ಮನೋಹರವಾದ ಝೇಂಕಾರದಿಂದಲೂ, ನಪಿಲುಗಳನರ್ತನದಿಂದಲೂ, ಪಿಕಂಗಳ ಕೋಲಾಹಲದಿಂದಲೂ, ನೂತನವಾಗಿ ವಿಕಸಿತಂಗಳಾದ ಕಿಸಲಯಗಳ ಅನುರಾಗ ದಿಂದೆಂಬಂತೆ ಕೂಡಿರುವ ಲತೆಗಳಿಂದಲೂ ನನ್ನಆಗಮನಕ್ಕೆ ಮಂಗಳವನ್ನುಂಟು ಮಾಡುವಂತೆ ಕಾಣುತ್ತಿರುವುದು.

ಭೃಂಗಾಳೀನಯನೈರ್ನಿಮೇಷವಿಮುಖಂ ದೂರಾತ್ಸಮಾಲೋಕ್ಯ ಮಾ
ಮಾಸಂದ್ರಾಮ್ರಜಲಂ ಸ್ರವಂತಿ ವಿಗಲನ್ಮಾಧ್ವೀಕಬಿಂದುಚ್ಛಲಾತ್
ಆಹ್ವಾನಂ ಮಲಯಾನಿಲಪ್ರಚಲಿತೈಃ ಶಾಖಾಗ್ರಹಸ್ತೈಶ್ಚ ಮೇ
ಸ ಪ್ರೇಮ ಪ್ರಥಯಂತ್ಯುಪಾಯನಫಲೈರ್ನರ್ಮಾಃ ಕಿಲೈತೇ ದ್ರುಮಾಃ॥

ದುಂಬಿಗಳಸಮೂಹವು ನೀಲವಾಗಿರುವ ಕಣ್ಣುಗಳಿಂದ ರೆಪ್ಪೆಯನ್ನು ಹೊಡೆಯದೆ ನನ್ನಬರುವಿಕೆಯನ್ನು ದೂರದಿಂದನೋಡಿ ಮಧುಬಿಂದುಗಳ ನೆಪದಿಂದಲೋ ಎಂಬಂತೆ ಕಣ್ಣೀರನ್ನು ಸುರಿಸುತ್ತವೆ. ಮತ್ತು ಈ ವೃಕ್ಷಗಳು ಫಲಭಾರದಿಂದ ಬಗ್ಗಿರುವುದನ್ನುನೋಡಿ ಮಂದವಾಯುವು ಶಾಖಾಗ್ರಗಳಲ್ಲಿರುವ ಈ ಫಲಗಳನ್ನು ನನಗೆ ಕಾಣಿಕೆಯನ್ನು ಕೊಡುವುದಕ್ಕಾಗಿ ಬಗ್ಗಿವೆಯೋಎಂಬಂತೆ ಕಾಣುತ್ತದೆ.

ಉತ್ಫುಲ್ಲಪಂಕಜನಿಷಕ್ತಭಸದ್ವಿರೇಫಃ
ಕಿಂಚಿದ್ವಿನಿದ್ರಕುಮುದೋತ್ಕರಸಂಭೃತಶ್ರೀಃ
ಆಮೂಲಸದ್ಧವಿವಿಧಾದ್ಭುತಮಾಲ್ಯಮಾಲ
ಶ್ಚಿತ್ರಂ ನ ಕಸ್ಯ ತನುತೇಲಲಿತಸ್ತಮಾಲಃ॥ ೩—೯

ವಿಕಸಿತಕಮಲದಲ್ಲಿ ಆಸಕ್ತವಾಗಿ ಶಬ್ದಮಾಡುವ ದುಂಬಿಯುಳ್ಳ, ಅರೆ ಮುಕುಳಿತ (ಕೊಂಚವಾಗಿಅರಳಿದ) ಕುಮುದಗಳ ಕಾಂತಿಯುಳ್ಳ, ಬುಡದಿಂದ

ತುದಿಯವರೆಗೆ ಕಟ್ಟಲ್ಪಟ್ಟ ಅನೇಕವಿಧ ಪುಷ್ಪಗಳಮಾಲೆಯಂತೆ ಮನೋಹರವಾಗಿರುವ ಈ ತಮಾಲವೃಕ್ಷವು ಯಾರಿಗೆತಾನೇ ಆಶ್ಚರ್ಯವನ್ನುಂಟು ಮಾಡುವುದಿಲ್ಲ.

ಕ್ರೀಡಂತೀ ನಿಜಮಂದಿರೇಷು ನಿಭೃತಂ ಬಾಲ್ಯೋತ್ಸವೈಃ ಸಮಂ
ನಿತ್ಯಂ ಕೃತ್ರಿಮಪುತ್ರಿಕಾದಿಷು ರತಾ ಭಾವಾನಭಿಜ್ಞಾ ಹಿ ಯಾ
ಪಿತ್ರಾ ಪುತ್ರವತಾಪಿ ವತ್ಸಲತಯೋತ್ಸಂಗೇ ಪರಂ ಲಾಲಿತಾ
ಸಖ್ಯಃ ಪಶ್ಯತ ಚಾತುರೀಷು ಸಹಸಾ ಸೈಷಾತಿಭೂಮಿಂ ಗತಾ ೪-೧೦

ಬಾಲ್ಯದಿಂದಲೂ ಸಖಿಯರೊಡನೆ ತನ್ನಮನೆಯಲ್ಲಿ ವಿಧವಿಧವಾದ ಆಟಗಳನ್ನಾಡುವಳಾಗಿ, ಯಾವಾಗಲೂ ಕೃತ್ರಿಮವಾದ ಬೊಂಬೆಗಳ ಕ್ರೀಡಾದಿಗಳಲ್ಲಿ ತನ್ನ ಭಾವಗಳನ್ನರಿಯದೆ ಆ ಸಕ್ತಳಾಗಿ, ಮಗನಿಗಿಂತಲೂ ಹೆಚ್ಚಾದ ಪ್ರೀತಿಯಿಂದ ತಂದೆಯ ತೊಡೆಯಮೇಲೆ ಲಾಲಿಸಲ್ಪಟ್ಟವಳಾಗಿರುವ ರಾಧೆಯು ತನ್ನಶಕ್ತಿಮೀರಿ ಚಾತುರ್ಯಗಳನ್ನು ತೋರಿಸುತ್ತಿರುವಳಲ್ಲಾ ! ಆಶ್ಚರ್ಯ !

ರಾ ಮು ಚ ಂ ದ್ರ

ಇವನು ಕ್ರಿ. ಶ. ೧೫ನೆಯ ಶತಮಾನದಲ್ಲಿ 'ಪ್ರಕ್ರಿಯಾಕೌಮುದೀ' ಎಂಬ ಗ್ರಂಥವನ್ನು ಪಾಣಿನಿಯವ್ಯಾಕರಣದಮೇಲೆ ಬರೆದನು.

ಧ ನ ದ (ಧ ನ ದ ರಾ ಜ)

ಇವನು ಸೋನವಂಶದವನು. ದೇಹಡನ ಮಗನು. ಇವನು ಹೇಳಿಕೊಂಡಿರುವ:—

ಯಾವತ್ಕಲ್ಪಕಥಾಕುತೂಹಲಕರೀ ಯಾವಚ್ಚ ಜೈನಾಗಮಃ
ಶೇಷಂ ಸಾದರಮಾದಧಾತಿ ಧರಣೇಂ ಶೇಷೇಣ ಯಾವಚ್ಚಿರಂ
ಯಾವತ್ಸಂತಿ ಪಯೋಧಯೋಽಪಿ ನಿಖಿಲಾ ಮರ್ಯಾದಯೋದ್ಯನ್ಮುದೋ
ವಿದ್ಯತ್ಸು ತ್ರಿಶತೀ ವಿರಾಜತುತರಾಂ ತಾವದ್ಧನೇಶಾಜ್ಞಯಾ ॥
ನೀತಿ ಧನದಶತಕ ೧೦೨.

ಎಂಬುದರಿಂದ ಇವನು ಜೈನನೆಂದು ಹೇಳಲಾಗುತ್ತದೆ.

ಕಾಲ:—ವರ್ಷೇ ವ್ಯೋಮಾಂಕವೇದಕ್ಷಿತಿ (೧೪೪೦) ಪರಿಕಲಿತೇವಿಕ್ರಮಾಂಭೋಜಬಂಧೋಃ
ವೈಶಾಖೇ ಮಾಸಿ ವಾರೇ ತ್ರಿದಶಪತಿಗುರೋಃ ಶುಕ್ಲಪಕ್ಷೇಽಹಿತಿಥ್ಯಾಂ
ಜೀವಾಪ್ತೇ ಸೌಮ್ಯನಾಮ್ನಿ ಪ್ರಗುಣಜನಗಣೇ **ಮಂಡಪೇ**ದುರ್ಗಕಾಂದೇ
ಗ್ರಂಥಸ್ಯಾಸ್ಯ ಪ್ರತಿಷ್ಠಾಮಕೃತ **ಧನಪತಿರ್ದೇಹಡ** ಸ್ಯೈಕವೀರಃ ॥
ನೀತಿ ಧನದಶತಕ ೧೦೨.

ಎಂದೂ,

ಪ್ರತಿಶತಕಾಂತ್ಯದಲ್ಲಿ:—

" ಇತಿ ತಪಃ ಸಿದ್ಧತರಖರತರಾಮ್ನಾಯಸೋನವಂಶಾವತಂಸಮಾಲಕುಲ
ತಿಲಕಸಂಘಪಾಲಶ್ರೀಮದ್ದೇಹಡಾತ್ಮಜವಿವಿಧಬಿರುದರಾಜೀವಿರಾಜಮಾನ
ಶ್ರೀಧನರಾಜವಿರಚಿತೇ ಶತಕತ್ರಯೇ..... " ಎಂದು ಹೇಳಿರು

ವುದರಿಂದ ಇವನು ವಿಕ್ರಮ ಸಂ. ೧೪೯೦ ಕ್ರಿ. ಶ. ೧೪೩೪ರಲ್ಲಿ ಈ ಶತಕತ್ರಯವನ್ನು ಬರೆದುದಾಗಿಯೂ, ಸೋನಕುಲ ಅಥವಾ ಶ್ರೀಮಾಲ ಕುಲದವನೆಂದೂ, ದೇಹಡನ ಮಗನೆಂದೂ ತಿಳಿಯಬರುತ್ತದೆ. ಧನದರಾಜವಿರಚಿತೇ ಎಂದು ಹೇಳಿರುವುದರಿಂದ ರಾಜನಾಗಿರಬಹುದೇ ? ಎಂಬ ಶಂಕೆಯುತಲೆದೋರುತ್ತದೆ. ಸಂದೇಹವು ಸರಿಯೆನ್ನುವುದಾದರೆ ಯಾವದೇಶಕ್ಕೆ ರಾಜನಾಗಿದ್ದನೆಂಬುದು ತಿಳಿಯದಾಗಿದೆ.

ಗ್ರಂಥ:—ಇವನು ನೀತಿಧನದ, ಶೃಂಗಾರಧನದ, ವೈರಾಗ್ಯಧನದ ಎಂಬ ಶತಕತ್ರಯವನ್ನು ಬರೆದಿರುವನು. ಇದು ಭರ್ತೃಹರಿಯ ಶತಕತ್ರಯದಂತೆ ಲಲಿತವಾಗಿಲ್ಲ ಮತ್ತು ರೂಢಿಯಲ್ಲಿಲ್ಲ. ಕವಿಯು ಹೇಳುವ ಅಥವಾ ಮಾಡುವ ಪ್ರತಿಜ್ಞೆಯು ಗ್ರಂಥದ ಮೊದಲಿನಲ್ಲಾಗಲಿ, ಅಥವಾ ಕೊನೆಯಲ್ಲಾಗಲಿ ಇರುವುದು ರೂಢಿ. ಇದರಲ್ಲಿ ಪ್ರತಿಜ್ಞೆಯು ಎರಡನೆಯದಾದ ನೀತಿಧನದಶತಕದ ಕೊನೆಯಲ್ಲಿ ಹೇಳಿದೆ. ಪ್ರತಿಶತಕದಲ್ಲಿಯೂ ನೂರು ಶ್ಲೋಕಗಳಿಗಿಂತ ಹೆಚ್ಚಾಗಿವೆ.

ಇದರ ಕೆಲವು ಶ್ಲೋಕಗಳು:—

ಮಾ ಗಾಃ ಕಾಂತ ನಿಶಾಮುಖೇ ಪರಗೃಹಂ ಮಾ ಗಾಸ್ತ ಕೋಽಹರ್ಮುಖೇ
ವೇಶ್ಮಾಸ್ಮಾಕಮಿದಂ ದ್ವಯಂ ವಿತನುತೇ ಚಾಯುಃ ಕ್ಷಿತಿರ್ಯೋಷಿತಾಂ
ಮಾಭೂತ್ಕಾಂಚನ ವಂಚಿತೇತಿ ರಮಣೀ ಮಾ ಭೂದಹೋ ಖಂಡಿತಾ
ಮುಗ್ಧಾ ಭಾವಮಪಾಚಕಾರ ರಮಣೇತ್ಥಂ ವಾರಯಂತೀ ಪತಿಂ ॥

ಶೃಂ. ಧ. ಶ. (೭೯)

ಪ್ರತಿದಿವಸವೂ ಪ್ರಾತಃಸಂಧ್ಯಾ ಕಾಲಗಳಲ್ಲಿ ಪರಸ್ತ್ರೀ ಗೃಹದಲ್ಲಿ ಅಲೆಯುತ್ತಿರುವ ಪತಿಯನ್ನು ನೋಡಿ ಮುಗ್ಧಳಾದ (ವಿಚಕ್ಷಣಳಾದ) ಪತ್ನಿಯು ಎಲೈ! ಪತಿಯೇ! ನೀನು ಪರಸ್ತ್ರೀ ಗೃಹದಲ್ಲಿರುವುದಾದರೆ ಅದು ಸ್ತ್ರೀಯರಿಗೆ ಆಯುಃಕ್ಷೀಣವನ್ನುಂಟುಮಾಡುತ್ತದೆ. ನಿನಗೆ ಪರಗೃಹದಲ್ಲಿ, ಯಾವಾಗಲೂ ಯಾವ ಯಾವ ಸುಖಗಳು ಉಂಟಾಗುವುವೋ ಅವುಗಳೆಲ್ಲವೂ ಇಲ್ಲಿಯೇ ಉಂಟಾಗುತ್ತದೆ. ಆದುದರಿಂದ ಎಲೆ! ರಮಣ! ನಾನು ಆಭರಣಾದ್ಯಲಂಕಾರ ಧನಗಳಿಂದ, ವಂಚಿತಳೂ, ಇತರರ ಅವಮಾನಕ್ಕೆ ಪಾತ್ರಳೂ ಆಗಬಾರದೆಂದು ನಿನಿಗೆ ಇಷ್ಟವಿರುವುದಾದರೆ ಇತಃಪರ ಪರಸ್ತ್ರೀಯರ ಗೃಹಗಳಿಗೆ ಹೋಗದಿರು. (ಎಂದು ತನ್ನ ಮನೋಭಾವವನ್ನು ವ್ಯಕ್ತಪಡಿಸುತ್ತಾ ಪತಿಯು ಇತರರ ಮನೆಗೆ ಹೋಗುವುದನ್ನು ವಾರಣಮಾಡುತ್ತಿದ್ದಳು.)

ನಾಥ ತ್ವಂ ಬಹುವಲ್ಲಭೋ ವಯಮಮೀ ಜಾತಾ ದಯಾಭೂಮಯೋ
ಭೂಯಸ್ತಲ್ಪಮುಪಾಗತೋಽಸಿ ಸಹಸಾ ತತ್ತ್ವೇದಧಿಕಂ ಸಾಹಸಂ
ಅನ್ಯಸ್ತ್ರೀಜನಭುಕ್ತಮುಕ್ತಮಧಮ ಸ್ಪಷ್ಟಾಪರಾಧಂ ನರಂ
ಚಿತ್ತೇನಾಪಿ ಖಲು ಸ್ಪೃಶಂತಿ ನ ಶರಂ ಚಂಡಾಲವದ್ಯೋಷಿತಃ॥೪೦.೨೮

ಎಲೈ! ಪತಿಯೇ! ನೀನು ಬಹು ಪತ್ನೀರತನು. ನಾವಾದರೋ ದಯೆಗೆ ಪಾತ್ರರಾದವರು. ನೀನು ಅನೇಕವೇಳೆ ವಿಚಾರವಿಲ್ಲದೆ ನನ್ನೊಡನೆ ಏಕಶಯ್ಯಾಗತನಾಗುವೆ, ಆದರೆ ಅದಕ್ಕಿಂತಲೂ ಅಧಿಕವಾದುದೇನಂದರೆ ಕೇಳು! ಉತ್ತಮರಾದವರು ಚಂಡಾಲರನ್ನು ಹೇಗೆ ದೂರೀಕರಿಸುವರೋ ಹಾಗೆ ಪರಸ್ತ್ರೀ ಸಂಪರ್ಕದಿಂದ ಕಳಂಕಿಯಾಗಿಯೂ ಸ್ಪಷ್ಟಾಪರಾಧಿಯಾಗಿಯೂ ಇರತಕ್ಕವರನ್ನು ಉತ್ತಮ ಸ್ತ್ರೀಯರು ಮನಸ್ಸಿನಲ್ಲಿಯೂ ಸ್ಮರಿಸುವುದಿಲ್ಲವೆಂಬುದನ್ನು ತಿಳಿ.

ಸ್ವಾತಂತ್ರ್ಯಾದಿವ ಯೋಷಿತೋ ನಯಪಥಾಭ್ಯಾವಾದಿವ ಶ್ರೀಧರಾ
ನಃ ಸ್ನೇಹಾದಿವ ಬಾಂಧವಾಃ ಪರಗುಣದ್ವೇಷಾದಿವ ಪ್ರೀತಯಃ
ಕಾರ್ಪಣ್ಯಾದಿವ ಸೇವಕಾ ಬಹುಮೃಷಾಲಾಪಾದಿವ ಪ್ರತ್ಯಯಾ
ಗರ್ವಾದನ್ಯರತಾ ಭವಂತಿ ಸಹಸಾ ಲೋಕಾಃ ಸ್ವಯಂ ಭೂಪತೇಃ॥
ನೀತಿ ಧನದರತಕ ೭೪.

ಸ್ವಾತಂತ್ರ್ಯದ ದೆಸೆಯಿಂದ ಹೆಂಗಳೆಯರೂ, ದುರ್ಮಾರ್ಗತನದಿಂದ ಧನಿಕರೂ, ಸ್ನೇಹದೂರತೆಯಿಂದ ನೆಂಟರೂ, ಪರಗುಣದ್ವೇಷದಿಂದ ಪ್ರೀತಿಯೂ, ಕಾರ್ಪಣ್ಯ (ಕೃಪಣತ್ವ) ದಿಂದ ಸೇವಕರೂ, ಬಹು ಸುಳ್ಳು ಹೇಳುವುದರಿಂದ ನಂಬಿಕೆಯೂ ತಪ್ಪಿಹೋಗುವಂತೆ ಅಥವಾ ಬೇರೆ ಬೇರೆಯಾಗುವಂತೆ ಲೋಕವು (ಪ್ರಜೆಗಳು) ಮದಾಂಧನೂ, ಅನ್ಯರತನೂ ಆದ ರಾಜನನ್ನು ಜಾಗ್ರತೆಯಾಗಿ ಬಿಟ್ಟು ಬಿಡುತ್ತಾರೆ.

ಹಾಸೇ ವಾಚಿ ನರೀಕ್ಷಣೇಽಪಿ ಸರಸೇ ಲೀಲಾಯಿತೇ ವಾ ಮನೋ
ಮಾ ಧೇಹಿ ಪ್ರಸಭಂ ನಿರಾಕುರುತರಾಂ ಯಾಂತಂ ಕದಾಚಿದ್ಯದಿ
ಭೂವಿಃ ಕೈತವಕರ್ಮಣೋ ಧನಮನು ಪ್ರೇಮೋಪಪತ್ತಿಃ ಸ್ಥಿರಾ
ಮತ್ತತ್ಪೃಕಜನರ್ವಿನಾ ಮದಿರಯಾ ವೇಶ್ಯಾನವಶ್ಯಾ ನ್ಯಣಾಂ ॥ ೪೦

ಎಲೈ! ಮಾನವ! ನೀನು ವೇಶ್ಯೆಯರ ವಿಚಾರದಲ್ಲಿ ಪರಿಹಾಸಯುಕ್ತವಾದ ಮಾತು, ಅಪಾಂಗವೀಕ್ಷಣ, ಸರಸಸಲ್ಲಾಪಾದಿಗಳಲ್ಲಿ ಮನಕೊಡದಿರು. ಏಕೆಂದರೆ ಇವರು (ವೇಶ್ಯೆಯರು) ದಾರಿಯಲ್ಲಿ ಹೋಗುವವರನ್ನು ಸಾಧಾರಣವಾಗಿ ತಿರಸ್ಕರಿಸುತ್ತಾರೆ. ಕೃತ್ರಿಮಗಳೆಲ್ಲದಕ್ಕೂ ಇವರು ಆಶ್ರಯದಾತರು. ದುಡ್ಡಿಲ್ಲದೆ ಇವರಲ್ಲಿ

ಪ್ರೇಮವು ಹುಟ್ಟದು. ಮೋಹ (ಮತ್ತತೆ) ಗೊಳಿಸುವುದರಲ್ಲಿ ನಿಸ್ಸೀಮರು. ಮುದಿರೆ(ಮದ್ಯ)ಯ ಹೊರ್ತು ವಶರಾಗರು. ಆದುದರಿಂದ ಇವರಲ್ಲಿ ಮನಸ್ಸನ್ನು ಇಟ್ಟು ಮೋಹಿಸಿ ಕೆಡಬೇಡ ಎಚ್ಚರಿಕೆ!

ವಿತ್ತಂ ವೀಕ್ಷ್ಯೈವ ಹಾಸೋ ಬಹುವಿಧವಿನಯೋ ವಂಚನಾಯೋಪಯುಕ್ತೋ
ಮೋಹಸ್ಯೈವೋಪಪತ್ತ್ಯೈ ದೃಢಮೃದುಲಭುಜಾಶ್ಲೇಷಶಿಕ್ಷೋಪದೇಶಃ
ಶೀಲಭ್ರಂಶಾಯ ಪುಂಸಾಂ ರತವಿಧಿಷು ಗಲದ್ವ್ರೀಡಿತಂ ಕೈತವೇನ
ಪ್ರಾಯೋ ಮೂರ್ಚ್ಛಾಸ್ಮರಾರ್ತ್ತಿ ಮನಸಿ ಚ ಕರಿನೇ ಮೂರ್ಚ್ಛನಾಯೇತರಸ್ಯ॥೮೩

ದುಡ್ಡು ಅಥವಾ ಹಣವಿರುವವನನ್ನು ಕಂಡರೆ ಪರಿಹಾಸಯುಕ್ತವಾದ ಮಾತ ನಾಡುತ್ತಾರೆ. ವಂಚಿಸುವುದಕ್ಕೆ ಉಪಯುಕ್ತವಾದ ವಿನಯಗಳನ್ನು ತೋರಿಸು ತ್ತಾರೆ. ಮೋಹೋತ್ಪಾದನೆಗಾಗಿ ದೃಢವಾಗಿಯೂ ಇರತಕ್ಕ ಭುಜಾಶ್ಲೇಷವನ್ನು ಕೋರುತ್ತಾರೆ. ಸಚ್ಛೀಲವನ್ನು ಹಾಳುಮಾಡುವುದಾದ ಕ್ರೀಡೆಗಳಲ್ಲಿ ಕೃತ್ರಿಮ ವಾದ ನಿರ್ಲಜ್ಜೆಯನ್ನು ತೋರಿಸುತ್ತಾರೆ. ಇತರರನ್ನು ಮೋಹಪರವಶರನ್ನಾಗಿ ಮಾಡಿ ವಂಚಿಸಲು ಯತ್ನಿಸುತ್ತಾರೆ. ಇವರ ಮನಸ್ಸು ಕಾಠಿನ್ಯವನ್ನು ಬಿಡುವು ದಿಲ್ಲ. ಆದುದರಿಂದ ಎಲೈ ಧನಿಕನೆ! ವೇಶ್ಯೆಯರ ವಿಚಾರದಲ್ಲಿ ಎಚ್ಚರದಿಂದಿರು.

ಕಾಷ್ಠಾಂತಾಬದ್ಧರಶ್ಮೀ ಶಶಿದಿವಸಕರಾವೇವ ನಿರ್ಮಾಯ ಪಾತ್ರೇ
ಪುಣ್ಯಂ ಪಾಪಂ ವಿವಿಕ್ತಸ್ತುಲಯತುಮಸಕೃದ್ಧಾಂಧತೀವೇಹ ಕೋಽಪಿ
ಪುಣ್ಯಸ್ಯ ಜ್ಯೋತಿರೇದ್ದೀಪ್ತಿಲಸತಿ ಸವಿತುರ್ಮಂಡಲೇ ದೀಪ್ಯಮಾನಂ
ಚಂದ್ರಸ್ಯಾಂತರ್ಯದೇತನ್ಮಲಿನಮಿವ ಪರಂ ದೃಶ್ಯತೇ ಪಾಪಮೇತತ್॥
ವೈರಾಗ್ಯಧನದಶತಕ ೫೫.

ಪಾಪಪುಣ್ಯಗಳನ್ನು ತೂಕಮಾಡಲು ಒಂದು ತಕ್ಕಡಿಯನ್ನು ಮಾಡಿಕೊಂಡು ಸೂರ್ಯ ಚಂದ್ರರನ್ನು ಪಾತ್ರವನ್ನಾಗಿಮಾಡಿ ಪುಣ್ಯಪಾಪಗಳನ್ನೆಷ್ಟು ಸಲ ಬೇರೆ ಬೇರೆ ಮಾಡಿದರೂ ಸೂರ್ಯನ ತೇಜೋರಾಶಿಯಂತೆ ಪುಣ್ಯವೂ ಚಂದ್ರನ ಕಳಂಕದಂತೆ ಪಾಪವೂ ಕಾಣಲ್ಪಡುತ್ತದೆ.

ದಾರಾಜಾತೋಪಕಾರಾ ಅಜನಿಷತ ಯತಃ ಪ್ರೀತಿಭಾರಾಃ ಕುಮಾರಾ
ವಿತ್ತಾನೀತಾನಿ ಯೂಯಂ ವಿವಿಧವಿಧಿಮುಖೈ ಸ್ನೇಪಯೋಗಂ ಚರೇಣ
ಮಿತ್ರಾಣ್ ಪ್ರಾರ್ಥಯೇ ವಃ ಸ್ಖಲಿತಮಪಿ ಕದಾ ಮಿತ್ರಕಾರ್ಯಾನ್ಮನೋ ಮೇ
ಕರ್ಮಚ್ಛೇದೋದ್ಯಮಾಯ ಕ್ಷಿತಿಧರವಿವರೇ ವಾಸಮಾಹಾಮಹೇಽದ್ಯ ॥
ವೈರಾಗ್ಯ ಧನದಶತಕ ೭೧

ಹೆಂಡತಿಯೂ ಉಪಕೃತಳಾದಳು. ಮಕ್ಕಳು ಬಹುವಾಗಿ ಪ್ರೀತಿಸಲ್ಪಟ್ಟರು. ಬೇಕುಬೇಕಾದಂತೆ ದ್ರವ್ಯವ್ಯಯವೂ ಆದುದು. ಸ್ನೇಹಿತರಿಗಾಗಿ ನಾನಾವಿಧವಾದ ಸ್ವಾಲಿತ್ಯಗಳನ್ನಾಚರಿಸಿದುದಾದುದು. ಆದುದರಿಂದ ಎಲೈ! ಗೆಳೆಯರೆ! ನಾನು

ಈಗ ಕರ್ಮಚ್ಛೇದನವನ್ನು ಮಾಡಿಕೊಂಡು ಮುಕ್ತಿ ಹೊಂದುವುದಕ್ಕೋಸ್ಕರ ಈ ತಾಪತ್ರಯ ದೂರವಾಗಿರುವ ಯಾವುದಾದರೊಂದು ಗುಹೆಯಲ್ಲಿ ವಾಸಮಾಡಬೇಕೆಂದು ಆಶಿಸುತ್ತೇನೆ. (ಎಂದರೆ ತಪಸ್ಸಿಗಾಗಿ ವನಾಂತರವನ್ನು ಹೊಂದಲಾಶಿಸುತ್ತೇನೆಂದು ಭಾವವು.

ನಿರ್ಮಾಣಂ ಗಂತುಕಾಮಸ್ತ್ವಮಸಿ ಯದಿ ಶದಾ ವುಂಚ ಕರ್ಮಾಣಿ ದೂರಾ
ದೇಕಂ ಪದ್ಬ್ರಹ್ಮ ಚಿತ್ತೇ ಕುರುಸಪದಿ ಮಹಾಮೋಹ ಸಂದೋಹಹಾರಿ
ಮೋಧೇ ಯಸ್ಯಾಸ್ಯ ಸದ್ಯೋ ವಿಷಯವಿಷಧರೋನೈತಿ ಪಾರ್ಶ್ವಂಕದಾಚಿ
ನ್ನೈವಂ ನೈವ ಪ್ರಭಾವಂ ಪ್ರಕಟಯತಿ ನಿಜಂ ಸತ್ಯತಂ ದಷ್ಕೃತಂ ವಾ॥೬೬

ಎಲೈ! ಮನುಷ್ಯನೆ! ನೀನು ಮೋಕ್ಷವನ್ನು ಹೊಂದಲಿಚ್ಛಿಸುವೆಯಾದರೆ, ನೀನು ಮಾಡುತ್ತಿರುವುದಾದ ಎಲ್ಲಾ ಕರ್ಮಗಳನ್ನೂ ದೂರಮಾಡಿ ಅಜ್ಞಾನನಾಶಕವಾದ ಬ್ರಹ್ಮ (ವಿದ್ಯ) ನಲ್ಲಿ ಮನಸ್ಸಿಡು. ಅದರಿಂದ ಸತ್ಕಾರ್ಯವಾಗಲಿ, ದುಷ್ಕಾರ್ಯವಾಗಲಿ ಯಾವುದೂ ನಿನ್ನ ಸವಿಾಪದಲ್ಲಿ ಸುಳಿಯದು. ಆದರಿಂದ ನೀನು ಮುಕ್ತಿಯನ್ನು ಹೊಂದಬಹುದು.

ಪಟ್ಟುಭಟ್ಟ

ಇವನು ಮಚಲಿಪಟ್ಟಣದ ಬಳಿ ಇರುವ ಕಾಕವ್ಯಣಿ ಎಂಬ ಗ್ರಾಮದಲ್ಲಿ ಹುಟ್ಟಿದನು. ವಾಧೂಲ ಕುಲಾವತಂಸನು. ಇವನು ' ಪ್ರಸಂಗ ರತ್ನಾವಳೀ ' ಎಂಬ ಗ್ರಂಥವನ್ನು ಶಾ. ಶ. ೧೩೩೮ ಅಥವಾ ಕ್ರಿ. ಶ. ೧೪೧೬ ರಲ್ಲಿ ಬರೆದನು. ಇದು ಹೆಸರಿಗೆತಕ್ಕಂತೆ ನೀತಿ, ಆಚಾರ, ವ್ಯವಹಾರ, ರಾಜನೀತಿಗಳಿಂದ ಕೂಡಿ ಸುಭಾಷಿತ ಗ್ರಂಥವೆಂದೆನಿಸಿಕೊಂಡಿರುವುದು. ಇದರ ೭೭ ನೆಯ ಅಧ್ಯಾಯದಲ್ಲಿ ವಿಕ್ರಮಾದಿತ್ಯನನ್ನು ಮೊದಲುಮಾಡಿಕೊಂಡು ಪೈತಾಪುರದ ಸಿಂಹಭೂಪತಿಯವರೆಗಿನ ರಾಜಕುಮಾರರ ಹೆಸರುಗಳು ಹೇಳಲ್ಪಟ್ಟಿರುವುವು. ಗಾಥೆಗಳು ಹೇರಳವಾಗಿವೆ. ಅಭಿಪ್ರಾಯವು ಸೂತ್ರದಂತೆ ಚಿಕ್ಕ ಚಿಕ್ಕವಾಗಿವೆ. ಇದರಲ್ಲಿ ಚಾರಿತ್ರಕ ವಿಷಯಗಳು ಯಾವುವೂ ಇರುವುದಿಲ್ಲ.

ಚಂದ್ರಚೂಡ

ಇವನು ಪುರುಷೋತ್ತಮ ಭಟ್ಟನ ಮಗನು, ಕ್ರಿ. ಶ. ೧೫ನೆಯ ಶತಮಾನಾಂತ್ಯದಲ್ಲಿ ಕಾಶಿಯ ಬಳಿಯಲ್ಲಿದ್ದುದಾಗಿ ತಿಳಿಯಬರುತ್ತದೆ. ಇವನು 'ಕಾರ್ತವೀರ್ಯವಿಜಯ' ಎಂಬ ೧೪ ಸರ್ಗಗಳುಳ್ಳ ಕಾವ್ಯವನ್ನು ಬರೆದಿರುವನು. ಇದರಲ್ಲಿ ಕಾರ್ತವೀರ್ಯನ ಚರಿತವು ಹೇಳಲ್ಪಟ್ಟಿರುವುದು. ಇವನ ವರ್ಣನೆಯೂ ಮತ್ತು ಶೈಲಿಯೂ ಹರ್ಷನ ಚರಿತೆಯನ್ನು ಹೋಲುವುದು.

ವಿದ್ಯಾಭೂಷಣ

ಇವನು ವಂಗದೇಶದವನು. ಚೈತನ್ಯನ ಶಿಷ್ಯನು ಕ್ರಿ. ಶ. ೧೫ನೆಯ ಶತಮಾನದವನು. 'ಸಾಹಿತ್ಯ ಕೌಮುದೀ' ಎಂಬ ಅಲಂಕಾರ ಗ್ರಂಥವನ್ನು ಬರೆದಿರುವನು ಇದರಲ್ಲಿ ಶ್ರೀಚೈತನ್ಯನು, ಪ್ರತಾಪರುದ್ರ ಗಜಪತಿಯನ್ನು ತನ್ನ ಮತಕ್ಕೆ ಹೇಗೆ ಸೇರಿಸಿ ಕೊಂಡನೆಂಬುವದು ವರ್ಣಿತವಾಗಿರುವುದು.

ಕೇದಾರ ಭಟ್ಟ

ಇವನು ಕಾಶ್ಯಪಗೋತ್ರೀಯನಾದ ಪದ್ಮಕನವಗನು. ಕ್ರಿ. ಶ. ೧೫ ನೆಯ ಶತಮಾನಾರಂಭದಲ್ಲಿ ಇವನು 'ವೃತ್ತರತ್ನಾಕರ' ವೆಂಬ ಗ್ರಂಥವನ್ನು ಬರೆದನು. ಇದರಲ್ಲಿ ೬ ಭಾಗಗಳಿದ್ದು ಛಂದೋಲಕ್ಷಣ, ಉತ್ಪತ್ತಿ ಪ್ರಯೋಗಾದಿಗಳನ್ನು ಹೇಳಿ ಮುಗಿಸಿರುವನು. ಇದಕ್ಕೆ ನಾರಾಯಣನೆಂಬವನು ವ್ಯಾಖ್ಯಾನವನ್ನು ಕ್ರಿ. ಶ. ೧೫೫೬ ರಲ್ಲಿ ಬರೆದನು.

ವಾಮನ ಭಟ್ಟ ಬಾಣ *

ಇವನು ತ್ರೈಲಿಂಗ ದೇಶದಲ್ಲಿ ಹುಟ್ಟಿದವನು. ವತ್ಯಕುಲದವನು. ವೀರ ನಾರಾಯಣಾಪರಮನಾಯಕ ವೇಮಭೂಪಾಲನ ಆಶ್ರಿತನು. ಒಂದಾನೊಂದು ತಾಮ್ರದ ಶಾಸನದಲ್ಲಿ ಇವನ ಕಾಲವು ಶಕ ಸಂ. ೧೩೩೩ ಅಥವಾ ಕ್ರಿ. ೧೪೧೧ ಎಂದು ಹೇಳಲ್ಪಟ್ಟಿದೆ § 'ಶಬ್ದ ಚಂದ್ರಿಕಾ' ಎಂಬ ಗ್ರಂಥದಲ್ಲಿ ಬಾಣನೆಂಬ ಹೆಸರು ಕಂಡುಬರುವುದು. ಬಾಣ ಭಟ್ಟನನ್ನು ವಿಾರಿಸಬೇಕೆಂದುಯೋಚಿಸಿ ವೇಮ ಭೂಪಾಲ ಚರಿತವನ್ನು ಬರೆದಿರಬಹುದಾಗಿ ತೋರುತ್ತದೆ. ಇವನು ವಾಮನ ಭಟ್ಟಬಾಣನೆಂದು ಖ್ಯಾತನಾಮಕನಾಗಿದ್ದು ದಲ್ಲದೆ ಅಭಿನವ ಭಟ್ಟಬಾಣನೆಂದೂ ಕರೆಯಲ್ಪಡುತ್ತಿದ್ದುದಾಗಿ ವೇಮಭೂಪಾಲ ಚರಿತದ,:—

ಭಾಣಾದನ್ಯೇ ಕವಯಃ
ಕಾಣಾಃ ಖಲು ಸರಸಗದ್ಯ ಸರಣೀಷು।
ಇತಿಜಗತಿರೂಢವಾಚೋ
ವಾಮನಬಾಣೋಽಪಮಾಪ್ಯ ವತ್ಸಕುಲಃ ೧-೬

---

* ಇವನ ಮೊದಲಿನ ಹೆಸರು ವಾಮನಭಟ್ಟನೆಂದಿದ್ದು ಕಾಲಕ್ರಮದಲ್ಲಿ ಕಾದಂಬರೀಶೈಲಿಯನ್ನು ಅನುಕರಿಸಿ ಬರೆದನಾದುದರಿಂದ ಬಾಣನೆಂಬ ಹೆಸರನ್ನು ಸೇರಿಸಿ ಹೆಸರನ್ನು ವಾಮನಭಟ್ಟಬಾಣನೆಂದು ಹೇಳಿಕೊಂಡಿರಬಹುದಾಗಿ ನನಗೆ ತೋರುತ್ತದೆ.

§ History of classical Sanskrit Literature P. 104

ವಿಶ್ವಾಧಿಕವಿಭವೋ ವೇಮಭೂಪಾಲಃ" ಎಂದಿರುವುದರಿಂದ ಗ್ರಂಥಕಾಲಕ್ಕೆ ರಾಜನು ಜೀವಿಸಿರಬೇಕಾಗಿತೋರುತ್ತದೆ. ಆದುದರಿಂದ ವೇಮಭೂಪಾಲನೂ ವಾಮನಭಟ್ಟ ಬಾಣನೂ ಸಮಕಾಲೀನರೆಂದಾದುದು. ವೇಮಭೂಪಾಲನು ಪೆದ್ದ ಕೋಮಟಿಯ ಮಗನು. ಮಾಚವೇಮನ ಸೋದರನ ಮುಮ್ಮಗನು. ಮಾಚವೇಮನು ಸಕಲ ಕಲಾಚತುರನಾಗಿದ್ದು ಅಮರುಶತಕಕ್ಕೆ 'ಶೃಂಗಾರ ದೀಪಿಕಾ' ಎಂಬ ವ್ಯಾಖ್ಯಾನವನ್ನೂ, ಸಂಗೀತ ಚಿಂತಾಮಣಿಯೊಂಬುದನ್ನೂ ಬರೆದುದಾಗಿ ತಿಳಿಯಬರುತ್ತದೆ. ಇದರಿಂದ ಅಣ್ಣವೇಮನೂ, ವೇಮಭೂಪಾಲನೂ ಸಮಕಾಲೀನರೆಂದು ಹೇಳಿದುದರಿಂದ ಕ್ರಿ. ಶ. ೧೫ನೆಯ ಶತಮಾನದ ಪೂರ್ವಾರ್ಧದವನೆಂದು ಸಿದ್ಧವಾಗುತ್ತದೆ.

ಇವನ ಗ್ರಂಥಗಳು—

೧. ವೇಮಭೂಪಾಲ ಚರಿತಂ
೨. ಪಾರ್ವತೀ ಪರಿಣಯ
೩. ನಳಾಭ್ಯುದಯ
೪. ಶೃಂಗಾರ ಭೂಷಣ
೫. ರಮಾನಾಥ
೬. ಶಬ್ದ ರತ್ನಾಕರ
೭. ಶಬ್ದ ಚಂದ್ರಿಕಾ

ವೇಮಭೂಪಾಲಚರಿತಂ: —

ಇದು ಗದ್ಯಕಾವ್ಯ. ಇದರಲ್ಲಿ ನಾಲ್ಕು ಉಚ್ಛ್ವಾಸಗಳಿರುವುವು. ಕವಿಯು ತನ್ನ ಆಶ್ರಯದಾತನಾದ ವೇಮಭೂಪಾಲನ ವಂಶಾವಳಿ, ದಿಗ್ವಿಜಯ ವಿಚಾರಗಳನ್ನು ಬಹು ಸೊಗಸಾಗಿ ಕೀರ್ತಿಸಿರುವನು. 'ಗದ್ಯಂಹೃದ್ಯಂ'ಎಂಬುದು ಇವನಲ್ಲಿ ಅಕ್ಷರಶಃ ನಿಜವಾಗಿದೆ. ಇವನ ಪದ್ಯಧೋರಣೆಯೂ ಬಹು ಲಲಿತ ಮಧುರವಾಗಿರುವುದರಿಂದ 'ಪದ್ಯಂವಧ್ಯಂ'ಎಂದು ಹೇಳಿರುವುದು ಗದ್ಯೋತ್ಕರ್ಷತೆಯನ್ನು ತೋರಿಸುವುದಕ್ಕೆ ಮಾತ್ರ ಹೇಳಿರಬಹುದೆಂದು ತೋರುತ್ತದೆ. ಈ ವಿಚಾರದಲ್ಲಿ ಶೃಂಗಾರಭೂಷಣ ಮತ್ತು ಪಾರ್ವತೀಪರಿಣಯನಾಟಕ ಇವು ಸ್ಪಷ್ಟಗೊಳಿಸುವುವು. ಪ್ರತಿ ಉಚ್ಛ್ವಾಸದ ಕೊನೆಯಲ್ಲಿ "ಇತಿ ಶ್ರೀಗದ್ಯಕವಿಸಾರ್ವಭೌಮಸ್ಯ ವತ್ಸಕುಲತಿಲಕಸ್ಯ ಮಹಾಕವೇ ರಭಿನವಭಟ್ಟಬಾಣಸ್ಯ ಕೃತೌ" ಎಂದಿರುವುದು. ರೆಡ್ಡಿವೇಮ ಭೂಪಾಲನಿಗೆ ವೀರನಾರಾಯಣನೆಂದೂ, ಇವನ ಚರಿತೆಗೆ ವೀರನಾರಾಯಣ ಚರಿತವೆಂದೂ ಹೆಸರು. ಭಾಷೆಯಬಿಕ್ಕಟ್ಟು, ವಿಷಯದಸನಿಗಟ್ಟು, ರಸೌಚಿತ್ಯ, ಶೈಲಿಯಮಾರ್ದವ, ಕಲ್ಪನೆಯ ಪೂರ್ಣತೆ ಇವುಗಳನ್ನು ಇವನ ಗ್ರಂಥಗಳಲ್ಲಿ ಕಾಣಬಹುದಾಗಿದೆ. ಇಷ್ಟಾದರೂ ಕಥಾವಸರದಲ್ಲಿ ವಿದೂಷಕನನ್ನು ರಾಕ್ಷಸನೋರ್ವನು ಹಿಡಿದುಕೊಂಡು ದಾಗಿಕಲ್ಪಿಸಿ ಹೇಳುವುದಕ್ಕಿಂತಲೂ ರಾಜನನ್ನು ಹುಡುಕಿಕೊಂಡು ಬಂದ ವಿದೂಷಕ

ಕವಿಭರಭನವಬಾಣಃ ಕಾವ್ಯಮತ್ಯದ್ಭುತಾರ್ಥಂ
ಭುವನ ಮಹಿತಭೂಮಾನಾಯಕೋವೇಮಭೂಪಃ ।
ತ್ರಿಭುವನಮಹನೀಯ ಖ್ಯಾತಿಮಾನೇಷಯೋಗಃ
ಪ್ರಕಟಯತಿನ ಕೇಷಾಂ ಪಂಡಿತಾನಾಂ ಪ್ರಹರ್ಷಂ ॥ ೧-೭

ಎಂಬ ಶ್ಲೋಕಗಳಿಂದ ತಿಳಿಯಬರುತ್ತದೆ. ಕಾವ್ಯದ ಕೊನೆಯಲ್ಲಿ....''ಸರ್ವೋತ್ಕರ್ಷೇಣ ವರ್ತಮಾನಃ, ಸಾಕ್ಷಾಲ್ಲಕ್ಷ್ಮೀಸಮುಚ್ಚಾರ್ಯಮಾಣಜಯಶಬಃ ವಿಶ್ವಂ ವಿಶ್ವಂಭರಾಪಾಲಮೌಳಿಮಾಲಾಮಕರಂದಸುರಭಿತಚರಣಾರವಿಂದೋ ಜಯತಿ ನನ್ನುಮತ್ತಾವುದಾದರೂ ವಸ್ಯಪಶುಗಳು ಹಿಡಿಡುಕೊಂಡುದಾಗಿಯೂ, ವಿದೂಷಕನ ಆಕ್ರಂದನ ಧ್ವನಿಯನ್ನುಕೇಳಿ ಅದನ್ನು ಬಿಡಿಸುವುದಕ್ಕಾಗಿ ರಾಜನು ಹೋದಂತೆಯೋ ಹೇಗೋ ಬರೆದುದಾಗಿದ್ದರೆ ಇವನ ಸಂವಿಧಾನ ಚತುರತೆಗೆ ಮತ್ತಷ್ಟುಮೆರಗು ಹೆಚ್ಚುತಲಿತ್ತೆಂದು ತೋರುತ್ತದೆ. ಲೋಕವು ಭಿನ್ನರುಚಿಯುಳ್ಳದು. ಮಹಾ ಕವಿವಾಮನ ಭಟ್ಟಬಾಣನ ವಿಚಾರವಾಗಿ ಕಾವ್ಯವು ಹೀಗೆ ಹೇಳುತ್ತದೆ.

ಪ್ರತಿಕವಿಭೇದನಬಾಣಃ ಕವಿತಾತರುಗಹನವಿಹರಣಮಯೂರಃ
ಸಹೃದಯಲೋಕಸುಬಂಧುರ್ಜಯತಿ **ಶ್ರೀಭಟ್ಟಬಾಣಕವಿರಾಜಃ**
ಜಯತಿ **ಕವಿಭಟ್ಟಬಾಣೇ** ದಧತಿ ಕವಿಮನ್ಯಭಾವಮನ್ಯೇಽಪಿ
ಪ್ರದ್ಯೋತಯತಿ ರವೌ ದ್ಯಾಂ ಪಿದ್ಯೋತಾಖ್ಯಾ ನ ಕಿಂತು ಕೀಟಮಣೇಃ
ಸುಗುಣಾಲಂಕೃತಿಸುಭಗಾ ಫಣಿತಿರಿಯಂ **ಭಟ್ಟಬಾಣ** ಭವದೀಯಾ
ಅಧರಯತಿ ವಿಧುತನಖಮುಖಮುಖರಿತವೀಣಾನಿನಾದಮಾಧುರ್ಯಂ॥

ವೇಮಭೂಪಾಲಚರಿತದ ಕಥಾಸಾರಾಂಶ: —

ಅಸ್ತಿ ತ್ರಿಲಿಂಗೇಷ್ವಡ್ಡಂಗಿನಾಮಧೇಯಾ ನಗರೀ| ತತ್ರೈಕದಾ ನಾರಾಯಣ ಚರಣಕಮಲಸಂಭೂತೇ ಚತುರ್ಥೇವರ್ಣೇ ಸಮುತ್ಪನ್ನಃ ಕಾಮಾಭಿ ಧಾನೋನರಪತಿರಶಿಷದಶೇಷಮವನಿಚಕ್ರಂ | ತಸ್ಮಾತ್ಪ್ರಸೂತೇ ಮಹತಿ ವಂಶೇ ಶೌರ್ಯೋಷ್ಮಸಂತಪ್ತಸಮಸ್ತಸಾಮಂತಚಕ್ರಃ ಪ್ರೋಲ್ಲಭೂಪತಿ ರುದಭೂತ್ | ಸ ಹಿ ಕದಾಚಿದ್ವಸಂತಸಮಯೇ ಮೃಗಯಾಕ್ಷಿಪ್ತಚೇತಾಃ ಮಹಾರಣ್ಯಂ ವಿಗಾಹ್ಯಾಶ್ಚರ್ಯದರ್ಶನೇನ ಹರಿಣೇನ ಸುದೂರಮಾಕೃಷ್ಟಃ ಕಂಚನ ಮಹನೀಯಮಾರಾಮಮಾಸದತ್ | ತತ್ರಾನಾಘ್ರಾತಪೂರ್ವ ಮಂಗನಾಂಗಪರಿಮಲಮುದ್ವಹಂತಂ ಪವಮಾನಮಭ್ಯಜಿಘ್ರತ್| ತದನು ಸಾರೇಣ ವಿಚರ್ಯ ಕಸ್ಮಿಂಶ್ಚಿದುಪವನೇ ಬಾಲತರುಷಂಡಮಧ್ಯೇ ಸಹಕಾರ ಪೋತಾಶ್ರಿತಡೋಲಾಯಾಮುಪವಿಷ್ಟಾಂ ಕಲಮಧುರಾಲಾಪಿನೀಂ ಕಾಂ ಚಿತ್ ಕನ್ಯಕಾಮದ್ರಾಕ್ಷೀತ್ | ದೃಷ್ಟಮಾತ್ರೈವ ಸಾ ತಸ್ಯ ಹೃದಯಮು

ವಿಕ್ಷತ್, ಸೋಽಪಿ ತಸ್ಯಾಃ | ಹಂತ! ಪರಸ್ಪರದರ್ಶನಾನುಕ್ಷಣಮೇವ ರಾಕ್ಷಸೇನಗಲೇ ಗೃಹೀತಸ್ಯ ವಿದೂಷಕಸ್ಯಾಕ್ರಂದನಮಶನಿಮಿವ ಶ್ರವಸಿ ಪಾತಿತಮಾಕರ್ಣ್ಯ ವಿಸ್ಮೃತಾನ್ಯಕರ್ತವ್ಯಃ ತದುನ್ಮೋಚನಾಯ ಸ ಭೂಪತಿಸ್ತಸ್ಮಾತ್‌ಪ್ರದೇಶಾದನ್ಯತ್ರಸರಭಸಮಯಾಸೀತ್ ||

ಅಥ ರಾಕ್ಷಸಾತ್ ವಿದೂಷಕಂ ಮೋಚಯಿತ್ವಾ ಪುನಸ್ತಮೇವೋದ್ದೇಶಮಾಗತ್ಯ ತಾಂ ಕನ್ಯಕಾಮದೃಷ್ಟ್ವಾ ವಿಷಣ್ಣಹೃದಯಃ ಸರ್ವತೋಽನ್ವಿಷ್ಯಾನಧಿಗತತದ್ವಾರ್ತಃ ಮದನಶರಶರವ್ಯತಾಮುಪಯಾತಃ ಕೃಚ್ಛ್ರಾತ್ ಸ್ವಪುರಾಭಿಮುಖಂ ಪ್ರಾಸ್ಥಿತ | ತತಃ ಪ್ರಾಸಾದಮೇತ್ಯ ಪ್ರಬಲಾನಂಗವೇದನಾಜರ್ಜರಿತಾವಯವಃ ಕಥಂಕಥಮಪಿತಾಂ ನಿಶಾಂ ಗಮಯಿತ್ವಾಪ್ರತ್ಯೂಷಸಿ ತದೇವ ಲೀಲೋದ್ಯಾನಂ ಗತ್ವಾ ಡೋಲಾವಿಹಾರದೇಶಮುಪೇತ್ಯ ತರುಗುಲ್ಮೇಷು, ಕಮಲಸರಸ್ತೀರೇಷು ಚ ವಿಚರ್ಯ ಕಸ್ಯೆಚಿತ್ ಕಮನೀಯಸ್ಯ ಲತಾಮಂಡಪಸ್ಯಮಧ್ಯಭಾಗೇ ಮದನಪರವಶಾಯಾಃ ಕಸ್ಯಾಶ್ಚಿತ್ ದುಃಸಹದೇಹಸಂತಾಪಮನಕ್ಷರಮಾವಿಷ್ಕುರ್ವತಃ ಶಯನೀಯಸ್ಯ ಸವಿಧೇ ಆತ್ಮನಃ ಪ್ರತಿಕೃತ್ಯಾಸಮಲಂಕೃತಂ ಕಿಮಪಿ ಚಿತ್ರಫಲಕಮಾಲೋಕಿಷ್ಟ | ತದವಲೋಕ್ಯಾತಿಭೂಮಿಂ ಗತೇನ ಕಂದರ್ಪಜ್ವರೇಣಾಸ್ತಮಿತಧೃತಿಃ ಅನುಚರೇಣ ವಿದೂಷಕೇಣ ಸಮಾಶ್ವಾಸ್ಯಮಾನಃ ಇತಿಕರ್ತವ್ಯತಾಮೂಢಃ ದಿಷ್ಟ್ಯಾ ತತ್ರ ಯದೃಚ್ಛಾಗತಯಾ ಪರಿಚಾರಿಕಾದ್ವೀತೀಯಯಾ ತಸ್ಯಾಃ ಸಖ್ಯಾ ನಿವೇದಿತಸರ್ವವೃತ್ತಾಂತಃ ಆತ್ಮನೋ ನಿಮಿತ್ತೇ ಅನುಭೂತಾನಂಗವೇದನಾಸಹಸ್ರಾಯಾಸ್ತಸ್ಯಾಃ ವರವರ್ಣಿನ್ಯಾಃ ಶೋಚನೀಯಾಂ ದಶಾಂ ಶ್ರೋತು ಮಪ್ಯಶಕ್ನುವ್ವ 'ಅಯಿ ! ಭದ್ರೇ ! ಅವಿಲಂಬಿತಮೇವ ಕನ್ಯಾಗುರುಸವಿಧಮುಪಗಮಹಂ ಜನಂ ಪ್ರೇಷಯಾಮಿ ಪರಿಣಯನಪ್ರಸಂಗಾಯ' ಇತಿ ತಾಂ ವಿಸಜ್ರ್ಯ ಸಹವಿದೂಷಕೇಣ ಸ್ವನಗರಮೇವ ಪ್ರಾವಿಕ್ಷತ್ ||

ಅನಂತರಂ ದಕ್ಷಿಣಾಪಥೇ ವಿಕ್ರಮಸಿಂಹನಗರೀಪಾಲಕಸ್ಯ ತುಕ್ಕಾರಘಟ್ಟಸ್ಯ ಭೂಪತೇಸ್ತನಯಾಂ ತಾಂ ಪರಿಣೇತುಂ ತ್ವರಮಾಣಃ ಆಪ್ತೈಸ್ತಸ್ಯಾನುಮತಿಮುಪಲಭ್ಯ ತಾಮೇವ ಪುರೀಮುಪೇತ್ಯಶುಭೇ ಮುಹೂರ್ತೇ ಅನಂತಾನಾಮ್ನ್ಯಸ್ತಸ್ಯಾಃ ಪಾಣಿಂ ಗೃಹೀತ್ವಾ ಅನಂತಾಂ ಮುದಮಲಬ್ಧ | ತಯೋರನ್ಯೋನ್ಯವಿಭ್ರಮವಿಲಾಸಾವರ್ಜಿತಸ್ವಾಂತಯೋರುದಭವ್ ಮಾಚ, ವೇಮ, ದೋಡ್ಡ, ಅನ್ನ, ಮಲ್ಲಾಭಿಧಾನಾ ವಿಖ್ಯಾತಯಶಸಃ ಪಂಚ ಕುಮಾರಾಃ | ತೇಷುಜ್ಯೇಷ್ಠಾನ್ಮಾಚನರೇಂದ್ರಾತ್ ರೇಡ್ಡಿಪ್ರೋತ ಭೂಪ ಇತಿ ಪೆದ್ದಕೋಮಟೀಂದ್ರಇತಿ ನಾಗೇಂದ್ರಇತಿ ತ್ರಿದಶಸದೃಶಾ

ಸ್ತ್ರಯಃ ಕುಮಾರಾ ಅಜನಿಷತ | ತೇಷುಗುಣಜ್ಯೇಷ್ಠಃ ಪೆದ್ದ ಕೋಮ
ಟೇಂದ್ರ ಏವರಾಜರಾಜಪ್ರಭಾವೋಭೂತ್ವಾ ಅರ್ಣವಮೇಖಲಾಮಿಮಾಮಾಂ
ಮೇದಿನೀಮಶಿಷತ್ | ಸ ಹಿ ಸೌಭಾಗ್ಯತಪಃಸಿದ್ಧಿಮಿವ ಸ್ಥಿತಾಮನಂತಾಂ
ಬಾಮುಪಾಯಂಸ್ತ| ಅನಂತರಮನಧಿಗತಸುತಮುಖಾವಲೋಕನಸುಖಃ
ಅಮರಪತಿಮರ್ಚಯಿತ್ವಾ ವೇಮಭೂಪಂ ನಾಮವಸೂಪಮಂ ಜ್ಯೇಷ್ಠಂ
ಸುತಂ ಗುಣೈಸ್ತಮನುಕುರ್ವಂತಂ ಚತುರ್ಭುಜಪ್ರಭಾವಂ ಮಾಚಭೂ
ಪಾಲಂ ನಾಮ ದ್ವಿತೀಯಂ ತನಯಂ ಚ ಪ್ರಾಪ್ಯಾನಂದತುಂದಿಲ
ಹೃದಯೋಽಭೂತ್ | ಕ್ರಮೇಣ ಕೃಷ್ಣೇತರಪಕ್ಷ ಶಶಲಾಂಛನ ಇವ
ವರ್ಧಮಾನಃ ಕಲಾಭಿಃ ಪೂರ್ಣಃ ಪಿತ್ರ್ಯಂ ಸಿಂಹಾಸನಮಾರುಕ್ಷದ್ವೀವ
ಭೂಪಾಲಃ | ಅನಂತರಮಾಗತಾಯಾಂ ಶರದಿ ದಿಗ್ವಿಜಯಯಾತ್ರಾಂ
ಚಿಕೀರ್ಷನ್ನಮಿತರಥಗಜತುರಗಪಾದಾತೈರತಿಮಹತೀಂ ಸೇನಾಂ ಕರ್ಷ
ನ್ನುದಚಲತ್ ||

ಪ್ರಥಮಮಸೌ ಸಾಗರತೀರಮುಪೇತ್ಯ ತತಃ ಕಲಿಂಗೋತ್ಕಲಾಂಗವಂಗ
ಭಂಗಾರ್ಜ್ ವಿಜಿತ್ಯ ಭಾಗೀರಥೀತೀರೇ ಕೃತಸೇನಾನಿವೇಶಃ ವೇಲಾತಟೇ
ನೈವ ದಕ್ಷಿಣಾಂ ದಿಶಾಂ ಪ್ರಸ್ಥಾಯ ದ್ರವಿಡಾನಾಮಾಕ್ರಮ್ಯ ಕಾಂಚೀ
ಮಾಸಾದ್ಯ ಪಾಂಡ್ಯಾಪರಾಜಿತ್ಯ ಸೇತುಂ ಸಾಕ್ಷಾತ್ಕೃತ್ಯ ತಾಮ್ರಪರ್ಣೀ
ಮವಗಾಹ್ಯ ಕೇರಲಾನುದ್ವೀಕ್ಷ್ಯ ಮುರಚೀಂ ನವೀಮತಿಕ್ರಮ್ಯ, ಮಲ
ಯಾದ್ರೇರುಪತ್ಯಕಾಸು ಸುಖಮವಾತ್ಸೀತ್. ಕತಿಚನ ವಾಸರಾಣಿ | ಅಥ
ಪ್ರತೀಚೀಂ ದಿಶಾಮಾಲಂಬ್ಯ ಘೂರ್ಜರಸೌರಾಷ್ಟ್ರಾನಾತ್ಮನೋ ವಂಶಂ
ನೀತ್ವಾ ದೇವಂ ಸೋಮನಾಥಮಭ್ಯರ್ಚ್ಯ ಚರಮಾರ್ಣವರೋಧಸಾ
ಪಾರಸೀಕಾಭಿಮುಖಂ ಗತ್ವಾ ಯವನಾನಾಂ ಶಿರಾಂಸಿನಿಕೃತ್ಯ ಅಪರಾಂತ
ಮಹೀತಲಮಾಕ್ರಮ್ಯ ಸಿಂಧುರಾಜಂ ಸಮರಾಂಗಣೇ ಪರಿಭೂಯ
ಹೂಣಾರ್ ಕಾಂಭೋಜಾರ್ ಕಾಶ್ಮೀರಾನವನಮಯ್ಯ ಗ್ರೀಷ್ಮಸಮಯೇ
ಗೌರೀಗುರುಂಶೈಲಮಗಾತ್ | ಅನಂತರಮನುಭೂತ ಹಿಮಾಲಯೋ
ಪಾಂತವನರಾಜಿಸಂಚರಣಾನಂದಃ ಸಹ ಸೈನಿಕೈಸ್ತಸ್ಮಾದವರುಹ್ಯ ವಿಂಧ್ಯಾ
ಟವೀಮವಗಾಹ್ಯ ಚಂಡಿಕಾಲಯೇ ಭಗವತೀಮಾದಿಭೈರವೀಂ ತಾಂತ್ರಿ
ಕೇಣವಿಧಿನಾ ಸಂಪೂಜ್ಯ ದ್ರಾಕ್ಷಾರಾಮಪುರೀಮಾಸಾದ್ಯ ಭೀಮೇಶ್ವರಂ
ಪ್ರಣಮ್ಯ ವೇಶವಾಟೀಂ ಕೇವಲಮವಲೋಕನದಾನೇನಾನುಗೃಹ್ಯ ವಸಿಷ್ಠ
ಗೌತಮನಿಷೇವಿತಾಂ ಭಗವತೀಂ ಗೋದಾವರೀಮುಪಾಸ್ಯ ನಿಜಪುರೀ
ಮಭ್ಯೇತ್ಯ ಐಶ್ವರ್ಯ ಸಂಪೂರ್ಣಮಾತ್ಮಭವನಮಾಸಾದ್ಯಾನಿತರಸು
ಲಭಾ ಭೋಗಾನನುಸೇವಮಾನಃ ಸರಸಕವಿಕಾವ್ಯಶ್ರವಣಭೂಷಣೇನ

ಕರ್ಣಾವನುದಿನಮಲಂಕುರ್ವಾ ಪರಾಂ ಕೋಟಿಮಾನಂದ ಸ್ಯಾಧ್ಯ ಗಚ್ಛತ್ ||

ಇವನ ಗದ್ಯಪದ್ಯಮಾದರಿಗೆ ಕೊಂಚಬರೆಯುವೆವು:—

"ತತಃ ಪ್ರಬಲೋತ್ಕಂಠಃ ಕ್ಷಣದಾಕರರಶ್ಮಿಭಿರಿವಾಕೃಷ್ಯಮಾಣಃ ಸೌಧಶಿಖರ ಮಾರುರೋಹ| ತತ್ರ ಚಂದನಜಲಸಿಕ್ತಮಣಿಕುಟ್ಟಿಮತಲೇ ತಾರಕಪ್ರತಿ ಬಿಂಬಮೇದುರೋಪಹಾರಕುಸುಮೇ ಬಹುಲವಿಕೀರ್ಣಕರ್ಪೂರಧೂಲೀ ಪರಿಮಲಮಿಳದಳಿಕುಲಝಂಕಾರಮ್ಮುಖರೇ ದಕ್ಷಿಣಪವನವಿಕೀರ್ಯಮಾಣ ಪರಿಸರಾರಾಮಕುಸುಮಪರಾಗಸುರಭೌ ಪರಿತೋ ಲಂಬಮಾನಮುಕ್ತಾ ಸರಕಿರಣಪುನರುಕ್ತಚಂದ್ರಿಕಾ ಧವಲಿಮ್ನಿ ಸೌಧತಲೇ, ಮಣಿಪರ್ಯಂಕಿ ಕಾಶಯ್ಯಾಮಧಿಶಿಶ್ಯೇ.....ದ್ವಿತೀಯೋಚ್ಛ್ವಾಸಃ ಪುಟ ೫೭.

(೨) ಪಾರ್ವತೀಪರಿಣಯನಾಟಕ.

ಇದರ ಕರ್ತನಾರೆಂಬ ವಿಚಾರದಲ್ಲಿ ವತ್ಸಕುಲಜಾತ ಅಭಿನವಬಾಣಾಭಿದಾನದ ಬೇರೊಬ್ಬನೆಂದೂ (ಸಂಸ್ಕೃತ ಕವಿಚರಿತೆ, ಪ್ರಥಮಸಂಪುಟ ೧೮೪ನೆಯ ಪುಟದಲ್ಲಿ ಸೂಚಿಸಿರುವೆವು.) ನಾಮಸಾಮ್ಯದ, ಕಾದಂಬರೀಕಾರ ಬಾಣಭಟ್ಟನಲ್ಲವೆಂದೂ ಹೇಳಿರುವೆವು. ಇದನ್ನು ಬರೆದವನು ವೇಮಭೂಪಾಲಚರಿತಕಾರನಾದ ವಾಮನಭಟ್ಟ ಬಾಣನು. ಈತನಹೆಸರು ಈಕಡೆ ಪ್ರಸಿದ್ಧವಿಲ್ಲದುದರಿಂದಲೂ, ಹೆಸರಿನ ಮೊದಲಿನಲ್ಲಿ ಕಂಡುಬರುವ 'ವಾಮನ'ಎಂಬ ಶಬ್ದವು ಬಳಿಕೆಯಲ್ಲಿಲ್ಲದೆ ಬಿಟ್ಟುಹೋಗಿ ಭಟ್ಟಬಾಣ ನೆಂದು ಹೆಸರುಗೊಂಡುದರಿಂದ ಇಂತಹಸಂದೇಹಕ್ಕೆ ಅವಕಾಶಕೊಟ್ಟಿದೆ. ಮುಂಬಯಿ (Bombay) ಯಲ್ಲಿ ಅಚ್ಚಾಗಿರುವ ನಿರ್ಣಯಸಾಗರಪ್ರತಿಯಲ್ಲಿ " ಮಹಾಕವಿ ಶ್ರೀ ಬಾಣಭಟ್ಟಪ್ರಣೀತಂ ಪಾರ್ವತೀಪರಿಣಯಂ " ಎಂಬದು ತಪ್ಪಾಗಿಅಚ್ಚಾಗಿದೆ. ಹೆಸರಿಗೆತಕ್ಕಂತೆ ಶಿವನೊಡನೆ ಪಾರ್ವತಿಯ ವಿವಾಹಕಥೆಯು ಇದರ ಕಥಾವಸ್ತು. ಶಿವಪುರಾಣದೊಳಗಿನ ಪಾರ್ವತಿಯ ವಿವಾಹಕಥೆಯು ಇದರ ಆಧಾರ. ಇದರಲ್ಲಿ ೫ ಅಂಕಗಳಿರುವುವು. ಇದರಲ್ಲಿ ಕಲ್ಪನಾಚತುರತೆಯಾಗಲಿ ವರ್ಣನಾ ವೈಖರಿಯಾ ಗಲಿ ಇಲ್ಲದಿದ್ದರೂ ಕೆಲವು ಗದ್ಯಪದ್ಯ ಭಾಗಗಳು ಬಹೂತ್ಕೃಷ್ಟರೀತಿಯಿಂದ ಹೇಳಿದೆ.

ಇದರ ಕೆಲವು ಶ್ಲೋಕಗಳು:—

ಮಹೇಂದ್ರನಹೇಳಿಕೆ:—

ಮುಗ್ಧೈರಪ್ಸರಸಾಂ ವಿಲಾಸಸಹಿತೈರ್ವಾಕ್ಯೈರ್ಮನೋಹಾರಿಭಿಃ
ಕರ್ಣಾಂತಸ್ಖಲಿತೈರಪಾಂಗವಲಿತೈರಾರೇಚಿತಭ್ರೂಲತೈಃ|
ಬಾಹೋಃ ಸ್ರಸ್ತಕುಚೋತ್ತರೀಯಶಿಥಿಲನಾಮಂಜುಕ್ವಣತ್ಕಂಕಣೈ
ರ್ವ್ಯಾಪಾರೈರಪಿ ಯೋ ವಿಕಾರಪದವೀಂ ನ ಪ್ರಾಪಿತಃ ಸಂಯಮೀ|| ೨—೫

ಅಪ್ಸರೆಯರ ಹಾವಭಾವವಿಲಾಸ ಸಂಪೂರ್ಣವಾದ ಮನೋಹರ ವಾಕ್ಯ ಗಳಿಂದಲೂ, ವಿಶಾಲನೇತ್ರಗಳ ಅಪಾಂಗವೀಕ್ಷಣದಿಂದಲೂ, ಹುಬ್ಬುಗಳನ್ನು ತಿರು ಗಿಸುವುದರಿಂದಲೂ, ಭುಜದ ಮೇಲಿನಿಂದ ಜಾರಿಹೋಗುತ್ತಿರುವ ಸೆರಗನ್ನು ಸರಿ ಮಾಡಿಕೊಂಡು ಮೇಲಕ್ಕೆಳೆದು ಕೊಳ್ಳುವಾಗ ಉಂಟಾಗುವ ಬಳೆಗಳ ಮಂಜುಳ ಧ್ವನಿಗಳಿಂದಲೂ ಇವೇ ಮೊದಲಾದ ಅನೇಕ ವ್ಯಾಪಾರಂಗಳಿಂದ ಎಷ್ಟುವಿಧವಾಗಿ ಅವನ ತಪಸ್ಸಿಗೆ ವಿಘ್ನವನ್ನುಂಟು ಮಾಡಿದರೂ ಆ ತಪಸ್ವಿಯು ಕೊಂಚವಾದರೂ ಮನೋವಿಕಾರವನ್ನು ಹೊಂದಲಿಲ್ಲ.

ಸ್ತ್ರೀಯರ ಚೇತನ ಪ್ರಕೃತಿಕಾಠಿನ್ಯ ವಿಚಾರದಲ್ಲಿ:—

ಶೇತೇ ಯಾ ಕಿಲ ಹಂಸತೂಲಶಯನೇ ನಿದ್ರಾತಿ ಸಾ ಸ್ಥಂಡಿಲೇ
ವಸ್ತೇ ಯಾ ಮೃದುಲಂ ದುಕೂಲವಲಾ ಗೃಹ್ಣಾತಿ ಸಾ ವಲ್ಕಲಂ
ಯಾ ವಾ ಚಂದನಪಂಕಲೇಪಶಿಶಿರೇ ಧಾರಾಗೃಹೇವರ್ತತೇ
ಪಂಚಾನಾಮುದಿತೋಷ್ಮಣಾಂ ಹುತಭುಜಾಂ ಸಾ ಮಧ್ಯಮಾಸೇವತೇ॥ ೪-೨.

ಆಹಾ! ಯಾವ ಪಾರ್ವತಿಯು ಪೂರ್ವದಲ್ಲಿ ಹಂಸತೂಲಿಕಾತಲ್ಪದ ಮೇಲೆ ಮಲಗುತ್ತಿದ್ದಳೋ ಅವಳು ಈಗ ಸ್ಥಂಡಿಲದಲ್ಲಿ (ನೆಲದಮೇಲೆ) ಶಯನಮಾಡುತ್ತಾಳೆ. ಯಾವಳು ಅತಿಮೃದುವಾದ ದುಕೂಲ (ವಸ್ತ್ರ)ಗಳನ್ನು ಧರಿಸುತ್ತಿದ್ದಳೋ ಅಂಥವಳು ಈಗ ನಾರುಬಟ್ಟೆಗಳನ್ನು ಧರಿಸುತ್ತಾಳೆ. ಯಾವಳು ಅತ್ಯಂತ ಶೀತಲಚಂದನಾದಿ ಗಳನ್ನು ಲೇಪಿಸಿಕೊಂಡು ಧಾರಾಗೃಹದಲ್ಲಿ(ನೀರಿನಮನೆ)ವಾಸಿಸುತ್ತಿದ್ದಳೋ ಅವಳು ಈಗ ಪಂಚಾಗ್ನಿಗಳ ಮಧ್ಯದಲ್ಲಿ ತಪಸ್ಸನ್ನು ಮಾಡುತ್ತಿರುವಳು.

ಪಾರ್ವತಿಯ ಸತ್ವಪರೀಕ್ಷೆಗಾಗಿ ವೇಷಾಂತರದಿಂದ ಬಂದ ಈಶ್ವರನು ಪಾರ್ವತಿಯನ್ನುಕುರಿತು, ಎಲೌ ಮುಗುದೆ! ನೀನು ಅಪೇಕ್ಷಿಸುವ ವರನ ಇರವನ್ನು ಕೇಳು:—

ಅಲೇಪೋ ಭಸಿತಂ ವಿಭೂಷಿತಮಹಿರ್ವಾಸಃ ಪಿತೃಣಾಂ ವನೇ
ವೇತಾಲಾಃ ಪರಿಚಾರಕಾಃ ಪ್ರತಿದಿನಂ ವೃತ್ತಿಶ್ಚ ಭಿಕ್ಷಾಮಯೀ
ಇತ್ಥಂ ಯಸ್ಯ ಶುಭೇತರಾಣಿ ಚರಿತಾನ್ಯಾಖ್ಯಾಂತಿ ಸರ್ವೇಜನಾ
ಸ್ತಸ್ಮಿನ್ನೌಗ್ಧ್ಯವಶಾನ್ಮತಿಸ್ತವ ರುಚಿಂ ಬಧ್ನಾತಿ ಕಿಂ ಬ್ರೂಮಹೇ ೪-೧೨

ಅವನು (ಮೈಗೆ) ಬಳಿದುಕೊಳ್ಳುವುದು ಬೂದಿ. ಅವನ ಆಭರಣಗಳೋ ಸರ್ಪಗಳು. ವಾಸಸ್ಥಳವು ಶ್ಮಶಾನ. ಭೂತವೇತಾಲಾದಿಗಳು ಪರಿಚಾರಕರು. ಜೀವ ನವು ಪ್ರತಿದಿನದ ಭಿಕ್ಷಾಟನದಿಂದ. ಇಂತಹ ಅಮಂಗಳಕರನಾದ ಆ ಶಂಕರನಲ್ಲಿ ಮೂಢಳಾಗಿ ಹೇಗೆ ತಾನೇ ನೀನು ಮನಸ್ಸನ್ನಿಟ್ಟಿರುವೆ! ಈ ವಿಚಾರದಲ್ಲಿ ನಾನೇನು ತಾನೇ ಹೇಳಲಿ!

ನಳಾಭ್ಯುದಯಃ—ಇದರಲ್ಲಿ ೮ ಸರ್ಗಗಳೂ ೯ನೆಯದರಲ್ಲಿ ಮೂರು ಶ್ಲೋಕಗಳು ಮಾತ್ರ ಇರುವುದರಿಂದ ಕಾವ್ಯವು ಪೂರ್ತಿಯಾದಂತೆ ಕಾಣಬರುವುದಿಲ್ಲ; ೯ನೆಯ ಸರ್ಗದ ಈ ಕೆಳಗಣ ಮೂರು ಶ್ಲೋಕಗಳು ಗ್ರಂಥದ ಭೂಮಿಕೆಯಲ್ಲೊನೆಯಲ್ಲಿ ಬರೆಯಲ್ಪಟ್ಟಿರುವುವು. ಇದು ಹೆಸರಿಗೆತಕ್ಕಂತೆ ಪುರಾಣಪ್ರಸಿದ್ಧನಾದ ನಳನ ಕಥೆಯನ್ನು ಹೇಳುವುದಾಗಿದೆ.

ಗತೇಬಹುತಿಥೇಕಾಲೇಪರ್ಣಾದೋ ನಾಮಬಾಡವಃ
ಪ್ರತ್ಯೇತ್ಯ ಕುಂಡಿನಂ ಭೈಮೀಂರಹಸ್ಯೇತದಭಾಷತ ॥ ೧ ॥
ಅಥಗ್ರಾಮೇಷುದೇಶೇಷುವನೇಷುಪವನೇಷುಚ
ನಲಮನ್ವೇಷಮಾಣಾಸ್ಮೇನಾಥಿಜಗ್ಮುರ್ದ್ವಿಜಾತಯಃ ॥ ೨ ॥
ದಮಯಂತ್ಯುದಿತಾಂವಾಚಂ ಜಗದುಸ್ತತ್ಪತಿಂತೇ
ನಕಶ್ಚದಪಿಸರ್ವಸ್ಯಾಂ ಪೃಥಿವ್ಯಾಮುತ್ತರಂದದೌ ॥ ೩ ॥

ಎಂಟನೆಯ ಸರ್ಗದ ಕೊನೆಯಲ್ಲಿ "ಇತಿ ಶ್ರೀವಾಮನಭಟ್ಟಬಾಣಕೃತೌ ನಲಾಭ್ಯುದಯೇ ಅಷ್ಟಮಸ್ಸರ್ಗಃ" ಎಂದಿರುವುದು.

ಶೃಂಗಾರಭೂಷಣಃ—ಇದು ರೂಪಕ ಭೇದವಾದ ಭಾಣ ಜಾತಿಗೆ ಸೇರಿದುದು. ಇದರಲ್ಲಿ ಒಂದಂಕವಿರುವುದು. ೮೬ ಶ್ಲೋಕಗಳಿರುವುವು. ಕಥಾನಾಯಕನು ವಿಲಾಸ ಶೇಖರನು. ಇವನ ಗದ್ಯ ಶೈಲಿಯು ಬಾಣನ ಶೈಲಿಯನ್ನು ಹೋಲುವುದಾದರೂ ಪದ್ಯ ರಚನಾಕ್ರಮದಲ್ಲಿ ಬಾಣನನ್ನು ವಿಾರಿಸಿರುವನೆಂದರೆ ಅಚ್ಚರಿಯಾಗದು. ಇವನ ಶ್ಲೋಕಗಳು ಸುಂದರವೂ ಸರಳವೂ ಆಗಿರುವುವು.

ಶ್ರೀವರಪಂಡಿತ

ಇವನು ಬ್ರಾಹ್ಮಣನು. ಇವನ ಮಾತಾಪಿತೃಗಳಾರೆಂಬುದು ತಿಳಿಯದು. ಇವನು ಯಾವಾಗ ಎಲ್ಲಿದ್ದನೆಂಬುದು ಸ್ಪಷ್ಟವಾಗಿ ತಿಳಿಯದಾದರೂ ಕೆಳಗೆ ಹೇಳುವ ಶ್ಲೋಕಗಳಿಂದ ಕೊಂಚಮಟ್ಟಿಗೆ ಇವನ ಕಾಲವನ್ನು ತಿಳಿಯಬಹುದಾಗಿದೆ. ಹೇಗೆಂದರೆ:—

ಪ್ರಾಜ್ಯೇಜಾಗ್ರತಿ ರಾಜ್ಯೇಽಸ್ಯ ಪೃಥಿವ್ಯಾಂ ಪೃಥಿವೀಪತೇಃ
ಶಾಕೇಮುನಿದ್ವಿವೇದೇಂದು (೧೪೨೭) ಗಣೇತೇವಿಕ್ರಮೋಸ್ಮಗೋಃ ।
ಸ್ಥಿತೇಽಪಿಲೌಕಿಕೇವರ್ಷೇಚಂದ್ರಾಷ್ಟ (೮೧) ಪರಿಪೂರಿತೇ
ಮಾಧವೇಮಾಸಿರಾಕಾಯಾಂ ರವೌಮೇಷಮುಪಾಗತೇ ॥
(ಕಥಾಕೌತುಕ ೩೭—೩೮)

ಎಂಬ ಶ್ಲೋಕಗಳಿಂದ ಗೊತ್ತಾಗುವುದು. ೧೪೨೭ನೆಯ ಮಿತೇಬ್ದೇ ೪೧ ಎಂಬ ಅಂಕಯೋಜನದಿಂದ ವಿಕ್ರಮ ಸಂ. ೧೫೦೪ ಅಥವಾ ಕ್ರಿ. ಶ. ೧೪೫೧ ಎಂದಾಗುವುದು. " ವೈಕ್ರಮೇಶರದಿ ವೈಶಾಖಮಾಸಿ ಪೂರ್ಣಿಮಾಯಾಮಸ್ಯ ಗ್ರಂಥಸ್ಯ ನಿರ್ಮಾಣಸಮಯೋಲ್ಲೇಖೋಪಲಾಭಾತ್ಕವಿವರಸ್ಯಾನ್ಯಯಮೇವ ಸತ್ತಾಸಮಯಃ" ಎಂದೂ, ಇದಲ್ಲದೆ ಕವಿಯೇ ಕ್ರಿ. ಶ. ೧೪೭೭ರಲ್ಲಿ ಎರಡನೆಯ ರಾಜತರಂಗಿಣಿಯನ್ನು ಬರೆದಿದ್ದ ಜೋನರಾಜನ ಅನಂತರ ಮೂರನೆಯ ಜೈನ ರಾಜತರಂಗಿಣಿಯನ್ನು ಬರೆದುದಾಗಿ:—

ತಸ್ಮಿನ್ಮಯಾಪಂಡಿತಜೋನಕಾಖ್ಯಂ
ನತ್ವಾಗುರುಂಪಂಡಿತ ಶ್ರೀವರೇಣ |
ಭೂಪಾಲತುಷ್ಟ್ಯೈಸ್ಸುರಲೋಕವಾಣ್ಯಾ
ರಂಭೋಽಧ್ವನಾಕಾಂಶ್ಚ ಮನೋಹರೋಯಂ ॥ ೪೦ ॥

ಈ ಶ್ಲೋಕದಿಂದ ತಿಳಿಯಬರುವುದಲ್ಲದೆ:—

ಶ್ರೀಜೋನರಾಜವಿಬುಧಃ ಕುರ್ವನ್ ರಾಜತರಂಗಿಣೀಂ |
ಸಾಯಕಾಗ್ನಿ (೫೮) ಮಿತೇವರ್ಷೇ ಶಿವಸಾಯುಜ್ಯಮಾಸದತ್ ॥ ೬ ॥
ಶಿಷ್ಯೋಽಸ್ಯ ಜೋನರಾಜಸ್ಯ ಸೋಹಂ ಶ್ರೀವರಪಂಡಿತಃ
ರಾಜಾವಳೀಗ್ರಂಥಶೇಷಾಪೂರಣಂ ಕರ್ತುಮುದ್ಯತಃ ॥ ೭ ॥

ಎಂಬ ಜೈನರಾಜತರಂಗಿಣಿಯ ಪ್ರಥಮತರಂಗ ಶ್ಲೋಕಗಳಿಂದ ಗೊತ್ತಾಗುವುದು.

ಆದುದರಿಂದ ಶ್ರೀವರಪಂಡಿತನ ಸಮಯವು ಜೋನರಾಜನ ಕಾಲವಾಗಿರಬೇಕು. ಜೈನಲಾಬ್ದೀನನು ಕಾಶ್ಮೀರವನ್ನಾಳಿದುದು ಕ್ರಿ. ಶ. ೧೪೧೭—೧೪೭೭ರವರೆಗೆಂದು ಜೋನರಾಜನು ಸ್ಪಷ್ಟಪಡಿಸಿರುವುದರಿಂದ, ಜೈನಲಾಬ್ದೀನ, ಜೋನರಾಜ ಮತ್ತು ಶ್ರೀವರಪಂಡಿತ ಈ ಮೂವರೂ ಸಮಕಾಲೀನರೆಂದೂ ಶ್ರೀವರಪಂಡಿತ ವಿರಚಿತವಾದ ರಾಜತರಂಗಿಣಿಯಿಂದ ನಿಶ್ಚಯಿಸಬಹುದಾಗಿದೆ. ಎಂದರೆ ಈ ಶ್ರೀವರಪಂಡಿತನ ಕಾಲವು ಸುಮಾರು ಕ್ರಿ. ಶ. ೧೫ನೆಯ ಶತಮಾನದ ಉತ್ತರಾರ್ಧದಲ್ಲಿರಬೇಕೆಂದು ನಿರ್ಧರವಾದುದು.

ಇವನು ಯವನ ಶಾಸ್ತ್ರಪಾರಂಗತನಾಗಿದ್ದನೆಂದು ಪ್ರತಿಕೌತುಕಾಂತ್ಯದಲ್ಲಿ ಹೇಳಲ್ಪಟ್ಟಿರುವ " ಇತಿಯವನ ಶಾಸ್ತ್ರಪಾರಂಗಮ ಪಂಡಿತ ಶ್ರೀಧ(ವ)ರ ವಿರಚಿತೇ ಕಥಾಕೌತುಕೇ " ಎಂಬುದರಿಂದ ತಿಳಿಯಬರುತ್ತದೆ.

ಕೆಲವರು ಶ್ರೀವರಪಂಡಿತನೆಂಬ ಹೆಸರಲ್ಲವೆಂದೂ ಇವನ ಕಥಾಕೌತುಕದ ೧೪—೧೫ನೆಯ ಕಥಾಂತ್ಯದಲ್ಲಿ " ಇತಿ.....ಕೌತುಕೇ " ಎಂದಿರುವುದರಿಂದ ಕವಿಯ ಹೆಸರು ಸಂದಿಗ್ಧವಾಗಿರುವುದೆಂದೂ, ಮತ್ತೆ ಕೆಲವರು ಈ ಕಥಾ

ಕೌತುಕದ ಕೊನೆಯ ೧೪—೧೫ನೆಯ ಎರಡು ಕೌತುಕಗಳಲ್ಲಿ ಮಾತ್ರ ಅಕ್ಷರ ಸ್ಖಾಲಿತ್ಯವು ಕಂಡುಬರುವುದರಿಂದ ಇವರಿರ್ವರೂ ಏಕವ್ಯಕ್ತಿಯೆಂದೂ, ಅವನೇ ಶ್ರೀವರಪಂಡಿತನೆಂದೂ, ಕೆಲವರು ಶ್ರೀವರಪಂಡಿತನಕಾಲದ ಜೋನರಾಜನೇ ಬೇರೆ, ಶ್ರೀಧರಪಂಡಿತನ ಕಾಲದ ಜೋನರಾಜನೇ ಬೇರೆ ಇವರಿಗೆ ಪರಸ್ಪರ ಸಂಬಂಧ ವಿಲ್ಲವೆನ್ನುವರು. ಮತ್ತೆ ಕೆಲವರು ಶ್ರೀಧರನೋ ಅಥವಾ ಶ್ರೀವರಪಂಡಿತನೋ ಜೋನರಾಜನ ಅಂತೇವಾಸಿಯೆಂದೂ, ಗ್ರಂಥ ನಿರ್ಮಾಣವು ೧೫೦೪ರಲ್ಲಿ ಆಗಿರ ಬೇಕೆಂದೂ ಹೇಳುವರು. ಬೇರೆ ಕೆಲವರು ಜೈನರಾಜ ತರಂಗಿಣೀ ಕಾರನು ಶ್ರೀವರ ಪಂಡಿತನೇ ಹೌದು, ಆದರೆ ಕಥಾ ಕೌತುಕವನ್ನು ಬರೆದವನು ಶ್ರೀವರಪಂಡಿತನೋ ಅಥವಾ ಶ್ರೀಧರನೋ ಆಗಿರಬೇಕೆಂದೂ, ಇವನು ರಾಜತರಂಗಿಣಿಯನ್ನು ಬರೆದ ಶ್ರೀವರಪಂಡಿತನಿಗೆ ಭಿನ್ನನೆಂತಲೂ ಶ್ರೀವರ ಅಥವಾ ಶ್ರೀಧರಕವಿಯು ವಿ.ಸ. ೧೪೨೭ ಅಥವಾ ಕ್ರಿ.ಶ. ೧೩೭೦ ಎಂದೂ "ವೈಕ್ರಮಶರದಿ ಚಂದ್ರಾಷ್ಟ (೮೧) ಪರಿಪೂರಿತೇ" ಎಂದು ಹೇಳಿರುವುದರಿಂದಲೂ, "ಸಾಯಕಾಗ್ನಿ (೩೫) ಮಿತೇವರ್ಷೇ" ಎಂದು ಜೈನರಾಜತರಂಗಿಣಿಯಲ್ಲಿ ತಿಳಿಯಬರುವುದೆಂದೂ ಸಾಧಿಸುವರು. ಇವರ ಹೇಳಿಕೆ ಯನ್ನು ಸಮದೃಷ್ಟಿಯಿಂದ ನೋಡುವುದಾದರೆ ಹೀಗೆ ತಿಳಿಯಬರುವುದು.

(೧) ಯುಸೂಫ್‌ಜುಲೇಖಾ ಗ್ರಂಥಕಾರನಾದ ಜಾಮಿಯು (ಮುಲ್ಲಾ ಜಾಮಿಾನೂರುದ್ದೀನ್) ಅಬ್ದುರ್ ರಹಿಮಾನನು ಕ್ರಿ. ಶ. ೧೪೧೪-೧೪೯೨ರ ವರೆಗೆ ಜೀವಿಸಿದ್ದನು.

(೨) ಶ್ರೀವರಪಂಡಿತನು ಜೋನರಾಜನ ಅನಂತರ ಕ್ರಿ. ಶ. ೧೪೨೨ರಲ್ಲಿ ಮೂರನೆಯ ಜೈನರಾಜತರಂಗಿಣಿಯನ್ನು ಬರೆದುದಾಗಿ ಹೇಳಿಕೊಂಡಿರುವನು:—

(೩) " ಶಿಷ್ಯೋಸ್ಯಜೋನರಾಜಸ್ಯಸೋಹಂ ಶ್ರೀವರಪಂಡಿತಃ "

ಎಂದು ಹೇಳಿರುವುದರಿಂದ ಕವಿಯು ಜೈನರಾಜನ ಶಿಷ್ಯನೆಂದೂ, ಜೈನಲಾ ಬ್ದೀನನು ಕಾಶ್ಮೀರದಲ್ಲಿ ಕ್ರಿ. ಶ. ೧೪೧೭-೧೪೬೭ರ ವರೆಗೆ ಆಳಿದನೆಂದೂ ಹೇಳಿರುವುದ ರಿಂದ ಈ ಮೂವರೂ ಸಮಕಾಲೀನರಾಗಿರಬೇಕೆಂದು ಬೋಧೆಯಾಗುವುದು. ಜೋನರಾಜನ ಮರಣಾನಂತರ ಅಂದರೆ ಕ್ರಿ. ಶ. ೧೪೬೭-೧೪೭೨ರ ಮಧ್ಯಕಾಲ ವಾಗಿರಬೇಕು. ಆ ವೇಳೆಗೆ ಜೈನಲಾಬ್ದೀನನೂ, ಜೋನರಾಜನೂ ಈ ಲೋಕದಿಂದ ಮರೆಯಾಗಿರಬೇಕು. ಅನಂತರ ಎಂದರೆ ಕ್ರಿ. ಶ. ೧೪೭೨ರಲ್ಲಿ ಜೈನರಾಜತರಂಗಿಣಿ ಯನ್ನು ಮುಗಿಸಲು ಯತ್ನಿಸಿರಬೇಕೆಂದು ಬೋಧೆಯಾಗುವುದು. ಜೈನರಾಜ ತರಂಗಿಣಿಯನ್ನು ಮುಗಿಸಿದನಂತರ ಅಥವಾ ಮುಗಿಸುವ ವೇಳೆಗೆ ಜಾಮಿಯು ಬರೆದ ಯುಸೂಫ್‌ಜುಲೇಖೆಯರ ಪ್ರಣಯ ಕಥಾತರಂಗ ವಿಚಾರವು ಪ್ರತಿಯೊಬ್ಬ ರಿಂದಲೂ ಮಾನಿಸಲ್ಪಟ್ಟಿರಬೇಕು. ಇಂತಹ ಅಪೂರ್ವ ಕೌತುಕವಾಣಿಯನ್ನು

ನೋಡಿ ಅದನ್ನು ಪರಿವರ್ತಿಸಲು ಕೈಕೊಂಡಿರಬೇಕು. ಎಂದರೆ ಕ್ರಿ. ಶ. ೧೫ನೆಯ ಶತಾಬ್ದದ ಉತ್ತರಾರ್ಧದಲ್ಲಿರಬೇಕು.

(೪) ಶ್ರೀವ (ಧ)ರ ಎಂಬ ಹೆಸರಿನ ವಿಚಾರದಲ್ಲಿ ಅಕ್ಷರಸ್ಖಾಲಿತ್ಯವೇ ಹೊರ್ತು ಮತ್ತಾವುದೂ ಇರದು. ಇದು ಲೇಖಕರ ಪ್ರಮಾದ ಜನಿತವಿರಬಹುದು. ಕಥಾ ಕೌತುಕವು ೧೫ ಕೌತುಕಗಳಿಂದೊಡಗೂಡಿ, ಮೊದಲಿನ ೧೩ ಕೌತುಕಗಳಾಂತ್ಯದಲ್ಲಿ ಶ್ರೀವರನೆಂದಿದ್ದು, ಮಿಕ್ಕೆರಡರಲ್ಲಿ ಮಾತ್ರ ಶ್ರೀಧ (ವ) ರ ನೆಂದಿರುವುದು. ಶ್ರೀಧರನೇ ಆಗಿದ್ದರೆ ಉಳಿದ ೧೩ ಕೌತುಕಗಳಲ್ಲಿಯೂ ಹೀಗೆಯೇ ಬರೆದಿರಬೇಕಾಗಿದ್ದಿತು. ಹಾಗಿಲ್ಲದುದರಿಂದ ಅಕ್ಷರಸ್ಖಾಲಿತ್ಯವೆಂಬುದನ್ನು ಸಹಜರೀತಿಯೆಂದೊಪ್ಪಬೇಕು. ಉಳಿದ ಸಂದೇಹಗಳು ನಿರಾಧಾರವೆನ್ನಬೇಕಾಗುವುದು. ಕವಿಯನ್ನು ಕ್ರಿ. ಶ. ೧೫ನೆಯ ಶತಮಾನಾನಂತರದವನೆಂದು ಹೇಳುವುದು ಅಸಂಬದ್ಧವಾಗಿ ತೋರುವುದರಿಂದಲೂ, ಕವಿಯು ತನ್ನ ಕಾಲವನ್ನು ತಾನೇ ಸ್ಪಷ್ಟಪಡಿಸಿಕೊಂಡಿರುವುದರಿಂದಲೂ ಕ್ರಿ. ಶ. ೧೫ ನೆಯ ಶತಮಾನದ ಉತ್ತರಾರ್ಧದವನೆನ್ನುವುದರಲ್ಲಿ ಯಾವ ಅಭ್ಯಂತರವೂ ತೋರದು.

(೧) **ಗ್ರಂಥಗಳು**:--**ಮೂರನೆಯ ರಾಜತರಂಗಿಣೀ**-ಇದರಲ್ಲಿ ಕಲ್ಹಣನ ರಾಜತರಂಗಿಣಿಯಂತೆ ವಿವಿಧರಾಜರ ಜೀವನಚರಿತೆಯು ಸಂಗ್ರಹಿಸಲ್ಪಟ್ಟಿರುವುದು.

(೨) **ಕಥಾಕೌತುಕ**:-ಮೋಹ, ರೂಪ, ವಿರಹಸಮಾಗಮ, ಆನಂದಾದಿಗಳು ಪ್ರತಿಯೊಬ್ಬರೂ ತಲೆದೂಗುವಂತೆ, ಪ್ರಣಯವೆಂತಹುದೆಂಬುದು ಸ್ಪಷ್ಟವಾಗಿ ತಿಳಿಯುವಂತೆ, ವಿರಹದ ದುರ್ಧರ ಪ್ರಸಂಗವು ಕಣ್ಣೀರಿಡುವಂತೆ, ಆನಂತರೂಪವು ಉನ್ಮಾದಕರವೆಂಬಂತೆ, ಮೋಹವು ವ್ಯಾಮೋಹಗೊಳಿಸುವಂತೆ, ಸಮಾಗಮವು ಆನಂದ ಪ್ರದವಾಗಿರುವಂತೆ, ಸುಲಭರೀತಿಯಲ್ಲಿ ವರ್ಣಿತವಾಗಿರುವುದು. ನೀತಿ, ಕೌಶಲ, ಪ್ರಣಯ ವ್ಯಾಪಾರಗಳು ಮೂರ್ತಿಮತ್ತಾಗಿರುವುವು. ಇವನೇ ಯುಸೂಫ್ ಜುಲೇಖೆಯರ ಚರಿತವನ್ನು ಗೀರ್ವಾಣಭಾಷೆಗೆ ಪರಿವರ್ತಿಸಿ ಪದ್ಯರೂಪವಾಗಿ ಬರೆದನೆಂಬುದಕ್ಕೆ:—

ಮಲಾಜ್ಯಾಮೀನ ಯೇ ಸೋಹ ಜೋಲೇಖಾನಾಮವಿಶ್ರುತಃ।
ರಚಿತೋಽಪ್ಯದ್ಭುತಃ ಪೂರ್ವಗ್ರಂಥೋದೇವಮುಖೋದ್ಗತಃ ॥ ೧—೩೯

ತಸ್ಮಾನ್ಮಯಾಪಂಡಿತಜೋನ ಕಾಮ್ಯೇ
ನತ್ವಾಗುರುಂಪಂಡಿತಶ್ರೀವರೇಣ।
ಭೂಪಾಲತುಷ್ಟ್ಯಸ್ಸುರಲೋಕವಾಣ್ಯಾ
ರಂಭೋಽಧ್ವನಾಕಾಂಶ್ಚಮನೋಹರೋಯಂ ॥ ೧—೪೦

"ಅಫ್ರಿಕಾರಾಜನಾದ ತಾಯಮಸ್‌ನ ಮಗಳಾದ ಜುಲೇಖೆಯು ಯಾವನೋ ಓರ್ವ ಅಪರಿಚಿತ ಸುಂದರವ್ಯಕ್ತಿಯನ್ನು ಸ್ವಪ್ನದಲ್ಲಿನೋಡಿ ಅವನ ಸೌಂದ

ರ್ಯಕ್ಕೆ ಲುಬ್ಧಳಾಗಿ ಅವನನ್ನೇ ನೋಡುತ್ತ ಅವನೇ ಸಾಕ್ಷಾತ್ತಾಗಿ ಬಂದಂತೆಯೂ, ಅವನು ಈಜಿಪ್ಟಿನ ವಜೀರನೆಂದೂ ಹೇಳಿದಂತೆ ಸುಖಾನುಭವವನ್ನು ಹೊಂದಿದಳು. ಹೀಗಿರುತ್ತಿರಲು ಫರೋಯರ ಅರಸನಾದ ಪಾತಿಫರನು ಜುಲೇಖೆಯ ರೂಪರೇಖಾ ವಿಲಾಸ ಚತುರತೆಯನ್ನು ಕೇಳಿ ಅವಳನ್ನು ಮದುವೆಯಾಗುವನು. ಆದರೆ ಜುಲೇಖೆಗೆ ತನ್ನ ಸ್ವಪ್ನದಲ್ಲಿ ಕಂಡ ಜೋಸೆಫನೇ ಇವನಾಗಿರಬೇಕೆಂದು ತಿಳಿದು ಯಾರ ಮೊಗವನ್ನೂ ನೋಡದಿದ್ದ ಜುಲೇಖೆಯು ಪಾತಿಫರನಿಗೆ ಹೆಂಡತಿಯಾದಳು. ಕಾಲಕ್ರಮದಲ್ಲಿ ಜೋಸೆಫನು ಈಜಿಪ್ಟಿನಲ್ಲಿ ಗುಲಾಮನಾಗಿ ಮಾರಲ್ಪಟ್ಟು ಪಾತಿಫರನು ಅವನನ್ನು ಕೊಂಡು ಕೊಂಡನು. ಜುಲೇಖೆಯು ಅವನನ್ನು ಮೋಹಿಸಿ ತನ್ನ ಹಾವಭಾವವಿಲಾಸಚಾತುರ್ಯದಿಂದ ವಶಪಡಿಸಿಕೊಳ್ಳಲೆತ್ನಿಸುತ್ತಿರುವುದನ್ನು ನೋಡಿ ಅವನನ್ನು ಕಣ್ಮರೆಯಾಗಿ ಸೆರೆಯಲ್ಲಿರಿಸಿದನು. ಕೆಲವು ಕಾಲದ ಅನಂತರ ಜೋಸೆಫನು ಹೇಗೋ ಕಾರಾಗೃಹಮುಕ್ತನಾಗಿ ಮುಖ್ಯಾಮಾತ್ಯ ಪದವಿಯನ್ನು ಹೊಂದಿದನು. ಕಾಲಾನಂತರದಲ್ಲಿ ಪಾತಿಫರನು ರಾಜ್ಯಭ್ರಷ್ಟನಾಗಿ ಅವಮಾನದಿಂದ ಪಾರ್ಥಿವಶರೀರವನ್ನು ನೀಗಿದನು. ಹೆಂಡತಿಯಾದ ಜುಲೇಖೆಯು ಗಂಡನ ಮರಣಾನಂತರ ಕಂಡುದುಃಖಿತಳಾಗಿ ದಾರಿದ್ರ್ಯದೆಸೆಗೀಡಾಗಿ ಅತ್ತತ್ತು ಕಣ್ಣನ್ನು ಕಳೆದುಕೊಂಡಿರುವುದನ್ನು ನೋಡಿ ಜೋಸೆಫನು ಪುನಮರುಗಿ ಅವಳಿಗೆ ಪೂರ್ವದಂತೆ, ಕಡುಸೌಂದರ್ಯವನ್ನೂ ಕಣ್ಣುಗಳನ್ನೂ ಕೊಟ್ಟು ಕಾಪಾಡಬೇಕಾಗಿ ದೇವರನ್ನು ಪ್ರಾರ್ಥಿಸಿದನು. ಭಗವಂತನು ಅಂತಾಗಲೆಂದು ಅನುಗ್ರಹಿಸಿದನು. ಈ ನೆಳೆಗೆ ದಾರಿದ್ರ್ಯದೆಸೆಯಿಂದ ಕಂಗಾಲಾಗಿರುವ ಜುಲೇಖೆಯು ಇಸ್ಲಾಂಮತವನ್ನು ಕೈಗೊಂಡಿದ್ದಳು. ಜೋಸೆಫನು ಶಾಸ್ತ್ರೀತ್ಯಾ ಗೇಬ್ರಿಯಲನ ಅಪ್ಪಣೆಯಂತೆ ಅವಳನ್ನು ಮದುವೆಯಾಗಿ ೪೦ ವರ್ಷಗಳ ಕಾಲ ಅವಿಚ್ಛಿನ್ನವಾದ ಭೋಗಭಾಗ್ಯ ಪರಂಪರೆಗಳನ್ನನುಭವಿಸಿ ಮೃತನಾದನು. ಜುಲೇಖೆಯೂ ಬಹುದಿವಸ ಈ ವಿಯೋಗದುಃಖವನ್ನನುಭವಿಸದೆ ಸ್ವಲ್ಪಕಾಲದಲ್ಲಿ ಈ ಜಡಕಳೇಬರದಿಂದ ಬೇರೆಯಾದಳು." ಇದೇ ಕಥಾನಾರಾಂಶ. ಯುಸೂಫ್ ಅಥವಾ ಜೋಸೆಫ ಮತ್ತು ಜುಲೇಖೆಯರ ಪ್ರಣಯ ಲೀಲಾ ವಿಚಾರವು ಕೌತುಕಕಥಾವಿಶಿಷ್ಟವಾಗಿರುವುದರಿಂದ ಕವಿಯು ಗ್ರಂಥಕ್ಕೆ "ಕಥಾಕೌತುಕ" ಎಂದು ಅನ್ವರ್ಥನಾಮವನ್ನು ಕೊಟ್ಟಿರುವನು.

ಇದನ್ನು ರಾಲ್ಫ್ ಟಿ. ಹೆಚ್, ಗ್ರಿಫಿತ್‌ರವರು ಕ್ರಿ. ಶ. ೧೮೮೨ರಲ್ಲಿ ಆಂಗ್ಲ ಭಾಷೆಗೆ ಪರಿವರ್ತಿಸಿರುವರು. ಮೂಲಕಥಾಕಾರನಾದ ಜಾಮಿಯ ಜೀವನವನ್ನು ಹೇಳಿದ ಹೊರ್ತು ವಿಷಯವು ಪೂರ್ಣವಾಗದು.

ಜಾಮಿಯು ಕ್ರಿ. ಶ. ೧೪೧೪ರಲ್ಲಿ ಖುರಾಸ್ಸಾಪ್ರಾಂತ್ಯಕ್ಕೆ ಸೇರಿದ ಜಾಂ ಎಂಬ ಊರಿನಲ್ಲಿ ಜನ್ಮವೆತ್ತಿದನು. ಜಾಂ ಎಂಬೂರಿನಲ್ಲಿ ಹುಟ್ಟಿದನಾದುದರಿಂದ ಜಾಮಿ

ಎಂಬ ಹೆಸರಾಯಿತು. ಇವನ ಹೆಸರು ನೂರುದ್ದೀಅಬ್ದುರ್‌ರಹಿಮ್ಮಾ. ಇವನಿಗೆ ೫ ವರ್ಷಗಳಾದನಂತರ ನೂರುದ್ದೀ ಎಂದು ನಾಮಕರಣವಾಗಿದ್ದು ಕಾಲಕ್ರಮದಲ್ಲಿ ಮೌಲಾನಾ ಎಂಬ ಆಚಾರ್ಯಪದವಿಯು ದೊರೆತುದು. ಇವನ ವಿದ್ಯಾಭ್ಯಾಸವು ಹೀರಾತ್ ಮತ್ತು ಸಾಮರ್ಕಂಡ್‌ನಲ್ಲಿ ನಡೆಯಿತು. ಆ ಕಾಲದವಿದ್ಯಾಧಿಕರಲ್ಲಿ ಪ್ರತಿಭಾಸಂಪನ್ನನಾದನು. ಇವನ ವಿದ್ಯಾತಿಶಯಗಳು ಪರ್ಷಿಯಾದೇಶದಲ್ಲೆಲ್ಲೆಲ್ಲಿಯೂ ಹರಡಿದುದಲ್ಲದೆ ಬಹುದೂರದ ಇತರದೇಶಗಳಲ್ಲಿಯೂಹರಡಿ ತೈಮೂರಿನ(ತೈಮೂರ ಲಂಗ್) ಚಿಕ್ಕಪ್ಪನಾದ ಸುಲ್ತಾ ಅಬೂಸೈಯ್ಯದನು ಕ್ರಿ. ಶ. ೧೪೭೨ರಲ್ಲಿ ಹೀರಾತಿನಲ್ಲಿರುವ ತನ್ನಸಭೆಗೆ ಬರಮಾಡಿಕೊಂಡನು. ಜಾಮಿಯು ಮಕ್ಕಾಯಾತ್ರೆಯನ್ನು ಮಾಡಿ ಬಾಗ್ದಾದಿನಲ್ಲಿ ಕೆಲವುದಿವಸಗಳೆದ್ದು ಮಾರನೆಯವರ್ಷ ಹೀರಾತಿಗೆಬಂದು ಕ್ರಿ. ಶ. ೧೪೯೨ರಲ್ಲಿ ಪರಲೋಕವನ್ನೈದಿದನು.

೧೬ನೆಯ ಶತಮಾನ

ಜಯದೇವ (೨)

ಇವನು ವಿದರ್ಭದೇಶದವನು. ವಂಗದೇಶೀಯನೆಂದು ಕೆಲವರು ಹೇಳುವರು. ಬ್ರಾಹ್ಮಣನು. ಕೌಂಡಿನ್ಯ ಗೋತ್ರದವನು. ಮಹಾದೇವ ಸುಮಿತ್ರೆಯರು ಈತನ ತಂದೆ ತಾಯಿಗಳು ಎಂಬದು:—

ವಿಲಾಸೋಯದ್ವಾಚಾಮಸವ.ರಸನಿಷ್ಯಂದವಾಧುರಃ
ಕುರಂಗಾಕ್ಷೀಬಿಂಬಾಧರಮಧರಭಾವಂಗಮಯತಿ
ಕವೀಂದ್ರಃ **ಕೌಂಡಿನ್ಯ** ಸ್ಸತನ **ಜಯದೇವ**ಶ್ರವಣಯೋ
ರಯಾಸೀದಾತಿಥ್ಯಂನಕಿಮಿಹ**ಮಹಾದೇವ**ತನಯಃ ॥

ಅಪಿಚ:—

ಲಕ್ಷ್ಮಣಸ್ಯೇವಯಸ್ಯಾಸ್ಯ
ಸುಮಿತ್ರಾಗರ್ಭಜನ್ಮನಃ ॥

ಎಂಬ ಶ್ಲೋಕಗಳಿಂದ ಸ್ಪಷ್ಟವಾಗುತ್ತದೆ. ಈತನು ಕವಿತ್ವ ಪ್ರಿಯನೆಂಬದನ್ನು:—

ನಬ್ರಹ್ಮವಿದ್ಯಾನಚರಾಜ್ಯಲಕ್ಷ್ಮೀ
ಸ್ತಥಾಯಥೇಯಂಕವಿತಾಕವೀನಾಂ
ರೋಕೋತ್ತರೇಪುಂಸಿನವೇಶ್ಯಮಾನಾ
ಪತ್ರೀವಹರ್ಷಂಹೃದಯೇಕರೋತಿ ॥

ಎಂಬ ಶ್ಲೋಕವು ಪುಷ್ಟೀಕರಿಸುತ್ತದೆ. ಇವನು ವಿದರ್ಭದಲ್ಲಿದ್ದು ಹರಿಮಿಶ್ರನ ಬಳಿ ವಿದ್ಯೆಯನ್ನು ಕಲಿತನು. ಇವನಿಗೆ ಪಿಯೂಷವರ್ಷ, ಪಕ್ಷಧರನೆಂಬ ಬಿರುದುಗಳಿದ್ದವು.*

ಕಾಲ:—ಇವನು ಕ್ರಿ. ಶ. ೧೬ನೆಯ ಶತಮಾನದವನು, ಅಪ್ಪಯ್ಯದೀಕ್ಷಿತನ ಸಮಕಾಲೀನನು.

ಗ್ರಂಥಗಳು:—(೧) ಪ್ರಸನ್ನರಾಘವ
(೨) ಚಂದ್ರಾಲೋಕ
(೩) ಪಕ್ಷಧರೀಯ
(೪) ರತಿಮಂಜರೀ

ಪ್ರಸನ್ನರಾಘವ:-ಇದು ಏಳು ಅಂಕಗಳುಳ್ಳ ನಾಟಕ. ಇವನು ರಾಮಾಯಣ ಕಥಾಭಾಗವನ್ನು ತೆಗೆದುಕೊಂಡು, ಮುರಾರಿಯ ಅನರ್ಘರಾಘವದ ಪಡಿನೆಳಲನ್ನು ಸರಿಸಿ ಈ ನಾಟಕವನ್ನು ಬರೆದನಾದುದರಿಂದ ಆಂಧ್ರದೇಶೀಯರು ಇವನನ್ನು 'ಬಿಲ್ಲಮುರಾರಿ'ಎಂದು ಕರೆಯುವವಾಡಿಕೆ. ಮೊದಲನೆಯ ಅಂಕದಲ್ಲಿ ಬಾಣ ಮತ್ತು ರಾವಣಾಸುರರ ವಿಚಾರವೂ ಅವರು ಅವಮಾನ ಪಟ್ಟುದೂ ಬಹು ಸೊಗಸಾಗಿ ಚಿತ್ರಿತವಾಗಿದೆ. ಸೀತಾರಾಮರ ಪ್ರಣಯವಿಚಾರ, ರಾವಣನಿಗೂ ಜಾಮದಗ್ನ್ಯನಿಗೂ ನಡೆದ ಸಂಭಾಷಣೆ ಇವೇ ಮೊದಲಾವವು ಅತಿಮನೋಜ್ಞವಾಗಿವೆ. ಏಳನೆಯ ಅಂಕದಲ್ಲಿ ರಾಮರಾವಣರ ಯುದ್ಧ, ರಾವಣನ ಮೃತಿ, ಅಗ್ನಿಪೂತಳಾದ ಸೀತೆಯನ್ನು ಹೊಂದುವಿಕೆ ಇವನ್ನು ವಿದ್ಯಾಧರದಂಪತಿಗಳು ಹೇಳುವಂತೆ ಯೋಚಿಸಿ ಕೊನೆಯಲ್ಲಿ ಶ್ರೀರಾಮನು ಸೀತಾಲಕ್ಷ್ಮಣರೊಡನೆ ಪುಷ್ಪಕವಿಮಾನವನ್ನೇರಿ ಅಯೋಧ್ಯೆಗೆ ಬಂದು ಪಟ್ಟಾಭಿಷಿಕ್ತನಾದ ವಿಚಾರದೊಡನೆ ಕೊನೆಗೊಂಡಿದೆ. ಇವನು ಕವಿತಾಚತುರನು ಹೇಗೋ ಹಾಗೆ ಕಲ್ಪನಾಚತುರನೆಂದೂ ಹೇಳುವುದಕ್ಕೆ ಅಡ್ಡಿ ಇರದು. ಉದಾಹರಣೆಗೆ ಈ ನಾಟಕವು ಸಾಕು. ಶೈಲಿಯು ಹೃದಯಂಗಮ. ವರ್ಣನೆಗಳು ಕೇವಲ ಸ್ವಾಭಾವಿಕವಾದವು. ಮನೋಹರವಾದ ಕವಿತೆಗಳಿಂದಕೂಡಿ ಹೇಳುವುದಕ್ಕೂ, ಕೇಳುವುದಕ್ಕೂ, ಇಂಪಾಗಿಯೂ ಸೊಂಪಾಗಿಯೂ ಇರುವುದು.

ಚಂದ್ರಾಲೋಕ:—ಇದು ಲಕ್ಷಣಗ್ರಂಥ ಬಾಲಕರ ಅವಗಾಹನೆಗೆ ಸುಲಭವಾಗಿ ಬರದಿರುವುದಾಗಿ:—

ಅಲಂಕಾರೇಷುಬಾಲಾನಾಂ ಅವಗಾಹನ ಸಿದ್ಧಯೇ
ಲಲಿತಃ ಕ್ರಿಯತೇತೇಷಾಂ ಲಕ್ಷ್ಯಲಕ್ಷಣಸಂಗ್ರಹಃ

ಎಂಬ ಗ್ರಂಥಾರಂಭ ಶ್ಲೋಕದಿಂದ ವ್ಯಕ್ತಪಡುತ್ತದೆ.

* History of Classical Sanskrit Literature P. 108-109

ಇದರಲ್ಲಿ ಲಕ್ಷ್ಯ ಲಕ್ಷಣ ಸಮನ್ವಿತವಾದ ಒಂದು ನೂರು ಅಲಂಕಾರಗಳಿರುವುವಾಗಿ:—

ಇತ್ಥಂಶತಮಲಂಕಾರಾ ಲಕ್ಷ್ಯಲಕ್ಷಣಯೋತ್ಸಾನಿದರ್ಶಿತಾಃ
ಪ್ರಾಚಾಮಾಧುನಿಕಾನಾಂಚ ಮತಾನ್ಯಾಲೋಚ್ಯ ಸರ್ವಶಃ ॥

ಎಂದು ಹೇಳಿದೆ. ಇದಕ್ಕೆ 'ಒಧರಂಜನ' ಎಂಬ ವ್ಯಾಖ್ಯಾನವಿರುವುದು. ಗ್ರಂಥಾಂತ್ಯದಲ್ಲಿ "ಇತಿ ಶ್ರೀಜಯದೇವ ಕವಿವಿರಚಿತೇ ಚಂದ್ರಾಲೋಕೇ..... ಎಂದು ಮುಗಿಲ್ಪಟ್ಟಿರುವುದು. ಮಹಾ ಕವಿಯಾದ ಅಪ್ಪಯ್ಯ ದೀಕ್ಷಿತನು ವ್ಯಾಖ್ಯಾನ ರೂಪವಾಗಿ ಕುವಲಯಾನಂದ ವೆಂಬ ವ್ಯಾಖ್ಯಾನವನ್ನು ಬರೆದಿರುವನು. ಚಂದ್ರಾಲೋಕಕಾರನು 'ಸೀತಾವಿಹಾರ' ಎಂಬ ಕಾವ್ಯವನ್ನು ಬರೆದಿರುವುದಾಗಿ ಹೇಳಿದೆ. ಗ್ರಂಥವುದೊರೆಯದು.

ಪಕ್ಷಧರೀಯ:—ಇದು ನ್ಯಾಯಶಾಸ್ತ್ರ. ಇದನ್ನು ಬರೆದನಾದುದರಿಂದ ಲೋಕವು ಇವನನ್ನು ಪಕ್ಷಧರನೆಂದು ಕರೆದಿರಬಹುದಾಗಿ ತೋರುತ್ತದೆ.

ರತಿಮಂಜರೀ:—ಇದು ನಾಯಿಕಾನಾಯಕ ಲಕ್ಷಣಗಳನ್ನು ತಿಳಿಯ ಹೇಳುವ ಶೃಂಗಾರ ಗ್ರಂಥ:

ಪ್ರಸನ್ನರಾಘವ ನಾಟಕದಲ್ಲಿ ಶ್ರೀರಾಮ ಮತ್ತು ಜಾಮದಗ್ನ್ಯರ ಭಾಷಣವು ಕಡುಚೆಲುವಾಗಿರುವುದು:—

ಇದರ ಕೆಲವು ಶ್ಲೋಕಗಳು:—

ದಶಕಂಠ (ರಾವಣ) ನ ಆತ್ಮ ಶ್ಲಾಘನೆಯು ಹೀಗಿರುವುದು!—

ಮಂಡೋದರೀಕುಟಿಲಕೋಮಲಕೇಶಭಾರ
ಮಂದಾರದಾಮಮಕರಂದರ ಸಂಪಿಬಂತಃ
ವೀಣಾನಿನಾದಮಧುರಧ್ವನಿ ಮುದ್ಗಿರಂತೋ
ಮದ್ವಿಕ್ರಮಂ ಮಧುಕರಾ ಅಪಿಕೀರ್ತಯಂತಿ ॥ ೧—೬೧

ಮಂಡೋದರಿಯ ಕುಟಿಲ ಮತ್ತು ಕೋಮಲಗಳಾದ ಕೇಶಪಾಶಗಳಲ್ಲಿರತಕ್ಕ ಮಂದಾರ ಪುಷ್ಪಂಗಳಲ್ಲಿನ ಮಕರಂದವನ್ನು ಪಾನಮಾಡಿ ವೀಣೆಯ ಶಬ್ದದಂತೆ ಮಧುರಧ್ವನಿಯನ್ನು ಮಾಡುತ್ತಿರುವ ದುಂಬಿಗಳೂ ಸಹ ನನ್ನ ಪರಾಕ್ರಮವನ್ನು ಹೊಗಳುತ್ತವೆ.

ವಾರ್ತಾಚಕೌತುಕಕರೀವಿಮಲಾಚ ವಿದ್ಯು
ಲೋಕೋತ್ತರಃ ಪರಿಮಳಶ್ಚ ಕುರಂಗನಾಭೇಃ
ತೈಲಸ್ಯ ಬಿಂದುರಿವವಾರಿನಿದುರ್ನಿವಾರ
ಮೇತತ್ತ್ರಯ ಪ್ರಸರತಿಸ್ಮಯಮೇವಲೋಕೇ ॥ ೨—೨

ಆಶ್ಚರ್ಯದಾಯಕವಾದ ವಾರ್ತೆಯೂ, ನಿಷ್ಕೃಷ್ಟಜ್ಞಾನವನ್ನು ಹೊಂದಿದ ವಿದ್ಯೆಯೂ, ಲೋಕೋತ್ತರವಾದ ಪರಿಮಳವನ್ನು ಬೀರುವ ಕಸ್ತೂರಿಯೂ ಸಹ ನೀರಿನಲ್ಲಿ ಎಣ್ಣೆಯನ್ನು ಹಾಕಿದರೆ ಅದು ಹೇಗೆ ಒಂದರಲ್ಲೊಂದು ಸೇರದೆ ಬೇರೆ ಬೇರೆಯಾಗುವುದೋ ಹಾಗೆ ಈ ಮೂರೂ ಸ್ವಯಮೇವಲೋಕದಲ್ಲಿ ಹರಡಿಕೊಳ್ಳುತ್ತದೆ.

ಕ್ರೀಡಾಭಗ್ನಗಿರೀಶಚಾಪವಲಯಂ ಸೀತಾರ್ಪಿತಾಂವಕ್ಷಸಾ
ಬಿಭ್ರಾಣಾಂಕಮಲಸ್ರಜಂಜನಿಗೃಹಂಶ್ಯಂಗಾರವೀರಶ್ರಿಯೋಃ
ರಾಮಂವ್ರೀಡವಶಾದವಾಂಛಿತಮುಖಂಭೂಮಿಭುಜಾಂಪಶ್ಯತಾಂ
ಚೇತಃಕ್ರೋಧವಿಷಾದವಿಸ್ಮಯಮುದಾಮೂರ್ತಿಸ್ಸಮಾಲಿಂಗತಿ ॥ ೩-೪೪

ಲೀಲಾಮಾತ್ರದಿಂದ ಹರಧನುವನ್ನು ಭಂಗಿಸಿ ಸೀತಾದೇವಿಯಿಂದ ಪ್ರೀತಿ ಪುರಸ್ಸರವಾಗಿ ಅರ್ಪಿಸಲ್ಪಟ್ಟ ಕಮಲಪುಷ್ಪಗಳ ಹಾರದಿಂದ ಕೂಡಿದ ವಕ್ಷಸ್ಸುಳ್ಳ ಶ್ರೀರಾಮಚಂದ್ರನನ್ನು ನೋಡಿ ಸಭೆಯಲ್ಲಿ ನೆರೆದಿದ್ದ ರಾಜಮಂಡಲಿಯ ಮನಸ್ಸಿನಲ್ಲಿ ಕೋಪ, ವಿಷಾದ, ವಿಸ್ಮಯ, ಸಂತೋಷಂಗಳ ತರಂಗಗಳು ಒಂದೊಂದಾಗಿ ಏಳುತ್ತಿದ್ದವು.

ಸಭೆಯಲ್ಲಿ ನೆರೆದಿದ್ದ ಇತರರು:—

ಹಾರಃಕೆಂರಂವಿಶತ್ಯುಯದಿವಾತೀಕ್ಷ್ಣಧಾರಃಕುರುರಃ
ಸ್ತ್ರೀಣಾಂನೇತ್ರಾಣ್ಯಥವಸತುನಃಕಜ್ಜಲಂವಾಜಲಂವಾ
ಸಂಪಶ್ಯಾಮೋದ್ಯತಮಿಹಸುಖಂಪ್ರೇತಭರ್ತುರ್ಮುಖಂವಾ
ಯದ್ವಾತದ್ವಾಭವತುನವಯಂ ಬ್ರಾಹ್ಮಣೇಷುಪ್ರವೀರಾಃ ॥ ೪-೨೨

ಜಯಿಸಿದ ಪಕ್ಷದಲ್ಲಿ ಹಾರವಾಗಲಿ ಸೋತರೆ ಕೊಡಲಿಯಾಗಲಿ ಕಂಠವನ್ನು ಪ್ರವೇಶಿಸಲಿ, ಗೆದ್ದರೆ ಸ್ತ್ರೀಯರು ಉಪಯೋಗಿಸುವ ಕಜ್ಜಲ (ಅಲಂಕಾರಕ್ಕಾಗಿ ಉಪಯೋಗಿಸುವ) ಕಪ್ಪಾಗಲಿ ಸೋತರೆ ಕಣ್ಣೀರಾಗಲಿ, ಗೆದ್ದರೆ ಸುಖವನ್ನು ಹೊಂದೋಣ, ಇಲ್ಲದಿದ್ದರೆ ಯಮನ ಮುಖವನ್ನಾದರೂ ನೋಡೋಣ ನಾವೇನು ಬ್ರಾಹ್ಮಣಶ್ರೇಷ್ಠರೂ ಅಲ್ಲ. ಅಥವಾ ವೀರರೂ ಅಲ್ಲ, ಆದುದರಿಂದ ಹಾಗೋ ಹೀಗೋ ಹೇಗಾದರೂ ಆಗಿಹೋಗಲಿ.

ಅಪ್ಪಯ್ಯದೀಕ್ಷಿತ

ಕಾಂಚೀನಗರದ ಸಮೀಪದಲ್ಲಿರುವ ಅಡಯಪಲಂ[೪] ಎಂಬ ಗ್ರಾಮವು ಈತನ ಜನ್ಮಭೂಮಿ. ಭರದ್ವಾಜಗೋತ್ರದವನು. ಇವನ ಪಿತಾಮಹನ ಹೆಸರು ಆಚಾರ್ಯದೀಕ್ಷಿತರೆಂದು. ಇವರಿಗೆ ವಕ್ಷಸ್ಥಲಾಚಾರ್ಯದೀಕ್ಷಿತರೆಂಬ ಹೆಸರೂ ಇದ್ದಿತು.

೪ ಈ ಗ್ರಾಮವು ಆರಣಿಯಿಂದ ೫ ಮೈಲಿ ಕಾಂಚೀಪುರಕ್ಕೆ ೨೫ ಮೈಲಿ ದೂರದಲ್ಲಿರುವುದು

ಈ ಹೆಸರು ಬಂದುದರ ಕಥೆಯೊಂದಿರುವುದು. ವಿಜಯನಗರದ ಪ್ರಖ್ಯಾತರಾಜನಾದ ಕೃಷ್ಣದೇವರಾಯನು ಸಂಸಾರದೊಂದಿಗೆ ಕಾಂಚಿಗೆ ಹೋಗಿ ವರದರಾಜನನ್ನು ಸೇವಿಸುತ್ತಿರುವಲ್ಲಿ ಆಚಾರ್ಯದೀಕ್ಷಿತರು:—

ಕಾಚಿತ್ ಕಾಂಚನಗೌರಾಂಗೀಂ ವೀಕ್ಷ್ಯ ಸಾಕ್ಷಾದಿವ ಶ್ರಿಯಂ
ವರದಃ ಸಂಶಯಾಪನ್ನೋ ವಕ್ಷಃಸ್ಥಲಮವೈಕ್ಷತ ॥

ಸಾಕ್ಷಾತ್ ಲಕ್ಷ್ಮಿಯಂತೆ ಹೇಮಾಂಗಿಯಂತಿರುವ ಸ್ತ್ರೀಯನ್ನು (ಕೃಷ್ಣರಾಯನ ಹೆಂಡತಿ) ಕಂಡು ವರದನು ಸಂಶಯಗ್ರಸ್ತನಾಗಿ ತನ್ನ ವಕ್ಷದಲ್ಲಿ ವಾಸಿಸುತ್ತಿದ್ದ ಲಕ್ಷ್ಮಿಯು ಇರುವಳೋ ಇಲ್ಲವೋ ಎಂದು ನೋಡಿಕೊಂಡನಂತೆ) ಎಂದು ವರ್ಣಿಸಿದುದನ್ನು ಕೇಳಿ ಕೃಷ್ಣದೇವರಾಯನು ಸಂತೋಷಿಸಿ, ಆಚಾರ್ಯದೀಕ್ಷಿತರನ್ನು ವಕ್ಷಸ್ಥಲಾಚಾರ್ಯದೀಕ್ಷಿತರೆಂದು ಬಹುಮಾನಿಸಿ ಕರೆದನಂತೆ. ಈ ಶ್ಲೋಕವನ್ನು ಅಪ್ಪಯದೀಕ್ಷಿತನು ಬರೆದಿರುವ ಚಿತ್ರಮೀಮಾಂಸಾ ಗ್ರಂಥದಲ್ಲಿ ಸಂದೇಹಾಲಂಕಾರ ಧ್ವನಿಗೆ ಉದಾಹರಿಸಿಕೊಂಡಿರುವನು. ಆಚಾರ್ಯದೀಕ್ಷಿತರು ಕೃಷ್ಣದೇವರಾಯನ ಮೆಚ್ಚುಗೆಯನ್ನು ಹೊಂದಿ ಅವನ ಆಶ್ರಯದಲ್ಲಿದ್ದರು. ನೀಲಕಂಠದೀಕ್ಷಿತನು ತಾನು ಬರೆದಿರುವ ನಳಚರಿತನಾಟಕದಲ್ಲಿ ಆಚಾರ್ಯದೀಕ್ಷಿತರನ್ನು ಅರ್ಚ್ಚಕದೀಕ್ಷಿತನೆಂದು ಹೇಳಿಕೊಂಡಿರುವನು. ತಮಿಳುಭಾಷೆಯಲ್ಲಿ ಅರ್ಚ್ಚಕ ಎಂದರೆ ಆಚಾರ್ಯನೆಂದರ್ಥ. ಇವರು ಅಸೀಮವಿದ್ವಾಂಸರೂ, ಪರಮ ಭಕ್ತಾಗ್ರೇಸರರೂ ಆಗಿದ್ದರು. ಇವರಿಗೆ ಇಬ್ಬರು ಪತ್ನಿಯರು. ಮೊದಲನೆಯ ಹೆಂಡತಿಯ ಮನೆತನದವರು ಶೈವಮತಾನುಯಾಯಿಗಳಾಗಿದ್ದರು. ಎರಡನೆಯ ಹೆಂಡತಿಯ ಹೆಸರು ತೋತಾರಂಬಾ. ಶ್ರೀವೈಷ್ಣವಮತದವರಾದ ಇವರು ಮಹಾ ಪ್ರಸಿದ್ಧರಾದ ವೈಕುಂಠಾಚಾರ್ಯರ ವಂಶಸಂಭೂತರಾದ ಶ್ರೀರಂಗರಾಜಾಚಾರ್ಯರ ಮಕ್ಕಳು. ಕಾಲಕ್ರಮದಲ್ಲಿ ಇವರಿಗೆ ನಾಲ್ವರು ಗಂಡು ಮಕ್ಕಳಾದರು. ಇವರಲ್ಲಿ ಹಿರಿಯವನೇ ಶ್ರೀರಂಗರಾಜಾಧ್ವರೀ ಅಥವಾ ಶ್ರೀರಂಗರಾಜಮಖಿ. 'ಮಖಿ' ಎಂದರೆ ಯಜ್ಞಮಾಡಿದವರೆಂದು ಅರ್ಥ. ಇವನು ತಂದೆಯಾದ ಆಚಾರ್ಯದೀಕ್ಷಿತರಲ್ಲಿ ಶಿಕ್ಷೆಯನ್ನು ಹೊಂದಿ ಮಹಾ ವಿದ್ವಾಂಸನಾಗಿದ್ದು ಅದ್ವೈತವಿದ್ಯಾಮುಕುರ, ವಿವರಣದರ್ಪಣ ಮೊದಲಾದ ಗ್ರಂಥಗಳನ್ನು ಬರೆದನು. ಇವನಿಗೆ ಇಬ್ಬರು ಗಂಡುಮಕ್ಕಳು. ಇವರಲ್ಲಿ ಹಿರಿಯವನೇ ಅಪ್ಪಯ್ಯದೀಕ್ಷಿತನು. ಎರಡನೆಯವನು ಅರ್ಚ್ಚಾದೀಕ್ಷಿತ. ಈ ಅರ್ಚ್ಚಾದೀಕ್ಷಿತನು ನೀಲಕಂಠವಿಜಯ ಚಂಪೂಕಾರನಾದ ದೀಕ್ಷಿತ ನೀಲಕಂಠನ ಮಾತಾಮಹನು. ಅಪ್ಪಾದೀಕ್ಷಿತನೆಂಬದು ಮೊದಲಿನ ಹೆಸರಾದರೂ ಕಾಲಕ್ರಮದಲ್ಲಿ ಅಪ್ಪಯ್ಯದೀಕ್ಷಿತನೆಂದು ಕರೆಯುವುದೇ ರೂಢಿಯಾದುದು.

ಕಾಲ:—ದೀಕ್ಷಿತನ ಜೀವನ ಚರಿತೆಯನ್ನೂ ಕಾಲವನ್ನೂ ತಿಳಿಯಹೇಳುವ "ಅಪ್ಪಯ್ಯದೀಕ್ಷಿತೇಂದ್ರವಿಜಯ"ಎಂಬ ಗ್ರಂಥವನ್ನು ಶಿವಾನಂದ*ಯೋಗೀಂದ್ರನು

* ಪೂರ್ವಾಶ್ರಮದ ಹೆಸರು ಶೇಷದೀಕ್ಷಿತನೆಂದು.

ಬರೆದಿರುವನು. ಅದರಲ್ಲಿ ದೀಕ್ಷಿತನ ಕಾಲವನ್ನು ಸೂಚಿಸುವುವಾದ ಎರಡು ಶ್ಲೋಕಗಳಿರುವುವು.

೧) ವೀಣಾತತ್ತ್ವಜ್ಞಸಂಖ್ಯಾ (೪೬೫೪) ಲಸಿತಕಲಿಸಮಾಭಾಕ್ಷಮಾತೀಚವರ್ಷೇ
ಕನ್ಯಾಮಾಸೇಽಥಕೃಷ್ಣಾಪ್ರಥಮತಿಥಿಯುತೇಽಶ್ಯುತ್ತರಪ್ರೋತ್ಥವಾದ್ಭೇ
ಕನ್ಯಾಲಗ್ನೇಽದ್ರಿಕನ್ಯಾಪತಿರಮಿತದಯಾಶೇವಧಿರ್ವ್ಯದಿಕೇಷು

$ ೨) ಶ್ರೀದೇವ್ಯಾಪ್ರಾಗ್ಯಥೋಕ್ತಂ ಸಮಜನಿ ಹಿ ಸಮಾಪೇಽತ್ಕಕಾಂಚೀನಗರ್ಯಾಃ

ಮತ್ತೊಂದು ಶ್ಲೋಕದಲ್ಲಿ:—

ಲಗ್ನೇ ರವೀಂದುಸುತಯೋರ್ಮಕರೇ ಚ ಮಾಂದ್ಯೌ
ಮಾನೇ ಶಶಿನ್ಯಥ ವೃಷೇ ರವಿಜೇ ಚ ರಾಹೌ
ಚಾಪೇ ಗುರಾವಿತಿಸುತೇ ಮಿಥುನೇ ಕುಲಾಯಾಂ
ಶುಕ್ರೇ ಶಿಖಿನ್ಯಲಗತೇ ಕುಥಲಗ್ನ ಏವಂ ॥

ಎಂದು ಹೇಳಿ ರಾಶಿಕುಂಡಲಿಯನ್ನು ಕೊಟ್ಟಿರುವುದು.—

ಮೊದಲನೆಯ ಶ್ಲೋಕದಂತೆ ಕಲಿ ೪೬೫೪ ಶಕ. ೧೪೭೫ ವಿಕ್ರಮಶಕೆ. ೧೬೧೦ ಕೊಲ್ಲಂ ೭೯೯ ಆಗುತ್ತದೆ. ಇದರ ಜತೆಗೆ ಕ್ರಿಸ್ತಶಕವನ್ನು ಸೇರಿಸಿದರೆ ಸುಮಾರು ೧೮ನೆಯ ಸೆಪ್ಟಂಬರು ೧೫೫೩ ಆಗುತ್ತದೆ. ಎರಡನೆಯ ಶ್ಲೋಕದಂತೆ ರಾಶಿಕುಂಡಲಿಯು ಹೀಗಿರುವುದು:—



ಕೆಲವುಕಡೆ ಕ್ರಿ. ಶ. ೧೫೫೦ ಎಂದೂ ಅದು ಕಲಿ ೪೬೫೪ಕ್ಕೆ ಸರಿಹೋಗುವುದಾಗಿ ಹೇಳಿದೆ. (ಯಾದವಾಭ್ಯುದಯದ ಮುನ್ನುಡಿ ಪುಟ ೩೦)

ಇದೇ ಗ್ರಂಥದ ಮತ್ತೊಂದೆಡೆ ಕ್ರಿ. ಶ. ೧೫೫೨ ಎಂದು ಹೇಳಿದೆ.

$ ಇದು ದೀಕ್ಷಿತನನಿಜವಾದ ಕಾಲವಲ್ಲ. ಈ ಕಾಲವೂ ಮತ್ತು ರಾಶಿಕುಂಡಲಿಯೂ ಜನಜನಿತ ಕೆಥಾಧಾರಗಳಿಂದ ಸ್ಫುಟೀಕರಿಸಿ ಬರೆದುದಾಗಿ ನಮಗೆ ತೋರುತ್ತದೆ.

ದೀಕ್ಷಿತನಿಂದ ಬರೆಯಲ್ಪಟ್ಟುದಾದ "ಆತ್ಮಾರ್ಪಣಸ್ತುತಿ"ಗೆ ಶಿವಾನಂದ ವಿರಚಿತ ವ್ಯಾಖ್ಯಾನದಲ್ಲಿಯೂ ಮೇಲಣ ಶ್ಲೋಕಗಳು ಕಂಡುಬರುತ್ತವೆ. ದೀಕ್ಷಿತನ "ಸಿದ್ಧಾಂತ ಲೇಶಸಂಗ್ರಹ"ಕ್ಕೆ ಮುನ್ನುಡಿಯನ್ನು ಬರೆದಿರುವ ಭಟ್ಟ ಶ್ರೀನಾರಾಯಣ ಶಾಸ್ತ್ರಿಗಳು ದೀಕ್ಷಿತನ ಕಾಲವನ್ನು ಕ್ರಿ. ಶ. ೧೫೮೭—೧೬೬೦ ಎಂದು ಹೇಳಿರುವರು.

"ನೀಲಕಂಠವಿಜಯ" ಚಂಪೂ ಕಾರನಾದ ದೀಕ್ಷಿತ ನೀಲಕಂಠನು ಕ್ರಿ. ಶ. ೧೬೩೬ರಲ್ಲಿ ಗ್ರಂಥವನ್ನು ಬರೆದು ಮುಗಿಸಿದುದಾಗಿ ಹೇಳಿರುವನು. ಇವೆರಡನ್ನೂ ಹೆಗ್ಗುರುತಾಗಿಟ್ಟುಕೊಂಡು ಜನಜನಿತ ಕಥಾಧಾರಗಳನ್ನು ಬಿಡಲೊಪ್ಪದೆ ದೀಕ್ಷಿತನಕಾಲವು ಕ್ರಿ. ಶ. ೧೫೮೪—೧೬೩೬ ಎಂದು ಕೆಲವರೂ, ಉಳಿದವರು ಕ್ರಿ. ಶ. ೧೫೫೦, ೧೬೨೩ ರವರೆಗೆಂದೂ ಹೇಳುವರು.

ಶ್ರೀರಂಗನಿಂದ ಕೊಡಲ್ಪಟ್ಟುದಾದ 'ಅರಿವೀಲಿಮಂಗಳಂ' ಶಾಸನಗಳ (Plates) ನ್ನು ಪ್ರಸಿದ್ಧಿಗೊಳಿಸಿದ ಸಂಪಾದಕರು ದೀಕ್ಷಿತನ ಕಾಲವು ಕ್ರಿ. ಶ. ೧೫೫೪—೧೬೩೬ ಎಂದು ಒಕ್ಕಣಿಸಿರುವರು.*

"ಕುವಲಯಾನಂದ"ಕ್ಕೆ ಕ್ರಿ. ಶ. ೧೮೯೨ರಲ್ಲಿ ಮುನ್ನುಡಿಯನ್ನು ಬರೆದಿರುವ ಪಂಡಿತಹಾಲಾಸ್ಯಶಾಸ್ತ್ರಿಗಳು ದೀಕ್ಷಿತನ ಕಾಲವು ಕ್ರಿ. ಶ. ೧೫೫೨ ಎಂದು ಹೇಳಿಕೊಂಡಿರುವರು. ಹೇಗೂ ದೀಕ್ಷಿತನ ಕಾಲವು ಕ್ರಿ. ಶ. ೧೫೫೨ರ ಮೊದಲು ೧೬೩೬ರ ವರೆಗೆಂದು ಹೇಳಿದಂತಾಗುತ್ತದೆ. ಆದರೆ ಇತ್ತೀಚಿನ ವಿಚಾರಶೋಧನದಿಂದ, ಚರಿತ್ರೆ ಶಾಸನ ಮೊದಲಾದ ಆಧಾರಗಳಿಂದ ದೀಕ್ಷಿತಸಕಾಲವು ಕ್ರಿ. ಶ. ೧೫೨೦—೧೫೯೨ರವರೆಗೆಂದು ಸ್ಪಷ್ಟಪಡುತ್ತದೆಯಾದರೂ ಅಚ್ಚಾಗಿರುವ ದೀಕ್ಷಿತನ ಗ್ರಂಥಗಳನೇಕಗಳಲ್ಲಿ ಕ್ರಿ. ಶ. ೧೫೫೨—೧೬೩೬ ಎಂದು ಹೇಳಿರುವದು ಕಂಡು ಬರುತ್ತದೆ.

ದೀಕ್ಷಿತನ ಕಾಲನಿರ್ಣಯಕ್ಕೆ ಬಹುದೂರ ಪರಿಶ್ರಮಿಸಬೇಕಾದುದಿಲ್ಲ. ತಾನು ಯಾವ ಯಾವ ರಾಜಾಶ್ರಯದಲ್ಲಿದ್ದನೋ ಆಯಾ ರಾಜರ ಹೆಸರನ್ನೂ ಅವರ ಆಶ್ರಯದಲ್ಲಿ ಬರೆದ ಗ್ರಂಥಗಳನ್ನೂ ದೀಕ್ಷಿತನೇ ಹೇಳಿ ಸ್ಪಷ್ಟಪಡಿಸಿರುವನು.

ಈ ರಾಜರು ಯಾರು ಯಾರೆಂಬುದನ್ನು ತಿಳಿಯಹೇಳುವ ಮೊದಲು ಕ್ರಿ. ಶ. ೧೬ನೆಯ ಶತಮಾನದಲ್ಲಿ ದಕ್ಷಿಣ ಇಂಡಿಯಾದೇಶದ ಪರಿಸ್ಥಿತಿಯು ಹೇಗೆ ಇದ್ದಿತೆಂಬುದನ್ನು ಬರೆಯಬೇಕಾಗಿದೆ.

ವಿಜಯನಗರದ ಸರ್ವಾಧಿಕಾರವು ತುಂಗಭದ್ರೆಯಿಂದ ತಾಮ್ರಪರ್ಣಿಯವರೆಗೆ ವಿಸ್ತರಿಸಿದ್ದುದಲ್ಲದೆ ಜಿಂಜಿ, ವೆಲ್ಲೂರು, ಮೈಸೂರು, ತಂಜಾವೂರು ತಿರುವಾಂಕೂರು

*Epigraphica Indica Vol 12

ರಾಜ್ಯಗಳು ವಿಜಯನಗರದ ಅರಸರ ಆಜ್ಞಾಬದ್ಧವಾಗಿದ್ದವು. ತುಂಗಭದ್ರೆಯ ಉತ್ತರಕ್ಕೆ ತುರುಕರ ಏಳಿಗೆಗೆ ಅವಕಾಶ ಕೊಡವಂತೆ ಹಿಮ್ಮೆಟ್ಟಿಸಲ್ಪಟ್ಟಿದ್ದಿತು. ಇಂತಹ ಅಗಾಧ ಸಾಮ್ರಾಜ್ಯಶಾಸನ ಮತ್ತು ಶಾಂತಿಗಾಗಿ ಪದೇಪದೇ ಯುದ್ಧಗಳು ಜರುಗುತ್ತಿದ್ದುದು ಅಚ್ಚರಿಯಲ್ಲ. ಹೊರಗಣ ರಾಜರ ಉಪಟಳವು ಇಲ್ಲದೇ ಇದ್ದರೂ ವಿಜಯನಗರಕ್ಕೆಸೇರಿದ ಸಾಮಂತರಾಜರಲ್ಲಿ ಪರಸ್ಪರ ವೈಶಮ್ಯವೂ ಕಲಹವೂ ಆಂಗಿದಾಗ್ಯೆ ನಡೆಯುತ್ತಲಿದ್ದವು. ಕ್ರಿ. ಶ· ೧೬ನೆಯ ಶತಮಾನಾರಂಭದಲ್ಲಿ ತುಳುವ ವಂಶವು ಉಚ್ಛ್ರಾಯಗೊಂಡಿತು. ನರಸನಾಯಕನ ಮಗ ನರಸಿಂಹನು ಸಾಳ್ವ ವಂಶದ ವೀರನರಸಿಂಹನನ್ನು ಪದಚ್ಯುತನನ್ನಾಗಿ ಮಾಡಿ ಕ್ರಿ.ಶ. ೧೫೦೫ರಲ್ಲಿ ವಿಜಯನಗರದ ಸಿಂಹಾಸನವನ್ನೇರಿದನು. ಅನಂತರ ಇವನ ತಮ್ಮ ಕೃಷ್ಣದೇವರಾಯನು ಕ್ರಿ. ಶ. ೧೫೧೯ರಲ್ಲಿ ಸಿಂಹಾಸನಕ್ಕೆ ಬಂದನು. ಇವನು ಕ್ರಿ. ಶ. ೧೫೨೯ರ ವರೆಗೂ ಆಳಿ ಮುಕ್ತನಾದನು. ಕ್ರಿ. ಶ. ೧೫೧೯—೧೫೨೯ರ ಮಧ್ಯಕಾಲದಲ್ಲಿ ವಿಜಯನಗರವು ಅತ್ಯಂತೋಚ್ಛ್ರಾಯ ದೆಸೆಯಲ್ಲಿದ್ದಿತು. ಈ ಕಾಲದಲ್ಲಿಯೇ ಸಂಸ್ಕೃತಾಂಧ್ರ ಗ್ರಂಥಗಳು ಉತ್ತೇಜನಗೊಂಡವು. ಅನಂತರ ಇವನ ತಮ್ಮ ಅಚ್ಯುತರಾಯನು ಕ್ರಿ. ಶ. ೧೫೨೯ರಿಂದ ೧೫೪೨ರವರೆಗೆ ಆಳಿದನು. ಅನಂತರ ಇವನ ಅಣ್ಣನ ಮಗನಾದ ಸದಾಶಿವರಾಯನು ಕ್ರಿ. ಶ. ೧೫೪೨—೧೫೭೪ರವರೆಗೆ ರಾಜನೆನಿಸಿಕೊಂಡಿದ್ದನು. ಸದಾಶಿವರಾಯನಿಗೆ ಸಿಂಹಾಸನವು ದೊರೆತಾಗ ಇನ್ನೂ ಸಣ್ಣ ಹುಡುಗನಾಗಿದ್ದನು. ಕರ್ಣಾಟಕರಾಜರಲ್ಲಿ ರಾಮರಾಜನೆಂಬುವನು ಗತಿಸಿದಕೃಷ್ಣದೇವರಾಯನ ಅಳಿಯನಾಗಿದ್ದು ವಿಜಯನಗರದ ಸಿಂಹಾಸನವನ್ನು ಸದಾಶಿವನಿಗೆ ದೊರೆಕಿಸಿಕೊಡುವುದರಲ್ಲಿ ಮುಖ್ಯಪಾತ್ರವನ್ನು ವಹಿಸಿಕೊಂಡಿದ್ದನು. ಸದಾಶಿವನ ಚಿಕ್ಕತನದಲ್ಲಿ ರಾಜ್ಯಕ್ಕೆ ಪ್ರತಿನಿಧಿಯಾಗಿ (Regent) ರಾಜ್ಯಭಾರವನ್ನು ಮಾಡುತ್ತಿದ್ದನು. ಕಾಲ ಕ್ರಮದಲ್ಲಿ ಸದಾಶಿವನು ದೊಡ್ಡವನಾದರೂ ರಾಜ್ಯಸೂತ್ರವನ್ನು ನಡೆಯಿಸಲು ಅಶಕ್ತನಾಗಿದ್ದುದರಿಂದ ರಾಜ್ಯಭಾರವೆಲ್ಲವೂ ರಾಮರಾಜನ ಕೈಸೇರಿದುದು. ಕ್ರಿ. ಶ. ೧೫೬೫ರಲ್ಲಿನ ನಡೆದ ತಾಳೀಕೋಟೆ ಅಥವಾ ಪ್ರೌ|| ಹೀರಾಸರು ಕರೆಯುವ 'ರಾಕ್ಷಸತಗಡಿ' ಕಾಳಗದಲ್ಲಿ ರಾಮರಾಜನು ಬಲಿಯಾದನು. ಈ ಕಾಳಗವು ವಿಜಯನಗರದ ಅವನತಿಗೆ ಕಾರಣವಾದುದು. ಸಮಯವನ್ನು ಕಾಯುತ್ತಿದ್ದ ತುರುಕರಿಂದ ವಿಜಯನಗರವು ಕ್ಷಣಾರ್ಧದಲ್ಲಿ ಮಣ್ಣು ಪಾಲಾದುದು. ಸದಾಶಿವನು ಕ್ರಿ. ಶ, ೧೫೭೪ರಲ್ಲಿ ಮೃತನಾದಕೂಡಲೇ ರಾಮರಾಜನ ತಮ್ಮನಾದ ತಿರುಮಲರಾಯನು ತಾನೇ ಧೊರೆಯೆಂದು ಹೇಳಿ ಸಿಂಹಾಸನವನ್ನು ಹತ್ತಿದನು. ಇಲ್ಲಿಂದಮುಂದೆ ಪೆನಗೊಂಡೆ ಅಥವಾ ಚಂದ್ರಗಿರಿಯು ರಾಜಧಾನಿಯಾದುದು. ತಿರುಮಲರಾಯನ ಸಿಂಹಾಸನಾರೋಹಣವು ತುಳುವ ಸಂತಾನದಿಂದ ಆರವೀಡು ವಂಶಕ್ಕೆ ಮೂಲವಾದುದು. ಕ್ರಿ. ಶ. ೧೫೭೪ರಲ್ಲಿ ತಿರುಮಲರಾಯನಮಗ ಶ್ರೀರಂಗ

ರಾಜನು ಸಿಂಹಾಸನಕ್ಕೆ ಬಂದನು. ಅನಂತರ ಇವನ ತಮ್ಮನಾದ ವೆಂಕಟಪತಿಯು ಕ್ರಿ. ಶ. ೧೫೮೫ರಲ್ಲಿ ಸಿಂಹಾಸನವನ್ನು ಹತ್ತಿ ಕ್ರಿ. ಶ. ೧೬೧೪ರವರೆಗೆ ಆಳಿದನು. ಈ ರಾಜರೇ ವಿಜಯನಗರದ ಕೀರ್ತಿಯನ್ನು ಇನ್ನೂಗಳಿಸಿಕೊಂಡಿದ್ದರು.

ಜಿಂಜಿ ಎಂಬದು ವಿಜಯನಗರಕ್ಕೆ ಸೇರಿದ ಒಂದು ಜಹಗೀರಿ ಅಥವಾ ಪಾಳ್ಯಪಟ್ಟು. ಇದನ್ನು ಸೂರಪ್ಪನಾಯಕನೆಂಬುವನು ಕ್ರಿ. ಶ. ೧೫೫೦ ರಿಂದ ೧೫೭೫ ರವರಿಗೆ ಆಳುತ್ತಿದ್ದನು. ಸುಮಾರು ಕ್ರಿ. ಶ. ೧೫೭೮ ರಿಂದ ೧೬೧೦ ರವರೆಗೆ ಕೃಷ್ಣಪ್ಪನಾಯಕನೆಂಬುವನು ಆಳಿದನು. ಜಿಂಜಿಯ ವಿಚಾರವಾಗಿ ನಮಗೆ ದೊರೆಯುವ ಚರಿತ್ರಾಧಾರಗಳು ಇಷ್ಟುಮಾತ್ರ.

ವೆಲ್ಲೂರಿನ ವಿಚಾರಗಳು ಹೆಚ್ಚಾಗಿ ಶಾಸನಾದಿಗಳಿಂದ (Epigraphical Records) ತಿಳಿಯ ಬರುತ್ತವೆ. ಕ್ರಿ. ಶ. ಸುಮಾರು ೧೬ ನೆಯ ಶತಮಾನಾರ್ಧದವರೆಗೆ ಎಂದರೆ ಕ್ರಿ. ಶ. ೧೫೪೯ ರವರೆಗೆ ಚಿನ್ನವೀರಪ್ಪನಾಯಕನೆಂಬುವನು ಆಳುತ್ತಿದ್ದುದಾಗಿಯೂ, ಸುಮಾರು ಕ್ರಿ. ಶ. ೧೫೪೯ ರಿಂದ ಇವನ ಮಗ ಚಿನ್ನ ಬೊಮ್ಮನಾಯಕನು ಕ್ರಿ. ಶ. ೧೫೭೮ ರವರೆಗೆ ಆಳುತ್ತಿದ್ದುದಾಗಿಯೂ ತಿಳಿಯ ಬರುತ್ತದೆ. ಅನಂತರ ಇವನ ಮಗ ಲಿಂಗನಾಯಕನು ಕ್ರಿ. ಶ. ೧೬೧೪ ರವರೆಗೆ ಆಳಿದನು.

ಕೃಷ್ಣ ದೇವರಾಯನು ವಿಜಯನಗರದಲ್ಲಿ ಆಳುತ್ತಿದ್ದಾಗ ತಂಜಾವೂರಿನಲ್ಲಿ ವೀರಶೇಖರಚೋಳನೆಂಬುವನು ರಾಜನಾಗಿದ್ದನು. ಕೃಷ್ಣದೇವರಾಯನು ಮುಖ್ಯ ಮುಖ್ಯವಾದ ಗಡಿಗಳಲ್ಲಿ ತನ್ನ ಕಡೆಯವರನ್ನು ನೇಮಿಸುವುದಾದರೆ ತನ್ನ ರಾಜ್ಯಕ್ಕೆ ಯಾವ ತೊಂದರೆಯೂ ಬಾರದೆಂದು ಯೋಚಿಸಿ ಸಾಳ್ವನಾಯಕ (ವೀರನರಸಿಂಹ, ಚಿಲ್ಲಪ್ಪ) ನೆಂಬವನನ್ನು ಚೋಳದೇಶಗಳಿಗೆ ಸರ್ವಾಧಿಕಾರಿಯಾಗಿ ನಿಯಮಿಸಿದ್ದನು. ಸಾಳ್ವನಾಯಕನು ಮಹಾಮೇಧಾವಿಯಾಗಿದ್ದು ರಾಜ್ಯಶಾಸನ ಧುರೀಣನಾಗಿದ್ದನು. ಕೃಷ್ಣದೇವರಾಯನು ಮೃತನಾದಕೂಡಲೇ ಇವನು ದಂಗೆ ಎದ್ದನು. ಅಚ್ಯುತರಾಯನು ಇದನ್ನು ತಿಳಿದು ಸಸೈನ್ಯನಾಗಿ ಇವನ ಮೇಲೆ ದಂಡೆತ್ತಿಬಂದು ಕ್ರಿ. ಶ. ೧೫೩೫ರಲ್ಲಿ ಇವನನ್ನು ಸೋಲಿಸಿ ಕೈಸೆರೆಹಿಡಿದನು. ಇವನು ಬಿಡುಗಡೆ ಹೊಂದಿದನೇ ಇಲ್ಲವೇ ರಾಜ್ಯವಾಳಿದನೇ ಹೇಗೆಂಬ ವಿಚಾರದಲ್ಲಿ ಚರಿತ್ರೆಯು ಸ್ತಬ್ಧವಾಗಿದೆಯಾದರೂ ಸುಮಾರು ೮-೧೦ ವರ್ಷಗಳವರೆಗೆ ಪುನಃ ರಾಜ್ಯವನ್ನಾಳಿರಬೇಕೆಂದು ಊಹಿಸಲು ಅವಕಾಶವಿದೆ. ಕೆಲವುಜನ ಪಂಡಿತರು ಸಾಳ್ವನಾಯಕ, ವೀರನರಸಿಂಹ, ಚಿಲ್ಲಪ್ಪನೆಂಬ ಇವನನ್ನು ತುಳುವ ವಂಶದ ಮೂಲಪುರುಷನಿಂದ, ಪದಭ್ರಷ್ಟನಾಗಿ ಮಾಡಲ್ಪಟ್ಟ ವಿಜಯನಗರದ ಸಾಲ್ವರಾಜನಾಗಿರಬೇಕೆಂದು ಅಭಿಪ್ರಾಯ ಪಡುವರು. ಇದು ನಿಜವಾಗಿದ್ದರೆ ಅಚ್ಯುತನು ದಂಗೆ ಎದ್ದಿದ್ದ ಚಿಲ್ಲಪ್ಪನನ್ನು ಅಡಗಿಸಿ,

ಅವನ ಪ್ರಾರ್ಥನೆಯನ್ನು ಮನ್ನಿಸಿ, ರಾಜ್ಯವನ್ನು ಹಿಂದಕ್ಕೆ ಕೊಟ್ಟಿದ್ದರೂ ಇರ ಬಹುದು. ಹೇಗಾದರೂ ಇರಲಿ! ಕ್ರಿ. ಶ. ೧೫೪೯ ಕ್ಕೆ ಮುಂಚೆಯೇ ತಂಜಾವೂರು ನಾಯಕರ ನೂತನ ವಂಶಾವಳಿಯು ಸ್ಥಾಪಿತವಾಗಿದ್ದುದಾಗಿ ಹೇಳಬಹುದಾಗಿದೆ.

ಸೆವ್ವಪ್ಪನಾಯಕನೂ ಮತ್ತು ಅಚ್ಯುತರಾಯನೂ ಇಬ್ಬರೂ ಷಡ್ಡಕರು. (ಅಕ್ಕತಂಗಿಯರನ್ನು ಮದುವೆ ಮಾಡಿಕೊಂಡವರು) ಅಚ್ಯುತನು ಚೋಳ ರಾಜ್ಯವನ್ನು ಸ್ತ್ರೀಧನವಾಗಿ ಸೆವ್ವಪ್ಪನಿಗೆಕೊಟ್ಟಿದ್ದನು. ಸೆವ್ವಪ್ಪನು ತಂಜಾವೂರಿನಲ್ಲಿ ಕ್ರಿ. ಶ. ೧೫೭೭ ರವರೆಗೆ ಆಳಿದನಂತರ ಇವನ ಮಗ ಅಚ್ಯುತಪ್ಪನು ಕ್ರಿ. ಶ. ೧೫೯೭ರ ವರೆಗೂ ಆಳಿದುದಾಗಿ ಗೊತ್ತಾಗುತ್ತದೆ.

ಕೃಷ್ಣದೇವರಾಯನು ವಿಜಯನಗರವನ್ನಾಳುತ್ತಿದ್ದಾಗ ಮಧುರೆಯಲ್ಲಿ ಶ್ರೀವಲ್ಲಭದೇವಪಾಂಡ್ಯನೆಂಬವನು ಆಳುತ್ತಿದ್ದನು. ಅನಂತರ ಚಂದ್ರಶೇಖರ ಪಾಂಡ್ಯನೆಂಬುವನು ಸಿಂಹಾಸನಕ್ಕೆ ಬಂದನು. ಇವನು ಅಚ್ಯುತದೇವರಾಯನ ಸಮಕಾಲೀನನು. ಚಂದ್ರಶೇಖರಪಾಂಡ್ಯನು ರಾಜ್ಯನಿರ್ವಹಣ ಮಾಡಲು ಅಸಮರ್ಥ ನಾಗಿರುವುದನ್ನು ತಿಳಿದು ತಂಜಾವೂರಿನ ವೀರಶೇಖರಚೋಳನು ಕ್ರಿ. ಶ. ೧೫೩೭ ರಲ್ಲಿ ಪದಚ್ಯುತನನ್ನಾಗಿ ಮಾಡಿ ಓಡಿಸಿಬಿಟ್ಟನು. ಚಂದ್ರಶೇಖರಪಾಂಡ್ಯನು ರಾಜ್ಯವನ್ನು ಬಿಟ್ಟೋಡಿ ಅಚ್ಯುತದೇವರಾಯನ ಬಳಿಗೆ ಬಂದು ರಕ್ಷಣೆಯನ್ನು ಪ್ರಾರ್ಥಿಸಿದನು. ಅಚ್ಯುತದೇವರಾಯನು ವೀರಶೇಖರನನ್ನು ಮೂದಲಿಸಿ ಚಂದ್ರ ಶೇಖರಪಾಂಡ್ಯನಿಗೆ ರಾಜ್ಯವನ್ನು ಕೊಡಿಸುವಂತೆ ನಾಗಮನಾಯಕನನ್ನು ಕಳುಹಿ ಸಿದನು. ಯುದ್ಧದಲ್ಲಿ ವೀರಶೇಖರನು ವೀರಸ್ವರ್ಗವನ್ನು ಹೊಂದಲು ಚಂದ್ರ ಶೇಖರ ಪಾಂಡ್ಯನಿಗೆ ಪುನಃ ಮಧುರೆರಾಜ್ಯವು ದೊರೆಯಿತು. ಸಂತಾನಹೀನನಾದ ಚಂದ್ರಶೇಖರಪಾಂಡ್ಯನು ರಾಜ್ಯವನ್ನು ನಾಗಮನಾಯಕನ ಮಗ ವಿಶ್ವನಾಥ ನಾಯಕನಿಗೆ ಕೊಟ್ಟು ಸುಮಾರು ಕ್ರಿ. ಶ. ೧೫೪೨ರಲ್ಲಿ ಪರಲೋಕವಾಸಿಯಾದನು. ಈ ರೀತಿ ಮಧುರೆಯ ನಾಯಕವಂಶವು ಸ್ಥಾಪಿತವಾದುದು. ಕಾಲಕ್ರಮದಲ್ಲಿ ಸದಾಶಿವನಿಗೆ ಪ್ರತಿಯಾಗಿ ರಾಜ್ಯಸೂತ್ರವನ್ನು ನಡೆಯಿಸುತ್ತಿದ್ದ ರಾಮರಾಜನ ದಾಯಾದಿ (cousins) ವಿಠ್ಠಲ ಮತ್ತು ಚಿನ್ನತಿಮ್ಮ ಇವರು ದಕ್ಷಿಣದಿಕ್ಕಿನ ಸರ್ವ ಸ್ವಾಮಿತ್ವವನ್ನು ಹೊಂದಿದ್ದರಾದುದರಿಂದ ವಿಶ್ವನಾಥನ ಅಧಿಕಾರವು ಕೇವಲ ನಾಮ ಮಾತ್ರವಾಗಿದ್ದಿತು. ಮೇಲಣ ಹೇಳಿಕೆಯ ಸಮರ್ಥನಕ್ಕಾಗಿ ವಂಶಾವಳಿಯನ್ನು ಬರೆದು ತೋರುವೆವು.



ಈ ರೀತಿ ಕ್ರಿ. ಶ. ೧೬ನೆಯ ಶತಮಾನದ ರಾಜಕೀಯ ಪರಿಸ್ಥಿತಿಯನ್ನು ಸಂಗ್ರಹವಾಗಿ ಹೇಳಿದ ಅನಂತರ ದೀಕ್ಷಿತನ ಕಾಲನಿರ್ಣಯಕ್ಕೆ ಈ ವಂಶಾವಳಿಯು ಎಷ್ಟು ಸಹಕಾರಿಯಾಗುವುದೆಂಬುದನ್ನು ಹೇಳುವೆವು.

ದೀಕ್ಷಿತನಪ್ರಥಮಾಶ್ರಯದಾತನುಚಿನ್ನತಿಮ್ಮ. ಇವನು ವೇದಾಂತದೇಶಿಕನ ಯಾದವಾಭ್ಯುದಯಕಾವ್ಯಕ್ಕೆ ವ್ಯಾಖ್ಯಾನವನ್ನು ಬರಯಬೇಕೆಂದು ಕೇಳಿಕೊಂಡ ಮೇರೆ ದೀಕ್ಷಿತನುಬರೆದುದಾಗಿ ಈ ಕೆಳಗಣ ಶ್ಲೋಕಗಳಿಂದ ವ್ಯಕ್ತವಾಗುತ್ತದೆ.

ವಂಶೇ ಮಹತಿ ಸುಧಾಂಶೋಃ ಪಾಂಡುಸುತಪ್ರವರಚರಿತಪರಿಪೂತೇ
ಆಸೀದಪಾರಮಹಿಮಾ ಮಹೇಶ್ವರೋ **ರಾಮರಾಜ**ಇತಿ॥

ಉದಪುದಿ ತಿಮ್ಮರಾಜಃ ಜತೋಂಬುಧೇರಿವ ಸುಧಾಮಯಾನ್ಮಹೀರಾಜಃ
ಹೃದಯಂಗಮಂ ಮುರಾರೇರ್ಯಮುಲಂಚಕ್ರೇಪ್ರಭೇವ ಗೋಪೀದೇವೀ॥

ರಾಜರ್ಷಿರೇವ ಸುಚಿರಂ ಧುರಿ ಸ್ಥಿತಃ ಸತ್ಯಸಂಧಾನಾಂ
ಅರುಧ್ಯ ವೇಂಕಟೇಶ್ವರಮಲಭತೋಕೋತ್ತರ್ಣಪುರ್ತ್ಯಾ ॥

ಕೇಷು ಮಹಿತೇಷು ಜಯತಿ ತ್ರಿದಿವಾಧೀಶೇಷು ಪದ್ಮಬಂಧುರಿವ
ಶ್ರೀಚಿನ್ನತಿಮ್ಮರಾಜಃ ಪ್ರತಾಪನೀರಾಜತಕ್ಷ್ಮಾವಲಯಃ
ಪ್ಲವಮಾನಸ್ಯ ಸಮುದ್ರೇಸೇತೋಶ್ಚಿಧಿಲ್ಯಶಂಕಯಾನಿಹತಾಃ
ಕೇಲಾ ಇವ ಭಾಸಂತೇ ತತ್ಪ್ರಯಾ ಯಸ್ಯ ಪೃಥುಜಯಸ್ತಂಭಾಃ
ವಲಯಾಗ್ರಿಕಟಕನಿಕಟೇ ವಿಂಧ್ಯ ಇವಾಭಾತಿ ಯಜ್ಜಯಸ್ತಂಭಃ
ಅದ್ಯಾಪಿ ನಾಗತೋಽಸೀ ತ್ಯಗಸ್ತ್ಯಮನುಯೋಕ್ತುಮಂತಿಕೋನ್ಮಗ್ನಃ
ಅಭವತಿ ಕ ಲಮೇಷಂ ರವಿಕರನಿಕರಂ ತಿರಸ್ಕುರತೇ
ಯದ್ದಾನವಾರಿಸಾಗರಜನ್ಮ ಜಗದದ್ಭುತೋಯಶಶ್ಚಂದ್ರಃ

ಸೂಕ್ತಿಮಯ್ಯೈಃ ಸ್ವಪ್ರಭವೈರವ್ಯಪೈರ್ಯಃ ಸದಾ ವಿಬುಧಾರ್ಚಿತಾಯ
ಕುಲಕೂಟಸ್ಥಸ್ಯೇಂದೋರಾಚಾರಂ ಯೋಽನುವರ್ತತೇ ಧೀರಃ

ಸಾಮಂತ್ಯಗೋಷ್ಠೀಂ ಸತಸಮಾತಿಷ್ಠನ್ನಯಮೇಕದಾ
ಯಾದವಾಭ್ಯುದಯಂ ಕಾವ್ಯಂ ವ್ಯಾಕ್ರೀಷೀದ್ಗುರುಷಾಂ ಮುಖಾತ್

ಆವ್ಯಾಖ್ಯಾತಕಥಾಯಾ ಪೂರ್ವೈರನಭಿವ್ಯಕ್ತಭುವಕಂ
ಅಧೃಷ್ಯಮಿವಶಿಲ್ಪಜ್ಞೈರಧಿಜಗತಂ ಹರಿನ್ಮಣಿಂ

ತದಾಕರ್ಣನತಃ ಸದ್ಯ ಸ್ಸಮುದಂಚತ್ಕುತೂಹಲಃ
ವಿದುಷಾಂ ಪುರತಸ್ತಸ್ಯ ವಿವೃತೌ ಮಾಂ ನ್ಯಯೋಜಯತ್

ಕವಿತಾಕರ್ಕಶಸಂಹಸ್ಯ ಕಾವ್ಯಮೇತದ್ಯಥಾಮತಿ
ವಿವೃಣ್ವೇಽಹಂ ಮಹೀಪಾಲನಿಯೋಗಬಹುಮಾನತಃ ॥

ಚಿನ್ನ ತಿಮ್ಮನು ಕ್ರಿ. ಶ. ೧೫೪೨ರಿಂದ ಸುಮಾರು ೧೫೫೦ರವರೆಗೆ ದಕ್ಷಿಣದಲ್ಲಿ ಸರ್ವಾಧಿಕಾರಿಯಾಗಿದ್ದುದಾಗಿ ಹೇಳಿದೆ. ಸದಾಶಿವನಿಗೆ ವಿಜಯನಗರದಸಿಂಹಾಸನವು ದೊರೆತಕೂಡಲೇ ವಿಜಯನಗರಕ್ಕೆ ಕಪ್ಪಕೊಡದೆ ದಂಗೆಯೆದ್ದ ತಿರುವಾಂಕೋಡು ಮೊದಲಾದ ದಕ್ಷಿಣದಲ್ಲಿನ ಜಹಗೀರುದಾರರುಗಳನ್ನು ಅಡಗಿಸುವುದಕ್ಕಾಗಿ ವಿಠ್ಠಲ ನೊಡನೆ ಸಸೈನ್ಯನಾಗಿ ಚಿನ್ನ ತಿಮ್ಮನನ್ನು ಕಳುಹಿಸಿದನು. ಚಿನ್ನ ತಿಮ್ಮನು ದಂಗೆಯವರನ್ನು ಸದೆಬಡೆದು ಚೋಳ, ಕೇರಳ ಮತ್ತು ಪಾಂಡ್ಯರಾಜರನ್ನು ಜಯಿಸಿ ತಿರುವಾಂಕೋಡು ಮತ್ತು ಕೋರಮಾಂಡಲ ತೀರವನ್ನು ವಶಪಡಿಸಿಕೊಂಡನು. ಇವನು ತಿರುಚನಾಪಳ್ಳಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ಹತ್ತುವರ್ಷಗಳವರೆಗೆ ಮಧುರೆಯನ್ನು ಸುಸ್ಥಿತಿಗೊಳಿಸುವುದರಲ್ಲಿಯೇಕಳೆದನು. ಆಗ ವಿಶ್ವನಾಥನಾಯಕನು ಮಧುರೆಯ ಸರ್ವಾಧಿಕಾರಿಯಾಗಿದ್ದು ಚಿನ್ನ ತಿಮ್ಮನಿಗೆ ಸಾಮಂತನಾಗಿದ್ದನು. ಚಿನ್ನ ತಿಮ್ಮನ ವಿಜಯಗಳನ್ನು ಕುರಿತು ಹೇಳುವ ದೀಕ್ಷಿತನ ವರ್ಣನೆಯು ಸಾಧುವಾದುದಾಗಿದೆ. ಕ್ರಿ. ಶ. ೧೫೫೦ರಲ್ಲಿ ಚಿನ್ನ ತಿಮ್ಮನು ದಕ್ಷಿಣ ದಿಂದ ವಿಜಯಿಯಾಗಿ ಹಿಂತಿರುಗಿದನಂತರ ಪ್ರಾಯಃ ಇದರ ಜ್ಞಾಪಕಾರ್ಥವಾಗಿ ಯಾದವ್ಯಾಭ್ಯುದಯ ವ್ಯಾಖ್ಯಾನವನ್ನು ಬರೆದಿರಬೇಕು.

ದೀಕ್ಷಿತನ ಎರಡನೆಯ ಆಶ್ರಯದಾತನು ವೆಲ್ಲೂರಿನ ಚಿನ್ನ ಬೊಮ್ಮನಾಯಕನು. ಕ್ರಿ. ಶ. ೧೫೪೯—೧೫೭೨ ರವರೆಗೆ ಬರೆಯಲ್ಪಟ್ಟಿರುವ ಶಾಸನಗಳಲ್ಲಿ ಇವನ ವಿಚಾರವಾಗಿ ಹೆಚ್ಚಾಗಿ ಹೇಳಿರುವುದು ಕಂಡುಬರುತ್ತದೆ. ಕ್ರಿ. ಶ. ೧೫೭೨ ರಲ್ಲಿ ಬರೆಯಲ್ಪಟ್ಟುದಾದ 'ಆಡಿಯಾಪಲಂ' ಶಾಸನದಲ್ಲಿ ಚಿನ್ನ ಬೊಮ್ಮನ ವಿಚಾರವಾಗಿ ಹೇಳುವಾಗ ಭೂತಕಾಲ ಪ್ರಯೋಗವಿರುವುದರಿಂದ ಚಿನ್ನ ಬೊಮ್ಮನಾಯಕನು ಕ್ರಿ ಶ ೧೫೭೨ ಮತ್ತು ೧೫೭೨ ರ ಮಧ್ಯಕಾಲದಲ್ಲಿ ಮೃತಪಟ್ಟಿರಬೇಕಾಗಿ ತೋರು ತ್ತದೆ. ಇವನ ಕಾಲದಲ್ಲಿ ದೀಕ್ಷಿತನು ಶೈವಸಂಬಂಧವಾದ ಅನೇಕ ಗ್ರಂಥಗಳನ್ನು

ಬರೆದನು. ಶಿವಾರ್ಕಮಣಿದೀಪಿಕಾ ಮೊದಲಾದ ಶಿವಾಚಾರ ಚರಿತ್ರೆಗಳಲ್ಲಿ ಚಿನ್ನ ಬೊಮ್ಮನ ಹೆಸರನ್ನು ಸ್ಪಷ್ಟವಾಗಿ ಹೇಳಿಕೊಂಡಿರುವನು. ಶಿವಾಚಾರಚಂದ್ರಿಕೆಯು ಮುಖ್ಯವಾಗಿ ಚಿನ್ನಬೊಮ್ಮನನ್ನು ಶೈವಾರಾಧಕನನ್ನಾಗಿ ಮಾಡುವುದಕ್ಕಾಗಿ ಬರೆಯಲ್ಪಟ್ಟುದಾಗಿದೆ. ಶಿವಾರ್ಕಮಣಿದೀಪಿಕೆಯನ್ನು ಬರೆದು ಮುಗಿಸಿದ ಸಂತೋಷಕ್ಕಾಗಿ ಚಿನ್ನಬೊಮ್ಮನು ದೀಕ್ಷಿತನಿಗೆ ಕನಕಾಭಿಷೇಕವನ್ನು ಮಾಡಿದುದಾಗಿ ಹೇಳಿದೆ. ' ಇದು ಸುಮಾರು ಕ್ರಿ. ಶ. ೧೫೮೨ ರಲ್ಲಿ ನಡೆದಿರಬೇಕಾಗಿ ತೋರುತ್ತದೆ. ಈ ಕೆಳಗೆ ಹೇಳುವ ಪ್ರಮಾಣಗಳಿಂದ ಚಿನ್ನ ಬೊಮ್ಮನ ಬಳಿ ದೀಕ್ಷಿತನ ಸಂಬಂಧವು ಸ್ಪಷ್ಟಪಡುತ್ತದೆ

(೧) " ಶಿವಾರ್ಕಮಣಿದೀಪಿಕಾವಸಾನಲಬ್ಧಕನಕಸ್ನಾನಃ ಪ್ರಶಂಸಿತಸ್ಸಮರ ಪುಂಗವಯಜ್ವನಾ " ಯಥಾ:—

ಹೇಮಾಭಿಷೇಕಸಮಯೇ ಪರಿತೋ ನಿಷಣ್ಣಾ
ಸೌವರ್ಣಸಂಹತಿ ಮಿಷಾಚ್ಚಿನಬೋಮ್ಮಭೂಪಃ ।
ಅಪ್ಪಯ್ಯದೀಕ್ಷಿತ ಮಣೇರನವದ್ಯವಿದ್ಯಾ
ಕಲ್ಪದ್ರುಮಸ್ಯ ಕುರುತೇ ಕನಕಾಲವಾಲಂ ॥

ಎಂದೂ,

(೨) ನೀಲಕಂಠನ ನಳಚರಿತ'ನಾಟಕದಲ್ಲಿ:—

ನಾನಾದೇಶನರೇಂದ್ರಮಂಡಲಮಹಾಯತ್ನಾತಿದೂರೀಭವ
ತ್ಕಾದಾಚಿತ್ಕಪದಾರವಿಂದವಿನತೇ ರಪ್ಪಯ್ಯಯಜ್ವ್ನಪ್ರಭೋಃ
ಶೈವೋತ್ಕರ್ಷಪರಿಷ್ಕೃತೈರಹರಹಸ್ಸೂಕ್ತೈಸ್ಸುಧಾಲಾಲಿತೈಃ
ಫುಲ್ಲತ್ಕರ್ಣಪುಟಸ್ಯ ಬೋಮ್ಮನೃಪತೇಃ ಪುಣ್ಯಾನಿ ಗಣ್ಯಾನಿಕಂ ॥

ಎಂದೂ,

(೩) ಬೇರೊಬ್ಬನಿಂದ:—

ಯೇನ ಶ್ರೀಚಿನ್ನ ಬೋಮ್ಮಕ್ಷಿತಿಪವಲಭಿದಃ ಕೀರ್ತಿರವ್ಯಾಹತಾऽಸೀತ್ ॥
—ಕ್ರಿ. ಶ. ೧೫೮೨ರ ಅಡಿಯಾಪಲಂ ಶಾಸನ.

ಎಂದೂ ಹೇಳಿರುವುದು ಕಂಡುಬರುತ್ತದೆ.

ಈ ಅಡಿಯಾಪಲಂ ಶಾಸನದ ಮುಖ್ಯಾಭಿಪ್ರಾಯವು ಅಪ್ಪಯ್ಯದೀಕ್ಷಿತನು ಕ್ರಿ. ಶ. ೧೫೮೨ರಲ್ಲಿ ಸ್ವಗ್ರಾಮವಾದ ಅಡಿಯಾಪಲಂನಲ್ಲಿ ಕಾಲಕಂಠೇಶ್ವರನ ದೇವಾಲಯವನ್ನು ಕಟ್ಟಿಸಿದನೆಂದು ಹೇಳಿರುವುದನ್ನು ನೋಡಿದರೆ, ದೀಕ್ಷಿತನು ಕನಕಾಭಿಷೇಕಾನಂತರ ಈ ಸುವರ್ಣಗಳನ್ನು ತೆಗೆದುಕೊಂಡುಹೋಗಿ ಈ ದೇವಾಲಯವನ್ನು ಕಟ್ಟಿಸಿರಬೇಕಾಗಿ ಬೋಧೆಯಾಗುತ್ತದೆ.

ಅಪ್ಪಯ್ಯ ದೀಕ್ಷಿತನ ಮೂರನೆಯ ಆಶ್ರಯದಾತನು ಪೆನಗೊಂಡೆಯ ವೇಂಕಟಪತಿ ದೇವರಾಯ. ಇವನು ಕ್ರಿ. ಶ. ೧೫೮೫ರಲ್ಲಿ ಸಿಂಹಾಸನಕ್ಕೆ ಬಂದನು.

ದೀಕ್ಷಿತಕೃತ **ಕುವಲಯಾನಂದದ** ಕೊನೆಯಲ್ಲಿ:—

ಅಮುಂ ಕುವಲಯಾನಂದಮಕರೋದಪ್ಪದೀಕ್ಷಿತಃ
ನಿಯೋಗಾದ್ವೇಂಕಟಪತೇರ್ನಿರೂಪಾಧಿಕೃಪಾನಿಧೇಃ ॥

ಎಂಬ ಶ್ಲೋಕವ್ದು.

ವಿಧಿರಸಾಯನವೆಂಬ ಗ್ರಂಥದಲ್ಲಿ ವೆಂಕಟಪತಿರಾಜನ ವಿಚಾರವಾಗಿಹೇಳುವ:-

ಪ್ರಾಪ್ತಂ ತತ್ಪಪಗೇಯಂ ಕಿಲ ಯದಿಹ ಕಿರ್ಯಾ ಪೂರಣೇಯೋಽಸ್ತಿ ನಾಂಶೋ
ನಾನಿಷ್ಪಂ ವಾನವರ್ತ್ಯಂ ನಿಜವಿಷಯಗತಯಾ ದೃಶ್ಯತೇ ಕಿಂಚಿದತ್ರ॥
ಕಿಂ ನು ವ್ಯಾಪಾರಮೇಷ ಪ್ರಥಯತಿ ಫಲಸಂಯೋಜನಾರ್ಥಂಪರೇಷಾಂ
ಪ್ರಾಪ್ತಃ ಪುಣ್ಯೈರಗಣ್ಯೈರಿವ ನಿಬುಧ ಗಣೋ **ವೆಂಕಟಕ್ಷ್ಮಾಣಿಪಾಲಂ**॥

ಎಂಬ ಶ್ಲೋಕವು ಕಂಡುಬರುತ್ತದೆ.

ಹೀಗೆ ಅಪ್ಪಯ್ಯ ದೀಕ್ಷಿತನು ಕೆಲವ್ಕಾಲದವರೆಗೆ ವೆಂಕಟಪತಿರಾಜನ ಆಶ್ರಯದಲ್ಲಿದ್ದು ಆತನಿಗೆ ಉತ್ತರದೇಶದಿಂದ ತನ್ನ ಬಳಿಗೆ ಬಂದ ಮಹಾವೈಯ್ಯಾಕರಣ ಭಟ್ಟೋಜೀ ದೀಕ್ಷಿತನ ಪರಿಚಯವನ್ನು ಮಾಡಿಕೊಟ್ಟಹಾಗೂ, ಇವನು ಶಾಸ್ತ್ರಾಧ್ಯಯನಕ್ಕಾಗಿ ಕಾಶಿಯನ್ನು ಬಿಟ್ಟು ದೀಕ್ಷಿತನಬಳಿಗೆ ಬಂದಹಾಗೂ ತಿಳಿಯಬರುತ್ತದೆ. ಭಟ್ಟೋಜಿಯು ಕಾಶಿಯನ್ನುಬಿಟ್ಟು ಬರುವ ಮೊದಲೇ ಪ್ರಸಿದ್ಧವಾದ 'ಸಿದ್ಧಾಂತ ಕೌಮುದಿ'ಯನ್ನು ಬರೆದು ಮುಗಿಸಿದ್ದುದಾಗಿಯೂ ಈ ವೇಳೆಗೆ ದೀಕ್ಷಿತನ ವಿದ್ಯಾವೈದುಷ್ಯವಿಚಾರವು ಉತ್ತರದೇಶದಲ್ಲಿ ಎಲ್ಲೆಲ್ಲಿಯೂ ಹರಡಿಕೊಂಡಿದ್ದಿತೆಂದೂ ವೆಂಕಟಪತಿ ರಾಜನು ಕೇಳಿಕೊಂಡಮೇರೆ ಭಟ್ಟೋಜಿಯು ತತ್ತ್ವಕೌಸ್ತುಭವೆಂಬುದನ್ನು ಬರೆದುದಾಗಿಯೂ ಹೇಳಿದೆ. ಭಟ್ಟೋಜಿಯು ಆಚಾರ್ಯ ದೀಕ್ಷಿತನ ವಿಚಾರವಾಗಿ ತಂತ್ರ ಸಿದ್ಧಾಂತದೀಪಿಕೆಯಲ್ಲಿ:—

ಅಪ್ಪಯ್ಯದೀಕ್ಷಿತೇಂದ್ರಾನಶೇಷವಿದ್ಯಾಗುರೂನಹಂ ವಂದೇ
ಯತ್ಕೃತಿಬೋಧಾಬೋಧೌ ವಿದ್ವದವಿದ್ವದ್ಭಿಭಾಜಕೋಪಾಧೀ ॥

ಎಂದು ಕೊಂಡಾಡಿರುವುದು ಕಂಡುಬರುತ್ತದೆ.‡

ಹೀಗೆ ದೀಕ್ಷಿತನ ಕಾಲವು ಚಿನ್ನತಿಮ್ಮನ ಮೊದಲು ಎಂದರೆ ಕ್ರಿ. ಶ. ೧೫೪೨ ರಿಂದ ವೆಂಕಟಪತಿರಾಜನ ವರೆಗಿನ ಸುಮಾರು ೫೦ ವರ್ಷಗಳ ಕಾಲವು ರಾಜಾಶ್ರಯದಲ್ಲಿ ಕಳೆದುಹೋಗಿದೆ. ಇವನ ಆದ್ಯಂತ ಜೀವಮಾನವು ೭೨ ವತ್ಸರಗಳೆಂದು ಪರಿಗಣಿತವಾಗಿದೆ. ಆದುದರಿಂದ ಉಳಿದ ೨೨ ವರ್ಷಗಳು ದೀಕ್ಷಿತನ ಬಾಲ್ಯವೆಂದು ಹೇಳಲಾಗುತ್ತದೆ. ದೀಕ್ಷಿತನ ವಿದ್ವತ್ಪ್ರಭೆಯ ಪ್ರಸರಣದ ಕಾಲಕ್ಕೆ

‡ ತಂತ್ರಸಿದ್ಧಾಂತದೀಪಿಕಾ, ತತ್ಪಕೌಸ್ತುಭಕಾರನು ಭಟ್ಟೋಜೀದೀಕ್ಷಿತನಲ್ಲ.
See Bhattojee's Life

ಶೈಶವವುಕಳೆದು ಯೌವನವು ತಲೆದೋರಿರಬೇಕು. ಮಹಾರಾಜನಾದ ಚಿನ್ನ ತಿಮ್ಮನು ಅಷ್ಟೊಂದು ಸಭಾಪಂಡಿತರ ಮಧ್ಯದಲ್ಲಿ ದೀಕ್ಷಿತನ ವಿದ್ಯಾಕೌಶಲ್ಯಕ್ಕೆ ಮೆಚ್ಚಿ ಆಶ್ರಯವನ್ನು ಕೊಟ್ಟು 'ಯಾದವಾಭ್ಯುದಯ' ಕಾವ್ಯಕ್ಕೆ ವ್ಯಾಖ್ಯಾನವನ್ನು ಬರೆಯಬೇಕೆಂದು ಪ್ರಾರ್ಥಿಸಬೇಕಾದರೆ ಆ ಕಾಲಕ್ಕೆ ದೀಕ್ಷಿತನಿಗೆ ಸುಮಾರು ೨೦-೨೫ ವರ್ಷಗಳಿಗೆ ಕಡಿಮೆಯಾಗಿರದಾಗಿ ಹೇಳಬಹುದಾಗಿದೆ. ಆದುದರಿಂದ ಬಾಲ್ಯಕಾಲದ ೨೨ ವತ್ಸರಗಳನ್ನು ರಾಜಾಶ್ರಯದಲ್ಲಿ ಕಳೆದ ೫೦ ವರ್ಷಗಳೊಂದಿಗೆ ಕೂಡಿಸಿ ದೀಕ್ಷಿತನ ಕಾಲವನ್ನು ಗೊತ್ತುಮಾಡಿ ಹೇಳಬಹುದಾಗಿದೆ. ಆದುದರಿಂದ ದೀಕ್ಷಿತನ ಜನ್ಮಕಾಲವು ಕ್ರಿ. ಶ. ೧೫೨೦ಕ್ಕೆ ಮುಂಚೆ ಆಗಿರಲಾರದಾಗಿ ಊಹಿಸಬಹುದಾಗಿದೆ. ಈ ಕಾಲವನ್ನು ಮತ್ತೊಂದುವಿಧವಾಗಿ ಗೊತ್ತುಮಾಡಿ ಹೇಳಬಹುದು. ಹೇಗೆಂದರೆ ಶಿವಾನಂದ ಯತೀಂದ್ರನು ದೀಕ್ಷಿತನಿಗೆ ನರಸಿಂಹ ಮತ್ತು ಚಿನ್ನಬೊಮ್ಮ ಈರಾಜರ ಆಶ್ರಯವನ್ನು ಹೇಳಿ ಚಂದ್ರಶೇಖರನೆಂಬ ಸಮಕಾಲೀನ ರಾಜನೊಬ್ಬನನ್ನು ಹೇಳಿರುವನು. ಚಿನ್ನಬೊಮ್ಮನ ವಿಚಾರವಾಗಿ ಮೊದಲೇ ಸಾಕಾದಷ್ಟು ಹೇಳಿರುವೆವು. ಉಳಿದ ಇಬ್ಬರ ವಿಚಾರವಾಗಿ ಪ್ರಕೃತಹೇಳಬೇಕಾಗಿರುವುದು.

ನರಸಿಂಹನು ಕ್ರಿ. ಶ. ೧೫೨೮ ರಿಂದ ಕ್ರಿ. ಶ. ೧೬೨೮ರ ವರೆಗೆ ತಂಜಾವೂರಿನಲ್ಲಿ ಆಳಿದುದಾಗಿ, ಶಿವಾನಂದಯತೀಂದ್ರನು ತಪ್ಪಾಗಿ ಬರೆದುಕೊಂಡಿರುವನಾದರೂ, ಆ ನರಸಿಂಹನೇ ಕ್ರಿ. ಶ. ೧೫೮೯—೧೬೧೦ ರವರೆಗೆ ಚೋಳರಾಜ್ಯದ ಸರ್ವಾಧಿಕಾರಿಯಾಗಿದ್ದ ತಂಜಾವೂರಿನ ವೀರನರಸಿಂಹನು ಹೊರತು ಮತ್ತಾವನೂ ಅಲ್ಲ. ಕೊನೆಗೆ ಇವನು ರಾಜದ್ರೋಹಿಯಾಗಿ ತಿರುಗಿಬಿದ್ದುದರಿಂದ ಕ್ರಿ. ಶ. ೧೬೦೯ ರಲ್ಲಿ ಅಚ್ಯುತ ದೇವರಾಯನಿಂದ ಪರಾಜಯವನ್ನು ಹೊಂದಿದನು. ಈ ನರಸಿಂಹನಿಗೆ ಚೆಲ್ಲಪ್ಪನೆಂಬ ಹೆಸರೂ ಇದ್ದಿತು. ಶಿವಾನಂದಯತೀಂದ್ರನ ಹೇಳಿಕೆಯಂತೆ ದೀಕ್ಷಿತನ ಆಶ್ರಯದಾತನು ವೀರನರಸಿಂಹನೆಂದು ಚಾರಿತ್ರಕ ದೃಷ್ಟಿಯಿಂದ ಸಿದ್ಧಾಂತವಾಗುವುದಾದರೆ ನಿಜವಾಗಿ ದೀಕ್ಷಿತನಿಗೆ ಚಿನ್ನ ತಿಮ್ಮನಿಗಿಂತಲೂ ಪೂರ್ವ ಭಾವಿಯಾಗಿ ರಾಜಾಶ್ರಯವುದೊರೆತಿದ್ದಿತೆಂದು ಹೇಳಬೇಕಾಗುತ್ತದೆ.

ದೀಕ್ಷಿತನ ಅಲಂಕಾರ ಗ್ರಂಥದಲ್ಲಿ ಒಬ್ಬ ನರಸಿಂಹನ ವಿಚಾರವಾಗಿ ಹೇಳಿರುವುದು ಕಂಡುಬರುತ್ತದೆ. ಆ ಶ್ಲೋಕಗಳು ದೀಕ್ಷಿತನಿಂದ ಬರೆಯಲ್ಪಟ್ಟುವುಗಳೆಂದು ಹೇಳುವ· ಜನಜನಿತಕಥೆಗಳೂ ಹೇರಳವಾಗಿವೆ.

ದ್ವಿರ್ಭಾವಃ ಪುಷ್ಪಕೇತೋರ್ವಿಬುಧ ವಿಟಪಿನಾಂ ಪೌನರುಕ್ತ್ಯಂ ವಿಕಲ್ಪ
ಶ್ಚಿಂತಾರತ್ನಸ್ಯ ವೀಪ್ಸಾ ತಪನತನುಭವೋ ವಾಸವಸ್ಯ ದ್ವಿರುಕ್ತಿಃ ॥
ದ್ವೈತಂದೇವಸ್ಯ ದೈತ್ಯಾಧಿಪಮಥನಕಲಾಕೇಳಿಕಾರಸ್ಯ ಕುರ್ವ
ನ್ನಾನಂದಂ ಕೋವಿದಾನಾಂಜಗತಿ ವಿಜಯತೇ ಶ್ರೀನೃಸಿಂಹಃಕ್ಷಿತೀಂದ್ರಃ॥

ನರಸಿಂಹ ದರಾನಾಥ ಕೇ ವಯಂ ತವ ವರ್ಣನೇ
ಅಪಿ ರಾಜಾನಮಾಕ್ರಮ್ಯ ಯಶೋ ಯಸ್ಯ ವಿಜೃಂಭತೇ ॥
ನರಸಿಂಹ ಮಹೀ ಪಾಲ ವಿದುಸ್ತ್ರಿಂ ಮಕರಧ್ವಜಂ
ಮೂರ್ಗಸ್ತಾಸ್ತ ಸಂಜಾತಾಃ ಕಥಂ ಸುಮನಸೋಽನ್ಯಥಾ ॥

ಈ ಶ್ಲೋಕಗಳು ವಿದ್ಯಾಧರನ ಏಕಾವಳಿಯಲ್ಲಿಯೂ ದೊರೆಯುತ್ತವೆ. ಕಟ್ಟು ಕಥೆಗಳ ಆಧಾರದಿಂದ ದೀಕ್ಷಿತನದೆಂದು ಹೇಳುವ ಮೇಲಣ ಶ್ಲೋಕಗಳು ಪ್ರಮಾಣವನ್ನಾಗಿ ಅಂಗೀಕರಿಸಲಾಗುವುದಿಲ್ಲ. ಏಕೆಂದರೆ, ವಿದ್ಯಾಧರನು ಆಗಿಹೋದ ಎಷ್ಟೋ ಕಾಲಗಳ ಅನಂತರ ದೀಕ್ಷಿತನ ಜನ್ಮಾವತರಣವಾಗಿರುವುದು.

ಚಿದಂಬರದಲ್ಲಿ ದೀಕ್ಷಿತನು ಪ್ರಥಮ ಯಜ್ಞವನ್ನು ಮಾಡುವಾಗ ನರಸಿಂಹನು ಅವಭೃತದ ದಿವಸಬಂದಹಾಗೂ, ಯಜ್ಞಪಶುಗಳು ಪ್ರತ್ಯಕ್ಷವಾಗಿ ಸ್ವರ್ಗಕ್ಕೆ ಹೋಗುತ್ತಿದ್ದಹಾಗೂ ಜನರು ಹೇಳಿಕೊಳ್ಳುವುದನ್ನು ಕೇಳಿ ಅವಭೃತಕ್ಕೆ ಬಂದಂತೆ ಶಿವಾನಂದನು ಹೇಳಿರುವನು ದೀಕ್ಷಿತನ ಗೌರವವನ್ನು ಹೆಚ್ಚಿಸುವುದಕ್ಕಾಗಿ ತನ್ನ ಗ್ರಂಥದಲ್ಲಿ ಕೊನೆಯವರೆಗೂ ನರಸಿಂಹನ ಸಂಬಂಧವನ್ನೇ ಹೇಳಿಕೊಂಡಿರುವನು. ಇದು ಅಸಂಗತವೆಂದು ನಮಗೆತೋರುವುದು. ಏಕೆಂದರೆ ದೀಕ್ಷಿತನು ಕೊನೆಕೊನೆಗೆ ಉತ್ತರ ದೇಶಯಾತ್ರೆಯಲ್ಲಿ ಶೇಷಾಯುಷ್ಯವನ್ನು ಕಳೆದುದಾಗಿದೆ. ಆಗ ಈ ನರಸಿಂಹನ ಸಂಬಂಧವೇ ಇಲ್ಲ, ಅಲ್ಲದೆ ಈ ವೀರನರಸಿಂಹನೇ ಪದಭ್ರಷ್ಟನಾದ ಸಾಳ್ವ ರಾಜನೆನ್ನುವುದಾದರೆ ಅವನು ಕ್ರಿ. ಶ. ೧೫೪೫ಕ್ಕಿಂತಲೂ ಹೆಚ್ಚಾಗಿ ಬದುಕಿರನು. ಆ ವೇಳೆಗೆ ಅವನು ಅತ್ಯಂತ ಗಳಿತವಯಸ್ಕನಾಗಿರಬೇಕು.

ಇನ್ನು ಚಂದ್ರಶೇಖರನ ವಿಚಾರ:—

ಈತನು ಆರ್ಯಾವರ್ತ, ಪೂನಾ ಒರಿಸ್ಸಾ ಮೊದಲಾದ ಪ್ರಾಂತ್ಯಗಳಿಗೆ ಅರಸನಾಗಿದ್ದನೆಂದೂ, ರತ್ನಖೇಟಶ್ರೀನಿವಾಸದೀಕ್ಷಿತನ ಆಶ್ರಯದಾತನೆಂದೂ ಶಿವಾನಂದನು ಹೇಳಿರುವನು. ಇವನು ಹೇಳುವಕಾಲವು ಮೊಗಲರಸರಾದ ಬಾಬರ ಮತ್ತು ಹುಮಾಯೂನನ ಕಾಲವಾದುದರಿಂದ ಸರಿಹೋಗದು. ಆದರೆ ಚಂದ್ರಶೇಖರನೆಂಬ ಪಾಂಡ್ಯರಾಜನೊಬ್ಬನಿದ್ದುದಾಗಿ ಮೊದಲು ಹೇಳಿದೆ. ಚಂದ್ರಶೇಖರನು ಸುಮಾರು ಕ್ರಿ. ಶ. ೧೫೨೦ರಲ್ಲಿ ಮೃತನಾದನು.

ಶಿವಾನಂದನು ಹೇಳುವಕಥೆ:—ಚಂದ್ರಶೇಖರರಾಜನು, ದೀಕ್ಷಿತನ ವಿದ್ವತ್ಪ್ರತಿಭೆಯನ್ನುಕೇಳಿ ತನ್ನಾಸ್ಥಾನದ ಪಂಡಿತರನ್ನು ಕುರಿತು ದೀಕ್ಷಿತನೊಡನೆ ವಾದ ಮಾಡುವ ಪಂಡಿತರು ಆರಾದರೂ ನಮ್ಮ ಸಭೆಯಲ್ಲಿರುವರೇ ಎಂದು ಬೆಸಗೊಂಡುದಕ್ಕೆ ರತ್ನಖೇಟನು ವಾದಕ್ಕೆ ಒಪ್ಪಿ ದೀಕ್ಷಿತನೊಡನೆವಾದವನ್ನು ಹೂಡಿ ಪರಾಜಿತನಾಗಿ ತನ್ನ ಮಗಳಾದ ಮಂಗಳನಾಯಕಿಯನ್ನು ದೀಕ್ಷಿತನಿಗೆ ಮದುವೆಮಾಡಿ

ಕೊಟ್ಟನು. ಹೀಗಾಗಿ ಚಂದ್ರಶೇಖರನು ಅಪ್ಪಯ್ಯದೀಕ್ಷಿತನ ವಿವಾಹ ಕಾರಣನಾದನು. ಇಪ್ಪತ್ತುವರ್ಷಗಳ ವೇಳೆಗೆ ದೀಕ್ಷಿತನವಿದ್ಯಾಸಂಪತ್ತಿಯು ಎಲ್ಲೆಲ್ಲಿಯೂ ಹರಡಿಕೊಂಡಿದ್ದಿತು. ಈ ಮೇಲೆ ಹೇಳಿದ ಕಾರಣಗಳಲ್ಲೆಲ್ಲದರ ಪರಿಶೀಲನದಿಂದ ದೀಕ್ಷಿತನ ಕಾಲವು ಕ್ರಿ. ಶ. ೧೫೨೦-೧೫೯೩ರವರೆಗೆಂದೂ ಹೇಳುವುದುತಪ್ಪಾಗದು. ಇದಲ್ಲದೆ ಚತುಶ್ಲೋಕೀಭಾಷ್ಯದಲ್ಲಿ ಕಂಡುಬರುವ ಈತನ ವಿಷಯಕವಾದ:—

"ವಿಕ್ರಮೇಭೂತಲಂಪ್ರಾಪ್ಯ ವಿಜಯೇಸ್ವರ್ಗಮಾಯಯೌ" ॥

ಎಂಬದು ಮೇಲೆ ಹೇಳಿದ ಕಾಲಕ್ಕೆ ಸರಿಹೋಗುತ್ತದೆ; ಆದುದರಿಂದ ಈ ಕಾಲವು ದೀಕ್ಷಿತನ ಕಾಲವೆಂದು ಚಾರಿತ್ರಕ ಮತ್ತು ಶಾಸನಗಳಿಂದ ಸಿದ್ಧವಾಗುತ್ತದೆ.* ದೀಕ್ಷಿತನು ಅವಸಾನಕಾಲದಲ್ಲಿ ಹೇಳಿದುದೆನ್ನುವ ಶ್ಲೋಕದಿಂದ ಅವನಿಗೆ ೭೦ ವರ್ಷಗಳಿಗಿಂತಲೂ ಹೆಚ್ಚಾಗಿದ್ದಿತೆಂದು ಹೇಳಿರುವನು. ಚಿದಂಬರವು ಅವನ ಸೈಸರ್ಗಿಕಸಾಮ್ರಾಜ್ಯ. ತರುಣೇಂದು ಶೇಖರನು ಅವನ ಪರಾಪರವಸ್ತು. ಅವನ ಹೇಳಿಕೆಯು ಹೀಗಿರುವುದು:—

ಚಿದಂಬರಮಿದಂ ಪುರಂ ಪ್ರಥಿತಮೇವ ಪುಣ್ಯಸ್ಥಲಂ
ಸುತಾಶ್ಚ ವಿನಯೋಜ್ಜ್ವಲಾಃ ಸುಕೃತಯಶ್ಚ ಕಾಶ್ಚಿತ್ಕೃತಾಃ।
ವಯಾಂಸಿ ಮಮ ಸಪ್ತತೇರುಪರಿ ನೈವ ಭೋಗೇ ಸ್ಪೃಹಾ
ನಕಿಂಚಿದಹಮರ್ಥಯೇ ಶಿವಪದಂ ದಿದೃಕ್ಷೇಪತಂ॥
ಅಭಾತಿ ಹಾಟಕಸಭಾನಟಪಾದಪದ್ಮ
ಜ್ಯೋತಿರ್ಮಯೋ ಮನಸಿ ಮೇ ತರುಣಾರುಣೋಽಯಂ ॥

ಅಹೋ! ಈ ಚಿದಂಬರವು ಪುಣ್ಯಕ್ಷೇತ್ರ. ವಿನೀತ ಪುತ್ರಸಂತಾನನಾದೆ. ಅನೇಕಾಮೂಲ್ಯ ಗ್ರಂಥರಚನೆಯೂ ಆದುದು. ನನ್ನ ವಯಸ್ಸಾದರೋ ೭೦ವರ್ಷಗಳಮೇಲಾದುದು. ನಾನು ಆಶಿಸುವ ಐಹಿಕ ವಸ್ತುವು ಯಾವುದೂ ಇಲ್ಲ. ನನಗಾವುದೂ ಬೇಡ. ಶಿವಪದವಂ (ಹೊಂದಬೇಕೆಂಬ) ನೋಡಬೇಕೆಂಬ ಇಚ್ಛೆ. ಅಗೋ! ನನ್ನ ಮನಸ್ಸಿನಲ್ಲಿ ಆ ನಟರಾಜನ ಪ್ರಭೆಯ ಬಾಲಸೂರ್ಯಜ್ಯೋತಿಯು ಕಾಣುತ್ತಿದೆ.

ಮೇಲಣ ಅರ್ಧ ಶ್ಲೋಕವನ್ನು ಹೇಳುತ್ತಿದ್ದ ಹಾಗೆ ಅಪ್ಪಯ್ಯದೀಕ್ಷಿತನ ಜೀವನ ವಿಸರ್ಜನವಾದುದು. ಉಳಿದ ಅರ್ಧ ಶ್ಲೋಕವನ್ನು ಅವನ ಮಕ್ಕಳು ಹೇಳಿ ಮುಗಿಸಿದರೆಂದು ಹೇಳಿದೆ:—

ನೂನಂ ಜರಾಮರಣಘೋರಸಿತಾಚಕೀರ್ಣಾ
ಸಂಸಾರಮೋಹರಜನೀ ವಿರತಿಂ ಪ್ರಯಾತಾ ॥

* The Journal of oriental Research. Madras Vol 2 P. 225-237.

ನಿಜವಾಗಿ ಜನನ ಮರಣಗಳೆಂಬ ಅತಿಕ್ರೂರ ಪಿಶಾಚಯುಕ್ತವಾದ ಈ ಸಂಸಾರವೆಂಬ ಕರಾಳರಾತ್ರಿಯು ಕೊನೆಗಂಡಿತು.

ಗ್ರಂಥಗಳು:—

ಶ್ರೀವೀರವೇಂಕಟಪತಿಕ್ಷ್ಮಾಪಾಲಸ್ಯ ಸಾಹ್ಯತಃ
ಕೃತಃ **ಕುವಲಯಾನಂದಶ್ಚಿತ್ರಮೀಮಾಂಸಯಾ** ಸಹ

ಅಭಿಧಾಲಕ್ಷಣವೃತ್ತಿರ್ವಿರ್ವೃತ್ತಿರ್ವೃತ್ತಿ ವಾರ್ತಿಕಂ
ಯಾದವಾಭ್ಯುದಯಾಖ್ಯಾಯಾ ವ್ಯಾಖ್ಯಾನಂ ಚ ಕೃತಂ ಕೃತೇಃ ॥

ನಾಮಸಂಗ್ರಹಮಾಲಾ ಚ ವ್ಯಾಖ್ಯಾ ತಸ್ಯಾಶ್ಚ ವಿಸ್ತೃತಾ
ಕಾಂಚೀವರದರಾಜಸ್ಯ ದಿವ್ಯವಿಗ್ರಹವರ್ಣನಂ

ವ್ಯಾಖ್ಯಾ ತಸ್ಯ ಚ ಸಂಕ್ಷಿಪ್ತಾ ನಾತಿಸಂಕ್ಷೇಪವಿಸ್ತರಾ
ಸರ್ವಪಾಪಪ್ರಶಮನೀ ಶ್ರೀಕೃಷ್ಣಧ್ಯಾನಪದ್ಧತಿಃ ॥

ಸರ್ವದುರ್ಗಾತಿತರಣೇ ದುರ್ಗಾಚಂದ್ರಕಲಾಸ್ತುತಿಃ
ಆದಿತ್ಯಸ್ತೋತ್ರರತ್ನಂ ಚ ತದ್ವ್ಯಾಖ್ಯಾನಂ ಚ ವಿಸ್ತೃತಂ

ನಾನಾಪದ್ಯಾತ್ಮಕಚತುರ್ಮತಸಾರಾರ್ಥಸಂಗ್ರಹಃ
ನ್ಯಾಯಮುಕ್ತಾವಲೀ ತದ್ವನ್ಮಧ್ವಾಚಾರ್ಯಮತಾನುಗಾ ॥

ಮಯೂಖಮಾಲಿಕಾ ಹೃದ್ಯಾ ಲಕ್ಷ್ಮಣಾಚಾರ್ಯವರ್ತ್ಮನಾ
ಶ್ರೀಕಂಠಾಚಾರ್ಯಪದ್ಧತ್ಯಾ ನಿರ್ಮಿತಾ ಮಣಿಮಾಲಿಕಾ

ಶಂಕರಾಚಾರ್ಯದೃಷ್ಟ್ಯಾ ಚ ಪ್ರಕ್ಲಿಪ್ತಾ ನಯಮಂಜರೀ
ನ್ಯಾಯಮುಕ್ತಾವಳೀವ್ಯಾಖ್ಯಾ ನಾತಿವಿಸ್ತರಸಂಗ್ರಹಾ ॥

ಅದ್ವೈತಶಾಸ್ತ್ರಸಿದ್ಧಾಂತಲೇಶಸಂಗ್ರಹನಾಮಕಃ
ನ್ಯಾಯರಕ್ತಾಮಣಿಃ ಸರ್ವಸೂತ್ರತಾತ್ಪರ್ಯವರ್ಣಕಃ

ಶ್ರೀಕಂಠಭಾಷ್ಯವ್ಯಾಖ್ಯಾ ಚ ಶಿವಾರ್ಕಮಣಿದೀಪಿಕಾ
ಶ್ರೀಶಿವಾನಂದಲಹರೀ ಶಿವಾದ್ವೈತವಿನಿರ್ಣಯಃ ॥

ರತ್ನತ್ರಯಪರಿಕ್ಷಾ ಚ ಪಂಚರತ್ನಸ್ತವಸ್ತಥಾ
ತಥಾ ಶಿಖರಿಣೀಮಾಲಾ ಬ್ರಹ್ಮತರ್ಕಸ್ತವಾದಯಃ

ಶಿವತತ್ತ್ವವಿವೇಕಶ್ಚ ಶಿವಕರ್ಣಾಮೃತಂತಥಾ
ಶಿವಾರ್ಚನಪ್ರಕಾಶಾರ್ಥಚಂದ್ರಿಕಾ ಬಾಲಚಂದ್ರಿಕಾ ॥

ಮೀಮಾಂಸಾಯಾಶ್ಚಿತ್ರಪುಟಸ್ತಥಾ ವಿಧಿರಸಾಯನಂ
ಮೀಮಾಂಸಾನ್ಯಾಯನಿರ್ಗೂಢ ಉಪಕ್ರಮಪರಾಕ್ರಮಃ

ಏತೇ ಚಾನ್ಯೇ ಚ ಬಹವಃ ಪ್ರಬಂಧಾಃ ಪ್ರಾಗ್ವಿನಿರ್ಮಿತಾ ॥

ಅಪ್ಪಯ್ಯದೀಕ್ಷಿತನು ೧೦೪ ಗ್ರಂಥಗಳನ್ನು ಬರೆದುದಾಗಿ ಹೇಳುವನು. ಇವನು ಬರೆದಿರುವ ಗ್ರಂಥಗಳೆಲ್ಲವೂ ಬಹುತರ ಮತಗ್ರಂಥಗಳು. ಕೆಲವು ವೇದಾಂತಗ್ರಂಥ

ಗಳು. ಕುವಲಯಾನಂದ, ಚಿತ್ರಮೀಮಾಂಸಾ, ವೃತ್ತಿವಾರ್ತಿಕಾ ಇವುಮೂರೂ ಅಲಂಕಾರಗ್ರಂಥಗಳು. ವೇದಾಂತದೇಶಿಕನ ಯಾದವಾಭ್ಯುದಯಕ್ಕೆ ವ್ಯಾಖ್ಯಾನವನ್ನು ಬರೆದಿರುವುದಲ್ಲದೆ, ಪಾಮಕಾಸಹಸ್ರಕ್ಕೂ ವ್ಯಾಖ್ಯಾನವನ್ನು ಬರೆದಿರುವುದಾಗಿ ತ್ಯಾಗರಾಜವಿಜಯವು ಹೇಳುತ್ತದೆ. ಆದರೆ ವ್ಯಾಖ್ಯಾನವು ಉಪಲಬ್ಧವಿಲ್ಲ.*

ದೀಕ್ಷಿತನು ಯಾದವಾಭ್ಯುದಯದ:—

ಅತಿಯಜೇನ ನಿಜಾಂ ಯದಿ ವೇವತಾ
ಮುಭಯತಶ್ಚ ಯತೇ ಜುಷತೇಽಪ್ಯಘಂ
ತ ತಿಭೃತ್ಸ್ವವ ಸದೈವತಕಾ ವಯಂ
ವನವತಾನವತಾ ಕಿಮಹಿದ್ರುಹಾ॥ ೬-೪.

ಎಂಬ ಶ್ಲೋಕವನ್ನು ಕುವಲಯಾನಂದದಲ್ಲಿ ಪರಿಕರಾಲಂಕಾರಕ್ಕೆ ಉದಾಹರಿಸಿಕೊಂಡಿರುವನು. ‡

§ ಲಕ್ಷಣರತ್ನಾವಳಿ ಎಂಬುದು ಇವನು ಬರೆದಿರುವ ಮೂರನೆಯಲಕ್ಷಣಗ್ರಂಥ. ಇದು ರೂಪಕಲಕ್ಷಣಾದಿಗಳನ್ನು ತಿಳಿಸುವುದು. ವಿಧಿರಸಾಯನವು ವಿವಿಧ ವಿಧಿಗಳನ್ನು ಹೇಳುವುದು. ನಕ್ಷತ್ರವಾದಾವಳಿಯು ವ್ಯಾಕರಣಗ್ರಂಥ. ರಾಮಾಯಣ ತಾಪ್ಪರ್ಯಸಂಗ್ರಹ ಮತ್ತು ಮಹಾಭಾರತ ತಾತ್ಪರ್ಯಸಂಗ್ರಹ ಇವೆರಡೂ ಇತಿಹಾಸಗಳು. ಶಿವಸರ್ವೋತ್ತಮನೆಂದು ಹೇಳುವುವಾಗಿವೆ.

ಭ ಟ್ಟೋ ಜೀ ದೀ ಕ್ಷಿ ತ

ಇವನು ಮಹಾರಾಷ್ಟ್ರ ದೇಶದ ಬ್ರಾಹ್ಮಣನು ಎಂಬುದು ಹೆಸರಿನಿಂದ ಗೊತ್ತುಮಾಡಬಹುದಾಗಿದೆ. ಇವನ ಮಾತಾಪಿತೃಗಳಾರೆಂಬುದು ತಿಳಿಯದು. ಇವನು ಅರ್ಜಕರ ಮನೆತನಕ್ಕೆ ಸೇರಿದವನು. ವಿದ್ಯಾಭ್ಯಾಸದ ಸಲುವಾಗಿ ತನ್ನ ಊರನ್ನು ಬಿಟ್ಟು ಕಾಶಿಗೆಹೋಗಿ ವೇದಾಂತಶಾಸ್ತ್ರವನ್ನೋದಿದನು.

ಕಾಲ:—ಈತನು ಜನ್ಮ ಸಮಯವು ಕ್ರಿ ಶ ೧೪೭೬ ಎಂದು ತ್ರ್ಯಂಬಕ ಗುರುನಾಥ ಕಾಳೆಯವರು ಹೇಳುವರು† ಇದು ನಿಜವೆನ್ನುವುದಾದರೆಭ ಟ್ಟೋಜಿ

Preface to ಯಾದವಾಭ್ಯುದಯ by A. V. Gopalacharya P. 29 2nd Vol Vanivilas Edition.

‡ ಕುವಲಯಾನಂದ P. 73 Nirnaya sagar Edition.

§ Descriptive Catalogue of the Sanskrit Manuscripts in Saraswathi Mahal Library Tanjore Vol. IX Introduction P. 35.

† ಸಂಸ್ಕೃತ ಕವಿಚರಿತೆ. P 40.

ದೀಕ್ಷಿತನಕಾಲವು ೧೪೭೫ + ೫೬ = ೧೫೩೧ ಎಂದರೆ ಕ್ರಿ. ಶ. ೧೬ನೆಯ ಶತಮಾನದ ವನೆಂಬದು ಖಂಡಿತವಾಗುತ್ತದೆ. ಪ್ರೊ|| ಮ್ಯಾಕಡಾನಲ್ಲರು ಭಟ್ಟೋಜೀ ದೀಕ್ಷಿತನ ಕಾಲ ಅಥವಾ ಸಿದ್ಧಾಂ ತಕೌಮುದಿಯನ್ನು ಬರೆದುದು ಕ್ರಿ. ಶ. ೧೬ನೆಯ ಶತಮಾನ ವೆಂದಿರುವುದು ಹೊರ್ತು ಹೇಗೇಬುದನ್ನು ಸಾಧಿಸಿರುವುದಿಲ್ಲ \$

ಗ್ರಂಥ:—ಇವನು ಕಾಲಕ್ರಮದಲ್ಲಿ೫೦೦೦ ಶ್ಲೋಕ ಪರಿಮಿತಿಯುಳ್ಳ ಒಂದು ವ್ಯಾಕರಣ ಗ್ರಂಥವನ್ನು ಬರೆದು ಅದನ್ನು 'ಸಿದ್ಧಾಂತ ಕೌಮುದೀ' ಎಂದು ಕರೆದನು. ಕೊನೆಗೆ ಕಾಶಿಯಲ್ಲಿ ವೇದಾಂತಕಾಲಕ್ಷೇಪವನ್ನು, ಮಾಡುತ್ತಿದ್ದು ತನ್ನ ೫೬ ನೆಯ ವಯಸ್ಸಿನಲ್ಲಿ. ಗತಾಯುವಾದನು *

ವರದ ರಾಜನೆಂಬವನು ಸಿದ್ಧಾಂತ ಕೌಮುದಿಯನ್ನು ಸಂಕ್ಷೇಪಿಸಿ ಬರೆದು ಅದನ್ನು ಲಘುಕೌಮುದೀ ಎಂದು ಕರೆದಿರುವನು

ಪಂಡಿತರನೇಕರು ಪೂರ್ವಮೀಮಾಂಸಾ ಶಾಸ್ತ್ರದ ಮೇಲೆ ಬರೆಯಲ್ಪಟ್ಟಿರುವ ತಂತ್ರಸಿದ್ಧಾಂತದೀಪಿಕಾ ಎಂಬ ಗ್ರಂಥವನ್ನು ಮಹಾವೈಯ್ಯಾಕರಣನಾದ ಭಟ್ಟೋಜೀದೀಕ್ಷಿತನು ಬರೆದುದಾಗಿ ಹೇಳುವರು. ಹಾಗೆ ಹೇಳುವುದಕ್ಕೆ ಜನಜನಿತ ಕಥೆಯೊಂದಿರುವುದು.

ನೂರಾರು ಗ್ರಂಥಗಳನ್ನು ಬರೆದು ಮಹಾಪ್ರಸಿದ್ಧನಾದ ಅಪ್ಪಯ್ಯದೀಕ್ಷಿತನು ಚಿದಂಬರದ ಬಳಿಯಲ್ಲಿದ್ದಾಗ ದಕ್ಷಿಣ ಇಂಡಿಯಾಕ್ಕೆ ಯಾತ್ರಾರ್ಥಿಯಾಗಿ ಬಂದ ಭಟ್ಟೋಜೀದೀಕ್ಷಿತನು ಅಪ್ಪಯ್ಯದೀಕ್ಷಿತರ ಬಳಿಗೆ ಬಂದು ಪೂರ್ವಮೀಮಾಂಸಾ ಉತ್ತರಮೀಮಾಂಸಾ ಶಾಸ್ತ್ರಗಳನ್ನು ಹೇಳಿಕೊಡಬೇಕೆಂದು ಪ್ರಾರ್ಥಿಸಲು ದೀಕ್ಷಿತನು ಹಾಗೆ ಪಾಠಹೇಳಿ ಭಟ್ಟೋಜಿಯು ಹೊರಡುವಾಗ ಪೂರ್ವ ಮತ್ತು ಉತ್ತರ ಮೀಮಾಂಸಾ ಶಾಸ್ತ್ರಗಳ ಮೇಲೆ ಯಾವುದಾದರೊಂದು ಗ್ರಂಥವನ್ನು ಬರೆಯ ಬೇಕೆಂದು ಹೇಳಿದುದಕ್ಕೆ ಸಮ್ಮತಿಸಿ ಭಟ್ಟೋಜಿಯು ಪೂರ್ವಮೀಮಾಂಸಾಶಾಸ್ತ್ರದ ಮೇಲೆ ತಂತ್ರಸಿದ್ಧಾಂತದೀಪಿಕಾ ಎಂಬುದನ್ನೂ ಉತ್ತರಮೀಮಾಂಸಾಶಾಸ್ತ್ರದಮೇಲೆ ತತ್ತ್ವಕೌಸ್ತುಭವೆಂಬುದನ್ನೂ ಬರೆದುದಾಗಿಯೂ ಹೇಳಿದೆ.† ತಂತ್ರಸಿದ್ಧಾಂತದೀಪಿಕಾ ರಂಭದಲ್ಲಿ ಅಪ್ಪಯ್ಯದೀಕ್ಷಿತೇಂದ್ರನನ್ನು ಕೊಂಡಾಡಿರುವುದು ಕಂಡುಬರುತ್ತದೆ.

ಅಪ್ಪಯ್ಯದೀಕ್ಷಿತೇಂದ್ರಾನಶೇಷವಿದ್ಯಾಗುರೂನಹಂ ವಂದೇ
ಯತ್ಕೃತಿಬೋಧಾಬೋಧೌ ವಿದ್ಪದವಿದ್ಪದ್ವಿಭಾಜತೋಪಾಧೀ ॥

\$ History of sanskrit Literature P 432.

* DekkanPoets P. 27-28.

† Introduction to ಶಿವಲೀಲಾರ್ಣವ P. 5—7.

ಈ ಕಥೆಯ ಆಧಾರದಿಂದ ತಂತ್ರಸಿದ್ಧಾಂತದೀಪಿಕಾಕಾರನು ಭಟ್ಟೋಜೀ ದೀಕ್ಷಿತನೆಂದು ಹೇಳಿರುವುದು ಸಾಧುವಾಗಿ ತೋರುವುದಿಲ್ಲ. ಗ್ರಂಥವನ್ನು ಸಮ್ಯಕ್ಪರಿಶೀಲನದಿಂದ ನೋಡುವರಿಗೆ ಇದರ ಗ್ರಂಥಕಾರನು ಭಟ್ಟೋಜಿದೀಕ್ಷಿತನು ಅಲ್ಲ ವೆಂಬುದು ಸ್ಪಷ್ಟಪಡುವುದು.

ತಂತ್ರಸಿದ್ಧಾಂತದೀಪಿಕಾಕಾರನು ತನ್ನ ಪಿತಾಮಹನನ್ನು ಹೀಗೆಂದು ಹೇಳಿಕೊಂಡಿರುವನು:—

"ಯತ್ತ್ವಸ್ಮತ್ಪಿತಾಮಹಚರಣಾನಾಂ ದರ್ಶನಂ ಸಂಸ್ಕಾರವಾಕ್ಯಸ್ಥವ್ರೀಹ್ಯಾದಿಪದೇ ಲಕ್ಷಣೈವನಾಸ್ತಿ" | ಅನರ್ಥಕ್ಯಶಂಕಾ ತ್ವರ್ಥಲಭ್ಯಾಪೂರ್ವೀಯತ್ವೇನೈವೇತಿ, ಯವಸಾಧಾರಣ್ಯಂತು ಧರ್ಮಾಣಾಮವೇಕ್ಷಾಸಾಮರ್ಥ್ಯರೂಪಾಲ್ಲಿಂಗಾದಿತಿ|| |

ಅಲ್ಲದೆ "ಸಂಸ್ಕಾರವಿಧಿ"ಯ ವಿಚಾರವಾಗಿ ತನ್ನ ಅಭಿಪ್ರಾಯವನ್ನು ಸೂಚಿಸಿ, ತಾನು ಸೂಚಿಸುವ ಎರಡು ಸ್ಥಳಗಳಲ್ಲಿ:—

(೧) "ದೀಕ್ಷಿತಮತೇನಾಪೂರ್ವೀಯಲಕ್ಷಣಾನಂಗೀಕಾರಾತ್ ಸಮ್ಯಾಗ್ದರ್ಶನಸ್ಯ ಚಮಸೇಷು ಪ್ರಸಕ್ತೇರಿತಿ ಸ್ಫುಟತರಮೇವ (೨) ದೀಕ್ಷಿತಮತೇ ಭವದಭಿಮತಾಪೂರ್ವೀಯಲಕ್ಷಣಯಾ ನಾಮಾನವಿಧ್ಯೇ ಪ್ರಾಪ್ತೇ ತದಭಾವಾದಸಮಾನವಿಧಾನಮಿತ್ಯೇವ ಸಿದ್ಧಾಂತ ಇತಿಶುದ್ಧಃಪಂಥಾಃ§ ಎಂದು ಹೇಳಿ ಅದನ್ನು ದೀಕ್ಷಿತ ಮತವೆಂದು ಹೇಳಿರುವನು. ಇದಲ್ಲದೆ ತಂತ್ರಸಿದ್ಧಾಂತದೀಪಿಕೆಯ ಪುಟ. ೪೫೧ ರಲ್ಲಿ "ಯದ್ವಾ ಪ್ರಾಚೀನ ಸಿದ್ಧಾಂತಪ್ರಾಪ್ತಾಪೂರ್ವೀಯತ್ವಾವಚ್ಛೇದೇ ದೋಷತ್ವಪ್ರಸಕ್ತೌ ವಿಧಿರಸಾಯನಾದಿದರ್ಶಿತರೀತ್ಯೈವಲಕ್ಷಣಂ ಪ್ರತಿಕ್ಷಿಪ್ಯ ವ್ರೀಹಿತ್ವೇನೈವ ಶೇಷತ್ವಂ.....|| ಎಂದು ಹೇಳಿರುವುದರಿಂದ ಅದೇ ಅಭಿಪ್ರಾಯವು ವಿಧಿರಸಾಯನದಲ್ಲಿಯೂ ಕಂಡುಬರುವುದೆಂಬುದು ಸ್ಪಷ್ಟವಾಗುವುದು. ದೀಕ್ಷಿತರೆಂದರೆ ಪೂರ್ವೋತ್ತರಮೀಮಾಂಸಾಶಾಸ್ತ್ರಗಳಲ್ಲಿ ಪ್ರಖ್ಯಾತನಾದ ಅಪ್ಪಯ್ಯದೀಕ್ಷಿತನೆಂಬುದೇ ಸಿದ್ಧಾಂತವಾಗಿದೆ. ಇವುಗಳೆಲ್ಲವನ್ನೂ ನೋಡಿದರೆ ಸಂಸ್ಕಾರ ವಿಧಿವಿಚಾರದಲ್ಲಿ ಅಪೂರ್ವಸಾಧನತ್ವವು ಅಪ್ರ

† Manuscripts of the Tantrasiddhantadeepika in the Adyar Library. P. 451.

* Ibid P 484 5.

§ Ibid P, 8-18.

ಧಾನಾರ್ಥಸೂಚಕವೆಂದು ಪ್ರತಿಪಾದಿಸಿರುವ * ಪ್ರಸಿದ್ಧನಾದ ಅಪ್ಪಯ್ಯ ದೀಕ್ಷಿತನೆಂದೂ, ಅವನೇ ತಂತ್ರಸಿದ್ಧಾಂತದೀಪಿಕಾಕಾರನ ಪಿತಾಮಹ ನೆಂದೂ ಸ್ಪಷ್ಟವಾಗುತ್ತದೆ. ಇದಲ್ಲದೆ ಈ ಗ್ರಂಥದ ಪ್ರತ್ಯಧಿಕರಣದ ಕೊನೆಯಲ್ಲಿ ಎಲ್ಲದರಲ್ಲಿಯೂ ಒಂದೇ ವಿಧವಾದ:—

"ಇತಿ ಶ್ರೀಭರದ್ವಾಜಜಲಧಿಕೌಸ್ತುಭ ಶ್ರೀಕಂಠಮತಪ್ರತಿಷ್ಠಾಪನಾಚಾರ್ಯ ಚತುರಧಿಕ ಶತಪ್ರಬಂಧನಿರ್ಮಾಣ ಧುರಂಧರ ಶ್ರೀಮದಪ್ಪಯ್ಯ ದೀಕ್ಷಿತ ಸೋದರ್ಯ ಶ್ರೀಮದಾಚ್ಚಾದಿಂಕ್ಷಿತಪೌತ್ರೇಣ ಅಲಂಕಾರತಿಲಕರುಕ್ಮಿಣೀ ಪರಿಣಯಾದ್ಯನೇಕ ಪ್ರಬಂಧನಿರ್ಮಾತುರಪ್ಪಯ್ಯದೀಕ್ಷಿತಸ್ಯ ಪುತ್ರೇಣ ದುರೂಹಶಿಕ್ಷಾಕೃತಾ ಭೂಮಿದೇವಿನಂದನೇನ ಅಪ್ಪಯ್ಯದೀಕ್ಷಿತೇನ ವಿರಚಿತಾಯಾಂ.....' ಎಂಬ ಗದ್ಯವಿರುವುದರಿಂದ ತಂತ್ರಸಿದ್ಧಾಂತ ದೀಪಿಕಾಕಾರನು ಭರದ್ವಾಜಕುಲೋತ್ಪನ್ನನಾದ ಅಪ್ಪಯ್ಯದೀಕ್ಷಿತನ ಸಹೋದರಅಚ್ಚಾದೀಕ್ಷಿತನಮುಮ್ಮಗ ಅಲಂಕಾರತಿಲಕ, ರುಕ್ಮಿಣೀಪರಿಣಯಾದಿ ಗ್ರಂಥಕಾರನಾದ ಅಪ್ಪಯ್ಯದೀಕ್ಷಿತನಮಗ 'ದುರೂಹಶಿಕ್ಷಾ'\$ ಗ್ರಂಥಕಾರ ಭೂಮಿದೇವಿಯಮಗನಾದ ಅಪ್ಪಯ್ಯದೀಕ್ಷಿತನಿಂದ ನಿರಚಿತವಾದ.....ಎಂದಿರುವುದರಿಂದ ತಂತ್ರಸಿದ್ಧಾಂತ ದೀಪಿಕಾಕಾರನು ಮೂರನೆಯ ಅಪ್ಪಯ್ಯದೀಕ್ಷಿತನೆಂಬುದು ಸಿದ್ಧವಾಗುತ್ತದೆ.

ತಂತ್ರಸಿದ್ಧಾಂತ ದೀಪಿಕಾಕಾರನ ನಿಜವಾದ ಹೆಸರು ಚಿನ್ನಪ್ಪಯ್ಯನೆಂದೂ ಯೋ ನಾರಾಯಣದೀಕ್ಷಿತಾನುಜವರಾ ಯೋऽಪ್ಪಯ್ಯನಾಮ್ನೋऽಭವದ್ದತ್ತೋऽಪ್ಪ (ಯ್ಯಾ) ಮುಷ್ಟಿನೋऽನುಜಃ ಕವಿವರಶ್ಚಿನ್ನಪ್ಪಯ್ಯಾಖ್ಯಃ ಸುಧೀಃ§

ಎಂದಿರುವುದರಿಂದ ಇವನು ಆಚ್ಚಾದೀಕ್ಷಿತನ ಜ್ಯೇಷ್ಠಪುತ್ರ ನಾರಾಯಣ ದೀಕ್ಷಿತನ ಮೂರನೆಯ ಮಗನೆಂದೂ, ಆಚ್ಚಾದೀಕ್ಷಿತನ ಎರಡನೆಯ ಮಗ ಅಪ್ಪಯ್ಯದೀಕ್ಷಿತನದತ್ತು ಮಗನೆಂದೂ ವೀರರಾಘವ ಕವಿಯು ಒಕ್ಕಣಿಸಿರುವನು.† ಗ್ರಂಥಕಾರ ಮೂರನೆಯ ಅಪ್ಪಯ್ಯದೀಕ್ಷಿತನ ದತ್ತುತಂದೆಯಾದ ಎರಡನೆಯ ಅಪ್ಪಯ್ಯದೀಕ್ಷಿತನು ರುಕ್ಮಿಣೀಪರಿಣಯವನ್ನು ಬರೆದಿರುವುದಾಗಿ ಮಹಾಕವಿದೀಕ್ಷಿತ

* Vide P. P 148, 167 ವಿಧಿರಸಾಯನ Chowkamba Edition Benares.

\$ ಪೂರ್ವಮೀಮಾಂಸಾಶಾಸ್ತ್ರದ ಮೇಲೆ ಬರೆದಿರುವ ಮೀಮಾಂಸಾಶಾಸ್ತ್ರಗ್ರಂಥ. ಇದನ್ನು ಕವಿಯು ಚಿತ್ರಾಧಿಕರಣದಲ್ಲಿ ಹೇಳಿಕೊಂಡಿರುವನು.

§ ವೀರರಾಘವಕೃತ ಅಚ್ಚಾದೀಕ್ಷಿತವಂಶಾವಳೀಶ್ಲೋಕ ೧೧೯

† Journal of Oriental Research Vol 2 P. 247 250

ನೀಲಕಂಠನು ಬರೆದುದಾದ ನಳಚರಿತನಾಟಕದ\$ಪ್ರಸ್ತಾವನೆಯಿಂದ ನಿರ್ಧರಿಸ ಬಹುದಾಗಿದೆ:—

ಸೂತ್ರಧಾರಃ—ನವನಿರ್ಮ್ಮಿತಂ ನಲಚರಿತ್ರಂನಾಮ ನಾಟಕಂ, ಕವಿರಪಿ ತಸ್ಯಜಗದ್ವಿದಿತಏವ,

ಪಾರಿಪಾರ್ಶ್ವಕಃ—ಆಃ ಸರುಕ್ಮಿಣೀಪರಿಣಯಸ್ಯಾಸಿ ಪ್ರಣೇತಾ !

ಸೂತ್ರಧಾರಃ—(ವಿಹಸ್ಯ)ನ ಏ ನಹಿ ಅಸ್ಯ ಖಲು ಪಿತ್ಯವ್ಯೋಕಯಮುಪ್ಪಯ ದೀಕ್ಷಿತೋ ನಾಮಸರಸಕವಿತಾಸಾಮ್ರಾಜ್ಯಸಾರ್ವಭೌಮಸ್ತತ್ಪ್ರಣೇತಾ ಅಯಂ ತು ಮುಕುಂದವಿಲಾಸಸ್ಯಕಾವ್ಯಸ್ಯ ನಿಬಂಧಾ ಎಂದಿದೆ.

ತಂತ್ರಸಿದ್ಧಾಂತದೀಪಿಕೆಯು ಪ್ರಾಯಃ ಒಂದನೆಯ ಅಪ್ಪಯ್ಯದೀಕ್ಷಿತನ ಮತವನ್ನು ಖಂಡಿಸಿ ಹೇಳುವ ನೂತನ ಮೀಮಾಂಸಾಶಾಸ್ತ್ರಕಾರರ ಮತವನ್ನು ಖಂಡಿಸಿ ಹೇಳುವುದಕ್ಕಾಗಿ ಬರೆದಿರಬೇಕಾಗಿ ತೋರುತ್ತದೆ.

ತಂತ್ರಸಿದ್ಧಾಂತದೀಪಿಕಾಕಾರನ ವಂಶಾವಳಿಯು ಹೀಗಿರುವುದು. (ಪಕ್ಕದ ಪುಟವನ್ನು ನೋಡಿ.)

ತಂತ್ರಸಿದ್ಧಾಂತದೀಪಿಕಾಕಾರನಾದ ಮೂರನೆಯ ಅಪ್ಪಯ್ಯದೀಕ್ಷಿತನು ಗ್ರಂಥಾರಂಭದಲ್ಲಿ:—

" ಅಪ್ಪಯ್ಯದೀಕ್ಷಿತೇಂದ್ರಾನಶೇಷ ವಿದ್ಯಾಗುರೂನಹಂವಂದೇ "

ಎಂದು ತನ್ನ ಪಿತಾಮಹನನ್ನು ಸ್ತುತಿಸಿರುವುದು ಯೋಗ್ಯವಾಗಿದೆ. ಇದನ್ನು ಬಿಟ್ಟು ಭಟ್ಟೋಜಿಯು ಬರೆದುದೆಂದು ಹೇಳುವುದು ಸರ್ವಥಾ ಸರ್ವಸಮ್ಮತ ವಾಗದು.

\$ Nalacharitanataka, Balamanorama Press Edition P. 3.

"ತಂತ್ರಸಿದ್ಧಾಂತದೀಪಿಕಾ" ಕಾರನು ಒಂದನೆಯ ಅಪ್ಪಯ್ಯದೀಕ್ಷಿತನ ಮುಮ್ಮಗನೆಂಬುದು ಈ ವಂಶಾವಳಿಯಿಂದ ಗೊತ್ತುಮಾಡಬಹುದಾಗಿದೆ. §



(*ಇವನೇ ಮೇಲೆ ಹೇಳಿದ ೨ನೆಯ ಅಪ್ಪಯ್ಯದೀಕ್ಷಿತನ ದತ್ತುಪುತ್ರ. ಇವನೇ ತಂತ್ರಸಿದ್ಧಾಂತದೀಪಿಕೆಯ ಗ್ರಂಥಕಾರ.)

§ Journal of oriental Research Madras Vol. II P. 249.

ರಾ ಜ ನಾ ಥ

ಇವನು ಅರುಣಗಿರಿನಾಥನ ಮಗನು. ಬ್ರಾಹ್ಮಣನು ಎಂಬದು ಹೊರ್ತು ಇತರ ವಿಚಾರಗಳು ತಿಳಿಯವು.

ಕಾಲ:—ಇವನು ಕ್ರಿ. ಶ. ೧೫೫೦-೧೫೪೨ ರವರೆಗೆ ವಿಜಯನಗರದಲ್ಲಿ ಆಳಿದ ಅಚ್ಯುತರಾಯನ ಆಶ್ರಯದಲ್ಲಿದ್ದವನೆನ್ನಬಹುದಾದುದರಿಂದ ಇವನು ಕ್ರಿ. ಶ. ೧೬ನೆಯ ಶತಮಾನದವನು.

ಗ್ರಂಥ:—ಇವನು ೧೨ ಸರ್ಗಗಳಲ್ಲಿ ಬರೆದಿರುವುದಾಗಿ ಹೇಳುವ "ಅಚ್ಯುತ ರಾಯಾಭ್ಯುದಯ" ಎಂಬ ಕಾವ್ಯದ ಆರುಸರ್ಗಗಳು ಪ್ರಕೃತ ಅಚ್ಚಾಗಿ ದೊರೆಯುವುವು. ಗ್ರಂಥವು ಅಚ್ಯುತರಾಯನ ವಂಶಾವಳಿಯನ್ನು ಮೊದಲು ಮಾಡಿಕೊಂಡು ಅವನ ದಿಗ್ವಿಜಯವಿಚಾರಗಳನ್ನು ಹೇಳುವುದಾಗಿದೆ. ಅದು ಹೀಗಿರುವುದು:—

ವಿಜಯನಗರವನ್ನಾಳಿದ ತುಳುವ ಅರಸರಲ್ಲಿ 'ತಿಮ್ಮ' ಎಂಬವನು ಮುಖ್ಯನು. ಇವನು 'ದೇವಕಿ' ಎಂಬವಳಲ್ಲಿ ಈಶ್ವರನೆಂಬ ಮಗನನ್ನು ಪಡೆದನು. ಈಶ್ವರನು ಕಾಲಕ್ರಮದಲ್ಲಿ ವಿವಾಹಿತನಾಗಿ ಬುಕ್ಕಮ್ಮ ಎಂಬವಳಲ್ಲಿ ನರಸಿಂಹ ಮತ್ತು ತಿಮ್ಮನೆಂಬ ರಾಜಕುಮಾರರನ್ನು ಪಡೆದನು. ಮೊದಲನೆಯವನಾದ ನರಸಿಂಹನು ಚಕ್ರವರ್ತಿಯೆನಿಸಿಕೊಂಡು ಮಾನವದುರ್ಗದ ಕೋಟೆಯನ್ನು ಹಿಡಿದು ಅಲ್ಲಿದ್ದ ನಿಜಾಮನನ್ನು ಪರಾಜಿತನನ್ನಾಗಿ ಮಾಡಿ, ಶರಣುಬಂದ ಅವನಿಗೆ ಪುನಃ ಕೋಟೆಯನ್ನು ಬಿಟ್ಟುಕೊಟ್ಟು ಶ್ರೀರಂಗಪಟ್ಟಣವನ್ನು ಜೈಸಿ ಮಾರವರನ್ನು ಸ್ವಾಧೀನಪಡಿಸಿಕೊಂಡು ಮಧುರೆಯ ಕೋನೇಟಿ ರಾಜನನ್ನು ನಿರ್ನಾಮಮಾಡಿ ಕೊನೆಗೆ ವಿಜಯನಗರವನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡನು. ಇವನಿಗೆ ಮೂವರು ರಾಣಿಯರು. ಮೂವರು ರಾಣಿಯರಿಗೂ ಮೂರುಜನ ಮಕ್ಕಳು. ಕ್ರಮಶಃ ಈ ಮೂವರೂ ರಾಜರಾಗಿ ರಾಜ್ಯವಾಳಿದರು. ಇವರಲ್ಲಿ ಕೊನೆಯವನು. ಅಚ್ಯುತರಾಯ. 'ವರದಾಂಬಾ' ಎಂಬವಳೇ ಈತನ ಗೃಹಿಣಿ. ಅಚ್ಯುತರಾಯನು ರಾಜನಾಗಿ ತನ್ನ ಮಗನಾದ ಚಿನ್ನ ವೆಂಕಟಾದ್ರಿಗೆ ಯುವರಾಜ ಪದವಿಯನಿತ್ತನು. ಇವನ ವಂಶಾವಳಿಯನ್ನು ಹೀಗೆ ಹೇಳಬಹುದು:—



ಅಚ್ಯುತರಾಯನು ಸಕಲಸಾಮಂತ ಪರಿವೃತನಾಗಿ ಒಡ್ಡೋಲಗವನ್ನು ಕೊಡುತ್ತಿರುವಾಗ ಮುಖ್ಯಾಮಾತ್ಯನು ಎದ್ದು ಬಂದು ಪರಾಕು ! ಜೀಯಾ! ಚೋಳ ರಾಜನು ಯಾವುದೋ ಸಂಧಿಕಾರ್ಯಕ್ಕಾಗಿ ತನ್ನ ರಾಜ್ಯವನ್ನು ಬಿಟ್ಟು ನ್ಯಾಯ ವಿಹೀನನಾಗಿ ಪಾಂಡ್ಯರಾಜನ ರಾಜ್ಯವನ್ನು ಕಸಿದುಕೊಂಡ ಚೇರರಾಜನ ಆಶ್ರಯ ವನ್ನು ಹೊಂದಿರುವುದಾಗಿ ಬಿನ್ನವಿಸಿದುದನ್ನು ಕೇಳಿ ಒಂದಾನೊಂದು ಶುಭ ಮುಹೂರ್ತದಲ್ಲಿ ಸಸೈನ್ಯನಾಗಿ ಹೊರಟು ದಕ್ಷಿಣಾಭಿಮುಖವಾಗಿ ಪ್ರಯಾಣಮಾಡಿ ಚಂದ್ರಗಿರಿಯನ್ನು ಸೇರಿ ಅಲ್ಲಿಂದ ತಿರುಪತಿಯನ್ನು ಹೊಕ್ಕು ಅಲ್ಲಿ ಕೆಲವುದಿವಸ ಗಳಿದ್ದು ಶ್ರೀನಿವಾಸನಂ ಸೇವಿಸಿ ಅನಂತರ ಕಾಳಹಸ್ತಿ, ವಿಷ್ಣುಕಂಚಿ, ತಿರುವಣ್ಣಾ ಮಲೆಯ ಮೂಲಕ ಶ್ರೀರಂಗಕ್ಕೆ ಬಂದು ಅಲ್ಲಿ ತನ್ನ ಪಾಳಯವನ್ನು ಹೂಡಿ ಚೇರ ರಾಜನನ್ನು ದಂಡಿಸುವುದಕ್ಕೆ ಸಾಕಾದಷ್ಟು ಸೈನ್ಯವನ್ನು ಕೊಟ್ಟು ತನ್ನ ಮೈದುನ ನನ್ನು ಕಳುಹಿಸಿದನು. ಅದರಂತೆ ಸಲಗರಾಜನ ಕುವರನು ರಾಜಾಜ್ಞೆಯಂ ಶಿರಸಾ ವಹಿಸಿ ಮಧುರೆಯಮೂಲಕ ತಾಮ್ರ ಪರ್ಣೀನದಿಯ ದಡದಲ್ಲಿಳಿದುಕೊಂಡು ಚೇರರಾಜನಮೇಲೆ ದಂಡೆತ್ತಿ ಹೋಗಲು ತನ್ನ ಸೈನ್ಯಾಧಿಕಾರಿಯನ್ನು ಕಳುಹಿಸಿದನು. ಇದನ್ನು ಚಾರರಮುಖದಿಂದ ಕೇಳಿದ ತಿರುವಾಂಕೋಡು ರಾಜನು (ಇವನಿಗೆ ತಿರುವಡಿಯೆಂಬ ಬಿರುದು)ವಿಜಯನಗರದ ಸೈನ್ಯವನ್ನೆದುರಿಸಲು ಸೈನ್ಯದೊಡನೆ ಸುಸಜ್ಜಿತನಾಗಿ ತಾಮ್ರ ಪರ್ಣೀನದಿಯ ದಡದಲ್ಲಿ ಬಂದುನಿಂತನು. ಯುದ್ಧವು ನಡೆದುದು. ವಿಜಯನಗರದ ಸೈನ್ಯವು ಗೆದ್ದುದು. ಇದನ್ನು ತಿಳಿದಕೂಡಲೇ ಚೇರರಾಜನು ಪರಾಜಯವನ್ನು ಒಪ್ಪಿಕೊಂಡು ಕೂಡಲೆ ತನ್ನ ಬಳಿಯಲ್ಲಿದ್ದ ಚೋಳರಾಜನನ್ನು ಸಲಗರಾಜ ಕುಮಾರನಿಗೆ ಒಪ್ಪಿಸಿ ಶರಣಾಗತನಾಗಲು, ಸಲಗ ರಾಜಕುಮಾರನು ಅವನನ್ನು ಮನ್ನಿಸಿ ಅವನಿಂದ ಕಿತ್ತುಕೊಂಡ ರಾಜ್ಯಗಳನ್ನು ಪುನಃ ಅವನಿಗೆ ಕೊಟ್ಟು ಅನಂತರ ಪದ್ಮನಾಭನ ದರ್ಶನೋತ್ಸುಕನಾಗಿ ಮಲಯ ಪರ್ವತದ ಸಾನುಪ್ರದೇಶವನ್ನು ಸೇರಿದನು ಎಂಬುದು ಪ್ರಕೃತ ದೊರೆತಿರುವ ಅಚ್ಯುತರಾಯಾಭ್ಯುದಯದ ಅರುಸರ್ಗದ ಕಥೆಯಿತಿರಳು, ಚಾರಿತ್ರಕ ದೃಷ್ಟಿಯಿಂದ ಈ ಗ್ರಂಥವು ಹೆಚ್ಚಿನದೆಂದು ಹೇಳಬಹುದಾದರೂ ಇತರ ವಿಚಾರಗಳಲ್ಲಿ ಸಾಧಾರಣ ವಾಗಿರುವುದೆಂದು ಹೇಳುವುದರಿಂದ ಕೊರತೆಯಾಗದು. ವಿಜಯನಗರದ ಅರಸ ಮುಖ್ಯನಾದ ಕೃಷ್ಣರಾಯನ ವೈಭವ ಪರಾಕ್ರಮಾತಿಶಯೆಗಳನ್ನು ಹೇಳಿಕೇಳಿ ಬಹು ತರ ಬರೆದಿಟ್ಟಿರುವ ಕಾವ್ಯ ಕಥೆಗಳನ್ನೋದಿ ಈಗಣ ಪರಿಸ್ಥಿತಿಯಂ ನೆನಿಸಿಕೊಂಡು ಕಣ್ಣೀರಿಡದ ಕನ್ನಡಿಗರಿಲ್ಲ. ಅವನ ವೈಭವಕ್ಕೆ ತಲೆದೂಗದ ಅನ್ಯದೇಶೀಯರಿಲ್ಲ. ಸರ್ವಭಾಷಾಶ್ರಯನಾಗಿದ್ದ ಅವನ ಕಲಾಪೂರ್ಣತೆಯನ್ನು ಮೆಚ್ಚಿನೆಚ್ಚಿ ನಲಿ ದಾಡದ ಭಾರತೀಯರಿಲ್ಲವಾದರೂ, ಅಚ್ಯುತರಾಯನ ವಿಚಾರವಾಗಿ ಹೇಳುವ ಕಾವ್ಯ

ಗಳೂ ಕಳೆಗಟ್ಟಿರುವ ಅಥವಾ ಇಲ್ಲವೆಂದರೂ ಸಲ್ಲುವುದು. ಈ ದೃಷ್ಟಿಯಲ್ಲಿ ಅಚ್ಯುತರಾಯಾಭ್ಯುದಯವು ಮುಖ್ಯವೆನ್ನಬಹುದು. ರಾಜನಾಥಕವಿಯ ಶೈಲಿಯು ಮಧುರ ಮತ್ತು ಅತಿಸರಳ. ಮಾದರಿಗಾಗಿ ಕೆಲವು ಶ್ಲೋಕಗಳನ್ನೆತ್ತಿ ಬರೆಯುವೆವು.

ಅಭಿರಂಕ್ಷ್ಯ ಪಂಕಜಮಮುಷ್ಯ ಮುಖಂ
ಗರುಡೋ ವಿತತ್ಯ ಗಗನೇ ವಲಭಃ
ವಿಜಹಾಸ ಹಂಸಮಿಥುನಸ್ಯ ವಿಭಾಂ
ವಿಕಡಾತಪತ್ರಯುಗಲೀ ನೃಪತೇಃ ॥ ೫-೭

ಅಚ್ಯುತರಾಯನು ನಗರದಿಂದ ಹೊರಟ ಸಮಯಲ್ಲಿ ಅವನಿಗೆ ಇರ್ಕಡೆಗಳಲ್ಲಿ ಹಿಡಿದಿದ್ದ ಶ್ವೇತಚ್ಛತ್ರವನ್ನು ನೋಡಿ ಆಕಾಶದಲ್ಲಿ ಸಂಚರಿಸತಕ್ಕ ಹಂಸಮಿಥುನವು ಅಚ್ಯುತರಾಯನ ಮುಖವನ್ನು ಪಂಕಜವೆಂದು ಭ್ರಾಂತಿಪಟ್ಟು ತಮ್ಮ ರೆಕ್ಕೆಗಳನ್ನು ಹರಡಿಕೊಂಡಿರುವಂತೆ ಕಾಣುತ್ತಿರುವುದು.

ಶ್ರವಣೇ ಕಥಾಸ್ಯ ನಮಸಂ ಚ ಮನ
ಶ್ಚರಣೇ ಶಿರಃ ಸ್ಪಯಮಲಂಕುರುತೇ
ಇತಿ ಕುಂಡಲಂ ಪದಕಮೇಷ ಹರೇಃ
ಕಿರಿಮಾರ್ಪಯನ್ನಜಕಿರೀಟಮಪಿ ॥ ೫-೪೨

ಹರಿಯ (ವಿಷ್ಣುವಿನ) ಪುಣ್ಯಚರಿತೆಯ ಶ್ರವಣವು ಕರ್ಣಗಳನ್ನೂ, ಧ್ಯಾನವು ವಕ್ಷಸ್ಥಲ (ಹೃದಯ) ವನ್ನೂ, ಚರಣವು ತನ್ನ (ಅಚ್ಯುತರಾಯನ) ಶಿರಸ್ಸನ್ನೂ ಅಲಂಕರಿಸುವುದಾಗಿ ತಿಳಿದು ವಿಷ್ಣುವಿಗೆ ಕರ್ಣಾಭರಣವಾದ ಕುಂಡಲವನ್ನೂ, ಕಂಠ ಭೂಷಣವಾದ ಪದಕವನ್ನೂ, ರತ್ನಖಚಿತವಾದ ಕಿರೀಟವನ್ನೂ ಅರ್ಪಿಸಿದನು.

ಅಮಸಭೂಶ್ಚುಲಕದಗ್ನಮಹಾಂಬುರಾಶೇ
ರಂಗೆರ್ಮುಖಸ್ಯ ಹಯರತ್ನಖನಿಃ ಸುಮೇಷೋಃ
ಸಾಮ್ರಾಜ್ಯಭೂರಗರುಚಂದನವಾಟಿಕಾಯಾ
ಮಾರ್ಗೇಜಸಸ್ಯ ಮಲಯಾದ್ರಿಮಮುಷ್ಯ ದೃಷ್ಟ್ಯೋಃ ॥ ೬-೪೫

ಅಚ್ಯುತರಾಯನು, ಸಮುದ್ರವನ್ನು ಚುಲಕ (ಬೊಗಸೆಯ) ದಲ್ಲಿ ಪಾನ ಮಾಡಿದ ಅಗಸ್ತ್ಯಮುನಿಯ ವಾಸಸ್ಥಾನವಾಗಿಯೂ, ಕರ್ವುವಿಲ್ಲನ (ಕಾಮನ) ಹಯ (ಮಲಯಾನಿಲಕ್ಕೆ ಜನ್ಮಭೂಮಿಯಾಗಿ) ನಿಧಿಪ್ರಾಯವಾಗಿಯೂ, ಅಗರು ಚಂದನ ಮುಂತಾದವುಗಳಿಗೆ ಉತ್ಪತ್ತಿಸ್ಥಾನವಾಗಿಯೂ ಇರುವ ಮಲಯಪರ್ವತವನ್ನು ನೋಡಿದನು

ಗೋ ಕು ಲ ನಾ ಥ

ಇವನು 'ಫಣದಹನ' ಎಂಬ ಮೈಥಿಲೀಯ ಬ್ರಾಹ್ಮಣನು. 'ಮಂಗರೌನಿತ್ಯ' ಎಂಬುದು ಇವನ ಗ್ರಾಮ. ತಂದೆಯ ಹೆಸರು ಪೀತಾಂಬರ. ತಾಯಿಯ ಹೆಸರು ಉಮಾ ಎಂದು. ಇವನಿಗೆ ತಾರ್ಕಿಕಶಿರೋಮಣಿ, ಉಪಾಧ್ಯಾಯ ಎಂಬಾ ಪರನಾಮಗಳಿದ್ದುವಲ್ಲದೆ, ಮಹಾಮಹೋಪಾಧ್ಯಾಯನೆಂಬ ಬಿರುದು ಇದ್ದುದಾಗಿ "ತಾರ್ಕಿಕಶಿರೋಮಣೇರುಪಾಧ್ಯಾಯಾಪರನಾಮ್ನಃ ಮಹಾಮಹೋಪಾಧ್ಯಾಯ ಪದಭೂಷಿತ ಶ್ರೀಮದ್ಗೋಕುಲನಾಥಶರ್ಮಾ ಫಣದಹನಾಮಕೇ ಮೈಥಿಲ ಬ್ರಾಹ್ಮಣ ವಂಶೇ ಪ್ರಸಿದ್ಧತಮೇ ಮಂಗರೌನೀತ್ಯಾಖ್ಯಗ್ರಾಮೇ.....ಅಸೀಮ ವಿದ್ಯಾನಿಧಿ ಮಹಾಮಹೋಪಾಧ್ಯಾಯ ಶ್ರೀಮತ್ಪೀತಾಂಬರಶರ್ಮಣ ಉಮಾದೇವ್ಯಾಲಂಬಿ" ಎಂಬುದರಿಂದ ಗೊತ್ತಾಗುತ್ತದೆ. *

ಕಾಲ:—ಇವನ ಕಾಲದಲ್ಲಿ ರಾಘವಸಿಂಹದೇವನು ಮಿಥಿಲಾಧಿಪತಿಯಾಗಿದ್ದನು. ಇವನು ಕ್ರಿ. ಶ. ೧೬ನೆಯ ಶತಮಾನದವನು ಅಲ್ಲದೆ:—

> "ಸಚಾಯಂ ವಿದ್ವದಗ್ರಣೀಃ ಶ್ರೀನಗರೇ ಚಂದ್ರಶೇಖರ ಸುಂದರೀಚರಣಾರವಿಂದಮಕರಂದೇಂದಿರಾ ವಿಲಾಸಮಂದಿರಾಣಾಮರಿವಾರಿಧಿಮಥನಮಂದರಾಣಾಂ, ಫತ್ತೇಸಾಹಾಭಿಧಸ್ಯ ಪವರಾಣಾಂ ರಾಜಧಾನ್ಯಾಂ ಗುರುರಿವ ನಿವಸನ್ವಾದಿವೃಂದೈರಸವಾಧೇರ್ಯಾ ಬಹುವಿಧಾ ಗ್ರಂಥಾ ಕೃತವಾ ದರ್ಶನೇ ಸ್ಮೃತೌ ಸಾಹಿತ್ಯೇ ಚ ಯಾನವ್ಯಾಪಿ ಮೈಥಿಲಾಃ ಸ್ವರ್ಗೈರವಂ ಪಠಂತಿ ಪಾಠಯಂತಿಚ ॥

ಎಂದು ಹೇಳಲ್ಪಟ್ಟಿರುವುದರಿಂದ ಇವನು ಕಾಶ್ಮೀರದಲ್ಲಿ ಆಳಿದ ಫತ್ತೇಷಪುನೆಂಬ ರಾಜನ ರಾಜಧಾನಿಯಲ್ಲಿ ಗುರುವಾಗಿದ್ದು, ಸ್ಮೃತಿ, ಸಾಹಿತ್ಯದಲ್ಲಿ ಗ್ರಂಥಗಳನ್ನು ಬರೆದಿರುವುದಾಗಿಯೂ, ಗ್ರಂಥಕಾರನು ಕೀರ್ತಿಶೇಷನಾಗಿ ಎಷ್ಟೋ ಶತಮಾನಗಳು ಕಳೆದು ಹೋಗಿರುವುದಾದರೂ ಈ ಹೊತ್ತಿಗೂ ಗೋಕುಲನಾಥಕೃತ ಗ್ರಂಥಗಳನ್ನೇಕಗಳ ಪಾಠಪ್ರವಚನಗಳು ಮಿಥಿಲೆಯಲ್ಲಿ ನಡೆಯುತ್ತಿರುವುವಾಗಿ ಹೇಳಿರುವುದರಿಂದಲೂ, ಫತ್ತೇಷಹರರಾಜನು ಕ್ರಿ. ಶ. ೧೬ನೆಯ ಶತಮಾನದಲ್ಲಿದ್ದವನೆಂದು ತಿಳಿಯಬರುವುದರಿಂದಲೂ ಗ್ರಂಥಕಾರನು ಕ್ರಿ. ಶ. ೧೬ನೆಯ ಶತಮಾನದವನು ಎಂದು ನಿರ್ಧರಿಸಬಹುದಾಗಿದೆ.

ಗ್ರಂಥಗಳು:—

೧. ಚಕ್ರವರ್ತ್ತಿಃ ತತ್ತ್ವಚಿಂತಾಮಣಿ ಟೀಕಾ
೨. ಪದವಾಕ್ಯರತ್ನಾಕರಃ

* ಅಮೃತೋದಯಭೂಮಿಕಾ ಪುಟ. ೧

೩. ದಿಕ್ಕಾಲನಿರೂಪಣಂ
೪. ಮಿಥ್ಯಾತ್ವನಿರ್ವಚನಂ
೫. ಕುಸುಮಾಂಜಲಿ ಟಿಪ್ಪಣಿ
೬. ಕಾವ್ಯಪ್ರಕಾಶ ಟೀಕಾ
೭. ಕುಂಡಕಾದಂಬರೀ
೮. ದ್ವೈತನಿರ್ಣಯಟೀಕಾ ಕಾದಂಬರೀನಾಮ್ನಾ
೯. ಕಾದಂಬರೀ ಪ್ರಶ್ನೋತ್ತರಾಣಿ
೧೦. ಏಕಾವಳೀ
೧೧. ಕಾದಂಬರೀ ಕೇರ್ತಿಶ್ಲೋಕಾಃ
೧೨. ಶಿವಸ್ತುತಿ
೧೩. ಅಮೃತೋದಯ

ಇವನು ಬರೆದುದಾದ ಏಕಾವಳಿಯಲ್ಲಿ:—

ವೃತ್ತಸಾಗರರತ್ನಾನಾಂ ಸಾರಮುದ್ಧೃತ್ಯ ನಿರ್ಮಿತಾ
ಏಕಾವಳೀಯಥೇಸಾಹ ತವ ಕಂಠೇಲುರಶ್ಚಸೌ ॥
ವಿದ್ಯಾನಿಧಿಕ್ಷೀರಧಿಪಾರಿಜಾತಮುಮಾಸುತಂಗೋಕುಲನಾಥಧೀರಂ
ಏಕಾವಳೀಸಂಘಟನಾ ನಿವೇಶೇನ್ಯಯುಂಗ್ತಥೇಪತಿಸಾಹಭೂಪಃ ॥

ಎಂದು ಹೇಳಿಕೊಂಡಿರುವನು.

ಇವನಿಗೆ ಕಾದಂಬರೀ ಎಂಬ ಮಗಳೊಬ್ಬಳು ಇದ್ದುದಾಗಿಯೂ, ಚಿಕ್ಕತನದಲ್ಲಿಯೇ ಗಂಗಾಸಮಾಧಿಯನ್ನು ಹೊಂದಿದಳಾದುದರಿಂದ ಅವಳ ಮೇಲಣ ವಾತ್ಸಲ್ಯಾತಿಶಯದಿಂದ ಅವಳ ಹೆಸರಿನಲ್ಲಿ ಅನೇಕ ಗ್ರಂಥಗಳನ್ನು ಬರೆದಿರುವುದಾಗಿ "ಅಸ್ಯ ಚ ಕಾದಂಬರೀ ನಾಮ್ನ್ಯೇಕಾ ದುಹಿತಾಸೀತ್ | ಸಾ ಚ ದೈವವಶಾದ್ಬಾಲ್ಯ ಏವ ಜಾಹ್ನವೀ ಜಲೇನಿಮಗ್ನಾ ಸತೀ ವಿಗತಾಸುರ್ಬಭೂವ | ತದ್ವಾತ್ಸಲ್ಯೇನ ತನ್ನಾಮ್ನಾ ಕತಿಪಯಗ್ರಂಥಾ ಅಪಿನಿರ್ಮಿತಾಃ ಎಂದು ಹೇಳಿದೆ.

ಕುಂಡಕಾದಂಬರೀ ಭೂಮಿಕೆಯಲ್ಲಿ: —

ಆರಾಂಬುವ ಪ್ರಕೃತಿಕೈಪಣಾ ಬಾಧಿಭಿರ್ಧಾರ್ಯಮಾನೈ
ರ್ವಿಕ್ರೀಡಾರಃ ಕರುಣವಚನಂ ಪುತ್ರಿ ಕಾದಂಬರೀತಿ
ಕೋತಯಂಲೋಕಃ ಕ ಇವವಿಷಯಃ ಕಿಂ ಪುರಂ ಕೋ ನಿವಾಸೋ
ಯಸ್ಮಿನ್ಸಮ್ಪ್ರಮುಷ್ಯದಯಾ ಕ್ಷಂ ನಿಲೀಯ ಸ್ಥಿತಾಸಿ ॥
ಕುಂಡಕಾದಂಬರೀನಾಮಾ ಗ್ರಂಥೋಕಯಂ ತವ ಕೀರ್ತಯೇ
ಮಯಾ ಗೋಕುಲನಾಥೇನ ಸೋಪಪತ್ತಿರ್ನಬಧ್ಯತೇ ॥

ಎಂದು ಹೇಳಲ್ಪಟ್ಟಿದೆ.

ಅವ್ಯತೋದಯ:—ಇದು ೫ ಅಂಕಗಳುಳ್ಳ ನಾಟಕ. ಕೃಷ್ಣಮಿಶ್ರನ ಪ್ರಬೋಧಚಂದ್ರೋದಯದ, ಶ್ರೀವೇಂಕಟನಾಥನ ಸಂಕಲ್ಪಸೂರ್ಯೋದಯದ ವರ್ಗಕ್ಕೆ ಸೇರಿದುದು. ಅದ್ವೈತವು ನಾಟಕಕಥಾನಸ್ತು. ಸಂಸಾರವೆಂಬ ನಾಟಕಕ್ಕೆ ಸೃಷ್ಟಿವ್ಯಾಪಾರವೇ ಅಂಗ, ಪ್ರಳಯವೇ ಅದರ ಉಪರಮ, ಜೀವನೇ ನಟನು, ಈ ಪ್ರಪಂಚವೇ ರಂಗಸ್ಥಳ, ಪ್ರಳಯಾನಂತರ ಜೀವವೆಂಬ ನಟನಿಗೆ ವೃತ್ತಿನಿರೋಧದ ಮೂಲಕ ನಿಷ್ಕಾಮವು ಉಂಟಾಗುವುದು, ಇವೇ ಮೊದಲಾದವನ್ನು ಹೇಳಿ ಸಮಾಧಿಯಲ್ಲಿ ಈಶ್ವರನ ಸಾಕ್ಷಾತ್ಕಾರವನ್ನು ಹೇಗೆ ಹೊಂದಬಹುದೆಂಬ ವಿಚಾರವನ್ನು ರೂಪಕದಲ್ಲಿ ಬರೆದು ತೋರಿಸಿರುವನು. ಗ್ರಂಥಾಂತ್ಯದಲ್ಲಿ ಭರತವಾಕ್ಯರೂಪವಾದ ಅಜವರ್ಗನ ಪ್ರೇಕ್ಷಕೆಯು ಹೀಗಿರುವುದು: —

ಸಂಸಾರಾತ್ಪ್ರಪ್ಯ ನಿರ್ವೇದಂ ಸರ್ವೇಽನಿರ್ವಾಣಲಿಪ್ಸಯಾ
ಶ್ರವಣಾನ್ಮನನಾಧ್ಯಾನಾಪ್ಸ್ಯಂತು ಪುರುಷೋತ್ತಮಂ ॥

ಅತ್ಯಂತ ದುರವಗಾಹವಾದ ವಿಷಯವನ್ನು ಸಕಲರಿಗೂ ತಿಳಿಯುವಂತೆ ಬರೆಯುವ ದಕ್ಷತೆಯು ಸುಲಭಸಾಧ್ಯವಾದುದಲ್ಲ. ಈ ಗ್ರಂಥದ ವಿಚಾರವಾಗಿ ಕವಿಯು:—

ಲಲಿತಪದನಿಬದ್ಧಂ ಭಾವಗಾಂಭೀರ್ಯಗೂಢಂ
ಚರಮಚರಪದಾರ್ಥನ್ವರ್ಣಯಂತಂ ಮನೋಜ್ಞಂ
ಬಹುವಿಧಪರಿಪಕ್ವಂ ನಾಟ್ಯಕಾವ್ಯೋಪಬದ್ಧಂ
ಕಥಿನಮಪಿಸುಬೋಧಂ ಸಜ್ಜನಾವೀಕ್ಷ್ಯಯಂತು

ಎಂದು ಪ್ರೇಕ್ಷಕೆಯಲ್ಲಿ ಕೊಂಡಿರುವುದು ಕಂಡುಬರುವುದು.

ಮಾದರಿಗಾಗಿ ಕೆಲವು ಶ್ಲೋಕಗಳು:—

ಕನ್ಯಾರತ್ನಂ ಹಯಪರಿವೃಢಂ ನಾಗರಾಜಂ ಮಣೀನಾಂ
ಶ್ರೇಷ್ಠಂ ದತ್ವಾ ವಿಬುಧಪರಿಷತ್ತೋಷಿತಾನಾಗರೇಣ
ಧಿಗ್ದಾರಿದ್ರ್ಯಂ ಪರಿಭವಪದಂ ಯಸ್ಯ ದೋಷಾತ್ಪುರಾರೇ
ರ್ಮೂರ್ಧ್ನಿ ಕ್ಷಿಪ್ತೋ ವಿಬುಧವಿಭವಸಗ್ರಾಸಪಿಂಡಸ್ಯ ಖಂಡಃ ೩೩.

(ಸಮುದ್ರಮಥನಕಾಲದಲ್ಲಿ) ಸಮುದ್ರರಾಜನಿಂದ ದೇವತೆಗಳು ಲಕ್ಷ್ಮಿ, ಉಚ್ಚೈಶ್ರವಸ್ಸು, ನಾಗರಾಜ, ಚಿಂತಾಮಣಿ (ಅವರವರಿಗೆ ಬೇಕಾದವು) ಗಳನ್ನು ಹೊಂದಿ ಸಂತೋಷಪಡಿಸಲ್ಪಟ್ಟರಾದರೂ, ಈಶ್ವರನ ದೋಷದಿಂದ ಚಂದ್ರಖಂಡವು (ಚಂದ್ರನ ಒಂದುಚೂರು ಮಾತ್ರವೇ) ಈಶ್ವರನ ತಲೆಯಲ್ಲಿಡಲ್ಪಟ್ಟಿತೋ ಅಂತಹ ದಾರಿದ್ರ್ಯಕ್ಕೆ ಧಿಕ್ಕಾರವಿರಲಿ.

ಜಾತಿಂ ವಿಹಾಯ ಕೆನಕೇ ರಸತೇ ಪ್ರಸೂನಾಂ
ಭರ್ತಾ ಬಿಭರ್ತಿ ಶಿರಸಾ ಕೃಪಣಃ ಕಪರ್ದಂ
ರಾಜೇತಿ ವಕ್ರಶಶಿನಂ ತಿಲಕೀಕರೋತಿ
ತಸ್ಮಾದಸೌ ಪರಿಭವಾಸ್ಪದಮೀಶ್ವರೋಽಪಿ ॥ ೩—೪.

ಈಶ್ವರನು (ಸುವಾಸನೆಯುಳ್ಳ) ಮಾಲತೀಕುಸುಮವನ್ನು ಬಿಟ್ಟು (ವಾಸನಾ ಹೀನವಾದ) ಇತರಕುಸುಮಗಳಲ್ಲಿ ಸಂತೋಷಿಸುತ್ತಾನೆ ಅಥವಾ ಜಾತಿವ್ಯವಹಾರವನ್ನು ಅನುಸರಿಸದೆ (ಎಂದರೆಇತರರಂತೆ ವಸನಭೂಷಿತನಾಗದೆ) ಸುವರ್ಣಾಜಿನದಲ್ಲಿ ಆಶೆಗೊಳ್ಳುತ್ತಾನೆ. ತಲೆಯಲ್ಲಿ ಜಟೆಯನ್ನೋ ಅಥವಾ ಕವಡೆಯನ್ನೋ ಧರಿಸುತ್ತಾನೆ. ರಾಜನೆಂದು ವಕ್ರಚಂದ್ರನನ್ನು ತಿಲಕವನ್ನಾಗಿ ಮಾಡಿಕೊಂಡಿರುತ್ತಾನಾದುದರಿಂದಲೇ ಈಶ್ವರನು ಲೋಕದಲ್ಲಿ ಪರಿಭವಾಸ್ಪದನಾಗಿರುವನಲ್ಲವೆ!

ಆನಂದೋದಯಮಾಯತಿಂ ಸುಮನಸಾಮಾನಂದಸಂವರ್ಧನಃ
ಪ್ರಚ್ಛನ್ನೋ ವಸತಿಂ ಸ್ಮ ತೇನ ಹಿ ಜನಾಂ ನಾಸೀದಸೌ ಗೋಚರಃ
ಸಂನ್ಯಾಸೇನ ಕೃತಾಕೃತೇ ಪ್ರಶಮಿತೇ ಜ್ಞಾನೇನ ಮೋಹೇ ಹತೇ
ಧನ್ಯೋಽಸನ್ಯಧನೋ ನರಂತರಮಮುಂ ಮೋಕ್ಷಂ ಜನೋ ಭೋಕ್ಷ್ಯತೇ॥ ೫-೧೦

ಮೂಢನಾದ ಸಂಸಾರಿಯು ಶರೀರವು, ಆನಂದದಾಯಕವೆಂದು ತಿಳಿದು ಅದರಲ್ಲಿ ಗೋಪ್ಯನಾಗಿ ವಾಸಮಾಡುತ್ತಾನಾದುದರಿಂದಲೇ ಇವನು ಜನರಮನಸ್ಸಿಗೆ ಗೋಚರನಾಗುವುದಿಲ್ಲ. ಇದನ್ನು ಬಿಟ್ಟು ಸಂನ್ಯಾಸವನ್ನು ಸ್ವೀಕಾರಮಾಡಿ ಜ್ಞಾನಾರ್ಜನೆಯಿಂದ ಮೋಹವು ನಾಶಗೊಳಿಸಲ್ಪಟ್ಟುದಾದರೆ ಆಗ ಮನುಷ್ಯನು ಮತ್ತಾವ ವಿಧವಾದ ಪ್ರತ್ಯಾಶೆಯೂ ಇಲ್ಲದೆ ಮೋಕ್ಷವನ್ನು ಹೊಂದುತ್ತಾನೆ.

ನಾ ರಾ ಯ ಣ ಭ ಟ್ಟ

ಇವನು ಕೇರಳೀಯ ಬ್ರಾಹ್ಮಣನು. ಮಾತೃದತ್ತನ ಮಗನು. 'ಮೆಪ್ಪತ್ತೂರು ಇಲ್ಲಂ' ಎಂಬ ಗ್ರಾಮದವನು. ಇದು ಉತ್ತರ ಮಲಬಾರಿನಲ್ಲಿ ನೀಲಾನದಿಯ ಉತ್ತರಕ್ಕಿರುವ 'ತಿರುನಾವಾ' ಎಂಬ ಪ್ರಸಿದ್ಧ ದೇವಾಲಯದ ಬಳಿಯಣ ಪೆರುಮನಂ ಎಂಬದಕ್ಕೆ ಸೇರಿದುದು ಇವನು ಆಗ ಪ್ರಸಿದ್ಧನಾಗಿದ್ದ 'ಅಚ್ಯುತ ಪಿಷಾರೋದಿ' ಎಂಬವನಲ್ಲಿ ವ್ಯಾಕರಣವೇ ಮೊದಲಾದವುಗಳನ್ನು ಕಲಿತನು. ಕಾಲಕ್ರಮದಲ್ಲಿ ಮಹಾಕವಿಯೆಂದು ಸಕಲರಿಂದಲೂ ಗೌರವಿಸಲ್ಪಡುತ್ತಿದ್ದುದನ್ನೂ ಅವನು ಬರೆದ ಗ್ರಂಥೋತ್ಕರ್ಷತೆಯನ್ನೂ ಕೇಳಿ 'ಅಂಬಲಪೂಷ' ಕ್ಕೆ ರಾಜನಾದ ದೇವನಾರಾಯಣನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡು ಅವನಿಗೆ ಆಶ್ರಯ

ವನಿತ್ತನು. ಇವನು ಕೇಳಿಕೊಂಡಂತೆ 'ಪ್ರಕ್ರಿಯಾಸರ್ವಸ್ವ' ಎಂಬ ಮಹತ್ತರ ವ್ಯಾಕರಣಗ್ರಂಥವನ್ನು ಬರೆದುದಾಗಿ ಹೇಳಿದೆ. ಅಲ್ಲದೆ ಭಟ್ಟೋಜೀದೀಕ್ಷಿತನು ಇದನ್ನು ಕೊಂಡಾಡಿರುವುದಾಗಿಯೂ ಹೇಳಿದೆ.

ಕಾಲ:—ದೇವನಾರಾಯಣನು ಕ್ರಿ. ಶ. ೧೬ನೆಯ ಶತಮಾನದವನು. 'ನಾರಾಯಣೀಯಂ' ಎಂಬ ಗ್ರಂಥವನ್ನು ಬರೆದು ಮುಗಿಸಿದುದು ಕ್ರಿ. ಶ. ೧೫೯೦ ರಲ್ಲಿ. ಇದರಿಂದ ಇವನು ಕ್ರಿ. ಶ. ೧೬ನೆಯ ಶತಮಾನದ ಉತ್ತರಾರ್ಧದವನೆಂಬುದು ಸ್ಪಷ್ಟವಾಗುತ್ತದೆ.

ಗ್ರಂಥಗಳು:—

೧. ನಾರಾಯಣೀಯಂ
೨. ಮಾನಮೇಯೋದಯಃ
೩. ಪ್ರಕ್ರಿಯಾಸರ್ವಸ್ವಂ
೪. ಧಾತುಕಾವ್ಯಂ
೫. ಅಷ್ಟಮಿರೋಚಂಪೂಕಾವ್ಯಂ
೬. ಕೈಲಾಸಶೈಲವರ್ಣನಾ
೭. ಅಹಲ್ಯಾಶಾಪಮೋಕ್ಷಃ
೮. ಪುಷ್ಪೋದ್ಭೇದಂ, ಇತ್ಯಮರುಕ ಶ್ಲೋಕವಾಖ್ಯಾನಂ
೯. ಕೌಂತೇಯಾಷ್ಟಕಂ
೧೦. ಶೂರ್ಪಣಖಾಪ್ರಲಾಪಃ
೧೧. ರಾಮಕಥಾ
೧೨. ದೂತವಾಕ್ಯಪ್ರಬಂಧಃ
೧೩. ನಾಳಾಯನೀಚರಿತಂ
೧೪. ನೃಗಮೋಕ್ಷಪ್ರಬಂಧಃ
೧೫. ರಾಜಸೂಯಪ್ರಬಂಧಃ
೧೬. ಸುಭದ್ರಾಹರಣಪ್ರಬಂಧಃ
೧೭. ಸ್ವಾಹಾಸುಧಾಕರಂ
೧೮. ಕೋಟಯವಿರಹಃ ಸಂಗೀತಕೇತುಶೃಂಗಾರಲೀಲಾಚರಿತಂ.

ನಾರಾಯಣೀಯಂ;—ಇದು ಸ್ತುತಿಪರ ಗ್ರಂಥವೆನ್ನುವುದಾದರೂ ಕಾವ್ಯ ದೃಷ್ಟಿಯಿಂದ ಮಹಾಕಾವ್ಯವೆನ್ನಬೇಕಾಗುತ್ತದೆ. ಮಹಾಕಾವ್ಯಲಕ್ಷಣಗಳೆಲ್ಲವೂ ಇದರಲ್ಲಿ ಸಮಾವೇಶಗೊಂಡಿವೆ. ಶ್ರೀಮದ್ಭಾಗವತ ಕಥೆಯನ್ನು ಸಂಕ್ಷೇಪಿಸಿ ಪ್ರತಿ ಹತ್ತು ಶ್ಲೋಕಗಳಿಗೆ ಒಂದು ದಶಕವೆಂದು ಹೇಳಿ ಅಂತಹ ನೂರು ದಶಕಗಳನ್ನು

ಬರೆದಿರುವನು. ಒಟ್ಟು ೧೦೩೬ ಶ್ಲೋಕಗಳಿರುವುವು. ಇವನಿಗೆ ವಾತರೋಗ ಉಂಟಾಗಲು ಕಡುನೊಂದು ತನ್ನ ಕುಲದೇವನಾದ ನಾರಾಯಣನನ್ನು ಪ್ರಾರ್ಥಿಸಿ ಅದರಂತೆ ಗುಣವಾದನೆಂದೂ ಅದೇ ನೂರು ದಶಕಗಳನ್ನುಳ್ಳನಾರಾಯಣೀಯ ಗ್ರಂಥವೆಂದೂ ಕಥೆಯು ಇದೆ. ಈ ಕಡೆ ಭಾಗವತವು ಹೇಗೆ ಸರ್ವಾದರಣೀಯವೋ ಹಾಗೆ, ಈ ನಾರಾಯಣೀಯ ಗ್ರಂಥವು ಕೇರಳೀಯರಿಂದ ಮಾನ್ಯವಾಗಿದೆ. ಇದಕ್ಕೆ ದೇಶಮಂಗಲವಾರ್ಯಕೃತ 'ಭಕ್ತಿಪ್ರಿಯಾ' ಎಂಬ ವ್ಯಾಖ್ಯಾನವು ಇರುವುದು.

ಕಾರುಣ್ಯಾತ್ ಕಾಮಮನಂ ದದತಿ ಖಲು ಪರೇ ಸ್ವಾತ್ಮದಸ್ತ್ವಂ ವಿಶೇಷಾ
ದೈಶ್ವರ್ಯಾದೀಶಶೇಽನ್ಯೇ ಜಗತಿ ಪರಜನೇ ಸ್ವಾತ್ಮನೋಽಪೀಶ್ವರಸ್ತ್ವಂ
ಇತ್ಯುಚ್ಚೈರಾರಮಂತಿ ಪ್ರತಿಪದವಿಧುರೇ ಚೇತನಾಃ ಸ್ವೀಕಭಾಗ್ಯಾ
ಸ್ತ್ವಂ ಚಾತ್ಮಾರಾಮ ಏವೇತ್ಯತುಲಗುಣಸುಗುಣಾಧಾರ! ತೌರೇ! ನಮಸ್ತೇ॥

ದಶಕ. ೧—೧೯.

ಎಲೈ! ಕೃಷ್ಣಪರಮಾತ್ಮನೆ! ಬ್ರಹ್ಮಾದಿ ದೇವತೆಗಳು ಮೋಕ್ಷವನ್ನು ಬಿಟ್ಟು ಬೇರೆ ಯಾವ ವರಗಳನ್ನಾದರೂ ಕೊಡಬಲ್ಲರು. ನೀನು ಮೋಕ್ಷವನ್ನೂ ಕೊಡುವವನಾಗಿರುತ್ತೀ. ಬ್ರಹ್ಮಾದಿಗಳು ಚರಾಚರವಸ್ತುಗಳಲ್ಲಿ ಮಾತ್ರ ನಿಗ್ರಹಾನುಗ್ರಹ ಶಕ್ತಿಯುಳ್ಳವರಾಗಿರುವರು. ನೀನಾದರೋ ಅಂತಹ ಬ್ರಹ್ಮನಿಗೂ ಈಶ್ವರನಾಗಿರುತ್ತೀ ಎಂದರೆ ನಿನ್ನನ್ನು ಜೀವರೂಪದಿಂದ ಸಂಸಾರಾರ್ಣವವಲ್ಲಿಟ್ಟು ನಿಗ್ರಹಿಸುವುದಕ್ಕೂ ತತ್ಸಮಕಾಲದಲ್ಲಿಯೇ ಸ್ವಾನಂದಾನುಭವದಲ್ಲಿಟ್ಟು ಅನುಗ್ರಹಿಸುವುದಕ್ಕೂ ಸಮರ್ಥನಾಗಿರುತ್ತೀ. ಜನ್ಮಜನ್ಮಾಂತರಗಳಲ್ಲಿ ಸಂಪಾದಿಸಲ್ಪಟ್ಟ ಭಕ್ತಿ ಮತ್ತು ಜ್ಞಾನಮಾರ್ಗವುಳ್ಳ ಜೀವರುಗಳು ಕರ್ಮಪರಿಪಾಕದಿಂದ ಕಂಡು ನಿನ್ನನ್ನು ಸಂತೋಷಿಸುತ್ತಾರೆ. ನೀನಾದರೋ ಆತ್ಮಾರಾಮನಾಗಿದ್ದುಕೊಂಡು ನಿನ್ನಲ್ಲಿಯೇ ಆನಂದಗೊಳ್ಳುತ್ತಿ ಎಂದರೆ ನಿನಗೂ ಮತ್ತು ಇತರರಿಗೂ ನೀನೇ ಆನಂದದಾಯಕನಾಗಿರುತ್ತೀ. ಆದುದರಿಂದ ಲೋಕೋತ್ತರ ಗುಣಾಕರನಾಗಿರುವ ಎಲೆ! ಕೃಷ್ಣ! ನಿನಿಗೆ ನಮಸ್ಕಾರಗಳು.

ದೈತ್ಯೇ ದಿಕ್ಪ ವಿಸೃಷ್ಪಚಿಕ್ಷುಷಿ ಮಹಾಸಂರಂಭಿಣೇ ಸ್ತಂಭತಃ
ಸಂಭೂತಂ ನ ಮೃಗಾತ್ಮಕಂ ನ ಮನುಜಾಕಾರಂ ವಪುಸ್ತೇವಿಭೋ!
ಕಿಂ ಕಿಂ ಭೀಷಣಮೇತದದ್ಭುತಮಿತಿವ್ಯುದ್ಭ್ರಾಂತ ಚಿತ್ತೇಽಸುರೇ
ವಿಸ್ಫೂರ್ಜದ್ಧವಲೋಗ್ರರೋಮವಿಕಸದ್ವಕ್ತ್ರಾ ಸಮಾಜ್ಮಂಭಥಾಃ ॥ ೨೫—೨.

ದನುಜವೀರನಾದ ಹಿರಣ್ಯಕಶಿಪು ಬಹಳ ಸಂಭ್ರಮದುದಿಂದ ಕೂಡಿದವನಾಗಿ ಎಲ್ಲಾ ಕಡೆಯಲ್ಲಿಯೂ ದೃಷ್ಟಿಯನ್ನು ಪ್ರಸರಿಸುತ್ತ (ಬಾಲಕನಾದ ಪ್ರಹ್ಲಾದನನ್ನು ಭಯಪಡಿಸುತ್ತ ನಿನ್ನ ಹರಿಯು ಎಲ್ಲಿ? ಎಂದು ಗರ್ಜಿಸಿದಾಗ) ರುಂಡವು ಮೃಗಾತ್ಮಕವೂ ಮುಂಡವು ಮನುಷ್ಯಾತ್ಮಕವಾಗಿ ಕಂಬದೊಳಿಮೂಡಿದ ಎಲೈ! ಪರಮಾತ್ಮನೆ! ನಿನ್ನನ್ನುನೋಡಿ ಇದೆಂತಹ ಅದ್ಭುತ ಇದೆಂತಹ ಭಯಂಕರವೆಂದು ಭ್ರಾಂತ

ಚೇತನನಾಗಿ ಆ ರಾಕ್ಷಸನು ನಡುಗುತ್ತಿರಲು ಕೋಪದಿಂದ ಘುಡಿಘುಡಿಸುತ್ತ ಶುಭ್ರಗಳಾಗಿಯೂ ಉಗ್ರವಾಗಿಯೂ ತೋರುತ್ತಿರುವ ರೋಮರಾಜಿಯಿಂದ ಕೂಡಿದವನಾಗಿ ಹೊರಕ್ಕೆಬಂದು ಉಗ್ರರೂಪನಾಗಲಿಲ್ಲವೆ!

ಭೂರ್ಯಃ ! ಕಾಯೇನ ವಾಚಾ ಮುಹುರಪಿ ಮನಸಾ ತ್ವದ್ಬಲಪ್ರೇರಿತಾತ್ಮಾ
ಯದ್ಯತ್ ಕುರ್ವೇ ಸಮಸ್ತಂ ತದಿಹ ಪರತರೇ ತ್ವಯ್ಯಸಾವರ್ಪಯಾಮಿ
ಜ್ಯಾತ್ಯಾಪೀಹ ಶ್ವಪಾಕಸ್ತ್ವಯಿ ನಿಹಿತಮನಃ ಕರ್ಮವಾಗಿಂದ್ರಿಯಾರ್ಥ
ಪ್ರಾಣೋ ವಿಪ್ರಂ ಪುನೀತೇ ನ ತು ವಿಮುಖಮನಾಸ್ತ್ವತ್ಪದಾತ್ ವಿಪ್ರವರ್ಯಃ
೯೧—೨೦

ಎಲೈ! ಸ್ವಾಮಿಯೇ! ಅಂತರ್ಯಾಮಿಯಾಗಿರತಕ್ಕ ನಿನ್ನಿಂದ (ವಾಸನಾರೂಪದಿಂದ) ಪ್ರೇರಿಸಲ್ಪಟ್ಟ ಮನಸ್ಸುಳ್ಳ ನಾನು ತ್ರಿಕರಣ (ಕಾಯಾ ವಾಚಾ ಮನಸಾ) ಪೂರ್ವಕವಾಗಿ ಮಾಡುವ ಸಕಲ ಕರ್ಮಗಳನ್ನೂ ನಿನಿಗೆ ಅರ್ಪಿಸುತ್ತೇನೆ. ಹೇಗೆಂದರೆ ಲೋಕದಲ್ಲಿ ರಾಜನಿಂದ ಪ್ರೇರಿತನಾದ ಮನುಷ್ಯರು ಅಥವಾ ಪುರುಷನು ತದನು ಗುಣವಾಗಿ ಮಾಡುವ ಕೆಲಸವನ್ನು ನೋಡಿ, ಹೇಗೆ ಪ್ರೀತನಾಗುವನೋ ಹಾಗೆ ಸರ್ವಾಂತರ್ಯಾಮಿಯಾದ ನಿನ್ನಿಂದ ಪ್ರೇರಿತನಾಗಿ ಆಚರಿಸುವ ನನ್ನ ಸಕಲ ಕರ್ಮಗಳೂ ನಿನಿಗೆ ಪ್ರೀತಿಯನ್ನುಂಟುಮಾಡುತ್ತವೆ. ವಾಙ್ಮನಃ ಕರ್ಮೇಂದ್ರಿಯಾದಿಗಳಲ್ಲಿ ಶುದ್ಧನಾಗಿ ಕಾರ್ಯಗಳನ್ನು ಮಾಡುತ್ತ ನಿಶ್ಚಲಭಕ್ತಿಯುಳ್ಳ ಚಂಡಾಲನಾದರೂ ಪ್ರಪಂಚವನ್ನು ಪಾವನಮಾಡುವನಾಗುತ್ತಾನೆ. ಆದರೆ, ಸಕಲ್ಮಷನಾದವನು ಬ್ರಾಹ್ಮಣೋತ್ತಮನಾದರೂ ತನ್ನನ್ನು ತಾನು ಪರಿಶುದ್ಧನನ್ನಾಗಿ ಮಾಡಿಕೊಳ್ಳಲು ಸಮರ್ಥನಾಗಲಾರನು.

ದೇವವಿಮಲಗಣಿ

ಯಂ ಪ್ರಸೂತ **ಶಿವಾಹ್ವಸಾಧು**ಮಘವಾ **ಸೌಭಾಗ್ಯದೇವೀ** ಪುನಃ
ಪುತ್ರಂ ಕೋವಿದಸಿಂಹ **ಸೀಹವಿಮಲಾಂ**ತೇವಾಸಿನಾಮಗ್ರಿಮಂ
ತದ್ಬ್ರಾಹ್ಮೀ ಕ್ರಮಸೇವಿ **ದೇವವಿಮಲ** ವ್ಯಾವರ್ಣಿತೇ ಹೀರಯು
ಕ್ಸೌಭಾಗ್ಯ ಭಿಧಹೀರಸೂರಿಚರಿತೇ.....

"ಇತಿ ಪಂಡಿತಸೀಹವಿಮಲಗಣಿ ಶಿಷ್ಯಪಂಡಿತದೇವವಿಮಲಗಣಿ ವಿರಚಿತಾಯಾಂ" ಎಂದು ಪ್ರತಿಸರ್ಗಾಂತ್ಯದಲ್ಲಿ ಹೇಳಿಕೊಂಡಿರುವುದರಿಂದ ಇವನ ತಂದೆಯು ಶಿವಸಾಧು, ತಾಯಿ ಸೌಭಾಗ್ಯದೇವೀ ಎಂದೂ ಸೀಹವಿಮಲಗಣಿಯ ಅಂತೇವಾಸಿ

ಯೆಂದೂ ಗೊತ್ತಾಗುತ್ತದೆ. ಈತನ ಜನ್ಮಭೂಮಿಯು ಯಾವುದೆಂಬದು ತಿಳಿಯದು. ಗ್ರಂಥ ಪ್ರಶಸ್ತಿಯಿಂದ ಇವನು ಶ್ವೇತಾಂಬರ ಜೈನಪಂಗಡದವನೆಂದು ಹೇಳಲಾಗುತ್ತದೆ.

ಕಾಲ:—"ಗ್ರಂಥನಿರ್ಮಾಣ ಸಮಯಸ್ತು ವರ್ಣನೀಯಸ್ಯ ವೀರವಿಜಯ ಗಣೇರ್ಮರಣಸ್ಯ ೧೬೨೩ ವಿಕ್ರಮಸಂವತ್ಸರೇ (೧೫೬೫ ಕ್ರಿ. ಶ.) ಭಾದ್ರಪದ್ಯ ಶುಕ್ಲೈಕಾದಶ್ಯಾಂ" ಎಂದು ಹೇಳಿರುವುದರಿಂದ ಇವನು ಕ್ರಿ. ಶ. ೧೬ನೆಯ ಶತಮಾನದವನೆಂಬುದು ಸ್ಪಷ್ಟವಾಗಿದೆ.

ಗ್ರಂಥ:—ಈತನು 'ಹೀರಸೌಭಾಗ್ಯಂ' ಎಂಬ ೧೬ ಸರ್ಗಗಳುಳ್ಳ ಮಹಾ ಕಾವ್ಯವನ್ನು ಬರೆದಿರುವನು. ಇದಕ್ಕೆ 'ಸ್ವೋಪಜ್ಞ' ಎಂಬ ವ್ಯಾಖ್ಯಾನವಿರುವುದು.

ಹೀರಕುಮಾರನು ಶೈಶವಾವಸ್ಥೆಯನ್ನು ಕಳೆದು ಗುರುಗಳಿಂದ ಸದುಪದೇಶಿತನಾಗಿ, ಪ್ರಪಂಚದ ಅಸ್ಥಿರತೆಯನ್ನು ತಿಳಿದು ಆಚಾರ್ಯನಲ್ಲಿ ದೀಕ್ಷೆಯನ್ನು ಹೊಂದಿ ವೈರಾಗ್ಯಚಕ್ರವರ್ತಿಯಾಗಿ, ಜನಧರ್ಮಗಳನ್ನುಪದೇಶಿಸಿ ಮುಕ್ತನಾದನೆಂಬುದೇ ಕಥಾವಸ್ತು. ಈ ಕಾವ್ಯದಲ್ಲಿ ಕವಿಯು ಅನೇಕವಿಧಗಳಾದ ನಗರಸಾಗರೋದ್ಯಾನ ಶೈಲತಟಾಕ ತೀರ್ಥಕ್ಷೇತ್ರ ಧರ್ಮ ಮೊದಲಾದ ವಿಷಯಗಳನ್ನು ಮನಮುಟ್ಟುವಂತೆ ಬಹು ದಕ್ಷತೆಯಿಂದಲೂ ಚತುರತೆಯಿಂದಲೂ ವರ್ಣಿಸಿರುವನು. ಇದನ್ನು ಜೈನ ಧರ್ಮಗ್ರಂಥವೆಂದರೂ ಸಲ್ಲುವುದು. 'ಸಮಾಪ್ತ' ಎಂದು ಹೇಳದೆ ಇರುವುದರಿಂದ ಗ್ರಂಥವು ಅಪೂರ್ಣವೆಂದು ತೋರುತ್ತದೆ. ಇದರಕೆಲವು ಶ್ಲೋಕಗಳು:—

ಕಾರ್ಯಕಾಲ ಇತರೋಽಪಿ ನರೇಶ್ವಾದೀಯತೇ ತದನು ಮುಚ್ಯತ ಏವ
ವಿಭ್ರಮಾಯ ವಿಧೃತೋ ಹೃದಿ ಹಾರೋ ಹೀಯತೇ ರಹಸಿ ಸೋಮಮುಖೇಭಃ ॥ ೫-೨೬

ಪ್ರಪಂಚದಲ್ಲಿ ಜನರು ತಮಗಾವುದಾದರೂ ಕೆಲಸವಾಗಬೇಕಾಗಿದ್ದರೆ ಆ ಸಮಯದಲ್ಲಿ ಇತರರನ್ನು ಆಶ್ರಯಿಸಿ ತಮ್ಮ ತಮ್ಮ ಕೆಲಸವಾದನಂತರ ಅವರನ್ನು ಬಿಟ್ಟು ಬೇರೆಯಾಗುವಂತೆ ಸ್ತ್ರೀಯರು ತಮಗೆ ಬೇಕಾದಾಗ ವಿಲಾಸಕ್ಕಾಗಿಯೋ ಅಥವಾ ಅಲಂಕಾರಕ್ಕಾಗಿಯೋ ಮುಕ್ತಾಹಾರಾದಿಗಳನ್ನು ಕಂಠದಲ್ಲಿ ಧರಿಸುತ್ತಾರೆ. ಆದರೆ ಕ್ರೀಡಾವಿಶೇಷಸಮಯಗಳಲ್ಲಿ ಅವುಗಳನ್ನು ವಕ್ಷಸ್ಥಲದಿಂದ ಬೇರ್ಪಡಿಸುತ್ತಾರೆ. ಎಂದರೆ ಲೋಕಕ್ಕೆ ಸ್ವಾರ್ಥದಲ್ಲಿರುವಷ್ಟು ಅಭಿಲಾಷೆಯು ಪರಾರ್ಥದಲ್ಲಿಲ್ಲವೆಂದು ಭಾವವು.

ಸ್ಮೇರಕ್ಷ್ವೇರವಶಂಕಯಾ ಕುವಲಯಾನ್ಯುತ್ತಂಸಯತ್ಯಂಗನಾ
ಭೃಂಗಾನ್ಮಾಲಿಕ ಬಾಲಿಕಾಃ ಸಮಧಿಯಾ ಗೃಹ್ಣಂತಿ ಕೇಳೀವನೇ
ಮುಕ್ತಾಭ್ರಾಂತಿಭೃತಃ ಕಿರಾತವನಿತಾಶ್ಚಿನ್ವಂತಿ ಗುಂಜವ್ರಜಾಂ
ಶ್ಲಂಚತ್ಕಂದ್ರಮಸೋಬ್ರಮಂ ವಿತನುತೇ ಸೋ ಕಸ್ಯ ಚಂದ್ರೋದಯಃ॥೭— ೧೧

ಷೋಡಶ ಕಲಾಪರಿಪೂರ್ಣನಾದ ಚಂದ್ರನ ಕಾಂತಿಯಿಂದ ಮುಗ್ಧರಾದ (ಮನಸೋತ) ಹೆಂಗಳೆಯರು ವಿಕಸಿತವಾದ ಶ್ವೇತಕಮಲಗಳ ಭ್ರಾಂತಿಯಿಂದ ನೀಲೋತ್ಪಲಂಗಳನ್ನು ಮುಡಿದುಕೊಳ್ಳುತ್ತಾರೆ ಅಥವಾ ಕರ್ಣಾಭರಣವನ್ನು ಮಾಡಿಕೊಳ್ಳುತ್ತಾರೆ. ಪುಷ್ಪವನ್ನು ವಿಕ್ರಯಿಸುವ ನಲ್ಲೆಯರು ಹೂಗಳೆಂಬ ಭ್ರಾಂತಿಯಿಂದ ಕೇಳೀ ಗೃಹದಲ್ಲಿ ಭೃಂಗಗಳನ್ನು ಹಿಡಿದುಕೊಳ್ಳುತ್ತಾರೆ. ಕಿರಾತಸ್ತ್ರೀಯರು ಮುಕ್ತಾಫಲ ಭ್ರಾಂತಿಯಿಂದ ಗುಲಗಂಜಿಯನ್ನು ಆರಿಸಿಕೊಳ್ಳುತ್ತಾರೆ. ಆದಕಾರಣ ಪೂರ್ಣಚಂದ್ರನು ಯಾರಿಗೆತಾನೇ ಭ್ರಾಂತಿಯನ್ನುಂಟುಮಾಡುವುದಿಲ್ಲ!

ಪಂಚಾಪಿ ದೇವತರವೋಽಧರಿತುಃ ಸ್ವದಾನ
ಲೀಲಾಯಿತೈರ್ವಸುಮತೀ ಕುಸುಮೋತ್ಪಜೀವೈಃ
ಸಂಭೂಯ ಕಾಂಚನಶಿಲೋಚ್ಚಯ ಚೂಲಿಕಾಯಾಂ
ಕಿಂ ಮಂತ್ರಯಂತ್ಯವನಿವೃತ್ರಹಣಂ ವಿಜೇತುಂ ॥ ೧೦—೫೫.

ಸರ್ವಾತಿಶಯಸೌಂದರ್ಯಮೂರ್ತಿಮತ್ತಾಗಿ ಭೂಮನ್ಮಥನಂತಿರುವ ಕೊಡಗೈಯುಳ್ಳ ರಾಜನಿಂದ ತಿರಸ್ಕೃತವಾದ ಕಲ್ಪಪಾರಿಜಾತಾದಿ ದೇವತರುಗಳುಮೇರುಪರ್ವತದಲ್ಲಿ ಸೇರಿ ಈ ರಾಜನನ್ನು ಜಯಿಸಬೇಕೆಂದು ಯೋಚಿಸುತ್ತಿವೆಯೋ ಎಂಬಂತೆ ಕಾಣುತ್ತದೆ.

ದಾಮೋದರಮಿಶ್ರ *

ದೀರ್ಘದೋಷಕುಲೋದ್ಭೂತ
ದಾಮೋದರ ಇತಿಶ್ರುತಃ
ಛಂದಸಾಂಲಕ್ಷಣಂತೇಸ
ಸೋದಾಹರಣಮುಚ್ಯತೇ ॥

ಎಂಬ ಗ್ರಂಥಸ್ಥ ಶ್ಲೋಕದಿಂದಲೂ, "ಇತಿ ಮೈಥಿಲೀಯ ದೀರ್ಘದೋಷ ಕುಲೋದ್ಭೂತ **ದಾಮೋದರಮಿಶ್ರ** ವಿರಚಿತೇ" ಎಂದು ಗ್ರಂಥಾಂತ್ಯದಲ್ಲಿ ಹೇಳಲ್ಪಟ್ಟಿರುವುದರಿಂದ ಇವನು ಮೈಥಿಲೀಯ ಬ್ರಾಹ್ಮಣನೆಂದೂ, ದೀರ್ಘದೋಷ ಕುಲ ಸಂಜಾತನೆಂದೂ ತಿಳಿಯಬಹುದು.

ಕಾಲ:—ಪ್ರಾಕೃತಪಿಂಗಳ ಸೂತ್ರಕ್ಕೆ ವ್ಯಾಖ್ಯಾನಕಾರನಾದ ಲಕ್ಷ್ಮೀನಾಥನು ಕ್ರಿ. ಶ. ೧೬೫೭ರಲ್ಲಿ ಬರೆದಿರುವ ವ್ಯಾಖ್ಯಾನದಲ್ಲಿ ಈತನನ್ನು ಉದಾಹರಿಸಿಕೊಂಡಿರುವ

* ಹನುಮನ್ನಾಟಕವನ್ನು (ಯಾವುದೋ ಸಂಗ್ರಹೀತ) ಮಹಾನಾಟಕವೆಂದು ಹೇಳುವ ದಾಮೋದರಮಿಶ್ರನು ಇವನಲ್ಲ.

ನಾದುದರಿಂದ ಈ ಕವಿಯು ಲಕ್ಷ್ಮೀನಾಥನಿಗಿಂತ ಪ್ರಾಚೀನನೆಂದೂ ಕ್ರಿ. ಶ. ೧೬ನೆಯ ಶತಮಾನದವನೆಂದೂ ತಿಳಿಯಬಹುದು.

ಗ್ರಂಥ:—ಇವನು 'ವಾಣೀಭೂಷಣ' ಎಂಬ ವ್ಯಾಕರಣ ಗ್ರಂಥವನ್ನು ಬರೆದಿರುವನು. ಇದರಲ್ಲಿ ಛಂದೋಲಕ್ಷಣಗಳು ಉದಾಹರಣೆಗಳ ಮೂಲಕ ಸಮರ್ಥಿಸಲ್ಪಟ್ಟಿರುವುವು.

ಗಂಗಾನಂದ

ಇವನು ಮೈಥಿಲೀಯ ಬ್ರಾಹ್ಮಣನು. ಕ್ರಿ. ಶ. ೧೫೦೬—೧೫೨೭ರವರೆಗೆ ಬಿಕಾನಿರ್‌ಸಂಸ್ಥಾನದ ಧೊರೆಯಾದ ಕರ್ಣರಾಜನು ಕೇಳಿಕೊಂಡ ಮೇರೆ 'ಕರ್ಣಭೂಷಣ' ಎಂಬ ಅಲಂಕಾರ ಗ್ರಂಥವನ್ನು ಬರೆದುದಾಗಿ:—

ಆಜ್ಞಾಯಾತಸ್ಯ ಭೂಮಾಂದ್ರೋ
ನ್ಯಾರ್ಯಕಾವ್ಯಕಲಾವಿದಃ
ಗಂಗಾನಂದ ಕವೀಂದ್ರೇಣ
ಕ್ರಿಯತೇ **ಕರ್ಣಭೂಷಣಂ.**

ಎಂಬುದರಿಂದ ಗೊತ್ತಾಗುತ್ತದೆ.

ರಾಮಚಂದ್ರ

ಶೃಂಗಾರವೈರಾಗ್ಯಶತಂಸಪಂಚ
ವಿಂಶತ್ಯಯೋಧ್ಯಾನಗರೇವ್ಯಧತ್ತ
ಅಚ್ಛೇವಿಯದ್ಭಾರಣಬಾಣಚಂದ್ರೇ
ಶ್ರೀರಾಮಚಂದ್ರೋನುಚತಸ್ಯಟೀಕಾಂ ॥

ಶ್ರೀರಾಮಚಂದ್ರಕವಿನಾಕಾವ್ಯಮಿದಂವ್ಯರಚಿ ವಿರತಿಬೀಜತಯಾ
ರಸಿಕಾನಾಮಪಿರತಯೇ ಶೃಂಗಾರಾರ್ಥೋಪಿಸಂಗೃಹೀತ್ರ ॥

"ಇತಿಶ್ರೀಲಕ್ಷ್ಮಣಭಟ್ಟಸೂನು ಶ್ರೀರಾಮಚಂದ್ರಕವಿಕೃತಂ ಸಟೀಕಂರಸಿಕರಂಜನಂ ನಾಮಶೃಂಗಾರವೈರಾಗ್ಯಾರ್ಥಸಮನ್ವಿತಂ ಕಾವ್ಯಂ ಸಂಪೂರ್ಣಂ" ಎಂಬಿವುಗಳಿಂದ ಇವನು ಅಯೋಧ್ಯಾನಗರವಾಸಿಯಾದ ಲಕ್ಷ್ಮಣಭಟ್ಟನ ಮಗನೆಂದೂ ಬ್ರಾಹ್ಮಣನೆಂದೂ ಕ್ರಿ. ಶ. ೧೬೨೪ರಲ್ಲಿ ಶೃಂಗಾರವೈರಾಗ್ಯ ಸಮನ್ವಿತಬೋಧಕವಾದ 'ರಸಿಕರಂಜನ' ಎಂಬ ಗ್ರಂಥವನ್ನು ಬರೆದುದಾಗಿ ತಿಳಿಯಬರುತ್ತದೆ. ರೋಮಾವಳೀ ಶತಕವೆಂಬ ಮತ್ತೊಂದು ಗ್ರಂಥವನ್ನು ಬರೆದುದಾಗಿ ಹೇಳಿದೆ. ಗ್ರಂಥವು ಉಪಲಬ್ಧವಿಲ್ಲ.

ಹ ರ ದ ತ್ತ ಸೂ ರಿ

ಗರ್ಗರ್ಷಿವಂಶತಿಲಕೋ **ಜಯಶಂಕರಾಖ್ಯೋ**
ಜ್ಯೋತಿರ್ವಿದಾಂ ಪ್ರಣಯಕೃತ್ಸುಕವೀಂದ್ರಮಾನ್ಯಃ
ಅಧ್ಯಾತ್ಮಕಾವಗತಿಶಾಂತಿಪರಾಯಣೋಽಭೂ
ದ್ಧರ್ಮೋಪದೇಶನಪಟುರ್ನಯಬೋಧ ಆಸೀತ್ ೨-೨೧
ತತ್ಸೂನುರ್**ಹರದತ್ತ** ಇತ್ಯಮಲಧೀಃ ಶ್ರೀಮತ್ಫಣೀಂದ್ರೋದಿತೇ
ಭಾಷ್ಯೇ ಪಾಠವತಃ ಪೃಥಾಮಧಿಗತಶ್ಚಂದಶ್ಚಿತೀನಾಂ ಬುಧಃ ।
ಸಾಹಿತ್ಯಾರ್ಣವಮಂಥನೈಕ.....೨-೨೨

ಎಂಬುದರಿಂದಲೂ ಇವನು ಬ್ರಾಹ್ಮಣನೆಂದೂ, ಗಾರ್ಗಕುಲೋತ್ಪನ್ನನೆಂದೂ ಜಯಶಂಕರನ ಮಗನೆಂದೂ ತಿಳಿಯಬರುತ್ತದೆ.

ಕಾಲ:—ದೇಶ, ಕಾಲಗಳು ತಿಳಿಯುವಂತಿಲ್ಲ. ಆದರೂ ಮಹಾವೈಯ್ಯಾಕರಣ ಸಿದ್ಧಾಂತಕೌಮುದೀಕಾರ ಭಟ್ಟೋಜಿದೀಕ್ಷಿತನನ್ನು "ದೀಕ್ಷಿತ"ನೆಂದು ಹೇಳಿಕೊಂಡಿರುವುದರಿಂದ ಅವನಿಗಿಂತ ಈಚಿನವನೆಂದು ಹೇಳಬಹುದಾಗಿದೆ. ಈ ಪುಸ್ತಕ ಪ್ರತಿಯೊಂದರಲ್ಲಿ ಕಾಲವನ್ನು 'ಆಕಾರಾಮ್ನಾಯಾದ್ರಿ ಚಂದ್ರೇ (೧೬೪೦) ಶಕೇಕೃಷ್ಣತ್ರಯೋದಶೀನ್ಯತೇ ಭೌಮರ್ಕನಕ್ಷತ್ರೇಹ್ಯಲಿಖತ್ಪ್ರೇಮವಲ್ಲಭಃ ಎಂದು ಹೇಳಿರುವುದರಿಂದ ಗ್ರಂಥಪ್ರತಿಯ ನಿರ್ಮಾಣವು ಕ್ರಿ. ಶ. ೧೬೬೨ ವರ್ಷಗಳೆಂದು ಸ್ಫುಟವಾಗುತ್ತದೆ. ಆದುದರಿಂದ ಮೂಲಗ್ರಂಥಸಮಯವು ಕ್ರಿ. ಶ. ೧೬ನೆಯ ಶತಮಾದ, ಉತ್ತರಾರ್ಧದಲ್ಲಿರಬಹುದೆಂದು ಊಹಿಸಬಹುದಾಗಿದೆ.

ಗ್ರಂಥ:—ಇವನು 'ರಾಘವನೈಷಧೀಯ' ಎಂಬ ಕಾವ್ಯವನ್ನು ಬರೆದಿರುವನು. ಇದರಲ್ಲಿ ಎರಡು ಸರ್ಗಗಳಿದ್ದು ಅಸಮಗ್ರವಾಗಿ ಕೊನೆಯಲ್ಲಿ ಶ್ರೀ ಹರದತ್ತಸೂರಿ ಕೃತೇಮಹಾಕಾವ್ಯೇ ರಾಘವನೈಷಧೀಯೇ ದ್ವಿತೀಯಸ್ಸರ್ಗಃ ಎಂದೂ 'ಸಮಾಪ್ತ ಮಿದಂಮಹಾಕಾವ್ಯಂ' ಎಂದಿದೆ. ಕಾವ್ಯಪರಿಶೀಲನದಿಂದ ಗ್ರಂಥವು ಪೂರ್ತಿಯಾಗಿದೆಯೆಂದು ಹೇಳಲಾಗುವುದಿಲ್ಲ. ಕಾವ್ಯವು ಶ್ಲೇಷೆಯಿಂದ ಪೂರ್ಣವಾಗಿದೆ. ರಸರುಚಿಯುಸ್ಪೈಸರ್ಗಿಕವಾಗಿಲ್ಲ. ಇದರ ಎರಡು ಶ್ಲೋಕಗಳು:—

ದಶರಥ ಇತಿ ನಾಮ್ನಾ ವೀರಸೇನಃ ಕ್ಷಿತೀಶಃ
ಕ್ಷಿತಿತಲವಿಬುಧಾನಾಂ ವಂದಥುಃ ಪ್ರಾಗ್ಬಭೂವ
ಗುರುಕವಿಬುಧಜೋಷಃ ಸಾಮ್ಯತೋ ನಾರದಾಖ್ಯಃ
ಸತಿ ನರಪತಿರತ್ನೇ ಮರ್ತ್ಯಲೋಕೋಽಪ್ಯನಾಕೀತ್ ॥ ೧-೧

ರಾಮೋಽಭಿರಾಮಃ ಸನಲಃ ಪ್ರತೀತಃ
ಪುತ್ರೋಭವತ್ತಸ್ಯ ಸುಸತ್ಯಸಂಧಃ
ಸಲಕ್ಷ್ಮಣಃ ಸದ್ಭರತಃಸಶತ್ರುಹಾ
ಚತುರ್ವಿಧತ್ವಂ ಗತವಾನಿವೈಕಃ ॥ ೧-೨

ಇದಕ್ಕೆ 'ಸ್ವೋಪಜ್ಞ' ಎಂಬ ವ್ಯಾಖ್ಯಾನವಿರುವುದು.

ಕವಿಕರ್ಣಪೂರ

ಇವನ ನಿಜವಾದ ಹೆಸರು ಪರಮಾನಂದಸೇನನೆಂದು. ಚೈತನ್ಯಪ್ರಭುವಿನ ಅನುಗ್ರಹದಿಂದ ಬಾಲ್ಯದಲ್ಲಿ ಕವಿತೆಯನ್ನು ಮಾಡುವ ಪ್ರತಿಭಾಸಂಪನ್ನನಾದಂತೆಯೂ ತನ್ನ ಗ್ರಂಥಾರಂಭದಲ್ಲಿ:—

ಶ್ರವಸೋಃ ಕುವಲಯಮಕ್ಷ್ಣೋ ರಂಜನಮುರಸೋ ಮಹೇಂದ್ರಮಣಿದಾಮ
ವೃಂದಾವನರಮಣೀನಾಂ ಮಂಡನಮಖಿಲಂ ಹರಿರ್ಜಯತಿ ॥

ಎಂದು ಹೇಳುವಾಗ ಕರ್ಣಾಭರಣಾರ್ಥವಾಚಕ ಕುವಲಯ ವಿಶೇಷಣವನ್ನು ಹೇಳಿಕೊಂಡಿರುವುದರಿಂದ ಇವನನ್ನು 'ಕವಿಕರ್ಣಪೂರ' ಎಂದು ಕರೆದಿರುವುದಾಗಿ ಜನಶ್ರುತಿಯಿರುವುದು. *

"**ಶಿವಾನಂದಸೇನ**ಸ್ಯ ತನುಜೇನ ನಿರ್ಮಿತಂ **ಪರಮಾನಂದದಾಸ** ಕವಿನಾ"

ಎಂಬ ಸೂತ್ರಧಾರನ ಹೇಳಿಕೆಯಿಂದ ಕವಿಯು ಹೆಸರು 'ಪರಮಾನಂದದಾಸ' ಎಂದು ಸ್ಪಷ್ಟಪಡುತ್ತದೆ. §

ಈ ಗ್ರಂಥದ ಭೂಮಿಕಾರಂಭದಲ್ಲಿ:—

'ಕವಿಕರ್ಣಪೂರಾಪರನಾಮಧೇಯಃ ಪರಮಾನಂದದಾಸಕವಿಃ' ಎಂದು ಹೇಳಿರುವುದರಿಂದ 'ಪರಮಾನಂದದಾಸ' ಕನಿಗೆ 'ಕವಿಕರ್ಣಪೂರ' ಎಂಬ ಮತ್ತೊಂದು ಹೆಸರೆಂದು ಸ್ಪಷ್ಟವಾಗುತ್ತದೆ. 'ಕವಿಕರ್ಣಪೂರ' ಎಂಬ ಹೆಸರಿನ ಚಳುವಳಿಯಲ್ಲಿ 'ಪರಮಾನಂದದಾಸ' ಎಂಬ ನಿಜವಾದ ಹೆಸರು ಲೀನವಾಗಿ ಹೋಗಿದೆ. 'ಮಹಾಕವಿರಯಂ ವಂಗಪ್ರದೇಶೇ ನದಿಯಾಪ್ರಾಂತ್ಯವರ್ತಿನ್ಯಾ ಕಾಂಚನ ಪಲ್ಲ್ಯಾಂ..... ಜನ್ಮಲೆಭೇ' ಎಂದು ಹೇಳಿರುವುದರಿಂದ ಇವನು ವಂಗದೇಶಕ್ಕೆ ಸೇರಿದ ನದಿಯಾಪ್ರಾಂತ್ಯದ ಬಳಿಯಣ ಒಂದಾನೊಂದು ಗ್ರಾಮದವನೆಂದು ಸ್ಫುಟವಾಗುತ್ತದೆ. $

ವಂಗಸಾಹಿತ್ಯ ಚರಿತೆಕಾರರಾದ, ದಿನೇಶಚಂದ್ರಸೇನರು ಪರಮಾನಂದದಾಸಕವಿಯು 'ಫುಲ್ಲಶ್ರೀ' ಎಂಬ ಊರಿನಲ್ಲಿ ಜನ್ಮಿಸಿದುದಾಗಿ ಸ್ಥಳನಿರ್ದೇಶಮಾಡಿ ಹೇಳಿರುವರು. ಅಲ್ಲದೆ 'ಫುಲ್ಲಶ್ರೀ' ಎಂಬದು ಕವಿಕರ್ಣಪೂರನಿಗೇ ಅಲ್ಲದೆ ವಿಶ್ವವಾಜ್ಮಯದಲ್ಲಿ ಹೆಸರುಗೊಂಡು ಸ್ಮೃತಿಶೇಷರಾಗಿರುವ ಕವೀಂದ್ರತ್ರಿಲೋಚನದಾಸ, ಜಾನಕೀನಾಥಕವಿಕಂಠಹಾರ, ಭವಾನೀನಾಥದಾಸಸರಸ್ವತೀ, ರಘುರಾಮದಾಸಕಂಠಾಭರಣ, ಮುಂತಾದ ಮಹಾ ಮಹಾ ಕವಿಗಳ ಜನ್ಮಸ್ಥಳವಾಗಿದ್ದಿ

* ಚೈತನ್ಯಚಂದ್ರೋದಯದ ಭೂಮಿಕಾ ಪುಟ ೧

§ Ibid P 3

$ Ibid. introduction P. 1

ತೆಂದೂ ಕೊಂಡಾಡಿರುವರು.* ವಿಜಯಗುಪ್ತನು ಈ ಊರನ್ನು 'ಪಂಡಿತನಗರ' ಎಂದು ಕೇವಲ ಅಭಿಮಾನಿಸಿ ಕರೆದಿರುವನು. ಇಂತಹ ಊರಿನ ವಿಚಾರವಾಗಿ ಕೊಂಚಹೇಳುವುದು ಯುಕ್ತವೆಂದು ತೋರುವುದರಿಂದ ವಿಷಯವು ಅಪ್ರಸಕ್ತವಾಗದು.

ಶಕ. ೧೪೦೬ ರಲ್ಲಿ ಹುಸೇಷಹಾನು ಗೌಡದೇಶದ ಸಾರ್ವಭೌಮನಾಗಿದ್ದನು. ಅರ್ಜುನರಾಜನು ಫತೇಬಾದ್§ ಎಂಬದನ್ನು ಆಳುತ್ತಿದ್ದನು. ಇದು ಬಂಗ್ರೋರಾವರೆಗೆ ವಿಸ್ತರಿಸಿದ್ದಿತು. ಪಶ್ಚಿಮಕ್ಕೆ ಘಾಗರಾನದಿ ಪೂರ್ವಕ್ಕೆ 'ಘಂಟೇಶ್ವರ'ಎಂಬನದಿ. ಈ ಮಧ್ಯೆ ಪಂಡಿತನಗರ ಅಥವಾ ಫುಲ್ಲಶ್ರೀ ಎಂಬ ಊರಿದ್ದಿತು. ಇದು ಚತುರ್ವೇದ ಸಕಲಶಾಸ್ತ್ರಪಾರಂಗತರಿಂದಲೂ, ಚತುರರಾದ ವೈದ್ಯರಿಂದಲೂ ಲೇಖನ ವಿದ್ಯಾಕುಶಲರಾದ ಕಾಯಸ್ಥರಿಂದಲೂ ಪೂರ್ಣವಾಗಿದ್ದಿತು. ಈ ಊರಿನಲ್ಲಿ ಜನ್ಮಿಸುವುದಾದರೆ ಅಥವಾ ವಾಸಿಸುವುದಾದರೊಂದು ಸುವಿಚಾರದಲ್ಲಿ ಕೀರ್ತಿಯನ್ನು ಗಳಿಸುವುದಾಗಿ ನಂಬುಗೆ. ಈಗ ಘಂಟೇಶ್ವರನದಿಯಾಗಲಿ ಘಾಗ್ರಾನದಿಯಾಗಲಿ ಇರುವುದಿಲ್ಲ. ಎರಡು ನದಿಗಳೂ ಮರಳಿನಿಂದ ಮುಚ್ಚಿ ಹೋಗಿವೆ. ಫುಲ್ಲಶ್ರೀ ಎಂಬ ಊರುನಾಮಾವಶೇಷವಾಗಿ ಹೋಗಿ ಕಾಲಕ್ರಮದಲ್ಲಿ ಅದರ ಒಂದು ಭಾಗವು ಗೈಲಾ ಎಂಬ ಹೆಸರಿನಿಂದ ಈಗ ಕರೆಯಲ್ಪಡುತ್ತಿದೆ. $

ಕಾಲ: — ಕ್ರಿಸ್ತಾಬ್ದ ೧೫೭೪ ರಲ್ಲಿ ಕವಿಯು ಜನ್ಮಿಸಿದುದಾಗಿ ಹೇಳಿದೆ. ಆದುದರಿಂದ ಇವನು ಕ್ರಿ. ಶ. ೧೬ನೆಯ ಶತಮಾನದವನು

ಗ್ರಂಥಗಳು:—

೧. ಆರ್ಯಾಶತಕಂ
೨. ಚೈತನ್ಯಚರಿತಾಮೃತಂ
೩, ಆನಂದವೃಂದಾವನಚಂಪೂಃ
೪. ಚಮತ್ಕಾರಚಂದ್ರಿಕಾ
೫. ಅಲಂಕಾರಕೌಸ್ತುಭಃ
೬. ಕೃಷ್ಣಲೀಲೋದ್ದೇಶದೀಪಿಕಾ
೭. ಗೌರಗಣೋದ್ದೇಶದೀಪಿಕಾ
೮. ವರ್ಣಪ್ರಕಾಶಃ ಕೋಶಃ
೯. ಚೈತನ್ಯ ಚಂದ್ರೋದಯನಾಟಕ

---

* Bengali Language and Literature P. 279.

§ ಈಗಣ ಫರಿದಪುರ ಮತ್ತು ಬಾಕರಗಂಜಿನ ಒಂದುಭಾಗ, ಈ ಪ್ರಾಂತ್ಯಕ್ಕೆ ಫತೇಬಾದ್ ಎಂಬ ಹೆಸರಿದ್ದಿತು.

$ ವಂಗಭಾಷಾ ಸಾಹಿತ್ಯ, ಪುಟ ೨೮೦

ಚೈತನ್ಯ ಚಂದ್ರೋದಯನಾಟಕ:—ಇದು ರೂಪಕಭೇದವಾದ ಪ್ರಕರಣ ಜಾತಿಗೆ ಸೇರಿದುದು. ಇದರಲ್ಲಿ ಹತ್ತು ಅಂಕಗಳಿರುವುವು.

ಇದರಲ್ಲಿ ಗೌರಾಂಗ ಅಥವಾ ಚೈತನ್ಯದೇವನ ಧರ್ಮಾಚರಣೆ, ಸದುಪದೇಶ ಗಳನ್ನು ತಿಳಿಸುವುದಾಗಿ, ಮುಮುಕ್ಷುಗಳಿಗೆ ಮಾರ್ಗದರ್ಶಕವಾಗಿ, ಮೃದು ಮಧುರ ಶೈಲಿಯನುಳ್ಳದಾಗಿ ಸರ್ವವಿಧದಲ್ಲಿಯೂ ಪ್ರಬೋಧ ಚಂದ್ರೋದಯ ವನ್ನು ಆನುಸರಿಸಿ ಬರೆಯಲ್ಪಟ್ಟಿರುವುದು. ಇದರಲ್ಲಿ ಶಾಂತರಸವು ಪ್ರಧಾನವಾಗಿರು ವುದು. ಇದನ್ನು ಕಪಿಲೇಶ್ವರದೇವನ ಮುಮ್ಮಗನೂ, ಪುರುಷೋತ್ತಮನ ಮಗನೂ ಆದ ನೀಲಗಿರಿಯ ಅಧೀಶ ಗಜಪತಿಪ್ರತಾಪರುದ್ರದೇವನ ಕೋರಿಕೆಯಂತೆ ಬರೆದು ದಾಗಿ ತಿಳಿಯಬರುತ್ತದೆ. ಕವಿಯು ಈ ನಾಟಕವನ್ನು ಶಾ. ಸಂ. ೧೫೦೧ ಅಥವಾ ಕ್ರಿ. ಶ. ೧೫೭೯ರಲ್ಲಿ ತನ್ನ ೫೫ನೆಯ ವರ್ಷದಲ್ಲಿ ಬರೆದುದಾಗಿ ಹೇಳಿಕೊಂಡಿರುವನು. ಮೇಲೆ ಹೇಳಿದ ಗ್ರಂಥಗಳಲ್ಲಿ ಆರ್ಯಾಶತಕವು ಉಪಲಬ್ಧವಿಲ್ಲ. ಚೈತನ್ಯಚರಿತಾ ಮೃತವು ಹೆಸರಿಗೆ ತಕ್ಕಂತೆ ಚೈತನ್ಯನ ಚರಿತೆಯು ವರ್ಣಿತವಾಗಿದೆ. ಇದು ಮಹಾಕಾವ್ಯ. ಇದನ್ನು ಕವಿಯು ಕ್ರಿ. ಶ. ೧೫೪೨ರಲ್ಲಿ ತನ್ನ ೧೮ನೆಯ ವಯಸ್ಸಿನಲ್ಲಿ ಬರೆದುದಾಗಿ ಹೇಳಿದೆ. ಆನಂದವೃಂದಾವನ ಚಂಪೂಗ್ರಂಥವು ೨೨ ಸ್ತಬಕಗಳಿಂದ ಕೂಡಿರುವುದು. ಚಮತ್ಕಾರಚಂದ್ರಿಕೆಯು ಕೃಷ್ಣಲೀಲಾವರ್ಣನ ರೂಪವಾದ ಕಾವ್ಯ. ಅಲಂಕಾರಕೌಸ್ತುಭ ಎಂಬುದು ಲಕ್ಷಣಗ್ರಂಥ. ಇದಕ್ಕೆ 'ಕಿರಣ' ಎಂಬ ವ್ಯಾಖ್ಯಾನವಿರುವುದು. ಕೃಷ್ಣಲೀಲೋದ್ದೇಶದೀಪಿಕಾ, ಗೌರಗಣೋದ್ದೇಶದೀಪಿಕಾ ಇವು ಧರ್ಮ ಗ್ರಂಥಗಳು. ವರ್ಣಪ್ರಕಾಶ ಕೋಶವು ಅಮರಮಾಣಿಕ್ಯನ ಮಗ ರಾಜಾಧರನಿಗಾಗಿ ಬರೆದುದಾಗಿದೆ. ರಾಮ ಕೃಷ್ಣಾವತಾರೋತ್ಕರ್ಷತೆಯ ವಿಚಾರ ವಲ್ಲಿ ಕವಿಯಮತವು ಹೇಗೆಂಬುದನ್ನು ಈ ನಾಟಕದಲ್ಲಿ ರಾಜ ಮತ್ತು ಭಟ್ಟಾಚಾರ್ಯರ ಭಾಷಣದಲ್ಲಿ ಸೂಚಿಸಿರುವನು. ಅದುಹೀಗಿರುವುದು:—

ಭಟ್ಟಾಚಾರ್ಯ:-ಮಹಾರಾಜ! ಇವೆರಡೂ ಸಮಾನಾರ್ಥದ್ಯೋತಕಗಳಾದರೂ,

ರಮಂತೇ ಯೋಗಿನೋಽನಂತೇ ಸತ್ಯಾನಂದಚಿದಾತ್ಮನಿ
ಇತಿ **ರಾಮ**ಪದೇನಾಸೌ ಪರಂಬ್ರಹ್ಮಾಭಿಧೀಯತೇ ॥ ೭—೭೯
ಕೃಷಿರ್ಭೂವಾಚಕಃ ಶಬ್ದೋ ಣಶ್ಚ ನಿರ್ವೃತಿವಾಚಕಃ
ತಯೋರೈಕ್ಯಂ ಪರಂಬ್ರಹ್ಮ **ಕೃಷ್ಣ** ಇತ್ಯಭಿಧೀಯತೇ ॥ ೭—೭೩
ಸಹಸ್ರನಾಮಭಿಸ್ತುಲ್ಯಂ ರಾಮನಾಮವರಾನನೇ
ಸಹಸ್ರನಾಮ್ನಾಂ ಪುಣ್ಯಾನಾಂ ತ್ರಿರಾವೃತ್ತ್ಯಾ ತು ಯತ್ಫಲಂ
ಏಕಾವೃತ್ತ್ಯಾ ತು ಕೃಷ್ಣಸ್ಯ ನಾಮೈಕಂ ತತ್ಪ್ರಯಚ್ಛತಿ ॥

"ಇತಿ ರಾಮನಾಮತಃ ಕೃಷ್ಣನಾಮ ಶ್ರೇಯಃ" ಎಂದು ಕೃಷ್ಣನ ಉತ್ಕರ್ಷ ತೆಯು ಹೇಳಿರುವುದು. ಕವಿಯು ಕೃಷ್ಣಭಕ್ತನು. ಆದುದರಿಂದ ಕೃಷ್ಣನ ವಿಚಾ ರೋತ್ಕರ್ಷತೆಯ ಹೇಳಿಕೆಯು ಸಹಜವಾದುದು.

ಚೈತನ್ಯ ಚಂದ್ರೋದಯದ ಕೆಲವು ಶ್ಲೋಕಗಳು:—

ಉಗ್ರೈರುಗ್ರಸ್ಯ ಪೋಭಿಃ ಶಮದಮನಿಯಮೈರ್ಧಾರಣಾಧ್ಯಾನಯೋಗೈ
ರ್ಯುಕ್ತಾತ್ಮಾ ಪಾರಮೇಷ್ಯಂತ್ರಿಭುವನವಿಭವೇಚ್ಛಾಂ ವಿಧಿರ್ನಾವಬೋಧಾತ್।
ಕಂದರ್ಪಾದೀನಮಿತ್ರಾನಪಿ ಸಹಜತಯಾ ದುರ್ಜಯಾನೇವ ಜಿತ್ವಾ
ಯೇನ ಸ್ಪೃಷ್ಟಾ ನಿಪೇತುಃ ಕಥಯ ಕಥಮಸೌ ಕೇನ ಕೋಪೋ ವಿಜೇಯಃ ॥ ೧-೪೩

ಅಧರ್ಮನು ಕಲಿಯನ್ನು ಕುರಿತು ಹೇಳುವಿಕೆ :—ಎಲೈ ! ಮಿತ್ರನೆ !

ಕೋಪವನ್ನು ಜಯಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಹೇಗೆಂದರೆ ಬ್ರಹ್ಮಸಾಕ್ಷಾತ್ಕಾರವನ್ನು ಪಡೆಯಲು ಅತ್ಯುಗ್ರ ತಪಸ್ಸುಗಳಿಂದಲೂ, ಶಮದಮಾದಿಗಳಿಂದಲೂ, ಧಾರಣ ಧ್ಯಾನ ಯೋಗಾದ್ಯಷ್ಟಾಂಗಗಳಿಂದಲೂ ಕೂಡಿ ಸಕಲೈಶ್ವರ್ಯ ಭೋಗಗಳನ್ನೂ ಆಹಾರಾದಿಗಳೆಲ್ಲವನ್ನೂ ತ್ಯಜಿಸಿ ಜಯಿಸಲಸಾಧ್ಯರಾದ ಕಾಮಾದಿಗಳನ್ನು ಗೆದ್ದರಾದರೂ ಯಾವುದರಿಂದ ಅಧಃಪತನವನ್ನು ಹೊಂದುವರೋ ಅಂತಹ ಕೋಪವನ್ನು ಜಯಿಸಲು ಯಾರಿಂದತಾನೇ ಸಾಧ್ಯವಾದೀತು. ಎಂದರೆ ಯಾರಿಂದಲೂ ಸಾಧ್ಯವಿಲ್ಲವೆಂದು ಭಾವವು.

ಷಷ್ಠೇ ಕರ್ಮಣಿ ಕೇವಲಂ ಕೃತಧಿಯಃ ಸೂತ್ರೈಕಚಿಹ್ನಾ ದ್ವಿಜಾಃ
ಸಂಜ್ಞಾಮಾತ್ರವಿಶೇಷಿತಾ ಭುಜಭುವೋ ವೈಶ್ಯಾಸ್ತು ಬೌದ್ಧಾ ಇವ।
ಶೂದ್ರಾಃ ಪಂಡಿತಮಾನಿನೋ ಗುರುತಯಾ ಧರ್ಮೋಪದೇಶೋತ್ಸುಕಾಃ
ವರ್ಣಾನಾಂ ಗತಿರೀದೃಗೇವ ಕಲಿನಾ ಹಾ! ಹಂತ! ಸಂಪಾದಿತಾ॥ ೨—೨.

ಬ್ರಾಹ್ಮಣರಿಗೆ ಶಾಸ್ತ್ರೋಕ್ತವಾದ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹವೆಂಬ ಆರು ಕರ್ಮಗಳಲ್ಲಿ ಕೊನೆಯದಾದ ಪ್ರತಿಗ್ರಹ ಕರ್ಮದಲ್ಲಿ ಮಾತ್ರ ಬ್ರಾಹ್ಮಣರು ಆಸಕ್ತರಾಗಿ ಯಜ್ಞೋಪವೀತ ಚಿಹ್ನೆಯಿಂದ ಮಾತ್ರ ಕೂಡಿದವರಾಗಿರುತ್ತಾರೆ. ರಾಜರು ಕೇವಲ ಸಂಜ್ಞಾಮಾತ್ರ. ವೈಶ್ಯರೋ ಕೇವಲ ಬೌದ್ಧಾಚರಣೆಯುಳ್ಳವರು. ಶೂದ್ರರಾದರೋ ಪಂಡಿತಮಾನನೀಯರಾಗಿ ಗುರುಗಳೆಂದು ಧರ್ಮೋಪದೇಶೋತ್ಸುಕರಾಗಿರುತ್ತಾರೆ. ಈರೀತಿಯಾಗಿ ವರ್ಣವಿಭಾಗವು ಕಲಿಪುರುಷನಿಂದ ಸಂಪಾದಿಸಲ್ಪಟ್ಟುವುಗಳಾಗಿರುವುವು. ಅಯ್ಯೋ !

ಜಿಹ್ವಾಗ್ರೇಣ ಲಲಾಟಚಂದ್ರಜಸುಧಾಸ್ಯಂದಾರ್ದ್ರರೋಧೇ ಮಹ
ದ್ಭಾಕ್ಷ್ಯಂ ವ್ಯಂಜಯತೋ ನಿಮಿಲ್ಯ ನಯನೇ ಬದ್ಧಾಸನಂ ಧ್ಯಾಯತಃ।
ಅಸ್ಯೋಪಾತ್ತನದೀತಟಸ್ಯ ಕಿಮಯಂ ಭಂಗಃ ಸಮಾಧೇರಭೂತ್
ಪಾನೀಯಾಹರಣ ಪ್ರವೃತ್ತತರುಣೀ ಶಂಖಸ್ವನಾಕರ್ಣನೈಃ ॥ ೨—೬.

ಅಹಹ ! ಇದೇನು !

ಮನಸ್ಸಿನಲ್ಲಿ ದೃಢತರಭಕ್ತಿ ಇಲ್ಲದೆಯೂ ನಾಲಿಗೆಯ ತುದಿಯಲ್ಲಿ ಪರಮೇಶ್ವರನನ್ನು ಧ್ಯಾನಮಾಡುವ ನೆಪದಿಂದ ಕಣ್ಣುಗಳನ್ನು ಮುಚ್ಚಿ ಆಸನಗಳನ್ನು ಹಾಕಿಕೊಂಡು ನದೀ ತಟದಲ್ಲಿ ಧ್ಯಾನಮಾಡುತ್ತಿರುವ ಈ (ಕಪಟ) ಸಾಧುವಿಗೆ ನದಿಯಲ್ಲಿ ಜಲವನ್ನು ತೆಗೆದುಕೊಂಡು ಹೋಗುವುದಕ್ಕಾಗಿ ಬಂದ ಸ್ತ್ರೀಯರ ಕಂಠ ಧ್ವನಿಗಳ ಆಕರ್ಣನದಿಂದ ಸಮಾಧಿಗೆ ಭಂಗ ಉಂಟಾದುದು! ಇದೇನಾಶ್ಚರ್ಯ! ಎಂದರೆ ನಿಜವಾದ ಸಾಧುವಿಗೆ ಸಮಾಧಿಯಲ್ಲಿ ಸ್ಥಿರಚಿತ್ತತೆಯಿಂದ ಬಹಿರ್ವ್ಯಾಪಾರವು ತೋರದು ಎಂದು ಭಾವವು.

ಭಕ್ತಿದೇವಿಯ ಹೇಳಿಕೆ -

ನಜಾತಿಶೀಲಾಶ್ರಮಧರ್ಮವಿದ್ಯಾ ಕುಲಾದ್ಯಪೇಕ್ಷೋ ಹಿ ಹರೇಃ ಪ್ರಸಾದ.
ಯದೃಚ್ಛಿಕೋಽಸ್ಮಿ ಜಿತ ನಾಸ್ಯ ಪಾತ್ರಾಪಾತ್ರವ್ಯವಸ್ಥಾಪ್ರತಿಪತ್ತಿರಾಸ್ತೇ॥ ೨-೧೯.

ಹರಿಯ ಪ್ರಸಾದವನ್ನು ಪಡೆಯಲು ಜಾತಿ, ಶೀಲ, ಆಶ್ರಮ, ಧರ್ಮ, ವಿದ್ಯಾ, ಕುಲ ಮೊದಲಾದುವು ಯಾವುವೂ ಅವಶ್ಯವಿರುವುದಿಲ್ಲ. ಇಚ್ಛಾಮೂರ್ತಿಯಾದುದರಿಂದ ಇವನಿಗೆ ಪಾತ್ರಾಪಾತ್ರವ್ಯವಸ್ಥೆಯೂ ಇಲ್ಲ. ಆದುದರಿಂದ ಯಾರು ಇವನನ್ನು ಭಕ್ತಿಯಿಂದ ಸ್ತುತಿಸುವರೋ ಅವರಿಗೆ ಇವನು ಪ್ರಸನ್ನನಾಗುತ್ತಾನೆ.

ಸೋಮನಾಥ *

ಇವನು ಕಾಂಚಿಯ ಬಳಿಯಲ್ಲಿರುವ ತುಂಡಿರಮಂಡಲಕ್ಕೆ ಸೇರಿದ ಗೋವಿಂದತೀರ್ಥಪುರವೆಂಬ ಗ್ರಾಮದವನು. ವತ್ಸಗೋತ್ರದವನು. ಸ್ಮಾರ್ತಬ್ರಾಹ್ಮಣನು. ಯಜ್ವಭಾಸ್ಕರನ ವಂಶೀಯನು. ಭಟ್ಟಗಯಮೂರ್ತಿ ಭಾಸ್ಕರನ ಮೊಮ್ಮಗನು. ಚಂಪೂ ಭಾರತಕಾರನಾದ ಅನಂತಭಟ್ಟನ ಸೋದರಿಯ ಮಗನು.

ಕಾಲ: —ಇವನು ಕ್ರಿ. ಶ. ೧೬ನೆಯ ಶತಮಾನದ ಪೂರ್ವಾರ್ಧದಲ್ಲಿ ವಿಜಯನಗರವನ್ನಾಳಿದ ಅಚ್ಯುತರಾಯನ ಸಮಕಾಲೀನನು. §

ಗ್ರಂಥ:—ಇವನು 'ವ್ಯಾಸಯೋಗಿಚರಿತ' ಎಂಬ ಚಂಪೂ ಗ್ರಂಥವನ್ನು ಬರೆದಿರುವನು. ಈ ಚಂಪೂಗ್ರಂಥದಲ್ಲಿ ಆರು ಉಚ್ಛ್ವಾಸಗಳಿರುವುವು. ಅಚ್ಯುತರಾಯನು ವ್ಯಾಸಯೋಗಿಯ ಮಂತ್ರಾಲೋಚನೆಯಿಂದ ರಾಜ್ಯಭಾರವನ್ನು ನಡೆಯಿಸುತ್ತಿದ್ದಾಗ ವಿಜಯನಗರವು ಅತ್ಯಂತ ವೈಭವೋಪೇತವಾಗಿದ್ದುದಲ್ಲದೆ, ವ್ಯಾಸಯೋಗಿಯ ನಿಲ್ದಾಣವು 'ಮಠ' ಎಂದು ಕರೆಯಲ್ಪಟ್ಟು ಸಾಹಿತ್ಯಾಲಂಕಾರ ವೇದ

* ಮೀಮಾಂಸಾಶಾಸ್ತ್ರಕ್ಕೆ ಸೋಮನಾಥೀಯವೆಂಬ ವ್ಯಾಖ್ಯಾನವನ್ನೂ, ಮಯೂಖಮಾಲಿಕೆಗೆ 'ಭಾಸ್ಕರೀಪಿಕಾ' ಎಂಬ ವ್ಯಾಖ್ಯಾನವನ್ನೂ ಬರೆದಿರುವ ಸೋಮನಾಥನು ಇವನಲ್ಲ.

§ Introduction to Vyasayogichrita P. 43.

ವೇದಾಂತ ತರ್ಕವಿಾಮಾಂಸಾ ಭೂಗೋಳ ಖಗೋಳಶಾಸ್ತ್ರವೇತ್ತರಿಂದ ಕೂಡಿ ಸರಸ್ವತೀ ಪೀಠವೆನಿಸಿಕೊಂಡಿದ್ದಿತು. ಇಲ್ಲಿ ರಾಜಕುಮಾರರಾದಿಯಾಗಿ ಸಕಲರೂ ಮತವೈಷಮ್ಯವಿಲ್ಲವೆ ವ್ಯಾಸಂಗಮಾಡುತ್ತಿದ್ದರು. ನಾರಾಯಣಯತಿಯು ವ್ಯಾಸಯೋಗಿಗೆ ಸೋಮನಾಥನ ಪರಿಚಯವನ್ನು ಮಾಡಿಕೊಟ್ಟನು. ವ್ಯಾಸಯೋಗಿಯು ಸೋಮನಾಥನ ಕಲಾನೈಪುಣ್ಯಕ್ಕೆ ಮೆಚ್ಚಿ ತನ್ನ ಬಳಿಯಲ್ಲಿರಿಸಿಕೊಂಡನು. ಕಾಲಕ್ರಮದಲ್ಲಿ ಸೋಮನಾಥನು ವ್ಯಾಸಯೋಗಿಚರಿತವನ್ನು ಬರೆದು ಕಂಬುಕಂಠ ಮತ್ತು ಕಲಕಂಠರಲ್ಲೊದಿಸಿ ಮೆಚ್ಚುಗೆಯನ್ನು ಹೊಂದಿದನು. ಗ್ರಂಥಾರಂಭದಲ್ಲಿ ದಶಾವತಾರ ಸ್ತುತಿ, ಕಾಳಿದಾಸ, ಬಾಣರ ಹೆಸರುಗಳು ಕಂಡುಬಂದಿವೆ.

ವ್ಯಾಸಯೋಗಿಯು ಶ್ರೋತ್ರೀಯ ದಂಪತಿಗಳಲ್ಲಿ ಜನ್ಮಗ್ರಹಣಮಾಡಿ ಕಾಲಕ್ರಮದಲ್ಲಿ ದೇಶಾಟನವನ್ನು ಮಾಡುತ್ತ ಸನಗೊಂಡೆ (ಮಹಾಚಲ) ಗೆ ಬಂದು ಆಗ ಅಲ್ಲಿ ಆಳುತ್ತಿದ್ದ ನರಸರಾಜನಿಂದ ಸತ್ಕಾರಗೊಂಡು ಕೃಷ್ಣದೇವರಾಯನ ಪ್ರಾರ್ಥನೆಗೆ ಮನಕೊಟ್ಟು ವಿಜಯನಗರಕ್ಕೆ ಬಂದು ಕನಕಾಭಿಷೇಕವನ್ನು ಮಾಡಿಸಿಕೊಂಡು ವ್ಯಾಸಸಮುದ್ರವನ್ನು ಕಟ್ಟಿಸಿದುದೇ ಮೊದಲಾದ ವಿಚಾರಗಳೊಡನೆ ಪೂರ್ಣವಾಗಿರುವುದೆಂಬುದು ಈ ಗ್ರಂಥದ ಕಥಾವಸ್ತು.

ಗದ್ಯಶೈಲಿಯ ಮಾದರಿಗೆ ಕೊಂಚ ಬರೆಯುವವು.—

ಒಂದಾನೊಂದು ಉದ್ಯಾನವನವರ್ಣನವು ಹೀಗಿರುವುದು: —

" ಯಾ ಫಲುಸಕಲಪರಮಮುನಿಜನಾವಗಾಢಸಲಿಲಾ ಪರಿಣತಪ್ರಭುಫಲ ಭರಾನವೈಶ್ರೀರಾಮೈಶ್ರೀರ್ಗಗನಕುಹರನಿಸ್ಪಮರಸೌರಭ ಕುಸುಮಮಾಲಾ ಗುರುಭಿರಗುರುಭಿರ್ಘಟಪಜನಿತತರಣಿಕಿರಣಾವತರಣನಿರೋಕ್ಷ್ಯಃ ಸ್ಯ ಗ್ರೋಧೈರಾಮೂಲಕಲಿತ ಫಲಸ್ತಬಕನಿರಾಡಂಬರೈಃ ಪೀದುಂಬರೈಃ ಶಾಖಾಭುಜಾಲಿಂಗಿತಲತಾವಧೂಕೈರ್ಮಧೂಕೈಃ ಜಲಧರಪಟ ಲಂಘನಾಕಲಹೋದಾರೈಃ ಕೋವಿದಾರೈಃ ವಿಯೋಗಜನಮಾನಸವಿತೀರ್ಣಗಾಢವರಪೋಕೈರಪೋಕೈಃ ನಿಸ್ಸೀಮ ಮಧುರಿಮ ಪ್ರಚುರೀ ಮಂಡಿತಫಲೈಃಕಂಟಕಿಫಲೈಃ ಮದನವಿಜಯಪಿಶುನಬಹಲಮುಕುಲೈರ್ಬಕುಲೈಃ ತಾಂಬೂಲಿಕಾಪರಿರಂಭಸಂಪಾದಿತಕುತುಕೈಃ ಕ್ರಮುಕೈಃ ಧವಲಿತದಿಗಂತರಾಲಫಲಭಾರೈರ್ನಾರಿಕೇಳೈಃ ಘಟಿತವಿಶಂಕಟತಟಪ್ರದೇಶಾ ಕ್ವಚಿದ್ವಿಕಚಕುವಲಯಚಯಶತಭರಿತ ಮಧುರಿಮಧುರೀಣಮಧುರಸಸಹಿತಿಕಕರಂಬಿತ ಬಿಬ್ಬೋಕಾಂಡಂಬರಲೋಲಲೋಲಂಬ ಕದಂಬಮೇಚಕಿತಾಪದೇಶೇನ ನಿರಂತರಕಾಳಿಂದೀಸನ್ನಿಧಾನಮಿವಸಂದರ್ಶಯಂತೀ ‡

‡ ವ್ಯಾಸಯೋಗಿಚರಿತಂ ಪುಟ. ೧೯.

ರುದ್ರಕವಿ

ಇತಿ ಶ್ರೀಮದಖಿಲ ಭೂಪಾಲವೌಳಿಮುಕುಟಲಲಾಮಮಾಲಾಮರೀಚಿ ವೀಚೀಚುಂಬಿತಚರಣಸರೋಜ ಮಯೂರಗಿರಿಕೇಸರಿ ಶ್ರೀಮಹಾರಾಜಾಧಿರಾಜ ಶ್ರೀ ನಾರಾಯಣಶಾಹೋದ್ಯೋಜಿತದಾಕ್ಷಿಣಾತ್ಯರುದ್ರಕವೀಂದ್ರವಿರಚಿತೇ.....' ಎಂಬುದರಿಂದ ಇವನು ದಕ್ಷಿಣದೇಶದವನೆಂದೂ ಮಯೂರಗಿರಿಯ ರಾಜನಾದ ನಾರಾಯಣಶಾಹವಿನ ಆಶ್ರಿತನೆಂಬುದೂ ಗೊತ್ತಾಗುತ್ತದೆ. *

ಇವನ ತಂದೆಯ ಹೆಸರು ಅನಂತ. ತಾತನ ಹೆಸರು ಕೇಶವ.† ಕಾವ್ಯವಿಷಯವನ್ನು ಲಕ್ಷ್ಮಣಪಂಡಿತನಿಂದ ಕೇಳಿ ಬರೆದುದಾಗಿ ಹೇಳಿದೆ. ಈತನಾರೆಂಬುದು ತಿಳಿಯಬಹು.

ಕಾಲ:—ಶಾಕೇ ಭೋಗಿಶಶೀಘುಭೂ (೧೫೧೮) ಪರಿಮಿತೇ ಸಂವತ್ಸರೇ ದುರ್ಮುಖೇ
ಮಾಸೇಚಾಶ್ವಯುಜೇ ಸಿತೇಪ್ರತಿಪದಿಸ್ಥಾನೇಮಯೂರಾಚಲೇ ।
ಶ್ರೀಮಲ್ಲಕ್ಷ್ಮಣಪಂಡಿತೋದಿತಕಥಾಮಾಕರ್ಣ್ಯರುದ್ರಃಕವಿಃ
ಶ್ರೀನಾರಾಯಣಶಾಹಕೀರ್ತಿರಸಿಕಂ ಕಾವ್ಯಂ ವ್ಯಧಾನ್ಮರ್ಮಲಂ ॥ ೧೦೦ ॥

ಶ್ರೀಮದ್ಬಾಗುಲಭೂಮಿಪಾಲತಿಲಕ ಶ್ರೀಶಾಹನಾರಾಯಣ
ಸ್ಫೂರ್ಜತ್ಕೀರ್ತಿಚರಿತ್ರಚಿತ್ರಿತಪದೇ ರಾಷ್ಟ್ರೌಢವಂಶಾಭಿಧೇ
ಧವ್ಯೇ ದಕ್ಷಿಣದಿಗ್ಭವೇನ ಕವಿನಾ ರುದ್ರೇಣ ಸೃಷ್ಟೇ ಮಹಾ
ಕಾವ್ಯೇಸ್ಮಿನ್ಕಥಿತೇ ವಿವೀರವಿಜಯಃಸರ್ಗಸ್ತು ವಿಂಶೋಽಗಮತ್ ॥೧೦೧॥ $

ಎಂದು ಹೇಳಲ್ಪಟ್ಟಿರುವುದರಿಂದ ರಾಷ್ಟ್ರೌಢ ‡ ಕಾವ್ಯವು ಶಕ. ಸಂ. ೧೫೧೮ ಅಥವಾ ಕ್ರಿ. ಶ. ೧೫೯೬ರಲ್ಲಿ ಬರೆಯಲ್ಪಟ್ಟಿದಾಗಿ ಹೇಳಿರುವುದರಿಂದ ಇವನು ಕ್ರಿ. ಶ. ೧೬ನೆಯ ಶತಮಾನದವನೆಂಬುದು ಖಂಡಿತವಾಗುತ್ತದೆ.

ಗ್ರಂಥಗಳು:—೧) ರಾಷ್ಟ್ರೌಢವಂಶಮಹಾಕಾವ್ಯ
೨) ಜಹಾಂಘೀರಶಹಚರಿತಕಾವ್ಯ

ರಾಷ್ಟ್ರೌಢವಂಶ ಮಹಾಕಾವ್ಯ:—ಇದರಲ್ಲಿ ೨೦ ಸರ್ಗಗಳಿರುವುವು. ಇದು ಚಾರಿತ್ರಿಕ ವಿಷಯವಾದುದು. ಕೆನೋಜಿನ ರಾಜರಲ್ಲಿ ರಾಷ್ಟ್ರೌಢರಾಜರ ಮೂಲಪುರುಷನನ್ನು ಮೊದಲು ಮಾಡಿಕೊಂಡು ತನಗಾಶ್ರಯನಾದ ಮಯೂರ ಗಿರಿಯರಾಜನಾದ ನಾರಾಯಣಶಾಹವರೆಗಿನ ವಂಶಚರಿತೆಯನ್ನು ಬರೆದು

---

* ರಾಷ್ಟ್ರೌಢವಂಶಮಹಾಕಾವ್ಯದ ಪ್ರತಿಸರ್ಗಾಂತ್ಯಗದ್ಯ

† Ibid Introduction P. 1

$ Ibid ೨೦ನೆಯ ಸರ್ಗ

‡ ರಾಜಪುತ್ರರಲ್ಲಿ 'ರಾಥೋಡ ಎಂಬ ಜಾತಿಯೊಂದಿರುವುದು. ರಾಥೋಡ ಎಂಬುದರ ಸಂಸ್ಕೃತರೂಪವು 'ರಾಷ್ಟ್ರೌಢ' ಎಂದಾಗಿದೆ.

ಮುಗಿಸಿರುವನು. ನಾರಾಯಣಶಾಹನಿನ ಪೂರ್ವಜರು ಕೊಂಕಣಕ್ಕೂ ಗುಜರಾತಿಗೂ ಮಧ್ಯದಲ್ಲಿದ್ದ ಬಾಗುಲಾಸ್ ಎಂಬ ದೇಶದಿಂದ ಬಂದವರಾದುದರಿಂದ ಈ ರಾಜರಿಗೆ ಮಯೂರಗಿರಿಯ ಬಾಗುಲರೆಂದೂ, ಇವರ ಚರಿತೆಗೆ ಬಾಗುಲಚರಿತ ವೆಂದೂ ಹೇಳಿದೆ.

ಇದರ ೧೪-೧೬ ಸರ್ಗಗಳು ಋತುವರ್ಣನೆ, ಜಲಕ್ರೀಡಾ, ಮಧ್ಯಾಹ್ನ, ಸಂಧ್ಯಾ, ಸುರತಾದಿವರ್ಣನೆಗಳಿಂದ ಕೂಡಿವೆ. ಯಜ್ಞವರ್ಣನಾವಸರದ ಅಧ್ಯಾಯವು ಪೂರ್ವಮೀಮಾಂಸಾಬದ್ಧವಾಗಿದೆ. ವರ್ಣನೆಗಳು ನೈಜವಾದವುಗಳಾಗಿ ಶೈಲಿಯು ಮೃದುವಾಗಿ ವಿಷಯವು ಸೊಗಸಾಗಿ ಸಾಧಿಸಲ್ಪಟ್ಟಿದೆ. ಚಾರಿತ್ರಕದೃಷ್ಟಿಯಿಂದ ಪ್ರಮಾಣಗ್ರಂಥವೆನ್ನಬಹುದು. ಜಹಾಂಗೀರಶಹಚರಿತ ಗ್ರಂಥವು ಉಪಲಬ್ಧವಿಲ್ಲ. ಇದರ ಕೆಲವು ಶ್ಲೋಕಗಳು ರಾಷ್ಟ್ರೌಢವಂಶಮಹಾಕಾವ್ಯದಲ್ಲಿ ಕಂಡುಬರುವುದೆಂದೂ ಗ್ರಂಥಪರಿಶೀಲನದಿಂದ ನಾರಾಯಣಶಾಹನಿನ ಮಗ ಪ್ರತಾಪಶಾಹನೂ ಮತ್ತು ಜಹಾಂಸ್ಗೀರನೂ ಪರಸ್ಪರಗೆಳೆಯರಾಗಿದ್ದು ರಾಜ್ಯಭಾರ ಮಾಡಿದುದಾಗಿ ಹೇಳಿದೆ.* ರಾಷ್ಟ್ರೌಢವಂಶಮಹಾಕಾವ್ಯದ ಕೆಲವು ಶ್ಲೋಕಗಳು;—

ಧರ್ಮಾಂಭೋ ನಕುಲಸ್ಯ ಲೇಢಿ ರಸನಾಪ್ರಾಂತೇನ ಚಕ್ಷುಃ ಶ್ರವಾಃ
ಸ್ಪೈರಂ ಕೇಸರಿಣೋಽಪಿ ಬಾಲಹರಿಣಃ ಶ್ವಾಸಾನಲಂ ಜಿಘ್ರತಿ
ಕಿಂ ಬ್ರೂಮೋಽಬರಮಧ್ಯಚುಂಬತಿ (ಬಿಸ) ಪರಂ ಭಾನೌ ತೃಷಾತಾಕಿಮು
ಚ್ಛ್ವಾಯಾಪ್ಯುಲ್ಲಸದಾಲವಾಲಸಲಿಲೇ ವೂಲೇ ತರೋರೀಯತೇ ॥ ೧೬—೨೨

ಬಿಸಿಲಿನಲ್ಲಿ ದಾರಿ ನಡೆಯುವರ ಏಚಾರವಾಗಿ:—

ಮಧ್ಯಾಹ್ನೇ ಜಲತಾಲವೃಂತಮನಲಃ ಸರ್ವಾತ್ಮನಾ ಸೇವತೇ
ವಾರಿ ಸ್ವೇದಮಿಷೇಣ ಶೀತಲವಧೂವಕ್ಷೋಜಮಾಲಂಬತೇ
ನಿದ್ರಾ ನೇತ್ರಮುಪೈತಿಪಕ್ಷ್ಮಪಟಲಚ್ಛಾಯಾಶ್ರಯಾದೇವ ಕಿಂ
ಪಾಂಥಾನಾಮಪಿ ಪಾದಯೋರ್ನಪತತಿ ಛಾಯಾಽಪಿಮಾಯಾತ್ಯತಿ॥ ೧೬ ೨೧

ವಾಯುವು (ಗಾಳಿಯು) ಮಧ್ಯಾಹ್ನದ ಬಿಸಿಲಿನಲ್ಲಿ ಮಾರ್ಗ ನಡೆಯುವರನ್ನು ಜಲಯುಕ್ತವಾದ ಬೀಸಣಿಗೆಗಳ ನೆಪದಿಂದ ಸೇವಿಸುತ್ತಾನೆ. ನೀರು ಬೆವರಿನ ನೆಪದಿಂದ ವಧುವಿನ ಶೀತಲವಕ್ಷೋಜದಂತೆ ಶೈತ್ಯವನ್ನುಂಟುಮಾಡುತ್ತದೆ. ರೆಪ್ಪೆಗಳ ಛಾಯಾನೆಪದಿಂದ ನಿದ್ರೆಯು ಕಣ್ಣನ್ನು ಆಶ್ರಯಿಸುತ್ತದೆ. ನೆರಳಾದರೋ ಬಿಸಲಿನಲ್ಲಿ ಪಾಂಥರು ಮುಂದಕ್ಕೆ ಅಡಿಯಿಡಕೂಡದೆಂದು (ಹೇಳುವಂತೆ) ನೆರಳನ್ನುಂಟುಮಾಡುತ್ತಿದೆ.

---

* ರಾಷ್ಟ್ರೌಢ ಕಾವ್ಯದ ಮುನ್ನುಡಿ.

ಕೃಷ್ಣಕವಿ

ಇವನು ಕೇರಳೀಯನು. ನಂಬೂದ್ರಿ ಬ್ರಾಹ್ಮಣನು. ಗ್ರಂಥಾರಂಭದಲ್ಲಿ 'ನಾರಾಯಣಸೂನು ಶ್ರೀಕೃಷ್ಣಪ್ರಣೀತಂ' ಎಂದೂ, ಗ್ರಂಥಾಂತ್ಯದಲ್ಲಿ 'ಇತಿ ಭಾಗವತ ನಾರಾಯಣಸೂನು ಶ್ರೀಕೃಷ್ಣಪ್ರಣೀತಂ' ಎಂದೂ ಇರುವುದರಿಂದ ಭಾಗವತವನ್ನು ನೂರುದಶಕಗಳಾಗಿ ಬರೆದಿರುವ ನಾರಾಯಣಭಟ್ಟನ ಮಗನೆಂದು ತೋರುತ್ತದೆ.

ಮಹಾಮಹೋಪಾಧ್ಯಾಯ ಪಂಡಿತ ದುರ್ಗಾಪ್ರಸಾದರವರು 'ನಾರಾಯಣಸೂನು ಶ್ರೀಕೃಷ್ಣಕವಿ' ಎಂಬ ವಿಚಾರವಾಗಿ "ಸ್ವಾಹಾಸುಧಾಕರ ಪ್ರಬಂಧಕರ್ತುರೇವನಾರಾಯಣಸ್ಯಾಯಂ ಸೂನುರಿತಿಭಾತಿ" ಎಂದು ಹೇಳಿರುವರು.$ ಅಲ್ಲದೆ ಗ್ರಂಥಾಂತ್ಯದಲ್ಲಿ:—

ಶ್ರೀಕೃಷ್ಣರಾಜ ಕರಣೈಕನಕೇತನೇನ
ಕೃಷ್ಣೇನ ಭಾಗವತ ಇತ್ಯಭಿಶಬ್ದಿತಸ್ಯ
ನಾರಾಯಣಸ್ಯ ತನಯೇನ ಸಮಿರಿತೇಯಂ
ತಾರಾಸುಧಾಕರಕಥಾ ವಿದುಷಾಂ ಮುದೇಽಸ್ತು ॥ ೨೦೬

ಎಂಬುದರಿಂದಲೂ ಸ್ಪಷ್ಟಪಡುವುದು.

ಕಾಲ:—ಇದು ನಿಜವೆನ್ನುವುದಾದರೆ ಕವಿಯು ಕ್ರಿ. ಶ. ೧೬೨೯ನೆಯ ಶತಮಾನದವನೆನಬೇಕಾಗುವುದು.

ಗ್ರಂಥ:—ಇವನು 'ತಾರಾಶಶಾಂಕಂ' ಎಂಬ ಕಾವ್ಯವನ್ನು ಬರೆದಿರುವನು. ಇದಕ್ಕೆ 'ತಾರಾಸುಧಾಕರ' ಎಂಬ ಮತ್ತೊಂದು ಹೆಸರಿರುವುದಾಗಿ ಮೇಲಣ ಶ್ಲೋಕದಿಂದ ವ್ಯಕ್ತವಾಗುತ್ತದೆ. ಇದರಲ್ಲಿ ೨೦೬ ಶ್ಲೋಕಗಳಿರುವುವು. ಇದರ ಕೆಲವು ಶ್ಲೋಕಗಳು ಎಂದರೆ ೯೯ನೆಯ ಶ್ಲೋಕಮೊದಲು ೧೧೪ನೆಯ ಶ್ಲೋಕಪೂರ್ತಿಯಾಗಿ ಪ್ರತಿಶ್ಲೋಕಾರಂಭದಲ್ಲಿ ಕಂಡುಬರುವ 'ತಚ್ಚಿಂತಯಾಮಿ ತಚ್ಚಿಂತಯಾಮಿ' ಎಂಬದು ಚೌರಪಂಚಾಶಿಕೆಯ ೫೦ ಶ್ಲೋಕಗಳ ಆರಂಭದಲ್ಲಿ ಕಂಡುಬರುವ 'ಅದ್ಯಾಪಿತಾಂ ಅದ್ಯಾಪಿತಾಂ' ಎಂಬದನ್ನು ಜ್ಞಾಪಕಕ್ಕೆ ತರುವುದಲ್ಲದೆ ಅಲ್ಲಿನ ಸಂದರ್ಭವೂ ಸ್ವಲ್ಪ ಹೆಚ್ಚುಕಡಿಮೆ ಒಂದೇ ರೀತಿಯದೆಂದು ತೋರುವುದರಿಂದ ಚೌರಪಂಚಾಶಿಕೆಯನ್ನು ನೋಡಿ ಬರೆದಿರಬಹುದಾಗಿ ಭಾಸವಾಗುತ್ತದೆ.

ಇದರ ಶ್ಲೋಕಗಳು:—

ತಚ್ಚಿಂತಯಾಮಿ ಪರಿಷತ್ಸು ಪರಾಂಗನಾನಾಂ
ಸಭ್ರೂವಿಲಾಸಮಲಸೈರ್ವಲಿತೈರಪಾಂಗೈಃ।
ಕಂದರ್ಪಕಾರ್ಮುಕಲತೋತ್ಪತಿ ತೈರವಾಸ್ತ್ರೈಃ
ಧೈರ್ಯಂ ಮಮಾಪಚಿನುತೇ ಸ್ಮ ಹಸನ್ಮುಖೀ ಸಾ ॥ ೯೯

$ ಕಾವ್ಯಮಾಲಾ ೪೬ನೆಯ ಗುಚ್ಛ ಪುಟ ೫೮.

ತಚ್ಚಿಂತಯಾಮಿ ಚಿಬುಕಾಳಿತಾಂಗುಲಿಭ್ರೂ
ಭಂಗಾಭಿರಾಮದರವಕ್ರಿತವಕ್ತ್ರಮಕ್ಷ್ಣಾ ।
ಸಂಭಾವ್ಯ ಮಾಂ ಮನಸಿ ಪೂರ್ಣಮಸೌರಥಾ ಸಾ
ಚಿತ್ರಾರ್ಪಿತೇವ ಯದಭಾತ್ಪುಲಕಾಚಿತಾಂಗೀ॥ ೧೦೮

ರೂ ಪ ಗೋ ಸ್ವಾ ಮಿ

ಇವನು ವಂಗೀಯನು. ಇವನ ಮಾತಾಪಿತೃಗಳಾರೆಂಬದು ತಿಳಿಯದು. ಇವನು ಕ್ರಿ. ಶ. ೧೪೯೦ರಲ್ಲಿ ಜನ್ಮಗ್ರಹಣಮಾಡಿ ಕ್ರಿ. ಶ. ೧೫೫೦ರ ವರೆಗೆ ಜೀವಿಸಿದ್ದು ಹುಸೇಶಹನ ಆಸ್ಥಾನ ಮಂತ್ರಿಯಾಗಿದ್ದನು. ಇವನ ಸೋದರನಾದ ಸನಾತನೂ ರೂಪಗೋಸ್ವಾಮಿಯಂತೆ ಹುಸೇಶಹನ ಬಳಿ ಮಂತ್ರಿಪದವಿಯಲ್ಲಿದ್ದನು. ಇವರು ಮಹದ್ಐಶ್ವರ್ಯವಂತರಾಗಿಯೂ, ಮಹಾಮೇಧಾವಿಗಳಾಗಿಯೂ ರಾಜತಂತ್ರಪಟುಗಳಾಗಿಯೂ ಇದ್ದರು. ಕಾಲಕ್ರಮದಲ್ಲಿ ಚೈತನ್ಯ ಧರ್ಮವನ್ನವಲಂಬಿಸಿ ಸನ್ಯಾಸಗ್ರಹಣಮಾಡಿದರು.*

ಕಾಲ:—ಮೇಲೆ ಹೇಳಿರುವ ಕಾಲದಿಂದ ಇವನು ಕ್ರಿ. ಶ. ೧೬ನೆಯ ಶತಮಾನದವನೆಂದು ಸ್ಪಷ್ಟವಾಗಿರುವುದಲ್ಲದೆ.—

ನಂದಸಿಂಧುರಬಾಣೇಂದು (೧೫೯೯) ಸಂಖ್ಯೇಸಂವತ್ಸರೇಗತೇ
ವಿದಗ್ಧಮಾಧವನಾಮ ನಾಟಕಂಗೋಕುಲೇಕೃತಂ ॥†

ಎಂಬ ಶ್ಲೋಕದಿಂದಲೂ ಖಂಡಿತವಾಗುವುದು.

ಗ್ರಂಥಗಳು§:—(೧) ಹಂಸದೂತ (೨) ಉದ್ಧವಸಂದೇಶ (೩) ಕೃಷ್ಣಜನ್ಮತಿಥಿ (೪) ಗಾನೋದ್ದೇಶದೀಪಿಕಾ (೫) ಸ್ತವಮಾಲಾ (೬) ವಿದಗ್ಧಮಾಧವ (೭) ಲಲಿತಮಾಧವ (೮) ದಾನಕೇಳಿಕೌಮುದೀ; (೯) ಆನಂದಮಹೋದಧಿ (೧೦) ಭಕ್ತಿರಸಾಮೃತಸಿಂಧು (೧೧) ಉಜ್ಜ್ವಲನೀಲಮಣಿ (೧೨) ಪ್ರಯುಕ್ತಖ್ಯಾತಚಂದ್ರಿಕಾ (೧೩) ಮಥುರಾಮಹಿಮಾ (೧೪) ಪದ್ಯಾವಳಿ (೧೫) ರಘುಭಾಗವತಾಮೃತ (೧೬) ಗೋವಿಂದ ಬಿರುದಾವಳಿ.

ಇವುಗಳಲ್ಲಿ '**ಉಜ್ಜ್ವಲನೀಲಮಣಿ**' ಎಂಬದು ಅಲಂಕಾರ ಗ್ರಂಥ. ಇದಕ್ಕೆ ವಿಶ್ವನಾಥ ಚಕ್ರವರ್ತಿ ಎಂಬವನು 'ಆನಂದಚಂದ್ರಿಕಾ' ಎಂಬ ವ್ಯಾಖ್ಯಾನವನ್ನೂ,

---

* Bengali Language and Literature P. 504

† ವಿದಗ್ಧಮಾಧವ ಪುಟ ೨೧೯.

§ ವಂಗಭಾಷಾ ಸಾಹಿತ್ಯ ಪುಟ ೫೦೪. Foot Note.

ಜೀವಗೋಸ್ವಾಮಿ ಎಂಬವನು 'ಲೋಚನರೋಚನೀ' ಎಂಬ ವ್ಯಾಖ್ಯಾನವನ್ನೂ ಬರೆದಿರುವರು. 'ಉಜ್ಜ್ವಲನೀಲಮಣಿ' ಎಂಬದಕ್ಕೆ ಆನಂದಚಂದ್ರಿಕಾ ಎಂಬ ವ್ಯಾಖ್ಯಾನ ಕಾಲವು ೧೬೧೫ ಎಂದು.—

ಅಕ್ಷಿನೇ ಶುಕ್ಲಪಂಚಮ್ಯಾಂ ವಸುಚಂದ್ರಕಲಾಮಿತೇ (೧೬೧೫)
ಶಾಕೇವೃಂದಾವನೇ ಪೂರ್ಣಭವದಾನಂದಚಂದ್ರಿಕಾ ||

ಎಂಬ ಶ್ಲೋಕದಿಂದ ಗೊತ್ತಾಗುತ್ತದೆ.[೫]

ವಿದಗ್ಧಮಾಧವ:—ಇದು ೭ ಅಂಕಗಳುಳ್ಳ ನಾಟಕ. ರಾಧಾಕೃಷ್ಣರ ವಿನೋದ, ವಿಲಾಸವರ್ಣನೆಗಳಿರುವುವು. ಇದರ ಕೆಲವು ಶ್ಲೋಕಗಳು:—

ಕೃಷ್ಣನು ಮುಂದೆನೋಡಿ—

ಆಸಂಗಃ ಕುಮುದಾಕರೇಷು ಶಿಥಿಲೋ ಧ್ವಾಂಗಾವಲೀನಾಮಭೂ
ದ್ವೀಕ್ಷಂತೇ ನಿಜಕೋಟರಾಂಕಿತಮುವಾ ಕ್ರೋಷ್ಟೀರುಷಂ ಕಾಶಿಕಾಃ
ಸಂಕೋಚೋನ್ಮುಖತಾಂ ಪ್ರಯಾತಿ ಶನಕೈಃರಾತ್ರಾನಪಾದೇರ್ಘ್ಯತೇ
ಕಿಂ ಭಾನುರ್ನನು ಪೂರ್ವಪರ್ವತತಟೀಮಾರೋಢುಮುತ್ಕಂಠತೇ ॥ ೪—೩೬

ಕಪಟೀ ಸ ಲತಾಕುಟೀಮಿಮಾಂ ಸಖಿ ನಾಗಾದಧುನಾಪಿ ಮಾಧವಃ
ಇತಿ ಜಲ್ಪಪರೀತಯಾತಯಾ ಕ್ಲಮದೀರ್ಘಾ ಗಮಿತಾ ಕಥಂ ತ್ವಯಾ ॥ ೪—೩೭

ತಾಂಬೂಲಂ ಘನಸಾರಸಂಸ್ಕೃತಮುದಃ ಕ್ಲಿಷ್ಟಂ ಪುರೋ ರಾಧಯಾ
ಹಾರೀಹಂತ ಹರಿನ್ಮಣಿಸ್ತಬಕಿತೋ ಹಾರೋಽಯಮುತ್ಸಾರಿತಃ
ಪೌಷ್ಪೀ ಚೇಯಮುದಾರಸೌರಭಮಯಾ ಚೂಡಾ ನಖೈಃ ಖಂಡಿತಾ
ತಸ್ಯಾಃ ಶಂಸತಿ ವಿಪ್ರಲಂಭಜನಿತಂ ಕುಂಜೋಯಮಂತಃ ಕ್ಲಮಂ ॥ ೪—೩೮.

ಲಲಿತೆಯು ಕೃಷ್ಣನನ್ನು ಕುರಿತು:—

ಜಲತಿ ಸಖೇ ಮಯಿ ರಾಧಾ ಮಂದಾಯದ್ಭವತಿ ನೀಲಿನೀರಾಗಾ
ಕೃಷ್ಣತ್ವಂ ನಂದಸಿ ಯದ್ಧಸ್ಯೋಹರಿದ್ರರಾಗೋಽಸಿ ॥ ೬—೩೮

ರತ್ನಖೇಟ ಶ್ರೀನಿವಾಸದೀಕ್ಷಿತ

ಇವನ ವಂಶಾವಳಿಯು ಹೀಗಿರುವುದು:—

ಯಃ ಪಸ್ಪೋ ಭಾಸ್ಯಕರ್ತುಃ ಕೃತುವರಮಹಿತಶ್ರೀಭವಸ್ವಾಮಿಯಜ್ವನಃ
ಶ್ರೀಕೃಷ್ಣಾರ್ಯಸ್ಯ ದೈನಂದಿನಕೃತಿಕೃತಿನಃ ಸೋಮಪಃ ಪಂಚಮೋ ಯಃ
ನಪ್ತಾ ಯೋಽದ್ವೈತಚಿಂತಾಮಣಿವಿರಚಯಿತುಃ ಪಾಂಡುರೀಕಾದಿಯಜ್ವನಃ
ಸರ್ವಜ್ಞಾತುಃ ಕುಮಾರಾಹ್ವಯಮಿಳಿತಭವಸ್ವಾಮಿಯಜ್ವಾಭಿಧಸ್ಯ ॥

---

[೫] ಉಜ್ಜ್ವಲನೀಲಮಣಿ ಪುಟ ೪೫೮.

ಶ್ರೀಕೃಷ್ಣಾರ್ಯಸ್ಯ ಪ್ರೌಢೈಃ ಪ್ರತಿದಿವಸಮವಿಶ್ರಾಂತಮನ್ನಪ್ರದಾತು
ರ್ಜ್ಯೋತಿಷ್ಟೋಮೇ ಮಾದಿಯಷ್ವರ್ವಿವಿಧಕೃತಿಕೃತಃ ಸರ್ವವಿದ್ಯಾಧಿಕಸ್ಯ
ಯುಃ ಶ್ರೀವೈಕುಂಠಪುರಂಟಾಮಿತಿ ಮುಹಃ**ಶ್ರೀಭವಸ್ವಾಮಿಭಟ್ಟ**
ಸ್ಯಾದ್ಯೈಕಜ್ಞಾನಧೂತಾಖಿಲಕಲುಷಗಣಸ್ಯಾತ್ಮಜಃ ಸ್ವಾತ್ಮವೇತ್ತುಃ ॥

ಎಂಬುದನ್ನು ಸಂಗ್ರಹಿಸಿದರೆ:—

ಶ್ರೀಭವಸ್ವಾಮಿಗಾ (ಭಾಷ್ಯಕಾರ)
|
ಶ್ರೀಕೃಷ್ಣಾರ್ಯರ್ಗಿ (ಅಹ್ನಿಕಪ್ರಣೇತಾ)
|
ಕುಮಾರಭವಸ್ವಾಮಿ (ಅದ್ವೈತಚಿಂತಾಮಣಿಕಾರ)
|
ಶ್ರೀಕೃಷ್ಣಾರ್ಯರ್ಃ
|
ಶ್ರೀಭವಸ್ವಾಮಿಭಟ್ಟ.
|
ಶ್ರೀರತ್ನಖೇಟ ಶ್ರೀನಿವಾಸಾಧ್ವರೀ
ಎಂದಾಗುವುದು.

ಇವನ ತಂದೆಯು ಇಟ್ಟಹೆಸರು ಶ್ರೀನಿವಾಸ ದೀಕ್ಷಿತನೆಂದು. ರತ್ನಖೇಟ ಶ್ರೀನಿವಾಸ ದೀಕ್ಷಿತನೆಂಬುದು ಇವನ ವ್ಯವಹಾರನಾಮ. ಇವನು:—

ಸಂಧ್ಯಾಸಂಧುಕ್ಷಣಾಂಭೋ ಧರನಲಿಕಗಣಾದುದ್ಗತಾನ್ಸೀಸಖಂಡಾಂ
ಸ್ತಾರಾಕಾರಾನಿರೋದ್ಧುಂ ಶಶಿರವಿಕ ಪಟೂದ್ವಿಭ್ರತೋ ರತ್ನಖೇಟೌ।
ಅನ್ಯೋನ್ಯಂ ಯುಧ್ಯಮಾನಾವುದಯಚರಮಭೂಭೃತ್ಪ್ರವೀರಾವಿತಿದ್ರಾ
ಗುಕ್ತ್ಯಾಖ್ಯಾತಾಪದಾಖ್ಯಃ ಕ್ಷಿತಿಪತಿಚವಸಾ **ರತ್ನಖೇಟಾಧ್ವರೀತಿ** ॥

ಎಂದು ಸಂಧ್ಯಾವರ್ಣನಮಂ ಮಾಡಿದುದರ ಚಮತ್ಕಾರಕ್ಕೆ ಮೆಚ್ಚಿ ರಾಜನು ಇವನನ್ನು ' ರತ್ನಖೇಟಾಧ್ವರೀ ' ಎಂದು ಕರೆದುದಾಗಿ ಹೇಳಿದೆ.

ಕಾಲ:—ಇವನು ಅಪ್ಪಯ್ಯದೀಕ್ಷಿತ, ಭಟ್ಟೋಜೀದೀಕ್ಷಿತನ ಸಮಕಾಲೀನನೆಂದು ಹೇಳಿರುವುದರಿಂದ ಕ್ರಿ. ಶ. ೧೬ನೆಯ ಶತಮಾನದವನು.

ಗ್ರಂಥಗಳು:—

ಅದ್ವೈತಾಸ್ರವಕೌಸ್ತುಭಂ ವ್ಯರಚ ಯದ್ಯೋ ವಾದತಾರಾವಳೀಂ
ಮಧ್ವಧ್ವಂಸನ ಬೌದ್ಧತಂತ್ರಮಥನೇ ವೇದಾಂತವಾದಾವಳೀಂ
ಪ್ರಖ್ಯಾತಂ ಮುನಿದರ್ಪಣಂ ಸಮಯಸರ್ವಸ್ವಂ ವಿಧೇರರ್ಣಯಂ
ತತ್ತ್ವಾನಾಂ ಪರಿಶುದ್ಧಿ ಬೋಧವಿಮಲಂ ರತ್ನಪ್ರದೀಪಂ ಸ್ಮೃತೇಃ।

ಯೋ ಭಾವನಾಪುರುಷವರ್ಯಮುಪಾನ್ಯಕಾರ್ಷೀ
ದಷ್ಟಾದಶಾಪಿ ಚ ದಶಾದ್ಭುತರೂಪಕಾಣಿ
ಭಾವೋದ್ಭವಾನಿ ಶಿತಕಂರಜಯಾದಿವಾನಿ
ಕಾವ್ಯಾನಿ ಪಶ್ಯಿಮನಸೋದನಮೃತಾಯಿತಾನಿ ॥

ಧನ್ಯಸ್ಯ ಮನೋವಿನೋದನಪ್ರಾಃ ಸಾಹಿತ್ಯಸಂಜೀವಿನೀ
ಭಾವೋದ್ಭೇದರಸಾಸ್ರವಾದಿಕೃತಯಃ ಪಾರೇಶತಂ ಯತ್ಕೃತಾಃ
ಅನ್ಯೇಕಾಪ್ಯರಸಾರ್ದ್ರಸುಂದರಗಿರಃ ಕ್ಷುದ್ರಪ್ರಬಂಧಾಃ ಶತಂ
ಚ್ಛಂದೋಜ್ಯೋತಿಷಮಂತ್ರತಂತ್ರವಿಷಯಾ ನಾನಾಪ್ರಬಂಧಾಸ್ತಥಾ ॥

ಅನ್ಯಾಶ್ಚ ಯಸ್ಯ ಕೃತಯೋ ವಿಬುಧಾಗಮಾಂತ
ಸಿದ್ಧಾಂತಿತಾಂತರ ನಿರಂತರಸೂಕ್ತಿಗುಂಭಾಃ
ಪತ್ತರ್ಶಿನೀಸಕಲ ಮರ್ಮವಿವೇಕ ಕರ್ಮ
ಕರ್ಮಕ್ಷಮಾಃ ಸುಕೃತಿನಾಂ ಮುದಮಾವಹಂತಿ ॥

೧೭ನೆಯ ಶತಮಾನ

ಜಗನ್ನಾಥಪಂಡಿತ

"ಅಸೀತ್ತ್ರೈಲಂಗಾಭಿಜನೋ ವೇಗಿನಾಡಕುಲೋತ್ಪನ್ನಃ ಪೇರುಭಟ್ಟಾಖ್ಯೋ ಮಹೀಸುರಸತ್ತಮಃ ಯೋ ವಾರಾಣಸ್ಯಾಂ ಜ್ಞಾನೇಂದ್ರಭಿಕ್ಷೋರ್ವೇದಾಂತಶಾಸ್ತ್ರಂ, ಮಹೇಂದ್ರಪಂಡಿತಾನ್ನ್ಯಾಯವೈಶೇಷಿಕದರ್ಶನೇ, ಖಂಡದೇವಾತ್ಪೂರ್ವಮೀಮಾಂಸಾಂ, ಶೇಷೋಸಾಹ್ವವೀರೇಶ್ವರಪಂಡಿತಾಚ್ಚ ಮಹಾಭಾಷ್ಯಮಧೀತವಾನ್. ತಸ್ಯಾಲ್ಲಕ್ಷ್ಮೀನಾಮಿಕಾಯಾಂ ತದ್ಧರ್ಮಪತ್ನ್ಯಾಂ ಜಗನ್ನಾಥೋಜನ್ಮಲೇಭೇ ಪಠಿತವಾಂಶ್ಚ ನಿಖಿಲಾನಿಶಾಸ್ತ್ರಾಣಿ ಪ್ರಾಯಃ ಸ್ವಪಿತುರೇವ"

ಎಂಬುದರಿಂದ ಇವನು ತ್ರೈಲಂಗದೇಶದಲ್ಲಿನ ವೇಗಿನಾಡಕುಲೋತ್ಪನ್ನನಾದ ಪೇರುಭಟ್ಟನೆಂಬ ಬ್ರಾಹ್ಮಣ ಮತ್ತು ಈತನ ಧರ್ಮಪತ್ನಿಯಾದ ಲಕ್ಷ್ಮೀ ಎಂಬವರಲ್ಲಿ ಜಗನ್ನಾಥನು ಜನ್ಮಗ್ರಹಣ ಮಾಡಿ ಕಾಲಕ್ರಮದಲ್ಲಿ ಸಕಲಶಾಸ್ತ್ರಗಳನ್ನೂ ತಂದೆಯ ಬಳಿಯಲ್ಲಿ ಕಲಿತನು ಎಂಬದು ಸ್ಪಷ್ಟವಾಗುತ್ತದೆ.*

ಗೋದಾವರೀ ಮಂಡಲಕ್ಕೆ ಸೇರಿದ ಅಮಲಾಪುರದ ಬಳಿಯಣ (ಮುಂಗಡ) ಎಂಬ ಗ್ರಾಮವು ಈತನ ಜನ್ಮಭೂಮಿ. ಇವನ ಮನೆಯ ಹೆಸರು ಉಪದ್ರಷ್ಟವಾರ

* Introduction to Rasagangadhara. P 2.

ಎಂದು. ಒಟ್ಟಿನಲ್ಲಿ ಇವನು ಆಂಧ್ರದೇಶದವನೆಂದು ಪುನಃ ಹೇಳಬೇಕಾದುದಿಲ್ಲ.§ ಇವನು ಸಕಲ ಶಾಸ್ತ್ರಾಧೀತಸಂಪನ್ನನಾಗಿ ದೇಶಾಟನಕ್ಕಾಗಿ ಹೊರಟು ಯಾರಾದ ರೊಬ್ಬ ರಾಜಾಶ್ರಯವನ್ನು ಕೋರಿ ದೆಹಲಿಗೆ ಬಂದು ಆಗ ದೆಹಲಿಯ ಸಾರ್ವಭೌಮನಾಗಿದ್ದ ಷಹಜಹಾನನ ಆಶ್ರಯವನ್ನು ಹೊಂದಿ 'ಪಂಡಿತರಾಜ' ಎಂಬ ಬಿರುದನ್ನುಗಳಿಸಿ ಮಾನ್ಯನಾಗಿದ್ದುದಲ್ಲದೆ ಇವನ ಏರಿಯ ಮಗನಾದ ದಾರಾಷಹನ ವಿಶ್ವಾಸಪಾತ್ರನಾಗಿರುತ್ತಿದ್ದನು. ಎಂಬದು:—

ಪ್ರಾಪ್ತಯೌವನಶ್ಚಾಶ್ರಯೋಚ್ಛಯಾ ದಿಲ್ಲೀನಗರೇ ಸಮಾಗತ್ಯ ಶಕ್ರೋಪಮವೈಭವಸ್ಯ ಶಾಹಜಹಾನಾಭಿಧಯವನಸಾರ್ವಭೌಮಸ್ಯ ಸಂಸದಿ ಪ್ರವೇಶಂ ಲಬ್ಧ್ವಾ ಅಧಿಗತವಾಂಶ್ಚ ನಿಜವಿದ್ಯಾಚಮತ್ಕಾರ ಪರಿತೋಷಿತಾತ್ತಸ್ಮಾದೇವ ಪಡಿಂತರಾಜಪದವೀಂ ಸ್ಥಿತಶ್ಚ ಮಧ್ಯಮೇವಯಸಿ ಪ್ರಾಯಸ್ತತ್ತ್ವೈವ ತತ್ಸವಿಾಪೇತಪ್ರಸೋದಾರಾಶಿಕೋಹಸ್ಯ ಸಪೊಾಪೇಚ ಎಂಬುದರಿಂದ ಸ್ಪುಟವಾಗುತ್ತದೆ.

ಕಾಲ:—ಶಹಾಜಹಾನ ಮಹೀಪತಿಸ್ತು ೧೬೨೮ ಕ್ರಿಸ್ತಾಬ್ದೆ ರಾಜಸಿಂಹಾಸನ ಮಧಿರೂಢಃ ೧೬೫೮ ಕ್ರಿಸ್ತಾಬ್ದೇ ಔರಂಗಜೇಬನಾಮ್ನಾಸ್ವಪುತ್ರೇಣ ಕಾರಾಗಾರೇನಿವೇಶಿತಃ, ೧೬೬೬ ಕ್ರಿಸ್ತಾಬ್ದೆ ಚ ಪಂಚತ್ವಂಗತಃ ದಾರಾಶಾಹಸ್ತು ಪ್ರಾಗೇವ ದುರ್ದಶಾಮನುಭಾವ್ಯ ಔರಂಗಜೇಬೇನಘಾತಿತಃ |

ಎಂಬುದರಿಂದ ಷಹಜಹಾನನು ಕ್ರಿ. ಶ. ೧೬೨೮ರಲ್ಲಿ ಸಿಂಹಾಸನವನ್ನು ಹತ್ತಿ ರಾಜ್ಯವಾಳುತ್ತಿದ್ದು ಕ್ರಿ. ಶ. ೧೬೫೮ರಲ್ಲಿ ಮಗನಾದ ಔರಂಗಜೇಬನಿಂದ ಸೆರೆಗೊಯ್ಯಲ್ಪಟ್ಟು ಕ್ರಿ ಶ. ೧೬೬೬ರಲ್ಲಿ ಪಂಚತ್ವವನ್ನೈದಿದನೆಂದೂ, ಇದಕ್ಕೆ ಮೊದಲೇ ದಾರಾಶಹನು ದುರ್ದಶಾಪನ್ನನಾಗಿದ್ದು ಔರಂಗಜೇಬನಿಂದ ಕೊಲ್ಲಲ್ಪಟ್ಟುದಾಗಿ ಖಂಡಿತವಾಗುತ್ತದೆ. ಇದರಿಂದ ಜಗನ್ನಾಥನು ತನ್ನ ಯೌವನ ಮತ್ತು ಮಧ್ಯಕಾಲವೆಲ್ಲವನ್ನೂ ದಿಲ್ಲೀಶ್ವರನ ಸಭೆಯಲ್ಲಿ ಕಳೆದುದಾಗಿ,

" ತೈಲವಂಗಂಶೋದ್ಭವಃ ಪೇರಮಭಟ್ಟಸೂನುಃ ಅನೇಕಗ್ರಂಥಕರ್ತಾಪಂಡಿತರಾಜೋಜಗನ್ನಾಥೋ ದಿಲ್ಲೀಬಾದಶಹಸ್ಯಶಾಹಜಹಾನಸೂನೋರ್ದಾರಾಶಹಸ್ಯ ಸಭಾಯಾಮಾಸೀತ್ ಯತೋವಿನೇನ ಜಗದಾಭರಣ ಕಾವ್ಯೆದಾರಾಶಾಹಸ್ಯೈವಯಶೋವರ್ಣನಂಕೃತಮಸ್ತಿ " ಎಂದಿರುವುದರಿಂದಲೂ:—

" ದಿಲ್ಲೀವಲ್ಲಭಪಾಣಿಪಲ್ಲವತಲೇನೀತಂ ನವೀನಂವಯಃ " ಇತುಕ್ತಂಸಚದಾರಾಶಹಃ ೧೬೫೭ ಮಿತ ಕ್ರಿಸ್ತ ಸಂವತ್ಸರಪರ್ಯಂತಮಾಸೀತ್ ಎಂದು ಹೇಳಲ್ಪಟ್ಟಿರು

§ ಸಂಸ್ಕೃತ ಕವಿಜೀವಿತವು ಪುಟ.

ವುದರಿಂದ ಖಂಡಿತವಾಗುತ್ತದೆ. ಜಗನ್ನಾಥನು ತನ್ನ ವೃದ್ಧಾಪ್ಯವನ್ನು ಕಾಶಿಯಲ್ಲಿಯೋ ಮಧುರೆಯಲ್ಲಿಯೋ ಕಳೆದುದಾಗಿಯೂ ಇವನು ಕ್ರಿ. ಶ. ೧೭ನೆಯ ಶತಮಾನದಲ್ಲಿದ್ದವನೆಂಬುದು—" ಪಂಡಿತರಾಜೋಪಿ ವಾರ್ಧಕೇಕಾಶ್ಯಾಂ ಮಧುರಾಯಾಂ ವಾಗತ್ವಾಪರಮೇಶ್ವರಾರಾಧನೇನ ವಯಃ ಶೇಷಂ ನೀತವಾ್. ತಸ್ಮಾತ್ ಕ್ರಿಸ್ತಾಬ್ದೀಯ ಸಪ್ತದಶಶತಕ ಮಧ್ಯಭಾಗೇ ಪಂಡಿತರಾಜೋ ಆಸೀದಿತಿಸುವ್ಯಕ್ತಮೇವ " ಎಂಬುದರಿಂದ ಹೇಳಲಾಗುತ್ತದೆ.

ಪಂಡಿತ ರಾಜ ಜಗನ್ನಾಥನ ವಿಚಾರವಾಗಿ ಕಾಲವನ್ನನುರಿಸಿ ಹೇಳತ್ತಬಂದಿರುವ ಅನೇಕಕಥೆಗಳ ಸತ್ಯಾಸತ್ಯವಿಚಾರವಿಮರ್ಶನವು ಪ್ರಕೃತ ಅವಶ್ಯಕವೆಂದು ತೋರುವ್ದದು.

ಪಂಡಿತ ಜಗನ್ನಾಥನ ವಿಚಾರವಾಗಿ ಲೋಕವು ಏನನ್ನುವುದು ?

(೧) ಜಗನ್ನಾಥನು ದೇಶಾಟನಕ್ಕಾಗಿ ಹೊರಟು ಜಯಪುರಕ್ಕೆ ಬಂದು ಅಲ್ಲ ಒಂದು ಪಾಠಶಾಲೆಯನ್ನು ಸ್ಥಾಪಿಸಿ ಅಲ್ಲಿ ಪಾಠ ಪ್ರವಚನಗಳನ್ನು ನಡೆಯಿಸುತ್ತಿರಲು ಅಲ್ಲಿಗೆ ದಿಲ್ಲಿಯಿಂದ ಬಂದಿದ್ದ ಕಾಜಿಯೊಬ್ಬನು ಹಿಂದೂಮತವು ಪುರಳೆಲ್ಲದುದು. ಮಹಮ್ಮದ ಮತವು ಸರ್ವಮತ ಶ್ರೇಷ್ಠವೆಂದು ಹೇಳುವುದನ್ನು ಕೇಳಿ ಜಗನ್ನಾಥನು ಆ ಮತಕ್ಕೆ ಸಂಬಂಧಿಸಿದ ಸಕಲ ಶಾಸ್ತ್ರಂಗಳನ್ನೂ ಕೆಲವು ಕಾಲದಲ್ಲಿ ಕಲಿತು ಅವರೊಡನೆ ವಾದಿಸಿ ವಿಜಯಿಯಾದುದನ್ನು ತಿಳಿದು ರಾಜನು ಜಗನ್ನಾಥನನ್ನು ಸತ್ಕರಿಸಿ ತನ್ನ ಸಭಾಸದನನ್ನಾಗಿ ಮಾಡಿಕೊಂಡನು.

(೨) 'ಲವಂಗಿ' ಎಂಬ ಯವನ ಕನ್ಯೆಯು ತನ್ನ ತಂದೆಯ ಆಸ್ಥಾನಕ್ಕೆ ಬಂದ ಪಂಡಿತರಾಜ ಜಗನ್ನಾಥನ ಯೌವನ ಸೌಂದರ್ಯಾತಿಶಯಗಳನ್ನೂ ಅವನ ಪಾಂಡಿತ್ಯವನ್ನೂ ಕೇಳಿ ಅವನನ್ನು ನೋಡಲೆಳಸಿ ಅವನನ್ನು ನೋಡುವ ಸುಸಂಧಿಯನ್ನು ಹೇಗೋ ಕಲ್ಪಿಸಿಕೊಂಡು ಸೌಂದರ್ಯಮುಗ್ಧಳಾಗಿರಲು ಒಂದಾನೊಂದುದಿವಸ ರಾಜನು ಜಗನ್ನಾಥನೊಡನೆ ಚದುರಂಗವನ್ನಾಡುತ್ತಿದ್ದಾಗ ತೃಷಾರ್ತನಾದ ರಾಜನು ಸವಿನೀರನ್ನು ತರುವಂತೆ ಲವಂಗಿಗೆ ಹೇಳಿದನು. ಅದರಂತೆ ಸಣ್ಣ ಕುಂಭದಲ್ಲಿ ನೀರನ್ನು ತರುತ್ತಿರುವ ಲವಂಗಿಯನ್ನು ನೋಡಿಆನಂದಿಸಿ ಪಂಡಿತವರ! ನೀನು ಲವಂಗಿಯನ್ನು ಬಣ್ಣಿಸೆಂದು ಆಜ್ಞಾಪಿಸಲು ಜಗನ್ನಾಥನು ಬಹು ಸಡಗರದಿಂದ.-

ಯವನೀರಮಗೇ ವಿಪದಃ ಶಮನೀ ಕವುನೀಯತಮಾ ನವನೀತಸಮಾ
ಉಹಿಊಹಿವಚೋಽಮೃತಪೂರ್ಣಮುಖೀ ಸ ಸುಖೀ ಜಗತೀಹ ಯದಂಕಗತಾ ॥
ಯವನೀನವನೀತಕೋಮಲಾಂಗೀ ಶಯನೀಯೇ ಯದಿ ನೀಯತೇ ಕದಾಚಿತ್
ಅವನೀತಲಮೇವ ಸಾಧು ಮನ್ಯೇ ನವನೀ ಮಾಳವನೀ ವಿನೋದಹೇತುಃ ॥

ಎಂದೂ,

ಇಯಂಸುಸ್ತನೀಮಸ್ತಕನ್ಯಸ್ತಕುಂಭಾ
ಕುಸುಂಭಾರುಣಂ ಚಾರುಚೇಲಂದಧಾನಾ
ಸಮಸ್ತಸ್ಯಲೋಕಸ್ಯಚೇತಃ ಪ್ರವೃತ್ತಿಂ
ಗೃಹೀತ್ವಾಘಟೇಸ್ಥಾಪಯಿತ್ವೇವಭಾತಿ ॥

ಎಂದು ವರ್ಣಿಸಿದುದನ್ನು ರಾಜನುಕೇಳಿ ಸಂತುಷ್ಟನಾಗಿ ಎಲೈ! ಪಂಡಿತರಾಜ! ನಿನಗೆ ಬೇಕಾದುದನ್ನು ಕೇಳು ತಪ್ಪದೆ ಕೊಡುವೆನೆನಲು ಜಗನ್ನಾಥನು—ಎಲೈ! ರಾಜನೆ!

ನ ಯಾಚೇ ಗಜಾಳಿಂ ನ ವಾ ವಾಜಿರಾಜಂ
ನ ವಿತ್ತೇಷುಚಿತ್ತಂ ಮದೀಯಂ ಕದಾಪಿ
ಇಯಂ ಸುಸ್ತನೀಮಸ್ತಕನ್ಯಸ್ತಹಸ್ತಾ
ಲವಂಗೀಕುರಂಗೀದೃಗಂಗೀಕರೋತು ॥

ಎಂದು ಹೇಳಿದುದನ್ನು ಕೇಳಿ ಲವಂಗಿಯನ್ನು ಮದುವೆ ಮಾಡಿಕೊಟ್ಟನು.

(೩) ದಿಲ್ಲೀಶ್ವರನ ಅನುಗ್ರಹಕ್ಕೆ ಪಾತ್ರನಾಗಿ ಸದಾನಂದನಾಗಿರುತ್ತಿದ್ದಾಗ ಮತ್ತೊಬ್ಬರಾಜನು ತನ್ನಲ್ಲಿ ಕೊಂಚಕಾಲವಿರಬೇಕೆಂದು ಪ್ರಾರ್ಥಿಸಿ ಕೇಳಿಕೊಂಡುದಕ್ಕೆ ಜಗನ್ನಾಥನು ಪ್ರತ್ಯುತ್ತರವಾಗಿ:—

ದಿಲ್ಲೀಶ್ವರೋವಾ ಜಗದೀಶ್ವರೋವಾ
ಮನೋರಥಂಪೂರಯಿತುಂಸಮರ್ಥಃ
ಅನ್ಯೋನೃಪಾಲ್ಯೋಪರಿದೀಯಮಾನಂ
ಶಾಕಾಯವಾಸ್ಯಾಲ್ಲವಣಾಯವಾಸ್ಯಾತ್ ॥

ಎಂದು ಬರೆದು ಕಳುಹಿಸಿದನು.

(೪) ಜಗನ್ನಾಥನು ಕೇವಲ ತಪಸ್ಸಿನಿಂದ ಯಾವುದೋ ದೇವತೆಯನ್ನು ವಶಪಡಿಸಿಕೊಂಡಂತೆಯೂ, ಸಂತುಷ್ಟಳಾದಾದೇವತೆಯು ಎಲೆ! ಜಗನ್ನಾಥ!

ಅಕುರುದೇಶಂವಿಚರೇರ್ಮಾ ಕುರುಪರವಾದಿನಿರ್ಜಯೇಶಂಕಾಂ
ಸ್ವೀಕುರುವರಮೇಕಂ ವೇಚ್ಯಾಕುರುಭೋ ! ವತ್ಸ ! ಶಾಸ್ತ್ರಜ್ಞೆ ॥

ನೀನು ಈ ಕುರುದೇಶಗಳೆಲ್ಲವನ್ನೂ ಸಂಚರಿಸಿ ಪ್ರತಿವಾದಿಗಳನ್ನು ಗೆದು. ಶಾಸ್ತ್ರಾರ್ಥಗಳನ್ನುಪದೇಶಿಸುವನಾಗು ಪೆದರಬೇಡ. ಎಂದು ವರವನ್ನುಕೊಟ್ಟಳ್ದು

೫) ಮಹಾವೈಯ್ಯಾಕರಣನಾದ ನಾಗೇಶಭಟ್ಟನಗುರುವಾದ ಹರದೀಕ್ಷಿತನು ಚಕ್ರವರ್ತ್ತಿಯಿಂದ ಬಹುಮಾನವನ್ನು ಹೊಂದಿ ಬರಬೇಕೆಂದು ಡಿಲ್ಲಿಗೆ ಬಂದು ಮುಂಚಿತವಾಗಿ ಜಗನ್ನಾಥನ ಬಳಿಗೆ ಬಂದು ವಾದಕ್ಕೆ ಕರೆಯಲು ಅಂತಾಗಲೆಂದು ಜಗನ್ನಾಥನು ಮಾರನೆಯ ದಿವಸ ಒಡ್ಡೋಲಗಕ್ಕೆ ಹೋಗುವ ಸಮಯದಲ್ಲಿ

ಜಯವನ್ನು ಕೊಡುವ ತಾಯತಿಯೊಂದನ್ನು ಧರಿಸಿಕೊಂಡು ವಾದದಲ್ಲಿ ಹರದೀಕ್ಷಿತನನ್ನು ಪರಾಜಿತನನ್ನಾಗಿ ಮಾಡಲು ಹರದೀಕ್ಷಿತನು ಖಿನ್ನನಾಗಿ ಮನೆಗೆ ಬಂದು ತನ್ನ ಇಷ್ಟದೇವತೆಯನ್ನು ಪ್ರಾರ್ಥಿಸಿ ಅವಳಿಂದ ವರಪನ್ನು ಪಡೆದು ಮೂರನೆಯ ದಿನ ರಾಜನ ಒಡ್ಡೋಲಗದಲ್ಲಿ ಪಂಡಿತರಾಜನನ್ನು ಸೋಲಿಸಿದನು.

(೬) ಪಂಡಿತರಾಜನು ತನ್ನ ಕಾಲವೆಲ್ಲವನ್ನೂ ಯವನಿಯೊಡನೆ ಕಳೆದು ಅವಿಚಾರತೆಯಿಂದ ಇದುವರೆಗೆ ನಡೆಯಿಸಿದ ಪಂದಣಕೃತ್ಯಗಳಿಗೆ ಪರಿತಾಪಗೊಂಡು ಶೇಷಾಯುಷ್ಯವನ್ನು ಕಾಶಿಯಲ್ಲಿ ಕಳೆಯಲಾಪಿಸಿ ಯವನಿಯೊಡನೆ ಹೋಗಿ ಕಾಲ ಕ್ಷೇಪ ಮಾಡುತ್ತಿರಲು ಮಹಾಶ್ರೋತ್ರಿಯನಾದ ಅಪ್ಪಯ್ಯದೀಕ್ಷಿತನು ಯಾತ್ರಾರ್ಥಿಯಾಗಿ ಕಾಶಿಗೆ ಬಂದು ಚಂದ್ರಾರ್ಧಚೂಡನಂ ನೆಪಿಸಿ ಪಂಡಿತ ಜಗನ್ನಾಥನು ಇಲ್ಲಿರುವನೆಂಬುದನ್ನು ತಿಳಿದು ಅವನನ್ನು ನೋಡಬೇಕೆಂದು ಹೋದವೇಳೆಯಲ್ಲಿ ಯವನಿಯೊಡನೆ ಏಕಶಯ್ಯಾಗತನಾಗಿದ್ದುದನ್ನು ನೋಡಿ, ಎಲ್ಲ! ಪಂಡಿತರಾಜ!

ಕೊಽಸ್ಮಿಂಕಂಶೇಷಶೇಷೇ ವಯಸಿ ಸಮುಗತೋಮೃತ್ಯುಃ
ಅಥವ ಸುಖಂ ಶಯೀದಾ ನಿಕಟೇಜಾಗರ್ತಿ ಜಾಹ್ನವೀಜನನೀ ॥

ಎಂದು ಹೇಳಿ ಹೊರಟು ಹೋದನು

(೭) ಕಾಶಿಯ ಭೂಸೂರ ವೃಂದವು ಸಭೆಯನ್ನುಮಾಡಿ ಪಂಡಿತ ರಾಜನಿಗೆ ಪ್ರಾಯಶ್ಚಿತ್ತವನ್ನು ಸಮರ್ಥಿಸಿ ಪುನಃ ಹಿಂದೂಮತಕ್ಕೆ ಸೇರಿಸಿಕೊಳ್ಳುವುದಾಗಿ ಜಗನ್ನಾಥನಿಗೆ ಹೇಳಿಕಳುಹಿಸಲು ಜಗನ್ನಾಥನು ಯವನಿಯನ್ನು ಬಿಡಲಾರದೆ ಗಂಗಾತಟವನ್ನಾಶ್ರಯಿಸಿ ೫೨ ಶ್ಲೋಕಗಳಿಂದ ಗಂಗಾಸ್ತೋತ್ರವನ್ನು ಮಾಡಿದಂತೆಯೂ ೫೨ ಮೆಟ್ಟಿಲುಗಳ ಕೆಳಗೆ ಪ್ರವಹಿಸುತ್ತಿದ್ದ ಜಾಹ್ನವಿಯು ಮುದಿತ ಹೃದಯಳಾಗಿ ಪ್ರತಿಯೊಂದು ಶ್ಲೋಕಕ್ಕೆ ಒಂದೊಂದು ಮೆಟ್ಟಿಲಿನಂತೆ ಮೇಲಕ್ಕೇರಿ ಬಂದು ಪಂಡಿತರಾಜನೊಡನೆ ಯವನಿಯನ್ನು ಕರೆದುಕೊಂಡು ಹೋದಳು. ಇದೇ ಗಂಗಾಲಹರೀ ಎಂಬುದು.

ಮೇಲೆ ಹೇಳಿದ ವಿಚಾರಗಳನ್ನು ಒಂದೊಂದಾಗಿ ತೆಗೆದುಕೊಂಡು ವಿಮರ್ಶೆ ಮಾಡೋಣ!

೧) ಮೊದಲನೆಯ ಕಥೆಯಿಂದ ಜಗನ್ನಾಥನು ಆಂಧ್ರದೇಶದವನಾಗಿದ್ದು ದೆಹಲಿಗೆ ಹೋದಂತೆಯೂ, ಅವನು ಸಂಸ್ಕೃತದಲ್ಲಿ ಹೇಗೆ ಪಂಡಿತನೋ ಹಾಗೆ ಪರ್ಷಿಯ ಭಾಷೆಯಲ್ಲಿಯೂ ಪಂಡಿತನೆಂದೂ, ಇವನದೆಂದು ಅಲ್ಲಲ್ಲಿ ದೊರೆಯುವ ಶ್ಲೋಕಗಳಲ್ಲಿ ಅರ್ಧ ಸಂಸ್ಕೃತ ಮತ್ತು ಅರ್ಧಪರ್ಷಿಯ ಭಾಷೆಯ ಶಬ್ದಗಳು ಮಿಶ್ರಿತವಾಗಿರುವುವೆಂದೂ, ಜ್ಯೋತಿಷ ಸಂಬಂಧವಾದ ಯಾವುದೋ ಪರ್ಷಿಯ ಗ್ರಂಥವನ್ನು ಸಂಸ್ಕೃತಕ್ಕೆ ಪರಿವರ್ತಿಸಿದುದಾಗಿಯೂ ಹೇಳಿದೆ.

ಮೊಗಲಚಕ್ರವರ್ತಿಗಳಲ್ಲಿ ದಾರಾಶಿಕೋವನ್ನು ಬಿಟ್ಟರೆ ಭಾಷಾಭೇದಗಳನ್ನೆಣಿಸದ ಒಬ್ಬನು ಮಾತ್ರ ಸಂಸ್ಕೃತಭಾಷಾಪೋಷಕನು ಎಂದು ಹೇಳಲಾಗುತ್ತದೆ. ಆದರೆ ಅವನಾರು? ಅಕ್ಬರನೆ? ಅಕ್ಬರನೆನ್ನುವುದಾದರೆ ಇವನ ಕಾಲವೂ ಜಗನ್ನಾಥನ ಕಾಲವೂ ಸರಿಹೋಗದು. ಕಾಲವ್ಯತ್ಯಾಸವು ಮಿತಿಮೀರಿರುವುದು. ಜಗನ್ನಾಥನು ಫಾರಸೀಭಾಷೆಯಲ್ಲಿ ನಿಪುಣನಾಗಿರಬಹುದು. ಆದರೆ ಅವನು ಫಾರಸೀ ಭಾಷೆಯ ಜ್ಯೋತಿಷಗ್ರಂಥವನ್ನು ಸಂಸ್ಕೃತ ಮಾಡಿದನೆಂಬುದು ಸತ್ಯ ವಿಚಾರವಾಗದು. ಸಂಸ್ಕೃತಭಾಷೆಯಲ್ಲಿ ರಚಿತವಾಗಿರುವ ಜ್ಯೋತಿಷಗ್ರಂಥಗಳನೇಕಗಳು ವಿದೇಶಭಾಷೆಗೆ ಎಷ್ಟೋ ಪರಿವರ್ತಿಸಲ್ಪಟ್ಟಿರುವವಾದರೂ ಪರಿವರ್ತನವಾಗದ ಗ್ರಂಥಗಳ ಸಂಖ್ಯೆಯು ಅನಂತ. ಅಲ್ಲದೆ ಗ್ರಂಥವು ಇಂತಹುದೆಂಬದನ್ನು ಖಂಡಿತ ಮಾಡಿ ಹೇಳದೆ ಇರುವುದರಿಂದ ಹಾಗೆ ಹೇಳಲಾಗದು. ಅಲ್ಲದೆ ಕವಿಯು ಷಹಜಹಾನನ ಕಾಲದವನು.

ಎರಡನೆಯದರಲ್ಲಿ ಹೇಳಿರುವ ಶ್ಲೋಕಗಳಾವುವೂ ಜಗನ್ನಾಥಕೃತ ಯಾವ ಗ್ರಂಥಗಳಲ್ಲಿಯೂ ಇರುವುದಿಲ್ಲ. ಮೊಗಲರ ಅರಸರಿಗೆ ಲವಂಗಿಯೆಂಬ ಕನ್ಯೆಯು ಇದ್ದುದಾಗಿ ಯಾವ ಚರಿತ್ರೆಯೂ ಹೇಳುವುದಿಲ್ಲ. ಯಾರಾದರೊಬ್ಬ ರಾಜಪುತ್ರಸ್ತ್ರೀಯಲ್ಲಿ ಹುಟ್ಟಿದವಳೆಂದು ಹೇಳುವುದಾದರೆ ರಜಪೂತ ರಮಣಿಯರ ಸೌಂದರ್ಯಸದ್ಮದಲ್ಲಿ ಹೆಚ್ಚಾಗಿ ವಾಸಿಸಿದವನು ಅಕ್ಬರನೊಬ್ಬನು. ಮೇಲೆ ಹೇಳಿದಂತೆ ಕಾಲವು ಮೇಳೈಸದಾದುರಿಂದ ಇವನಾರಾದರೂ ಎರಡನೆಯ ಅಕ್ಬರನಿರಬಹುದೆ? ಹಾಗೆ ಹೇಳುವ ಚರಿತೆಯು ಇನ್ನೂ ಬರೆಯಲ್ಪಟ್ಟಿಲ್ಲ. ಐನಿಅಕ್ಬರಿಯನ್ನು ಬರೆದ ಅಬ್ದುಲ್‌ಫಸಲನು ಈ ವಿಚಾರವನ್ನು ಎಲ್ಲಿಯೂ ಹೇಳಿರುವುದಿಲ್ಲ. ಇದಂತಿರಲಿ. 'ಫರದಾ' ವಿಚಾರವು ಅತ್ಯಂತ ಪ್ರಬಲವಾಗಿದ್ದ ಆ ಕಾಲದಲ್ಲಿ ಅಪರಿಚಿತ ಹಿಂದೂ ತರುಣನ ಎದುರಿನಲ್ಲಿ ಆ ಹುಡುಗಿಯು ಬಂದುದೆಂದು ಹೇಳುವುದಾಗಲಿ ಅಥವಾ ಜಲಕುಂಭವನ್ನು ತಂದಳೆಂಬುದಾಗಲಿ, ರಾಜನು ಹಾಗೆ ಹೇಳಿದನೆಂಬುದಾಗಲಿ ಹೇಳುವುದು ತೃಪ್ತಿಕರವಾಗಿರಲಾರದು. ಹೇಳಿರುವುದು ಕೇವಲ ಮನೋರಂಜಕ ಹೊರ್ತು ಚಾರಿತ್ರಕದೃಷ್ಟಿಯಿಂದಲ್ಲವೆನಬೇಕಾಗುವುದು.

ಮೂರನೆಯ ವಿಚಾರವು ಇದ್ದರೂ ಇರಬಹುದು. ಇರಕೂಡದೇಕೆ? ಅದರ ವಿಚಾರವಾಗಿ ನಮಗೆ ತಿಳಿಯದು. ಪ್ರಾಣಾಭರಣ ಗ್ರಂಥದನಾಯಕನಿರಬಹುದೆ? ಹಾಗೆ ಹೇಳುವ ಚರಿತೆಗಳಾವುವು?

ನಾಲ್ಕು ಮತ್ತು ಐದನೆಯ ವಿಚಾರಗಳ ವಿಚಾರದಲ್ಲಿ ಹರದೀಕ್ಷಿತನು ಜಗನ್ನಾಥನ ಕಾಲದವನೆನಲಾಗುವುದಿಲ್ಲ. ಹೇಳುವುದಾದರೆ ಸಮಂಜಸವಾಗದು.

ಆರನೆಯದರಲ್ಲಿ ಹೇಳಿರುವಂತೆ ತನ್ನ ಶೇಷಾಯುಷ್ಯವನ್ನು ಕಳೆಯುವುದಕ್ಕಾಗಿ ಜಗನ್ನಾಥನು ಕಾಶಿಗೆ ಹೋಗಿರಬಹುದು. ಅಪ್ಪಯ್ಯದೀಕ್ಷಿತನೂ ಆ ವೇಳೆಗೆ

ಯಾತ್ರಾರ್ಥಿಯಾಗಿ ಹೋಗಿರಬಹುದು. ಇವರಿಬ್ಬರೂ ಸೇರಿ ಮೇಲೆ ಹೇಳಿದಂತೆ ಮಾತು ಕಥೆ ನಡೆಯಿಸಿದರೆಂದು ಸ್ಥಿರೀಕರಿಸುವುದು ಸುಲಭಸಾಧ್ಯದ ಕೆಲಸವಲ್ಲ. ಮೇಲೆ ಹೇಳಿರುವ ಆರ್ಯಾಶ್ಲೋಕವು ಭಾಮಿನೀವಿಲಾಸ ಮತ್ತು ರಸಗಂಗಾಧರದಲ್ಲಿ ಜಗನ್ನಾಥನದೆಂದು ಹೇಳಿರುವುದು. ಅಪ್ಪಯ್ಯದೀಕ್ಷಿತನದೆಂದು ಜನಜನಿತ ಕಥೆಯು ಇರುವುದು.

ಏಳನೆಯ ವಿಚಾರವಾದುದು ಗಂಗಾಲಹರೀ. ಇವರಲ್ಲಿ ೫೨ ಶ್ಲೋಕಗಳಿರುವುದು ನಿಜವಾದರೂ ಕಥೆಯು ನಿಜವಾದುದಲ್ಲ. ಹೇಗೆಂದರೆ ಕಥೆಯಂತೆ ಗಂಗಾಲಹರಿಯು ಜಗನ್ನಾಥನ ಕೊನೆಯ ಗ್ರಂಥವಾಗಿರಬೇಕು. ರಸಗಂಗಾಧರದಲ್ಲಿ ಇದರ ಕೆಲವು ಶ್ಲೋಕಗಳು ಉದಾಹೃತವಾಗಿರುವುದರಿಂದ ಗಂಗಾಲಹರಿಯನ್ನು ಬರೆದ ಎಷ್ಟೋ ವರ್ಷಗಳನಂತರ ರಸಗಂಗಾಧರವನ್ನು ಬರೆದಿರಬೇಕೆಂದು ಸ್ಪಷ್ಟವಾಗುತ್ತದೆ. ಆದುದರಿಂದ ಮೇಲೆ ಹೇಳಿದವುಗಳೆಲ್ಲವೂ ಮನೋರಂಜಕವಾದುದರಿಂದ ಚಾರಿತ್ರಕ ದೃಷ್ಟಿಯಿಂದ ಕೊಂಚವೂ ಪ್ರಯೋಜನವಾಗದು. ಪಂಡಿತ ಜಗನ್ನಾಥನಿಗೆ ಪಂಡಿತ ರಾಜನೆಂಬ ಬಿರುದೂ, ದಿರಾಂಗ್‌ಖಾನನಿಗೂ, ಲಾಲಖಾನನಿಗೂ ಗುಣಸಮುದ್ರ ನೆಂಬ ಬಿರುದು (Ocean of Excellence)ಕೊಟ್ಟುದಾಗಿ ತಿಳಿಯಬರುತ್ತದೆ ಲಾಲಖಾನನು ಪ್ರಸಿದ್ಧನಾದ, ಟಾಸೆಂನನ ಮಗ, ವಿಲಾಸನ ಅಳಿಯನಾಗಬೇಕು. ಜಗನ್ನಾಥನೂ, ದಿರಂಗ್‌ಖಾನನೂ ಬೆಳ್ಳಿಯ ನಾಣ್ಯಗಳಲ್ಲಿ ತುಲಾಭಾರವನ್ನು ತೂಗಿಸಿ ಕೊಂಡು ಪ್ರತಿಯೊಬ್ಬರೂ ೪೫೦೦ ರೂಪಾಯಿಗಳನ್ನು ಹೊಂದಿದರೆಂದೂ ತಿಳಿಯ ಬರುತ್ತದೆ. ಷಹಾಜಹಾನನ ಹಿರಿಯ ಮಗನಾದ ದಾರನು ದೆಹಲಿಯಲ್ಲಿದ್ದುಕೊಂಡು ತಂದೆಯ ಆಡಳಿತವನ್ನು ನಡೆಯಿಸುತ್ತಿದ್ದುದಾಗಿ ಹೇಳಿರುವುದರಿಂದ ಸಂಸ್ಕೃತ ವಿದ್ಯಾಭಿಮಾನಿಯೂ ಕವಿಯೂ ಆದ ದಾರಾಷಿಕೋವಿನಲ್ಲಿ ಜಗನ್ನಾಥಪಂಡಿತನು ಎರಕಗೊಂಡುದೇನೂ ಆಶ್ಚರ್ಯವಲ್ಲ. ಏಕೆಂದರೆ ದಾರನು ಯುವರಾಜನಾಗಿದ್ದು ಪಂಡಿತರನ್ನು ಮನ್ನಿಸುವ ವಾಡಿಕೆಯು ಇದ್ದಿತು.

ಗ್ರಂಥಗಳು:—

೧. ರಸಗಂಗಾಧರ
೨. ಯಮುನಾವರ್ಣನ ಚಂಪೂ
೩. ಆಸಫವಿಲಾಸ
೪. ಚಿತ್ರವಿಮಾಂಮಾಸಾಖಂಡನ
೫. ಭಾಮಿನೀವಿಲಾಸ
೬. ಮನೋರಮಾಕುಚಮರ್ದನ
೭. ಅಮೃತಲಹರೀ

೮. ಕರುಣಾಲಹರೀ
೯. ಪಿಯೂಷಲಹರೀ
೧೦. ಸುಧಾಲಹರೀ
೧೧. ಲಕ್ಷ್ಮೀಲಹರೀ
೧೨. ಪ್ರಾಣಾಭರಣ
೧೩. ಜಗದಾಭರಣ

ರಸಗಂಗಾಧರ:—ಇದು ಲಕ್ಷಣಗ್ರಂಥ. ಇದರಲ್ಲಿ ಆಸಫನ ವಿಚಾರವಾಗಿರುವ:—

ಸುಧೇವ ಸಾಧೀ ವಸುಧೇವ ಮೂರ್ತಿಃ
ಸುಧಾಕರಶ್ರೀನಪದೈಕ ಚಕೀರ್ತಿಃ
ಪಯೋಧಿಕಲ್ಪಾವತಿ**ರಾಸಫೇಂದೋ**
ರ್ಮಹೀತಲೇಽನ್ಯಸ್ಯ ನಹೀತಿ ಮನ್ಯೇ ॥ ಪುಟ ೧೬೬.
ಯುಕ್ತಂ ಯಾತೇ ದಿವ**ಮಾಸಫೇಂದಾ**
ತದಾಶ್ರಿತಾನಾಂ ಯದಭೂದ್ವಿನಾಶಃ
ಇದಂ ತು ಚಿತ್ರಂ ಭುವನಾವಕಾಶೇ
ನಿರಾಶ್ರಯಾ ಖೇಲತಿ ತಸ್ಯ ಕೀರ್ತಿಃ ॥ ಪುಟ ೪೫೭

ಎಂದು ಹೇಳಿರುವುದರಿಂದ ಇದರಲ್ಲಿ ಒಬ್ಬ ಆಸಫನು ಜಗನ್ನಾಥ ಕವಿಯು ಹೇಳಿರುವ ಅನ್ಯಗ್ರಂಥದ ಕಥಾನಾಯಕನಾಗಿರಬೇಕು. ಮತ್ತೊಬ್ಬ ಆಸಫನು ಷಹಜಹಾನನ ಸೈನ್ಯಾಧಿಪತಿಯಾದ ಖಾನಖಹಾನನಾಗಿರಬೇಕು. ಮೇಲಣ ಶ್ಲೋಕದಲ್ಲಿ ಆಸಫನ ಮರಣವನ್ನು ಕುರಿತು ಹೇಳಿದುದಾಗಿದೆ. ಹೇಗೆಂದರೆ ಕ್ರಿ. ಶ. ೧೬೪೧ರಲ್ಲಿ ಷಹಜಹಾನನ ಸೈನ್ಯಾಧಿಕಾರಿಯು ಮೃತನಾದುದಾಗಿ ಹೇಳಿದೆ. ಇವನನ್ನು ಕುರಿತು ಹೇಳಿರುವುದು ನಿಜವೆನ್ನುವುದಾದರೆ ಕ್ರಿ. ಶ. ೧೬೪೧ರ ವೇಳೆಗೆ ರಸಗಂಗಾಧರವು ಪೂರ್ತಿಯಾಗಿರಲಿಲ್ಲವಾಗಿ ಕಾಣುತ್ತದೆ. ಅಥವಾ ಹಾಗೆಹೇಳ ಬೇಕಾಗುತ್ತದೆ.

ಯಮುನಾವರ್ಣನ ಚಂಪೂ:—ಇದು ಯಮುನಾವರ್ಣನಾರೂಪವಾದ ಚಂಪೂಗ್ರಂಥ. ಇದರಲ್ಲಿನ ಎರಡು ವಾಕ್ಯಗಳು ರಸಗಂಗಾಧರದಲ್ಲಿ ಉದಾಹೃತವಾಗಿವೆ.

ಆಸಫವಿಲಾಸ:—ಇದರಲ್ಲಿ ನವಾಬ ಆಸಫಖಾನನ ವರ್ಣನವಿರುವುದು. ಇದರ ಎರಡು ಶ್ಲೋಕಗಳು ರಸಗಂಗಾಧರದಲ್ಲಿ ಉದಾಹೃತವಾಗಿವೆ. ಗ್ರಂಥವು ಉಪಲಬ್ಧವಿಲ್ಲ. ಆಸಫವಿಲಾಸದ ಕೆಲವುಭಾಗಗಳು ಅಲ್ಲಲ್ಲಿ ದೊರೆಯುವ ಟಿಪ್ಪಣಿ ಗಳಲ್ಲಿ ಉದಾಹೃತವಾಗಿವೆ. ಅವೂ ಅಪೂರ್ಣವಾಗಿವೆ ಆಸಫವಿಲಾಸಗ್ರಂಥಾ ರಂಭದಲ್ಲಿ:—

‡ Elliott's History of India Vol 7 P. 179.

"ಅಥಸಕಲಲೋಕವಿಸ್ತಾರವಿಸ್ತಾರಿತಮುಪೋಪಕಾರಪರಂಪರಾಧೀನ ಮಾನ
ಸೇನ ಪ್ರತಿದಿನಮುದ್ಯದನವದ್ಯಗದ್ಯಪದ್ಯಾದ್ಯನೇಕ ವಿದ್ಯಾವಿದ್ಯೋ
ತಿತಾಂತಃಕರಣೈಃ ಕವಿಭಿರುಪಾಸ್ಯಮಾನೇನ ಕೃತಯುಗೀಕೃತಕಲಿ
ಕಾಲೇನ ಕುಮತಿತೃಣಜಾಲಸಮೂಚ್ಛಾದಿತನೇದವನಮಾರ್ಗವಿಲೋಕ
ನಾಯ ಸಮುದ್ದೀಪಿತಸುತರ್ಕದಹನಜ್ವಾಲಾಜಾಲೇನ ಮೂರ್ತಿಮತೇವ
ನವ್ಯಾಬಾಸಫಖಾನಮನಃ ಪ್ರಸಾದೇನ ದ್ವಿಜಕುಲಸೇವಾಹೇವಾಕೆವಾಜ್ಮನಃ
ಕಾಯೇನ ಮಾಥುರಕುಲಸಮುದ್ರೇಂದುನಾ ರಾಯಮುಕುಂದೇನಾಧಿ
ಷ್ಠಿತೇನ ಸಾರ್ವಭೌಮ ಶ್ರೀಷಾಹಜಹಾಂಪ್ರಸಾದಾದಧಿಗತಪಂಡಿತ ರಾಜ
ಪದವೀವಿರಾಜಿತೇನ ತೈಲುಂಗಕುಲಾವತಂಸೇನ ಪಂಡಿತಜಗನ್ನಾಥೇ
ನಾಸಫವಿಲಾಸಾಖ್ಯೇಯಮಾಖ್ಯಾಯಿಕಾನಿರವಿಯಾಯತ|ಸೇಯಮನುಗ್ರ
ಹೇಣ ಸಹೃದಯಾನಾಮನುದಿನ ಮುಲ್ಲಾಸಿತಾ ಭವತಾತ್ || ಎಂದು
ಹೇಳಲ್ಪಟ್ಟಿರುವುದು.

ಈ ಆಸಫಖಾನನೇ ನಾವು ಹಿಂದೆ ಹೇಳಿರುವ ಷಹಜಹಾನನ ಮುಖ್ಯ
ದಂಡನಾಯಕನಾದ ಖಾನಖಹಾನನು ಆಗಿರಬೇಕು. ಇವನ ಪೂರ್ತಿಯಾದ ಹೆಸರು
ಅಬ್ದುಲ್ಲಾ ಆಸಫಖಾನನೆಂದು. ಕ್ರಿ. ಶ. ೧೬೩೪ ರಲ್ಲಿ ಇವನಿಗೆ ಖಾನಖಾನ
ನೆಂಬ ಪದವಿಯು ದೊರೆತು ಕ್ರಿ. ಶ. ೧೬೪೧ ರಲ್ಲಿ ದಿವಂಗತನಾದನು. ಇದನ್ನು
ಮಧುರೆಯ ರಾಜವಂಶೀಯನಾದ ರಾಯಮುಕುಂದನ ಹೇಳಿಕೆಯಂತೆ ಬರೆದು
ನಾಗಿ ಜಗನ್ನಾಥನು ಒಕ್ಕಣಿಸಿಕೊಂಡಿರುವನು.

ಚಿತ್ರಮೀಮಾಂಸಾಖಂಡನ :—ಇದು ಅಪ್ಪಯ್ಯದೀಕ್ಷಿತಕೃತ ಚಿತ್ರ
ಮೀಮಾಂಸಾಗ್ರಂಥದ ಖಂಡನರೂಪವಾಗಿರುವುದು. ಇದಕ್ಕೆ ನಾಗೇಶನೆಂಬವನು
ಟಿಪ್ಪಣಿಯನ್ನು ಬರೆದಿರುವನು. ಗ್ರಂಥಾರಂಭದಲ್ಲಿ:—

ನಾಮಂನಾಮಂಘನಶ್ಯಾಮಂ ಧಾಮತಾಮರಸೇಕ್ಷಣಂ
ಪಂಡಿತೇಂದ್ರೋಜಗನ್ನಾಥ ಶರ್ಮಾನಿರ್ಮಾತಿಕೌತುಕಂ
ರಸಗಂಗಾಧರೇ ಚಿತ್ರಮೀಮಾಂಸಾಯಾಮಯೋದಿತಾಃ
ಯೇದೋಷಾಸ್ತೇಽತ್ರ ಸಂಕ್ಷಿಪ್ಯ ಕಥ್ಯಂತೇವಿದುಷಾಂಮುದೇ ||

ಸೂಕ್ಷ್ಮಂವಿಭಾವ್ಯಮಯಕಾ ಸಮುದೀರಿತಾನಾಂ
ಆಪ್ಪಯ್ಯದೀಕ್ಷಿತಕೃತಾವಿಹ ದೂಷಣಾನಾಂ
ನಿರ್ಮತ್ಸರೋಯದಿಸಮುದ್ಧರಣಂ ವಿದಧ್ಯಾ
ದಸ್ಯಾಹಮುಜ್ಜ್ವಲಮತೇಶ್ಚರಣೌವಹಾಮಿ ||

ಎಂಬ ಪ್ರತಿಜ್ಞೆಯಿಂದ ಪ್ರಾರಂಭಿಸಲ್ಪಟ್ಟಿರುವುದು. ಗ್ರಂಥಾಂತ್ಯದಲ್ಲಿ "ಇತಿ
ಶ್ರೀಭಟ್ಟಭಟ್ಟಾರಕ ಪೇರುಭಟ್ಟಾತ್ಮಜೇನ ಪಂಡಿತರಾಜಾಪರಾಭಿಧಾನೇನ ಜಗನ್ನಾಥ
ಭಟ್ಟೇನ ನಿರ್ಮಿತೇ ಚಿತ್ರಮೀಮಾಂಸಾಖಂಡನೇ ಎಂದು ಮುಗಿಸಲ್ಪಟ್ಟಿರುವುದು.

ಭಾಮಿನೀವಿಲಾಸ: —ಇದು ಪದ್ಯಸಂಗ್ರಹರೂಪವಾದ ಶೃಂಗಾರಗ್ರಂಥ.

ಮನೋರಮಾ ಕುಚಮರ್ದನ—ಇದು ಭಟ್ಟೋಜಿದೀಕ್ಷಿತ ಪ್ರಣೀತ "ಮನೋರಮಾ" ಎಂಬ ಗ್ರಂಥದ ಖಂಡನರೂಪವಾಗಿರುವುದು. ಪುಸ್ತಕ ಪ್ರಾರಂಭದಲ್ಲಿ:—

ಲಕ್ಷ್ಮೀಕಾಂತಪದಾಂಭೋಜಮಾನಮ್ಯ ಶ್ರೇಯಸಾಂ ಪದಂ
ಪಂಡಿತೇಂದ್ರೋ ಜಗನ್ನಾಥ ಸ್ಮರ್ತಿ ಗರ್ವಂ ಗುರುದ್ರುಹಾಂ ॥

ಇಹಕೇಚಿನ್ನಿಖಿಲನಿವ್ವನ್ಮುಕುಟನಮ್ರಮೂಲಾಲಾಲಿತಚರಣಕಮಲಾನಾಂ ಗೀರ್ವಾಣಗಣಗೌರವಗ್ರಾಮವಾಂಸಲಮಹಿಮಮಂಡಿತಾಖಂಡಮಹೀಮಂಡಲಾನಾಂ ಶ್ರೀಪವಂಶಾವತಂಸಾನಾಂ ಶ್ರೀಕೃಷ್ಣಪಂಡಿತಾನಾಂ ಚಿರಾಯಾರ್ಚಿತಯೋಃ ಪಾದುಕಯೋಃ ಪ್ರಸಾದಾದಾಸಾದಿತ ಶಬ್ದಾನುಶಾಸನಾಸ್ತೇಷು ಚ ಪಾರಮೇಶ್ವರಂಪದಂ ಪ್ರಯಾತೇಷು ಕಲಿಕಾಲವಶಂವದೀಭವಂತಸ್ತತ್ರಭವದ್ವಿರುಲ್ಲಾಸಿತಂ ಪ್ರಕ್ರಿಯಾಪ್ರಕಾಶವಾಶಯಾನವವೇಧನಿಬಂಧನಿವಂ (ನವಬೋಧನಿಬಂಧನೈ) ದೂಷಣೈಃ ಸ್ವಯಂ ನಿರ್ಮಿತಾಯಾಂ ಮನೋರಮಾಯಾಮಾಕುಲ್ಯಕಾಸ್ಮಿ ಃ | ಸಾ ಚ ಪ್ರಕ್ರಿಯಾಪ್ರಕಾಶಕೃತಾಂ ಪೌತ್ರೈರಖಿಲಶಾಸ್ತ್ರಮಹಾರ್ಣವಮಂಥಾಚಲಾಯ ಮಾನವಮಾನಸಾನಾಮಸ್ಮದ್ಗುರುಪಂಡಿತವೀರೇಶ್ವರಾಣಾಂ ತನಯೈರ್ದೂಷಿತಾಪಿ ಸ್ವಮತಿಪರೀಕ್ಷಾರ್ಥಂ ಪುನರಸ್ಮಾಭಿರ್ನಿರೀಕ್ಷ್ಯತೇ । ತತ್ರ ತಾವತ್ಸರ್ವಧಾತುಕಮಪಿದಿತಿಸೂತ್ರಗಕೌಸ್ತುಭೇ ... .ಇತ್ಯಾದಿನಾ ಸಂಖ್ಯಾವದ್ವಿರುಪಹಸನೀಯಮರ್ಥಂ ನಿರೂಪಯತಾಂ, ತಥಾಣುದಿತ್ಸೂತ್ರಗತಕೌಸ್ತುಭೇ—ಇತ್ಯರ್ಥಸ್ಯನಿರ್ಣಯೇನ ನಿಲಕ್ಷಣಂ ಸ್ವವ್ಯುತ್ಪತ್ತಿಪಾಠವಮುದ್ಗಿರತಾಂ, ಭವತೇರಇತಿ ಸೂತ್ರಗತ ಮನೋರಮಾಯಾಂ—ಶಪಃ ಪ್ರವೃತ್ತಿಂ ಸಮರ್ಥಯಮಾನಾನಾಂ ಗುರುದ್ವೇಷ ದೂಷಿತಮತೀನಾಂ ಯದ್ಯಪಿ ಪುರುಷಾಯುಷೇಣಾಪಿ ನ ಶಕ್ಯಂತೇ ಗಣಯಿತುಂ ಪ್ರಮಾದಾಸ್ತಥಾಪಿದಿಙ್ಮಾತ್ರೇಣ ಕಾನಪಿ ಕುತಾಗ್ರೀಯಧಿಷಣೇಷು ನಿರೂಪಯಾಮಃ " ಎಂಬಿವೇ ಮೊದಲಾಗಿ ಹೇಳಿದೆ.

ಅಮೃತಲಹರೀ:—ಇದು ಯಮುನಾಸ್ತುತಿರೂಪಗ್ರಂಥ.

ಕರುಣಾಲಹರೀ:—ವಿಷ್ಣುಸ್ತುತಿರೂಪಗ್ರಂಥ ಇದಕ್ಕೆ ವಿಷ್ಣುಲಹರೀ ಎಂಬ ಮತ್ತೊಂದು ಹೆಸರು.

ಪೀಯೂಷಲಹರೀ—ಇದು ಗಂಗಾಸ್ತುತಿರೂಪಗ್ರಂಥ.

ಸುಧಾಲಹರೀ—ಇದು ಸೂರ್ಯಸ್ತುತಿಪರಗ್ರಂಥ.

ಲಕ್ಷ್ಮೀಲಹರೀ:—ಇದು ಲಕ್ಷ್ಮೀಸ್ತುತಿಪರಗ್ರಂಥ. ಈ ಐದುಲಹರಿಗಳ ಶ್ಲೋಕಗಳು ರಸಗಂಗಾಧರದಲ್ಲಿ ಉದಾಹೃತಗಳಾಗಿವೆ. ಲಕ್ಷ್ಮೀಲಹರಿಯ ಒಂದು ಶ್ಲೋಕಮಾತ್ರ ರಸಗಂಗಾಧರದಲ್ಲಿ ದೊರೆಯುತ್ತದೆ. ಭಾಮಿನೀ ವಿಲಾಸದಲ್ಲಿ ಆ ಶ್ಲೋಕವು ರೂಪಾಂತರವನ್ನು ಹೊಂದಿದೆ.

ಪ್ರಾಣಾಭರಣ:—ಇದು ಕಾಮರೂಪದೇಶಾಧೀಶನಾದ ಪ್ರಾಣನಾರಾಯಣ ರಾಜನಸ್ತುತಿರೂಪಗ್ರಂಥ.

ಜಗದಾಭರಣ:—ಇದು ದಾರಾಷಿಕೋರಾಜನ ವಿಚಾರವಾಗಿ ಬರೆದಿರುವ ಗ್ರಂಥ. ಗ್ರಂಥವು ಉಪಲಬ್ಧವಿಲ್ಲ.

'ಜಗನ್ನಾಥ'ಎಂಬ ಹೆಸರುಳ್ಳ ಗ್ರಂಥಕಾರರು ಸಂಸ್ಕೃತ ಸಾಹಿತ್ಯದಲ್ಲಿ ಅನೇಕರು ದೊರೆಯುವರು. ಅವರು ಬರೆದಿರುವ ಗ್ರಂಥಗಳನ್ನು ಪಂಡಿತರಾಜ ಜಗನ್ನಾಥನದೆಂದು ಹೇಳುವವರೂ ಇರುವರು. ಹಾಗೆ ಹೇಳುವುದು ಸರಿಹೋಗದು. ಪ್ರಕೃತದೊರೆಯುವ ಕೆಲವರನ್ನೂ ಅವರ ಗ್ರಂಥಗಳನ್ನೂ ಇಲ್ಲಿ ಹೇಳಿದೆ.

ಹೆಸರು:—		ಗ್ರಂಥಗಳು:—
೧) ತಂಜಾವೂರುವಾಸಿ ಜಗನ್ನಾಥ	...	ಅಶ್ವಧಾಟೀಕಾವ್ಯ, ರತಿಮನ್ಮಥ ನಾಟಕ, ವಸುಮತೀಪರಿಣಯ.
೨) ಸಮ್ರಾಟ್‌ಜಗನ್ನಾಥ	...	ರೇಖಾಗಣಿತ.
೩) ಜಗನ್ನಾಥತರ್ಕಪಂಚಾನನ	...	ವಿವಾದಭಂಗಾರ್ಣವ.
೪) ಜಗನ್ನಾಥಮೈಥಿಲ	...	ಆನಂದಚಂದ್ರಿಕಾನಾಟಕ.
೫) ಶ್ರೀನಿವಾಸಸೂನುಗಜನ್ನಾಥಪಂಡಿತ	....	ಅನಂಗವಿಜಯಭಾಣ.
೬) ಜಗನ್ನಾಥಮಿಶ್ರ	....	ಸಭಾತರಂಗ.
೭) ಜಗನ್ನಾಥಸರಸ್ವತೀ	...	ಅದ್ವೈತಾಮೃತ.
೮) ಜಗನ್ನಾಥಸೂರಿ	...	ಸಮುದಾಯಪ್ರಕರಣ.
೯) ಜಗನ್ನಾಥ	...	ಶರಭರಾಜವಿಲಾಸ.
೧೦) ನಾರಾಯಣದೈವಜ್ಞಸೂನುಜಗನ್ನಾಥ		ಜ್ಞಾನವಿಲಾಸಕಾವ್ಯ.
೧೧) ಜಗನ್ನಾಥ	...	ಅನುಭೋಗಕಲ್ಪತರು.

ನೀಲಕಂಠದೀಕ್ಷಿತ

ಇವನು ಭಾರದ್ವಾಜಗೋತ್ರದವನು. ಮಹಾಪ್ರಖ್ಯಾತನಾದ ಅಪ್ಪಯ್ಯ ದೀಕ್ಷಿತನ ಸೋದರ ಅರ್ಚ್ಚಣದೀಕ್ಷಿತನ ಮುಮ್ಮಗನು. ನಾರಾಯಣದೀಕ್ಷಿತನ ಐವರು ಮಕ್ಕಳಲ್ಲಿ ಎರಡನೆಯವನು. ಇವನ ತಾಯಿಯ ಹೆಸರು ಭೂಮಿದೇವೀ. ಆಚಾರ್ಯನ ಹೆಸರು ವೆಂಕಟೇಶ್ವರಮಖಿ ಎಂದು. ಈ ವಿಚಾರವು ಗಂಗಾವ ತರಣ ಗ್ರಂಥದಲ್ಲಿ:—

ಮುನಿರಸ್ತ್ರ ಭರದ್ವಾಜಃ ಖ್ಯಾತಸ್ತ್ರಿಭುವನೇಷ್ವಪಿ
ಅಸ್ಮೈರ್ಯಸ್ಯ ಜಹೌ ರಾಮೋ ಽಪ್ಯರಣ್ಯಭ್ರಮಣಶ್ರಮಂ ॥ ೫೮
ತಸ್ಯಾನ್ವಯೇ ಮಹತ್ಯಾಸೀತ್ಪ್ಪೀರೋದ ಇವ ಚಂದ್ರಮಾಃ
ಶ್ರೀಕಂಠಚರಣಾಸಕ್ತಃ ಶ್ರೀಮಾನಪ್ಪಯದೀಕ್ಷಿತಃ ॥ ೫೯

ತಸ್ಯಾನುಜಪ್ರಭಾವಸ್ಯ ತದನಂತರಜನ್ಮನಃ
ಆಸೀದಾರ್ಚ್ಚಾದೀಕ್ಷಿತಸ್ಯ ಪುತ್ರೋ ನಾರಾಯಣಾಧ್ವರೀ ॥ ೬೦

ಜಯಂತಿ ತನಯಾಸ್ತಸ್ಯ ಪಂಚ ಸೌಭ್ರಾತ್ರಶಾಲಿನಃ
ಗರ್ಭದಾಸಾ ಮಹೇಶಸ್ಯ ಕವಯಶ್ಚ ವಿಪಶ್ಚಿತಃ ॥ ೬೧

ತೇಷಾಮಹಂ ದ್ವಿತೀಯೋಸ್ಮಿ ಭೂಮಿದೇವೀತನೂಭುವಾಂ
ನೀಲಕಂಠ ಇತಿ ಖ್ಯಾತಿಂ ನೀತ ಶಂಭೋಃ ಪ್ರಸಾದತಃ ॥ ೬೨

ವಾರ್ತ್ತಿಕಾಭರಣಗ್ರಂಥನಿರ್ಮಾಣವ್ಯಕ್ತನೈಪುಣಃ
ಶ್ರೀ ವೇಂಕಟೇಶ್ವರಮಖೀ ತಿಸ್ಯೇ ಮಯ್ಯನುಕಂಪತೇ ॥ ೬೩

ಎಂದು ಹೇಳಿರುವುದರಿಂದಲೂ ಈತನು ಬರೆದುದಾದ ಪ್ರತಿಯೊಂದು ಗ್ರಂಥದ ಕೊನೆಯಲ್ಲ "ಇತಿ ಶ್ರೀಮದ್ಭಾರದ್ವಾಜ ಕುಲಜಲಧಿಕೌಸ್ತುಭ ಶ್ರೀಕಂಠ ಮತಪ್ರತಿಷ್ಠಾಪನಾಚಾರ್ಯಚತುರಧಿಕಶತಪ್ರಬಂಧನಿರ್ವಾಹಕ ಶ್ರೀಮನ್ಮಹಾವ್ರತ ಯಾಜಿ ಶ್ರೀಮದಪ್ಪಯ್ಯದೀಕ್ಷಿತ ಸೋದರ್ಯ ಶ್ರೀಮದಾರ್ಚ್ಚಾದೀಕ್ಷಿತ ಪೌತ್ರೇಣ ನಾರಾಯಣದೀಕ್ಷಿತಾತ್ಮಜೇನ ಭೂಮಿದೇವೀಗರ್ಭಸಂಭವೇನ ಮುಷಾಕನಿ ಶ್ರೀ ನೀಲಕಂಠದೀಕ್ಷಿತೇನ....." ಎಂದಿರುವ ಗದ್ಯದಿಂದ ಸ್ಪಷ್ಟಪಡುತ್ತದೆ. ಇವನ ಮಾತಾಪಿತೃಗಳಿಬ್ಬರೂ ಚಿಕ್ಕವನಾಗಿರುವಾಗ ಮೃತರಾಗಿ ಹೋದುದರಿಂದ ಅಪ್ಪಯ್ಯ ದೀಕ್ಷಿತನು ಈ ಹುಡುಗನ ರಕ್ಷಣಾವೇಕ್ಷಣ ಭಾರವೆಲ್ಲವನ್ನೂ ವಹಿಸಿ ತನ್ನಲ್ಲಿಟ್ಟು ಕೊಂಡು ವಿದ್ಯಾಭ್ಯಾಸವನ್ನು ಮಾಡಿಸಿದಂತೆಯೂ, ಬಹುಕಾಲನವರೆಗೆ ಮಧುರೆಯ ಲ್ಲದ್ದು ವಿಜಾನಾಕ್ಷಿಯನ್ನಾರಾಧಿಸುತ್ತಿದ್ದಂತೆಯೂ ಹೇಳುವ ವಾಡಿಕೆಯೂ ದಕ್ಷಿಣ ದೇಶದಲ್ಲಿ ಇರುವುದು. ಅಪ್ಪಯ್ಯದೀಕ್ಷಿತನಲ್ಲಿ ವಿದ್ಯಾಭ್ಯಾಸಮಾಡಿದ ವಿಚಾರವು.—

ಲೇಢಾಲೇಢಪುರಾಣಸೂಕ್ತಿಶಕಲುವಪ್ಪಂಭಸಂಭಾವನಾ
ವರ್ಯಾಸ್ಮತ್ಶ್ರುತಿಸೇತುಭೇದಕತಿಪಯೈರ್ನಿರ್ತೇ ಕಲೌ ಸಾಂದ್ರತಾಂ
ಶ್ರೀಕಂಠೋಽವತತಾರಯಸ್ಯವಪುಷಾಕಲ್ಮಷ್ಯಮೇವಾಚ್ಯುತಃ
ಶ್ರೀಮಾನಪ್ಪಯದೀಕ್ಷಿತಸ್ಸಜಯತಿ ಶ್ರೀಕಂಠವಿದ್ಯಾಗುರುಃ ॥ ೧—೩.

ಎಂಬ ಈ ಶ್ಲೋಕದಿಂದ ನಿರ್ಧರಿಸಬಹುದಾಗಿದೆ.

ನೀಲಕಂಠದೀಕ್ಷಿತನನ್ನು ಅಯ್ಯಾದೀಕ್ಷಿತನೆಂದೂ ವ್ಯವಹರಿಸುವರು.

ಕಾಲ:— ಇವನು ಕ್ರಿ. ಶ. ೧೬೫೦ನೆಯ ಶತಮಾನದಲ್ಲಿದ್ದ ಅಪ್ಪಯ್ಯದೀಕ್ಷಿತನನ್ನು ಹೇಳಿರುವುದರಿಂದಲೂ 'ನೀಲಕಂಠವಿಜಯ' ಎಂಬ ಚಂಪೂ ಕಾವ್ಯವನ್ನು,

ಅಷ್ಟಾತ್ರಿಂಶದಸ್ಮೃತಾಪ್ತಶಖಾಧಿಕ ಚತುಸ್ಸಹಸ್ರೇಷು।
ಕಲವರ್ಷೇಷ್ವಗಮತ್ಸು ಗ್ರಥಿತಃ ಕಿಲ **ನೀಲಕಂಠವಿಜಯೋ**ಯಂ ॥

ನೀಲಕಂಠವಿಜಯಸರ್ಗ ೧—೧೦,

ಎಂದು ಹೇಳಿಕೊಂಡಿರುವನಾದುದರಿಂದಲೂ ಆ ಕಾಲವು ಕ್ರಿ. ಶ ೧೬೫೭-೫೮ ಎಂದಾಗುವುದರಿಂದ ಇವನು ಕ್ರಿ. ಶ. ೧೭ನೆಯ ಶತಮಾನದವನೆಂಬದು ನಿರ್ವಿವಾದವು.

ಗ್ರಂಥಗಳು:—(೧) ಗಂಗಾವತರಣ, (೨) ನೀಲಕಂಠವಿಜಯಚಂಪೂ (೩) ಶಿವಲೀಲಾರ್ಣವ, (೪) ನಲಚರಿತನಾಟಕ, (೫) ಹಾಲಾಸ್ಯಾಖ್ಯೋದಯ, (೬) ಕಯ್ಯಟಿನ ಮಹಾಭಾಷ್ಯ ಪ್ರದೀಪವ್ಯಾಖ್ಯಾನಗಳನ್ನೂ, ಕಲಿವಿಡಂಬನ, ಸಭಾರಂಜನ, ಶಾಂತಿವಿಲಾಸ, ವೈರಾಗ್ಯಶತಕ, ಆನಂದಸಾಗರಸ್ತವ, ಶಿವೋತ್ಕರ್ಷಮಂಜರಿ, ಅನ್ಯಾಪದೇಶಶತಕ, ಉಮಾಮಹೇಶ್ವರ ಸ್ತೋತ್ರ ಮೊದಲಾದ ಸಣ್ಣ ಸಣ್ಣ ಗ್ರಂಥಗಳನ್ನೂ ಬರೆದಿರುವನು. ಇವನ ಶೈಲಿಯು ವಿಚಾರದಲ್ಲಿ, "ಮಂಜುಳಪದ ಸನ್ನಿವೇಶಾವಿಚಿತೋತ್ಪ್ರೇಕ್ಷಾಲಂಕಾರಸನಿರ್ಭರಾಸಿಶಂಕಟಪ್ರಮಾಣಾಚಾರ್ಯಸಾಹಿತ್ಯಸರಣಿಃ" ಎಂದು ಹೇಳಿದೆ.

ಗಂಗಾವತರಣ:—ಹೆಸರಿಗೆ ತಕ್ಕಂತೆ ಭಗೀರಥನ ಯತ್ನದಿಂದ ದೇವ ಗಂಗೆಯು ಭೂಲೋಕಕ್ಕೆ ಬಂದ ಬಗೆ. ಶಿವನು ತನ್ನ ಜಟಾಜೂಟದಲ್ಲಿ ಧರಿಸಿ ಜಗದಾನಂದವನ್ನುಂಟುಮಾಡಿದನೆಂಬ ಕಥೆಯು ವರ್ಣಿತವಾಗಿದೆ.

ಶಿವಲೀಲಾರ್ಣವ:—ಇದು ಇಪ್ಪತ್ತೆರಡು ಸರ್ಗಗಳುಳ್ಳ ಮಹಾ ಕಾವ್ಯ. ಮಧುರೆಯಲ್ಲಿನ ಪ್ರಖ್ಯಾತ ಸುಂದರೇಶ್ವರನ ೬೪ ಲೀಲೆಗಳೆಲ್ಲವನ್ನೂ ವರ್ಣಿಸಿ ಈ ಕಾವ್ಯವನ್ನು ಶಿವಲೀಲಾರ್ಣವ ಎಂದು ಕರೆದಿರುವನು. ಈ ೬೪ ಲೀಲೆಗಳ ವರ್ಣನಾ

ವಿಚಾರವು ಸ್ಕಾಂದಪುರಾಣಾಂತರ್ಗತ ತಾಲಾಸ್ಯ ಮಹಾತ್ಮ್ಯದಲ್ಲಿ ಹೇಳಲ್ಪಟ್ಟಿರುವದು. ಪ್ರಾಯಃ ಈ ಕಾವ್ಯವನ್ನು ಬರೆಯುವುದಕ್ಕೆ ಇದು ಆಧಾರವಾಗಿದ್ದಿರಬಹುದು. ಈ ಸುಂದರೇಶ್ವರನು ಮಧುರೆಯಲ್ಲಿ ಜನಿಸಿದ ಪಾಂಡ್ಯವಂಶದಲ್ಲಿ ಸುಂದರಪಾಂಡಾಭಿಧಾನದಿಂದ ಹುಟ್ಟಿ ತನ್ನ ಹಲವರು ಭಕ್ತರಿಗೋಸ್ಕರ ಲಿಲೆಗಳನ್ನು ತೋರಿಸಿದನೆಂಬುದು ಕಥಾವಸ್ತು. ಕವಿಯು ಈ ಕಥೆಯನ್ನು ತೆಗೆದುಕೊಂಡು ಸುಂದರವಾದ ಕಾವ್ಯ ಶೈಲಿಯಲ್ಲಿ ಸರಳವಾಗಿ ಬರೆದಿರುವನು.

ನೀಲಕಂಠವಿಜಯ:—ಇದು ೫ ಆಶ್ವಾಸಗಳಿರುವ ಚಂಪೂ ಗ್ರಂಥ. ಎರಡನೆಯ ಆಶ್ವಾಸದ ಕೊನೆಯಲ್ಲಿ ದೇವಾಧಿದೇವತೆಗಳು ಹೋಗಿ ಮಾಡಿದ ವೈಕುಂಠವರ್ಣನೆ, ಮೂರನೆಯ ಆಶ್ವಾಸದಲ್ಲಿ ಶಕ್ರಶುಕ್ರರೊಡನೆ ಬೃಹಸ್ಪತಿಯ ಸಂಭಾಷಣವೂ ನಾಲ್ಕನೆಯ ಆಶ್ವಾಸದಲ್ಲಿ ವಿಷ್ಣುಕೃತ ಶಿವಸ್ತುತಿಯೂ ಹೃದಯಂಗಮವಾಗಿರುವುವು.

ನೀಲಕಂಠವಿಜಯದ ಒಂದಾನೊಂದುಗದ್ಯದ ಮಾದರಿ:—

ಗರ್ಜಂತಶ್ಚ ತೇತದನುಸರ್ಜನಾಶ್ಚಾವಗಣಯಂಕಶ್ಚ ತರಗತಮಿವಕಾರ್ಯಮು
ಶೇಷಂ ಪೂರ್ವತೋದಿಕ್ಪತಿಂ ದಕ್ಷಿಣತಃ ಪರ್ಜನ್ಯಪಶ್ಚಿಮತೋಬಾಣಂ
ಸಹಸ್ರಬಾಹುಮುತ್ತರತೋಮಹಾಸುರಾನಿತರಾನಪಿ ವಿಭಜ್ಯನಿಯುಂ
ಜಾನಾಃ ಪ್ರತಿಸರಿತಃ ಪರಿಘಾವಲಯಇವಮೂಲಗತೈತ ರಾಂಚಲಾನಿನಿ
ಧಧಾನಾಃ ಪರಿತ್ಯಜಂತಃ ಪ್ರಹರಣಾನಿಸರಿಹರಂತೋಂಗುಳೀಯಕಾನ್ಯಾ
ಬಧ್ನಂತಃ ಕಪಿತಪೀಪೂತ್ತರಾಸಂಗಮಾರೋಪಯಂತಃ ಕಂಕಣಾನ್ಯಂ
ಗದಸ್ಥಾನಮುಪವೀತಯಂತೋನಿಪಿತಲಂಬನಿಹಾರಮಂಡನಾನ್ಯುದೊಭಿ
ಧಯಂತಃ ಪರಸರಮಸ್ಪೃಶಪಿಸಮಂನಿಧತ್ತಕರಾಂಚಲಾನಿ ಸಮಮು
ತ್ತಂಭಯಂತಸಮಂಪಿಸ್ತಂಸಯಂತ ಸಮಮುಚ್ಛ್ವಸಿತಸಮಂನಿಶ್ವಸಿತಸ
ಮಂಕುರುತಬಲಾನಿಪರಧಾನಿಶೀರ್ಷೀಯುಃಖಿರಾಣಿವಿನಮೇದಯಮೇವ
ಮಂದರಶ್ಚಾಪಿಚಲೇದಪಿತತೋಭವದ್ಪೀಠಂ ಚಂದ್ರಾಪೀಡಸ್ಯಸಮುದ್ವಿ
ಜೇತದುಪಿತಾಶೈಲರಾಜಸ್ಯ ಕ್ಷುಭ್ಯೇಯುಃ ಪ್ರಮಥಾಃಕುಸ್ಯೇದಪಿಶೈಲಾದಿ
ರ್ಜತುರಂತಯಾನಗತಇವಭಗವಾನಂಬಿಕಾಮಣಶ್ಚತುರತಮಸ್ಮಾಭಿ
ರ್ವಾಹಸೀಯಇತಿವಾದಯತ್ಸುವಾದಿತ್ರಾಣಿಗಂಧರ್ವೇಷು ಗಾಯಂತೀಷು
ಗಾಥಾಃ ಕಿನ್ನರೀಷುನೃತ್ಯಂತೀಷುನಿರ್ಝರವಾರಕಾಂತಾಸುಶ್ಲಾಘಮಾನೇ
ಷುಚಾರಣೇಷುಸ್ತೂಯುಂಜಾನೇಷ್ವಪಿಷಟ ಪರಮರ್ಷಿಷು ವರ್ಷತ್ಸುದಿವ್ಯ
ಪಲಾಶಕೇಷು ಪುಷ್ಪವರ್ಷಾಣಿ ಹರಹರೇತಿತಾರಧ್ವನಿಭಿರಾಪೂರಯಂತಃ
ಪಿಧ್ಯಂಡಮಂಡಲಮುನ್ನಯಾಮಾಸುರುರ್ವಿಧರಮಂದರಂ"

(ತೃತೀಯಾಶ್ವಾಸ ಗದ್ಯ ೫೫.)

ನೀಲಕಂಠವಿಜಯದ ಎರಡು ಶ್ಲೋಕಗಳನ್ನು ಮಾದರಿಗಾಗಿ ಬರೆಯುವೆವು:—
ಶಾರದಾಪ್ರಾರ್ಥನೆಯು ಹೀಗಿರುವುದು—

ದೇವಾನಾಮಪಿದೈವತಂ ಗುರುಮಪಿಪ್ರಾಜ್ಞಾಂಗುರೂಣಾಮಿಹ
ಶ್ರೀಮಂತಂಮದನಾಂತಕಂ ಕಥಮಪಿಸ್ತೋತುಂಕ್ಯತೋನಿಶ್ಚಯಃ
ತೇನತ್ವಾಂತ್ವರಯಾಮಿ ಭಾರತಿಬಲಾತ್ಕೃಷ್ಣಾಪಿದುಸ್ಪ್ರೇಪಧಿ
ಪ್ರಾಸೇನೋಪಹತಾಪಿ ಜಾತುಕುಪಿತಾಮಾಸ್ಮಪ್ರಸಾದಂತ್ಯಜಃ ॥ ಆತ್ಮಾಸ ೧—೪

ದೇವತೆಗಳಿಗೆ ಒಡೆಯನಾದ ಆಚಾರ್ಯ ಮುಖ್ಯಾಚಾರ್ಯನಾದ ಶ್ರೀಮಂತನೂ ಕಾಮಾಂತಕನಾಗಿರುವ ತ್ರಿನಯನನ್ನು ಸ್ತುತಿಸಲು ನಿಶ್ಚಯಿಸಿರುವೆನಾದುದರಿಂದ ಎಲ್ಲೆ! ಸರಸ್ವತಿಯೇ! ನಿನ್ನ (ಅನುಗ್ರಹಕ್ಕಾಗಿ)ನ್ನು ತ್ವರೆಗೊಳಿಸುತ್ತೇನೆ. ಹಾಗೆ ನಿನ್ನನ್ನು ತ್ವರೆಗೊಳಿಸುವ ಸಮಾರಂಭದಲ್ಲಿ (ಆತುರದಿಂದಲೋ ಅಜ್ಞಾನದಿಂದಲೋ ಹೇಗೋ) ನಿನ್ನನ್ನು ದುರ್ಮಾರ್ಗಕ್ಕೆ ಎಂದರೆ ವಿಕಟಾಕ್ಷರಬಂಧ, ವಾರುಷ್ಯಾದಿ ದೋಷಪೂರ್ಣವಾದ ಮಾರ್ಗಕ್ಕೆ ಎಳೆಯುವುದಾದರೂ, ವೃತ್ಯನುಪ್ರಾಸಾದಿಗಳೆಂಬ ಆಯುಧವಿಶೇಷಗಳಿಂದ ಹೊಡೆಯಲ್ಪಟ್ಟವಳಾದರೂ ನಿನ್ನನು ಕೋಪಿಸಿಕೊಳ್ಳದೆ ಯಾವಾಗಲೂ ಅನುಗ್ರಹದಿಂದಿರುವವಳಾಗು.

ದೇವತೆಗಳ ಮೊರೆಯನ್ನಾಲಿಸಿ ಪ್ರತ್ಯಕ್ಷನಾದ ಪರಶಿವನನ್ನು ಕುರಿತು ದೇವತೆಗಳು ಸ್ತುತಿಸುವ ಶ್ಲೋಕಗಳಲ್ಲಿ ಒಂದು:—

ಅಗಂತವ್ಯಂತರ್ಕೈರನಧಿಕಮಸಿ ಯಂ ಕ್ರತುಶತೈ
ರನಾಸಾದ್ಯಂ ದಾನೈರನುಪಸರಣೀಯಂ ಚ ತಪಸಾ
ಭವಂತಂಪಶ್ಯಂತಶ್ಚಮಭಿ ಭವಂತಂಪ್ರಣಮತಾಂ
ಕೃತಾರ್ಥಾಜಾತಾಸ್ಮಃ ಪುನರಪಿಕೃತಾರ್ಥಾಃ ಪುನರಪಿ ॥ ಆತ್ಮಾಸ ೨—೧೦.

ಶ್ರುತ್ಯನುಮತಗಳಾದ ತರ್ಕಾದಿಗಳಿಂದಲೂ, ನೂರಾರು ಕ್ರತುಗಳಾಚರಣದಿಂದಲೂ, ದಾನಧರ್ಮಾದಿಗಳಿಂದಲೂ, ಎಷ್ಟು ತಪಸ್ಸುಮಾಡಿದರೂ ಪಡೆಯಲು ಅಸಾಧ್ಯವಾದ ನಿನ್ನ ದರ್ಶನದಿಂದ ಎಲ್ಲೆ! ಪರಮೇಶ್ವರನೇ! ನಾವು ಕೃತಾರ್ಥರೂ ಕೃತಕಾರ್ಯರೂ ಆದೆವು.

ಆನಂದರಾಯಮಖಿ*

ಇವನು ಭಾರದ್ವಾಜ ಗೋತ್ರದವನು. ನೃಸಿಂಹರಾಯಮಖಿಯ ಮಗನು. ಗಂಗಾಧರಮಖಿಯ ಮುಮ್ಮಗನು. ಗಂಗಾಧರಮಖಿಯು ಬಾಬಾಜಿಯಜ್ವನ್ನಿನ ಮಗನಾಗಬೇಕು. ಇವನ ವಂಶಾವಳಿಯು ಹೀಗಿರುವುದು.*

---

* Dharmakuta Sri Vani Vilas Edition Verses 15, 27, 28 and the Prologue of ವಿದ್ಯಾಪರಿಣಯನಂ.



ಗಂಗಾಧರಮಖಿ, ಇವನ ಮಕ್ಕಳು, ಇವನ ಮುಮ್ಮಗ ಆನಂದರಾಯಮಖಿ ಇವರು ಮಹಾರಾಷ್ಟ್ರದ ಅರಸರಾದ ಎಕ್ಕೋಜಿ ಅಥವಾ ವೆಂಕೋಜಿ ಮತ್ತು ಅವನ ಮೂರುಜನ ಮಕ್ಕಳಬಳಿ ಮಂತ್ರಪದವಿಯನ್ನುಳ್ಳವರಾಗಿದ್ದರು. ಆನಂದರಾಯ ಮಖಿಯು ಆಸ್ಥಾನದಲ್ಲಿ ಧರ್ಮಾಧಿಕಾರಿಯಾಗಿದ್ದುದಲ್ಲದೆ ಯುದ್ಧರಂಗದಲ್ಲಿ ದಳ ವಾಯಿಯೂ ಮಹಾಕವಿಯೂ ಆಗಿದ್ದನು.

ಕಾಲ:—ಮಹಾರಾಷ್ಟ್ರ ರಾಜರಾದ ಷಾಹಜಿ ಮತ್ತು ಸರಫೋಜಿಯು ಕ್ರಿ. ಶ. ೧೭ನೆಯ ಶತಮಾನದ (ಉತ್ತರಾರ್ಧ) ಮತ್ತು ೧೮ನೆಯ ಶತಮಾನದ ಪೂರ್ವಾರ್ಧ ದವರು. ಷಾಹಜಿಯು ಕ್ರಿ. ಶ. ೧೬೪೪-೧೭೧೦ರ ವರೆಗೆ ಆಳಿದನು. ಆದುದರಿಂದ ಆನಂದರಾಯಮಖಿಯೂ, ಕ್ರಿ. ಶ. ೧೭ನೆಯ ಶತಮಾನದ ಉತ್ತರಾರ್ಧದವನು.

ಗ್ರಂಥಗಳು:—(೧) ವಿದ್ಯಾಪರಿಣಯನಂ
(೨) ಜೀವಾನಂದ
(೩) ಆಶ್ವಲಾಯನ ಗೃಹ್ಯಸೂತ್ರವ್ಯಾಖ್ಯಾ
(೪) ಋಗ್ವೇದ ಗೃಹ್ಯಸೂತ್ರವ್ಯಾಖ್ಯಾ

'ವಿದ್ಯಾಪರಿಣಯನಂ' ಎಂಬದು ಕೃಷ್ಣಮಿಶ್ರನ ಪ್ರಬೋಧಚಂದ್ರೋದಯ ನಾಟಕದಂತೆ ಬರೆಯಲ್ಪಟ್ಟಿದೆ. ಇದರಲ್ಲಿ ಅದ್ವೈತವೇವಸ್ತು. ಶೃಂಗಾರರಸಯುಕ್ತ ವಾದುದಾಗಿದೆ. ಜೀವಾನಂದವೂ, ವಿದ್ಯಾಪರಿಣಯನ ನಾಟಕದ ಹಾಗೆ ಬರೆಯಲ್ಪಟ್ಟಿದೆ.

ಈ ಎರಡು ನಾಟಕಗಳನ್ನು ವೇದಕವಿಯೆಂಬವನು ಬರೆದು, ಆನಂದರಾಯಮಖಿಯು ಹೆಸರಿನಲ್ಲಿ, ಹೇಳಿರುವದಾಗಿ ಪಂಡಿತಮಂಡಲಿಯಲ್ಲಿ ನಂಬುಗೆ ಇರುವದು * ಆದರೆ ವಿದ್ಯಾಪರಿಣಯನ ನಾಟಕದ ಕರ್ತನು, ಆನಂದರಾಯಮಖಿಯೆಂದೂ ಅವನು ಶಾಹಜೀ ಸರಸ್ವೋಜಿಯ ಬ್ರ ಮಂತ್ರಿಪದವಿಯಲ್ಲಿದ್ದವನೆಂದೂ ವಿದ್ಯಾಪರಿಣಯನ ನಾಟಕದ ಆ ಮುಖದಿಂದ ತಿಳಿಯಬರುತ್ತದೆ. ಅದು ಹೀಗಿರುವದು:—

ಸೂತ್ರಧಾರಃ :—ವಿದ್ವತ್ಕಲ್ಪತರುರಾನಂದರಾಯಮಖೀ । ಯಸ್ಯಕಿಲ:—

ಕಾಲ:—ಆನಂದರಾಯಮಖಿನೋ ವಾಲ್ಮೀಕೇರಿವ ಯೋಗಿನಃ
ಇಕ್ಷರಾಪೇಕ್ಷಣಾತ್ಸಾರಸ್ವತಃ ಸಾರಸ್ವತೋದಯಃ ॥ ೧-೭

ಆಮಿಚ:—

ನಾನಾಪೂರ್ವಮಹಾಕ್ರತುಪ್ರಣಯನೈರಧ್ಮಾತ್ಮತ್ಪಂಮರ್ಶನೈಃ
ಕರ್ಮಬ್ರಹ್ಮಪಥಪ್ರಣಾರಸವಿತಾ ಸಡ್ಡರ್ಶನೀವಲ್ಲಭಃ
ತಾತೋ ಯಸ್ಯ ಕಿಲೈಕರಾಜವಸುಧಾಧೌರಂಧರೀ ಗೀಷ್ಪತಿಂ
ಕೊಲ್ಲೀಪಾಲಕಿರೀಟಲಾಲಿತಪದಃ ಖ್ಯಾತೋ ನೃಸಿಂಹಾಧ್ವರೀ ॥ ೧-೮
ಕ್ಷುಣ್ಣಾ ಯದ್ಯಪಿ ಶಾಸ್ತ್ರಪದ್ಧತಿರಸಾವನ್ಯೈಃ ಕವೀಂದ್ರೈರಯಂ
ತತ್ಸ್ಪೀಲಂ ನ ತಿತಿಕ್ಷತೇ ನ ಸಹತೇ ಪಾತ್ರೇಷು ಚಾ ನೌಚಿತೀಂ
ನೇತುಃ ಶಾಸ್ತ್ರಮತಾಂ ತ್ರಿವರ್ಗಫಲ ಸಂಪತ್ತಿಂ ವಿಮುಚ್ಯಾ ತ್ಯಯೇ
ಪನ್ಯಾಸಂ ಚ ಜುಗುಪ್ಸತೇ ತಡಯಮಾರಂಭೋಽಸ್ಯಸಂ ರಂಭತಃ ॥ ೧-೧೩

ಅದ್ವೈತಂ ವಸ್ತು, ಶೃಂಗಾರೋರಸಃ, ಅಥ ಚ ನಿರ್ದೋಷತಾಇತಿ ಸರ್ವಮಿದಮತ್ಯದ್ಭುತಂ ದೃಶ್ಯತೇ । ಅಥವಾವಿಶ್ವಾತಿಶಾಯಿಲೌಕಿಕ.....
ಸಕಲರಾಜ್ರಧುರಂಧರಸ್ಯ ಶರಭಮಹಾರಾಜಮಂತ್ರಿಶಿಖಾಮಣೇರಸ್ಯ ಜನಕ
ಸನಕ.....ಧೌರಂಧರೀಯಮಿತಿ ಮೇ ಮಹದಾಶ್ಚರ್ಯಂ ।

ಆಬಾಲ್ಯಾದಪಿ ಪೋಷಿತೋಽಜನಿ ಮಯಾಪ್ರೇಮ್ಣಾ ತಥಾ ಲಾಲಿತ
ಸ್ತೇನಾಸೌ ಸದಸಾಮುಪೈತು ಕವಿತಾಮಾನಂದರಾಯಾಧ್ವರೀ
ಇತ್ಯೇಕಕ್ಷಿತಿಪಾಲವಂಶಜಲಧೇರ್ದೇವ್ಯಾ ಗಿರಾಂ ಜಾತಯಾ
ಧೀರಶ್ರೀಶರಭೂವನೀಂದ್ರವಪುಷಾ ನೂನಂ ಪ್ರಸಾದಃ ಕೃತಃ ॥ ೧-೧೪‡

ಇದೇ ಜಾತಿಯು, ಹಿಂದೆ ಹೇಳಿರುವ ಪ್ರಬೋಧಚಂದ್ರೋದಯ, ಸಂಕಲ್ಪ ಸೂರ್ಯೋದಯ, ಚೈತನ್ಯಚಂದ್ರೋದಯ ನಾಟಕಗಳಲ್ಲಿ ಶಾಂತರಸವೆಂಬುದು ಪ್ರಧಾನವಾಗಿ ಹೇಳಿದೆ. ಇದರಲ್ಲಿ ಶೃಂಗಾರ ರಸವು ಪ್ರಧಾನವಾಗಿ ಹೇಳಿರುವುದು. ಕಥಾವಸ್ತು ಅದ್ವೈತವೆಂಬುದನ್ನು ಸೂತ್ರಧಾರನೇ ಹೇಳಿಕೊಂಡಿರುವನು.

* Journal of Oriental Research Vol. III P. 69
‡ ವಿದ್ಯಾಪರಿಣಯನದ ಮುನ್ನುಡಿ.

ಇದರ ಕೆಲವು ಶ್ಲೋಕಗಳು:—

. ಅವಿದ್ಯೆಯು ಚಿತ್ತಶರ್ಮನೊಡನೆ ಹೇಳುವುದು:—

ಮಾಮೇವಂ ವಿವಿಧೋಪಭೋಗಲಲಿತಾಮುತ್ಸೃಜ್ಯ ಕಿಂಲಪ್ಸ್ಯತೇ
ಭೂಯಃ ಪ್ರಾಗಿವಸಾದತಾಪರಿಣಮೇದಾತ್ಮಾವಶೇಷೀಕೃತಾ ॥
ವಂಚ್ಯಂತೇಕರಣಾನ್ಯಮೂನಿಪುಪರಂಕಿಂತತ್ರಪಶ್ಯನ್ಮಿಥಃ
ಸಾಕೂತಸ್ಮಿತಕೇಳಿಲೋಲನಯುನಂಬಿಂಬಾಧರಂಪಾಸ್ಯತಿ ॥ (೫—೩೮)

ಜೀವರಾಜನಹೇಳಿಕೆ:—

ಮಂದಸ್ಮೇತಸ್ಪಪಿತಮಂಜುಮುಖಾರವಿಂದಂ
ವಾಮಾಂಕಸಂಗಿವನಿತಾಮುಖಲೋಲನೇತ್ರಂ ॥
ಚಿನ್ಮಾದ್ರಿಕಾವಿಧುತಚಿತ್ತಮಲಾಂಧಕಾರಂ
ಜ್ಯೋತಿರ್ಮನೋ ಬತ ನ ಜಾತುಜಹಾತಿತನ್ಮೇ ॥ (೭—೬)

ಇದರಲ್ಲಿ ಹೇಳಿರುವ ಮಹಾದಂಡಕ:—

ಜಯಜಯವಿಜಯೀಭವಾಪಾರಸಚ್ಚಿದ್ಘನಾನಂದ ಭೂಮನ್ನವಿದ್ಯಾತಮಃ
ಸಿಂಧುನಿರ್ಮಗ್ನ ದೀನೋದ್ಧಿಧೀರ್ಷಾರಸೋಪಾತ್ತಕಲ್ಯಾಣಮೂರ್ತೇ,
ಸಮಸ್ತಾಭಿನಂದ್ಯಾದ್ಭುತೋದಾರಚಿತ್ರಾಪದಾನಸ್ಫುರಚ್ಚಾರುಕೀರ್ತೇರವಿ
ಖಂಡಂ ವಿಖಂಡಂ ನಿಜಾನ್ಯೈವರುಂಡಾನಿತದ್ಭೀಮತಃ ಪ್ರೀಣಿತತ್ವದ್ದ
ಯಾಲೇಶಲಬ್ಧಪ್ರಭಾವಾಧಿಕಸ್ವಬ್ಧವಿಷ್ವಗ್ಜಗನ್ಮಂಡಲೀಲುಂಠನಾಕುಂಠ
ನಾಚ್ಚಂಡಿನೋದ್ದಂಡದೋರ್ದಂಡಕಂ ಡೂಲತಾಗೇಂ ಡುಕಕ್ರೀಡಿತಾಂ
ದೋಳಿತತ್ರಸ್ತಚಂಡೀಕಕ್ಕೆಲಾಸ ತತ್ಕೂಟ ಕಿಂಚಿತ್ಪದಾಂಗುಷ್ಠವಿನ್ಯಾಸಪಾ
ತಾಳನಿರ್ಮಗ್ನತನ್ಮೂಲಲಗ್ನಾಖಿವಕ್ತ್ರಂ ದದತ್ಯಾರ್ತರಕ್ಷಃ ಕುಲಾಧ್ಯಕ್ಷದಾ
ಕ್ಷಿಣ್ಯಭೂಯಃ ಪ್ರವೃತ್ತಾನುಕಂಪಾರ್ದ್ರವ ಚ್ಚಿತ್ತವೃತ್ತೇತಿಮಾವ್ಯದ್ಗಣೋ
ದ್ಯಚ್ಚಪೇಟಾಹತೋಚ್ಚಂಡಮಾರ್ತಾಂ ಡಗಂಡತ್ರುಟತ್ಕೀರ್ಣದಂತೌಘನ
ಕ್ಷತ್ರಲೋಕೀಭವದ್ಯಜ್ಞವಾಸ್ತ್ವದ್ಭುತಾನುದ್ಭುತಾತಿದ್ಭುತಾನುದ್ಭುತಾ
ಟೋಪಸಂಕ್ಷೋಭಿತಃ ಸಾಧ್ವಸಧ್ವಸ್ತಧಾವತ್ಪತತ್ಕ್ರಂದದಂಚದ್ಧರಿಭ್ರಮ್ಮಿ
ಕ್ರಾದಿತತ್ತತ್ಸದಸ್ಯಾವರಶ್ರೇಣಿಕಂಗಾಢವ್ಯಾದೃಷದ್ಯೂಪದಂಡಾಹತಿ ಪ್ರ
ತ್ರುಟನ್ನಿಷ್ಕುರಸ್ರಕ್ಸ್ರವಾದಿಚ್ಛಟಾಪಪರ್ಟಸ್ಫೋಟವಟ್ಟಾಪಟಾಪೋಚ್ಚ
ಟಂ ಘೋರತಾಂಕಾರಿಗಂಭೀರಕುಂ ಭಿಸಹಧ್ವಸ್ತಸರ್ಪಿರ್ಘಟೌಘಸ್ರವ
ಧ್ಧೂರಿಸರ್ಪಿರ್ಘನೌಘಃ (?) ಸಮಿಂಧಾನವಷ್ಪಡ್ಡಿರುಂಧಾನವೈತಾನವ
ಹ್ಯಾಗ್ನೇರ್ಚಿರಾಲೀಢ ಶಾಲಾಪಿನಹ್ಯಸ್ಫುಟದ್ವಂಶತಾತ್ಕಾರಘೋರಾರ್ಭಟಃ
ಭೂಮನಿರ್ಘೃತ್ತಸಂವರ್ತಮೃದ್ಭ್ಯದ್ಧತಿಸ್ತಬ್ಧದಕ್ಷಾಧ್ವರಧ್ವಂ ಸಕೃದ್ವೀರಭ

ದ್ರಾವತಾರಾರವಿಂದಾಕ್ಷವೇಧಶ್ಚಿರಾನ್ವಿಷ್ಟನೋದೃಷ್ಟಸಾಂದೃಷ್ಟಿಕವ್ಯಾಧಪ
ಶ್ವಾದಿನಿಃಶ್ರೇಯಸೈಶ್ವರ್ಯವಿಶ್ರಾಣನಸ್ಪಷ್ಟದೃಷ್ಟಾಕೃತೇ,

ಸ್ಮರಮದ ತಿಮಿರೋಷ್ಣಧಾಮನ್ಮಿಥೋದರ್ಪ ಭೂಯಿ ಷ್ಠ ದೇವಾಸುರವ್ರಾತ
ಸಂಕ್ಷುಭ್ಯಮಾಣಾಬ್ಧಿಗರ್ಭೋದ್ಭವ ವ್ಯಾಪ್ತವಿಧ್ಯಂಡ ಚಂಡಜ್ವಲ ಜ್ವಾಲ
ಜಾಲಾವಲೀಢಾಖಿಲಾಶಾಮುಖಾಕಾಲಕಾಲಾ ನಲತ್ಕಾಲಹಾಲಾಹಲಾ
ರ್ಚಿಃ ಪರಿಪ್ಲುಷ್ಯ ಸಾಕ್ರಂದಕೋಲಾಹಲೋದ್ಧುಷ್ಟವೇಧೋಹರಿಪ್ರಷ್ಟನಷ್ಟ,
ತ್ರಿಲೋಕೀಸಮುಜ್ಜೀವನಾಯಾಶುತನ್ನಿಗ್ರಹಾರಬ್ಧನಿರ್ಯತ್ನ ಜಂಬೂಫಲ
ಗ್ರಾಸಲೀಲಾಯಿತವ್ಯ ಂಜಿತಾಪಾರಮಾಹಾತ್ಮ್ಯಭೂಮಾಂ.....
.....ಭೋನಿಧೇದೇವಸಾಹಂತಮಾವೇಧಸೋ ವಿಷ್ಣ
ಪಾದಾ ಚ ಪಾತಾಲತಃ ಕ್ಷಿಪ್ರಮೇತಾಜಗನ್ಮಂಡಲೀಃ ಖಂಡಡಿಂಡೀರಪಿಂ
ಡಾನಿವಾವರ್ತಕೋಟ್ಯಾ ಸಮಾಘೂರ್ಣಯೇಯೇತಿದರ್ಪಾದನಲ್ಪಾರ್ಭ
ಟೇಘೋರಮಾವಿರ್ಭವಂತ್ಯಭ್ರಕಲ್ಪೋಲಿನೀನಾಥ ಯುಷ್ಮಜ್ಜಟಾಮಂ
ಡಲೇ ಕ್ವಾಪಿ ನೀವಾರಶೂಕಾಗ್ರಸಂಸಕ್ತನೀಹಾರಲೇಶಃ ಕಿಲಾಲಕ್ಷ್ಯತೇ
ಪಾಮರಾಸ್ವಾತ್ತಮಮೇಯಪ್ರಭಾವೋಚ್ಚ್ರಿತಂ ಪ್ರಾಕೃತೈರ್ದೈವತೈರೇಕ
ವನ್ಮನ್ವತೇಽಹೋಭವಾನ್ನವ, ವಿಶ್ರಾಣನೇಕೋಽಪಿಚಿಂತಾಮಣಿ
ರ್ನಾಮ ಸಂತಾನಕೋನಾಮ ಹಂತಾತಿಫಲ್ಗುಪ್ರಬೋಧಾಮರೂಪಾತಿ
ಮೂಢಸ್ತುತಿಪ್ರಕ್ರಿಯಾ ಸೇಯಮತ್ಯದ್ಭುತೇ ವಿಶ್ವವಿದ್ಯೋತನೋದ್ದಾಮ
ತೇಜೋನಿಧೌಭಾಸ್ಕರೇ ಕೀಟಖದ್ಯೋತತಾರೋಪವದ್ಭಾತಿ ಮೇ ಕಲ್ಪಕ
ಪ್ರಸೃತಾದೃಗ್ವಿಭೂತ್ಯುತ್ಕಟಾನೇಕಕೋಟ್ಯಾ ಸಹಾವೇಕ್ಷಣೇನ ಕ್ಷಣೇ
ನೈವ ಲೋಕಾನನೇಕಾನ್ವಿಧಾಯ ಪ್ರಣತ್ಯಾ ಪ್ರಣುತ್ಯಾ ಪ್ರಪತ್ಯಾಪಿ
ವಾ ಜಾತು ಯಸ್ಯೇ ಮತಸ್ಯಸ್ಯತತ್ವಾಸ್ಮಯವಿಶ್ರಾಣನಂ ತೇ ಕಿಯಚ್ಚಂದ,
ಚೂಣಾಮಣೇ

ಸಕಲ ವಿಬುಧರ್ಜಯೈತಜ್ಜಯೇ ಜಾತುಕೇನಾ ಪಿರೂಪೇಣಕಿಂಚಿದ್ಯಶೋಽಹಂ
ಲಭೇಯೇತಿ ಲೋಭಾಚ್ಛತಾಂಗಂ ತದಂಗಂಶರಃ ಸೂತ ಇತ್ಯಾದಿ ಯತ್ಕಿಂ
ಚಿದಾಯೋಧನಾಂಗತ್ವಮಾಲಂಬ್ಯಂಸನದ್ಧ ಹೃಷ್ಟೇಷು ವಿಶ್ವಂಭರಾ ಪುಷ್ಪ
ವಚ್ಛೌರಿವೇಧಃ ಪುರೋಗೇಷುಜಾಗರ್ತ್ಯುದೇವೇಷುನೈಡಾಲರೋಚಿಃ ಸನಾ
ಥೇನ ಮಂದಸ್ಮಿತೇನೈವ ತಿಸ್ರಃ ಪುರೋ ಭಸ್ಮಸಾತ್ಕೃತ್ಯ ದೈತ್ಯಾನ್ವಿಜೆ
ತ್ಯ ದೃಪ್ತಾಮನುಷ್ಯಾಪಶೂಕೃತ್ಯ ವಿಪ್ಲವ್ಯಶೂನಾಂ ಪತಿತ್ವೇನ ಶಶ್ವ
ನ್ನಮಃ ಸ್ವಾಮ್ಯತಃ ಸಂಭೃತಾಪಾರವಿಶ್ವಾಧಿಪತ್ಯೋನ್ನತೇ ಸಂನಿಕೃಷ್ಟಂನಿಜ
ಸ್ಯಾಯುಷೋಂತಂ ವಿದಿತ್ವಾವಿಪದ್ವಿಘ್ನತಃ ಪ್ರಾಜ್ಞಾಟತ್ಯೈವ ಪೂಜಾಸಮಾ
ಪ್ತ್ಯಾಶಯಾರಬ್ಧಪೂಜೇ ಮೃಕಂಡೋಸ್ತನೂಜೇ ಲುಠತ್ಸ್ವಗ್ರತೋ ದೈನ್ಯ

ಕಾರುಣ್ಯಭೂಯಿಸ್ತವಮಾಕ್ರಂದನೈರ್ಬಂಧುಷು ಸ್ವಾಧಿ ಕಾರಾವಲೇಪೇನ ಕಾ
ಲೇಽಥಕಾಲೇತಮಾಕರ್ಷತಿಕ್ರೋಧತೋವಾಮಪಾದಾಭಿಹತ್ಯಾಸವಿಧ್ವಂಸಿ
ತೋ ಮೇಷವಿಧ್ವಂಸಮೇತತ್ಪ್ರಹಾರಪ್ರಣಾದೋದ್ಭವದ್ಭಕ್ತ ವಾತ್ಸಲ್ಯ
ಕೀರ್ತೋರ್ದಿಗಂತಪ್ರಯಾಣೋಚಿತಪ್ರೌಚ್ಚಲಧ್ಯಂತ್ರಶಾತ್ಕಾರಿತೋನಾ
ಮತೇನಾಂತಕಃ ಸರ್ವತೋದ್ಯಾಪಿ ಸಾಶಂಕಮಾಹಿಂಡತೇ ತತ್ಸಮೋ ಭ
ಕ್ತವಾತ್ಸಲ್ಯಸಿಂಧುರ್ನಕಶ್ಚಿನ್ನ ಭೂತೋ ನ ಭಾವೀ ಚ ಕಿ ಭೂಯಸಾ
ಜಲ್ಪಿತೇನ ತ್ವಮೇಕೋಸಿ ಸತ್ಯಸ್ವರೂಪಃ ಸ್ವತನ್ಯದನ್ಯ ಮೃಷೈವಾಖಿಲಂ
ಸತ್ವಮುತ್ಯತ್ತಟೋರ್ಕಾದಿತೇಜಸ್ತ್ರಯಾಕೋಟಿಕೋಟ್ಯಾ ಪಿ ನೋ ಭಾಸ್ಯ
ಸೇ, ಭಾಸ್ಯತೇ ಭಾನಸಿಂಧೋ ಭವದ್ಭಾನಲೇಶೇನ ಕೃತ್ಸ್ನಂ ಜಗತ್,
ಕಿಂಚಲಿಷ್ಯಾಪದಂ ವಲ್ಲಭಾದ್ವಲ್ಲಭಂ ವಸ್ತು ನ ತ್ವತ್ಪರಂ, ಕಿಂಚಿದಿಷ್ಟಂ
ಘನೇದಾತ್ಮಕಾನಾಯ ಸರ್ವಂ ಹ್ಯತೋವಸ್ತುಸತ್ಯಂ ತ್ವಮೇವಪ್ರಕಾಶಃ
ತ್ವಮೇವ ಪ್ರಿಯಂ ಚ ತ್ವಮೇವಾಸಿ ತಾದೃಕ್ ತ್ವಮಾತ್ಮಾ ಪುರಃ ಪೃಷ್ಠ
ತಃ ಪಾರ್ಶ್ವತೋ, ಭೂತಸದ್ಭಾವಿಕಾಲೇಷು ವಾ ಸರ್ವತಃ ಸರ್ವದಾ
ನರ್ತನೇ ಹಂತ ತಿಷ್ಠನ್ನಿಧಾವೇವ ಕಾರ್ಪಣ್ಯ ಭಾಗ್ಮಂದ ಭಾಗೀವ ತಂ
ತ್ವಮನನ್ಯಪರೋಕ್ಷಾತಿಸೇದಿಷ್ಟಮಾರಾದಪಶ್ಯನ್ನವಿದ್ಯೇಂದ್ರಜಾಲಪ್ರ
ಸೂತೇ ನಿಮಜ್ಜಾಮಿ ಸಂಸಾರಮಿಥ್ಯಾರ್ಣವೇ—

ಸಿಗನುಲಿಪುರ ಕೂಟಕೋಟಿಸದೋಽಸ್ತ್ರರಾಪ್ಯಾಕೃತೋದ್ದಾಮತೇಜೋನಿಧೇ
ಸಚ್ಚಿದಾನಂದಮೂರ್ತೇ ಜಗತ್ಸರ್ಗರಕ್ಷೋಪಸಂಹಾರ ಧೌರೇ ಯತಾಲೀ
ವಲಾದಿಸ್ಫುರದ್ಭಾತ ಚಕ್ರಾತಿಸೇಗ ಭ್ರಮದ್ಭೂರಿತೇಜಸ್ತ್ರಯದ್ಯೋತಿನಾ
ನಾವಿಧೃತಜ್ರಗನ್ಮಂಡಲೋನ್ಮೀನನದ್ಯೋತವಿಧ್ವಂಸನಧ್ವಾಂತ ಶಶ್ವತ್ಪ
ರಾವರ್ತನಾಲಾತಚಕ್ರಕ್ರಮಾಲೋಕಲೀಲಾವಿನೋದಿ ಪ್ರಮಾಣಾಭಿ
ಸಿದ್ಧಸ್ವಸತ್ತಾಸಸತ್ತಾಕಸಾಂಕಲ್ಪಿಕನ್ಯಾಷ್ಟಿಕವ್ಯವಹಾರಾದಿ ನಾನಾರ್ಥ
ಜಾಲೇಂದ್ರಜಾಲೋದಯಾವಸ್ಥಿತಸ್ಫೂರ್ತಿಸನಾನಾಮಧಿಷ್ಠಾನ,ತತ್ತತ್ರ ಸರ್ವ
ತ್ರ ಸೂತ್ರಾತ್ಮನಾಧಿಷ್ಠಿತಾ ಪಾರನೈಕಪ್ರಕಾರೋನ್ಮಿಷತ್ಕ್ಲೇಶಭೂಯಿಷ್ಠ
ಜನ್ಮಾದಿಕೃನ್ಮೋಹಗಾಢಾಂಧಕಾತೌಘನಿರ್ಭೇಷವಿಧ್ವಂ ಸನೋಚ್ಚಂಡಮ
ಧ್ಯಾಹ್ನಮಾರ್ತಾಂಡ ಸಂಸಾರರೋಗಾತ್ರಸದ್ವನ್ಯಯೋಗೀಂದ್ರ ಸಂಸನ್ನ
ನೋಮಂಥನಿರ್ಮಥ್ಯಮಾನಶ್ರುತಿವ್ರಾತದುಗ್ಧಾಬ್ಧಿಸಿಧ್ಯತ್ಸುಧಾನಂದ
ಚಿಚ್ಚಂದ್ರಿಕಾಸಾಂದ್ರ ತತ್ಪೂರ್ಣಚಂದ್ರೋದಯಾಪ್ಪೃತಸಾಮ್ರಾಜ್ಯಸಿಂ
ಹಾಸನಾಧ್ಯಕ್ಷ ಮನ್ನಾಥ ಕೇನಾಪಿ ಸತ್ಸಂತತಿರ್ಜಾಯತಾತಿಶ್ರೇಯಸಾಂ
ಮಾಮಕಪ್ರಾಗ್ಜನುಃಕೋಟಿಕೋಟ್ಯರ್ಜಿತೇನಾಪಿಪುಣ್ಯೇನ ದೃಷ್ಟೋಸಿ
ಧಿಷ್ಣ್ಯೇನ ಮಾಮುಂಚದೀನಂ,ತ್ವದನ್ಯಃ ಶರಣ್ಯೋನಮೇಪಾರಮಸ್ಯಾಧು

ನಾತ್ವಾಮಪಿಪ್ರಾಪ್ಯ ತೀರ್ಣೋ ನಜೇತ್ಸ್ಯಾಮಹಂ ಮೇ ಪರಾ ಕಾ ಗತಿ
ರ್ದೀನಬಂಧೋ ದಯಾಪಾರಸಿಂಧೋ ಭವಾಂಭೋಧಿನಿಸ್ತಾರಧೌರಂಧುರೀ
ಕರ್ಣಧಾರಾತಿದುರ್ವಾರತಾಪತ್ರಯಪ್ಲುಷ್ಟಸಂಜೀವನೋದಾರ ಧಾರಾಧರಾ
ನಾದಿ ಮೋಹಾಂಧ್ಯನಷ್ಟಾಮಿ ತಸ್ಮಾರ್ಥಮಾದೃಗ್‌ದೃಗಾನಂದಸಿದ್ಧಾಂಜ
ನಾತ್ಮ, ನಮಸ್ತೇ ನಮಸ್ತೇ ನಮಸ್ತೇಶ್ವರಾಯಾಪ್ರಧೃಷ್ಯಾಜಸೇ ತೇಜ
ಸಾಂ ತೇಜಸೇ ಭೂಯಸಾಂ ಭೂಯಸೇ ಪ್ರೇಯಸಾಂ ಪ್ರೇಯಸೆ"

ಎಂದು ಹೇಳಿದೆ. ಈ ದಂಡಕವು ಅತಿದೀರ್ಘವಾಗಿರುವುದರಿಂದ ರಂಗ ಭೂಮಿಯಲ್ಲಿನ ಪ್ರೇಕ್ಷಕರಿಗೆ ರಸಾಪಕರ್ಷತ್ವವು ತೋರಬಹುದು. ಹೇಳದೆ ಇದ್ದರೆ ವಿಷಯವು ಪೂರ್ಣವಾಗದು.

ಅಪ್ಪಾಧ್ವರಿ (೯)

ಇವನು ಶ್ರೀವತ್ಸಗೋತ್ರದವನು. ತಂಜಾವೂರು ಜಿಲ್ಲೆಯ ಮಾಯಾವರಂ ಬಳಿಯಣ ಕಿಳಯೂರ್, (ಈಗಣ ಕಿಳ್ಳೆಯೂರ್) ಎಂಬ ಗ್ರಾಮದವನು. ಚಿದಂಬರ ಮಖಿ ಎಂಬವನ ಮಗನು ಎಂಬುದು ಈ ಶ್ಲೋಕದಿಂದ ವ್ಯಕ್ತವಾಗುತ್ತದೆ.

ತಾತೋ ಯಸ್ಯ ಚಿದಂಬರೇಶ್ವರ ಇತಿ ಪ್ರಖ್ಯಾತನಾಮಾ ಮಖೀ
ಯದ್ರಾತ್ರಿನ್ದಿವದತ್ತಹವ್ಯಸವಹಾದಾನೈಕಕೈತ್ಯಾಸ್ಸುರಾಃ
ಶ್ರೀವತ್ಸಾನ್ವಯವಾರಿಧೀಂದುರವಸದ್ಯಃ ಕಿಲ್ಲಿಯೂರ್ನಾಮಕಃ
ಶ್ರೇಮಾನ್ಸಾಶ್ರುತಕೀರ್ತಿರುದ್ಗ್ರಹ್ಪದಯೇ ಪುಣ್ಯೇಕಗೃಹಾರೆ* ಸುಧೀಃ *

ಶ್ರೀಮಚ್ಚಿದಂಬರಮಖೀಂದ್ರಸುತೇನ ವತ್ಸ
ವಂಶಾಂಬುರಾಶಿನಿಧುನಾವಿಧಿಶಾಸ್ತ್ರಮಾರ್ಗೇ
ಸಂಚಾರನಿರ್ಮಲಧಿಯಾ ಸಕಲಾರ್ಥಬೋಧ
ಮಾಚಾರಸಾರನವನೀತಮಿದಂ ಗೃಹೀತಂ ॥ ೩

ಇವನ ಆಚಾರ್ಯನು ಉದಯಮೂರ್ತಿ. ಸ್ವಾಚಾರ್ಯನ ಹೆಸರು ಮಾಯಾವರಂ ಬಳಿಯಣ ಆಲತ್ತೂರು ಗ್ರಾಮದ ಪಿಳ್ಳೈ ಶಾಸ್ತ್ರಿಗಳು.

ಆಲತ್ತೂರಧಿವಾಸಸ್ಯ ಪಿಳ್ಳೈಶಾಸ್ತ್ರಿಬುಧೇಶಿತುಃ
ಆಚಾರನವನೀತಾಖ್ಯಂ ನಿಬಧ್ನಾತಿ ಕೃಪಾಬಲಾತ್ ॥

ವಂದೇ ಗುರೂನುದಯಮೂರ್ತಿ ಬುಧಾಭಧಾನಾ
ಯದ್ಯೋವಿಜೃಂಭಣಮಹೋ ! ಜಗತಸ್ತಮೋನುತ್

---

* ಮದನಭೂಷಣಭಾಣದ ಪ್ರಸ್ತಾವನೆ.

೩ ಆಚಾರ ನವನೀತ.

ರ್ಕಾಪಿಲೈಃ ಶಾಸ್ತ್ರಭಿದಲೋಕಗುರೋಃ ಪುರಾಣ
ಪುಣ್ಯಾನುಭಾವಕೃತಭೂಮಿತಲಾವತಾರ್ಣಾ ॥ (ಆಚಾರ ನವನೀತ)

ಇವನು ಶಾಹಜೀರಾಜನ ಆಶ್ರಯದಲ್ಲಿದ್ದುದು ಈ ಶ್ಲೋಕಗಳಿಂದ ವ್ಯಕ್ತ ಪಡುತ್ತದೆ.

ಶ್ರೀ ಶಾಹಕ್ಷ್ಮಾಪತಿಪಾಲನಾಯಕ ದಯಾದಕ್ಷಾನ್ನಭೋಗೋಲ್ಲಸ
ದ್ಬುದ್ಧ್ಯುತ್ಕರ್ಷವಿಭಾವಿತಶ್ರುತಿಬಹುಸ್ಪರ್ತ್ಯರ್ಥಸಾರೋದಯಃ
ಸಭ್ಯಾನಾಂ ಪ್ರಮುದಾಯ ಸರ್ವವಿಷಯಾಧರ್ಮಾರ್ಥರಹಸ್ಯೋತ್ತರಾ
ಶಂಗೃಹ್ಣಾಮಿ ಮಿತೈಃ ಪದೈರಧಿವಸಮಾಯೂರವಪ್ಪಾಧ್ವರೀ

ಏಳಕ್ಷ್ಮಾಪತಿಪೂರ್ವಪುಣ್ಯಸುಕೃತೋತ್ಕರ್ಷೇಣ ಲಬ್ಧೋದಯಃ
ದೀಪಾಂಬೋದರ ಗರ್ಭವಾಸಮಹಿಮ ಪ್ರಖ್ಯಾತ ಪುಣ್ಯೋದಯಃ
ಶ್ರೀಶಾಹಕ್ಷಿತಿರಾಟ್ಪ್ರಶಾಸ್ತು ವಸುಧಾಮಾಚಂದ್ರವಪ್ಪಾಧ್ವರೀ
ಯದ್ಭಕ್ತ್ಯಾನ್ನ ಬಲೇನ ಧರ್ಮವಿಷಯಂ ಶಾಸ್ತ್ರಂ ಸಮಗ್ರಂಥಯತ್ ॥
(ಆಚಾರನವನೀತ)

ಶಾಹಜೀರಾಜನ ಮಂತ್ರಿಯಾದ ತ್ರ್ಯಂಬಕರಾಯಮಖಿಯು ಕ್ರಿ. ಶ. ೧೬೬೬ನೆಯ ಧಾತೃವರ್ಷದಲ್ಲಿ ನಡೆಸಿದ ಮಹಾಯಜ್ಞಕ್ಕೆ ತನ್ನನ್ನು ಕರೆಸಿಯಿಕೊಂಡ ಹಾಗೂ, ಆ ಯಜ್ಞವು ಕುಂಭಕೋಣದ ಬಳಿಯಲ್ಲಿರುವ ಸ್ವಾಮಿಮಲೈ ಎಂಬಲ್ಲಿ ನಡೆಯಿತೆಂದೂ ತ್ರ್ಯಂಬಕರಾಯ ಮತ್ತು ಮಹಾರಾಷ್ಟ್ರ ರಾಜನು ಇವನನ್ನು ಬಿಡಲಾರದೆ ರಾಜಾಸ್ಥಾನದಲ್ಲಿ ಮೂರು ತಿಂಗಳು ಮಹಾಭಾರತ ಪಾರಾಯಣವನ್ನು ಮಾಡಬೇಕೆಂದು ಸಾರ್ಥಿಸಿಕೊಂಡ ಮೇರೆ ಪಾರಾಯಣವನ್ನು ಮುಗಿಸಿ ಮಾಯಾವರಕ್ಕೆ ಹಿಂತಿರುಗಿ ಬರುವಾಗ ಶಾಹಜೀ ರಾಜನು ಒಂದು ಧರ್ಮಶಾಸ್ತ್ರವನ್ನು ಬರೆಯಬೇಕೆಂದು ಕೇಳಿಕೊಂಡ ಮೇರೆಗೆ ಹಾಗೆ ಆಗಲಿ ಎಂದೊಪ್ಪಿ ಊರಿಗೆಬಂದು ತನ್ನ ಮಗನೊಡನೆ ೮ ವರ್ಷಗಳಲ್ಲಿ ೧೫೦೦೦ ಗ್ರಂಥ ಪರಿಮಿತಿಯುಳ್ಳ ಒಂದು ಧರ್ಮಶಾಸ್ತ್ರ ಪುಸ್ತಕವನ್ನು ಬರೆದು ಶಾಹಜೀರಾಜನಿಗೆ ಕೊಟ್ಟುದಾಗಿಯೂ ಅದನ್ನು 'ಆಚಾರನವನೀತ' ಎಂದು ಕರೆದುದಾಗಿಯೂ ಕೆಳಗಣ ಶ್ಲೋಕಗಳಿಂದ ಸ್ಪಷ್ಟವಾಗುತ್ತದೆ:—

ಧಾತೃವರ್ಷೇ ಯದಾ ಯಜ್ಞಸೇವಾರ್ಥಮಹಮಾಗತಃ
ಶ್ರೀಮಹಾರಾಜರಾಜಸ್ಯ ಮಂತ್ರಿಣಸ್ತ್ರ್ಯಂಬಕಪ್ರಭೋಃ ॥
ಮಹಾರಾಜಸ್ತು ಮಾಂ ಪ್ರೀತ್ಯಾ ಸ್ವಸಭಾಯಾಮಮಾಸಯತ್
ಭಾರತಶ್ರವಣಾರ್ಥಾಯ ರಾತ್ರಿನ್ಪ್ರಿವಮುದಾರಧೀಃ
ಯದಾ ಮಾಸತ್ರಯಾದೂರ್ಧ್ವಂ ಪ್ರಾಪ್ಯಾನುಜ್ಞಾಂ ಮಹೀಪತೇಃ
ಗಂತುವಿಚ್ಛಾಮಿ ಜೆ ತದಾ ಧರ್ಮಶಾಸ್ತ್ರನಿಬಂಧನೇ ॥
ಮಹಾರಾಜೇನ ಚಾಜ್ಞಪ್ತೋ ಗೀರ್ವಾಣಪುರಮಾಗತಃ
ತಸ್ಮಿನ್ವರ್ಷೇ ವ್ಯಶಿಕರ್ಕೇ ಧರ್ಮಶಾಸ್ತ್ರಸುಧಾಂಬುಧೇಃ

ಏಕೇನೈವ ಮಯಾ ಪುತ್ರಯುಕ್ತೇನ ಶನಕೈಃ ಕೃತೇ
ಬುದ್ಧಿ ದಂಡೇನ ಮಥನೇ ರಾತ್ರಿನಿ ರ್ಮಮನೇಕಧಾ ॥
ಅಸ್ಮಭೆರ್ಲಬ್ಧವಾನಸ್ಮಿ ವತ್ಸರಸ್ತ್ವಲಂ ಮಹತ್
ಆಚಾರನವನೀತಂ ತನ್ಮಯದು ಸರ್ವಮನೋಹರ೦
ಮಹಾರಾಜಸ್ಯ ದಯಯಾ ಸತ್ಸಂಗಾಹ್ಯಮಭೂದ್ಭುವಿ
ಸಮಾಪ್ತಃ ಪಂಚದಶಭಿಃ ಸಹಸ್ರೈರ್ಗ್ರಂಥಸಂಖ್ಯಯಾ
ಪ್ರಚಾರೋಽಸ್ಯ ಮಹಾರಾಜಾಧೀನ ಏವ ಹಿ ಸರ್ವಥಾ
ಅಹಮಪ್ಪಾಧ್ವರೀನಾಮ್ನಾ ಮಹಾರಾಜೇನ ಸಾದರಂ ॥
ದತ್ತಾಂ ಮಹೀ ಸಮೂದಾಯ ತತ್ರ ಕೃಷ್ಣಾದಿವಂಭೃತ್ಯೈಃ ।
ಧಾನ್ಯೈಃ ಪರಂಪರಾಸಿದ್ಧೇ ರ್ಗ್ರಾಮೇ ಕೃಷ್ಣಾ ಸಮರ್ಜಿತೈಃ ।
ಕುರ್ವಕುಟುಂಬಭರಣಂ ಪುತ್ರೈಪೌತ್ರೈಸ್ಸಮಾವೃತಃ ।
ಶ್ರೇಯಃ ಪ್ರಾರ್ಥಯಮಾನಸ್ಸನ್ಮಹಾರಾಜಸ್ಯ ಸಂತತಂ ।
ಆಯುಶ್ಶೇಷಂ ಸುಖಿಂ ವಸ್ತುವಿಚಾಮ್ಯಗ್ನಿಕ್ಕಿ (ತ್ರಿ) ಯಾತಿಕೇ ।
ಮನೋರಥೋ ಮಹಾನೇಷ ಮಹಾರಾಜೇನ ಪೂರ್ತಾಂ ॥ (ಆಚಾರ ನವನೀತ)

ಕಾಲ:—ರಾಜನಾದ ಶಾಹಜಿಯು ಕ್ರಿ. ಶ. ೧೬ನೆಯ ಶತಮಾನದ ಉತ್ತರಾರ್ಧದವನಾದುದರಿಂದ ಇವನ ಆಶ್ರಿತನಾದ ಅಪ್ಪಾಧ್ವರಿಯು ಕ್ರಿ. ಶ. ೧೭ನೆಯ ಶತಮಾನದ ಉತ್ತರಾರ್ಧದವನೆಂಬುದು ಸ್ಪಷ್ಟವು ಶಾಹಜಿಯು ಕ್ರಿ. ಶ. ೧೬೨೪ ೧೬೮೦ರ ವರೆಗೆ ಆಳಿದನು.

ಗ್ರಂಥಗಳು:—(೧) ಮದನಭೂಷಣಭಾಣ.
(೨) ಗೌರೀಮಯೂರ ಮಹಾತ್ಮ್ಯಚಂಪೂ.
(೩) ಆಚಾರನವನೀತ (ಧರ್ಮಶಾಸ್ತ್ರ).

ವೈದ್ಯನಾಥಶಾಸ್ತ್ರಿಯು ಶಿಷ್ಯನಾದ ಅಪ್ಪಾಸೂರಿ ಎಂಬುವನನ್ನು ಅಪ್ಪಾಧ್ವರಿ ಎಂದು ಹೇಳುವುದು ತಪ್ಪಾಗುವುದು. ಇಬ್ಬರೂ ಬೇರೆ ಬೇರೆ *

೮
ವೆಂಕಟಾಧ್ವರೀ

ಇವನು ಕಾಂಚೀಪುರ ಸಮೀಪದ 'ಅರ್ಶನಫಲ' ಎಂಬ ಅಗ್ರಹಾರದವನು ಶ್ರೀರಾಮಾನುಜಮತಾನುಯಾಯಿ. 'ವಡಫಲೆ' ಸಂಪ್ರದಾಯದವನು. §

ಇವನ ಪಿತೃಪಿತಾಮಹರ ವಿಚಾರವಾಗಿ:—

---

* The Journal of oriental Research Vol III PP 71-73
§ ವಿಶ್ವಗುಣಾದರ್ಶ, ಮುನ್ನುಡಿ ಪುಟ ೬—೭.

ಕಾಂಚೀಮಂಡಲಮಂಡನಸ್ಯ ಮಖಿನಃ ಕರ್ಣಾಟಭೂಭೃದ್ಗುರೋ
ಸ್ತಾತಾರ್ಯಸ್ಯ ದಿಗಂತಕಾಂತಯಶಸೋ ಯಂ ಭಾಗಿನೇಯಂ ವಿದುಃ
ಅಸ್ತೋಕಾಪ್ಪರಕರ್ತುರಪ್ಪಯಗುರೋರಸ್ಯೈವ ವಿದ್ವನ್ಮಣೇಃ
ಪುತ್ರಃ **ಶ್ರೀರಘುನಾಥದೀಕ್ಷಿತಕವಿಃ** ಪುಣ್ಯೋರ್ಗುಣೈರೇಧತೇ ॥ ೨
ತತ್ಸುತಸ್ತರ್ಕ ವೇದಾಂತ ತಂತ್ರವ್ಯಾಕೃತಿಚಿಂತಕಃ
ವ್ಯಕ್ತಂವಿಶ್ವಗುಣಾದರ್ಶಂ ವಿಧತ್ತೇ **ವೇಂಕಟಾಧ್ವರೀ** ॥ ೩ §

ಎಂದು ಹೇಳಿಕೊಂಡಿರುವುದರಿಂದ ಕಾಂಚೀಮಂಡಲ ಭೂಷಣರೂ, ಯಾಗ ಗಳನ್ನು ಮಾಡಿದವರೂ, ಕರ್ಣಾಟಾಧೀಶ ಕೃಷ್ಣರಾಜನ ಗುರುಗಳೂ, ದಿಗಂತ ವಿಶ್ರಾಂತ ಕೀರ್ತಿಯುತರಾದ ತಾತಾರ್ಯ (ತಾತಾಚಾರ್ಯ) ರೆಂಬವರ ಸೋದರಳಿ ಯನೂ, (ಸೋದರಿಯನುಗ) ಸಕಲಕಲಾಕೋವಿದನೂ, ಯಾಗಗಳನ್ನು ಮಾಡಿ ದವನೂ, ಮಹಾಕವಿಯು ಆದ ಅಪ್ಪಯ ಗುರುವಿನ ಮಗ ಶ್ರೀರಘುನಾಥ ದೀಕ್ಷಿತನು, ಸುಪ್ರಸಿದ್ಧನು. ಇವನ ಮಗ ತರ್ಕಶಾಸ್ತ್ರಕೋವಿದನೂ, ವೇದಾಂತಶಾಸ್ತ್ರಾದಿ ಪ್ರವೀಣನೂ ಆದ ವೆಂಕಟಾಧ್ವರೀ ಎಂಬವನು. ರಘುನಾಥದೀಕ್ಷಿತನು ಶ್ಲೇಷ ಯಮಕ ಚಕ್ರವರ್ತಿಯೆಂದೂ ಆತ್ರೇಯಗೋತ್ರದವನೆಂದೂ, ವೆಂಕಟಾಧ್ವರಿಯು ಸೀತಾಂಬಾ ಗರ್ಭಸಂಭೂತನೆಂಬದು:—

" ಇತಿ ಶ್ರೀಪಂಚಮತಭಂಜನನಿಬಂಧನ ವಿಖ್ಯಾತತಾತಯಜ್ವಭಾಗಿನೇಯ ವಾಜಪೇಯ ಸಾರ್ವಪ್ರಷ್ಠ್ಯಾಪ್ತೋರ್ಯಾಮಾದಿಯಾತ್ರೇಯವಂಶಮಾಕ್ತಿ ಕೀಭವದಪ್ಪಯ್ಯಾರ್ಯತನೂಭವಶ್ಲೇಷ ಯಮಕಚಕ್ರವರ್ತಿ ರಘುನಾಥಾ ಚಾರ್ಯತನಯಸ್ಯಶ್ರೀನಿವಾಸಕೃಪಾತಿಶಯಸಂವಿದಿತನಯಸ್ಯ ಸೀತಾಂ ಬಾಗರ್ಭಸಂಭವಸ್ಯ ಶ್ರೀಮತ್ಕಾಂಚೀನಗರವಾಸ್ತವ್ಯಸ್ಯ ಮಹಾಕವಿಶ್ರೀವೆಂ ಕಟಾಧ್ವರಿಣಃಕೃತೌ....." ಎಂಬ ಗ್ರಂಥಾಂತ್ಯ ಗದ್ಯ ದಿಂದಲೂ† :—

ಅಪ್ಪಯ್ಯಗುರು ಎಂಬವನು (ಅಪ್ಪಯಾಚಾರ್ಯ) ಶ್ರೀನಿವಾಸಚಾರ್ಯನೆಂಬದು
" ಇತಿ ಶ್ರೀಕಾಂಚೀನಗರನಾಯಕ ತಾತಾಚಾರ್ಯಭಾಗಿನೇಯವಾಜಪೇಯ ಸರ್ವಪೃಷ್ಠ್ಯಾಪ್ತೋರ್ಯಾಮಾದಿಯಾಜಿ ಶ್ರೀ ಶ್ರೀನಿವಾಸಾಚಾರ್ಯತನೂಭವಸ್ಯ .....ವೆಂಕಟಾರ್ಯಯಜ್ವನಾ\$....." ಎಂಬುದರಿಂದಲೂ ಸ್ಪಷ್ಟಪಡುತ್ತದೆ.

§ ವಿಶ್ವಗುಣಾದರ್ಶ ಆರಂಭ ಶ್ಲೋಕಗಳು.
† Ibid ಕೊನೆಯಲ್ಲಿ ಹೇಳಿರುವ ಗದ್ಯ.
\$ ವರದಾಭ್ಯುದಯಾಂತ್ಯ ಗದ್ಯ.

ಇವನಿಗೆ ವೆಂಕಟಾಧ್ವರೀ ಎಂದೂ, ವೆಂಕಟಾಚಾರ್ಯನೆಂದೂ, ವೇಂಕಟಾರ್ಯ ಯಜ್ವ ಎಂದೂ ಉಪನಾಮಗಳಿರುವುವು.

ಕಾಲ:—ನೀಲಕಂಠ ವಿಜಯಚಂಪೂಕಾರನಾದ ನೀಲಕಂಠದೀಕ್ಷಿತನೂ ಇವನೂ ಸಹಾಯಾಧ್ಯಾಯಿಗಳೆಂದು "ಅಯಂ .....ವೆಂಕಟಾಧ್ವರಿನಾಮಕವಿಃ ನೀಲಕಂಠದೀಕ್ಷಿತ ಸಮಕಾಲಃ ತತ್ಸಹಾಧ್ಯಾಯೀ ಆಸೀತ್," x ಎಂದು ಹೇಳಲ್ಪಟ್ಟಿರುವುದರಿಂದ ಇವರಿರ್ವರೂ ಸಮಕಾಲೀನರೆಂದೂ ಕ್ರಿ. ಶ. ೧೭ನೆಯ ಶತಮಾನದವರೆಂಬದು ನಿಶ್ಚಯವಾಗುತ್ತದೆ.

ಗ್ರಂಥಗಳು:—೧. ವಿಶ್ವಗುಣಾದರ್ಶ
೨. ವರದಾಭ್ಯುದಯ
೩. ಪ್ರದ್ಯುಮ್ನಾನಂದ
೪. ಲಕ್ಷ್ಮೀಸಹಸ್ರ

ಇವೇ ಮೊದಲಾದವುಗಳನ್ನು ಬರೆದಿರುವನು. ಇದರಲ್ಲಿ **ವಿಶ್ವಗುಣಾದರ್ಶವು** ಉತ್ತಮವಾದ ಮತ್ತು ವಿಖ್ಯಾತ ಗ್ರಂಥವಾಗಿ ಜಾತಿ, ಮತ, ಶಾಸ್ತ್ರ, ದೇಶ, ಮೊದಲಾದವುಗಳ ಸ್ವಭಾವಸಿದ್ಧವಾದ ಗುಣದೋಷಗಳನ್ನು ವರ್ಣಿಸುವುದಾಗಿದೆ. ಇದು ಚಂಪೂಗ್ರಂಥ. ಗದ್ಯಪದ್ಯಯುಕ್ತವಾದ ಚಂಪೂಗ್ರಂಥವನ್ನೇಕೆ ಬರೆದಿರುವನೆಂಬ ವಿಚಾರವಾಗಿ ಕವಿಯು ಪದ್ಯಕಾವ್ಯಗಳು ಲೋಕದಲ್ಲಿ ಎಷ್ಟೋಇರುವುವಾದರೂ ಗದ್ಯದೊಡನೆ ಇಲ್ಲದ ಪದ್ಯವು ರಸಿಕರಿಗೆ ಆಹ್ಲಾದಕರವಾಗಿರದೆಂದೂ, ಪದ್ಯದಿಂದ ಅಗಲಿರುವ ಗದ್ಯವು ಓದುವಜಾಣರಿಗೆ ಇನಿದಾಗದೆಂದೂ ಅಥವಾ ಸವಿಯಾಗದೆಂದೂ ಇವೆರಡರ ಸೇರಾಣಿಕೆಯಿಂದ ಹೆಚ್ಚು ಆನಂದ ಉಂಟಾಗುವುದೆಂದೂ ಮಧು (ಜೇನುತುಪ್ಪ) ದ್ರಾಕ್ಷಾರಸಯೋಗವು ಯಾರಿಗೆತಾನೇ ರುಚಿಯಾಗಿರದು ? ಸಕಲರಿಗೂ ರುಚಿಕೊಡುವುದೆಂದೂ,

ಪದ್ಯಂ ಯದ್ಯಪಿ ವಿದ್ಯತೇ ಬಹು ಗತಾಂ ಹೃದ್ಯಂ ವಿಗದ್ಯಂ ನ ತತ್
ಗದ್ಯಂ ಚ ಪ್ರತಿಪದ್ಯತೇ ನ ವಿಜಹತ್ಪದ್ಯಂಬುಧಾಸ್ವಾದ್ಯತಾಂ
ಆದತ್ತೇ ಹಿ ತಯೋಃ ಪ್ರಯೋಗ ಉಭಯೋರಾಮೋದಭೂಮೋದಯಂ
ಸಂಗಃ ಕಸ್ಯ ಹಿ ನ ಸ್ಪದೇತ ? ಮನಸೇ ಮಾಧ್ವೀಕ ಮೃದ್ವೀಕಯೋಃ ॥
ವಿಶ್ವಗುಣಾದರ್ಶ ॥ ೪ ॥

ಎಂದು ಹೇಳಿಕೊಂಡಿರುವನು. ಒಂದಾನೊಂದು ಸಮಯದಲ್ಲಿ ಕೃಶಾನು ವಿಶ್ವಾವಸು ಎಂಬ ಇರ್ವರು ಗಂಧರ್ವರು ಸಮಾನನೇಪಧಾರಿಗಳಾಗಿ ಸ್ಥಿರಚರರೂಪ

x ವಿಶ್ವಗುಣಾದರ್ಶ ಮುನ್ನುಡಿ ಪುಟ ೭

ವಾದ ಈ ಲೋಕ (ಮರ್ತ್ಯಲೋಕ)ವನ್ನು ಸುತ್ತಿ ನೋಡಿಕೊಂಡುಬರಬೇಕೆಂಬ ಉದ್ದೇಶದಿಂದ ವಿಮಾನಾರೂಢರಾಗಿ ಹೊರಟರು.

ವಿಶ್ವವಲೋಕಸ್ಪೃಹಯಾ ಕದಾಚಿದ್ವಿಮಾನಮಾರುಹ್ಯ ಸಮಾನವೇಷಂ
ಕೃಶಾನುವಿಶ್ವಾವಸುನಾಮಧೇಯಂ ಗಂಧರ್ವಯುಗ್ಮಂ ಗಗನೇ ಚಚಾರ॥೫॥

ಇದರಲ್ಲಿ ಕೃಶಾನುವು ಲೋಕದೋಷಗ್ರಹಣಕೌತುಕಿ. ವಿಶ್ವಾವಸುವಾದರೋ ವಿಶ್ವಗುಣಗ್ರಹಣ ಕೌತುಕಿಯಾಗಿದ್ದನು. ಇವರು ವಿಮಾನದಲ್ಲಿ ಸಂಚರಿಸುತ್ತ ತಮಗೆ ಕಂಡುಬಂದ ಗುಣದೋಷ ವಿಮರ್ಶೆಮಾಡುತ್ತ, ಸಕಲಲೋಕದ ಸ್ವಭಾವವರ್ಣನವನ್ನು ಮಾಡುವರಾಗಿ ಪವಿತ್ರಗಳಾದ ತೀರ್ಥಕ್ಷೇತ್ರ ಸೇವನೆಯಿಂದ ಕೃತಾರ್ಥರಾಗಿ, ಪ್ರವಾಸದಿಂದ ದೃಢವೈತ್ರಿಯುಳ್ಳವರಾಗಿ ಆನಂದದಿಂದ ಸ್ವಸ್ಥಾನಮಂ ಸೇರ್ದರು ಎಂದು ಕಥೆಯನ್ನು ಕಲ್ಪಿಸಿಕೊಂಡು ಹೇಳಿರುವನು. ಇವನು ಶ್ರೀವೆಂಕಟನಾಥನ ಸಂಕಲ್ಪಸೂರ್ಯೋದಯನಾಟಕವನ್ನೋದಿ ಅದನ್ನು ಮಾದರಿಯಾಗಿಟ್ಟುಕೊಂಡು ತನಗೆತೋರಿಬಂದ ವಿಷಯಗಳೆಲ್ಲವನ್ನೂ ಸಮರ್ಥಿಸಿರಬೇಕಾಗಿ ನಮಗೆತೋರುತ್ತದೆ. ಅಲ್ಲದೆ ತಾನು ಹೇಳಬೇಕೆನ್ನುವ ವಿಷಯಸಿದ್ಧಿಗೆ ಇವನುದೇಶಾಟನಕ್ಕಾಗಿಹೊರಟು ಭರತಖಂಡದ ಸಕಲದೇಶ, ತೀರ್ಥಕ್ಷೇತ್ರ, ಜನರ ನಡೆನುಡಿ, ಆಚಾರಮೊದಲಾದವುಗಳೆಲ್ಲವನ್ನೂ ಪ್ರತ್ಯಕ್ಷದಲ್ಲಿನೋಡಿ ಬರೆದಿರಬೇಕಾಗಿ ಭಾಸವಾಗುತ್ತದೆ. ಸಂಕಲ್ಪಸೂರ್ಯೋದಯನಾಟಕದ ಐದನೆಯ ಅಂಕದಲ್ಲಿ ಡಂಭ ಮತ್ತು ದರ್ಪನ ಹೇಳಿಕೆಯ ವಿಚಾರಗಳೂ ಮುಖ್ಯವಾಗಿ ಆರನೆಯ ಅಂಕಪೂರ್ತಿಯಾಗಿ ವಿವೇಕ ಮತ್ತು ತರ್ಕರಸಂಭಾಷಣೆಗಳೂ, ವರ್ಣನೆಗಳೂ, ಸ್ಥಳಗಳೂ ಇವೇ ಮೊದಲಾದವು ಈ ಕವಿಗೆ ಸಹಾಯವಾಗಿರಬೇಬೆಕಾಗಿ ತಿಳಿಯುತ್ತೇವೆ. ಸಂಕಲ್ಪಸೂರ್ಯೋದಯದ್ದೆ ಐದನೆಯ ಅಂಕದಲ್ಲಿ ಮಗಧ ಕಳಿಂಗ ಆಂಧ್ರ ದ್ರಾವಿಡ ಕರ್ಣಾಟ ಕೇರಳ ಕೊಂಕಣ ದೇಶಗಳ ಹೆಸರೂ. ವರ್ಣನೆಗಳೂ ಕಂಡುಬರುತ್ತವೆ. ಪ್ರಾಕೃತ, ಮಹಾರಾಷ್ಟ್ರ ಮಾಗಧ ಪೈಶಾಚ ಅಪಭ್ರಂಶ. ಶೂರಸೇನೀ ಮೊದಲಾದಭಾಷೆಗಳ, ಭಾಷಾಭೇದಗಳ ಹೆಸರುಗಳಿವೆ.

ಇವುಗಳೆಲ್ಲದರ ಪರಶೀಲನದಿಂದ ವಿಶ್ವಗುಣಾದರ್ಶದ ರಚನೆಯು ಸಂಕಲ್ಪಸೂರ್ಯೋದಯವನ್ನನುಸರಿಸಿ ಬರೆದಿರಬೇಕಾಗಿ ಬಹುತರಬೋಧೆಯಾಗುತ್ತದೆ. ವಿಶ್ವಗುಣಾದರ್ಶದ ಕೆಲವು ಶ್ಲೋಕಗಳನ್ನು ಬರೆದು ಮುಗಿಸುವೆವು.

ಕೃಷ್ಣಾಶ್ಲೇಷ ವಿಶೇಷಿತಾಽಸಿತರುಚೇ ಕಾಳಿಂದಿ ಶುಭ್ರಂ ನಮಃ
ಕುಂಜೇಭ್ಯಃ ಶ್ರಿತತಾವಕಾಂಬುಕೆಣಿಕಾಪುಂಜೇಭ್ಯ ಏಷೋಂಜಲಿಃ
ಗೋಪೀಭ್ಯಃ ಪರಿರಂಭ್ಯಯಾ ಮುರರಿಪೋಸ್ತೇಷು ಸ್ಥಿತಾಭ್ಯೋ ನತಿ
ರ್ನಾರ್ಥಾಯಾಭರುಪಾಸಿತಾಯ ಚ ನಮೋವಾಕಾ ನಧೀಯಾಮಹಃ ॥ ೧೭೩

ಶ್ರೀ ಕೃಷ್ಣನ ಆಲಿಂಗನದಿಂದ ಕಪ್ಪು ಬಣ್ಣವುಳ್ಳವಳಾದ ಎಲೌ ಯಮುನೆ! ನಿನಗೆ ನಮಸ್ಕಾರವು. ನಿನ್ನ ನೀರಿನ ತುಂತುರುಗಳಿಂದ ಆಶ್ರಯಿಸಲ್ಪಟ್ಟುದಾದ ಲತಾ ಕುಂಜಗಳಿಗೆ ಕೈಜೋಡಿಸುತ್ತೇನೆ. ಶ್ರೀಕೃಷ್ಣನ ಆಲಿಂಗನಕಾತರರಾಗಿ ಲತಾ ಕುಂಜಗಳಲ್ಲಿ ಅಡಗಿಕೊಂಡಿರುವ ಗೋಪವಧೂಟಿಯರನ್ನು ವಂದಿಸುತ್ತೇನೆ. ಅವರಿಂದ ಸೇವಿತನಾದ ಒಡೆಯ ಕೃಷ್ಣನನ್ನು ಪುನಃ ಪುನಃ ನಮಸ್ಕರಿಸುತ್ತೇನೆ.

ಲುಂಠಿತ್ವಾ ನವನೀತಮನ್ಯಸದನೇ ಲೋಲೇಕ್ಷಣೋ ಭಕ್ಷಯ-
ಗೋಪೀಭಿಃ ಪರಿಗೃಹ್ಯಮಾತ್ಮಸವಿಧಂ ನೀತೋ ಮುಕುಂದಸ್ತಯಾ
'ಲುಂಠಿರ್ಮಾ ನವನೀತ ಮಿತ್ಯಭಿಹಿತೋಽಪ್ಯೇತದ್ಯಲುಂಠೀಃ ಕಿಮಿ'
ತ್ಯುಕ್ತೋ **ಮಾನವನೀತಮೇವ ಹೃತವಾ** ನ್ಯಾಗೋ ಜನನ್ಯಾಂಸ್ಯಧಾತ್ ॥೧೨೪॥

ಇತರರ ಮನೆಯಲ್ಲಿ ಬೆಣ್ಣೆಯನ್ನು ಕದ್ದು ತಿನ್ನುವಭರದಲ್ಲಿ ತನ್ನನ್ನು ಯಾರಾದರೂ ನೋಡುವರೆಂಬ ಹೆದರಿಕೆಯಿಂದ ಅತ್ತಿತ್ತ ನೋಡುತ್ತಿರುವ ಕೃಷ್ಣನನ್ನು ಗೋಪಾಂಗನೆಯರು ಹಿಡಿದುಕೊಂಡು ತಾಯಾದ ಯಶೋದೆಯ ಬಳಿಗೆ ಬಂದು ದೂರು ಹೇಳಲು ಯಶೋದೆಯು ಕೃಷ್ಣ! '**ಲುಂಠಿರ್ಮಾನವನೀತ ಮಿತಿ**' ಬೆಣ್ಣೆಯನ್ನು ಕಳುವುಮಾಡಬೇಡವೆಂದು ಹೇಳಿದ್ದಾಗ್ಯೂ ಪುನಃ ನೀನು ಬೆಣ್ಣೆಯನ್ನು ಕದ್ದುದೇಕೆಂದು ಕೇಳಿದುದಕ್ಕೆ ಕೃಷ್ಣನು ಅಮ್ಮಾ! ನಾನು ಮಾನವ + ನೀತವನ್ನು (ಮನುಷ್ಯರು ಕೊಂಡುಹೋಗುತ್ತಿದ್ದುದನ್ನು) ಕಸುಗೊಂಡೆನು ಹೊರ್ತು ನವನೀತವನ್ನು ತೆಗೆದುಕೊಳ್ಳಲಿಲ್ಲ ಎಂದುತ್ತರಕೊಟ್ಟನು.

ಅಂಸೇ ಸಲೀಲಮುಧಿರೋಪ್ಯ ಶುಕಂ ಸ್ವಹಸ್ತಾ
ದ್ಗೋಪ್ಯಾ ಭಯಾಕುಲದೃಶಃ ಕುತುಕೀ ಮುಕುಂದಃ
'ಅಂಸಂಗತಂ ಶುಕ ಮಿಹಾಪನಯೇತಿ' ವಾಚಂ
ತಸ್ಯಾ ನಿಶಮ್ಯ ಸ ತದಂಶುಕಮಾಚಕರ್ಷ ॥ ೧೨೫ ॥

ಕೃಷ್ಣನು ಹುಡುಗತನದಿಂದ ತನ್ನ ಬಳಿಯಲ್ಲಿದ್ದ ಶುಕವನ್ನು ಚಂಚಲನೇತ್ರಳಾದೊಬ್ಬ ಗೋಪಿಯತೋಳಿನಮೇಲೆ ಇರಿಸಲು ಅವಳು ಎಲೈ ಕೃಷ್ಣನೆ! 'ಅಂಸಂಗತಂ ಶುಕಮಿಹಾಪನಯ' ಎಂದು ಹೇಳಿದುದನ್ನು ಕೇಳಿ ಅವಳ ಹೇಳಿಕೆಯನ್ನು ಸಮರ್ಥಿಸಲು ಅವಳ ತೋಳಿನ ಮೇಲಿರುವ ಸೀರೆಯ ಸೆರಗನ್ನು ವಾರೆಮಾಡಿ ಬಿಟ್ಟನು ಅಥವಾ ಜಾರಿಸಿಬಿಟ್ಟನು (ಇಲ್ಲಿ ಅವಳು ಹೇಳಿದುದು ಕೃಷ್ಣ! ನೀನು ತೋಳಿನಮೇಲಿಟ್ಟ ಗಿಳಿಯನ್ನು ತೆಗೆದುಕೋ ಎಂದು. ಇವನು ಅರ್ಥವಾಡಿಕೊಂಡುದು ಅಂ + ಸಂಗತಂಶುಕಂ ಎಂದರೆ ಅಂ ಎಂಬ ಅಕ್ಷರದಿಂದ ಕೂಡಿದ ಶುಕಂ ಎಂದರೆ ಅಂಶುಕ ಎಂದರೆ ವಸ್ತ್ರ ಎಂದು,)

ನೀತ್ವಾ ರಾಧಿಕಯಾ ನಿಶಾಂ ಮುರರಿಪುಃ ಪ್ರಾತರ್ಗೃಹಾನಾಗತಂ
ಕ್ಷೀಮಾಭೂರಪರಾಧಿಕಃ ಪುನರಿತಿ ಪ್ರೋಕ್ತೋಽಪಿ ಪೂರ್ವಂ ಮಯಾ

ಕಸ್ಮಾದೇವಮಭೂರಿತಿ ಶ್ರುತಿರುಷಾ ನಿರ್ಭರ್ತ್ಸಿತೋ ಲೀಲಯಾ
ತ್ವದ್ಭಾಚ್ಯೈವ ಸರಾಧಿಕೋಽಪಮಿತಿ ತಾಂ ವ್ಯಾಮೋಹಯರ್ಮಾಯಯಾ ॥ ೧೨೬

ಒಂದು ರಾತ್ರಿ ಒಬ್ಬಾನೊಬ್ಬ ಗೊಲ್ಲತಿಯಿಂದ ಕರೆದು ಹೋಗಲ್ಪಟ್ಟು ಮಾರನೆಯ ಬೆಳಿಗ್ಗೆ ಮನೆಗೆ ಬಂದ ಕೃಷ್ಣನನ್ನು ನೋಡಿ ಎಲೈ ಕೃಷ್ಣನೆ! ನೀನು ಇಂತಹ ತಪ್ಪುಗಳನ್ನು ಮಾಡಬೇಡವೆಂದು ಎಷ್ಟು ಸಲ ಹೇಳಿದಾಗ್ಯೂ ಪುನಃ ಹೀಗೇಕೆ ಮಾಡಿದೆ? ಎಂದು ನಿಳಾದೇವಿಯು ಕೋಪದಿಂದುಸರಲು ಅಥವಾ ಗದರಿಸಲು ಎಲೌ! ನೀಳೆ! ನೀನು ಮಾಭೂರಪರಾಧಿಕಃ ಎಂದು ಹೇಳಿದ ಪ್ರಕಾರ ನಾನು ಸರಾಧಿಕನಾಗಿದ್ದೆನೆಂದು ನೀಳೆಯನ್ನು ಮರುಳುಮಾಡಿದನು. (ಇಲ್ಲಿ ಮಾಭೂರ ಪರಾಧಿಕಃ ಎಂದರೆ ತಪ್ಪುಗಾರನಾಗಬೇಡ ಎಂದೂ ರಾಧೆಯಿಂದ ಅಗಲಿದವನಾಗ ಬೇಡ ಎಂದೂ ದ್ವ್ಯರ್ಥಸೂಚಕವಾಗಿರುವುದು.)

ಕಾಂಚೀನಾಮ್ನಿ ಪುರೇ ಸುರೇಂದ್ರಮುಖೇ ಪ್ರಾಕ್ಪಶ್ಚಿಮೋದ್ದೇಶಯೋ
ರ್ನಿತ್ಯಂ ದೈವತಯೋಶ್ಚಿರಂ ನಿವಸತೋ ನೀತಿರ್ವಿರುದ್ಧಾಸ್ತಿಧಃ
ಏಕೋಽಪಿ ದ್ವಿಜರಾಜಮುಚ್ಚಧರಯತ್ಯನ್ಯಸ್ತಮುತ್ತಂಸಯ
ತ್ಯಾರೋಹಂತ ಭಿಭರ್ತಿ ಕೆಲಿ ದಸರಃ ಸ್ವೇಮೂರ್ಧನಿ ಸ್ವರ್ಧುನೀಂ ॥ ೧೨೭ ॥

ಅಹಹ! ಈ ಕಾಂಚೀನಗರದಲ್ಲಿ ಪೂರ್ವ (ಮೂಡಣ) ಪಶ್ಚಿಮ (ಪಡುವಣ) ದಿಕ್ಕುಗಳಲ್ಲಿ ಬಹು ಪುರಾತನ ದೇವಮೂರ್ತಿಗಳಿರುವುವಾದರೂ ಒಬ್ಬರ ನಡತೆಯು ಮತ್ತೊಬ್ಬರಿಗೆ ಸರಿ ಹೋಗದಾಗಿದೆ. ಹೇಗೆಂದರೆ ಒಬ್ಬನು ದ್ವಿಜರಾಜ (ಗರುಡ) ನನ್ನು ಕೆಳಭಾಗದಲ್ಲಿ (ಎಂದರೆ ವಾಹನವಾಗಿ) ಇರಿಸಿಕೊಂಡಿದಾನೆ. ಮತ್ತೊಬ್ಬನು ತಲೆಯ ಮೇಲೆ ಇರಿಸಿಕೊಂಡಿದಾನೆ. ಗಂಗೆಯನ್ನು ಒಬ್ಬನು ಅಡಿಯಲ್ಲಿಟ್ಟುಕೊಂಡಿದಾನೆ ಮತ್ತೊಬ್ಬನು ತಲೆಯ ಮೇಲೆ ಹೊತ್ತುಕೊಂಡಿದಾನೆ. ಇದೆಂತಹ ಚಿತ್ರ!

ಮೋಹೋನ್ಮೂಲನಮೂಲಿಕಾ ಭವಜುಷಾಂ ಮೋಕ್ಷಾಧ್ವನಿ ಶ್ರೀಗಿಕಾ
ಚೇತಃ ಶುದ್ಧಿವಿಧಾನಸಿದ್ಧಗುಳಿಕಾ ಚಿಂತಾತಮಶ್ಚಂದ್ರಿಕಾ
ವಿದ್ಯಾವಿಭ್ರಮಸಾರಿಕಾಸಿಕಮಲೇ! ವಿಷ್ಣೋರುರೋಮಾಲಿಕಾ
ಮಾತಸ್ತ್ವಂ ಮಮ ಪಾರಿಜಾತಲತಿಕಾಮೋದಾಂಬುಧೇರ್ವೀಚಿಕಾ ॥ ೪೧೭ ॥

ಅಮ್ಮ! ಕಮಲೆ! (ಲಕ್ಷ್ಮಿಯೇ) ನೀನು ಸಂಸಾರದಲ್ಲಿ ಸಿಕ್ಕಿನರಳುವವರ ಮೋಹವನ್ನು ನಿರ್ಮೂಲಮಾಡುವ ಔಷಧ (ಮೂಲಿಕೆ) ವಾಗಿರುವೆ. ಮುಕ್ತಿಸಾಧನಕ್ಕೆ ಸೋಪಾನದಂತಿರುವೆ. ಚೇತಃ ಶುದ್ಧಿಗೆ ಸಿದ್ಧಗುಳಿಗೆಯಾಗಿರುವೆ. ಚಿಂತೆಯೆಂಬ ಅಂಧಕಾರಕ್ಕೆ ಬೆಳದಿಂಗಳಂತಿರುವೆ. ವಿದ್ಯಾವಿಲಾಸಸ್ಥಾನವಾರುಗಿವೆ ವಿಷ್ಣುವಿನ ವಕ್ಷದಲ್ಲಿ ಮಾಲಿಕೆಯಂತಿರುವೆ. ನನ್ನ ಕೋರಿಕೆಗಳನ್ನು ಸಲಿಸುವ ಕಲ್ಪವೃಕ್ಷವಾಗಿರುವೆ. ನೀನು ಆನಂದ ಸಮುದ್ರದ ಲಹರಿಯಾಗಿರುವೆ.

ವಿಶ್ವಗುಣಾದರ್ಶಗ್ರಂಥಕ್ಕೆ ಬಾಲಕೃಷ್ಣ ಶಾಸ್ತ್ರಿ ವಿರಚಿತ 'ಪದಾರ್ಥ ಚಂದ್ರಿಕಾ' ಎಂಬ ವ್ಯಾಖ್ಯಾನವು ಇರುವುದು.

ವರದಾಭ್ಯುದಯಚಂಪೂ. ಇದಕ್ಕೆ ಹಸ್ತಿಗಿರಿಚಂಪೂ, ಕರಿಗಿರಿ ಚಂಪೂ ಎಂದೂ ಕರೆಯುವರು. ಇದು ವರದರಾಜನ ಮಹಿಮಾನು ವರ್ಣನಗ್ರಂಥ. ಇದರಲ್ಲಿ ಐದು ವಿಲಾಸಗಳಿರುವುವು. ಕೇವಲ ಶ್ಲೇಷ, ಯಮಕ, ಶಬ್ದ ಜಾಲರಂಜನದಿಂದಿರುವುದು ಹೊರ್ತು ಶ್ರವಣ ಪಠನಗಳಿಗೆ ಹೆಚ್ಚುರಮ್ಯವಾಗಿರುವಂತೆ ಕಾಣುವುದಿಲ್ಲ.

ಇದರಗದ್ಯದ ಮಾದರಿ:—

ಅನಂತಸರೋವರ್ಣನ:—

ಏಷಾಮಶೇಷಾಮು ವರನಿರಂತರ ಸನ್ನಿಧಾನಸಿದ್ಧನಿತ್ಯ ಶುದ್ಧಭಾವಾ, ಸ್ವತಿರಸ ಮುದಿತ್ವರಕೇಸರ ಸಹಕಾರನಾಳಕೇರಮಂದಾರಕುಂದ ಪುನ್ನಾಗಕ್ರಮುಕಪ್ರಸುಮಪಿನಿಧಧರಣೀರುಹಧರಣಿಸುತಪ್ರವರಪಿಟಪಕರಗೃಹೀತ ಕುಸುಮಬ್ಲಂದಜುಹೂಮುಖಹೂಯಮಾನಮಧುಮಯಘೃತಧಾರಾಸಿ ಚ್ಯಮಾನವಿಮಲಸಲಿಲಸಂಸ್ಕಾರತಾವಭೃಥ್ಯಾಚರಣಪ್ರಕಾರಾ, ಆಂತಃ ಕೃತಸಂತತಪಿಹರಣವರುಣಾಂತಃ ಪುರಜನಕರನಿಪಿತ ಮಧುಭರಿತ ಕನಕಚಷಕಮೋಹವಾವಹದ್ವಿರಫ್ಪಿತಲಿಪ್ಸಯಾಚಿರಮಪ್ಲುತಪಸ್ಯತಶ್ಚತ ಕ್ರತೋರ್ಜನಾರ್ದನ ಧಾನಾವಧಾನಾವಸರವಿಧೃತಾನಂದ ಬಾಷ್ಪಾಣಿನಯನಾನಿನೂನಪಿತಶಂಕಾಮುಂಕುರಯದ್ಭಿರಂತರ್ವಸಂತಂ ನಾರಾಯಣಮಾರಾಧ್ಯತದಭಿಷಕೋದಕಂ ವಿನಯಾತಿಶಯೇನಯುಗಪದೇವ ಪರಿಪಾತುಕಾಮಾನಾಂ ನಿತ್ಯಸೂರೀಣಾಂ ತತ್ತೀರ್ಥಧಾರಣದಶಾನಿಶ್ಚಲಾನಿ ಹಸ್ತಪುಟಾನಿಧ್ರುವಮಿತಿಸಂಭಾವನಾಂ ಜೃಂಭಯದ್ಭಿಸ್ಸಂಭೃತಮುಧಭಿರಂಭೋರುಹೈಃ ಕರಂಭಿತಾ, ಸಂಭೋಗಸಮಯಜೃಂಭಮಾಣಗಾಢ ಪರಿರಂಭಸಂಭವಂ ವರಟಾನಾಂಶ್ರಮಂ ಶಮಯಿತುಮುತ್ಕಂಠಮಾನ್ಯೆರಪಿ ಯದಿತುಸಕ್ಷವ್ಯಜನಪಂಜನೆನತನುಮುಪಿಸವನಮುತ್ಪಾದಯೆಂಮತದಾತದುಪಚಿತವೀಚಿಕಾಪನೋದನನಿಬಂಧನಂ ಪ್ರಿಯತಮಾಸಮಾಗಮಪ್ರತ್ಯೂಹವಿಷಾದಮಾಸಾದಯೆಮಯದಿತುತಮನಿಲಂ ನಜನಯೇ ಮತದಾಸುರತಮೃದಿತದಯಿತತ ಮಾಶ್ರಮಾಪನಯನಾಕರಣಾದಕೃತಾರ್ಥತಾಮನುಭವೇಮೇತಿರತಿವಿರತಿವೇಲಾಯಾಂದೋಲಾಯಮಾನಮಾನಸೈರ್ಮಾನಸೌಕೋಯುವಭಿರಭಿಶೋಭಮಾನಾ, ಆಮಧ್ಯಾಹ್ನಸಂಚಾರಶ್ರಮೇಣ ಮಧ್ಯೇಸಲಿಲಮವತೀರ್ಣವತೀನಾಂ ವಿದ್ಯಾಧರಯುವತೀನಾಂ ಚಿಕುರನಿಕುರಂಬೇಷುಶ್ಚೈವಾಲಜಾಲತೋಪಲಂಭಸ್ಯಸುಂದರ

ಮಂದಹಾಸಸದನೇಷುವದನೇಷುವಿಕಸದಮುಲಕಮುಲವ್ಯಾಮೋಹಸ್ಯ ಕಿ
ಚಿಚ್ಚಂಚಲತಾಸಾತ್ರೇಷು ನೇತ್ರೇಷುಚಂಚೂರ್ಯಮಾಣ ಪೃಥುಲ
ಶಫರಭ್ರಮುಸ್ಯಮರಂದಸಖೇಷುತ ್ರವಣಸುಖೇಷುರುಚಿರರಚನೇಷುವಚ
ನೇಷುಮದಕಲಮರಾಳಗಳಗಳತ್ಕಲಕಲತಾಧ್ಯಾಸಸ್ಯ ಮುಕ್ತಮುಂಜುಳ
ಕಂಚುಳಿಕಾಸುಪರಸ್ಪರವಿಭಾಗಾನಭಿಜಾ್ಞಸುಘನಸ್ತನಕನಕಕಲಶೇಷು
ದೃಢಾಲಿಂಗನಸುಖಿತರಥಾಂಗಮಿಥುನತಾರೋಪಸ್ಯಮಣಿಮೇಖಲಾಕಲಾ
ಪೇಷುಸನ್ನಿಹಿತಶೇಷಸವಿಧಚರಪನ್ನಗವರಭ್ರಾಂತೈಶ್ಚಗಂಭೀರೇಷು ನಾಭೀ
ಬಿಲೇಷುರಮ್ಯಾವರ್ತಬುದ್ಧೇಶ್ಚ ಜನನಾದನಾಕಲಿತಕುಸುಮ ಚಾಪಚಾಪ
ಲತಯಾನಿರಂತರಜೀರಂತನ ಪುರುಷನಿಧಿಧ್ಯಾಸನೈರ್ಬದ್ಧಾಸನೈಃ
ತಾಪಸಜನೈರಧ್ಯಾಸಿತತಟಪ್ರದೇಶಾ (೧) ಸಾರಸಂಗತಾಪಿವಿಸಾರಸಂಗತಾ
(೨) ಕೂರ್ಮಿತಾಮುಪಗತಾಪಿಸೂರ್ಮಿತಾಮುಪಗತಾ (೩) ಬಹುಲಾ
ಪಾಪ್ಯಪಾಪಾ(೪)ಮರಾಳ್ಯುಪಸೇವಿತಾಪ್ಯಮರಾಳ್ಯುಪಸೇವಿತಾ ಜನಯತಿನ
ಯನಯೋರಮಂದಮಾನಂದಮನಂತಸರಸೀ ||

ಪ್ರದ್ಯುಮ್ನಾನಂದ;—ಇದು ನಾಟಕವೆಂದೂ, ಕಥಾನಾಯಕನು ಶ್ರೀಕೃಷ್ಣನಮಗ ಪ್ರದ್ಯುಮ್ನನೆಂದೂ, ವೀರಶೃಂಗಾರರಸಾತ್ಮಕವೆಂದೂ, ಸರಸವಾಗಿರುವುದೆಂದೂ ಹೇಳಿದೆ. ಗ್ರಂಥವು ಉಪಲಬ್ಧವಿಲ್ಲ.

ಲಕ್ಷ್ಮೀಸಹಸ್ರಂ :—ಇದು ಲಕ್ಷ್ಮೀಗುಣಾವಯವಸೌಂದರ್ಯಮಹಿಮಾನುವರ್ಣನಗ್ರಂಥ.

ಮ ಹಾ ದೇ ವ

"ಕೌಂಡಿನ್ಯವಂಶಸಂಭವೋ ಮಹಾಕವಿಃ ಶ್ರೀಮಹಾದೇವೋ ದಕ್ಷಿಣೇನ ಕಾವೇರೀತೀರ ಮೈರಾವತಾರಾಧಿತಸ್ಯಕಾಮಿನೀವಾಮಭಾಗಸ್ಯ ಭಾಗವತೋ ಮಹೇ
ಶಸ್ಯ ಸಂನಿಧೌವರ್ತಮಾನೇ ಪಲಮಾರನೇರಿನಾಮನಿಗ್ರಾಮ ಆಸೀತ್ ಎಂಬುದರಿಂದ ಇವನು ಬ್ರಾಹ್ಮಣನು, ದಾಕ್ಷಿಣಾತ್ಯನು, ಕೌಂಡಿನ್ಯಗೋತ್ರದವನು, ಬಾಲಕೃಷ್ಣ ಗುರುವಿನ ಶಿಷ್ಯನು ಕಾವೇರೀತೀರದಲ್ಲಿರುವ ಪಲಮಾರನೇರಿಗ್ರಾಮದವನು. ಎಂಬದು ಸ್ಪಷ್ಟಪಡುತ್ತದೆ.

ಕಾಲ:—ಇವನು ನೀಲಕಂಠದೀಕ್ಷಿತನ ಸಮಕಾಲೀನನು. ಕ್ರಿ. ಶ. ೧೭ನೆಯ ಶತಮಾನದವನು.

ಗ್ರಂಥ:—ಇವನು 'ಅದ್ಭುತದರ್ಪಣ'ಎಂಬ ನಾಟಕವನ್ನು ಬರೆದಿರುವನು. ಇದರಲ್ಲಿ ಹತ್ತು ಅಂಕಗಳಿರುವುವು. ರೂಪಕಭೇದವಾದ ಪ್ರಕರಣ ಜಾತಿಗೆ ಸೇರಿದದು. ಸೀತಾನ್ವೇಷಣಕ್ಕಾಗಿ ಲಂಕೆಗೆಹೋಗಿದ್ದ ಆಂಜನೇಯನು ಬಂದನಂತರ ರಾವಣನು ಯುದ್ಧನಡೆಯಿಸಿದ ವಿಚಾರನೇ ಇದರ ಕಥಾವಸ್ತು. ರಚನೆಯು ಸಾಧಾರಣ. ವಿಷಯವು ಅದ್ಭುತವಾಗಿರುವಂತೆ ಹೇಳಿ ಪಾತ್ರಗಳ ವೇಷಾಂತರ ರೂಪಾಂತರ ನಾಮಾಂತರಗಳಿಂದ ಕೂಡಿ ಅದ್ಭುತದರ್ಪಣವೆಂಬ ಹೆಸರನ್ನು ಸಾರ್ಥಕಮಾಡುವುದಾಗಿದೆ.

ಚಕ್ರಕವಿ

ಇವನ ತಂದೆಯ ಹೆಸರು ಶ್ಲೋಕನಾಥಸ್ಸುಧೀ. ತಾಯಿ ಹೆಸರು ಅಂಬಾ ಎಂದು. ಈ ವಿಚಾರವು:—

ಯಂಸೂನುಂ ಜನಯಾಂಬಭೂವಸಹಿತಃ**ಶ್ರೀಲೋಕನಾಥಸ್ಸುಧೀಃ**
ಖ್ಯಾತಂ **ಚಕ್ರಕವಿಂ** ಸತೀಸಮುದಯೆ ಸಂಮಾನ**ತಾಂಬಾ**ಭಿಧಾ ॥

ಎಂಬುದರಿಂದ ವ್ಯಕ್ತವಾಗುತ್ತದೆ.

ಕಾಲ:—ಇವನು ದೀಕ್ಷಿತನೀಲಕಂಠನ ಸಮಕಾಲೀನನು ಎಂದರೆ ಕ್ರಿ. ಶ. ೧೭ನೆಯ ಶತಮಾನದವನು.

ಗ್ರಂಥ—ಇವನು:—

ರುಕ್ಮಿಣೀ ಜಾನಕೀಗೌರೀದ್ರೌಪದೀಪರಿಣೇತಯಃ
ಕೃತಯೋ ಯಸ್ಯ ತಸ್ಯೈಷಾಕೃತಿರ್ಚಕ್ರಕವೇಃ ಪ್ರಭಾ ॥

ಎಂಬುದರಿಂದ ಇವನು ರುಕ್ಮಿಣೀಪರಿಣಯ, ಜಾನಕೀಪರಿಣಯ, ಸಾವರ್ವತೀ ಪರಿಣಯ, ದ್ರೌಪದೀಪರಿಣಯ ಎಂಬ ನಾಲ್ಕು ಕಾವ್ಯಗಳನ್ನು ಬರೆದಿರುವನು. ಇದಲ್ಲದೆ ಚಿತ್ರರತ್ನಾಕರ ಎಂಬ ಶಬ್ದಾಲಂಕಾರ ವಿಚಾರಗ್ರಂಥವನ್ನೂ ಬರೆದಿರುವುದಾಗಿಹೇಳಿದೆ. ಇವನ ಕಾವ್ಯವು ಲಲಿತವೂ, ಭಾವಯುಕ್ತವೂ, ಸುಲಭವೂ, ಹೃದಯಂಗಮವಾಗಿರುವುದು.

ಜಾನಕೀಪರಿಣಯ:—ಇದು ೮ ಸರ್ಗಗಳುಳ್ಳ ಕಾವ್ಯ. ಹೆಸರಿಗೆ ತಕ್ಕಂತೆ ಸೀತಾಕಲ್ಯಾಣವನ್ನು ಹೇಳುವುದಾಗಿದೆ. ಉಳಿದ ಗ್ರಂಥಗಳು ದೊರೆಯವು,

ಇದರ ಕೆಲವು ಶ್ಲೋಕಗಳು:—

ಪ್ರಮದಯಾ ಖಲು ಯಃ ಪ್ರಿಯದುರ್ಲಭೈಃ
ಸ್ಫುಟಮಪೂಜಿ ಯದಾ ಪದತಾಡನೈಃ

ಭುವಿ ತದಾಪ್ರಭೃತಿ ಪ್ರಮದಾಂಚಿತಂ
ತರುಮಶೋಕ ಇತಿ ಪ್ರವದಂತಿ ತಂ ॥ ೬—೧೩

ತಮ್ಮ ತಮ್ಮ ಪ್ರಿಯವಲ್ಲಭರಿಗೂ ದೊರೆಯಲು ದುರ್ಲಭವಾದ ಪಾದತಾಡನದಿಂದ ಯಾವ ವೃಕ್ಷವು ಪೂಜಿಸಲ್ಪಟ್ಟುದೋ ಅಂದಿನಿಂದ ಆ ವೃಕ್ಷವನ್ನು 'ಅಶೋಕ' ಎಂದು ಕರೆಯುತ್ತಾರೆ.

ರತಿಪತೇರಪಿ ವಿಸ್ಮಯಕಾರಿ ಯದ್
ವಿಟಜನೈರಪಿ ಯನ್ನ ವಿಚಾರಿತಂ
ಕವಿಗಿರಾಂ ಚ ನ ಯಚ್ಚಲು ಗೋಚರ
ಸ್ತದುದಭೂದ್ ವನಿತಾಭಿಕಯೋ ರತಂ ॥ ೬—೬೪

ಕ್ರೀಡಾವಿಶೇಷಗಳಿಗೆ ಆಚಾರ್ಯನಾದ ವಿಾನಕೇತನನಿಗೂ ಯಾವುದು ಆಚ್ಚರಿಯನ್ನುಂಟುಮಾಡುವುದೋ, ಅನುಭವಿಸುವರಾದ ವಿಟಜನರಿಂದಲೂ ಯಾವುದು ವಿಮರ್ಶಾದೂರವೋ, ಕವಿಯ ವಾಙ್ಮಯಕ್ಕೆ ಯಾವುದು ಅಗೋಚರವೋ ಅಂತಹ ಕ್ರೀಡಾಕೌತುಕವು ಕಾಮುಕ ಕಾಮುಕಿಯರಿಗೋಸ್ಕರವೇ ಆದುದಾಗಿ ತಿಳಿಯಬೇಕು. ಎಂದರೆ ಕ್ರೀಡಾವಿಶೇಷವು ಅನುಭವವೇದ್ಯವೇ ಹೊರ್ತು ಹೇಳಲಸದಳವೆಂದು ಅಭಿಪ್ರಾಯವು.

ವಿರಚಿತಾ ಇವ ಶರ್ಕರಯಾ ಸುಧಾ
ರಸಚಿರಸ್ನಪಿತಾ ಇವ ಸುಭ್ರುವಃ
ಅವಯವಾಃ ಸುರತೇ ಪರಿಚುಂಬಿತಾ
ವಿದಧಿರೇ ದಯಿತಸ್ಯ ನ ಸೌಹಿತೀಂ ॥ ೬—೬೯

ಶರ್ಕರೆಯಿಂದ ತಯಾರಿಸಿ ಅಮೃತರಸದಲ್ಲಿ ಮುಳುಗಿಸಿಡಲ್ಪಟ್ಟಂತಿರುವ ಸುಂದರಿಯರ ಮನೋಹರವಾದ ಸರ್ವಾವಯವಗಳು ರತಿವಿಶೇಷ ಸಮಯಗಳಲ್ಲಿ ವಲ್ಲಭನಿಂದ ಅನೇಕಸಲ ಅನುಭವಿಸಲ್ಪಟ್ಟವುಗಳಾದರೂ (ಇನ್ನೂ ಹೆಚ್ಚುಹೆಚ್ಚಾಗಿ ಅನುಭವಿಸಬೇಕೆನ್ನುವುದು ಹೊರ್ತು) ತೃಪ್ತಿಯನ್ನುಂಟುಮಾಡುವುವಾಗಿರುವುದಿಲ್ಲ.

ಪದಂ ನ್ಯಧತ್ತಾಶ್ಮನಿ ಭಕ್ತಿರೇಖಾ
ವಿರಾಜತೇ ಕಾಂಚಕರೋದ್ಧೃತಂಸಾ
ವಿಡಂಬಯಂತೀ ಕಮಲಾಂ ಮುರಾರೇ
ರುರಸ್ತಟಾರೋಹಣ ಮಾಚರಂತೀಂ ॥ ೬—೭೧

ಸೀತಾದೇವಿಯು ವಿವಾಹದದಿವಸ ಸಪ್ತಪದಿ ಸಮಯದಲ್ಲಿ ಶ್ರೀ ಮಹಾವಿಷ್ಣುವಿನ ಉರಃ ಪ್ರದೇಶಾರೋಹಣವನ್ನು ಆಚರಿಸುತ್ತಲಿರುವ (ಕಮಲೆ) ಲಕ್ಷ್ಮಿಯನ್ನು ಅನುಕರಿಸುವಳಾಗಿ ಪತಿಯ ಕೈಯಿಂದ ಹಿಡಿದುಕೊಳ್ಳಲ್ಪಟ್ಟ ಕಾಲನ್ನು 'ಭಕ್ತಿ' ಎಂಬ ರೇಖೆಗಳಿಂದ ರಾರಾಜಿಸುತ್ತಿರುವ ಕಲ್ಲಿನ ಮೇಲಿಟ್ಟಳು.